॥ ಶ್ರೀಃ ॥

ಪೂಜ್ಯಪಾದ

ಬ್ರಹ್ಮಶ್ರೀ ಬಾಳಶಾಸ್ತ್ರೀ ರಾವ್‌ಜೀ ಶಾಸ್ತ್ರೀ ಕ್ಷೀರಸಾಗರ ಪ್ರಣೀತ

ಸಾರ್ಥ ಷೋಡಶ ಸಂಸ್ಕಾರ ರತ್ನಮಾಲಾ

[ಔರ್ಧ್ವದೇಹಿಕವಿಧಿ ಸಹಿತ]

ಸಂಸ್ಕೃತ ಮರಾಠೀ ಗ್ರಂಥದ ಸಂಪಾದಕರು ಮತ್ತು ಪ್ರಕಾಶಕರು:

ವಿದ್ಯಾಭೂಷಣ ಪದ್ಮಾಕರಶಾಸ್ತ್ರೀ ಬಾಳಶಾಸ್ತ್ರೀ ಕ್ಷೀರಸಾಗರ

ಕನ್ನಡ ಅನುವಾದ:

ವಿದ್ವಾನ್ ಗುರು ಕೃಷ್ಣ ಭಟ್ಟ, ಪೆರ್ಲ

ತೃತೀಯ ಆವೃತ್ತಿ

ಪ್ರಕಾಶಕರು:

ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನ

ರಥಬೀದಿ, ಮಂಗಳೂರು-575 001

೧೯೯೮

Scanned by CamScanner

Scanned with CamScanner

ಪ್ರತಿಗಳು ದೊರೆಯುವ ವಿಳಾಸಗಳು:

೧. ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನ
ರಥಬೀದಿ,
ಮಂಗಳೂರು - 575 001.

೨. ನಿತ್ಯಾನಂದ ಗ್ರಂಥಾಲಯ
ಬಸ್‌ಸ್ಟಾಂಡ್, ಹಂಪನಕಟ್ಟಾ,
ಮಂಗಳೂರು - 575 001.

೩. ಅತ್ರಿ ಬುಕ್ ಸೆಂಟರ್
ಬಲ್ಮಠ
ಮಂಗಳೂರು - 575 001.

೪. ಪೆರ್ಲ ಕೃಷ್ಣ ಭಟ್ಟ
ಗುರುಕುಲ ಮುದ್ರಣಾಲಯ
ಪೆರ್ಲ - 671 552
ಕಾಸರಗೋಡು ಜಿಲ್ಲೆ.

ಬೆಲೆ: ರೂ. 250/-

Scanned by CamScanner

Scanned with CamScanner

॥ ಶ್ರೀಃ ॥
॥ ಶ್ರೀ ಕಾಳಿಕಾಂಬಾ ವಿನಾಯಕೌ ಪ್ರಸೀದತಾಮ್ ॥

ಸಾರ್ಥ ಷೋಡಶ ಸಂಸ್ಕಾರ ರತ್ನಮಾಲಾ

ಪೂಜ್ಯಪಾದ
ಬ್ರಹ್ಮಶ್ರೀ ಬಾಳಶಾಸ್ತ್ರೀ ರಾವ್‌ಜೀಶಾಸ್ತ್ರೀ ಕ್ಷೀರಸಾಗರ ಪ್ರಣೀತ

ಸಂಸ್ಕೃತ ಮರಾಠೀ ಗ್ರಂಥದ ಸಂಪಾದಕರು ಮತ್ತು ಪ್ರಕಾಶಕರು:
ವಿದ್ಯಾಭೂಷಣ ಪದ್ಮಾಕರಶಾಸ್ತ್ರೀ ಬಾಳಶಾಸ್ತ್ರೀ ಕ್ಷೀರಸಾಗರ
ಕಾವ್ಯತೀರ್ಥ, ಸಾಂಖ್ಯತೀರ್ಥ, ವ್ಯಾಕರಣತೀರ್ಥ, ಸಾಹಿತ್ಯರತ್ನ.
ಶ್ರೀ ನಾರಾಯಣ ಆಶ್ರಮ, ೩೦, ಗಣೇಶಪೇಟೆ, ಪುಣೆ ೨.

ಕನ್ನಡ ಅನುವಾದ:
ವಿದ್ವಾನ್ ಗುರು ಕೃಷ್ಣ ಭಟ್ಟ, ಪೆರ್ಲ

ತೃತೀಯ ಆವೃತ್ತಿ

ಪ್ರಕಾಶಕರು:
ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನ
ರಥಬೀದಿ, ಮಂಗಳೂರು - 575 001.

೧೯೯೮

Scanned by CamScanner
Scanned with CamScanner

"ಸಾರ್ಥ ಷೋಡಶ ಸಂಸ್ಕಾರ ರತ್ನಮಾಲಾ"
ಋಗ್ವೇದೀಯ ಆಶ್ವಲಾಯನಸೂತ್ರಾನುಯಾಯಿಗಳಿಗೆ ಸಂಬಂಧಿಸಿದ ಸಮಗ್ರ ಪೂರ್ವ ಷೋಡಶ ಸಂಸ್ಕಾರಗಳ ಮತ್ತು ಇತರ ವೈದಿಕ ಕರ್ಮಗಳ, ಕನ್ನಡದಲ್ಲಿ ವಿವರವಾದ ಮಾರ್ಗದರ್ಶನದಿಂದೊಡಗೂಡಿದ ಸಂಗ್ರಹ.

"SARTHA SHODASHA SAMSKARA RATHNAMALA"
A Hand Book of all Poorva Samskaras and other Vaidic Rituals with detailed directions and explanations in Kannada pertaining to Rigvedeeya Ashvalayana Suthras.

Publishers:
Shree Kalikamba Vinayak Temple
Car Street, Mangalore - 575 001.

Printers:
Sharada Press, Car Street, Mangalore.

Third Edition:
1998

Rights Reserved
ಅಧಿಕಾರಗಳನ್ನು ಕಾದಿರಿಸಲಾಗಿದೆ.

Price: Rs. 250/-

Scanned by CamScanner

Scanned with CamScanner

|| ಓಂ ನಮೋ ವಿಶ್ವಕರ್ಮಣೇ ||

|| ಶ್ರೀ ಕಾಳಿಕಾಂಬಾಯೈ ನಮಃ ||

ಪ್ರಕಾಶಕರ ಎರಡು ಮಾತು

ದೈವಸಂಕಲ್ಪವೆಂಬಂತೆ ೧೯೫೫ನೇ ಇಸವಿಯಲ್ಲಿ ನನಗೆ ಪುಣೆಯ ವಿದ್ಯಾಭೂಷಣ ಪದ್ಮಾಕರ ಶಾಸ್ತ್ರಿಯವರ ಪರಿಚಯವಾಯಿತು. ಅಲ್ಲಿಂದ ಬಂಧುತ್ವ ಬೆಳೆದು ಆತ್ಮೀಯತೆಯುಂಟಾಯಿತು. ಒಮ್ಮೆ ಶಾಸ್ತ್ರಿಯವರ ಮನೆಗೆ ಹೋದಾಗ, ಮನೆಯಿಡೀ ಪಟ್ಟೆವಸ್ತ್ರಗಳಿಂದ ಸುತ್ತಿಟ್ಟ ಗ್ರಂಥಭಂಡಾರವನ್ನು ನೋಡಿದೆ. ಅತ್ಯಪೂರ್ವಸಂಗ್ರಹಗಳನ್ನು ತೋರಿಸಿದರು. ಸಂಸ್ಕೃತ ಗ್ರಂಥಗಳಿಂದಲೇ ತುಂಬಿಹೋಗಿತ್ತು ಅವರ ಮನೆ.

‘ಸಾರ್ಥಷೋಡಶಸಂಸ್ಕಾರರತ್ನಮಾಲಾ’ ಎಂಬ ಸಂಸ್ಕೃತ ಮರಾಠೀ ಗ್ರಂಥವನ್ನು ಶಾಸ್ತ್ರಿಯವರ ತಂದೆಯವರಾದ ಪೂಜ್ಯಪಾದ ಬಾಳಶಾಸ್ತ್ರೀ ರಾವ್‌ಜೀಶಾಸ್ತ್ರೀ ಕ್ಷೀರಸಾಗರ ಅವರು ರಚಿಸಿದ್ದರು. ಎರಡು ಆವೃತ್ತಿಗಳಲ್ಲಿ ಪ್ರಕಾಶನಗೊಂಡಿದ್ದರೂ, ಪ್ರತಿಗಳೆಲ್ಲಾ ಎಂದೋ ಮುಗಿದು ಹೋಗಿದ್ದವು. ಆದರೂ ಬೇಡಿಕೆ ತುಂಬಾ ಇದ್ದು ಪ್ರತಿಗಳನ್ನು ಕಳುಹಿಸಿಕೊಡಬೇಕೆಂದು ಶಾಸ್ತ್ರಿಗಳಿಗೆ ಬರೆದ ನೂರಾರು ಪತ್ರಗಳನ್ನು ನನಗೆ ತೋರಿಸಿದರು.

ಮುಂದೆ ಶ್ರೀದೇವಿಯ ಅನುಗ್ರಹದಿಂದ ಮಂಗಳೂರು ಶ್ರೀಕಾಳಿಕಾಂಬಾ ವಿನಾಯಕ ದೇವಸ್ಥಾನದ ಆಶ್ರಯದಲ್ಲಿ ಮೂರನೇ ಬಾರಿ ಮುದ್ರಣಗೊಂಡು ಪ್ರಕಾಶನಗೊಳ್ಳುವಂತಾಯಿತು.

ಭಾರತಾದ್ಯಂತ ಈ ಗ್ರಂಥಕ್ಕೆ ಬೇಡಿಕೆಗಳಿದ್ದುದರಿಂದ ಸ್ವಲ್ಪವೇ ಸಮಯದೊಳಗೆ ಹೆಚ್ಚಿನ ಪ್ರತಿಗಳು ಮಾರಾಟವಾದವು. ದಕ್ಷಿಣಕನ್ನಡ ಜಿಲ್ಲೆಯಲ್ಲಿಯೂ ಹಲವು ಪ್ರತಿಗಳು ಮಾರಾಟಗೊಂಡು ವೈದಿಕವರ್ಗಕ್ಕೆ ಉಪಯೋಗವಾಯಿತು. ಆದರೆ ಈ ಗ್ರಂಥವು ಕನ್ನಡ ಭಾಷೆಯಲ್ಲೂ ಅನುವಾದಿಸಲ್ಪಟ್ಟಿದ್ದರೆ ಬಹುದೊಡ್ಡ ಪ್ರಯೋಜನವಾಗುತ್ತಿತ್ತು ಮತ್ತು ಕಲಿಯಲು ಸುಲಭಸಾಧ್ಯವಾಗುತ್ತಿತ್ತು ಎಂದು ಅನೇಕ ಮಂದಿ ನನ್ನಲ್ಲಿ ಹೇಳಿದರು. ಈ ವಿಷಯವನ್ನು ನಾನು ಶಾಸ್ತ್ರಿಯವರಲ್ಲಿ ಪ್ರಸ್ತಾಪಿಸಿದೆ. ಶಾಸ್ತ್ರಿಗಳು ತುಂಬಾ ಸಂತಸಗೊಂಡು, ಪುಣೆಯಲ್ಲಿ ಕನ್ನಡ ಬಲ್ಲವರೊಬ್ಬರಿಂದ, ಮರಾಠೀಯಿಂದ ಕನ್ನಡಕ್ಕೆ ಅನುವಾದಮಾಡಿಸಿ ಅದರ ನಕಲನ್ನು ನನಗೆ ಕಳುಹಿಸಿಕೊಟ್ಟರಲ್ಲದೆ, ಅದನ್ನು ಪ್ರಕಾಶನಗೊಳಿಸಲು ಅನುಮತಿಯನ್ನಿತ್ತರು. ಆದರೆ ಅನುವಾದಗೊಂಡ ಭಾಷೆಯು ಪುಣೆಯ ಮರಾಠೀಮಿಶ್ರಿತ ಕನ್ನಡ ಭಾಷೆಯಾಗಿದ್ದು, ನಮ್ಮಲ್ಲಿಯ ಕನ್ನಡಿಗರಿಗೆ ರುಚಿಸುವ ಶುದ್ಧ ಕನ್ನಡ ಭಾಷೆಯಾಗಿರಲಿಲ್ಲ.

ಆದ್ದರಿಂದ ನಾನು ನಮ್ಮ ಜಿಲ್ಲೆಯ ಪ್ರಸಿದ್ಧ ಸಂಸ್ಕೃತ ಪಂಡಿತರೂ, ಯಕ್ಷಗಾನ ಕಲಾವಿದರೂ ಮೇಲಾಗಿ ವೈದಿಕವರ್ಗದವರೂ ಆಗಿರುವ ಶ್ರೀ ಪೆರ್ಲ ಕೃಷ್ಣಭಟ್ಟರಲ್ಲಿ ಶಾಸ್ತ್ರಿಯವರು ಕಳುಹಿಸಿ ಕೊಟ್ಟ ಕನ್ನಡಾನುವಾದವನ್ನು ತೋರಿಸಿ, ಇದನ್ನು ಶುದ್ಧೀಕರಿಸಿ ಕೊಡಬೇಕೆಂದು ವಿನಂತಿಸಿದೆ. ಶ್ರೀಯುತರು ಅದನ್ನು ಓದಿನೋಡಿ, ಈ ಮೂಲಗ್ರಂಥದ ಮಹತ್ವವನ್ನು ಅರಿತು ತಾನದನ್ನು ಪ್ರತ್ಯೇಕವಾಗಿ ಅನುವಾದ ಮಾಡಿಕೊಡುವೆನೆಂದು ಹೇಳಿದರಲ್ಲದೆ, ಇದರ ಜೊತೆಯಲ್ಲೆ ಅಪರಕ್ರಿಯೆಗಳ ಬಗ್ಗೆಯೂ ಒಂದು ಪ್ರತ್ಯೇಕಭಾಗವನ್ನು ಪ್ರಕಟಿಸುವುದೊಳಿತು ಎಂಬ

Scanned by CamScanner

Scanned with CamScanner

ಅಭಿಪ್ರಾಯವನ್ನಿತ್ತರು. ಆ ಪ್ರಕಾರ, ಹೆಚ್ಚಿನ ಶ್ರಮ ವಹಿಸಿ, ಗ್ರಂಥದ ಮೇಲಿನ ಅಭಿಮಾನ ದಿಂದಲೂ, ನನ್ನ ಮೇಲಿನ ವಾತ್ಸಲ್ಯದಿಂದಲೂ, 'ಸಾರ್ಥಷೋಡಶಸಂಸ್ಕಾರರತ್ನಮಾಲಾ' ಇದರ ಕನ್ನಡ ಅನುವಾದವನ್ನು ಸುಂದರವಾಗಿ ಮಾಡಿಕೊಟ್ಟರಲ್ಲದೆ, ಅಪರ ಕ್ರಿಯೆಗಳಿಗೆ ಸಂಬಂಧಪಟ್ಟ ಭಾಗವನ್ನು ಪ್ರತ್ಯೇಕವಾಗಿ ತಯಾರಿಸಿಕೊಟ್ಟರು.

ಈ ಒಂದು ಮಹೋಪಕಾರವನ್ನು ಮಾಡಿದ ಶ್ರೀ ಪೆರ್ಲ ಕೃಷ್ಣಭಟ್ಟರಿಗೆ ನಾನು ಅನಂತ ಕೃತಜ್ಞನಾಗಿರುವೆನು.

ಈ ಗ್ರಂಥವನ್ನು ಕನ್ನಡ ಅನುವಾದದಲ್ಲಿ ಪ್ರಕಾಶನಗೊಳಿಸಲು ಅನುಮತಿಯನ್ನಿತ್ತು, ಪ್ರಕಾಶನಗೊಳ್ಳುವ ಮೊದಲೇ ವಿಶ್ವಕರ್ಮ ಸಾಯುಜ್ಯವನ್ನು ಹೊಂದಿದ ವಿದ್ಯಾಭೂಷಣ ಪದ್ಮಾಕರ ಶಾಸ್ತ್ರಿಗಳವರ ದಿವ್ಯ ಆತ್ಮಕ್ಕೆ ನನ್ನ ಭಕ್ತಿಯುತವಾದ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಪಾಲ್ಕೆ ಬಾಬುರಾಯಾಚಾರ್ಯ,
ಶ್ರೀ ನಾಗಲಿಂಗಸ್ವಾಮಿ ಸಂಸ್ಕೃತ ವೇದಪಾಠಶಾಲಾ,
ಆಲಂಗಾರು, ಮೂಡುಬಿದಿರೆ, (ದಕ್ಷಿಣ ಕನ್ನಡ ಜಿಲ್ಲೆ)

Scanned by CamScanner

ಪ್ರಕಾಶಕರ ಬಿನ್ನಹ
(ದ್ವಿತೀಯ ಆವೃತ್ತಿ)

೧೯೭೭ರಲ್ಲಿ ಈ ಗ್ರಂಥದ ಪ್ರಥಮ ಆವೃತ್ತಿಯ ಬಿಡುಗಡೆಯನ್ನು ಮದರಾಸಿನ ಖ್ಯಾತ ಶಿಲ್ಪಿ ಹಾಗೂ ಪ್ರಸಿದ್ಧ ಸಾಹಿತಿಗಳಾದ ಶ್ರೀ ಗೌರೀಶಂಕರ ಸ್ಥಪತಿಯವರ ದಿವ್ಯಹಸ್ತದಿಂದ ನೆರವೇರಿಸಲಾಗಿತ್ತು. ದಿ| ಪಾಲ್ಕೆ ಬಾಬುರಾಯ ಆಚಾರ್ಯರು ಮೂಡುಬಿದಿರೆಯ ಶ್ರೀ ನಾಗಲಿಂಗ ಸ್ವಾಮಿಾ ಸಂಸ್ಕೃತ ವೇದಪಾಠಶಾಲೆಯ ವತಿಯಿಂದ ಇದರ ಪ್ರಕಾಶನದ ಹೊಣೆ ಹೊತ್ತಿದ್ದರು. ಗ್ರಂಥವು ಪ್ರಕಟವಾದ ಅತ್ಯಲ್ಪ ಅವಧಿಯಲ್ಲೇ ಇದರ ಪ್ರತಿಗಳೆಲ್ಲ ಮಾರಾಟವಾಗಿ ಹೋದವು. ಕಳೆದ ಆರೇಳು ವರ್ಷಗಳಿಂದ ಈ ಗ್ರಂಥದ ಬಗ್ಗೆ ಆಸಕ್ತ ಮಹನೀಯರಿಂದ ಅಸಂಖ್ಯಾತ ಬೇಡಿಕೆಗಳು ಬರುತ್ತಲೇ ಇದ್ದವು. ಆದರೆ ಈ ಮಧ್ಯೆ ಶ್ರೀ ಪಾಲ್ಕೆ ಬಾಬುರಾಯ ಆಚಾರ್ಯರು ಸ್ವರ್ಗಸ್ಥರಾದುದರಿಂದ ಇದರ ದ್ವಿತೀಯ ಆವೃತ್ತಿಯನ್ನು ಮುದ್ರಿಸುವ ಕಾರ್ಯವನ್ನು ಕೂಡಲೇ ನಿರ್ವಹಿಸಲಾಗಲಿಲ್ಲ. ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಬೇಡಿಕೆಗಳ ಸಂಖ್ಯೆಯನ್ನು ಗಮನಿಸಿದಾಗ, ವೈದಿಕವರ್ಗಕ್ಕೆ ಈ ಗ್ರಂಥದ ಆವಶ್ಯಕತೆಯ ಮಹತ್ತ್ವದ ಅರಿವು ಸಮಗಾಯಿತು.

ಅಮೂಲ್ಯವಾದ ಈ ಗ್ರಂಥದ ಪುನರ್ಮುದ್ರಣದ ಅನಿವಾರ್ಯತೆಯನ್ನು ಮನಗಂಡ ಮಂಗಳೂರು ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಆಡಳಿತ ಮಂಡಳಿಯು ಇದರ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುವ ಹೊಣೆಯನ್ನು ವಹಿಸಿಕೊಂಡಿತು.

ಮೂಲ ಸಂಸ್ಕೃತ ಹಾಗೂ ಮರಾಠೀ ಭಾಷೆಯಿಂದ ಈ ಮೊದಲು ಅನುವಾದಿಸುವುದರೊಂದಿಗೆ ಇತರ ಉಪಯುಕ್ತ ವಿಷಯಗಳನ್ನೂ ಅಳವಡಿಸಿ ಪರಿಷ್ಕರಿಸಿದ ವಿದ್ವಾನ್ ಶ್ರೀ ಪೆರ್ಲ ಕೃಷ್ಣಭಟ್ಟರು ಈ ಆವೃತ್ತಿಯನ್ನೂ ಸಂಶೋಧಿಸಿ ಸಿದ್ಧಪಡಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು.

ವೈದಿಕ ಧರ್ಮಾಭಿಮಾನಿಗಳು ಈ ಗ್ರಂಥದಿಂದ ಪೂರ್ಣ ಪ್ರಯೋಜನವನ್ನು ಪಡೆದುಕೊಂಡಾಗ ನಮ್ಮ ಈ ಪ್ರಕಟಣೆಯು ಸಾರ್ಥಕವಾದೀತು.

ಪಾಲ್ಕೆ ಸದಾಶಿವ ಆಚಾರ್ಯ
ಆಡಳಿತ ಮೊಕ್ತೇಸರ
ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನ, ಮಂಗಳೂರು.

ಮಂಗಳೂರು
೧೭-೩-೧೯೯೧

ತೃತೀಯಾವೃತ್ತಿ

ದ್ವಿತೀಯಾವೃತ್ತಿಯಲ್ಲಿ ಮುದ್ರಿತ ಪ್ರತಿಗಳೆಲ್ಲವೂ ಮಾರಾಟವಾಗಿ ಮುಗಿದು ಈಗಾಗಲೇ ವರ್ಷಗಳು ಎರಡು ಸಂದು ಹೋದವು. ಈ ಗ್ರಂಥಕ್ಕೆ ವೈದಿಕ ಸಮಾಜದಿಂದ ಬರುವ ಅಪಾರ ಬೇಡಿಕೆಯನ್ನು ಗಮನಿಸಿ, ಇದೀಗ ತೃತೀಯಾವೃತ್ತಿಯಲ್ಲಿ ಮುದ್ರಿಸಿ ಪ್ರಕಟಿಸುತ್ತಿದ್ದೇವೆ.

ಮಂಗಳೂರು
೨೨-೧೨-೧೯೯೮

ಪ್ರಕಾಶಕರು

Scanned by CamScanner
Scanned with CamScanner

ಪ್ರಸ್ತಾವನೆ

ಈ ವಿಶ್ವಸೃಷ್ಟಿಯಲ್ಲಿ ಹುಟ್ಟಿ, ವಾಸಿಸುವ ಪ್ರಾಣಿವರ್ಗದಲ್ಲಿ ಮನುಷ್ಯಜೀವಿಯು ಸರ್ವಶ್ರೇಷ್ಠನೆಂದು ಪರಿಗಣಿಸಲ್ಪಟ್ಟಿದ್ದಾನೆ. ತನ್ನ ಬೌದ್ಧಿಕಬಲದಿಂದ ಆತನು ಈ ವಿಶ್ವದ ವಿವಿಧ ವಸ್ತುಶಕ್ತಿಗಳ ರಹಸ್ಯವನ್ನು ಬೇಧಿಸುತ್ತ ತನ್ನ ಬಾಳ್ವೆಯನ್ನು ಸುಗಮಗೊಳಿಸಲು ನಿರಂತರವೂ ಶ್ರಮಿಸುತ್ತಿದ್ದಾನೆ. ಆ ಪ್ರಯತ್ನದಲ್ಲಿ ಬಹ್ವಂಶ ವಿಜಯಿಯೂ ಆಗಿದ್ದಾನೆ. ಇತರ ಪ್ರಾಣಿಗಳು ಕೇವಲ 'ಆಹಾರ-ನಿದ್ರಾ-ಭಯ-ಪ್ರಜನನ'ವೆಂಬ ಪ್ರಾಕೃತಿಕ ಸ್ವಭಾವ ಪ್ರಚೋದನೆಗಳಲ್ಲಿಯೇ ಇನ್ನೂ ತೊಳಲಾಡುತ್ತಿವೆ.

ಈ ಭೂಮಿಯ ಮೇಲೆ ತಾನು ಬದುಕಿರುವಷ್ಟು ಕಾಲ ತನ್ನ ಬಾಳ್ವೆಯು ಸುಖಮಯವಾಗಿರಬೇಕೆಂಬ ಹೆಬ್ಬಯಕೆಯಿಂದ ಮನುಷ್ಯನು ತನ್ನ ವಿಚಾರಶಕ್ತಿಯ ಬಲದಿಂದ ನೂರಾರು ಸಾವಿರಾರು ಅನುಕೂಲತೆಗಳನ್ನು ಕಲ್ಪಿಸಿಕೊಂಡಿದ್ದಾನೆ. ಪ್ರತಿಕೂಲತೆಗಳನ್ನು ನಿವಾರಿಸಿಕೊಂಡಿದ್ದಾನೆ.

ಸಾವಿರಾರು ವರ್ಷಗಳ ಹಿಂದೆಯೇ ಅಲೌಕಿಕಬುದ್ಧಿಸಂಪನ್ನರಾಗಿದ್ದ ನಮ್ಮ ಭಾರತದ ಋಷಿಮುನಿಗಳು ತಮ್ಮ ತಪಃಪ್ರಭಾವದಿಂದ (ಚಿಂತನ ಮನನಗಳಿಂದ) ಈ ಸೃಷ್ಟಿಯ ರಹಸ್ಯವನ್ನೇ ಭೇದಿಸಿ ಇದರ ಆದಿ, ಅಂತ್ಯ, ಸ್ವರೂಪ, ಸ್ವಭಾವ, ಹುಟ್ಟು, ಸಾವು, ಕರ್ಮ, ಕರ್ಮಫಲ, ಜನ್ಮ-ಜನ್ಮಾಂತರ, ಸುಖ-ದುಃಖ ಇತ್ಯಾದಿಗಳನ್ನು ವಿಶದವಾಗಿ ನಿರೂಪಿಸಿದ್ದಾರೆ. ನಿಷ್ಪಕ್ಷವಾದ ತ್ರಿಕಾಲಾಬಾಧಿತ ಸಿದ್ಧಾಂತಗಳನ್ನು ಮಾಡಿದ್ದಾರೆ. ಮನುಷ್ಯಜೀವನಕ್ಕೆ ಸರಿಯಾದ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಮನುಷ್ಯನ ಇಹ-ಪರ ಎರಡನ್ನೂ ಸಮನ್ವಯಗೊಳಿಸಿದ್ದಾರೆ. ಅವರು ಲೋಕಕ್ಕೆ ನೀಡಿದ "ಸನಾತನ ವೈದಿಕ ಧರ್ಮವು" ಕೇವಲ ಒಂದು ಪ್ರಾದೇಶಿಕ ಮತವಲ್ಲ; ಒಂದು ಜನಾಂಗದ, ಒಂದು ಕಾಲದ ಸಂಪ್ರದಾಯವಲ್ಲ; ಅದು ಸಾರ್ವದೇಶಿಕವೂ, ಸಾರ್ವಕಾಲಿಕವೂ ಸಮಗ್ರಮಾನವವರ್ಗಕ್ಕೆ ಅನ್ವಯಿಸುವ ಸಾಮರ್ಥ್ಯವುಳ್ಳದ್ದೂ ಆಗಿದೆ. ಆದ್ದರಿಂದಲೇ ಅದು ಸಕಲ ಮಾನವರಿಗೆ ಗ್ರಾಹ್ಯವಾಗಿದೆ.

ಪ್ರಪಂಚದ ಮಹಾಜ್ಞಾನಿಗಳು ಬಹಳ ಹಿಂದಿನ ಕಾಲದಿಂದಲೇ ತಮ್ಮ ವಿಚಾರಶಕ್ತಿಗೆ ಹೊಳೆದಂತೆ ದೇವರು, ಸೃಷ್ಟಿ, ಜಗತ್ತು, ಜೀವ ಇತ್ಯಾದಿ ವಿಚಾರಗಳಲ್ಲಿ ತಮ್ಮ ತಮ್ಮ ಸಿದ್ಧಾಂತಗಳನ್ನು ರೂಪೀಕರಿಸುತ್ತ ಬಂದಿದ್ದಾರೆ. ಆದ್ದರಿಂದಲೇ ಪ್ರಪಂಚದಲ್ಲಿ ನೂರಾರು ಸಾವಿರಾರು ಮತಸಂಪ್ರದಾಯಗಳು, ಆಚಾರ-ವ್ಯವಹಾರಗಳು, ನಾಗರಿಕತೆ-ಸಂಸ್ಕೃತಿಗಳು ಹುಟ್ಟಿಕೊಂಡಿವೆ. ತಮ್ಮ ತಮ್ಮ ಶ್ರದ್ಧೆ ವಿಶ್ವಾಸಗಳಿಗೆ ಅನುಗುಣವಾಗಿ ಕಾಲಾಂತರದಲ್ಲಿ ಜನಾಂಗಗಳು ಅವುಗಳನ್ನು ಅನುಸರಿಸುತ್ತಲೂ, ಬಿಡುತ್ತಲೂ, ಬದಲಾಯಿಸುತ್ತಲೂ ಬಂದಿವೆ. ಆದರೆ ವೈದಿಕ ಧರ್ಮವು ಇಂದಿಗೂ ತನ್ನ ಸತ್ತ್ವವನ್ನು ಸಂರಕ್ಷಿಸಿಕೊಂಡು ತನ್ನ ಮೂಲ ಸ್ವರೂಪದಲ್ಲಿಯೇ ದೃಢವಾಗಿ ಬೇರೂರಿ ನಿಂತಿದೆ.

ಮನುಷ್ಯನ ಜೀವನವು ಪ್ರಗತಿಪರವಾಗಿ ಮೇಲು ಮೇಲಕ್ಕೆ ಏರುತ್ತ ಭವ್ಯತೆಯನ್ನು ಗಳಿಸಿ ಸಾರ್ಥಕವಾಗಬೇಕಿದ್ದರೆ ಏನೇನು ಮಾಡಬೇಕೆಂದು ಶ್ರುತಿ, ಸ್ಮೃತಿ, ಶಾಸ್ತ್ರಾದಿಗಳ ಮೂಲಕ ವೈದಿಕಧರ್ಮವು ಸೂಕ್ಷ್ಮವಾದ ಮಾರ್ಗದರ್ಶನ ಮಾಡಿದೆ. **"ಜನ್ಮನಾ ಜಾಯತೇ ಜಂತುಃ"** ಪ್ರತಿಯೊಬ್ಬನೂ ಹುಟ್ಟಿದಾಗ ಇತರ ಪ್ರಾಣಿಗಳಂತೆ ಕೇವಲ ಜಂತುವಾಗಿಯೇ ಇರುತ್ತಾನೆ. ಭೂ ಗರ್ಭದಲ್ಲಿ ಕಲ್ಲುಮಣ್ಣುಗಳೊಂದಿಗೆ ಹುದುಗಿದ್ದ ಚಿನ್ನವನ್ನು ಹೊರತೆಗೆದು ಹಲವು ಬಾರಿ

Scanned by CamScanner
Scanned with CamScanner

ಬೆಂಕಿಯಲ್ಲಿ ಕಾಯಿಸಿ, ಬಡಿದು, ಶುದ್ಧೀಕರಿಸಿ, ಪುತ್ಥಳಿಯನ್ನಾಗಿಸಿ ಸುಂದರವಾದ ಆಭರಣಗಳನ್ನು ತಯಾರಿಸಿದಂತೆ ಮನುಷ್ಯನನ್ನೂ ಹೆಜ್ಜೆ ಹೆಜ್ಜೆಗೆ ಸಂಸ್ಕರಿಸಿ, ಶುದ್ಧೀಕರಿಸಿ ಪೂರ್ಣತೆಯತ್ತ ಕೊಂಡೊಯ್ಯಬೇಕು. ಅದಕ್ಕಾಗಿಯೇ ವೈದಿಕಧರ್ಮದಲ್ಲಿ ಪ್ರತಿಯೊಬ್ಬನಿಗೂ ಸಂಸ್ಕಾರಗಳನ್ನು ವಿಧಿಸಿದ್ದಾರೆ. ಆಯಾ ಸಂದರ್ಭದಲ್ಲಿ ಆಯಾ ಸಂಸ್ಕಾರವು ಪ್ರತಿಯೋರ್ವ ವ್ಯಕ್ತಿಗೂ ಅನಿವಾರ್ಯವಾಗಿ ಆಗಲೇಬೇಕು. ಆಯಾ ಸಂಸ್ಕಾರದಿಂದ ಸಂಸ್ಕರಿಸಲ್ಪಡುತ್ತ, ಆತನು ಬಾಳ್ವೆಯ ಒಂದೊಂದೇ ಮೆಟ್ಟಲನ್ನು ಏರುತ್ತ ಜೀವನಸಾರ್ಥಕ್ಯದ ಪರಮಲಕ್ಷ್ಯದ ಕಡೆಗೆ ಸಾಗುತ್ತಿರಬೇಕು. ಇದಕ್ಕಾಗಿಯೇ ಗರ್ಭಾಧಾನದಿಂದ ವಿವಾಹದ ವರೆಗೆ ಪೂರ್ವ ಸಂಸ್ಕಾರಗಳೂ, ಮರಣಾನಂತರ ಔರ್ಧ್ವ-ದೇಹಿಕ ಅಪರಸಂಸ್ಕಾರಗಳೂ ವಿಧಿಸಲ್ಪಟ್ಟಿವೆ.

ಇಂದಿನ ಆಧುನಿಕ ಪರಿಸರದಲ್ಲಿ ಭಾರತೀಯ ವೈದಿಕ ಧರ್ಮಾವಲಂಬಿಗಳಾದ ನಮಗೆ ಪಾಶ್ಚಾತ್ಯರ ಸಂಸರ್ಗದಿಂದ - ಭೌತಿಕ ಸುಖಸಮೃದ್ಧಿಯೊಂದೇ ಜೀವನದ ಪರಮಧ್ಯೇಯವೆಂಬ ಅವರ ತತ್ತ್ವದ ಪ್ರಭಾವದಿಂದ-ನಮ್ಮ ಧಾರ್ಮಿಕ ಸಂಪ್ರದಾಯಗಳಲ್ಲಿದ್ದ ಶ್ರದ್ಧೆಯು ಶಿಥಿಲವಾಗಿದೆ. ನಮ್ಮ ಆಚಾರ, ಸಂಪ್ರದಾಯ, ಪರಂಪರೆ ಇತ್ಯಾದಿಗಳೆಲ್ಲ ಕೇವಲ ನಿರುಪಯುಕ್ತ ಅಂಧಃಶ್ರದ್ಧೆಗಳೆಂದು ನಾವೇ ಅವುಗಳನ್ನು ತುಚ್ಛೀಕರಿಸುತ್ತಿದ್ದೇವೆ. ಅವುಗಳ ಅಂತರಾರ್ಥವನ್ನೂ, ಪ್ರಯೋಜನ ಪರಿಣಾಮಗಳನ್ನೂ ಅರಿಯದೆ ದೂರೀಕರಿಸಿದ್ದೇವೆ. ವೈಜ್ಞಾನಿಕ ವಿಚಿಕಿತ್ಸೆಗೆ ಒಳಪಡಿಸಿ ಪ್ರತಿಯೊಂದು ವಿಚಾರದ ಸ್ವರೂಪ, ಕ್ರಿಯೆ, ಫಲ, ಪರಿಣಾಮಗಳನ್ನು ಪ್ರತ್ಯಕ್ಷವಾಗಿ ಕಾಣದ ಹೊರತು ಅದನ್ನು ನಂಬಿ ಅಂಧಾನುಕರಣೆಯಿಂದ ಆಚರಿಸುವುದು ವ್ಯರ್ಥ ಎಂದು ಭಾವಿಸಿ ಅಮೂಲ್ಯವಾದ ಅದೆಷ್ಟೋ ಉತ್ತಮ ಆಚಾರ ವ್ಯವಹಾರಗಳನ್ನು ಕಳಕೊಂಡಿದ್ದೇವೆ. ವೈಜ್ಞಾನಿಕವಾಗಿ ಅವುಗಳ ಉಪಯುಕ್ತತೆಯ ಕುರಿತು ಸಂಶೋಧನೆಯನ್ನು ಮಾಡುವ ಪ್ರಯತ್ನಕ್ಕೂ ಕೈಹಾಕಲಿಲ್ಲ. ಆದರೆ ಇತ್ತೀಚೆಗೆ ಹಲವು ಮಂದಿ ಮೇಧಾವಿಗಳು ಭಸ್ಮಧಾರಣ, ಪಂಚಗವ್ಯ, ತುಲಸೀದಲ, ಮೃತ್ತಿಕಾಸ್ನಾನ, ಮಂತ್ರಪಠನ, ಹೋಮಧೂಮ, ಘಂಟಾನಾದ, ಪ್ರಾತಃಸ್ನಾನ, ಸೂರ್ಯನಮಸ್ಕಾರ ಮುಂತಾದ ಹಿಂದುಗಳ ಪ್ರತಿಯೊಂದು ಪದ್ಧತಿಯಲ್ಲೂ ನಿಗೂಢವಾಗಿ ಯಾವುದೋ ಒಂದು ಐಹಿಕ, ಆಮುಷ್ಮಿಕ ಫಲವಿಶೇಷವೂ ಜೀವನೋಪಯುಕ್ತತೆಯೂ ಅಡಕವಾಗಿದೆ ಎಂದು ಸಾರುತ್ತಿದ್ದಾರೆ. ಈ ದಿಶೆಯಲ್ಲಿ ಇನ್ನಷ್ಟು ಸಂಶೋಧನೆಯು ನಡೆಯಬೇಕೆಂದು ಹೇಳುತ್ತಿದ್ದಾರೆ.

ಕಾಲಾಂತರದಲ್ಲಿ ವೈಜ್ಞಾನಿಕ ಪರೀಕ್ಷಣದಿಂದ ಹಿಂದುಗಳಾದ ನಮ್ಮ ಆಚಾರ ವ್ಯವಹಾರಗಳ ರಹಸ್ಯಮಯವಾದ ಫಲಗಳೂ, ಉಪಯುಕ್ತತೆಯೂ ಸಿದ್ಧವಾದಾಗ ಆಗಲಿ, ಹಾಗಾಗಲಿಲ್ಲವೆಂದು ಈಗಲೇ ಅವುಗಳನ್ನು ಉಪೇಕ್ಷಿಸುವುದು ಸರ್ವಥಾ ಸರಿಯಲ್ಲ. ಪ್ರತಿಯೊಂದನ್ನೂ ಅದರದರ ಯಥಾರ್ಥಸ್ವರೂಪದಲ್ಲಿ ಕಾಪಾಡಿಕೊಂಡು ಆಚರಿಸುವುದು ನಮ್ಮ ಧರ್ಮ, ಪರಮಕರ್ತವ್ಯ.

ಗರ್ಭಾಧಾನದಿಂದ ವಿವಾಹಪರ್ಯಂತ ನಿರ್ವಹಿಸಬೇಕಾದ ಹಲವು ಸಂಸ್ಕಾರಗಳಲ್ಲಿ ಈಗೀಗ ಉಪನಯನ, ವಿವಾಹ ಮುಂತಾಗಿ ಒಂದೆರಡು ಸಂಸ್ಕಾರಗಳು ಮಾತ್ರ ಆಚರಿಸಲ್ಪಡುತ್ತವೆ. ಉಳಿದವು ಅರ್ಥಹೀನವೆಂದೂ, ಅನುಪಯುಕ್ತವೆಂದೂ ಅವುಗಳ ಕೈಬಿಡಲಾಗಿವೆ. ಈ ಉಪನಯನ, ವಿವಾಹಗಳಲ್ಲಿಯೂ ಬಾಹ್ಯ ಆಡಂಬರಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆಯೇ ಹೊರತು ಅವುಗಳ ವೈದಿಕ ಕ್ರಿಯಾಭಾಗಗಳ ಸಮಗ್ರ ಆಚರಣೆಯ ಕಡೆಗೆ ಇರಬೇಕಾದ ಶ್ರದ್ಧೆಯು ದೂರವಾಗಿದೆ. ಯಥಾರ್ಥವಾಗಿ ನೋಡಿದರೆ ಈ ಸಂಸ್ಕಾರಗಳನ್ನು ಮಾಡುವ ಕರ್ತೃವಿಗೂ, ಮಾಡಿಸುವ ಪುರೋಹಿತನಿಗೂ ಅವುಗಳ ಅಂತರಾರ್ಥವು ತಿಳಿದೇ ಇರುವುದಿಲ್ಲ. ಬಾಯಲ್ಲಿ

Scanned by CamScanner

Scanned with CamScanner

ಮಂತ್ರಗಳನ್ನು ಪಠಿಸುತ್ತ ಕೈಯಿಂದ ಯಾವುದಾವುದೋ ಕೆಲಸಗಳು ನಡೆಯುತ್ತವೆ. ಏನು, ಯಾಕೆ, ಹೇಗೆ ಎಂಬ ಪರಿವೆ ಯಾರೊಬ್ಬನಿಗೂ ಇದ್ದಂತಿಲ್ಲ. ಊಟ-ಉಪಚಾರ, ವಸ್ತ್ರ-ಆಭರಣ, ವಾದ್ಯ-ಗದ್ದಲ, ಆಡಂಬರ-ಪ್ರದರ್ಶನಗಳಿಂದಲೇ ನಮ್ಮ ಸಂಸ್ಕಾರಗಳು ಪರ್ಯವಸಾನ ಹೊಂದುತ್ತವೆ. ಅವುಗಳಲ್ಲಿ ಬರುವ ಪ್ರತಿಯೊಂದು ಕ್ರಿಯಾಭಾಗದ ಉದ್ದೇಶವೇನು, ಅರ್ಥವೇನು, ಕ್ರಮವೇನು, ಉಚ್ಚರಿಸುವ ಮಂತ್ರದ ಅರ್ಥವೇನು ಇತ್ಯಾದಿ ಪ್ರಮುಖ ವಿಚಾರಗಳ ಕಡೆಗೆ ನಮ್ಮ ದೃಷ್ಟಿ ಹರಿಯುವುದೇ ಇಲ್ಲ. ಪುರೋಹಿತರು ಏನೇನನ್ನೋ ನಿರ್ದೇಶಿಸುತ್ತಾರೆ. ಅಷ್ಟನ್ನು ಹಾಗೋ ಹೀಗೋ ಮಾಡಿ ಮುಗಿಸಿದರೆ ಸಾಕು ಎಂಬುದರಿಂದಲೇ ನಾವು ಸಮಾಧಾನಪಡುತ್ತೇವೆ.

ಇದು ಸರಿಯಲ್ಲ. ಮಂತ್ರಗಳನ್ನು ಬಾಯಿಪಾಠ ಮಾಡಿ ಮೊದಲಿನವರ ಅನುಕರಣೆಯಿಂದ ಕೇವಲ ಯಾಂತ್ರಿಕವಾಗಿ ಕ್ರಿಯಾಭಾಗಗಳನ್ನು ಮಾಡಿಸಬಲ್ಲವನಷ್ಟೇ ಪುರೋಹಿತನಾಗಲಾರ. ಆತನು ಸಮಗ್ರವಾಗಿ ವೇದಾಭ್ಯಾಸ ಮಾಡಿದವನೂ, ಸಂಸ್ಕೃತ ಭಾಷಾಪರಿಣತನೂ, ಘನ ವಿದ್ವಾಂಸನೂ, ಸ್ವತಃ ಸದಾಚಾರಸಂಪನ್ನನೂ ಆಗಿರಬೇಕು. ಮಂತ್ರಾರ್ಥವನ್ನು ತಿಳಿದವನಾಗಿರಬೇಕು. ಪ್ರತಿಯೊಂದು ಕ್ರಿಯಾಭಾಗದ ಉದ್ದೇಶ ಹಾಗೂ ಪರಿಣಾಮಗಳನ್ನು ಅರಿತವನಾಗಿರಬೇಕು. ಕೇವಲ ದಕ್ಷಿಣೆಯ ಕಡೆಗೇ ದೃಷ್ಟಿ ಇಡದೆ ತಾನು ಮಾಡುವ, ಮಾಡಿಸುವ ಕರ್ಮಗಳಲ್ಲಿ ಪ್ರಾಮಾಣಿಕವಾದ ಶ್ರದ್ಧೆಯುಳ್ಳವನಾಗಿರಬೇಕು. ಇಂತಹ ಪುರೋಹಿತನು ಶ್ರದ್ಧಾಳುವಾದ ಯಜಮಾನನ ಕೈಯಿಂದ ಕರ್ಮಗಳನ್ನು ಮಾಡಿಸಿದಾಗ ಮಾತ್ರ ಆಯಾ ಕರ್ಮದ ಪೂರ್ಣ ಫಲ ಪ್ರಾಪ್ತಿಯಾದೀತು.

ಹಲವು ವರ್ಷಗಳ ಹಿಂದೆ ಅಂದರೆ, ಕ್ರಿ.ಶ. ೧೯೧೦ನೇ ಇಸವಿಯಲ್ಲಿ ಪೂನಾದ ವೇದಮೂರ್ತಿ ಬ್ರಹ್ಮಶ್ರೀ ಬಾಳಶಾಸ್ತ್ರೀ ರಾವ್‌ಜೀಶಾಸ್ತ್ರೀ ಕ್ಷೀರಸಾಗರ ಎಂಬ ಮಹನೀಯರು **"ಸಾರ್ಥಷೋಡಶಸಂಸ್ಕಾರರತ್ನಮಾಲಾ"** ಎಂಬ ಗ್ರಂಥವನ್ನು ಮರಾಠೀ ಭಾಷೆಯಲ್ಲಿ ಅರ್ಥ ಮತ್ತು ಇತರ ಎಲ್ಲ ವಿವರಗಳೊಂದಿಗೆ ಪ್ರಕಟಿಸಿದರು. ಈಗಾಗಲೇ ಅದರ ಮೂರನೆಯ ಆವೃತ್ತಿಯು ಪ್ರಕಟವಾಗಿದೆ ಎಂಬುದರಿಂದಲೇ ಆ ಗ್ರಂಥದ ಉಪಯುಕ್ತತೆಯು ಅರ್ಥವಾಗುತ್ತದೆ. ಸಂಸ್ಕಾರವೆಂದರೇನು? ಅದರ ಸ್ವರೂಪವೇನು? ಫಲವೇನು? ಎಂಬಲ್ಲಿಂದ ಆರಂಭಿಸಿ ಗರ್ಭಾಧಾನದಿಂದ ಮೊದಲ್ಗೊಂಡು ವಿವಾಹಪರ್ಯಂತ ಪ್ರತಿಯೊಂದು ಸಂಸ್ಕಾರದ ಪ್ರಯೋಗವನ್ನೂ ಆಮೂಲಾಗ್ರವಾಗಿ ಈ ಗ್ರಂಥದಲ್ಲಿ ವಿವರಿಸಲಾಗಿದೆ. ಪ್ರತಿಯೊಂದು ಕ್ರಿಯಾಭಾಗದ ಅರ್ಥವನ್ನೂ ಮರಾಠೀ ಭಾಷೆಯಲ್ಲಿ ಹೇಳಲಾಗಿದೆ. ಪೂಜೆ, ಹೋಮ ಇತ್ಯಾದಿಗಳಲ್ಲಿ ಉಪಯೋಗಿಸಬೇಕಾದ ವಸ್ತುಉಪಕರಣಗಳ ಸಂಪೂರ್ಣ ವಿವರವನ್ನು ಚಿತ್ರಸಹಿತವಾಗಿ ಅದರಲ್ಲಿ ವಿವರಿಸಲಾಗಿದೆ. ಮುಖ್ಯವಾಗಿ ಪುರೋಹಿತವರ್ಗದವರಿಗೂ, ಸಾಮಾನ್ಯವಾಗಿ ಇತರರಿಗೂ ಅತ್ಯಂತ ಉಪಯುಕ್ತವಾದ ಈ ಗ್ರಂಥವು ಮರಾಠೀ ಭಾಷೆಯಲ್ಲಿ ದೇವನಾಗರೀ ಲಿಪಿಯಲ್ಲಿ ಮುದ್ರಿತವಾಗಿರುವುದರಿಂದ ಆ ಭಾಷಾ-ಭಾಷಿಗಳಿಗೇನೋ ಮಹೋಪಕಾರವಾಯಿತು. ಮರಾಠೀ ಭಾಷೆಯನ್ನೂ ನಾಗರೀಲಿಪಿಯನ್ನೂ ಅರಿಯದ ಕನ್ನಡಿಗರಿಗೂ ಅಂತಹದೇ ಸೌಲಭ್ಯವು ಲಭ್ಯವಾಗಬೇಕೆಂಬ ಘನೋದ್ದೇಶದಿಂದ ಈ ಗ್ರಂಥವನ್ನು ಕನ್ನಡದಲ್ಲಿ ಪ್ರಕಟಿಸಬೇಕೆಂದು ಶ್ರೀ ಪಾಲ್ಕೆ ಬಾಬುರಾಯ ಆಚಾರ್ಯರು ಆ ಮಹತ್ಕಾರ್ಯವನ್ನು ನನಗೆ ಒಪ್ಪಿಸಿದರು. ಕಷ್ಟಸಾಧ್ಯವಾದ ಈ ಘನಕಾರ್ಯಕ್ಕೆ ಕೈಹಾಕುವುದು ನನ್ನ ಪಾಲಿಗೆ ಒಂದು ದುಃಸಾಹಸವೇ ಆದೀತೆಂಬ ಪರಿಜ್ಞಾನವಿದ್ದರೂ ಬಹುಜನೋಪಯೋಗಿಯಾದ ಒಂದು ಸತ್ಕಾರ್ಯವಿದು ಎಂಬ ವಿನೀತ ಭಾವದಿಂದ ನಾನು ಯಥಾಸಾಧ್ಯ ಪ್ರಯತ್ನಿಸಿದ್ದೇನೆ.

Scanned by CamScanner

Scanned with CamScanner

"ಸಾರ್ಥಷೋಡಶಸಂಸ್ಕಾರರತ್ನಮಾಲಾ" ಗ್ರಂಥವನ್ನು ಕನ್ನಡೀಕರಿಸುವಾಗ ಕೇವಲ ಶಬ್ದಾನುವಾದ ವಾಕ್ಯಾನುವಾದ ಮಾತ್ರ ಇದ್ದರೆ ಸಾಲದೆಂದು ನನಗೆ ತೋರಿತು. ಕನ್ನಡದಲ್ಲಿ ಪ್ರಕಟಿಸಲ್ಪಡುವ ಈ ಗ್ರಂಥವು ಒಂದು ಕೈಪಿಡಿಯಂತಿರಬೇಕೆಂದು ಭಾವಿಸಿ ಇದರಲ್ಲಿ ಪ್ರಾತಃ ಸ್ಮರಣೆ, ಪ್ರಾತಃಸಂಧ್ಯಾ ಇತ್ಯಾದಿಗಳಿಂದ ತೊಡಗಿ, ಸಾಮಾನ್ಯವಾಗಿ ಪ್ರತಿಯೊಬ್ಬನೂ ಆಚರಿಸಬೇಕಾದ ಎಲ್ಲ ನಿತ್ಯಕರ್ಮಗಳನ್ನೂ ಸೇರಿಸಲಾಗಿದೆ. ಇದರಿಂದ ಈ ಶ್ರೇಷ್ಠಗ್ರಂಥವು ಇನ್ನಷ್ಟು ಉಪಯುಕ್ತವಾದೀತೆಂಬ ವಿಶ್ವಾಸವು ನನಗಿದೆ. ಅವಶ್ಯವೆಂದು ತೋರಿಬಂದಲ್ಲೆಲ್ಲ ಕನ್ನಡದಲ್ಲಿ ಸರಿಯಾದ ಅರ್ಥವಿವರಣೆಯನ್ನು ಕೊಟ್ಟಿರುವುದರಿಂದ ನಮ್ಮ ಕನ್ನಡಬಾಂಧವರು ಇದರಿಂದ ಪೂರ್ಣ ಪ್ರಯೋಜನವನ್ನು ಪಡೆಯುವರೆಂದು ಆಶಿಸುತ್ತೇನೆ.

ಮುಂಬಯಿಯ ನಿರ್ಣಯಸಾಗರ ಮುದ್ರಣಾಲಯದವರು ಮುದ್ರಿಸಿ ಪ್ರಕಟಿಸಿದ "ಋಗ್ವೇದೀಯ ಬ್ರಹ್ಮಕರ್ಮ ಸಮುಚ್ಚಯ"ದಲ್ಲಿ ನಿರೂಪಿಸಲ್ಪಟ್ಟ ವಿಷಯಗಳನ್ನೇ ಆಧಾರವಾಗಿಟ್ಟು ಈ "ಔರ್ಧ್ವದೇಹಿಕವಿಧಿಃ" ಎಂಬ ಗ್ರಂಥವನ್ನು ಸಂಗ್ರಹಿಸಲಾಗಿದೆ. ಮೂಲ ವೇದಮಂತ್ರಗಳೂ, ಬೇರೆ ಬೇರೆ ಕ್ರಿಯಾಭಾಗಗಳೂ ಸಾಮಾನ್ಯವಾಗಿ ಎಲ್ಲ ವಿಭಾಗದ ಬ್ರಾಹ್ಮಣವರ್ಗಗಳಿಗೂ ಸಮಾನವಾಗಿದ್ದರೂ ದೇಶ-ಕಾಲ-ಆಚಾರಾದಿ ಭಿನ್ನತೆಯಿಂದ ಕೆಲವು ಪದ್ಧತಿಗಳಲ್ಲಿ ವ್ಯತ್ಯಾಸಗಳಿರಬಹುದು. ತಮ್ಮ ತಮ್ಮ ಕುಲಾಚಾರ ದೇಶಾಚಾರಗಳಿಗೆ ಸರಿಯಾಗಿ ಈ ಕರ್ಮಭಾಗಗಳನ್ನು ಎಲ್ಲರೂ ಅನುಸರಿಸಬಹುದು.

"ಆತುರಸನ್ನಿಧೌ ಜಾಪ್ಯಂ" ಎಂಬಲ್ಲಿಂದಲೇ ಔರ್ಧ್ವದೇಹಿಕಕ್ರಿಯೆಗಳು ಪ್ರಾರಂಭವಾಗುತ್ತವೆ. ಕರ್ಮಾಧಿಕಾರಿನಿರ್ಣಯ, ಪಂಚಕಾದಿದಾಹವಿಧಿ, ಚಿತಿ ಪೂರಣ, ದಶಾಹಕ್ರಿಯೆ, ಏಕೋದ್ದಿಷ್ಟ ಸಪಿಂಡೀಕರಣ ಮುಂತಾದ ಎಲ್ಲ ಕ್ರಿಯಾ ಭಾಗಗಳನ್ನೂ ಇಲ್ಲಿ ಅಳವಡಿಸಲಾಗಿದೆ. ಮೇಲೆ ದಪ್ಪ ಅಕ್ಷರಗಳಲ್ಲಿ ಸಂಸ್ಕೃತ ಮೂಲವನ್ನೂ ಕೆಳಗೆ ಕನ್ನಡದಲ್ಲಿ ಮಾಡಬೇಕಾದ ಕ್ರಿಯೆಗಳ ವಿವರವನ್ನೂ ಕೊಡಲಾಗಿದೆ. ಒಂದು ಕಡೆಯಲ್ಲಿ ಒಂದು ಸಲ ಪೂರ್ಣವಾಗಿ ಮುದ್ರಿಸಿದ ಮಂತ್ರ ಹಾಗೂ ವಾಕ್ಯಾಂಶಗಳನ್ನು ಇನ್ನೊಂದು ಕಡೆಯಲ್ಲಿ ಅದೇ ಮಂತ್ರ, ವಾಕ್ಯಾಂಶ ಬಂದಾಗ, ಅದರ ಆದಿಯನ್ನು ಮಾತ್ರ ಕೊಡಲಾಗಿದೆ. ಅಂತಹುದನ್ನು ಪೂರ್ಣವಾಗಿಯೇ ಉಚ್ಚರಿಸಬೇಕು. ನಗ್ನಪ್ರಚ್ಛಾದನಶ್ರಾದ್ಧ , ಅಸ್ಥಿ ಸಂಚಯನ ಶ್ರಾದ್ಧ ಇತ್ಯಾದಿಗಳಿಂದ ತೊಡಗಿ ಮುಂದೆ ಸಪಿಂಡೀಕರಣಶ್ರಾದ್ಧದವರೆಗೆ ಪ್ರತಿಯೊಂದು ಶ್ರಾದ್ಧ ಕಾರ್ಯದಲ್ಲೂ, ಸಾಂವತ್ಸರಿಕ ಶ್ರಾದ್ಧದಲ್ಲಿ ವಿವರವಾಗಿ ಹೇಳಿದ ಕ್ರಿಯಾಭಾಗಗಳನ್ನು ಮಾಡಬೇಕಾಗಿದೆ. ಹಾಗಾಗಿ ಸಾಂವತ್ಸರಿಕ ಶ್ರಾದ್ಧದ ಪೂರ್ಣಪ್ರಯೋಗವನ್ನು ಈ ಗ್ರಂಥದಲ್ಲಿ ಸೇರಿಸಲಾಗಿದೆ. ಅಲ್ಲದೆ ಬ್ರಹ್ಮಶ್ರೀ ವೇದಮೂರ್ತಿ ಪಡುಬಿದ್ರಿ ಅನಂತಾಚಾರ್ಯರು ಒದಗಿಸಿ ಕೊಟ್ಟ "ಯತಿಸಂಸ್ಕಾರ ವಿಧಿ"ಯನ್ನೂ, ಅಶೌಚನಿರ್ಣಯಕ್ಕೆ ಅನುಕೂಲವಾಗುವಂತೆ "ತ್ರಿಂಶಚ್ಛ್ಲೋಕೀಅಶೌಚನಿರ್ಣಯ" ಶ್ಲೋಕಗಳನ್ನೂ ಮುದ್ರಿಸಲಾಗಿದೆ.

ಕೃ. ಭ. ಪೆರ್ಲ

Scanned by CamScanner

Scanned with CamScanner

ಬ್ರಹ್ಮಶ್ರೀ ಬಾಳಶಾಸ್ತ್ರೀ ರಾವ್‌ಜೀಶಾಸ್ತ್ರೀ ಕ್ಷೀರಸಾಗರ

ಇವರ ಸಂಕ್ಷಿಪ್ತ ಪರಿಚಯ

೧೭೯೮ನೇ ಶಕವರ್ಷದ ಪೌಷ ಶುಕ್ಲ ನವಮೀ ಸೋಮವಾರ ಸತಾರಾದಲ್ಲಿ ಕ್ರಿ. ಶ. 1876 ಡಿಸೆಂಬರ 25 ಕ್ಕೆ॥ ಬ್ರಹ್ಮಶ್ರೀ ಬಾಳಶಾಸ್ತ್ರಿಯವರ ಜನನವಾಯಿತು. ಇವರ ತಂದೆ ರಾವಜೀ ಶಾಸ್ತ್ರಿಯವರಿಗೆ ಪಂ. ನಾರಾಯಣಶಾಸ್ತ್ರೀ ಮತ್ತು ಬಾಳಶಾಸ್ತ್ರೀ ಎಂಬ ಇಬ್ಬರೇ ಮಕ್ಕಳಿದ್ದರು. ಬ್ರ. ಬಾಳಶಾಸ್ತ್ರಿಯವರು ಹುಟ್ಟಿ ಒಂದು ತಿಂಗಳಾಗುವಷ್ಟರಲ್ಲೇ ಅವರ ತೀರ್ಥರೂಪರು ದಿವಂಗತರಾದರು. (ಮಾಘ ಬ॥ ೪, ಫೆಬ್ರವರಿ 1.) ಬ್ರ. ಬಾಳಶಾಸ್ತ್ರಿಯವರು ಹೀಗೆ ಬಾಲ್ಯದಲ್ಲೇ ಪಿತೃನಿಧನದ ಘೋರ ಸಂಕಟಕ್ಕೆ ಈಡಾದರು. ಅವರ ಮಾತೃಶ್ರೀಯವರಾದ ಬಕುಳಾಬಾಯಿಯವರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಅನುಕೂಲ್ಯಕ್ಕಾಗಿ ೧೭೯೯ನೇ ಶಕವರ್ಷದಲ್ಲಿ ಪುಣೆಯಲ್ಲಿದ್ದ ತಮ್ಮ ಸಮೀಪದ ಬಂಧುವೊಬ್ಬರಲ್ಲಿಗೆ ಬಂದು ನೆಲಸಿದರು. ಆ ಕಾಲಕ್ಕೆ ಬಾಳಶಾಸ್ತ್ರಿಯವರ ಅಣ್ಣ ನಾರಾಯಣ ಶಾಸ್ತ್ರಿಗಳಿಗೆ ೧೬-೧೭ ವರ್ಷ ಪ್ರಾಯವಾಗಿತ್ತು. ಅವರು ಪುಣೆಯ ಸ್ಥಳೀಯ ಪಾಠಶಾಲೆಯಲ್ಲಿ ಖ್ಯಾತ ವೈಯಾಕರಣೆಗಳಾಗಿದ್ದ ಪಂ. ನಾರಾಯಣ ಶಾಸ್ತ್ರೀ ಗೋಡಬೋಲೇ ಎಂಬವರಿಂದ ಸಿದ್ಧಾಂತಕೌಮುದೀ, ತರ್ಕಸಂಗ್ರಹ, ಮುಕ್ತಾವಳೀ ಮೊದಲಾದ ಗ್ರಂಥಗಳ ಅಧ್ಯಯನ ಮಾಡಿದರು. ಅಂತೆಯೇ ವಿದ್ವದ್ಭೂಷಣ ವಾಮನಶಾಸ್ತ್ರೀ ಕೇಮ್‌ಕರ್ ಎಂಬವರ ಶಿಷ್ಯತ್ವದಲ್ಲಿದ್ದು ಸಾಹಿತ್ಯಾಭ್ಯಾಸವನ್ನೂ ಮಾಡಿದರು. ಅವರು ಆ ವಯಸ್ಸಿನಲ್ಲಿ ಆಶುಕವಿ ಎಂದು ಖ್ಯಾತರಾಗಿದ್ದರು. ಅವರೇ ಸ್ವತಃ ತನ್ನ ತಮ್ಮ ಬ್ರಹ್ಮಶ್ರೀ ಬಾಳಶಾಸ್ತ್ರಿಯವರಿಗೆ ಸಂಸ್ಕೃತಭಾಷಾಧ್ಯಯನ ಹಾಗೂ ಘನಾಂತ ವೇದಾಧ್ಯಯನ ಮಾಡಿಸಿದರು. ಶ್ರೀ ಬಾಳಶಾಸ್ತ್ರಿಯವರ ಮನೆತನವೇ ಪರಂಪರೆಯಿಂದ ಸಂಸ್ಕೃತೋಪಜೀವಿಯಾಗಿತ್ತು. ಇವರ ಮುತ್ತಜ್ಜನವರು ಯಾವುದೇ ರೀತಿಯ ಪ್ರತಿಫಲ ಅಥವಾ ಸಂಭಾವನೆಯನ್ನು ಸ್ವೀಕರಿಸದೆ ತಮ್ಮ ಸಮಗ್ರ ಜೀವಮಾನವನ್ನೇ ಕೀರ್ತನಕ್ಕಾಗಿ ವ್ಯಯಿಸಿದ್ದರಿಂದ ಅವರಿಗೆ ಜಹಗೀರ್‌ದಾರ್ ಭೋಂಸಲೆಯವರಿಂದ ೧೨ ರೂಪಾಯಿ ವರ್ಷಾಶನ ಬರುತ್ತಿತ್ತು. ಮುಂದಕ್ಕೆ ಈ ವರ್ಷಾಶನವು ಇವರ ಪೀಳಿಗೆಯವರಿಗೆ ಬರುತ್ತಿತ್ತು. ಆ ಮುತ್ತಜ್ಜನವರಿಗೆ ಬಾಬಾಜೀ ಎಂಬ ಒಬ್ಬನೇ ಮಗನಿದ್ದನು. ಆ ಬಾಬಾಜೀಯವರ ಮೊಮ್ಮಗನೇ ಶ್ರೀ। ಬಾಳಶಾಸ್ತ್ರಿಯವರು. ಶ್ರೀ। ಬಾಬಾಜೀಯವರು ಗ್ರಹಲಾಘವೀ ಪಂಚಾಂಗಕರ್ತರಾಗಿದ್ದುದರಿಂದ ಅವರು ಬಾಬಾಜೀ ಜೋಶೀ ಎಂದೇ ಪ್ರಖ್ಯಾತರಾಗಿದ್ದರು. ಜ್ಯೋತಿಃಶಾಸ್ತ್ರದಲ್ಲಿ ಅವರ ಪಾಂಡಿತ್ಯವು ಅಗಾಧವಾಗಿದ್ದುದಲ್ಲದೆ ಅವರು ವೇದವಿಜ್ಞಾನ ಪಾರಂಗತರೂ ಆಗಿದ್ದರು. ಅಂತಹ ಘನ ವಿದ್ವಾಂಸರಿಗೆ ಶ್ರೀ ನರಸಿಂಹ ಸ್ವಾಮಿಯ ಅನುಗ್ರಹದಿಂದ ಮಗನಾಗಿ ಹುಟ್ಟಿದ ಮಹಾನುಭಾವರೇ ಶ್ರೀ। ಬಾಳಶಾಸ್ತ್ರಿಯವರ ತಂದೆಯಾಗಿದ್ದರು.

ತಾಯಿ ಬಕುಳಾಬಾಯಿಯವರ ವ್ರತನಿಯಮಾದಿಗಳ ಸಂಸ್ಕಾರವು ಮಗನ ಮೇಲೆ ಅಚ್ಚಳಿಯದ ಪರಿಣಾಮವನ್ನು ಬೀರಿತ್ತು. ಹಾಗಾಗಿ ಬ್ರ. ಬಾಳಶಾಸ್ತ್ರಿಯವರು ಗಾಯತ್ರೀಜಪ, ರುದ್ರೈಕಾದಶನೀ, ಸಪ್ತಶತೀಪಾಠ, ಪಂಚಮಹಾಯಜ್ಞ ಮುಂತಾದ ನಿತ್ಯಕರ್ಮಗಳ ಅನುಷ್ಠಾನದಲ್ಲಿ ಎಂದಿಗೂ ತಪ್ಪಿರಲಿಲ್ಲ. ಇವರ ಅಣ್ಣ ಶ್ರೀ। ನಾರಾಯಣ ಶಾಸ್ತ್ರಿಯವರ ಕೈಬರಹವು ಬಹಳ ಸುಂದರವಾಗಿತ್ತು. ತಂದೆಯವರ ದೇಹಾಂತವಾದ ಮೇಲೆ ಅವರು ಜಗದ್ಧಿತೇಚ್ಛು ಎಂಬ ಕಲ್ಲಚ್ಚಿನ

Scanned by CamScanner

Scanned with CamScanner

ಮುದ್ರಣಾಲಯದಲ್ಲಿ ನೌಕರಿಯನ್ನು ಮಾಡುತ್ತ ಅಲ್ಲಿ ದೊರೆಯುತ್ತಿದ್ದ ವೇತನದಿಂದ ತಮ್ಮಸ ಸಂಸ್ಕೃತಾಧ್ಯಯನ ಹಾಗೂ ವೇದಾಧ್ಯಯನದ ಶಿಕ್ಷಣವನ್ನು ಪೂರಯಿಸಿದರು. ಬ್ರ. ಬಾಳಶಾಸ್ತ್ರಿಯವರು ರಚಿಸಿದ ಗ್ರಂಥಸಂಪತ್ತು ಇಂದಿಗೂ ಆಶ್ಚರ್ಯವನ್ನುಂಟುಮಾಡುವಷ್ಟು ವಿಸ್ತೃತವಾಗಿದೆ.

ಬ್ರ. ಬಾಳಶಾಸ್ತ್ರಿಯವರು ಧರ್ಮಶಾಸ್ತ್ರಗಳ ಅಧ್ಯಯನವನ್ನೂ ಪೂರ್ಣಗೊಳಿಸಿ ತಮ್ಮ ೨೮ನೆಯ ವಯಸ್ಸಿನಲ್ಲೇ ಸಂಧ್ಯಾ, ವೈಶ್ವದೇವ, ದೇವಪೂಜಾ, ಅಥರ್ವಶೀರ್ಷ, ಲಘುನ್ಯಾಸರುದ್ರ, ಸಾಂವತ್ಸರಿಕಶ್ರಾದ್ಧ ಮುಂತಾದ ಸುಮಾರು ೨೦-೨೫ ಪುಸ್ತಕಗಳನ್ನು ಪ್ರಕಟಿಸಿದರು. ಮಾತ್ರವಲ್ಲ ಕೇವಲ ಧರ್ಮಪ್ರಚಾರವಾಗಬೇಕೆಂಬ ಸದುದ್ದೇಶದಿಂದ 'ಕಾಲಿಕಾಪ್ರಸಾದ' ಎಂಬ ಒಂದು ಮುದ್ರಣಾಲಯವನ್ನು ಸ್ವತಃ ಪ್ರಾರಂಭಿಸಿದರು. ಶ್ರೀಯುತ ಶಾಸ್ತ್ರಿಯವರು ವೈದಿಕವಾಙ್ಮಯದ ಪ್ರಚುರ ಪ್ರಚಾರಾರ್ಥವಾಗಿ ಒಂದು ಗ್ರಂಥಮಾಲೆಯನ್ನೇ ಪ್ರಾರಂಭಿಸಿದರು. ಈ ಗ್ರಂಥಮಾಲೆಯ ಮೂಲಕ ಧರ್ಮಶಾಸ್ತ್ರ, ಶಿಲ್ಪಶಾಸ್ತ್ರ ಮುಂತಾದ ಉಪಯುಕ್ತ ವಿಷಯಗಳಿಗೆ ಸಂಬಂಧಪಟ್ಟ ಹಲವು ಪುಸ್ತಕಗಳನ್ನು ಪ್ರಕಟಿಸಿದರು. ಧರ್ಮಶಾಸ್ತ್ರದಲ್ಲಿ ಹಾಗೂ ಶಿಲ್ಪಶಾಸ್ತ್ರದಲ್ಲಿ ವಿಶೇಷವಾದ ಸಂಶೋಧನೆಯನ್ನು ನಡೆಸಬೇಕೆಂಬ ಸಂಕಲ್ಪದಿಂದ **"ಶ್ರೀನಾರಾಯಣಾಶ್ರಮ ಗ್ರಂಥಪ್ರಕಾಶನ ಸಂಸ್ಥಾ"** ಎಂಬ ಒಂದು ಸಂಸ್ಥೆಯನ್ನೇ ಸ್ಥಾಪಿಸಿದರು. ಅದರ ಮೂಲಕ ಯಜ್ಞಕುಂಡ ಇಷ್ಟಿಕಾಚಯನ ಮುಂತಾದ ಗ್ರಂಥಗಳನ್ನೂ ಪ್ರಕಟಿಸಿದರು. **"ಸಾರ್ಥ ಷೋಡಶಸಂಸ್ಕಾರರತ್ನಮಾಲಾ"** ಎಂಬ ಮಹತ್ತ್ವಪೂರ್ಣವಾದ ಈ ಉದ್ಗ್ರಂಥವು ೧೯೧೦ರಲ್ಲಿ ಪ್ರಕಟವಾಯಿತು. ಇದರ ಮೊದಲ ಮುದ್ರಣದ ಪ್ರತಿಗಳೆಲ್ಲ ಮುಗಿದು ಪುಸ್ತಕವು ದೊರೆಯುವುದೇ ದುರ್ಲಭವೆಂಬ ಪರಿಸ್ಥಿತಿ ಉಂಟಾದಾಗ ೧೯೩೫ರಲ್ಲಿ ಇದರ ಎರಡನೆಯ ಆವೃತ್ತಿಯು ಪ್ರಕಟಿಸಲ್ಪಟ್ಟಿತು.

ಬ್ರ. ಬಾಳಶಾಸ್ತ್ರಿಯವರು ಅಗ್ನಿಹೋತ್ರದೀಕ್ಷೆಯನ್ನು ಸ್ವೀಕರಿಸಿದ್ದರು. ಸ್ವತಃ ತಮ್ಮ ಮನೆಗೇ ಬರಮಾಡಿ ಅವರು ಅನೇಕ ವಿದ್ಯಾರ್ಥಿಗಳಿಗೆ ಸಂಸ್ಕೃತಭಾಷೆ ಮತ್ತು ವೇದಾಧ್ಯಯನದ ಶಿಕ್ಷಣವನ್ನು ಕೊಡುತ್ತಿದ್ದರು. ಹೀಗೆ ೧೯೦೩ರಿಂದ ೧೯೪೩ರ ತನಕ ಸುಮಾರು ೪೦ ವರ್ಷಗಳ ಕಾಲ ಅವರು ಸಪ್ತಶತಿ-ಅನುಷ್ಠಾನ, ಗ್ರಂಥಲೇಖನ, ಪ್ರಕಾಶನ ಮುಂತಾದ ಮಹತ್ಕಾರ್ಯಗಳನ್ನು ಮಾಡಿದರು. ಅವರಿಗೆ ಪ್ರಾಚೀನ ಗ್ರಂಥಗಳ ಸಂಶೋಧನೆಯಲ್ಲಿ ಅಪಾರವಾದ ಅಭಿರುಚಿ ಇದ್ದುದರಿಂದ ಅದಕ್ಕಾಗಿ ಮೈಸೂರು, ತಂಜಾವೂರು, ಮದ್ರಾಸು, ಕಲ್ಕತ್ತಾ ಮುಂತಾದ ದೂರ ದೂರದ ಊರುಗಳಿಗೆ ಹೋಗಿ ಅಲ್ಲಿ ಒಂದೊಂದು ತಿಂಗಳ ಕಾಲ ಇದ್ದು ಬಹಳಷ್ಟು ಗ್ರಂಥಗಳನ್ನು ಪರಿಶೀಲಿಸಿದರು. ಈ ಸಂಶೋಧನಕಾರ್ಯದಲ್ಲಿ ಶ್ರೀ। ಶಾಸ್ತ್ರಿಯವರಿಗೆ ಆ ಕಾಲದ ಅನೇಕ ಮಂದಿ ಇತರ ಘನವಿದ್ವಾಂಸರೂ ಸಾಕಷ್ಟು ನೆರವನ್ನಿತ್ತಿದ್ದರು. ಆರ್ಥಿಕವಾಗಿ ಅವರ ಕೌಟುಂಬಿಕ ಪರಿಸ್ಥಿತಿಯು ಸ್ವಲ್ಪವೂ ತಪ್ತಿಕರವಾಗಿರಲಿಲ್ಲ. ಆದರೂ ಅಂತಹ ಅಡಚಣೆಗಳನ್ನು ಲೆಕ್ಕಿಸದೆ ಉಪಯುಕ್ತವಾದ ಪ್ರಾಚೀನ ಉದ್ಗ್ರಂಥಗಳ ವ್ಯಾಸಂಗ, ಲೇಖನ, ಪ್ರಕಾಶನ ಇತ್ಯಾದಿ ಲೋಕೋಪಯೋಗಿ ಕಾರ್ಯಗಳಲ್ಲೇ ಅವರು ಯಾವಾಗಲೂ ಮಗ್ನರಾಗಿರುತ್ತಿದ್ದರು. ತಮ್ಮ ಸಮಗ್ರಜೀವಿತದಲ್ಲಿ ಅವರು ನಿಯಮಿತರೂಪದಿಂದ ಧರ್ಮಪರಿಪಾಲನೆ ಮಾಡಿದರು. ತಾವು ಕೈಗೊಂಡ ಮಹತ್ಕಾರ್ಯವು ತಮ್ಮ ಕಾಲಾನಂತರ ಕುಂಠಿತವಾಗಬಾರದು, ಅದು ಮುಂದುವರಿಯುತ್ತಲೇ ಇರಬೇಕೆಂಬುದು ಅವರ ಪ್ರಬಲ ಆಕಾಂಕ್ಷೆಯಾಗಿತ್ತು.

ಶ್ರೀ। ಶಾಸ್ತ್ರಿಯವರ ಈ ಅಂತಿಮ ಇಚ್ಛೆಯನ್ನು ಮನಗಂಡ ನಾನು **"ಯಾವದ್ಧ್ರಿಯತೇ ಸಾ ದೀಕ್ಷಾ"** ಎಂಬ ಪ್ರಮಾಣವಚನದಂತೆ, ಈ ಕಾರ್ಯವನ್ನು ಮುಂದುವರಿಸುವ ದೀಕ್ಷೆ

Scanned by CamScanner
Scanned with CamScanner

ವಹಿಸಿದ್ದೇನೆ ಎಂದು ತಿಳಿದು ಬಂದಾಗ ಅವರು ತಮ್ಮ ಕೊನೆಯ ಪತ್ರದಲ್ಲಿ ಈ ಕೆಳಗಿನ ಮಾತುಗಳಲ್ಲಿ ನನ್ನನ್ನು ಆಶೀರ್ವದಿಸಿದರು.

ಮಹ್ಯಂ ಪದ್ಮಾಕರೋ ದತ್ತೋ ಹರಿಣಾಽಮೋಘಕರ್ಮಣಾ ।
ವಿಶ್ವಧರ್ಮಪ್ರಚಾರಸ್ಯ ಸ ಧುರಂ ಧಾರಯಿಷ್ಯತಿ ॥
ಸ್ವಸ್ತಿಶ್ರೀಮಚ್ಚಿರಂಜೀವಿ ಪ್ರಾಣಾಧಿಕತರೇಪ್ಸಿತಃ ।
ಸ್ಫುರಂತು ಕೋಟಿಶಃ ಸ್ನೇಹಾದಾಶಿಷಾಂ ರಾಶಯೋ ಮಮ ॥

ಅರ್ಥ:- ಅವ್ಯಾಹತವಾಗಿ ಶ್ರೀ ಜಗದಂಬೆಯ ಉಪಾಸನೆ ಮಾಡುತ್ತಿರುವ ನೀನು ನಮ್ಮ ಮನೆತನದ ಪರಂಪರೆಯನ್ನು ಮುಂದುವರಿಸುವುದಕ್ಕೆ ದೀಕ್ಷಾಬದ್ಧನಾಗಿದ್ದಿ ಎಂಬ ವಿಚಾರವನ್ನು ತಿಳಿದಾಗ ನನಗುಂಟಾದ ಆನಂದವನ್ನು ಪತ್ರಮೂಲಕ ಶಬ್ದಗಳಿಂದ ತಿಳಿಸಲು ಈ ಲೇಖನಿಯು ಅಸಮರ್ಥವಾಗಿದೆ. ಪ್ರಕೃತ ನೀನು ಕೈಗೊಂಡಿರುವ ಶಾಲಾಕೆಲಸ ಹಾಗೂ ಶಿಕ್ಷಣಕಾರ್ಯವನ್ನು ತೃಪ್ತಿಕರವಾಗಿ ನಿರ್ವಹಿಸುತ್ತ ಅದರ ಜತೆಗೆ ಗ್ರಂಥ ಪ್ರಕಾಶನದ ಹೊಣೆಯನ್ನೂ ಹೊರುವೆ ಎಂದಾದರೆ ನನ್ನ ಮನಸ್ಸಿನಲ್ಲಿದ್ದ ಭಾವೀಚಿಂತೆಯು ಸಂಪೂರ್ಣ ದೂರವಾದಂತಾಯಿತು.

ಆಮೇಲೆ ಕೆಲವೇ ದಿನಗಳಲ್ಲಿ ಆಶ್ವೀಜಮಾಸದ ಶುಕ್ಲಪಕ್ಷ ಷಷ್ಠಿಯ ದಿನ, ತಾ. 5-10-1943 ರಂದು ನಾಸಿಕದಲ್ಲಿದ್ದ ನಿವಾಸದಲ್ಲಿ ಅವರು ಸ್ವೇಚ್ಛೆಯಿಂದ ತಮ್ಮ ಇಹಲೋಕಯಾತ್ರೆಯನ್ನು ಮುಗಿಸಿದರು.

ಸದ್ಯಕ್ಕೆ ಅನುಪಲಬ್ಧವಾಗಿರುವ ಈ ಉಪಯುಕ್ತಗ್ರಂಥದ ಮೂರನೆಯ ಆವೃತ್ತಿಯನ್ನು ಶ್ರೀಕಾಳಿಕಾಂಬಾಮಾತೆಯ ಕೃಪೆಯಿಂದ, ಈ ಆಕೃತಿಯಲ್ಲಿ ಸರ್ವಾಂಗಸುಂದರವಾಗಿ ಪ್ರಕಟಿಸುವುದು ಸಾಧ್ಯವಾಯಿತು. ಈ ಕಾರ್ಯದಲ್ಲಿ ಅನೇಕ ಉದಾರಹೃದಯಿಗಳಾದ ಸಜ್ಜನರು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಾಯ ಸಹಕಾರಗಳನ್ನಿತ್ತಿದ್ದಾರೆ. ಅವರೆಲ್ಲರಿಗೂ ಹಾರ್ದಿಕ ಕೃತಜ್ಞತೆಗಳನ್ನರ್ಪಿಸುತ್ತ ಈ ಮಾತುಗಳನ್ನು ಮುಗಿಸುತ್ತೇನೆ.

ವಿದ್ವದ್ ವಿಧೇಯ:
ವಿದ್ಯಾಭೂಷಣ ಪದ್ಮಾಕರಶಾಸ್ತ್ರೀ ಬಾಳಶಾಸ್ತ್ರೀ ಕ್ಷೀರಸಾಗರ
'ನೈಕತೀರ್ಥಃ'

ಚೈತ್ರ ಶು. ನವಮೀ, ರವಿವಾರ, ೧೮೯೩ ಶಕ,
4 ಏಪ್ರಿಲ್, 1971.

Scanned by CamScanner

Scanned with CamScanner

ಮೂರನೆಯ ಆವೃತ್ತಿಯ ಪ್ರಸ್ತಾವನೆ

"ಯಾವದ್ಧ್ರಿಯತೇ ಸಾ ದೀಕ್ಷಾ"

ಇಪ್ಪತ್ತನೆಯ ಶತಮಾನದ ಇಂದಿನ ಈ ಆಧುನಿಕ ವಾತಾವರಣದಲ್ಲಿ, ಭಾರತದ ಪ್ರಾಚೀನ ಗುರುಕುಲ ಶಿಕ್ಷಣಪ್ರಣಾಲಿಯು ನಾಮಾವಶೇಷವಾಗಿದೆ. ಮಾತ್ರವಲ್ಲ ನೇರವಾಗಿ ಗುರುವಾದವನು ಶಿಷ್ಯನಿಗೆ ಕಲಿಸುವ ಅಧ್ಯಯನ ಅಧ್ಯಾಪನ ಪದ್ಧತಿಯೂ ನಶಿಸಿ ಹೋಗಿದೆ. ಸಂಸ್ಕೃತ ಭಾಷೆಯ ಆಳವಾದ ಪರಿಜ್ಞಾನವಿರುವ ವಿದ್ವಾಂಸರ ಸಂಖ್ಯೆಯೂ ವಿರಳವಾಗಿದೆ. ವೇದಾಧ್ಯಯನ, ಕರ್ಮಕಾಂಡ, ಪೌರೋಹಿತ್ಯ ಮುಂತಾದುವುಗಳನ್ನು ವಿಧಿವತ್ತಾಗಿ ಅಭ್ಯಾಸಮಾಡುವವರೂ ಬಹಳ ಅಲ್ಪಸಂಖ್ಯೆಯಲ್ಲಿದ್ದಾರೆ. ಆದರೆ ಇಂದಿನ ಈ ನವ್ಯಯುಗದಲ್ಲೂ ತಮ್ಮ ಹಾಗೂ ತಮ್ಮ ಮಕ್ಕಳ ಸಂಸ್ಕಾರಾದಿಗಳು ಶಾಸ್ತ್ರಸಮ್ಮತವಾಗಿ ವಿಧಿವತ್ತಾದ ಕ್ರಮದಿಂದ ಆಗಬೇಕೆಂದು ಬಯಸುವ ಧರ್ಮಾಭಿಮಾನಿಗಳೂ, ಶ್ರದ್ಧಾಳುಗಳೂ, ಪ್ರಾಚೀನ ಆರ್ಷಸಂಸ್ಕೃತಿಯ ಮೇಲೆ ಆದರವುಳ್ಳ ಮಹನೀಯರೂ ಅನೇಕ ಮಂದಿ ಇದ್ದಾರೆ. ಇಂತಹ ಶ್ರದ್ಧಾವಂತರಿಗೂ ವಿಶೇಷವಾಗಿ ಪುರೋಹಿತ ವರ್ಗದವರಿಗೂ ಉಪಯುಕ್ತವಾಗುವಂತೆ ಈ ಗ್ರಂಥವನ್ನು ನಿರ್ಮಿಸಲಾಗಿದೆ. ನಿರ್ಮಾಣಗೊಂಡು ಪ್ರಕಟವಾದ ಮೇಲೆ ಇದೇ ಗ್ರಂಥದ ಸಹಾಯದಿಂದ ಅನೇಕ ಕಡೆಗಳಲ್ಲಿ ಅಧ್ಯಯನ ಅಧ್ಯಾಪನಗಳು ನಡೆಯುತ್ತಿರುವುದರಿಂದ ವಿದ್ವಾಂಸರಿಗೆ, ಪಂಡಿತರಿಗೆ, ಪುರೋಹಿತರಿಗೆ, ಆಚಾರ್ಯರಿಗೆ ಇದು ಸಂಗ್ರಾಹ್ಯವಾಗಿದೆ. ಇದರ ಪ್ರಥಮ ಆವೃತ್ತಿಯು 1910ರಲ್ಲೂ, ದ್ವಿತೀಯ ಆವೃತ್ತಿಯು 1945ರಲ್ಲೂ ಮುದ್ರಿಸಲ್ಪಟ್ಟು, ಎರಡೂ ಆವೃತ್ತಿಗಳ ಪ್ರತಿಗಳೆಲ್ಲವೂ ಮುಗಿದುಹೋದವು. ಹಾಗಾಗಿ 25 ವರ್ಷಗಳ ತರುವಾಯ ಇದರ ಮೂರನೆಯ ಆವೃತ್ತಿಯನ್ನು ಈಗ ಪುನಃ ಮುದ್ರಿಸಿ ಪ್ರಕಟಿಸುವ ಸಾಹಸವನ್ನು ಕೈಕೊಳ್ಳಲಾಗಿದೆ. ಹಿಂದಿನ ಪರಂಪರಾಗತ ಪದ್ಧತಿಯನ್ನು ಅನುಸರಿಸಿಯೇ ಈ ಗ್ರಂಥದ ನಿರ್ಮಾಣವಾಗಿರುವುದರಿಂದ ಮೊದಲಿನ ಆವೃತ್ತಿಗಳಲ್ಲಿದ್ದ ಯಾವುದೇ ವಿಷಯವನ್ನು ಸಂಕ್ಷೇಪಿಸುವುದಾಗಲಿ, ಪರಿಷ್ಕರಿಸುವುದಾಗಲಿ, ಅನಾವಶ್ಯಕವೆಂದು ತೆಗೆದುಹಾಕುವುದಾಗಲಿ ಅಗತ್ಯವೆಂದು ನಮಗೆ ತೋರಲಿಲ್ಲ. ಇದರಲ್ಲಿ ಅಳವಡಿಸಿದ ಪ್ರತಿಯೊಂದು ವಿಷಯವು ಅನಿವಾರ್ಯವೂ, ಉಪಯುಕ್ತವೂ, ಗ್ರಾಹ್ಯವೂ ಆಗಿರುತ್ತದೆ.

ಇಂದಿನ ಈ ಕಾಲದಲ್ಲಿ ಹದಿನಾರು ಪೂರ್ವ ಸಂಸ್ಕಾರಗಳಲ್ಲಿ ಮುಖ್ಯವಾಗಿ ಕೇವಲ ಉಪನಯನ ಮತ್ತು ವಿವಾಹಗಳು ಮಾತ್ರ ಜರಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಪ್ರಾಯಶಃ ಇತರ ಎಲ್ಲ ಸಂಸ್ಕಾರಗಳನ್ನೂ ಕೈಬಿಡಲಾಗಿದೆ. ಇವುಗಳಲ್ಲೂ ಚಪ್ಪರ, ವಾದ್ಯ, ಮೆರವಣಿಗೆ, ಆಭರಣ, ವಸ್ತ್ರಾಲಂಕಾರ, ಊಟ, ಉಪಚಾರ ಇತ್ಯಾದಿ ಆಡಂಬರಗಳ ಕಡೆಗೇ ಜನರ ದೃಷ್ಟಿ ಇದೆಯೇ ಹೊರತು ಈ ಸಂಸ್ಕಾರಗಳ ಮೂಲ ಉದ್ದೇಶವೇನು, ವಿವಿಧ ಕರ್ಮಭಾಗಗಳ ಅರ್ಥವೇನು, ಅವುಗಳನ್ನು ಮಾಡುವ ಸರಿಯಾದ ಕ್ರಮವೇನು, ಅವುಗಳ ದೃಷ್ಟ ಹಾಗೂ ಅದೃಷ್ಟ ಫಲಗಳೇನು ಇತ್ಯಾದಿ ಮುಖ್ಯ ವಿಚಾರಗಳ ಕುರಿತು ಯಾರೊಬ್ಬನೂ ಆಲೋಚಿಸುವುದಿಲ್ಲ. ಆದರೆ ಕೆಲವೇ ಜನರಿಗಾದರೂ ಇವುಗಳ ಕುರಿತು ಆಸಕ್ತಿ ಇರಬಹುದು. ದೇಶ, ಕಾಲ, ಪರಿಸ್ಥಿತಿ, ವಾತಾವರಣ ಮುಂತಾದವುಗಳನ್ನು ಹೊಂದಿಕೊಂಡು, ಇಂದಿನ ಈ ಪರಿಸರದಲ್ಲಿ ಹಿಂದಿನ ಆ ಕಾಲದ ಅದೇ ಕ್ರಮಗಳನ್ನು ಸ್ವಲ್ಪವೂ ನ್ಯೂನತೆ ಇಲ್ಲದೆ ಅದೇ ರೀತಿಯಲ್ಲಿ ಹಾಗೇ

Scanned by CamScanner

Scanned with CamScanner

ಅನುಸರಿಸುವುದು ದುಃಸಾಧ್ಯವೆನಿಸಿದರೂ ಈ ಸಂಸ್ಕಾರಗಳ ಮೂಲ ಉದ್ದೇಶ, ವಿಧಿ ವಿಧಾನ, ಪರಿಣಾಮ, ಫಲ ಮುಂತಾದವುಗಳ ಸ್ಥೂಲ ಪರಿಚಯವಿದ್ದು ಅವುಗಳನ್ನು ಆಚರಿಸಿದರೆ ಮಾಡಿದ ಕರ್ಮವು ಸಾರ್ಥಕವಾದೀತು. ಆದ್ದರಿಂದ ಈ ಮೂರನೆಯ ಆವೃತ್ತಿಯಲ್ಲಿ ಭಾಷೆಯನ್ನು ಎಲ್ಲರಿಗೂ ಅರ್ಥವಾಗುವಂತೆ ಸಾಧ್ಯವಿದ್ದಷ್ಟು ಸರಳಗೊಳಿಸಿ, ಸಂಕ್ಷೇಪದಲ್ಲಿ ಮಂತ್ರಾರ್ಥವನ್ನು ವಿವರಿಸಲಾಗಿದೆ.

ಜಾತಕರ್ಮ, ನಾಮಕರಣ, ಉಪನಯನ, ವಿವಾಹ ಮುಂತಾದ ಸಂಸ್ಕಾರಗಳನ್ನು ಕೇವಲ ರೂಢಿ ಎಂದು ಮಾಡುವುದಕ್ಕಿಂತ ಅವುಗಳ ಉದ್ದೇಶ, ಪರಿಣಾಮ, ಫಲ ಮುಂತಾದವುಗಳನ್ನು ಸರಿಯಾಗಿ ತಿಳಿದು ಮಾಡುವುದು ಉಚಿತವಾಗಿದೆ. ಆದ್ದರಿಂದ ಪ್ರತಿಯೊಂದು ಸಂಸ್ಕಾರದಲ್ಲೂ ಏನು ವೈಶಿಷ್ಟ್ಯವಿದೆ ಎಂಬುದರ ಪೂರ್ವಕಲ್ಪನೆ ಇರುವುದು ಒಳ್ಳೆಯದು. ಅದೇನೆಂಬುದನ್ನು ಸಂಕ್ಷೇಪವಾಗಿ ಪರಿಶೀಲಿಸೋಣ.

'ಸಂಸ್ಕಾರ' ಎಂದರೆ ಶಾಸ್ತ್ರೋಕ್ತವಿಧಿಯಿಂದ ಸಂಸ್ಕರಿಸುವುದು, ಪರಿಷ್ಕರಿಸುವುದು, ಶುದ್ಧೀಕರಿಸುವುದು, ಅರ್ಹತೆಯನ್ನು ತರುವುದು ಇತ್ಯಾದಿ ಅರ್ಥವಾಗುತ್ತದೆ. ಉಪನಯನ ವಿವಾಹ ಮೊದಲಾದ ಯಾವುದೇ ಸಂಸ್ಕಾರವಾದರೂ ಆರಂಭದಲ್ಲಿ ದೇವತಾ ಪ್ರತಿಷ್ಠೆ ಮಾಡಲಾಗುತ್ತದೆ. ಇದರಲ್ಲಿ ಗಣಪತಿಪೂಜನ, ಪುಣ್ಯಾಹವಾಚನ, ಮಾತೃಕಾಪೂಜನ, ನಾಂದೀಶ್ರಾದ್ಧ , ಮಂಡಪ ದೇವತಾಪ್ರತಿಷ್ಠಾ ಮುಂತಾದ ಕರ್ಮಭಾಗಗಳು ಅಂತರ್ಗತವಾಗಿವೆ.

೧. **ಗಣಪತಿ ಪೂಜೆ:-** ದೇವಗಣದಲ್ಲಿ ಪ್ರಮುಖನಾದವನು ಗಣಪತಿ. ಇವನು ಸರ್ವವಿಘ್ನನಾಶಕ. ಆರಂಭಿಸಿದ ಸಂಸ್ಕಾರಕರ್ಮದಲ್ಲಿ ಯಾವುದೇ ವಿಘ್ನವೂ ಉಂಟಾಗದಂತೆ ಅದು ಸಾಂಗವಾಗಿ ನೆರವೇರುವುದಕ್ಕೋಸ್ಕರ ಪ್ರಾರಂಭದಲ್ಲಿ ಗಣಪತಿಯ ಪೂಜೆ ಮಾಡಲಾಗುತ್ತದೆ.

೨. **ಪುಣ್ಯಾಹವಾಚನ:- ಪುಣ್ಯಂ ಅಹಃ** = ದಿವಸವು ಪುಣ್ಯಪ್ರದವಾಗಲಿ ಎಂದು ಬ್ರಾಹ್ಮಣರು ಮಾಡುವ ವಾಚನ. ಸಂಸ್ಕಾರಕರ್ತೃವಿಗೂ ಸಂಸ್ಕಾರ್ಯನಿಗೂ ಈ ದಿನವು ಹಬ್ಬದಂತೆ ಸುಖ ಸಂತೋಷಗಳನ್ನು ಉಂಟುಮಾಡಲಿ ಎಂದು ಆಶೀರ್ವಾದಗಳನ್ನು ಪಡೆಯುವುದೇ ಈ ಪುಣ್ಯಾಹವಾಚನ ಕರ್ಮದ ಪ್ರಧಾನ ಉದ್ದೇಶವಾಗಿದೆ. ಇದರಲ್ಲಿ ಸ್ವಸ್ತಿವಾಚನ ಮುಂತಾದವುಗಳೂ ಸೇರಿಕೊಂಡಿವೆ.

೩. **ಮಾತೃಕಾಪೂಜನ:-** ಪ್ರತಿಯೊಬ್ಬನಿಗೂ ತನ್ನ ಕುಲದೇವತೆ ಪ್ರತ್ಯೇಕವಾಗಿರುತ್ತದೆ. ಮಾತೃಕಾಪೂಜನದಲ್ಲಿ ಕುಲದೇವತಾಪೂಜೆಯು ಅಡಕವಾಗಿದೆ. ಯಾವುದೇ ಶುಭಕರ್ಮವನ್ನು ಪ್ರಾರಂಭಿಸುವಾಗ ಪುಣ್ಯಾಹವಾಚನವಾದ ಮೇಲೆ ಪರಿವಾರ ಸಮೇತ ಕುಲದೇವತೆಗಳ ಪೂಜೆ ಮಾಡಲಾಗುತ್ತದೆ. ಈ ಪೂಜೆಯಿಂದ ತನ್ನ ಮತ್ತು ತನ್ನ ಕುಲದ ಕಲ್ಯಾಣವಾಗಬೇಕೆಂಬುದೇ ಇದರ ಪ್ರಧಾನ ಉದ್ದೇಶ.

೪. **ನಾಂದೀಶ್ರಾದ್ಧ:-** ಮನೆಯಲ್ಲಿ ಮಂಗಲಕಾರ್ಯವೊಂದು ನೆರವೇರುವಾಗ, ಪಿತೃಗಳೆಲ್ಲರೂ ಸೂಕ್ಷ್ಮರೂಪದಿಂದ ಬಂದು ಉಪಸ್ಥಿತರಾಗಿದ್ದು ಈ ಕಾರ್ಯವನ್ನು

Scanned by CamScanner

Scanned with CamScanner

ಸಂತೋಷದಿಂದ ಅವಲೋಕಿಸುತ್ತಾರೆ. ಹಾಗೂ ಕುಲಕ್ಕೆ ಶುಭವನ್ನು ಕೋರುತ್ತಾರೆ ಎಂಬುದು ನಮ್ಮ ವಿಶ್ವಾಸ. ಅಂತಹ ಪಿತೃಗಳನ್ನು ಪೂಜಿಸಿ ಸತ್ಕರಿಸುವುದೇ ಈ ವಿಧಿಯ ಪ್ರಧಾನ ಉದ್ದೇಶ. ನಾಂದೀ ಎಂದರೆ ಶುಭಕರ್ಮ. ಆ ಕಾಲಕ್ಕೆ ಪಿತೃಗಳನ್ನು ಉದ್ದೇಶಿಸಿ ಮಾಡುವ ಶ್ರಾದ್ಧ-ನಾಂದೀಶ್ರಾದ್ಧ.

೫. **ಮಂಡಪದೇವತಾಪ್ರತಿಷ್ಠೆ:-** ಯಾವ ಮಂಟಪದಲ್ಲಿ ಶುಭಕಾರ್ಯವನ್ನು ಮಾಡಲಾಗುತ್ತದೋ ಆ ಮಂಟಪದ ಪೂಜೆ ಮಾಡುವುದೇ ಮಂಡಪದೇವತಾಪ್ರತಿಷ್ಠೆ. ದಾರವನ್ನು ಸುತ್ತಿದ ಮಾವಿನ ಎಲೆಯ ಮೇಲೆ ಮಂಟಪದೇವತೆಯನ್ನು ಆವಾಹಿಸಿ ಪ್ರತಿಷ್ಠಿಸಲಾಗುತ್ತದೆ. ಅಂತೆಯೇ ಕರ್ಮಸಮಾಪ್ತಿಯಾದಾಗ ದೇವಕೋತ್ಥಾಪನೆ, ಮಂಡಪೋದ್ವಾಸನ ಮುಂತಾದವುಗಳನ್ನೂ ನೆರವೇರಿಸಬೇಕು. ಪ್ರತಿಷ್ಠಾಪಿಸಿದ ದೇವತೆಗಳನ್ನು ವಿಸರ್ಜಿಸುವುದೂ ಅತ್ಯಂತ ಆವಶ್ಯಕವಾಗಿದೆ. ಆವಾಹನದಷ್ಟೇ ವಿಸರ್ಜನೆಯೂ ಮಹತ್ತ್ವಪೂರ್ಣಕಾರ್ಯವಾಗಿದೆ.

ಇನ್ನು ಷೋಡಶಸಂಸ್ಕಾರಗಳು ಯಾವುವು ? ಅವುಗಳ ಉದ್ದೇಶವೇನು ? ಅವುಗಳಲ್ಲಿ ಬರುವ ಪ್ರಧಾನ ವಿಧಿಗಳು ಯಾವುವು ಮುಂತಾದ ವಿಚಾರಗಳನ್ನು ಕ್ರಮವಾಗಿ ನೋಡೋಣ.

೧. **ಗರ್ಭಾಧಾನ:-** ಬೀಜಸಂಬಂಧಿ ಅಥವಾ ಗರ್ಭಸಂಬಂಧಿಯಾದ, ಅದೃಷ್ಟವಾದ ವಿಘ್ನಕಾರಕ ಪಾಪವನ್ನು ದೂರೀಕರಿಸಲು ಈ ಸಂಸ್ಕಾರವನ್ನು ಮಾಡಲಾಗುತ್ತದೆ.

೨. **ಪುಂಸವನ:-** (ಪುಂಸಃ ಸವನಂ) ಪುತ್ರಜನ್ಮವಾಗಬೇಕೆಂದು ಆಚರಿಸುವುದೇ ಈ ಸಂಸ್ಕಾರದ ಉದ್ದೇಶವಾಗಿದೆ. ಉದ್ದು, ಮೊಸರು, ಅಕ್ಕಿ ಮುಂತಾದವುಗಳ ಪ್ರಾಶನವನ್ನು ಇದರಲ್ಲಿ ಹೇಳಲಾಗಿದೆ.

೩. **ಸೀಮಂತೋನ್ನಯನ:-** ಸೀಮಂತಃ ಎಂದರೆ ಕೂದಲು, ಉನ್ನಯನಂ ಎಂದರೆ ಬಾಚುವುದು. ಗರ್ಭದ ಶಕ್ತಿಯು ಹೆಚ್ಚಾಗಿ ಅದು ಸ್ಥಿರವಾಗಿರಬೇಕೆಂದು ಪತಿಯು ಎರಡು ಕಾಯಿಗಳಿರುವ ಔದುಂಬರದ ಟೊಂಗೆ, ಮೂರು ಬಿಳಿ ಚುಕ್ಕೆಗಳಿರುವ ಮುಳ್ಳು ಮತ್ತು ಮೂರು ದರ್ಭೆಗಳಿಂದ ಪತ್ನಿಯ ತಲೆಯನ್ನು ಬಾಚಬೇಕು. ಆದ್ದರಿಂದಲೇ ಇದಕ್ಕೆ ಸೀಮಂತೋನ್ನಯನ ಎಂಬ ಹೆಸರು.

೪. **ಜಾತಕರ್ಮ:-** (ಜಾತಸ್ಯ ಕರ್ಮ) ಮಗು ಹುಟ್ಟಿದ ಒಡನೆಯೇ ಮಾಡಬೇಕಾದ ವಿಧಿ ಇದಾಗಿದೆ. ಈ ವಿಧಿಯಲ್ಲಿ ಬಂಗಾರದ ಕಡ್ಡಿಯಿಂದ ತುಪ್ಪ ಮತ್ತು ಜೇನನ್ನು ಮಗುವಿಗೆ ಕುಡಿಸಲಾಗುತ್ತದೆ. ನಂತರ ಅದೇ ಬಂಗಾರದ ಕಡ್ಡಿಯಿಂದ ಮಗುವಿನ ಕಿವಿ ಚುಚ್ಚಿ ಅದರ ಸ್ಮರಣಶಕ್ತಿಯನ್ನು ವರ್ಧಿಸಲಾಗುತ್ತದೆ.

೫. **ನಾಮಕರಣ:-** ಮಗುವಿಗೆ ಹೆಸರನ್ನಿಡುವುದು. ನಾಲ್ಕು ವಿಧದ ಹೆಸರುಗಳನ್ನಿಡುವ ಪರಿಪಾಠವಿದೆ.

i) ಕುಲದೇವತಾ ಭಕ್ತನಾಮ - ಕುಲದೇವತೆಯ ಭಕ್ತನೆಂದು ಮೊದಲನೆಯ ಹೆಸರು

ii) ಮಾಸನಾಮ - ಹುಟ್ಟಿದ ತಿಂಗಳ ಸಂಕೇತವಾದ ಎರಡನೆಯ ಹೆಸರು

Scanned by CamScanner
Scanned with CamScanner

iii) ನಕ್ಷತ್ರನಾಮ - ಜನ್ಮನಕ್ಷತ್ರದ ಆದ್ಯಾಕ್ಷರವಿರುವ ಮೂರನೆಯ ಹೆಸರು

iv) ಲೌಕಿಕನಾಮ - ವ್ಯವಹಾರಕ್ಕಾಗಿ ಇಟ್ಟ ನಾಲ್ಕನೆಯ ಪ್ರಸಿದ್ಧ ಹೆಸರು. ವ್ಯವಹಾರದಲ್ಲಿ ಈ ಹೆಸರೇ ಪ್ರಸಿದ್ಧ ಹೆಸರು. ವ್ಯವಹಾರದಲ್ಲಿ ಈ ಹೆಸರೇ ಪ್ರಸಿದ್ಧವಾಗಿದ್ದು ಉಳಿದವುಗಳೆಲ್ಲ ಗುಪ್ತವಾಗಿರುತ್ತವೆ. ನಾಮಕರಣ ಸಂಸ್ಕಾರದಿಂದ ಆಯುಷ್ಯಾಭಿವೃದ್ಧಿ, ಲೌಕಿಕ ಪ್ರತಿಷ್ಠೆ ಮುಂತಾದವುಗಳ ವೃದ್ಧಿಯಾಗುತ್ತದೆ.

೬. **ನಿಷ್ಕ್ರಮಣ:-** ಮೊಟ್ಟಮೊದಲ ಬಾರಿ ಮಗುವನ್ನು ಮನೆಯಿಂದ ಹೊರಗೆ ಕೊಂಡೊಯ್ಯುವ ಸಂಸ್ಕಾರ ಇದು. ಮಗುವಿನ ಆಯುಸ್ಸು ಮತ್ತು ಮಾನಸಿಕ-ಶಾರೀರಿಕ ಶಕ್ತಿಗಳು ಹೆಚ್ಚಾಗಬೇಕೆಂಬ ಉದ್ದೇಶದಿಂದ ಮಗುವನ್ನು ಮನೆಯಿಂದ ಹೊರತಂದು ಸೂರ್ಯ, ಚಂದ್ರ, ಅಗ್ನಿ, ವನ, ದಿಕ್ಪಾಲ, ಸಮೀಪದ ಬಂಧುಗಳು ಮುಂತಾದವರ ದರ್ಶನ ಮಾಡಿಸುವುದು ಈ ಸಂಸ್ಕಾರದ ಮುಖ್ಯ ಉದ್ದೇಶ.

೭. **ಅನ್ನಪ್ರಾಶನ:-** ಮಗುವಿಗೆ ಆಯುಸ್ಸು, ವರ್ಚಸ್ಸು, ಶಾರೀರಿಕಶಕ್ತಿ, ದಾರ್ಢ್ಯ ಇತ್ಯಾದಿಗಳ ವೃದ್ಧಿಯಾಗಬೇಕೆಂಬ ಉದ್ದೇಶದಿಂದ ಕೈಯಲ್ಲಿ ಸುವರ್ಣವನ್ನು ಹಿಡಿದು ಅದರಿಂದ ಅನ್ನವನ್ನು ಉಣಿಸುವುದು.

೮. **ಚೂಡಾಕರ್ಮ:-** ಈ ಸಂಸ್ಕಾರವನ್ನು ಸಾಮಾನ್ಯವಾಗಿ ಉಪನಯನದೊಂದಿಗೇ ಮಾಡುತ್ತಾರೆ. ಚೂಡಾ ಎಂದರೆ ಶಿಖೆಯನ್ನು ಕಲ್ಪಿಸುವ ಸಂಸ್ಕಾರ ಎಂದರ್ಥ. ಚೌಲ ಎಂದರೆ ವಪನ ಮಾಡುವುದು. ಆಯುಸ್ಸು, ಬ್ರಹ್ಮತೇಜಸ್ಸು ಮುಂತಾದವುಗಳು ವೃದ್ಧಿಸಬೇಕೆಂಬ ಉದ್ದೇಶದಿಂದ ಇದನ್ನು ಮಾಡಲಾಗುತ್ತದೆ.

೯. **ಉಪನಯನ:-** ಈ ಸಂಸ್ಕಾರವು ಅತ್ಯಂತ ಮಹತ್ತ್ವಪೂರ್ಣವಾದುದು. ಇದರಲ್ಲಿ-ಚೌಲಹೋಮ, ಮಾತೃಭೋಜನ, ಸ್ನಾನ, ದೇವತಾದರ್ಶನ ಮುಂತಾದವುಗಳಾದ ಮೇಲೆ 'ಉಪ' ಎಂದರೆ ಆಚಾರ್ಯನ, ಗುರುವಿನ ಸಮೀಪ 'ನಯನ' ಎಂದರೆ ಕೊಂಡೊಯ್ಯುವುದು, ಗಾಯತ್ರಿಯ ಉಪದೇಶವನ್ನು ಪಡೆಯುವುದಕ್ಕಾಗಿ ಗುರುವಿನ ಬಳಿ ಸೇರಿಸುವುದು, ಕಟಿಸೂತ್ರ, ಕೌಪೀನ, ವಸ್ತ್ರ, ಅಜಿನ, ಯಜ್ಞೋಪವೀತ, ದಂಡ ಇತ್ಯಾದಿಗಳ ಧಾರಣ ಮುಂತಾದ ಪ್ರಧಾನ ವಿಧಿಗಳು ಒಳಗೊಂಡಿವೆ. ತಾಯಿಯ ಮಡಿಲಲ್ಲಿ ಕುಳಿತು ಊಟ ಮಾಡುವುದೇ ಮಾತೃಭೋಜನ. ಐದನೆಯ ವರ್ಷದಲ್ಲಿ ಚೌಲಸಂಸ್ಕಾರ ಆಗಬೇಕೆಂದೂ ಆಗ ಕ್ಷೌರವಾದ ಮೇಲೆ ಸ್ನಾನ ಮಾಡಿ ತಾಯಿಯ ಮಡಿಲಲ್ಲಿ ಕುಳಿತು ಊಟ ಮಾಡಬೇಕೆಂದೂ ವಿಧಿ ಇತ್ತು. ಈಗ ಉಪನಯನದೊಂದಿಗೇ ಈ ಸಂಸ್ಕಾರವು ನಡೆಯುವುದರಿಂದ ಪ್ರಾಯಪ್ರಬುದ್ಧನಾದ ಹುಡುಗನು ಹೀಗೆ ಮಾಡುವುದು ಆಭಾಸವೆಂದು ತೋರಬಹುದು. ಅದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಒಳ್ಳೆಯದು. ಉಪನಯನ ಪ್ರಧಾನ ಹೋಮವಾದ ಮೇಲೆ ಶಿಷ್ಯತ್ವಸಿದ್ಧಿಗಾಗಿ ಅಂಜಲಿಕ್ಷಾರಣ, ಹಸ್ತಗ್ರಹಣ, ಸೂರ್ಯಾವೇಕ್ಷಣ, ಹೃದಯಾಲಂಭನ, ಅಗ್ನ್ಯುಪಸ್ಥಾನ ಮುಂತಾದ ಕರ್ಮಗಳನ್ನೂ ಮಾಡಲಾಗುತ್ತದೆ. ಬಳಿಕ ಗಾಯತ್ರ್ಯುಪದೇಶ

Scanned by CamScanner
Scanned with CamScanner

ಕೊಡಲಾಗುತ್ತದೆ. ಮುಂಜಾ ಎಂಬ ಹುಲ್ಲಿನಿಂದ ತಯಾರಿಸಿದ ಮೌಂಜಿಯನ್ನು ಕಟ್ಟುತ್ತಾರೆ. **'ಮೇಧಾ' "ದೀರ್ಘಾರಣಾವತೀ ಮೇಧಾ"** ತಿಳಿದ ವಿಷಯಗಳನ್ನು ಧಾರಣೆಮಾಡಿ ಸ್ಮರಣೆಯಲ್ಲಿ ಇಟ್ಟುಕೊಳ್ಳುವ ಶಕ್ತಿಯೇ ಮೇಧಾ ಎನಿಸುತ್ತದೆ. ಅದನ್ನು ಉಂಟುಮಾಡಲು ಮೇಧಾಜನನ. ಉಪನಯನವಾದ ಮೇಲೆ ವೇದಾಧ್ಯಯನಾಧಿಕಾರ ಬರುವುದರಿಂದ ಇದನ್ನು **"ವೇದವ್ರತಗ್ರಹಣ-ಸೂಚಕವ್ರತಬಂಧ"** ಎಂದು ಕರೆಯುತ್ತಾರೆ. ಉಪನಯನ ಸಂಸ್ಕಾರದಿಂದ ಮನುಷ್ಯನಿಗೆ ಪುನರ್ಜನ್ಮವೇ ದೊರೆತಂತಾಗಿ ಅವನಿಗೆ ದ್ವಿಜತ್ವ ಪ್ರಾಪ್ತವಾಗುತ್ತದೆ.

೧೦. ಮಹಾನಾಮ್ನೀ, ೧೧. ಮಹಾವ್ರತ, ೧೨. ಉಪನಿಷದ್ ವ್ರತ, ೧೩. ಕೇಶಾಂತ, ೧೪. ಗೋದಾನ:- ಇವುಗಳನ್ನು ಒಟ್ಟಾಗಿ ವೇದವ್ರತಗಳೆಂದು ಕರೆಯುತ್ತಾರೆ. ಗುರುಕುಲದಲ್ಲಿ ಗುರುವಿನ ಬಳಿಯಲ್ಲಿ ಷಡಂಗಸಹಿತವಾಗಿ ಸಕಲ ವೇದಗಳನ್ನು ಈ ಕಾಲದಲ್ಲಿ ಅಧ್ಯಯನ ಮಾಡುವುದು. ವೇದಾಧ್ಯಯನವಾದ ಮೇಲೆ ಕ್ಷೌರ ಮಾಡಿಸಿ ಸ್ನಾನ ಮಾಡುವುದಕ್ಕೆ ಕೇಶಾಂತ, ದಕ್ಷಿಣಾರೂಪದಲ್ಲಿ ಗುರುವಿಗೆ ಗೋವನ್ನು ಅರ್ಪಿಸುವುದು ಗೋದಾನ.

೧೫. ಸಮಾವರ್ತನ:- ಗೃಹಸ್ಥಾಶ್ರಮ ಸ್ವೀಕಾರಕ್ಕೆ ಗುರುವಿನಿಂದ ಅನುಜ್ಞೆ ಪಡೆಯುವುದು. ಇತರ ವಿಧಿಗಳು ಉಪನಯನದಂತೆಯೇ ಇದರಲ್ಲಿಯೂ ಇವೆ. ಗೃಹಸ್ಥನಿಗೆ ಉಪಯುಕ್ತವಾದ ವಿಶಿಷ್ಟ ಉಪದೇಶಗಳನ್ನು ಇಲ್ಲಿ ಕೊಡಲಾಗುತ್ತದೆ.

೧೬. ವಿವಾಹ:- "ಧರ್ಮಪ್ರಜಾಸಂಪತ್ತಿಃ ಪ್ರಯೋಜನಂ ವಿವಾಹಸ್ಯ" ಧರ್ಮ ಶ್ರದ್ಧೆಯುಳ್ಳ ಉತ್ತಮ ಸಂತಾನಪ್ರಾಪ್ತಿಯೇ ಬ್ರಾಹ್ಮವಿವಾಹದ ಮುಖ್ಯ ಉದ್ದೇಶ. ವಿವಾಹ ಸಂಸ್ಕಾರವು ಸ್ತ್ರೀಪುರುಷರ ಪರಸ್ಪರ ಸಂಬಂಧ ನಿರ್ಣಾಯಕವಾದುದರಿಂದ ಇದಕ್ಕೆ ಧಾರ್ಮಿಕ ಮಹತ್ತ್ವವಿದ್ದಷ್ಟೇ ಸಾಮಾಜಿಕ ಮಹತ್ತ್ವವೂ ಇದೆ. ಈ ಸಂಸ್ಕಾರದಲ್ಲಿ ಈ ಕೆಳಗಿನ ಪ್ರಧಾನವಿಧಿಗಳು ಅಂತರ್ಗತವಾಗಿವೆ.

i) ವಾಗ್ದಾನ:- ಸರ್ವಸಮ್ಮತಿಯಿಂದ, ಹುಡುಗನ ತಂದೆಯು ಹುಡುಗಿಯ ತಂದೆಯೊಡನೆ ತನ್ನ ಮಗನಿಗಾಗಿ ವಧುವನ್ನು ಕೊಡಬೇಕು ಎಂದು ಕೇಳಿಕೊಳ್ಳುವುದು ಹಾಗೂ ವರನ ಪಿತನು 'ಮಾತಿನಿಂದ ಕೊಟ್ಟಿದ್ದೇನೆ' ಎಂದು ಪ್ರತಿವಚನವನ್ನು ಹೇಳುವುದು 'ವಾಗ್ದಾನ'ವೆನಿಸುತ್ತದೆ. ಇದರ ಪ್ರತೀಕವಾಗಿ ವರಪಕ್ಷದವರು ವಧುವನ್ನು ವಸ್ತ್ರಾಲಂಕಾರಾದಿಗಳಿಂದ ಸಂತುಷ್ಟಿ ಪಡಿಸುತ್ತಾರೆ.

ii) ಸೀಮಾಂತಪೂಜನ:- ವಧೂಪಕ್ಷದವರು ದಿಬ್ಬಣಸಮೇತ ಬಂದ ವರನನ್ನು ಮತ್ತು ಅವನ ಪಕ್ಷದವರನ್ನು ಸ್ವಾಗತ, ವಸ್ತ್ರಾಲಂಕಾರಾದಿಗಳಿಂದ ಅರ್ಚಿಸುವುದು. ಮೊದಲಿಗೆ ಈ ಪೂಜೆಯು ಗ್ರಾಮದ ಗಡಿಯಲ್ಲಿ ನೆರವೇರುತ್ತಿತ್ತು.

iii) ಮಧುಪರ್ಕ:- ವಿವಾಹಕ್ಕಾಗಿ ಬಂದ ವರನ ಪೂಜೆ. ಕಾಲು ತೊಳೆಯುವುದು, ಜೇನು ಕಲಸಿದ ಮೊಸರನ್ನು ದೇವತೆಗಳಿಗೆ ಅರ್ಪಿಸುವುದು.

Scanned by CamScanner
Scanned with CamScanner

iv) ಗೌರೀಹರಪೂಜೆ:- ಸೌಭಾಗ್ಯಸಿದ್ಧಿಗಾಗಿ ವಧುವು ಗೌರೀಹರರನ್ನು ಪೂಜಿಸುವುದು.

v) ಮಂಗಲಾಷ್ಟಕ:- ನಿಶ್ಚಿತವಾದ ಮಂಗಲಮುಹೂರ್ತದಲ್ಲಿ ಮಂಗಲಾಷ್ಟಕ ಪಠನದೊಂದಿಗೆ ವಧೂವರರು ಪರಸ್ಪರ ಮುಖದರ್ಶನ ಮಾಡಿ ಪುಷ್ಪಮಾಲೆಗಳನ್ನು ಹಾಕಿಕೊಳ್ಳುವುದು.

vi) ಕನ್ಯಾದಾನ:- ವಧುವಿನ ಮಾತಾಪಿತರು ಪ್ರತಿಜ್ಞಾಪೂರ್ವಕ ವರನ ಕೈ ಮೇಲೆ ನೀರಿನ ಧಾರೆ ಎರೆದು ಕನ್ಯೆಯನ್ನು ದಾನಮಾಡುವುದು. ಕನ್ಯಾದಾನದಿಂದ ಪೃಥ್ವಿಯನ್ನೇ ದಾನಮಾಡಿದ ಪುಣ್ಯ ಲಭಿಸುತ್ತದೆ. ಕುಲದ ಉದ್ಧಾರವಾಗುತ್ತದೆ. ಮೋಕ್ಷಪ್ರಾಪ್ತಿಯಾಗುತ್ತದೆ.

vii) ಅಕ್ಷತಾರೋಪಣ-ಸೂತ್ರವೇಷ್ಟನ:- ವಧೂವರರು ಪರಸ್ಪರ ತಲೆಯ ಮೇಲೆ ಅಕ್ಷತೆಯನ್ನು ಹಾಕುತ್ತ ತಮ್ಮ ತಮ್ಮ ಮನೋಭೀಷ್ಟಗಳನ್ನು ವ್ಯಕ್ತಪಡಿಸುವುದು. ಮುತ್ತೈದೆತನದ ಚಿಹ್ನವೆಂದು ಮಂಗಲಸೂತ್ರವನ್ನು ಕಟ್ಟುವುದು. ಬ್ರಾಹ್ಮಣರು ಮಂತ್ರಘೋಷದೊಡನೆ ವಧೂವರರಿಗೆ ಸೂತ್ರವೇಷ್ಟನ ಮಾಡಿ ಆ ದಾರವನ್ನು ಪರಸ್ಪರರು ಕಂಕಣ ಬಂಧವಾಗಿ ಧರಿಸುವಂತೆ ಕಟ್ಟಿಸುವುದು.

viii) ವಿವಾಹಹೋಮ:- ವಧುವಿಗೆ ಭಾರ್ಯಾತ್ವಸಿದ್ಧಿಗಾಗಿ ಈ ಹೋಮವನ್ನು ಮಾಡಲಾಗುತ್ತದೆ. ಇದರಲ್ಲಿ ಲಾಜಹೋಮ, ಪಾಣಿಗ್ರಹಣ, ಪರಿಣಯನ (ಅಗ್ನಿಗೆ ಪ್ರದಕ್ಷಿಣೆ ಬರುವುದು) ಅಶ್ಮಾರೋಹಣ (ಸ್ಥಿರತೆಗಾಗಿ) ಸಪ್ತಪದೀ (ಸಖ್ಯಪ್ರಾಪ್ತಿಗಾಗಿ) ಮುಂತಾದ ಕರ್ಮ ಭಾಗಗಳಿವೆ.

ix) ಗೃಹಪ್ರವೇಶನೀಯಹೋಮ:- ಗೃಹಸ್ಥಾಶ್ರಮಸಿದ್ಧಿಗಾಗಿ ಗೃಹ್ಯಾಗ್ನಿಯ ಸ್ಥಾಪನೆ. ಈ ಅಗ್ನಿಯನ್ನು ಅಂತ್ಯೇಷ್ಟಿಯ ವರೆಗೆ ಊರ್ಜಿತವಾಗಿ ಇಡಬೇಕು. ಈಗೀಗ ಅದು ಅಸಾಧ್ಯವೆಂದು ಅನುಸಂಧಾನವಿಧಿ ಮಾಡುತ್ತಾರೆ.

x) ಚತುರ್ಥೀದಿನಕೃತ್ಯ:- ಐರಿಣೀಪೂಜೆ, ವಿವಾಹಕಾರ್ಯಗಳ ಸಮಾರೋಪ ಮತ್ತು ವಧುವನ್ನು ವರನ ಮಾತಾಪಿತೃಗಳ ವಶಕ್ಕೆ ಒಪ್ಪಿಸಿ ಕಳುಹಿಸಿಕೊಡುವುದು.

xi) ಗೃಹಪ್ರವೇಶ-ಲಕ್ಷ್ಮೀಪೂಜನ:- ನೂತನವಧುವಿನೊಂದಿಗೆ ವರನು ಗೃಹಪ್ರವೇಶ ಮಾಡುವುದು. ಪತ್ನೀಸ್ವರೂಪಳಾದ ಲಕ್ಷ್ಮಿಯನ್ನು ಪೂಜಿಸುವುದು.

Scanned by CamScanner

Scanned with CamScanner

॥ ಮಣಿಮಂತ್ರೌಷಧಿಜಾಃ ಸಿದ್ಧಯಃ ॥

i) ಮಣಿಜಸಿದ್ಧಿ:- ಸ್ಯಮಂತಕಮಣಿ, ಚಿಂತಾಮಣಿ ಇತ್ಯಾದಿಗಳನ್ನು ಮಣಿ ಎಂದು ಹೇಳುತ್ತಾರೆ. ಅನೇಕ ವರ್ಷಗಳ ಪರ್ಯಂತ ಹೋಮ ಹವನ ಮುಂತಾದವುಗಳನ್ನು ನಿಷ್ಠೆಯಿಂದ ಮಾಡಿ ಸಿದ್ಧಗೊಳಿಸಿದ ಮಣಿಯನ್ನು ಸಮೀಪದಲ್ಲಿ ಇಟ್ಟುಕೊಂಡರೆ ಸಾಕು, ಅದು ಕಲ್ಪವೃಕ್ಷದಂತೆ ಬಯಸಿದ ಫಲವನ್ನು ಈಡೇರಿಸಿಕೊಡುತ್ತದೆ. ಇದಕ್ಕೆ ವಿಶಿಷ್ಟವಾದ ದೈವೀಶಕ್ತಿ ಇರುತ್ತದೆ. ಇದು ಮೊದಲನೆಯ ಸಿದ್ಧಿ. ಆದರೆ ಈ ಕಾಲದಲ್ಲಿ ಇಂತಹ ಮಣಿಗಳು ಪುರಾಣಕಥೆಗಳಲ್ಲಿ ಮಾತ್ರ ಕಂಡುಬರುತ್ತವಷ್ಟೆ.

ii) ಮಂತ್ರಸಿದ್ಧಿ:- ದೇವತೆಗಳು ಮಂತ್ರಸ್ವರೂಪಿಗಳಾದುದರಿಂದ ವಿಹಿತ ಕರ್ಮಗಳನ್ನು ಮಾಡುವ ಸದಾಚಾರಸಂಪನ್ನನಿಗೆ ಮಂತ್ರಸಿದ್ಧಿ ಆಗುತ್ತದೆ. ಮಂತ್ರೋಚ್ಚಾರಣ ಮಾಡುವುದರಿಂದ ಮಂಗಲವಾತಾವರಣವು ನಿರ್ಮಾಣವಾಗುತ್ತದೆ. ಸರಿಯಾಗಿ ಉಚ್ಚರಿಸಿದ ಒಂದೇ ಒಂದು ಮಂತ್ರವಾದರೂ ಕಾಮಧೇನುವಿನಂತೆ ಇಷ್ಟಫಲವನ್ನು ಕೊಡುತ್ತದೆಂದು ಹೇಳುತ್ತಾರೆ. **"ಏಕಃ ಶಬ್ದಃ ಸುಷ್ಠು ಪ್ರಯುಕ್ತಃ ಸ್ವರ್ಗೇ ಲೋಕೇ ಕಾಮಧುಗ್ಭವತಿ"** ನಿತ್ಯಾಭ್ಯಾಸವುಳ್ಳವರು ಅಸ್ಖಲಿತವಾದ ಮಂತ್ರೋಚ್ಚಾರ ಮಾಡಿದರೆ, ಆ ಮಂತ್ರಜಸಿದ್ಧಿಯಿಂದ ಬೇಕಾದ್ದನ್ನು ಪಡೆಯಬಹುದು. ಆವಾಹಿತ ದೇವತೆಯ ಮಂತ್ರೋಚ್ಚಾರದಿಂದ ಆ ದೇವತೆಯ ಸಾನ್ನಿಧ್ಯವುಂಟಾಗುತ್ತದೆ. ಮಂತ್ರಶಕ್ತಿಯಿಂದ ಯಾವುದೇ ಕಾರ್ಯವನ್ನಾದರೂ ಕೈಗೂಡಿಸಬಹುದು. ಇಂತಹ ಮಂತ್ರಸಿದ್ಧಿಯಾಗಲಿ, ಮಂತ್ರಶಕ್ತಿಯಾಗಲಿ, ವೇದೋಕ್ತಸಂಸ್ಕಾರಗಳ ಅಭಾವದಿಂದ ಈ ಕಾಲದಲ್ಲಿ ಸಾಮಾನ್ಯವಾಗಿ ಲುಪ್ತವಾಗಿಹೋಗಿದೆ. **"ನಾಸ್ತಿ ಕವ್ಯಸ್ಯ ವ್ಯಾಘಾತಃ"** ದೇವತೆಗಳನ್ನು ಉದ್ದೇಶಿಸಿ **"ಸ್ವಾಹಾ"** ಎಂದು ಅಗ್ನಿಯಲ್ಲಿ ಅರ್ಪಿಸುವ ದ್ರವ್ಯವನ್ನು **"ಕವ್ಯ"** ಎಂದು ಕರೆಯುತ್ತಾರೆ. ಈ ಹವ್ಯಕವ್ಯಗಳ ಫಲವು ಎಂದಿಗೂ ನಾಶವಾಗುವುದಿಲ್ಲ. ಇವುಗಳು ಕಲ್ಯಾಣ ವಿರೋಧಿಯಾದ ಪಾಪಗಳನ್ನು ದೂರಮಾಡುತ್ತವೆ. ಸೂಕ್ಷ್ಮ ರೂಪದಲ್ಲಿದ್ದು ಮನುಷ್ಯನಿಗೆ ಇಹ ಪರಗಳಲ್ಲಿ ಫಲವನ್ನು ಕೊಡುತ್ತವೆ. ಹವ್ಯಕವ್ಯಗಳನ್ನು ನಿಯಮಬದ್ಧವಾಗಿ ಮಾಡುವವನಿಗೆ ಮಂತ್ರಸಿದ್ಧಿಯಾಗುತ್ತದೆ.

iii) ಔಷಧಿಜಸಿದ್ಧಿ:- ನಮಗೆ ಶಾರೀರಿಕ ಅನಾರೋಗ್ಯ ಉಂಟಾದಾಗ ನಾವು ವೈದ್ಯರ, ಡಾಕ್ಟರರ ಬಳಿಗೆ ಹೋಗುತ್ತೇವೆ. ಅವರು ಕೊಡುವ ಔಷಧಿಗಳಿಂದ ರೋಗ ನಿವಾರಣೆಯಾಗಿ ನಮ್ಮ ಶಾರೀರಿಕಬಲಸಂವರ್ಧನೆಯಾಗುತ್ತದೆ. ಇದಕ್ಕೆ **"ಔಷಧಿಜಸಿದ್ಧಿ"** ಎಂದು ಹೆಸರು. ವರ್ತಮಾನ ಕಾಲದಲ್ಲಿ ಪಾಶ್ಚಾತ್ಯರ ಸತತ ಸಂಶೋಧನೆ, ಪ್ರಯೋಗ, ಸಾಧನೆಗಳಿಂದ ಈ ಸಿದ್ಧಿಯು ಬಹಳ ಮಟ್ಟಿಗೆ ಮಾನವಕುಲಕ್ಕೆ ಹಸ್ತಗತವಾಗಿದೆ. ಸಾಧಾರಣವಾಗಿ ಎಲ್ಲರೂ ಈ ಔಷಧಿಗಳ ಪ್ರಭಾವದಿಂದಲೇ ರೋಗಗಳನ್ನು ನಿವಾರಿಸಿ ಆರೋಗ್ಯವನ್ನು ಪಡೆಯುತ್ತಾರೆ. ಶರೀರದ ಮೇಲೆ ಔಷಧಿಗಳ ಪ್ರಭಾವವೇನೆಂಬುದನ್ನು ಎಲ್ಲರೂ ಪ್ರತ್ಯಕ್ಷವಾಗಿಯೇ ನೋಡಿ ತಿಳಿದಿದ್ದಾರೆ. ಆದರೆ ಮಂತ್ರೋಚ್ಚಾರದ ಮೂಲಕ ಬೇರೆ ಬೇರೆಯಾಗಿ ಔಷಧಸಾಮರ್ಥ್ಯವಿರುವ ವನಸ್ಪತಿಗಳನ್ನು ಉಪಯೋಗಿಸಿದಾಗ ಅವುಗಳಿಂದಾಗುವ ಮಾನಸಿಕ ಹಾಗೂ ಶಾರೀರಿಕ ಪರಿಣಾಮಗಳೇನೆಂದು ಹೆಚ್ಚಿನವರಿಗೆ ತಿಳಿದಿಲ್ಲ. ನಮ್ಮ ಷೋಡಶಸಂಸ್ಕಾರಗಳಲ್ಲಿ ಔಷಧಿಗಳ, ವನಸ್ಪತಿಗಳ ಸ್ಥಾನವು,

Scanned by CamScanner

Scanned with CamScanner

ಮಹತ್ತ್ವದ್ದಾಗಿದೆ. ಉದಾಹರಣೆಗಾಗಿ ಗರ್ಭಾಧಾನ ಸಂಸ್ಕಾರವನ್ನೇ ನೋಡೋಣ. ದೂರ್ವೆ ಅಥವಾ ಗರಿಕೆಯು ವನಸ್ಪತಿಗಳಲ್ಲಿ ಚಿರಂಜೀವಿ ಎಂಬ ಖ್ಯಾತಿಯನ್ನು ಪಡೆದಿದೆ. ಅದಕ್ಕೆಂದೇ ಗರ್ಭಾಧಾನ ಸಂಸ್ಕಾರದಲ್ಲಿ ದೂರ್ವೆಯ ರಸವನ್ನು ವಧುವಿನ ಬಲಮೂಗಿನಲ್ಲಿ ಸುರಿದು ಗರ್ಭಕ್ಕೆ ಸ್ಥಿರತೆಯನ್ನು ಕೊಡಲಾಗುತ್ತದೆ. ಅದೇ ರೀತಿ ಬಿದಿರು ವಂಶವರ್ಧಕವಾಗಿದೆ. ಸಂಸ್ಕೃತದಲ್ಲಿ **"ವಂಶ"**ವೆಂದೇ ಅದರ ಹೆಸರು. ವಂಶದಿಂದ ವಂಶನಿರ್ಮಾಣವಾಗಬೇಕೆಂದು ನಮ್ಮ ಅನೇಕ ಸಂಸ್ಕಾರಗಳಲ್ಲಿ ಬಿದಿರಿನ ಪಾತ್ರೆ, ಮೊರ ಮುಂತಾದವುಗಳನ್ನೇ ಉಪಯೋಗಿಸಬೇಕೆಂದು ಹೇಳಲಾಗಿದೆ. ದೇವತಾ ವಿಸರ್ಜನೆಯ ಕಾಲದಲ್ಲಿ ಬಿದಿರಿನ ಮೊರದಿಂದ ಚೆಲ್ಲಿದ ಅಭಿಷೇಕದ ನೀರು ವಂಶವೃದ್ಧಿಗೆ ಕಾರಣವಾಗುತ್ತದೆ. ಅದೇ ರೀತಿ ವಿವಾಹಾನಂತರ ವಧುವನ್ನು ಪತಿಗೃಹಕ್ಕೆ ಕಳುಹಿಸುವಾಗ ಬಿದಿರಿನ ಬುಟ್ಟಿಯಲ್ಲಿ ಖಾದ್ಯಗಳನ್ನು ಇಟ್ಟುಕೊಡುವ ಪದ್ಧತಿ ಇದೆ. ಬಾಳೆಯ ಗಿಡ, ಮಾವಿನ ಎಲೆ, ಮುಂತಾದವು ಮಂಗಲಶೋಭೆಯನ್ನುಂಟುಮಾಡುತ್ತವೆ. ತುಲಸೀ, ಬಿಲ್ವ ಮೊದಲಾದವು ಪೂಜೆಗೆ ಯೋಗ್ಯವಾದ ಪತ್ರಗಳೆಂದು ಪರಿಗಣಿಸಲ್ಪಟ್ಟಿವೆ. ಉಪನಯನದಲ್ಲಿ ವಟುವಿನ ಸೊಂಟಕ್ಕೆ ಮುಂಜಾ ಎಂಬ ಹುಲ್ಲಿನಿಂದ ತಯಾರಿಸಿದ ಮೌಂಜಿ(ಹಗ್ಗ)ಯನ್ನು ಕಟ್ಟುತ್ತಾರೆ. ಕಷ್ಟಸಾಧ್ಯವಾದ ವೇದಾಧ್ಯಯನಕ್ಕೆ ಹಾಗೂ ವಿದ್ಯಾಭ್ಯಾಸಕ್ಕೆ ಸಾಕಷ್ಟು ಶಕ್ತಿಯು ಬರುವಂತೆ ಅವನ ಸೊಂಟ ಮತ್ತು ಬೆನ್ನಿನ ಭಾಗವು ಸ್ಥಿರವಾಗಿರಲೆಂದು ಇದನ್ನು ಕಟ್ಟುವರು. ಮುಂಜಾ ಹುಲ್ಲಿನಲ್ಲಿ ಇಂತಹ ವಿಶಿಷ್ಟವಾದ ಶಕ್ತಿ ಇದೆ.

ಒಟ್ಟಿನಲ್ಲಿ ಹೇಳುವುದಾದರೆ, ಶಾಸ್ತ್ರೋಕ್ತ ಸಂಸ್ಕಾರದಿಂದ ಶರೀರ ಮತ್ತು ಮನಸ್ಸಿನ ಮೇಲೆ ಉತ್ಕೃಷ್ಟ ಪರಿಣಾಮವಾಗುತ್ತದೆ ಎಂಬ ವಿಚಾರದಲ್ಲಿ ಸಂದೇಹವಿಲ್ಲ. ಮಹಾಕವಿ ಕಾಳಿದಾಸನು ಈ ವಿಷಯವನ್ನು ಸೊಗಸಾಗಿ ವರ್ಣಿಸಿ ಹೇಳಿದ್ದಾನೆ.

"ಸ ಜಾತಕರ್ಮಣ್ಯಖಿಲೇ ತಪಸ್ವಿನಾ ತಪೋವನಾದೇತ್ಯ ಪುರೋಧಸಾ ಕೃತೇ ।
ದಿಲೀಪಸೂನುರ್ಮಣಿರಾಕರೋದ್ಭವಃ ಪ್ರಯುಕ್ತಸಂಸ್ಕಾರ ಇವಾಧಿಕಂ ಬಭೌ ॥"

ತಪೋವನದಿಂದ ಬಂದ ವಸಿಷ್ಠ ಮಹರ್ಷಿಗಳು ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿದ ಮೇಲೆ ದಿಲೀಪನ ಮಗನು ಗನಿಯಿಂದ ಹೊರತೆಗೆದ ಮಣಿಯು ಶುದ್ಧೀಕರಿಸಲ್ಪಟ್ಟು ಸಂಸ್ಕರಿಸಲ್ಪಟ್ಟ ಮೇಲೆ ಉಜ್ವಲವಾಗಿ ಹೊಳೆಯುವಂತೆ ಪರಮತೇಜಸ್ವಿಯಾದನು.

"ಚಿತ್ರಕರ್ಮ ಯಥಾನೇಕೈರಂಗೈರುನ್ಮೀಲ್ಯತೇ ಶನೈಃ ।
ಬ್ರಾಹ್ಮಣ್ಯಮಪಿ ತದ್ವತ್ ಸ್ಯಾತ್ ಸಂಸ್ಕಾರೈರ್ವಿಧಿಪೂರ್ವಕೈಃ ॥" (ಅಂಗಿರಾಃ)

ಚಿತ್ರಕ್ಕೆ ಬಣ್ಣ ಬಳಿಯುತ್ತ ಹೋದಂತೆ ಅದು ಹೇಗೆ ಸ್ಫುಟವಾಗಿ ಸುಂದರವಾಗಿ ಎದ್ದು ಕಾಣುತ್ತದೋ ಹಾಗೆ ವಿಧಿಪೂರ್ವಕವಾಗಿ ಆಯಾ ಕಾಲಕ್ಕೆ ಮಾಡಿದ ಸಂಸ್ಕಾರಗಳಿಂದ ಮನುಷ್ಯನೂ ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ಪೂರ್ಣವ್ಯಕ್ತಿತ್ವವನ್ನು ಗಳಿಸುತ್ತಾನೆ. ಸಂಸ್ಕಾರಗಳ ಪರಿಣಾಮವು ಮನಸ್ಸಿನ ಮೇಲೂ ಶರೀರದ ಮೇಲೂ ನಿಃಸಂದಿಗ್ಧವಾಗಿ ಉಂಟಾಗುತ್ತದೆ.

Scanned by CamScanner

Scanned with CamScanner

"ಉತ್ಸರ್ಗಶ್ಚಾಪ್ಯುಪಾಕರ್ಮ ಮಹಾಯಜ್ಞಾಶ್ಚ ನಿತ್ಯಕಾಃ ॥
ಸಂಸ್ಕಾರಾ ನಿಯತಾ ಹ್ಯೇತೇ ಬ್ರಾಹ್ಮಣಸ್ಯ ವಿಶೇಷತಃ" ॥

ವೈಶ್ವದೇವಾದಿ ಪಂಚ ಮಹಾಯಜ್ಞಗಳು, ನಿತ್ಯಕರ್ಮಗಳು, ಉಪಾಕರ್ಮಾದಿಗಳು, ಸಂಸ್ಕಾರಗಳು ಇಂತಹ ವಿಹಿತ ಕರ್ಮಗಳನ್ನು ಬ್ರಾಹ್ಮಣನಾದವನು ತಪ್ಪದೆ ಮಾಡಲೇಬೇಕು. ಇವುಗಳಿಂದ ಆಯಸ್ಸು, ತೇಜಸ್ಸು, ಬಲ, ವೀರ್ಯ, ಸ್ಥೈರ್ಯ, ಬುದ್ಧಿ ಇತ್ಯಾದಿಗಳ ವೃದ್ಧಿಯಾಗುತ್ತದೆ.

"ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ ತದೇವ ವೀರ್ಯವತ್ತರಂ ಭವತಿ"

ಅರ್ಥ ತಿಳಿದು ಶ್ರದ್ಧೆಯಿಂದ ಮಾಡಿದ ಕರ್ಮವು ಮಾತ್ರ ಉತ್ತಮಫಲವನ್ನು ಕೊಡುತ್ತದೆ.

ಇಂದು ಬಹುಮಂದಿ ಕೇವಲ ರೂಢಿಯಿಂದ ಬಂದಿದೆ ಎಂಬಷ್ಟಕ್ಕೆ ಗರ್ಭಾಧಾನಾದಿಗಳನ್ನು ಮಾಡಿಸಿಕೊಳ್ಳುತ್ತಾರೆ. ಅದರ ನಿಜವಾದ ಉದ್ದೇಶ ಅಥವಾ ಅರ್ಥ ಅವರಿಗೆ ಗೊತ್ತಿರುವುದಿಲ್ಲ. ಆದಕಾರಣ ಇಷ್ಟಫಲವೂ ಸಿದ್ಧಿಸುವುದಿಲ್ಲ. ಅದಕ್ಕಾಗಿಯೇ ನಮ್ಮ ಎಲ್ಲ ಸಂಸ್ಕಾರಗಳೂ ಶಾಸ್ತ್ರೋಕ್ತ ವಿಧಿವಿಧಾನಗಳಿಂದ ಶ್ರದ್ಧಾಪೂರ್ವಕವಾಗಿ ಆಚರಿಸಲ್ಪಡಬೇಕೆಂಬ ಸಮುದ್ದೇಶದಿಂದ **"ಸಾರ್ಥಷೋಡಶಸಂಸ್ಕಾರರತ್ನಮಾಲಾ"** ಎಂಬ ಅಭಿಧಾನದಿಂದ ಈ ಗ್ರಂಥವನ್ನು ರಚಿಸಲಾಗಿದೆ.

Scanned by CamScanner

Scanned with CamScanner

ಪೂಜೆ, ಹೋಮ ಮತ್ತು ಇತರ ವೈದಿಕಕರ್ಮಗಳಲ್ಲಿ ಉಪಯೋಗಿಸಲು ಬೇಕಾದ ವಸ್ತುಸಾಹಿತ್ಯಗಳ ಸಾಮಾನ್ಯ ವಿವರ

ಪಾರಿಭಾಷಿಕ ಶಬ್ದಗಳ ವಿವರಣೆ

ಪಂಚಾಮೃತ: ಹಾಲು, ಮೊಸರು, ತುಪ್ಪ, ಜೇನು, ಸಕ್ಕರೆ.

ಪಂಚಗವ್ಯ: ಗೋಮೂತ್ರ, ಗೋಮಯ, ಹಾಲು, ಮೊಸರು, ತುಪ್ಪ.

ಪಂಚತ್ವಕ್: ಆಲ, ಅಶ್ವತ್ಥ, ನೇರಳೆ, ಮಾವು, ಅಡಿಕೆಗೋಳಿ.

ಪಂಚಪಲ್ಲವ: ಅಶ್ವತ್ಥ, ಔದುಂಬರ, ಆಲ, ಮಾವು, ನೇರಳೆ.

ಪಂಚರತ್ನ: ಬಂಗಾರ, ಬೆಳ್ಳಿ, ಮುತ್ತು, ಹವಳ, ವಜ್ರ.

ಪಂಚವರ್ಣ: ಬಿಳಿ, ಕೆಂಪು, ಹಳದಿ, ಹಸಿರು, ಕಪ್ಪು.

ಸಪ್ತಮೃತ್ತಿಕಾ: ಗಜಶಾಲೆ, ಅಶ್ವಶಾಲೆ, ಚೌಕ, ಸಂಗಮ, ಹುತ್ತ, ಗೋಷ್ಠ (ಹಟ್ಟಿ), ಮಡು.

ಸಪ್ತಧಾನ್ಯ: ಅಕ್ಕಿ, ಗೋಧಿ, ಕಡಲೆ, ಹೆಸುರು, ಉದ್ದು, ತೊಗರಿ, ಹುರುಳಿ

ನವಗ್ರಹ: ರವಿ, ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು.

ಸರ್ವೌಷಧಿ: ದಶಮೂಲಗಳು.

ಸೌಭಾಗ್ಯವಾಯನ: ಅಕ್ಕಿ, ತೆಂಗಿನಕಾಯಿ, ಹಾರ, ಮಂಗಲಸೂತ್ರ, ಕುಂಕುಮದ ಕರಡಿಗೆ, ಬಾಚಣಿಗೆ, ರವಕೆಖಣ.

ಸಮಿತ್ತುಗಳು: ಅರ್ಕ, ಪಲಾಶ, ಖದಿರ, ಅಪಾಮಾರ್ಗ, ಪಿಪ್ಪಲ, ಔದುಂಬರ, ಶಮೀ, ಕುಶ, ದೂರ್ವಾ.

ಪೂಜಾ ಸಾಹಿತ್ಯ

ಸಾಮಾನ್ಯವಾಗಿ ಎಲ್ಲ ಪೂಜೆಗಳಿಗೂ ಬೇಕಾದ ವಸ್ತುಗಳು:

ನೀರನ್ನು ತುಂಬಿಸಿ ಇಟ್ಟುಕೊಳ್ಳಲು ಒಂದು ದೊಡ್ಡ ಪಾತ್ರೆ, ಪಂಚಪಾತ್ರೆ, ಉದ್ಧರಣೆ, ತಾಮ್ರ ಅಥವಾ ಹಿತ್ತಾಳೆಯ ತಟ್ಟೆಗಳು, ಕಲಶಪಾತ್ರೆ, ಶಂಖ, ಘಂಟೆ, ಕಾಲುದೀಪ, ಧೂಪ, ದೀಪ, ಕರ್ಪೂರಾರತಿ, ನೀಲಾಂಜನ ಮುಂತಾದ ಆರತಿಗಳು, ಪಂಚಾಮೃತ, ದ್ರಾಕ್ಷೆ, ಕಲ್ಲುಸಕ್ಕರೆ, ಹಣ್ಣುಗಳು, ತುಲಸೀ ಬಿಲ್ವಪತ್ರ ಮುಂತಾಗಿ ನಾನಾ ಜಾತಿಯ ಸುಗಂಧಪುಷ್ಪಗಳು, ಅಡಿಕೆ, ವೀಳ್ಯದೆಲೆ, ಎಳನೀರು, ತೆಂಗಿನಕಾಯಿ, ಗಂಧ, ಅಕ್ಷತೆ, ಪರಿಮಳದ್ರವ್ಯಗಳು, ಕರ್ಪೂರ, ಊದುಬತ್ತಿ, ಲೋಭಾನ (ಗುಗ್ಗುಲು), ಪಂಚವರ್ಣದ ರಂಗೋಲೆಗಳು, ದೂರ್ವೆ, ದರ್ಭೆ, ಮಾವಿನ ಎಲೆ, ವಸ್ತ್ರ, ಯಜ್ಞೋಪವೀತ-ಇತ್ಯಾದಿ ಆಯಾ ಪೂಜೆಗೆ ಸಂಬಂಧಿಸಿದ ವಿಶಿಷ್ಟ ದ್ರವ್ಯಗಳು, ನೈವೇದ್ಯಕ್ಕೆ ಬೆಲ್ಲ, ತೆಂಗಿನಕಾಯಿ ಮತ್ತು ಇತರ ನಾನಾ ವಿಧದ ಹಣ್ಣುಗಳು.

Scanned by CamScanner

Scanned with CamScanner

ಪುಣ್ಯಾಹವಾಚನ, ಗಣಪತಿಪೂಜನ

ಅಕ್ಕಿ ಸುಮಾರು 3 ಕೆ.ಜಿ.; ತೆಂಗಿನ ಕಾಯಿ 4; ಕಲಶ ಪಾತ್ರೆ 2; ಬಾಳೆ ಎಲೆ 10; ಅಡಿಕೆ; ದೂರ್ವೆ; ದರ್ಭೆ; ಪಂಚಪಾತ್ರೆ; ಉದ್ಧರಣೆ ಇತ್ಯಾದಿಯಾಗಿ ಮೊದಲು ಹೇಳಿದ ಎಲ್ಲಾ ಪೂಜಾ ಸಾಮಗ್ರಿಗಳು. ಸ್ವರ್ಣ, ರತ್ನ ಮತ್ತು ಮಾವು ಮೊದಲಾದ ಪಲ್ಲವಗಳು. ರಂಗೋಲಿ, ಕುಂಕುಮ, ಕುಂಕುಮಾಕ್ಷತೆ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯಾದಿಗಳು. ದಕ್ಷಿಣೆಗೆ ಚಿಲ್ಲರೆ ಹಣ.

ಮಂಡಪದೇವತಾ ಪ್ರತಿಷ್ಠೆ

ಪುಣ್ಯಾಹವಾಚನದ ಎಲ್ಲ ಸಾಮಗ್ರಿಗಳು, ಶಮೀಪತ್ರ, ದೂರ್ವೆ, ಮಾವಿನ ಎಲೆ, ಸಣ್ಣ ಕಟ್ಟಿಗೆತುಂಡು (ಒನಕೆಯ ಸೂಚಕ), ಶಸ್ತ್ರ (ಚೂರಿ), ಮುಚ್ಚಳ ಸಹಿತ ಮಣ್ಣಿನ ಕಲಶ, ದಾರದ ಉಂಡೆ, ಅರಸಿನ ಬೇರು, ಮೊಸರು, ಬಿದಿರಿನ ಹೊಸ ಮೊರ, ಸುವಾಸನೆಯುಳ್ಳ ಎಣ್ಣೆ, ಅಕ್ಕಿ, ತೆಂಗಿನಕಾಯಿ, ಎಲೆ, ಅಡಿಕೆ, ದಕ್ಷಿಣೆ ಇತ್ಯಾದಿ.

ನಾಂದೀಶ್ರಾದ್ಧ: ಇಬ್ಬರು ಬ್ರಾಹ್ಮಣರಿಗೆ ಭೋಜನಕ್ಕೆ ಸಾಕಾಗುವಷ್ಟು ಆಮಾನ್ನ (ಅಕ್ಕಿ, ತೆಂಗಿನಕಾಯಿ, ತರಕಾರಿ ಇತ್ಯಾದಿ) ಅಥವಾ ಅದಕ್ಕೆ ಪ್ರತ್ಯಾಮ್ನಾಯವಾಗುವಷ್ಟು ಹಿರಣ್ಯ, ಒಟ್ಟು 5 ಪಾಲು.

ಸ್ಥಾಲೀಪಾಕ (ಹೋಮಸಾಹಿತ್ಯ)

ಸ್ಥಂಡಿಲನಿರ್ಮಾಣಕ್ಕೆ ಮಣ್ಣು, ಗೋಮಯ, ಹಲಸಿನ ಕಟ್ಟಿಗೆ, ತುಪ್ಪ, ದರ್ಭೆ, ಸಮಿಧೆ, ಅಗ್ನಿಯನ್ನು ತರಲು ಚಿನ್ನ ಅಥವಾ ಮಣ್ಣಿನ ಪಾತ್ರೆ, ಆಜ್ಯಪಾತ್ರೆ, ಪ್ರೋಕ್ಷಣೀ ಮತ್ತು ಪ್ರಣೀತಾ ಪಾತ್ರೆ, ಸ್ರುಕ್, ಸ್ರುವ, ಊಲೂಖಲ, ಮುಸಲ, ಶೂರ್ಪ, ಕೃಷ್ಣಾಜಿನ ಅರೆಯುವ ಕಲ್ಲು ಮತ್ತು ಅಡಿಕಲ್ಲು, ಚರುಪಾತ್ರೆ, ಸೌಟು ಮೊದಲು ಹೇಳಿದ ಎಲ್ಲ ಪೂಜಾ ಸಾಮಗ್ರಿಗಳು, ಎಲೆ, ಅಡಿಕೆ, ದಕ್ಷಿಣೆ ಇತ್ಯಾದಿ.

ಗ್ರಹಯಜ್ಞ

ಸ್ಥಾಲೀಪಾಕದಲ್ಲಿ ಹೇಳಿದ ಯಜ್ಞಸಾಮಗ್ರಿಗಳು; ಪೂಜಾಸಾಮಗ್ರಿಗಳು, ಪುಣ್ಯಾಹವಾಚನ ಮತ್ತು ನಾಂದೀಶ್ರಾದ್ಧಗಳಿಗೆ ಬೇಕಾದ ಸಾಮಗ್ರಿಗಳು, ಪಂಚಗವ್ಯ, ಪಂಚಾಮೃತ, ಪಂಚಪಲ್ಲವ, ಸಪ್ತಮೃತ್ತಿಕಾ, ಪಂಚತ್ವಕ್, ಪಂಚವರ್ಣ (ರಂಗೋಲಿ), ಪಂಚರತ್ನ, ನವಗ್ರಹಸಮಿತ್ತುಗಳು, ನವಧಾನ್ಯಗಳು (ಸಪ್ತಧಾನ್ಯಗಳಿಗೆ ಎಳ್ಳು ಮತ್ತು ಅವರೆಗಳನ್ನು ಸೇರಿಸಬೇಕು) ಅಕ್ಕಿ, ತೆಂಗಿನ ಕಾಯಿ, ಕಲಶಪಾತ್ರೆ, ವಸ್ತ್ರ 4, ಯಜ್ಞೋಪವೀತ 4 ಜೊತೆ, ಸುಮಾರು 7 ಸೇರಿನಷ್ಟು ಅಕ್ಕಿಯ ಚರು, ಚರುಪಾತ್ರೆ, ಬಲಿದಾನಕ್ಕೆ ದೀಪಗಳು (ಬತ್ತಿ) ಅರಸಿನ ಕುಂಕುಮ ಕಲಸಿದ ನೀರು, ನವಗ್ರಹ ಪ್ರತಿಮೆಗಳು, ನವಗ್ರಹಗಳಿಗೆ ಆಯಾ ವರ್ಣದ ವಸ್ತುಗಳು ಮತ್ತು ನೈವೇದ್ಯ, ಹೋಮಸಂಖ್ಯೆಯನ್ನು ಅನುಸರಿಸಿ ತುಪ್ಪ, ಸಮಿತ್ತು, ಎಳ್ಳು, ಚರು, ಭತ್ತ ಮುಂತಾದವುಗಳು.

Scanned by CamScanner

Scanned with CamScanner

ಆಚಾರ್ಯಾದಿ ವರಣಸಾಮಗ್ರಿ:- ಪ್ರತಿಯೊಬ್ಬರಿಗೂ ಧೋತಿ ಮತ್ತು ಉತ್ತರೀಯ, ಪಂಚಪಾತ್ರೆ, ಉದ್ಧರಣೆ, ಯಜ್ಞೋಪವೀತ, ಪವಿತ್ರಗಳು, ತಾಂಬೂಲ, ದಕ್ಷಿಣೆ, ನಿರೀಕ್ಷಣಾಜ್ಯ ದಾನಕ್ಕೆ ತುಪ್ಪ, ಬಿಳಿ ಸಾಸಿವೆ.

ಪುನಃಸಂಧಾನ, ಗರ್ಭಾಧಾನ, ಪುಂಸವನ, ಸೀಮಂತೋನ್ನಯನಾದಿಗಳು

ಪೂಜಾಸಾಮಗ್ರಿ, ಪುಣ್ಯಾಹವಾಚನನಾಂದೀಶ್ರಾದ್ಧಸಾಮಗ್ರಿ, ಹೋಮಸಾಮಗ್ರಿ, ಹೋಮಕ್ಕೆ ತುಪ್ಪ, ಚರು, ಹೊದಲು ಇತ್ಯಾದಿ. ಉದ್ದು ಮತ್ತು ಮೊಸರು ಮುಳ್ಳುಹಂದಿಯ ಮುಳ್ಳು.

ಜಾತಕರ್ಮ, ನಾಮಕರಣ, ಅನ್ನಪ್ರಾಶನ

ಪುಣ್ಯಾಹವಾಚನ ನಾಂದೀಶ್ರಾದ್ಧಾದಿ ಸಾಮಗ್ರಿಗಳು, ಪೂಜಾ ಸಾಮಗ್ರಿಗಳು, ಹೋಮ ಸಾಮಗ್ರಿಗಳು, ಸಾಣೆಕಲ್ಲು, ಸುವರ್ಣ, ತುಪ್ಪ, ಜೇನು, ಬೆಳ್ಳಿ ಅಥವಾ ಕಂಚಿನ ಪಾತ್ರೆ, ಕಂಚಿನ ತಟ್ಟೆ, ಅಕ್ಕಿ, ಸುವರ್ಣಶಲಾಕೆ, ಮೊಸರು, ಜೇನು ಸೇರಿಸಿದ ಅನ್ನ, ಅಕ್ಕಿ, ವಸ್ತ್ರ, ಶಸ್ತ್ರ, ಲೇಖನಿ ಪುಸ್ತಕ, ಸ್ವರ್ಣ.

ಚೂಡಾಕರ್ಮ

ಪೂಜಾ, ಪುಣ್ಯಾಹವಾಚನ, ನಾಂದೀಶ್ರಾದ್ಧ, ಹೋಮ ಸಾಮಗ್ರಿಗಳು. ಕರಂಜ ಬೀಜ, ಎತ್ತಿನ ಸೆಗಣಿ, ಸ್ನಾನಕ್ಕೆ ಬಿಸಿನೀರು, ಬೆಣ್ಣೆ, ಶಮೀಪತ್ರ, ನಾಪಿತನಿಗೆ ಕೊಡಲು ಭತ್ತ, ಅಕ್ಕಿ, ಉದ್ದು ಮತ್ತು ಎಳ್ಳು ತುಂಬಿದ 4 ದೊನ್ನೆಗಳು, ಬಾಳ್‌ಕತ್ತಿ.

ಉಪನಯನ

ಪೂಜಾದಿ ಹೋಮಾಂತ ಸಕಲ ಸಾಮಗ್ರಿಗಳು, ವಟುವಿಗೆ ಎರಡು ಬಟ್ಟೆಗಳು, ಕೌಪೀನ, ಕಟಿಸೂತ್ರ, ಕೃಷ್ಣಾಜಿನ, ಯಜ್ಞೋಪವೀತ, ಪಲಾಶದಂಡ, ಮೌಂಜೀ, ಭಿಕ್ಷಾಪಾತ್ರೆ.

ಮೇಧಾಜನನ:- ವೇದಿಕೆ ನಿರ್ಮಾಣಕ್ಕೆ ಮಣ್ಣು, ಪಲಾಶಪರ್ಣ, ದರ್ಭೆ, ಕಲಶ ಶಂಖ ಘಂಟಾದಿ ಪೂಜಾಸಾಮಗ್ರಿಗಳು, ನೈವೇದ್ಯಕ್ಕೆ ಪಾಯಸ ಅಪೂಪಾದಿಗಳು. ವಟುವಿಗೆ ವಸ್ತ್ರಾದಿ ಎಲ್ಲ ನೂತನ ವಸ್ತುಗಳು.

ಸಮಾವರ್ತನ

ಪೂಜಾದಿ ಹೋಮಾಂತ ಸಕಲ ಸಾಮಗ್ರಿಗಳು ಮತ್ತು ಚೂಡಾಕರ್ಮದಲ್ಲಿರುವ ಎಲ್ಲ ವಸ್ತುಗಳು, ಸ್ನಾತಕನಿಗೆ ಉಡುಗೆ ತೊಡುಗೆ, ಧೋತಿ, ಉತ್ತರೀಯ, ಶಿರೋವೇಷ್ಟನ, ಕಂಠಮಾಲಾ, ಕುಂಡಲ ನೇತ್ರಾಂಜನ, ಪಾದುಕಾ, ಛತ್ರ ಇತ್ಯಾದಿ.

Scanned by CamScanner

Scanned with CamScanner

ವಿವಾಹ

ಪುಣ್ಯಾಹವಾಚನಾದಿಗಳ ಎಲ್ಲ ಸಾಮಗ್ರಿಗಳು, ಹೋಮಸಾಮಗ್ರಿಗಳು, 4+3 ಧೋತಿಗಳು, 4+2 ಶಾಲುಗಳು, 4+3 ಸೀರೆಗಳು, (ವಧೂವರ-ಎರಡೂ ಪಕ್ಷಗಳಿಂದ ಕೂಡಿ) ಮಾಂಗಲ್ಯಸೂತ್ರ, ಮೂಗುತಿ, ಕಾಲುಂಗುರ-ಇತ್ಯಾದಿ ಆಭರಣಗಳು. ಕಲಶ, ಕನ್ನಡಿ, ಪೂರ್ಣಪಾತ್ರ, ದೀಪಮಾಲೆ, ಆರತಿ ಇತ್ಯಾದಿಗಳು, ಮಧುಪರ್ಕಕ್ಕೆ ಜೇನು, ಮೊಸರು, ದರ್ಭಾಸನ, ಯಜ್ಞೋಪವೀತ, ದಾರದ ಉಂಡೆ, ಅರಸಿನ ಬೇರು, ಹೊದಲು, ಎರಡು ಕಲ್ಲು, ಅಕ್ಕಿರಾಶಿ.

ಐರಿಣೀ ಪೂಜೆ:- ಎಲೆ, ಅಡಿಕೆ, ತೆಂಗಿನಕಾಯಿ, ಬಿದಿರಿನ ಗೆರಸೆ, ದೀಪಗಳು, ಗೌರೀಹರ ಪೂಜೆಗೆ ಎರಡು ಕಲಶಗಳು.

Scanned by CamScanner

Scanned with CamScanner

ವಿಷಯಾನುಕ್ರಮಣಿಕಾ

೧. ಪ್ರಾತಃ ಸ್ಮರಣಮ್ 1
೨. ಭಸ್ಮಧಾರಣವಿಧಿಃ 8
೩. ಪ್ರಾತಃಸಂಧ್ಯಾ 9
೪. ಅಗ್ನಿಕಾರ್ಯಮ್ 18
೫. ದೇವಪೂಜಾ 20
೬. ಮಧ್ಯಾಹ್ನಸಂಧ್ಯಾ 38
೭. ವೈಶ್ವದೇವಪ್ರಯೋಗಃ 42
ಪಿತೃಯಜ್ಞಃ
೮. ಭೋಜನವಿಧಿಃ 48
೯. ಸಾಯಂ ಸಂಧ್ಯಾ 51
೧೦. ಸಂಸ್ಕಾರಗಳು:
ಅವುಗಳ ವಿಧಾನ ಮತ್ತು ಫಲ 54
ಸಂಸ್ಕಾರ ಫಲಗಳು
ಸಂಸ್ಕಾರ ಪರಿಭಾಷಾ
ಪತ್ನೀ ಉಪವೇಶಕ್ರಮಃ
೧೧. ಪಂಚಗವ್ಯಮೇಲನಪ್ರಾಶನವಿಧಿಃ 59
೧೨. ಗಣಪತಿಪೂಜನಮ್ 61
೧೩. ಪುಣ್ಯಾಹವಾಚನಮ್ 65
೧೪. ಮಾತೃಕಾಪೂಜನಮ್ 79
೧೫. ನಾಂದೀಶ್ರಾದ್ಧಮ್ 81
೧೬. ಕರ್ಮಾಂಗದೇವತಾಃ 85
೧೭. ಮಂಡಪದೇವತಾಪ್ರತಿಷ್ಠಾ 86
೧೮. ಕರ್ಮವಿಶೇಷೇ ಅಗ್ನಿನಾಮಾನಿ 91
ಕುಂಡಮಂಡಪವೇದೀಲಕ್ಷಣಮ್ 93
ಯಜ್ಞಪಾತ್ರಾಕೃತಯಃ ತತ್ಪರಿಮಾಣಂ ಚ 97
ಕುಂಡಸಂಸ್ಕಾರಃ 98
ಗರ್ಭಾಧಾನಸಂಸ್ಕಾರನಿರ್ಣಯಃ 99
೧೯. ಸ್ಥಾಲೀಪಾಕಪ್ರಯೋಗಃ 101
೨೦. ಗೃಹ್ಯಾಗ್ನೇಃ ಪುನಃಸಂಧಾನಮ್ 126
೨೧. ಭುವನೇಶ್ವರೀ ಶಾಂತಿಃ 131
೨೨. ಗರ್ಭಾಧಾನಾದಿ ಸಂಸ್ಕಾರಾಣಾಂ
ನಿರ್ಣಯಃ 146
ಗರ್ಭಪಾತಲಕ್ಷಣಾನಿ 148
ವಂಧ್ಯಾತ್ವನಿವಾರಣಂ 148
ಅನಪತ್ಯತ್ವನಿವಾರಣಂ 149
ಮೃತಪುತ್ರತ್ವನಿವಾರಣಂ 149
ಸರ್ವರ್ತುಸಾಧಾರಣ ನಿಯಮಾಃ 150
ಗರ್ಭಾಧಾನ ಮುಹೂರ್ತ ನಿರ್ಣಯಃ 153
ವಂಧ್ಯಾಯಾಃ ಪುತ್ರವತೀಕರಣಂ 155
ಗರ್ಭಿಣೀಪತಿಧರ್ಮಾಃ 156
ಸುಖಪ್ರಸವೋಪಾಯಃ 157
ಪುಂಸವನಾನವಲೋಭನ ಸೀಮಂತೋ
ನ್ನಯನ ಸಂಸ್ಕಾರಾಣಾಂ ನಿರ್ಣಯಃ 158
ಜಾತಕರ್ಮ ಸಂಸ್ಕಾರ ನಿರ್ಣಯಃ 160
ಜನನಶಾಂತಿ ವಿಚಾರಃ 161
ಕನ್ಯಾ ಸಂಸ್ಕಾರ ವಿಚಾರಃ 162
ನಾಮಕರಣ ಸಂಸ್ಕಾರ ನಿರ್ಣಯಃ 163
ಆಂದೋಲಾರೋಹಣಂ 164
ಕರ್ಣವೇಧ ಸಂಸ್ಕಾರಃ 164
ಅನ್ನಪ್ರಾಶನ ಸಂಸ್ಕಾರ ನಿರ್ಣಯಃ 165
ಅಕ್ಷರಾರಂಭ ನಿರ್ಣಯಃ 166
ಚೌಲ ಸಂಸ್ಕಾರ ನಿರ್ಣಯಃ 167
ಉಪನಯನ ಸಂಸ್ಕಾರ ವಿಚಾರಃ
ನಿರ್ಣಯಶ್ಚ 168
ಸಮಾವರ್ತನ ಸಂಸ್ಕಾರ ನಿರ್ಣಯಃ 174
ವಿವಾಹ ಸಂಸ್ಕಾರ ನಿರ್ಣಯಃ 175
ವರ್ಧಾಪನ ನಿರ್ಣಯಃ 182
ಪುಂಸವನಾದಿ ನವಸಂಸ್ಕಾರ ಲೋಪ
ನಿಮಿತ್ತಕ ಪ್ರಾಯಶ್ಚಿತ್ತ ಹೋಮಃ 182
ಗರ್ಭಾಧಾನಾದಿಪ್ರಾಶನಾಂತ ನವ
ಸಂಸ್ಕಾರಾಣಾಂ ಸಪತಂತ್ರ ಪ್ರಯೋಗಃ 184
ರಜೋದೋಷವಿಚಾರಃ 187
ಏಕೋದರ ವಿಚಾರಃ 188
ಕನ್ಯಾವಿಕ್ರಯದೋಷ ವಿಚಾರಃ 189
ಬಾಲಕಸ್ಯ ದೃಷ್ಟಿದೋಷಾದೌ ರಕ್ಷಾವಿಧಿಃ 190
ಕಟಿಸೂತ್ರಧಾರಣಂ ಭೂಮ್ಯುಪ
ವೇಶನಂ ಚ 191
ಪ್ರಥಮಕೇಶಕರ್ತನ ನಿರ್ಣಯಃ 192
ಶ್ರೀಪೂಜನಾದಿಶಾಂತಿಃ 193
ಮಂಡಪದೇವತೋತ್ಥಾಪನಂ 194
ವಿವಾಹಸಂಸ್ಕಾರ ನಿರ್ಣಯಃ 195
ಕನ್ಯಾದಾನ ಪ್ರಶಂಸಾ 196

Scanned by CamScanner

Scanned with CamScanner

ವಿವಾಹೇ ಮಂಡಪವೇದ್ಯಾದಿ ನಿರ್ಣಯಃ 196
೨೩. ಗರ್ಭಾಧಾನ ಸಂಸ್ಕಾರಃ 198
೨೪. ಪುಂಸವನಾನವಲೋಭನಸೀಮಂತೋನ್ನಯನಾನಿ 204
೨೫. ಅನವಲೋಭನಮ್ 207
೨೬. ಸೀಮಂತೋನ್ನಯನಮ್ 209
೨೭. ಜಾತಕರ್ಮ ಸಂಸ್ಕಾರಃ 212
೨೮. ಷಷ್ಠೀದೇವೀಪೂಜಾ 216
೨೯. ನಾಮಕರಣ ಸಂಸ್ಕಾರಃ 218
೩೦. ಸೂರ್ಯಾವಲೋಕನ ನಿಷ್ಕ್ರಮಣ ಸಂಸ್ಕಾರೌ 221
೩೧. ನಿಷ್ಕ್ರಮಣ ಸಂಸ್ಕಾರಃ 223
೩೨. ಉಪವೇಶನ ವಿಧಿಃ 226
೩೩. ಅನ್ನಪ್ರಾಶನ ಪ್ರಯೋಗಃ 227
೩೪. ವರ್ಧಾಪನ ಸಂಸ್ಕಾರಃ 229
೩೫. ಅಕ್ಷರಾರಂಭ ಸಂಸ್ಕಾರಃ 237
೩೬. ಚೂಡಾಕರ್ಮ ಪ್ರಯೋಗಃ 242
೩೭. ಉಪನಯನ ಪೂರ್ವಾಂಗಕೃತ್ಯಮ್ 247
೩೮. ಉಪನಯನ ಸಂಸ್ಕಾರಃ 249
೩೯. ಅನುಪ್ರವಚನೀಯ ಹೋಮಃ 261
೪೦. ಮೇಧಾಜನನ ಪ್ರಯೋಗಃ 263
೪೧. ಬ್ರಹ್ಮಚಾರಿವ್ರತಲೋಪ ಪ್ರಾಯಶ್ಚಿತ್ತ ಪ್ರಯೋಗಃ 266
೪೨. ಸಮಾವರ್ತನ ಸಂಸ್ಕಾರಃ 268
೪೩. ವಾಗ್ದಾನ ಪ್ರಯೋಗಃ 275
೪೪. ವಿವಾಹಪೂರ್ವಕೃತ್ಯಮ್ 280
೪೫. ಸೀಮಾಂತಪೂಜನಮ್ 282
೪೬. ವರಸ್ಯ ವಧೂಗೃಹಗಮನಮ್ 283
೪೭. ಮಧುಪರ್ಕಃ 284
೪೮. ಗೌರೀಹರಪೂಜಾ 289
೪೯. ವಧೂವರಯೋಃ ಪರಸ್ಪರ ನಿರೀಕ್ಷಣಮ್ 290
೫೦. ಕನ್ಯಾದಾನ ಪ್ರಯೋಗಃ 292
೫೧. ಅಕ್ಷತಾರೋಪಣಮ್ 298
೫೨. ವಿವಾಹಹೋಮಃ 301
೫೩. ಗೃಹಪ್ರವೇಶನೀಯ ಹೋಮಃ 307
೫೪. ವಿವಾಹಚತುರ್ಥದಿನಕೃತ್ಯಮ್ 309
೫೫. ವಧೂಸಹಗೃಹಪ್ರವೇಶಃ ಲಕ್ಷ್ಮೀ ಪೂಜನಮ್ 312
೫೬. ದೇವಕೋತ್ಥಾಪನ ಮಂಡಪೋದ್ವಾಸನೇ 314
ಔಪಾಸನಾಖ್ಯಃ ಸಾಯಂಪ್ರಾತರ್ಹೋಮ ನಿರ್ಣಯಃ 316
ಹವನದ್ರವ್ಯಾಣಿ 317
ಹೋಮೇ ಅಗ್ನಿಸ್ವರೂಪಮ್ 317
ಗೃಹ್ಯಾಗ್ನಿ ಮುಹೂರ್ತಃ 318
ಸಮಸ್ಯ ಹೋಮಃ 319
ಸಭಾರ್ಯಸ್ಯ ಪ್ರವಾಸೇ ಪ್ರಸಕ್ತೇ ಅಗ್ನಿಸಮಾರೋಪವಿಧಿಃ 321
ಅಗ್ನೇಃ ಪ್ರತ್ಯವರೋಹಣಮ್ 322
ನವವಧೂಗೃಹಪ್ರವೇಶ ನಿರ್ಣಯಃ 322
ದ್ವಿರಾಗಮನ ವಿಚಾರಃ 323
ಕನ್ಯಾವೈಧವ್ಯಯೋಗ ಪರಿಹಾರೋಪಾಯಃ 323
ಕನ್ಯಾವೈಧವ್ಯಯೋಗ ಪರಿಹಾರ ವಿಧಾನಮ್ 324
ವಿಷ್ಣುಮೂರ್ತಿದಾನವಿಧಿಃ 325
ಮೃತಭಾರ್ಯಾತ್ವದೋಷ ಪರಿಹಾರೋಪಾಯಃ 325
ದ್ವಿತೀಯ ತೃತೀಯ ವಿವಾಹ ನಿರ್ಣಯಃ 326
ಅರ್ಕವಿವಾಹ ಪ್ರಯೋಗಃ 327
೫೭. ಸಾಯಮೌಪಾಸನ ಹೋಮಃ 330
೫೮. ಪ್ರಾತರೌಪಾಸನ ಹೋಮಃ 334
೫೯. ಗ್ರಹಯಜ್ಞಾವಶ್ಯಕತಾ ಗ್ರಹಾಣಾಂ ಪ್ರತಿಮಾವರ್ಣಾದಿ ಚ 336
ಗ್ರಹಾಣಾಂ ನಾಮಾನಿ 336
ಗ್ರಹಾಣಾಂ ಮೂರ್ತಯಃ ಪ್ರತಿಮಾಃ 337
ಗ್ರಹಮೂರ್ತಿಕರಣ ಪ್ರಕಾರಃ 337
ಗ್ರಹಸ್ಥಾಪನದಿಶಾ 338
ಗ್ರಹಾಣಾಂ ವರ್ಣಾಃ 339
ನವಗ್ರಹಪ್ರೀತ್ಯರ್ಥ ನೈವೇದ್ಯಮ್ 339
೬೦. ಗ್ರಹಯಜ್ಞಃ 341
ಆಚಾರ್ಯ ವರಣಮ್ 341
ಅಗ್ನ್ಯುತ್ತಾರಣಮ್ 344
ಪ್ರಾಣಪ್ರತಿಷ್ಠಾ 345
ಗ್ರಹಸ್ಥಾಪನಂ 346
ಬಲಿದಾನಂ 358
ಪೂರ್ಣಾಹುತಿಃ 363
ಅಭಿಷೇಕಃ 365
ಶ್ರೇಯಃಸಂಪಾದನಂ 367
ನವಗ್ರಹದಾನಾನಿ 368

Scanned by CamScanner

Scanned with CamScanner

೬೧. ವಿನಾಯಕಶಾಂತಿ ವಿಚಾರಃ 370

ವಿನಾಯಕ ಶಾಂತಿಃ 371

೬೨. ನಾರಾಯಣಬಲಿ ನಾಗಬಲಿ ಮುಹೂರ್ತ ನಿರ್ಣಯಃ 379

ವೀರಭೋಜನವಿಧಿಃ 379

ನಾರಾಯಣಬಲಿಃ 381

೬೩. ನಾಗಬಲಿಃ 388

೬೪. ಸರ್ವಪ್ರಾಯಶ್ಚಿತ್ತ ಪ್ರಯೋಗಃ 395

೬೫. ದತ್ತಕಗ್ರಹಣ ವಿಚಾರಃ 399

ದತ್ತಪುತ್ರ ವಿಧಾನಮ್ 400

೬೬. ಕನ್ಯಾನಾಮೇವೋತ್ಪತ್ತೌ ಪುತ್ರಾರ್ಥಂ ಪುತ್ರಕಾಮೇಷ್ಟಿಃ 404

೬೭. ವಿವಾಹಮಂಗಲಾಷ್ಟಕಂ 406

೬೮. ಉಪನಯನಮಂಗಲಾಷ್ಟಕಂ 408

೬೯. ಅನ್ನಸಮರ್ಪಣವಿಧಿಃ 409

೭೦. ತ್ರಿಸುಪರ್ಣಂ 413

೭೧. ಶ್ರೀಸೂಕ್ತಮ್ 416

೭೨. ದೇವೇಸಂಜ್ಞಮಂತ್ರಾಃ 419

೭೩. ಯೇ ಯಜ್ಞೇನ ಸೂಕ್ತಮ್ 424

೭೪. ಆಯುಷ್ಯಮಿತಿ ಸೂಕ್ತಮ್ 427

೭೫. ಸತ್ಯೇನೋತ್ತಭಿತಾ ಸೂಕ್ತಮ್ 429

೭೬. ಋಕ್ ಚವೇತ್ಯಾದಿ ಬ್ರಾಹ್ಮಣಖಂಡ ವಾಕ್ಯಾನಿ 433

೭೭. ಪರಿತ್ವೇತ್ಯಾದಿ ಸೂತ್ರವೇಷ್ಟನ ಮಂತ್ರಾಃ 437

೭೮. ನವಗ್ರಹಮಂತ್ರಾಃ 438

೭೯. ಆಶೀರ್ವಚನಮಂತ್ರಾಃ 439

೮೦. ಶ್ರೀವಿಶ್ವಕರ್ಮ ಸೂಕ್ತಮ್ 447

ಔರ್ಧ್ವದೇಹಿಕವಿಧಿಃ

೧. ಆತುರಸನ್ನಿಧೌ ಜಾಪ್ಯಂ 451

೨. ಮರಣೋತ್ತರಂ ವಿಧಿಃ 455

೩. ಗೃಹಾತ್ ಸ್ಮಶಾನೇ ಶವನಯನಪ್ರಕಾರಃ 457

೪. ಪ್ರೇತಸ್ಯ ಪುನಃಸಂಧಾನಂ 462

೫. ಔರ್ಧ್ವದೇಹಿಕವಿಧಿಃ 465

೬. ಪಂಚಕಾದಿ ದಾಹವಿಧಿಃ 471

೭. ಚಿತಿಪೂರಣಂ 475

೮. ತಿಲಾಂಜಲಿದಾನಂ 481

೯. ಪ್ರಥಮದಿನವಿಧಿಃ 483

೧೦. ನವ (ವಿಷಮ) ಶ್ರಾದ್ಧಂ 487

೧೧. ನಗ್ನಪ್ರಚ್ಛಾದನಶ್ರಾದ್ಧಂ 490

೧೨. ಪಾಥೇಯಶ್ರಾದ್ಧಂ 492

೧೩. ಅಸ್ಥಿಸಂಚಯನಂ 495

೧೪. ಅಸ್ಥಿಸಂಚಯನಶ್ರಾದ್ಧಂ 498

೧೫. ದ್ವಿತೀಯಾದಿ ದಿನವಿಧಿಃ 501

೧೬. ದಶಮದಿನವಿಧಿಃ 502

೧೭. ಏಕಾದಶಾಹಕೃತ್ಯಂ 504

೧೮. ಪಂಚಕತ್ರಿಪಾದಸಾಧಾರಣಶಾಂತಿಃ 506

೧೯. ಪಂಚಕಶಾಂತಿಃ 508

೨೦. ತ್ರಿಪಾದಶಾಂತಿಃ 511

೨೧. ವೃಷೋತ್ಸರ್ಗಃ 514

೨೨. ಮಹೈಕೋದ್ದಿಷ್ಟಂ 523

೨೩. ಅಗ್ನೌ ಮಹೈಕೋದ್ದಿಷ್ಟಂ 525

೨೪. ರುದ್ರಗಣಶ್ರಾದ್ಧಂ 528

೨೫. ವಸುಗಣಶ್ರಾದ್ಧಂ 530

೨೬. ಷೋಡಶಮಾಸಿಕಶ್ರಾದ್ಧಾನಿ 531

೨೭. ದಶದಾನಾನಿ 534

೨೮. ಅಷ್ಟದಾನಾನಿ 536

೨೯. ಉಪದಾನಾನಿ 537

೩೦. ಪ್ರಾಯಶ್ಚಿತ್ತಗೋದಾನಪ್ರಯೋಗಃ 539

೩೧. ಪಂಚಗೋದಾನಾನಿ 542

೩೨. ಅಶ್ವದಾನಂ 545

೩೩. ಶಯ್ಯಾದಾನಂ 546

೩೪. ಭೂಮಿದಾನಂ 548

೩೫. ಸಪಿಂಡೀಕರಣಂ 550

೩೬. ಪಾಥೇಯಶ್ರಾದ್ಧಂ 557

೩೭. ತ್ರಯೋದಶದಿನವಿಧಿಃ 558

೩೮. ತ್ರಯೋದಶಶ್ರವಣಾಮಾನ್ನವಿಧಿಃ 563

೩೯. ಉದಕುಂಭಶ್ರಾದ್ಧಂ 564

೪೦. ಮಾಸಿಕಶ್ರಾದ್ಧಾನಿ 565

೪೧. ಪ್ರತಿಸಾಂವತ್ಸರಿಕಶ್ರಾದ್ಧಂ 567

೪೨. ಮಹಾಲಯಶ್ರಾದ್ಧಂ 603

೪೩. ಯತಿಸಂಸ್ಕಾರವಿಧಿಃ 607

೪೪. ತ್ರಿಂಶಚ್ಛ್ಲೋಕೀ 616

Scanned by CamScanner

ಮಂತ್ರಾನುಕ್ರಮಣಿಕಾ

ಅ

ಅಗ್ನ ಆಯಾಹಿ ವೀತಯೇ	382
ಅಗ್ನ ಆಯೂಂಷಿ ಪವಸ	127,243,252,382
ಅಗ್ನಯೇ ಸಮಿಧಮಾಹಾರ್ಷಂ	18,255
ಅಗ್ನಿರ್ಋಷಿಃ ಪವಮಾನಃ	127
ಅಗ್ನಿರ್ಮೂರ್ಧಾದಿವಃ	347
ಅಗ್ನಿಂ ದೂತಂ ವೃಣೀಮಹೇ	351
ಅಗ್ನಿಮೀಳೇ ಪುರೋಹಿತಂ	382
ಅಗ್ನಿಷ್ಟ ಮಾಮನ್ಯುಶ್ಚ	51
ಅಗ್ನಿಃ ಶುಚಿವ್ರತತಮಃ	343
ಅಗ್ನಿಃಸಪ್ತಿಂ ವಾಜಂ	345
ಅಗ್ನಿಸ್ತು ವಿಶ್ರವಸ್ತಮಂ	45,172
ಅಗ್ನೇಪವಸ್ವಸ್ವಪಾ	127
ಅಗ್ನೇತ್ವಂ ನೋ ಅಂತಮ	123,332
ಅಗ್ನೇ ಮನ್ಯುಂ ಪ್ರತಿನುದ	273
ಅಗ್ನೇ ರಕ್ಷಾಣೋ ಅಂಹಸಃ	391
ಅಘೋರಚಕ್ಷುರಪತಿಘ್ನ್ಯೇಧಿ	129,291
ಅರ್ಚತ ಪ್ರಾರ್ಚತ	410
ಅತೋ ದೇವಾ ಅವಂತು	30,118
ಅದಿತಿರ್ದ್ಯೌರದಿತಿರಂತರಿಕ್ಷಃ	231
ಅದಿತಿಃ ಶ್ಮಶ್ರೂಣಿ	270
ಅಧಸ್ವಿನಾದುತಬಿಭ್ಯುಃ	232
ಅನೃಕ್ಷರಾ ಋಜವಃಸಂತು	292
ಅನ್ನಪತೇನ್ನಸ್ಯ ನೋ	227
ಅನಾಧೃಷ್ಟಮಸ್ಯನಾಧೃಷ್ಟಂ	295
ಅನಾಜ್ಞಾತಂಯದಾಜ್ಞಾತಂ	119
ಅಪನಃಶೋಶುಚದಘ	200
ಅಪ್ಸು ಮೇ ಸೋಮೋ	351
ಅಪಶ್ಯಂ ತ್ವಾ ಮನಸಾ	405
ಅಭಿತ್ವಾ ಸಿಂಧೋ	132
ಅಭಿವಸ್ತ್ರಾ ಸುವಸನಾ	90
ಅಮೀವಹಾ ವಾಸ್ತೋಷ್ಪತೇ	76
ಅಯಂ ಮೇ ಹಸ್ತೋ ಭಗವಾ	36
ಅರ್ಯಮಣಂ ನು	303
ಅಯಂ ತೇ ಯೋನಿಃ	321
ಅಯಾಶ್ಚಾಗ್ನೇಸ್ಯನಭಿ	118
ಅವಕ್ರಂದ ದಕ್ಷಿಣತೋ	89
ಅಶ್ವತ್ಥೇವೋ ನಿಷದನಂ	66
ಅಷ್ಟೌ ದೇವಾ ವಸವಃ	73
ಅಸ್ಯ ಪಿಬ ಕ್ಷುಮತಃ	278
ಅಸುನೀತೇ ಪುನರಸ್ಮಾಸು	346
ಅಸ್ಮೇ ಪ್ರಯಂಧಿ ಮಘವನ್	214
ಅಹಂ ವರ್ಷ್ಮ ಸಜಾತಾನಾಂ	285
ಅಹಂ ಗರ್ಭಮದಧಾ	203
ಅಹಿರಿವ ಭೋಗೈಃ	32
ಅಂಗಾದಂಗಾತ್ಸಂಭವಸಿ	214
ಅಂಹೋಮುಚ ಮಾಂಗಿರ	199

ಆ

ಆಕಲಶೇಷು ಧಾವತಿ	66
ಆಕೃಷ್ಣೇನ ರಜಸಾ	347
ಆದಿತ್ಪ್ರತ್ನಸ್ಯ ರೇತಸೋ	354
ಆ ನಃ ಪ್ರಜಾಂ ಜನಯತು	129,296
ಆ ನೋ ಭದ್ರಾಃ ಕ್ರತವೋ	230
ಆಪ ಉಂದಂತು ಜೀವಸೇ	70
ಆಪಃ ಪುನಂತು ಪೃಥಿವೀಂ	38
ಆಪ್ಯಾಯಸ್ವಸಮೇತುತೇ	27,59,347
ಆಪೋ ಅಸ್ಮಾನ್ಮಾತರಃ	122
ಆಪೋ ಹಿ ಷ್ಠಾಮಯೋಭುವಃ	10
ಆಮೂರಜ ಪ್ರತ್ಯಾವರ್ತಯೇ	78
ಆಯಂ ಗೌಃ ಪೃಶ್ನಿ	352
ಆವದಂಸ್ತ್ವಂ ಶಕುನೇ	89
ಆವೋ ರಾಜಾನಮಧ್ವರಸ್ಯ	137
ಆಶುಃ ಶಿಶಾನೋ	221

ಇ

ಇದಂ ವಿಷ್ಣುರ್ವಿಚಕ್ರಮೇ	352
ಇಮಂ ಮೇ ಗಂಗೇ ಯಮುನೇ	66,132,569
ಇಮಂ ಸ್ತೋಮಮರ್ಹತೇ	231
ಇಮಾ ಆಪಃ ಶಿವತಮಾ	77
ಇಮಾ ರುದ್ರಾಯ ಸ್ಥಿರಧನ್ವನೇ	137
ಇಮಾಂ ತ್ವಮಿಂದ್ರಮೀಢ್ವಃ	129

Scanned by CamScanner

Scanned with CamScanner

ಇಯಂ ದುರುಕ್ತಾತ್ 258
ಇಷೇತ್ವೋರ್ಜೇತ್ವಾ 381
ಇಹ ಪ್ರಿಯಂ ಪ್ರಜಯಾತೇ 312
ಇಳಾಮಗ್ನೇ ಪುರುದಂಸಂ 83
ಇಂದ್ರ ತ್ವಾ ವೃಷಭಂ 135, 143
ಇಂದ್ರ ಶ್ರೇಷ್ಠಾನಿ ದ್ರವಿಣಾನಿ 214, 352
ಇಂದ್ರಂ ವಿಶ್ವಾ ಅವೀವೃಧನ್ 355
ಇಂದ್ರಂ ವೋ ವಿಶ್ವತಃ 350
ಇಂದ್ರಾಣೀಮಾಸು ನಾರಿಷು 135,352
ಇಂದುರ್ದೇವಾನಾಮುಪಸಖ್ಯ 278

ಉ

ಉಚ್ಚಾದಿವಿದಕ್ಷಿಣಾವಂತೋ 70
ಉತ್ತಿಷ್ಠ ಬ್ರಹ್ಮಣಸ್ಪತೇ 84,314
ಉದ್ಗಾತೇವ ಶಕುನೇ 72,89
ಉದೀರ್ಷ್ವಾತಃ ಪತಿವತೀ 201
ಉದೀರ್ಷ್ವಾತೋ ವಿಶ್ವಾವಸೋ 201
ಉದುತ್ಯಂ ಜಾತವೇದಸಂ 39,339
ಉದ್ಬುಧ್ಯಧ್ವಂ 347
ಉಭಯಂ ಶೃಣವಚ್ಚನ 141
ಉಭಾ ಊಸೂನಂ ತದಿದ 90
ಉಷೋವಾಜಂ ಹಿವಂ 351

ಋ

ಋಜೀತ್ಯೇನೀರುಶತೀ 132
ಋತಂ ಚ ಸತ್ಯಂ 12
ಋಧ್ಯಾಮಸ್ತೋಮಂ 74
ಋಧ್ಯಾಸ್ಮ ಹವ್ಯೈಃ 74

ಏ

ಏವಾಪಿತ್ರೇ ವಿಶ್ವದೇವಾಯ 23
ಏಷೋ ಉಷಾ ಅಪೂರ್ವ್ಯಾ 354
ಏಹ್ಯಗ್ನ ಇಹ ಹೋತಾ 43,96

ಓ

ಓಷಧಯಃ ಸಂವದಂತೇ 66
ಓಂ ಚ ಮೇ ಸ್ವರಶ್ಚ ಮೇ 19,256

ಕ

ಕ ಇವಂ ಕಸ್ಮಾ ಅದಾತ್ 294
ಕಥಾ ತೇ ಅಗ್ನೇ 35
ಕದ್ರುದ್ರಾಯ ಪ್ರಚೇತಸೇ 136
ಕನಿಕ್ರದಜ್ಜನುಷಂ 89
ಕಯಾನಶ್ಚಿತ್ರ ಆಭೂವ 348
ಕಾಂಡಾತ್ಕಾಂಡಾತ್ 66
ಕೇತುಂ ಕೃಣ್ವನ್ನ 349

ಗ

ಗಣಾನಾಂ ತ್ವಾ ಗಣಪತಿಂ 22,35,64
ಗೃಭ್ಣಾಮಿ ತೇ ಸೌಭಗತ್ವಾಯ 303
ಗರ್ಭಂ ಧೇಹಿ ಸಿನೀವಾಲಿ 199
ಗೌರೀರ್ಮಿಮಾಯ ಸಲಿಲಾನಿ 349
ಗಂಧದ್ವಾರಾಂ ದುರಾಧರ್ಷಾಂ 29,59,66,569

ಘ

ಘೃತಂ ಮಿಮಿಕ್ಷೇ 28

ಚ

ಚತ್ವಾರಿ ಶೃಂಗಾ ತ್ರಯೋ 43,105,330
ಚಿತ್ರಂ ದೇವಾನಾಮುದ 40,334

ಜ

ಜಾತವೇದಸೇ ಸುನವಾಮ 14,35,353
ಜುಷ್ಟೋ ದಮೂನಾ 43,103

ತ

ತಚ್ಚಕ್ಷುರ್ದೇವಹಿತಂ 346
ತಚ್ಛಂಯೋರಾವೃಣೀಮಹೇ 15
ತತ್ಸವಿತುರ್ವರೇಣ್ಯಂ 10,14,59,135,257
ತತ್ಸವಿತುರ್ವೃಣೀಮಹೇ 253
ತತ್ವಾಯಾಮಿ ಬ್ರಹ್ಮಣಾ 355
ತದಸ್ತು ಮಿತ್ರಾ ವರುಣಾ 31
ತಮರ್ವಂತನ್ನ ಸಾನಸಿ 214
ತಮೀಶಾನಂ ಜಗತಃ 356
ತಮುಷ್ಟುಹಿ ಯಃ ಸ್ವಿಷು 137
ತವ ವಾಯ ವೃತಸ್ಪತೇ 353
ತಂ ವೋ ಧಿಯಾ ಪರಮಯಾ 267
ತ್ವಮರ್ಯಮಾ ಭವಸಿ 123,302
ತ್ವಮಗ್ನೇ ರುದ್ರೋ ಅಸುರೋ 142

Scanned by CamScanner

Scanned with CamScanner

ತ್ವಷ್ಟಾ ಮಯಾ ಪ್ರಥಮಂ 132
ತ್ರ್ಯಂಬಕಂ ಯಜಾಮಹೇ 15,138,229,349
ತಂತುಂ ತನ್ವನ್ ರಜಸೋ 332
ತವ ವಾಯೋ ವ್ಯಶ್ವೋ 353
ತಾಂ ಪೂಷಂ ಛಿವತಮಾ 202
ತ್ರಾತಾರಮಿಂದ್ರಮವಿತಾರ 359
ತ್ರಾಯಂತಾಮಿಹ ದೇವಾಃ 76
ತುಭ್ಯಮಗ್ರೇ ಪರ್ಯವಹನ್ 403
ತ್ರಿಭಿಷ್ಟ್ವಂ ದೇವ ಸವಿತ 141

ದ

ದಧಿಕ್ರಾವ್ಣೋ ಅಕಾರಿಷಂ 28,59
ದ್ರವಿಣೋದಾದ್ರವಿಣ 69
ದಿವಿ ಸ್ವನೋ ಯತತೇ 132
ದಿವೇ ದಿವೇ ಸದೃಶೀ 26
ದೇವಸ್ಯತ್ವಾ ಸವಿತುಃ 30,59,77,142,286
ದೇವೀಂ ವಾಚಮಜನಯಂತ 36,61,238

ಧ

ಧಾತಾ ದದಾತು ದಾಶುಷೇ 209
ಧಾತಾ ಪ್ರಜಾನಾಮುತ 209

ನ

ನಮೋ ಮಹದ್ಭ್ಯೋ ನಮೋ 35
ನಮೋ ಮಿತ್ರಸ್ಯ ವರುಣಸ್ಯ 334,398
ನಮೋ ಬ್ರಹ್ಮಣೇ ನಮೋ 16
ನರ್ಯ ಪ್ರಜಾಂ ಮೇ 31
ನವೋ ನವೋ ಭವತಿ 70
ನಾಮಾನಿ ತೇ ಶತಕ್ರತೋ 312
ನಿಕಾಮೇ ನಿಕಾಮೇನಃ 72
ನಿಷುಸೀದ ಗಣಪತೇ 64
ನೀಲಲೋಹಿತಂ ಭವತಿ 296
ನೇಜ ಮೇ ಷಪರಾಪತ 199

ಪ

ಪರಂ ಮೃತ್ಯೋ ಅನುಪರೇ 351
ಪವಿತ್ರವಂತಃ ಪರಿವಾಚ 441
ಪ್ರಜಾಪತೇ ನ ತ್ವದೇತಾ 199,352,412
ಪ್ರತ್ಯವರೋಹ ಜಾತವೇದಃ 106,322
ಪ್ರತೇರದದ್ವರುಣೋ 132
ಪ್ರತೇ ದದಾಮಿ ಮಧುನೋ 212
ಪ್ರದಕ್ಷಿಣಿದಭಿಗೃಣಂತಿ 89
ಪ್ರಸುಗ್ಮಂತಾ ಧಿಯ 278
ಪ್ರಸುವ ಆಪೋ ಮಹಿಮಾನ 132
ಪ್ರಸೇನಾನೀಃ ಶೂರೋ 90
ಪಾವಕಾನಃ ಸರಸ್ವತೀ 218
ಪಾಂಚಜನ್ಯಾಯ ವಿದ್ಮಹೇ 25
ಪುನಾನಃ ಕಲಶೇಷ್ವಾ 90
ಪುರುಷಸಂಮಿತೋ ಯಜ್ಞೋ 120
ಪೂರ್ಣಾದರ್ವಿಪರಾಪತ 67
ಪೂಷಣಂ ನು ದೇವಂ 304

ಬ

ಬೃಹತ್ಸಾಮಕ್ಷತ್ರಭೃತ್ 329
ಬೃಹಸ್ಪತೇ ಅತಿಯದರ್ಯೋ 348
ಬ್ರಹ್ಮಜಜ್ಞಾನಂ 350
ಬ್ರಹ್ಮಣಾ ತೇ ಬ್ರಹ್ಮಯುಜಾ 353

ಭ

ಭದ್ರಂ ಕರ್ಣೇಭಿಃ 69
ಭದ್ರಂ ನೋ ಅಪಿ 16
ಭುವನಸ್ಯ ಪಿತರಂ 138
ಭೋಜಂ ತ್ವಾಮಿಂದ್ರ 410

ಮ

ಮಧು ವಾತಾ ಋತಾಯತೇ 28,286
ಮಮತ್ತು ನಃ ಪರಿಜ್ಮಾ 35
ಮಮ ವ್ರತೇ ಹೃದಯಂ 257
ಮಮಾಗ್ನೇ ವರ್ಚೋ ವಿಹವೇ 273
ಮಯಿ ಮೇಧಾಂ ಮಯಿ 19,255
ಮಯೋ ಭೂರ್ವಾತೋ 239
ಮಹಾಂತಂ ತ್ವಾ ಮಹೀನಾಂ 77
ತತಃ ಉತ್ತರಕಲಶಂ ದಕ್ಷಿಣಹಸ್ತೇ ದಕ್ಷಿಣಕಲಶಂ ವಾಮಹಸ್ತೇ ಗೃಹೀತ್ವಾ ತಾಭ್ಯಾಂ ಧಾರಾದ್ವಯಂ ಸಂತತಂ ಪಾತ್ರೇ ನಿಷಿಂಚೇದೇಭಿರ್ಮಂತ್ರೈಃ ॥ ವಾಸ್ತೋಷ್ಪತ ಇತಿ ಚತಸೃಣಾಂ ವಸಿಷ್ಠೋ ವಾಸ್ತೋಷ್ಪತಿಸ್ತ್ರಿಷ್ಟುಬಂತ್ಯಾ ಗಾಯತ್ರೀ ॥ ಉದಕಸೇಚನೇ ವಿನಿಯೋಗಃ ॥ ಓಂ ವಾಸ್ತೋಷ್ಪತೇ ಪ್ರತಿಜಾ-ನೀಹ್ಯಸ್ಮಾನ್ ತ್ವಾವೇಶೋ ಅನಮೀವೋಭವಾನಃ ॥ ಯತ್ವೇಮಹೇಪ್ರತಿ-ತನ್ನೋಜುಷಸ್ವಶಂನ್ನೋಭವದ್ವಿಪದೇಶಂ ಚತುಷ್ಪದೇ ॥ ವಾಸ್ತೋಷ್ಪತೇ ಪ್ರತ ರಣೋ ನ ಏಧಿಗಯಸ್ಫಾನೋಗೋಭಿರಶ್ವೇಭಿರಿಂದೋ ॥ ಅಜರಾಸಸ್ತೇ ಸಖ್ಯೇಸ್ಯಾಮ

ಆಮೇಲೆ ಯಜಮಾನನು ಉತ್ತರಕಲಶವನ್ನು ಬಲಗೈಯಲ್ಲೂ ದಕ್ಷಿಣಕಲಶವನ್ನು ಎಡಗೈಯಲ್ಲೂ ಹಿಡಿದು ಮೇಲೆ ಮುಚ್ಚಿದ ಪೂರ್ಣಪಾತ್ರವನ್ನು ಕೆಳಗಿಟ್ಟು "ವಾಸ್ತೋಷ್ಪತೇ..." ಮಂತ್ರಗಳನ್ನು ಹೇಳುತ್ತ ಧಾರೆಯಾಗಿ ನೀರನ್ನು ತಟ್ಟೆಯಲ್ಲಿ ಸುರಿಯಬೇಕು. ಆಮೇಲೆ ಯಜಮಾನನ ಎಡಭಾಗದಲ್ಲಿ ಪತ್ನಿಯನ್ನು ಕುಳ್ಳಿರಿಸಿ, ಉತ್ತರದಿಕ್ಕಿಗೆ ಮುಖಮಾಡಿ ನಿಂತ ಬ್ರಾಹ್ಮಣರು "ಸಮುದ್ರ ಜ್ಯೇಷ್ಠಾ..." ಮಂತ್ರಗಳನ್ನು ಹೇಳುತ್ತ ತಟ್ಟೆಯಲ್ಲಿದ್ದ ನೀರನ್ನು ಪಲ್ಲವ ಮತ್ತು ದೂರ್ವಾಂಕುರಗಳಿಂದ ಅಭಿಷೇಚನ ಮಾಡಬೇಕು.

Scanned by CamScanner

Scanned with CamScanner

ಪಿತೇವ ಪುತ್ರಾನ್ಪ್ರತಿನೋಜುಷಸ್ವ ॥ ವಾಸ್ತೋಷ್ಪತೇ ಶಗ್ಮಯಾ ಸಂಸದಾತೇ ಸಕ್ಷೀಮಹಿರಣ್ವಯಾಗಾತುಮತ್ಯಾ ॥ ಪಾಹಿಕ್ಷೇಮಉತಯೋಗೇ ವರಂ ನೋ ಯೂಯಂ ಪಾತ ಸ್ವಸ್ತಿಭಿಃ ಸದಾನಃ ॥ ಅಮೀವಹಾವಾಸ್ತೋಷ್ಪತೇವಿಶ್ವಾರೂಪಾಣ್ಯಾವಿಶನ್ ॥ ಸಖಾಸುಷೇವ ಏಧಿ ನಃ ॥ ಶಿವಂ ಶಿವಂ ಶಿವಂ ॥

ತತಃ ಕರ್ತುರ್ವಾಮತಃ ಪತ್ನೀಮುಪವೇಶ್ಯ ಪಾತ್ರಪಾತಿತಜಲೇನ ಪಲ್ಲವ ದೂರ್ವಾಭಿಃ ಉದಙ್ಮುಖಾಸ್ತಿಷ್ಠಂತೋ ವಿಪ್ರಾಃ ಅಭಿಷಿಂಚೇಯುಃ ॥ ಸಮುದ್ರಜ್ಯೇಷ್ಠಾ ಇತಿ ಚತಸೃಣಾಂ ವಸಿಷ್ಠಾ ಆಪಸ್ತ್ರಿಷ್ಟುಪ್ ॥ ತ್ರಾಯಂತಾಮಿತಿ ತಿಸೃಣಾಂ ವಿಶ್ವಾಮಿತ್ರಜಮದಗ್ನಿವಸಿಷ್ಠಾ ಆಪೋಽನುಷ್ಟುಪ್ ॥ ಇಮಾ ಆಪ ಇತಿ ತಿಸೃಣಾಂ ಐತರೇಯ ಆಪೋಽನುಷ್ಟುಬ್ಬೃಗತ್ಯನುಷ್ಟುಭಃ ॥ ದೇವಸ್ಯತ್ವೇತ್ಯಸ್ಯೈತರೇಯಃ ಸವಿತಾ-ಶ್ವಿನೌ ಪೂಷಾ ಚ ಯಜುಃ ॥ ಸಮಸ್ತವ್ಯಾಹೃತೀನಾಂ ಪರಮೇಷ್ಠೀ ಪ್ರಜಾಪತಿರ್ಬೃಹತೀ ಅಭಿಷೇಕೇ ವಿನಿಯೋಗಃ ॥

ಓಂ ಸಮುದ್ರಜ್ಯೇಷ್ಠಾಃ ಸಲಿಲಸ್ಯ ಮಧ್ಯಾತ್ಪುನಾನಾಯಂತ್ಯನಿವಿಶ-ಮಾನಾಃ ॥ ಇಂದ್ರೋ ಯಾ ವಜ್ರೀವೃಷಭೋರರಾದತಾ ಆಪೋ ದೇವೀರಿಹ-ಮಾಮವಂತು ॥ ಯಾ ಆಪೋ ದಿವ್ಯಾ ಉತವಾಸ್ರವಂತಿ ಖನಿತ್ರಿಮಾ ಉತ-ವಾಯಾಃ ಸ್ವಯಂಜಾಃ ॥ ಸಮುದ್ರಾರ್ಥಾಯಾಃ ಶುಚಯಃ ಪಾವಕಾಸ್ತಾ ಆಪೋದೇವೀರಿಹಮಾಮವಂತು ॥ ಯಾಸಾಂ ರಾಜಾ ವರುಣೋ ಯಾತಿ ಮಧ್ಯೇ ಸತ್ಯಾನೃತೇ ಅವಪಶ್ಯಂ ಜನಾನಾಂ ॥ ಮಧುಶ್ಚುತಃ ಶುಚಯೋ ಯಾಃ ಪಾವಕಾಸ್ತಾ ಆಪೋ ದೇವೀರಿಹಮಾಮವಂತು ॥ ಯಾಸು ರಾಜಾ ವರುಣೋ ಯಾಸುಸೋಮೋ ವಿಶ್ವೇದೇವಾಯಾಸೂರ್ಜಂಮದಂತಿ ॥ ವೈಶ್ವಾನರೋ ಯಾಸ್ವಗ್ನಿಃ ಪ್ರವಿಷ್ಟಾಸ್ತಾ ಆಪೋ ದೇವೀರಿಹ ಮಾಮವಂತು ॥ ತ್ರಾಯಂತಾಮಿಹ-ದೇವಾಸ್ತ್ರಾಯತಾಂ ಮರುತಾಂಗಣಃ ॥ ತ್ರಾಯಂತಾಂ ವಿಶ್ವಾಭೂತಾನಿ ಯಥಾ-ಯಮರಪಾಅಸತ್ ॥ ಆಪ ಇದ್ವಾ ಉಭೇಷಜೀರಾಪೋ ಅಮೀವಚಾತನೀಃ ॥

Scanned by CamScanner

Scanned with CamScanner

ಆಪಃ ಸರ್ವಸ್ಯ ಭೇಷಜೀಸ್ತಾಸ್ತೇ ಕೃಣ್ವಂತು ಭೇಷಜಂ ॥ ಹಸ್ತಾಭ್ಯಾಂ ದಶಶಾ-ಖಾಭ್ಯಾಂ ಜಿಹ್ವಾವಾಚಃ ಪುರೋಗವೀ ॥ ಅನಾಮಯಿತ್ನುಭ್ಯಾಂತ್ವಾತಾಭ್ಯಾಂ-ತ್ವೋಪಸ್ಪೃಶಾಮಸಿ ॥ ಇಮಾ ಆಪಃ ಶಿವತಮಾ ಇಮಾಃ ಸರ್ವಸ್ಯ ಭೇಷಜೀಃ ॥ ಇಮಾರಾಷ್ಟ್ರಸ್ಯವರ್ಧನೀರಿಮಾರಾಷ್ಟ್ರಭೃತೋಮೃತಾಃ ॥ ಯಾಭಿರಿಂದ್ರಮಭ್ಯ-ಷಿಂಚತ್ಪ್ರಜಾಪತಿಃ ಸೋಮಂ ರಾಜಾನಂ ವರುಣಂ ಯಮಂ ಮನುಂ ॥ ತಾಭಿ-ರದ್ಭಿರಭಿಷಿಂಚಾಮಿತ್ವಾಮಹಂ ರಾಜ್ಞಾಂತ್ವಮಧಿರಾಜೋಭವೇಹ ॥ ಮಹಾಂ-ತಂತ್ವಾಮಹೀನಾಂ ಸಮ್ರಾಜಂ ಚರ್ಷಣೀನಾಂ ದೇವೀಜನಿತ್ಯಜೀಜನದ್ಭದ್ರಾಜ-ನಿತ್ಯಜೀಜನತ್ ॥ ದೇವಸ್ಯತ್ವಾ ಸವಿತುಃ ಪ್ರಸವೇಶ್ವಿನೋರ್ಬಾಹುಭ್ಯಾಂ ಪೂಷ್ಣೋಹಸ್ತಾಭ್ಯಾಮಗ್ನೇಸ್ತೇಜಸಾಸೂರ್ಯಸ್ಯವರ್ಚಸೇಂದ್ರಸ್ಯೇಂದ್ರಿಯೇಣಾಭಿಷಿಂ-ಚಾಮಿ ॥ ಬಲಾಯಶ್ರಿಯೈಯಶಸೇನ್ನಾದ್ಯಾಯ ॥ ಓಂ ಭೂರ್ಭುವಃ ಸ್ವಃ ಅಮೃತಾಭಿಷೇಕೋಽಸ್ತು ॥ ಶಾಂತಿಃ ಪುಷ್ಟಿಃ ತುಷ್ಟಿಶ್ಚಾಸ್ತು ॥ ದ್ವಿರಾಚಮೇತ್ ॥ ("ಬಲಾಯಶ್ರಿಯೈ ಯಶಸೇನ್ನಾದ್ಯಾಯ" ಇತ್ಯಾದ್ಯನಂತರಂ ॥ ಸುರಾಸ್ತ್ವಾಮ ಭಿಷಿಂಚಂತು ಬ್ರಹ್ಮವಿಷ್ಣುಮಹೇಶ್ವರಾಃ ॥ ವಾಸುದೇವೋ ಜಗನ್ನಾಥಃ ತಥಾ ಸಂಕರ್ಷಣೋ ವಿಭುಃ ॥ ಪ್ರದ್ಯುಮ್ನಶ್ಚಾನಿರುದ್ಧಶ್ಚ ಭವಂತು ವಿಜಯಾಯ ತೇ ॥ ಆಖಂಡಲೋಽಗ್ನಿರ್ಭಗವಾನ್ ಯಮೋ ವೈ ನಿರ್ಋತಿಸ್ತಥಾ ॥ ವರುಣಃ

ಕೆಲವರು **"ಬಲಾಯಶ್ರಿಯೈಯಶಸೇನ್ನಾದ್ಯಾಯ"** ಎಂದಾದ ಮೇಲೆ, **"ಸುರಾಸ್ತ್ವಾ-ಮಭಿಷಿಂಚಂತು..."** ಈ ಶ್ಲೋಕಗಳನ್ನೂ ಹೇಳಿ ಅಭಿಷೇಚನ ಮಾಡಿ, **"ಭೂರ್ಭುವಃ ಸ್ವಃ ಅಮೃತಾಭಿಷೇಕೋಽಸ್ತು"** ಎಂದು ಪರಿಸಮಾಪ್ತಿ ಮಾಡುತ್ತಾರೆ.

ಅಭಿಷೇಚನವಾದ ಮೇಲೆ ಕಲಶೋದಕ ತೀರ್ಥವನ್ನೂ, ಪ್ರಸಾದವನ್ನೂ ಬ್ರಾಹ್ಮಣರು ಯಜಮಾನನಿಗೆ ಹಾಗೂ ಇತರರಿಗೆ ಕೊಡಬೇಕು. ಆಮೇಲೆ ಯಜಮಾನನು, ಎರಡು ಸಲ ಆಚಮನ ಮಾಡಿ ಬ್ರಾಹ್ಮಣರಿಗೆ ದಕ್ಷಿಣೆ ಕೊಟ್ಟು **"ಆಮೂರಜ..."** ಎಂಬ ಮಂತ್ರವನ್ನು ಹೇಳಿ **"ಪುಣ್ಯಾಹವಾಚನ....ರಸ್ತ್ವಿತಿ ಭವಂತೋ ಬ್ರುವಂತು"** ಎಂದು ಪ್ರಾರ್ಥಿಸಬೇಕು. ಬ್ರಾಹ್ಮಣರು **"ಪುಣ್ಯಾಹವಾಚನ.....ರಸ್ತು"** ಎಂದು ಹೇಳಬೇಕು.

Scanned by CamScanner

ಪವನಶ್ಚೈವ ಧನಾಧ್ಯಕ್ಷಸ್ತಥಾ ಶಿವಃ ॥ ಬ್ರಹ್ಮಣಾ ಸಹಿತಾಃ ಸರ್ವೇ ದಿಕ್ಪಾಲಾಃ ಪಾಂತು ತೇ ಸದಾ ॥ ಕೀರ್ತಿರ್ಲಕ್ಷ್ಮೀರ್ಧೃತಿರ್ಮೇಧಾ ಪುಷ್ಟಿಃ ಶ್ರದ್ಧಾ ಕ್ರಿಯಾ ಮತಿಃ ॥ ಬುದ್ಧಿರ್ಲಜ್ಜಾವಪುಃಶಾಂತಿಃ ಕ್ಷಾಂತಿಸ್ತುಷ್ಟಿಶ್ಚ ಮಾತರಃ ॥ ಏತಾಸ್ತ್ವಾ ಮಭಿಷಿಂಚಂತು ದೇವಪತ್ನ್ಯಃ ಸಮಾಗತಾಃ ॥ ಆದಿತ್ಯಶ್ಚಂದ್ರಮಾ ಭೌಮೋ ಬುಧಜೀವಸಿತಾರ್ಕಜಾಃ ॥ ಗ್ರಹಾಸ್ತ್ವಾಮಭಿಷಿಂಚಂತು ರಾಹುಕೇತುಶ್ಚ ಪೂಜಿತಾಃ ॥ ದೇವದಾನವಗಂಧರ್ವಾ ಯಕ್ಷರಾಕ್ಷಸಪನ್ನಗಾಃ ॥ ಋಷಯೋ ಮುನಯೋ ಗಾವೋ ದೇವಮಾತರ ಏವ ಚ ॥ ದೇವಪತ್ನ್ಯೋ ದ್ರುಮಾ ನಾಗಾ ದೈತ್ಯಾಶ್ಚಾಪ್ಸರಸಾಂ ಗಣಾಃ ॥ ಅಸ್ತ್ರಾಣಿ ಸರ್ವಶಸ್ತ್ರಾಣಿ ರಾಜಾನೋ ವಾಹನಾನಿ ಚ ॥ ಔಷಧಾನಿ ಚ ರತ್ನಾನಿ ಕಾಲಸ್ಯಾವಯವಾಶ್ಚ ಯೇ ॥ ಸರಿತಃ ಸಾಗರಾಃ ಶೈಲಾಃ ತೀರ್ಥಾನಿ ಜಲದಾ ನದಾಃ ॥ ಏತೇ ತ್ವಾಮಭಿಷಿಂಚಂತು ಸರ್ವಕಾಮಾರ್ಥಸಿದ್ಧಯೇ ॥ ಓಂ ಭೂರ್ಭುವಃ ಸ್ವಃ ಅಮೃತಾಭಿಷೇಕೋಽಸ್ತು ॥ ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು ॥ ದ್ವಿರಾಚಮೇತ್ ॥

ಆಮೂರಜಪ್ರತ್ಯಾವರ್ತಯೇಮಾಃ ಕೇತುಮದ್ದುಂದುಭಿರ್ವಾವದೀತಿ ॥ ಸಮಶ್ವಪರ್ಣಾಶ್ಚರಂತಿನೋನರೋಽಸ್ಮಾಕಮಿಂದ್ರರಥಿನೋ ಜಯಂತು ॥ ಪುಣ್ಯಾಹವಾಚನಫಲಸಮೃದ್ಧಿರಸ್ತ್ವಿತಿ ಭವಂತೋ ಬ್ರುವಂತು ॥ ಪುಣ್ಯಾಹವಾಚನಫಲಸಮೃದ್ಧಿರಸ್ತ್ವಿತಿ ವಿಪ್ರಾಃ ॥

॥ ಇತಿ ಪುಣ್ಯಾಹವಾಚನಂ ॥

Scanned by CamScanner

Scanned with CamScanner

॥ ಮಾತೃಕಾಪೂಜನಂ ॥

॥ಶ್ರೀಃ॥ ಗೌರೀ ಪದ್ಮಾ ಶಚೀ ಮೇಧಾ ಸಾವಿತ್ರೀ ವಿಜಯಾ ಜಯಾ ॥ ದೇವಸೇನಾ ಸ್ವಧಾ ಸ್ವಾಹಾ ಮಾತರೋ ಲೋಕಮಾತರಃ ॥ ಧೃತಿಃ ಪುಷ್ಟಿಸ್ತಥಾ ತುಷ್ಟಿರಾತ್ಮನಃ ಕುಲದೇವತಾ ॥ ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ ॥ ವಾರಾಹೀ ಚ ತಥೇಂದ್ರಾಣೀ ಚಾಮುಂಡಾಸಪ್ತ ಮಾತರಃ ॥ ಗೌರ್ಯೈ ನಮಃ ಗೌರೀಂ ಆವಾಹಯಾಮಿ ॥ ಪದ್ಮಾಯೈ ನಮಃ ಪದ್ಮಾಂ.... ॥ ಶಚ್ಯೈ.... ಶಚೀಂ.... ॥ ಮೇಧಾಯೈ... ಮೇಧಾಂ....॥ ಸಾವಿತ್ರ್ಯೈ... ಸಾವಿತ್ರೀಂ.... ॥ ವಿಜಯಾಯೈ.... ವಿಜಯಾಂ.... ॥ ಜಯಾಯೈ.... ಜಯಾಂ.... ॥ ದೇವ ಸೇನಾಯೈ... ದೇವಸೇನಾಂ... ॥ ಸ್ವಧಾಯೈ... ಸ್ವಧಾಂ.... ॥ ಸ್ವಾಹಾಯೈ..... ಸ್ವಾಹಾಂ...... ॥ ಮಾತೃಭ್ಯೋ......ಮಾತೄಃ...... ॥ ಲೋಕಮಾತೃಭ್ಯೋ..... ಲೋಕಮಾತೄಃ ॥ ಧೃತ್ಯೈ.... ಧೃತಿಂ.... ॥ ಪುಷ್ಟ್ಯೈ....ಪುಷ್ಟಿಂ.... ॥ ತುಷ್ಟ್ಯೈ... ತುಷ್ಟಿಂ..... ॥ ಆತ್ಮನಃ ಕುಲದೇವತಾಯೈ..... ಆತ್ಮನಃ ಕುಲದೇವತಾಂ..... ॥ ಬ್ರಾಹ್ಮ್ಯೈ ನಮಃ ಬ್ರಾಹ್ಮೀಂ... ॥ ಮಾಹೇಶ್ವರ್ಯೈ... ಮಾಹೇಶ್ವರೀಂ....॥ ಕೌಮಾರ್ಯೈ... ಕೌಮಾರೀಂ... ॥ ವೈಷ್ಣವ್ಯೈ... ವೈಷ್ಣವೀಂ ...॥ ವಾರಾಹ್ಯೈ... ವಾರಾಹೀಂ.... ॥ ಇಂದ್ರಾಣ್ಯೈ..... ಇಂದ್ರಾಣೀಂ... ॥ ಚಾಮುಂಡಾಯೈ... ಚಾಮುಂಡಾಂ... ॥ ಗಣಪತಯೇ ನಮಃ ಗಣಪತಿಂ ಆವಾಹಯಾಮಿ ॥ ದುರ್ಗಾಯೈ..... ದುರ್ಗಾಂ... ॥ ಕ್ಷೇತ್ರಪಾಲಾಯ... ಕ್ಷೇತ್ರಪಾಲಂ... ॥ ವಾಸ್ತೋಷ್ಪ ತಯೇ..... ವಾಸ್ತೋಷ್ಪತಿಂ..... ॥ ಗೌರ್ಯಾದಿ ಷೋಡಶಮಾತೄಃ ಬ್ರಾಹ್ಮ್ಯಾದಿ

ಮಾತೃಕಾಪೂಜನವಿಧಿ:- ಅಕ್ಕಿಯ ರಾಶಿಯ ಮೇಲೆ, ಗೌರೀ ಮೊದಲಾಗಿ ಹದಿನಾರು, ಬ್ರಾಹ್ಮೀ ಮೊದಲಾಗಿ ಏಳು ಮತ್ತು ಗಣಪತಿ, ದುರ್ಗಾ ಕ್ಷೇತ್ರಪಾಲ, ವಾಸ್ತೋಷ್ಪತಿ ಇಷ್ಟು ದೇವತೆಗಳನ್ನು **"ಗೌರ್ಯೈ ನಮಃ...ಆವಾಹಯಾಮಿ"** ಎಂದು ಆಯಾ ನಾಮಮಂತ್ರವನ್ನು ಹೇಳಿ ಆವಾಹಿಸಬೇಕು. ಆಮೇಲೆ ಕೈಯಲ್ಲಿ ಅಕ್ಕಿಕಾಳು (ಅಕ್ಷತೆ) ಹಿಡಿದು **"ತದಸ್ತು ಮಿತ್ರಾ"** ಎಂಬ ಮಂತ್ರವನ್ನು ಹೇಳಿ **"ಸುಪ್ರತಿಷ್ಠಿತಮಸ್ತು"** ಎಂದು ಹೇಳುತ್ತ ಅದನ್ನು ಹಾಕಬೇಕು.

Scanned by CamScanner

Scanned with CamScanner

ಸಪ್ತಮಾತೃಃ ಗಣಪತಿಂ ದುರ್ಗಾಂ ಕ್ಷೇತ್ರಪಾಲಂ ವಾಸ್ತೋಷ್ಪತಿಂ ಚ ಏತೇಷ್ವಕ್ಷತ ಪುಂಜೇಷ್ವಾವಾಹಯಾಮಿ ॥ ಓಂ ತದಸ್ತು ಮಿತ್ರಾವರುಣಾತದಗ್ನೇಶಂ-ಯೋರಸ್ಮಭ್ಯಮಿದಮಸ್ತುಶಸ್ತಂ ॥ ಅಶೀಮಹಿಗಾಧಮುತಪ್ರತಿಷ್ಠಾಂ ನಮೋ ದಿವೇ ಬೃಹತೇ ಸಾದನಾಯ ॥ ಗೃಹಾವೈ ಪ್ರತಿಷ್ಠಾಸೂಕ್ತಂ ತತ್ಪ್ರತಿಷ್ಠಿತತಮಯಾ ವಾಚಾ ಶಂಸ್ತವ್ಯಂ ತಸ್ಮಾದ್ಯದ್ಯಪಿ ದೂರ ಇವ ಪಶೂಂಲ್ಲಭತೇ ಗೃಹಾನೇವೈ ನಾನಾ ಜಿಗಮಿಷತಿ ಗೃಹಾಹಿ ಪಶೂನಾಂ ಪ್ರತಿಷ್ಠಾ ಪ್ರತಿಷ್ಠಾ ॥ ಸುಪ್ರತಿಷ್ಠಿತ-ಮಸ್ತು ॥

ಓಂ ಭೂರ್ಭುವ ಸ್ವಃ ಗೌರ್ಯಾದ್ಯಾವಾಹಿತದೇವತಾಭ್ಯೋ ನಮಃ ... ಇತಿ ಷೋಡಶೋಪಚಾರೈಃ ಸಂಪೂಜ್ಯ ॥ ಓಂ ಗೌರೀರ್ಮಿಮಾಯಸ-ಲಿಲಾನಿತಕ್ಷತ್ಯೇಕಪದೀದ್ವಿಪದೀ ಸಾ ಚತುಷ್ಪದೀ ॥ ಅಷ್ಟಾಪದೀ ನವಪದೀ ಬಭೂವುಷೀ ಸಹಸ್ರಾಕ್ಷರಾ ಪರಮೇವ್ಯೋಮನ್ ॥ ಇತಿ ಪುಷ್ಪಾಂಜಲಿಂ ಸಮರ್ಪ್ಯ ॥ ಅನೇನ ಷೋಡಶೋಪಚಾರಪೂಜನೇನ ಗೌರ್ಯಾದ್ಯಾವಾಹಿತ ದೇವತಾಃ ಪ್ರೀಯಂತಾಂ ॥

Scanned by CamScanner

Scanned with CamScanner

॥ ನಾಂದೀಶ್ರಾದ್ಧಂ ॥

[ವೃದ್ಧೌ ತೀರ್ಥೇ ಚ ಸನ್ಯಸ್ತೇ ತಾತೇ ಚ ಪತಿತೇ ಸತಿ ॥ ಏಭ್ಯ ಏವ ಪಿತಾ ದದ್ಯಾತ್ತೇಭ್ಯೋ ದದ್ಯಾತ್ ಸ್ವಯಂ ಸುತಃ ॥ ಪಿತ್ರನ್ಯಕರ್ತೃಕಸಂಸ್ಕಾರಾದೌ ಸಂಸ್ಕಾರ್ಯಪಿತ್ರಾದಿಭ್ಯ ಏವ ದದ್ಯಾನ್ನ ಸ್ವೇಭ್ಯಃ ॥

ಸದೂರ್ವಾಂಕುರಾನಕ್ಷತಾನ್ ಜಲಂ ಚಾದಾಯ ॥ ಸತ್ಯವಸುಸಂಜ್ಞಕಾಃ ವಿಶ್ವೇದೇವಾಃ ನಾಂದೀಮುಖಾಃ ಭೂರ್ಭುವಃ ಸ್ವಃ ಇದಂ ವಃ ಪಾದ್ಯಂ ಸ್ವಾಹಾ ನಮ ಇಯಂ ಚ ವೃದ್ಧಿಃ ॥ ಮಾತೃಪಿತಾಮಹೀ ಪ್ರಪಿತಾಮಹ್ಯಃ ನಾಂದೀಮುಖ್ಯಃ ಭೂರ್ಭುವಃ ಸ್ವಃ ಇದಂ ವಃ ॥ ಪಾದ್ಯಂ...... ವೃದ್ಧಿಃ ॥ ಪಿತೃಪಿತಾಮಹ ಪ್ರಪಿತಾಮಹಾಃ ನಾಂದೀಮುಖಾ ಭೂರ್ಭುವಃ ಸ್ವಃ ಇದಂ...... ವೃದ್ಧಿಃ ॥ ಮಾತಾಮಹ ಮಾತುಃ ಪಿತಾಮಹ ಮಾತುಃ ಪ್ರಪಿತಾಮಹಾಃ ಪತ್ನೀಸಹಿತಾಃ ನಾಂದೀಮುಖಾಃ ಭೂರ್ಭುವಃ ಸ್ವಃ ಇದಂ... ..... ವೃದ್ಧಿಃ ।

ಸತ್ಯವಸುಸಂಜ್ಞಕಾಃ ವಿಶ್ವೇದೇವಾಃ ನಾಂದೀಮುಖಾಃ ಭೂರ್ಭುವಃ ಸ್ವಃ ಇದಂ ವಃ ಆಸನಗಂಧಾದ್ಯುಪಚಾರಕಲ್ಪನಂ ಸ್ವಾಹಾ ನಮ ಇಯಂ ಚ ವೃದ್ಧಿಃ ॥ ಮಾತೃಪಿತಾಮಹೀ ಪ್ರಪಿತಾಮಹ್ಯಃ ನಾಂದೀಮುಖ್ಯಃ ಭೂರ್ಭುವಃ

॥ ವೃದ್ಧೌ ತೀರ್ಥೇಚ... ॥ ನಾಂದೀಶ್ರಾದ್ಧ ಮುಂತಾದವುಗಳನ್ನು ಮಾಡುವಾಗ ಮಾಡುವ ಕರ್ತೃವಿನ ತಂದೆಯು ಸನ್ಯಾಸಿ ಅಥವಾ ಪತಿತನಾಗಿದ್ದರೆ, ತಂದೆಯು ಯಾರು ಯಾರಿಗೆ ತರ್ಪಣಾದಿಗಳನ್ನು ಕೊಡಬೇಕೋ ಅವರೆಲ್ಲರಿಗೂ ಈತನು ಕೊಡಬೇಕು. ಸಂಸ್ಕಾರ್ಯನಾದವನ ಸಂಸ್ಕಾರವನ್ನು ಆತನ ತಂದೆಯಲ್ಲದೆ ಚಿಕ್ಕಪ್ಪ, ಮಾವ ಮುಂತಾಗಿ ಬೇರೆ ಯಾರಾದರೂ ಮಾಡುವ ಸಂದರ್ಭದಲ್ಲಿ ಸಂಸ್ಕಾರ್ಯನ ಪಿತೃಗಳಿಗೇ ತರ್ಪಣ ಕೊಡಬೇಕೇ ವಿನಹ ಮಾಡುವವನ ಪಿತೃಗಳಿಗಲ್ಲ.

ಕೈಯಲ್ಲಿ ದೂರ್ವೆ ಅಕ್ಷತೆ ಮತ್ತು ನೀರನ್ನು ಹಿಡಿದು **"ಸತ್ಯವಸುಸಂಜ್ಞಕಾ"** ಇತ್ಯಾದಿ ಹೇಳಿ **"ಇದಂ ವಃ ಪಾದ್ಯಂ"** ಎಂದು ಹೇಳುತ್ತ ನೀರು ಬಿಡಬೇಕು. ಹಾಗೆಯೇ ಮುಂದೆ ತಾಯಿ, ತಂದೆಯ ತಾಯಿ, ಅಜ್ಜನ ತಾಯಿ; ತಂದೆ, ಅಜ್ಜ, ತಂದೆಯ ಅಜ್ಜ; ತಾಯಿಯ ತಂದೆ, ತಾಯಿಯ ಅಜ್ಜ, ತಾಯಿಯ ತಂದೆಯ ಅಜ್ಜ, ಪತ್ನಿಯರಿಂದ ಒಡಗೂಡಿದ ಇವರಿಗೆ-ಎಂದು ಮೊದಲಾಗಿ ಹೇಳಿ ಮೊದಲಿನಂತೆ ನೀರು ಬಿಡಬೇಕು. ಮೊದಲಿನಂತೆ **"ಸತ್ಯವಸುಸಂಜ್ಞಕಾಃ"** ಎಂಬಲ್ಲಿಂದ ಆರಂಭಿಸಿ **"ಮಾತಾಮಹ"** ಎಂಬಲ್ಲಿವರೇಗೆ ಹೇಳುತ್ತ

Scanned by CamScanner

ಸ್ವಃ ಇದಂ ವಃ.... ವೃದ್ಧಿಃ ॥ ಪಿತೃಪಿತಾಮಹಾಃ ನಾಂದೀ ಮುಖಾಃ ಭೂರ್ಭುವಃ ಸ್ವಃ ಇದಂ ..... ವೃದ್ಧಿಃ ॥ ಮಾತಾಮಹ ಮಾತುಃ ಪಿತಾಮಹ ಮಾತುಃ ಪ್ರಪಿತಾಮಹಾಃ ಪತ್ನೀಸಹಿತಾಃ ನಾಂದೀಮುಖಾಃ ಭೂರ್ಭುವಃ ಸ್ವಃ ಇದಂ.... ವೃದ್ಧಿಃ ॥ ಗೌರ್ಯಾದಿ ಷೋಡಶ ಮಾತರಃ ಬ್ರಾಹ್ಮ್ಯಾದಿ ಸಪ್ತಮಾತರಃ ಏತಾಃ ಗಣಪತಿ ಚತುಷ್ಟಯಸಹಿತಾಃ ಭೂರ್ಭುವಃ ಸ್ವಃ ಇದಂ ವಃ ಯುಗ್ಮಬ್ರಾಹ್ಮಣಭೋಜನಪರ್ಯಾಪ್ತಾನ್ನಸ್ಥಾನೇ ಕಿಂಚಿದ್ಧಿರಣ್ಯಂ ಸ್ವಾಹಾ ನಮ ಇಯಂ ಚ ವೃದ್ಧಿಃ ॥ ಸತ್ಯವಸುಸಂಜ್ಞಕಾ ವಿಶ್ವೇದೇವಾಃ ನಾಂದೀಮುಖಾಃ ಭೂರ್ಭುವಃ ಸ್ವಃ ಇದಂ ವಃ ಯಗ್ಮ.. ವೃದ್ಧಿಃ ॥ ಮಾತೃಪಿತಾಮಹೀಪ್ರಪಿತಾಮಹ್ಯಃ ನಾಂದೀಮುಖ್ಯಃ ಭೂರ್ಭುವಃ ಸ್ವಃ ಇದಂ ....ವೃದ್ಧಿಃ ॥ ಪಿತೃಪಿತಾಮಹಪ್ರಪಿತಾಮಹಾಃ ನಾಂದೀಮುಖಾಃ ಭೂರ್ಭುವಃ ಸ್ವಃ ಇದಂ.... ವೃದ್ಧಿಃ ॥ ಮಾತಾಮಹ ಮಾತುಃ ಪಿತಾಮಹ ಮಾತುಃ ಪ್ರಪಿತಾಮಹಾಃ ಪತ್ನೀಸಹಿತಾಃ ನಾಂದೀಮುಖಾಃ ಭೂರ್ಭುವಃ ಸ್ವಃ ಇದಂ... ವೃದ್ಧಿಃ ॥ ಓಂ ಉಪಾಸ್ಮೈಗಾಯತಾ ನರಃಪವಮಾನಾಯೇಂದವೇ ॥ ಅಭಿದೇವಾಂ ಇಯಕ್ಷತೇ ॥ ಅಭಿತೇ ಮಧುನಾಪಯೋಥರ್ವಾಣೋ ಅಶಿಶ್ರಯುಃ । ದೇವಂ ದೇವಾಯ ದೇವಯು ॥ ಸನಃ ಪವಸ್ವಶಂಗವೇಶಂ ಜನಾಯಶಮರ್ವತೇ ॥ ಶಂರಾಜನ್ನೋಷಧೀಭ್ಯಃ ॥ ಬಭ್ರುವೇನುಸ್ವತವಸೇರು

ಪ್ರತಿಸಲವೂ ಆಸನ್ನಗಂಧಾದಿ ಉಪಚಾರಗಳನ್ನು ಕಲ್ಪಿಸಿಕೊಂಡು ನೀರು ಬಿಡಬೇಕು. ಗೌರ್ಯಾದಿ ಮಾತೆಯರು, ಸತ್ಯವಸು ವಿಶ್ವೇದೇವರು, **"ಮಾತೃ ಪಿತಾಮಹ..... ಪಿತೃಪಿತಾಮಹ... ಮಾತಾಮಹ..."** ಮುಂತಾಗಿ ಎಲ್ಲ ಐದು ವರ್ಗದವರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಇಬ್ಬರು ಬ್ರಾಹ್ಮಣರಿಗೆ ಹೊಟ್ಟೆ ತುಂಬ ಉಣ್ಣಲು ಸಾಕಾಗುವಷ್ಟು ದ್ರವ್ಯಗಳಿಗೆ ಪರ್ಯಾಪ್ತವಾದ ಸುವರ್ಣವನ್ನು ಕೊಡುವೆನೆಂದು ನೀರುಬಿಡಬೇಕು. ಮಾಡಿದ ನಾಂದೀಶ್ರಾದ್ಧದ ಪೂರ್ಣಫಲಸಿದ್ಧಿಗಾಗಿ ದ್ರಾಕ್ಷೆ ಮತ್ತು ನೆಲ್ಲಿಕಾಯಿಗಳಿಗೆ ಸಾಕಾಗುವಷ್ಟು ದಕ್ಷಿಣೆಯನ್ನು ಕೊಡುವೆನೆಂದು ನೀರು ಬಿಟ್ಟು ದಕ್ಷಿಣೆ ಕೊಡಬೇಕು. ಬಳಿಕ **"ಮಾತಾಮಾತಾ ಮಹೀ..."** ಎಂಬಲ್ಲಿಂದ...... **"ದಧಾತಿ ದಧಾತಿ"** ಎಂಬಲ್ಲಿ ವರೆಗೆ ಪ್ರಾರ್ಥಿಸಿ, ಬಂಗಾರದಿಂದ ಪಾತ್ರೆಯನ್ನು ಬಾರಿಸಿ ಶಬ್ದ ಮಾಡಬೇಕು. **"ಅನೇಕ ನಾಂದೀಶ್ರಾದ್ಧೇನ..."** ಎಂದು ಹೇಳಿ ನೀರು ಬಿಡಬೇಕು.

Scanned by CamScanner

ಣಾಯದಿವಿಸ್ಪೃಶೇ ॥ ಸೋಮಾಯಗಾಥಮರ್ಚತ ॥ ಹಸ್ತಚ್ಯುತೇಭಿರದ್ರಿಭಿಃ ಸುತಂ ಸೋಮಂ ಪುನೀತನ ॥ ಮಧಾವಾಧಾವತಾಮಧು ॥ ಪ್ರಜಾಪತೇನತ್ವ-ದೇತಾನ್ಯನ್ಯೋ ವಿಶ್ವಾಜಾತಾನಿಪರಿತಾಬಭೂವ ॥ ಯತ್ಕಾಮಸ್ತೇ ಜುಹುಮ-ಸ್ತನ್ನೋ ಅಸ್ತು ವಯಂ ಸ್ಯಾಮಪತಯೋ ರಯೀಣಾಂ ॥ ಕೃತಸ್ಯ ನಾಂದೀ-ಶ್ರಾದ್ಧಸ್ಯ ಪ್ರತಿಷ್ಠಾಫಲಸಿದ್ಧ್ಯರ್ಥಂ ದ್ರಾಕ್ಷಾಮಲಕನಿಷ್ಕ್ರಯಿಣೀಂ ದಕ್ಷಿಣಾಂ ದಾತುಮಹಮುತ್ಸೃಜ್ಯೇ ॥

ಮಾತಾಪಿತಾಮಹೀಚೈವ ತಥೈವ ಪ್ರಪಿತಾಮಹೀ । ಪಿತಾಪಿತಾಮಹ-ಶ್ಚೈವ ತಥೈವ ಪ್ರಪಿತಾಮಹಃ ॥ ಮಾತಾಮಹಸ್ತತ್ಪಿತಾ ಚ ಪ್ರಮಾತಾಮಹ-ಕಾದಯಃ ॥ ಏತೇ ಭವಂತು ಸುಪ್ರೀತಾಃ ಪ್ರಯಚ್ಛಂತು ಚ ಮಂಗಲಂ ॥ ಓಂ ಇಳಾಮಗ್ನೇಪುರುದಂಸಂ ಸನಿಂಗೋಃ ಶಶ್ವತ್ತಮಂಹವಮಾನಾಯಸಾಧ ॥ ಸ್ಯಾನ್ನಃ ಸೂನುಸ್ತನಯೋ ವಿಜಾವಾಗ್ನೇ ಸಾತೇ ಸುಮತಿರ್ಭೂತ್ವಸ್ಮೇ ॥ ಇಳಾ-ಮುಪಹ್ವಯತೇ ಪಶವೋ ವಾ ಇಳಾಪಶೂನೇವ ತದುಪಹ್ವಯತೇ ಪಶೂನ್ಯ-ಜಮಾನೇ ದಧಾತಿ ದಧಾತಿ ॥ ಯಥಾಚಾರಂ ಹಿರಣ್ಯೇನ ಭಾಂಡವಾದನಂ ॥ ಅನೇನ ನಾಂದೀಶ್ರಾದ್ಧೇನ ನಾಂದೀಮುಖದೇವತಾಃ ಪ್ರೀಯಂತಾಂ ವೃದ್ಧಿಃ ।

ಕೃತಸ್ಯ ಕರ್ಮಣಃ ಸಾಂಗತಾಸಿದ್ಧ್ಯರ್ಥಂ ನಾನಾನಾಮಗೋತ್ರೇಭ್ಯೋ ಬ್ರಾಹ್ಮಣೇಭ್ಯಃ ಗಂಧಾದಿನಾ ಪೂಜಯಿಷ್ಯೇ ॥ ತೇಭ್ಯಃ ಭೂಯಸೀಂ ದಕ್ಷಿಣಾಂ

ಮಾಡಿದ ಕರ್ಮವು ಸಾಂಗವಾಗಿ ನೆರವೇರುವುದಕ್ಕಾಗಿ ಅನೇಕ ಗೋತ್ರಗಳ ಬ್ರಾಹ್ಮಣರಿಗೆ ಗಂಧಾದಿಗಳಿಂದ ಅರ್ಚಿಸಿ ದಕ್ಷಿಣೆಕೊಡುವೆನೆಂದು ಸಂಕಲ್ಪಿಸಿ ಹಾಗೇ ಮಾಡಬೇಕು. **"ಓಂ ಉತ್ತಿಷ್ಠ...ಪುನರಾಗಮನಾಯ ಚ"** ಎಂದು ಹೇಳಿ ಅಕ್ಷತೆಗಳನ್ನು ಹಾಕಬೇಕು.

ವಿವಾಹ ಮತ್ತು ಉಪನಯನಗಳಲ್ಲಿ **"ಸತ್ಯವಸು"** ವಿಶ್ವೇದೇವರೂ, ಸೋಮಯಾಗ, ಗರ್ಭಾಧಾನ, ಪುಂಸವನ, ಸೀಮಂತೋನ್ನಯನಾದಿ ಕರ್ಮಗಳ ಆರಂಭದ ನಾಂದೀಶ್ರಾದ್ಧದಲ್ಲಿ **"ಕ್ರತುದಕ್ಷ"** ವಿಶ್ವೇದೇವರೂ ಆಗಿರುತ್ತಾರೆ. ನಾಂದೀಶ್ರಾದ್ಧವು ವೃದ್ಧಿಶ್ರಾದ್ಧವಾದುದರಿಂದ ದರ್ಭೆಯ ಬದಲು ದೂರ್ವೆಯ ಪವಿತ್ರ ಹಾಕಿಕೊಳ್ಳಬೇಕು. ಯಜ್ಞಾದಿಗಳ ನಾಂದೀಶ್ರಾದ್ಧವಾದರೆ ಬುಡದ ಭಾಗವಿಲ್ಲದ ದರ್ಭಾಗ್ರಗಳನ್ನು ತೆಗೆದುಕೊಳ್ಳಬೇಕು.

Scanned by CamScanner

ದಾತುಮಹಮುತ್ಸೃಜ್ಯೇ ॥ ಓಂ ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂತಸ್ತ್ವೇ-
ಮಹೇ ॥ ಉಪಪ್ರಯಂತು ಮರುತಃ ಸುದಾನವಇಂದ್ರ ಪ್ರಾಶೂರ್ಭವಾಸಚಾ ॥
ಆಭ್ಯಾರಮಿತದ್ರಯೋನಿಪಿಕ್ತಂ ಪುಷ್ಕರೇ ಮಧು । ಅವತಸ್ಯ ವಿಸರ್ಜನೇ ॥ ಯಾಂತು
ದೇವಗಣಾಃ ಸರ್ವೇ ಪೂಜಾಮಾದಾಯ ಪಾರ್ಥಿವೀಂ ॥ ಇಷ್ಟಕಾಮಪ್ರಸಿದ್ಧ್ಯರ್ಥಂ
ಪುನರಾಗಮನಾಯ ಚ ॥ ಇತಿ ಆವಾಹಿತದೇವತಾ ಉತ್ಥಾಪಯೇತ್ ॥
ಕರ್ಮಾಂಗದೇವತಾಸ್ವರೂಪೀ ಶ್ರೀ ಪರಮೇಶ್ವರಃ ಪ್ರೀಯತಾಂ ॥

॥ ಇತಿ ನಾಂದೀಶ್ರಾದ್ಧಂ ॥

Scanned by CamScanner

Scanned with CamScanner

೧೬

ಕರ್ಮಾಂಗದೇವತಾಃ

ಶ್ರೀಃ ॥ ವಿವಾಹಸ್ಯ ಅಗ್ನಿರ್ದೇವತಾ । ತೇನ ವಿವಾಹಾಂಗಭೂತ-ಸ್ವಸ್ತಿವಾಚನಾದ್ಯಂತೇ ಕರ್ಮಾಂಗದೇವತಾ ಅಗ್ನಿಃ ಪ್ರೀಯತಾಮಿತಿ ವದೇತ್ ॥ ಔಪಾಸನೇ ಅಗ್ನಿಸೂರ್ಯಪ್ರಜಾಪತಯಃ ಸ್ಥಾಲೀಪಾಕೇ ಅಗ್ನಿಃ ಗರ್ಭಾಧಾನೇ ಬ್ರಹ್ಮಾ ಪುಂಸವನೇ ಪ್ರಜಾಪತಿಃ ಸೀಮಂತೇ ಧಾತಾ ಜಾತಕರ್ಮಣಿ ಮೃತ್ಯುಃ ನಾಮಕರ್ಮನಿಷ್ಕ್ರಮಣಾನ್ನಪ್ರಾಶನೇಷು ಸವಿತಾ ಚೌಲೇ ಕೇಶಿನಃ ಉಪ-ಯನನೇ ಇಂದ್ರಶ್ರದ್ಧಾಮೇಧಾಃ ಅಂತೇ ಸುಶ್ರವಾಃ ಪುನರುಪನಯನೇ ಅಗ್ನಿಃ ಸಮಾವರ್ತನಸ್ಯೇಂದ್ರಃ ಉಪಕರ್ಮಣಿ ವ್ರತೇಷು ಚ ಸವಿತಾ ॥ ವಾಸ್ತುಹೋಮೇ ವಾಸ್ತೋಷ್ಪತಿಃ ಅಂತೇ ಪ್ರಜಾಪತಿಃ ಆಗ್ರಹಣೇ ಆಗ್ರಯಣದೇವತಾ ಸರ್ಪಬಲೇಃ ಸರ್ಪಾಃ ತಡಾಗಾದೀನಾಂ ವರುಣಃ ಗ್ರಹಯಜ್ಞೇ ನವಗ್ರಹಾಃ ॥ ಕೂಷ್ಮಾಂಡ ಹೋಮೇ ಚಂದ್ರಾಯಣೇ ಅಗ್ನ್ಯಾಧಾನೇ ಚ ಅಗ್ನ್ಯಾಧಯಃ ಅಗ್ನಿಷ್ಟೋಮಸ್ಯ ಅಗ್ನಿಃ ಅನ್ಯೇಷ್ವಿಷ್ಟಕರ್ಮಸು ಪ್ರಜಾಪತಿಃ ॥

॥ ಇತಿ ಕರ್ಮಾಂಗದೇವತಾ ಊಹನೀಯಾಃ ॥

ಬೇರೆ ಬೇರೆ ಕರ್ಮಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಕರ್ಮಾಂಗದೇವತೆಗಳನ್ನು ನಿರ್ದೇಶಿಸಿದ್ದಾರೆ. ಆದ್ದರಿಂದ ವಿವಾಹದ ಅಂಗವಾಗಿ ಮಾಡಿದ ಪುಣ್ಯಾಹವಾಚನದಲ್ಲಿ **"ಕರ್ಮಾಂಗದೇವತಾ ಅಗ್ನಿಃ ಪ್ರೀಯತಾಂ"** ಎಂದು ಹೇಳಬೇಕು. ಹಾಗೆಯೇ ಈ ಮುಂದೆ ನಿರ್ದೇಶಿಸಿದಂತೆ ಕರ್ಮ ಮತ್ತು ಆ ಕರ್ಮದ ಅಂಗದೇವತೆ ಯಾರೆಂದು ತಿಳಿದು ಆಯಾ ದೇವತೆ 'ಪ್ರೀಯತಾಂ' ಎಂದು ಹೇಳಬೇಕು. ೧. ಔಪಾಸನಹೋಮ ಅಗ್ನಿ ಸೂರ್ಯ ಪ್ರಜಾಪತಿ. ೨. ಸ್ಥಾಲೀಪಾಕ ಅಗ್ನಿ. ೩. ಗರ್ಭಾಧಾನ ಬ್ರಹ್ಮ. ೪. ಪುಂಸವನ ಪ್ರಜಾಪತಿ. ೫. ಸೀಮಂತೋನ್ನಯನ ಧಾತಾ. ೬. ಜಾತಕರ್ಮ ಮೃತ್ಯು. ೭. ೮. ೯. ಜಾತಕರ್ಮ ನಿಷ್ಕ್ರಮ ಅನ್ನಪ್ರಾಶನ ಸವಿತಾ. ೧೦. ಚೌಲ ಕೇಶಿನ. ೧೧. ಉಪನಯನ ಇಂದ್ರ ಶ್ರದ್ಧಾ ಮೇಧಾ, ಉಪನಯನಾಂತ್ಯದಲ್ಲಿ ಸುಶ್ರವ. ೧೨. ಪುನರುಪನಯನ ಅಗ್ನಿ. ೧೩. ಸಮಾವರ್ತನ ಇಂದ್ರ. ೧೪. ಉಪಾಕರ್ಮ ಮತ್ತು ಇತರ ವ್ರತಗಳು ಸವಿತಾ. ೧೫. ವಾಸ್ತುಹೋಮ ವಾಸ್ತೋಷ್ಪತಿ ಅಂತ್ಯದಲ್ಲಿ ಪ್ರಜಾಪತಿ. ೧೬. ಆಗ್ರಯಣ (ಕಾರ್ತಿಕ ಪೌರ್ಣಮಿಯಂದು ನೂತನ ದಂಪತಿಗಳು ಮಾಡುವ ಹೋಮ) ಆಗ್ರಯಣ. ೧೭. ಸರ್ಪಬಲಿ ಸರ್ಪ ೧೮. ಕೆರೆ ಸರೋವರ ಇತ್ಯಾದಿಗಳಿಗೆ ಸಂಬಂಧಿಸಿದ ಕರ್ಮ ವರುಣ. ೧೯. ಗ್ರಹಯಜ್ಞ ನವಗ್ರಹಗಳು. ೨೦. ೨೧. ೨೨. ಕೂಷ್ಮಾಂಡಹೋಮ, ಚಾಂದ್ರಾಯಣ, ಅಗ್ನ್ಯಾಧಾನ ಅಗ್ನಿ. ೨೩. ಅಗ್ನಿಷ್ಟೋಮ ಅಗ್ನಿ. ಇತರ ಕರ್ಮಗಳಲ್ಲಿ ಪ್ರಜಾಪತಿ.

Scanned by CamScanner

೧೨

ಮಂಡಪದೇವತಾ ಪ್ರತಿಷ್ಠಾ

॥ ಉಪನಯನ ವಿವಾಹ ಪೂರ್ವದಿನಕೃತ್ಯಂ ॥

ಶ್ರೀಃ ॥ ಸಾಚೇತ್ಥಂ ॥ ದೂರ್ವಾಶಮೀಪಲ್ಲವಕುಲದೇವತಾವೃಕ್ಷಫಲ-ವಾನಾಮ್ರಾದಿಪ್ರಶಸ್ತವೃಕ್ಷಪತ್ರವೇಷ್ಟಿತಾನ್ ಸೂತ್ರೇಣ ಷೋಢಾ ವೇಷ್ಟ-ಯೇತ್ ॥ ತತ್ರೈಕತ್ರಮುಸಲಮೇಕತ್ರಛುರಿಕಾದಿಶಸ್ತ್ರಂ ಮಧ್ಯೇ ಪ್ರಕ್ಷಿಪ್ಯ ವೇಷ್ಟಯೇತ್ ॥ ತಾನಿ ಷಡ್ವಂಶಪಾತ್ರೇ ನಿಧಾಯ ತನ್ಮಧ್ಯೇ ಉದಕ್ಸಂಸ್ಥೇಷು ಚತುರ್ಷು ಕ್ರಮೇಣ ನಂದಿನೀಂ ನಲಿನೀಂ ಮೈತ್ರಾಂ ಉಮಾಂ ಪಶುವರ್ಧಿನೀಂ ಭಗವತೀಂ ಚ ಆವಾಹ್ಯ ತಂಡುಲಪೂರ್ಣೇ ಹರಿದ್ರಾಖಂಡಪೂಗೀಫಲಯುತೇ ನ್ಯುಬ್ಜಶರಾವಪಿಹಿತೇ ಶರಾವೇಣ ಸಹ ಸೂತ್ರವೇಷ್ಟಿತೇ ಹರಿದ್ರಾದಿರಂಜಿತೇ ಕಲಶೇ ಅವಿಘ್ನಸಂಜ್ಞಂ ಚಾವಾಹ್ಯ ॥

ಓಂ ನದಿನ್ಯೈ ನಮಃ ನಂದಿನೀಂ ಆವಾಹಯಾಮಿ ॥ ಓಂ ನಲಿನ್ಯೈ ನಮಃ ನಲಿನೀಂ ಆವಾಹಯಾಮಿ ॥ ಓಂ ಮೈತ್ರಾಯೈ ನಮಃ ಮೈತ್ರಾಂ ಆವಾಹಯಾಮಿ ॥ ಓಂ ಉಮಾಯೈ ನಮಃ ಉಮಾಂ ಆವಾಹಯಾಮಿ ॥ ಓಂ ಪಶುವರ್ಧಿನ್ಯೈ ನಮಃ ಪಶುವರ್ಧಿನೀಂ ಆವಾಹಯಾಮಿ ॥ ಓಂ ಶಸ್ತ್ರಗರ್ಭ-ಭಗವತ್ಯೈ ನಮಃ ಶಸ್ತ್ರಗರ್ಭಾಂ ಭಗವತೀಂ ಆವಾಹಯಾಮಿ ॥ ಓಂ ಅವಿಘ್ನ-ಸಂಜ್ಞಕಗಣಪತಯೇ ನಮಃ ಅವಿಘ್ನಸಂಜ್ಞಕಗಣಪತಿಂ ಆವಾಹಯಾಮಿ ॥

ಮಂಡದೇವತಾಪ್ರತಿಷ್ಠೆ, ಉಪನಯನ ಅಥವಾ ವಿವಾಹದ ಹಿಂದಿನ ದಿನ ಮಾಡಬೇಕಾದ ಕಾರ್ಯ, ದೂರ್ವೆ, ಶಮೀಪಲ್ಲವ, ಕುಲದೇವತಾವೃಕ್ಷದ ಎಲೆಗಳು ಇವುಗಳನ್ನು ಮಾವು ಮುಂತಾದ ಮರಗಳ ದೊಡ್ಡ ಎಲೆಗಳನ್ನಿಟ್ಟು ಸುತ್ತಿ ಆರು ಸುತ್ತು ನೂಲಿನಿಂದ ಕಟ್ಟಬೇಕು. ಇಂತಹ ಆರು ಕಟ್ಟುಗಳನ್ನು ತಯಾರಿಸಿ ಒಂದರಲ್ಲಿ ಒನಕೆಯ ಸಂಕೇತವಾಗಿ ಒಂದು ಕೋಲಿನ ತುಂಡನ್ನೂ ಇನ್ನೊಂದರಲ್ಲಿ ಶಸ್ತ್ರದ ಸಂಕೇತವಾಗಿ ಒಂದು ಚೂರಿಯನ್ನೂ ಇಡಬೇಕು. ಈ ಆರು ಕಟ್ಟುಗಳನ್ನೂ ಬಿದಿರಿನ ದಬ್ಬೆಗಳಿಂದ ಮಾಡಿದ ಒಂದು ಪಾತ್ರೆಯಲ್ಲಿಡಬೇಕು. ಅದರ ಮಧ್ಯಭಾಗದಲ್ಲಿ ಉತ್ತರಾದಿಕ್ರಮದಿಂದ ಅನುಕ್ರಮವಾಗಿ ನಂದಿನೀ ನಲಿನೀ ಇತ್ಯಾದಿ ದೇವತೆಗಳನ್ನು ಆವಾಹಿಸಬೇಕು. ಅರಸಿನ ಇತ್ಯಾದಿ ಬಣ್ಣಗಳಿಂದ ಅಲಂಕರಿಸಿದ ಒಂದು ಮಣ್ಣಿನ ಕಲಶಪಾತ್ರೆಯಲ್ಲಿ ಅಕ್ಕಿಯನ್ನು ತುಂಬಿಸಿ; ಅಡಿಕೆ, ಅರಸಿನ ತುಂಡುಗಳನ್ನು ಹಾಕಿ ಅದರ ಬಾಯಿಮುಚ್ಚಿ ಅದನ್ನು ನೂಲಿನಿಂದ ವೇಷ್ಟನಮಾಡಿ ಆ ಕಲಶದ ಮೇಲೆ ಅವಿಘ್ನಗಣಪತಿಯನ್ನು ಆವಾಹಿಸಬೇಕು.

"ಓಂ ನಂದಿನ್ಯೈ ನಮಃ" ಮುಂತಾಗಿ ಒಂದೊಂದೇ ಮಂತ್ರವನ್ನು ಹೇಳುತ್ತ ಅಕ್ಷತೆಗಳನ್ನು ಹಾಗಿ ಆವಾಹನೆ ಮಾಡುವುದು.

Scanned by CamScanner

Scanned with CamScanner

ಓಂ ತದಸ್ತುಮಿತ್ರಾ....... ॥ ಗೃಹಾವೈ ಪ್ರತಿಷ್ಠಾ...... ॥ ಓಂ ನಂದಿನ್ಯಾದಿ ಮಂಡಪದೇವತಾಭ್ಯೋ ನಮಃ ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ ॥ ಓಂ ನಂದಿನ್ಯಾದಿ...... ಆಸನಂ ॥ ಓಂ ನಂದಿನ್ಯಾದಿ...... ಪಾದ್ಯಂ ॥ ಅರ್ಘ್ಯಂ ॥ ಆಚಮನೀಯಂ ॥ ಸ್ನಾನಂ ॥ ಸುವಾಸಿನ್ಯಾ ಸುಗಂಧ ತೈಲಸ್ನಾನಂ ಹರಿದ್ರಾರೋಪರಣಂ ಉಷ್ಣೋದಕೇನ ಮಾಂಗಲ್ಯಸ್ನಾನ್ನಂ ॥ ಮಂಗಲಸ್ನಾನಂ ॥ ಶುದ್ಧೋದಕ ಸ್ನಾನಂ ॥ ವಸ್ತ್ರ ॥ ಉಪವಸ್ತ್ರ ವಸ್ತ್ರೋ-ಪವಸ್ತ್ರಾಂತರೇಣ ಆಚಮನೀಯಂ ॥ ಚಂದನಂ ॥ ಅಲಂಕಾರಾರ್ಥೇ ಅಕ್ಷತಾಃ ॥ ಹರಿದ್ರಾಕುಂಕುಮಂ ॥ ಪುಷ್ಪಂ ॥ ಧೂಪಂ ॥ ದೀಪಂ ॥ ನೈವೇದ್ಯಂ ॥ ನೈವೇದ್ಯಮಧ್ಯೇ ಪಾನೀಯಂ ॥ ಉತ್ತರಾಪೋಶನಂ ॥ ಹಸ್ತಪ್ರಕ್ಷಾಲನಂ ॥ ಮುಖಪ್ರಕ್ಷಾಲನಂ ॥ ಕರೋದ್ವರ್ತನಾರ್ಥೇ ಚಂದನಂ ॥ ಮುಖವಾಸಾರ್ಥೇ ತಾಂಬೂಲಂ ॥ ಸುವರ್ಣಪುಷ್ಪ ದಕ್ಷಿಣಾಂ ॥ ನೀರಾಜನಂ ॥ ಅನೇನ ಪೂಜ-ನೇನ ನಂದಿನ್ಯಾದಿ ಮಂಡಪದೇವತಾಃ ಪ್ರೀಯಂತಾಂ ॥

ಓಂ ನಂದಿನ್ಯೈ ನಮಃ ನಂದಿನೀಂ ಸ್ಥಾಪಯಾಮಿ ॥ ಇತಿ ಮಂತ್ರೇಣ ಮಾತೃಕಾಸ್ಥಾಪಿತ ವಂಶಪಾತ್ರೇ ಸ್ಥಾಪಯಿತ್ವಾ ॥ ಓಂ ಸಮುದ್ರ ಜ್ಯೇಷ್ಠಾ..... ॥ ಓಂ ಆಪೋಹಿಷ್ಠಾಮಯೋಭುವಃ..... ॥ ಇತಿ ಮಂತ್ರಾಭ್ಯಾಂ ಪ್ರೋಕ್ಷ್ಯ ॥ ಓಂ ಗಂಧದ್ವಾರಾಂ... ॥ ಇತಿ ಗಂಧಾಕ್ಷತಾನ್ ॥ ಓಂ

ಆವಾಹಿಸಿದ ಮೇಲೆ **"ತದಸ್ತುಮಿತ್ರಾ....."** **"ಗೃಹಾ ವೈ ಪ್ರತಿಷ್ಠಾ"** ಈ ಮಂತ್ರಗಳನ್ನು ಹೇಳಿ ಪ್ರತಿಷ್ಠಾಪಿಸಬೇಕು. ಆಮೇಲೆ **"ನಂದಿನ್ಯಾದಿ ಮಂಡಪದೇವತಾಭ್ಯೋ ನಮಃ ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ"** ಹೀಗೆ ಪ್ರತಿ ಸಲವೂ **"ನಂದಿನ್ಯಾದಿ ಮಂಡಪದೇವತಾಭ್ಯೋ ನಮಃ"** ಎಂದು ಹೇಳಿ ಆಸನ ಇತ್ಯಾದಿ ನೀರಾಜನದ ವರೆಗೆ ಷೋಡಶೋಪಚಾರ ಪೂಜೆ ಮಾಡಬೇಕು. ಸ್ನಾನವನ್ನು ಅರ್ಪಿಸುವಾಗ ಸುವಾಸಿನಿಯು ಬಂದು ಸುಗಂಧ ಎಣ್ಣೆಯನ್ನರ್ಪಿಸಿ, ಅರಸಿನ ಹಚ್ಚಿ, ಬಿಸಿ ನೀರಿನಿಂದ ಮಂಗಲಸ್ನಾನ ಮಾಡಿಸಬೇಕು. ವಸ್ತ್ರ ಮತ್ತು ಉಪವಸ್ತ್ರಗಳ ಮಧ್ಯದಲ್ಲಿ ಒಂದು ಆಚಮನೀಯ ಕೊಡಬೇಕು. ಸಮರ್ಪಣೆ ಆದಮೇಲೆ ನಂದಿನೀ ಮುಂತಾದವರನ್ನು ಆವಾಹಿಸಿದ ಒಂದೊಂದೇ ಕಟ್ಟವನ್ನು ತೆಗೆದು ಮಾತೃಕೆಗಳನ್ನು ಸ್ಥಾಪಿಸಿದ ಬಿದಿರದಬ್ಬೆಯ ಪಾತ್ರೆಯಲ್ಲಿಟ್ಟು **"ಓಂ ನಂದಿನ್ಯೈ ನಮಃ..... ಸ್ಥಾಪಯಾಮಿ"** ಎಂದು ಹೇಳಿ **"ದಧಿಕ್ರಾವ್ಣೋ"** **"ಕಾಂಡಾತ್ಕಾಂಡಾತ್"** ಈ ಮಂತ್ರಗಳಿಂದ ಪ್ರೋಕ್ಷಿಸಿ, **"ಗಂಧದ್ವಾರಾಂ"** **"ದಧಿಕ್ರಾವ್ಣೋ"** **"ಕಾಂಡಾತ್ಕಾಂಡಾತ್"** ಈ ಮಂತ್ರಗಳಿಂದ ಗಂಧ, ದಧಿ, ದೂರ್ವೆಗಳನ್ನು ಅರ್ಪಿಸಬೇಕು. ಅಂತೆಯೇ ನಲಿನಿಯನ್ನು ಸ್ಥಾಪಿಸಿ ಮುಂದೆ ಸೂಚಿಸಿದ ಮಂತ್ರಗಳಿಂದ ಆಯಾ ಸಮರ್ಪಣೆಯನ್ನು ಮಾಡಬೇಕು. ಶಸ್ತ್ರಗರ್ಭಾಭಗವತೀ ಮತ್ತು ಅವಿಘ್ನ ಗಣಪತಿಯನ್ನು ಸ್ಥಾಪಿಸಿ, ಮಂತ್ರೋಚ್ಚಾರವಿಲ್ಲದೆ ಪ್ರೋಕ್ಷಣ, ಗಂಧ, ದಧಿ, ದೂರ್ವಾಂಕುರಗಳನ್ನರ್ಪಿಸಬೇಕು.

Scanned by CamScanner

Scanned with CamScanner

ದಧಿಕ್ರಾವ್ಣೋ..... ॥ ಇತಿ ದಧಿ ॥ ಓಂ ಕಾಂಡಾತ್ಕಾಂಡಾತ್... ॥ ಇತಿ ದೂರ್ವಾಂಕುರಾನ್ ಸಮರ್ಪಯೇತ್ ॥ ಏವಂ ನಲಿನೀ ಮೈತ್ರೋಮಾಪಶು-ವರ್ಧಿನೀ ನಾಮಕವೇಷ್ಟಿತಾನಿ ಉಕ್ತವತ್ ಸ್ಥಾಪಯಿತ್ವಾ ಪೂಜಯೇತ್ ॥ ಓಂ ನಲಿನ್ಯೈ ನಮಃ ನಲಿನೀಂ ಸ್ಥಾಪಯಾಮಿ ॥ ಓಂ ಯಾ ಆಪೋದಿವ್ಯಾ....... ॥ ಓಂ ಆಪೋಹಿಷ್ಠಾ.... ॥ ಓಂ ಗಂಧದ್ವಾರಾಂ.... ॥ ಓಂ ದಧಿಕ್ರಾವ್ಣೋ ... ॥ ಓಂ ಕಾಡಾತ್ಕಾಂಡಾತ್... ॥

ಓಂ ಮೈತ್ರಾಯೈ ನಮಃ ಮೈತ್ರಾಂ ಸ್ಥಾಪಯಾಮಿ ॥ ಓಂ ಯಾಸಾಂ-ರಾಜಾ... ॥ ಓಂ ಗಂಧದ್ವಾರಾಂ... ॥ ಗಂಧಂ ॥ ಓಂ ದಧಿಕ್ರಾವ್ಣೋ ... ॥ ದಧಿ ॥ ಓಂ ಕಾಂಡಾತ್ಕಾಂಡಾತ್ .... ॥ ದೂರ್ವಾಃ ಓಂ ಉಮಾಯೈ ನಮಃ ಉಮಾಂ ಸ್ಥಾಪಯಾಮಿ ॥ ಓಂ ಯಾಸುರಾಜಾ... ॥ ಓಂ ಆಪೋಹಿಷ್ಠಾ.... ॥ ಓಂ ಗಂಧದ್ವಾರಾಂ... ॥ ಓಂ ದಧಿಕ್ರಾವ್ಣೋ... ॥ ಓಂ ಕಾಂಡಾತ್ಕಾಂಡಾತ್ ... ॥ ಓಂ ಪಶುವರ್ಧಿನ್ಯೈ ನಮಃ ಪಶುವರ್ಧಿನೀಂ ಸ್ಥಾಪಯಾಮಿ ॥ ಓಂ ಸಮುದ್ರ ಜ್ಯೇಷ್ಠಾ... ॥ ಓಂ ಯಾ ಆಪೋ ದಿವ್ಯಾ... ॥ ಓಂ ಯಾಸಾಂರಾಜಾ ... ॥ ಓಂ ಯಾಸುರಾಜಾ.... ॥ ಓಂ ಆಪೋಹಿಷ್ಠಾ..... ॥ ಪ್ರೋಕ್ಷಣಂ ॥ ಓಂ ಗಂಧದ್ವಾರಾಂ... ॥ ಓಂ ದಧಿಕ್ರಾವ್ಣೋ... ॥ ಓಂ ಕಾಂಡಾತ್ಕಾಂಡಾತ್ ॥ ಓಂ ಶಸ್ತ್ರಗರ್ಭಾಭಗವತ್ಯೈ ನಮಃ ಶಸ್ತ್ರ ಗರ್ಭಾ ಭಗವತೀಂ ಸ್ಥಾಪಯಾಮಿ ॥ ಪ್ರೋಕ್ಷಣಾದಿ ಸರ್ವಂ ತೋಷ್ಣೀಂ ಕೃತ್ವಾ ॥ ಓಂ ಅವಿಘ್ನಸಂಜ್ಞಕ-ಗಣಪತಯೇ ನಮಃ ಅವಿಘ್ನಸಂಜ್ಞಕ ಗಣಪತಿಂ ಸ್ಥಾಪಯಾಮಿ ॥ ಪ್ರೋಕ್ಷಣಾದಿಕಂ ತೂಷ್ಣೀಂ ಕೃತ್ವಾ ॥

ಕೇಚಿತ್ ಮಂಡಪನಿರ್ಮಾಣಪೂರ್ವಕಂ ದೇವತಾಸ್ಥಾಪನಂ ಕುರ್ವಂತಿಂ ॥ ತದಿತ್ಥಂ ॥ ಸಪತ್ನೀಕ ಉತ್ಥಾಯ ಆಗ್ನೇಯಕೋಣಸ್ಥಮಂಡಪಸ್ತಂಭೋಪರಿ ನಂದಿನೀಂ, ತದಸ್ತು..... ಗೃಹಾಣ್ವೈ..... ಪ್ರತಿಷ್ಠಾಪ್ಯ ॥ ತತೋ ನೈಋತ್ಯ ವಾಯವ್ಯ ಈಶಾನಸ್ತಂಭೇಷು ಮಂಡಪಮಧ್ಯೋಪರಿಭಾಗೇ ಕಾಷ್ಠೇ ಚ ಕ್ರಮೇಣ

ಕೆಲವರು ಒಂದು ಮಂಟಪವನ್ನು ನಿರ್ಮಾಣಮಾಡಿ ದೇವತಾಸ್ಥಾಪನೆ ಮಾಡುತ್ತಾರೆ. ಹಾಗೆ ಮಾಡುವುದಾದರೆ, ಮಂಟಪದ ಆಗ್ನೇಯ ದಿಕ್ಕಿನಲ್ಲಿರುವ ಕಂಬದ ಮೇಲೆ ನಂದಿನಿಯನ್ನು ಆವಾಹಿಸಿ, **"ತದಸ್ತು..."** **"ಗೃಹಾಣ್ವೈ...."** ಮಂತ್ರಗಳಿಂದ ಸ್ಥಾಪಿಸಿ, ಅಂತೆಯೇ ನೈಋತ್ಯ, ವಾಯವ್ಯ ಈಶಾನ್ಯ ಕಂಬಗಳ ಮೇಲೆ ಮತ್ತು ಮಂಟಪದ ಮಧ್ಯದಲ್ಲಿರುವ ಮರದ ತುಂಡಿನ ಮೇಲೆ ಕ್ರಮವಾಗಿ ನಲಿನೀ ಮೈತ್ರಾ, ಉಮಾ ಮತ್ತು ಪಶುವರ್ಧಿನಿಯನ್ನು ಆವಾಹಿಸಿ ಪೂಜಿಸಬೇಕು. ಈ ಎಲ್ಲ ಕಾರ್ಯಗಳನ್ನು ಪತ್ನೀ ಸಮೇತ ಎದ್ದುನಿಂತು ಮಾಡಬೇಕು.

Scanned by CamScanner

ನಲಿನೀ ಮೈತ್ರೋಮಾ ಪಶುವರ್ಧಿನೀ ನಾಮಕವೇಷ್ಟಿತಾನಿ ಉಕ್ತವತ್ ಸ್ಥಾಪಯಿತ್ವಾ ಪೂಜಯೇತ್ ॥

ತತೋ ವಂಶಪಾತ್ರೇಣ ಸಹ ಭಗವತೀಂ ಗೌರ್ಯಾದಿಮಾತೃಕಾ ಸ್ಥಾಪಿತವಂಶಪಾತ್ರಂ ಸ್ವಯಂ ಗೃಹೀತ್ವಾ ಅವಿಘ್ನಕಲಶಂ ಚ ಪತ್ನ್ಯಾಗ್ರಾಹಯಿತ್ವಾ ಸಹ ಬ್ರಾಹ್ಮಣಃ ॥

ಓಂ ಕನಿಕ್ರದಜ್ಜನುಷಂಪ್ರಬ್ರುವಾಣ ಇಯರ್ತಿವಾಚಮರಿತೇವನಾವಂ ॥ ಸುಮಂಗಲಶ್ಚ ಶಕುನೇ ಭವಾಸಿಮಾತ್ವಾಕಾಚಿದಭಿಭಾವಿಶ್ವ್ಯಾವಿದತ್ ॥ ಮಾತ್ವಾಶ್ಯೇನ ಉದ್ವಧೀನ್ಮಾಸುಪರ್ಣೋಮಾತ್ವಾವಿದದಿಷುಮಾನ್ವಿರೋ ಅಸ್ತಾ ॥ ಪಿತ್ರ್ಯಾಮನುಪ್ರದಿಶಂಕನಿಕ್ರದತ್ಸುಮಂಗಲೋಭದ್ರವಾದೀವದೇಹ ॥ ಅವಕ್ರಂದದಕ್ಷಿಣತೋ ಗೃಹಾಣಾಂ ಸುಮಂಗಲೋ ಭದ್ರವಾದೀಶಕುಂತೇ ॥ ಮಾನಸ್ತೇನಈಶತಮಾಘಶಂ ಸೋ ಬೃಹದ್ವದೇಮವಿದಥೇಸುವೀರಾಃ ॥ ೧ ॥ ಪ್ರದಕ್ಷಿಣಿದಭಿಗೃಣಂತಿಕಾರವೋವಯೋವದಂತಋತುಥಾಶಕುಂತಯಃ ॥ ಉಭೇವಾಚೌ ವದತಿ ಸಾಮಗಾ ಇವ ಗಾಯತ್ರಂ ಚ ತ್ರೈಷ್ಟುಭಂ ಚಾನುರಾಜಸಿ ॥ ಉದ್ಗಾತೇವ ಶಕುನೇ ಸಾಮಗಾಯಸಿ ಬ್ರಹ್ಮಪುತ್ರಇವಸವನೇಷು ಶಂಸಸಿ ॥ ವೃಷೇವ ವಾಜೀ ಶಿಶುಮತೀರಪೀತ್ಯಾ ಸರ್ವತೋನಃ ಶಕುನೇ ಭದ್ರಮಾವದ ವಿಶ್ವತೋನಃ ಶಕುನೇ ಪುಣ್ಯಮಾವದ ॥ ಆವದಂಸ್ತ್ವಂ ಶಕುನೇ ಭದ್ರಮಾವದ ತೂಷ್ಣೀಮಾಸೀನಃ ಸುಮತಿಂ ಚಿಕಿದ್ಧಿನಃ ॥ ಯದುತ್ಪತನ್ವದಸಿಕರ್ಕರಿರ್ಯಥಾ ಬೃಹದ್ವದೇಮವಿದಥೇ ಸುವೀರಾಃ ॥ ೨ ॥ ಇತಿ ಸೂಕ್ತಂ ಪಠನ್ ಮಂಗಲವಾದ್ಯಘೋಷೇಣ ಗೃಹಾಂತರ್ಗತ್ವಾ ಈಶಾನ್ಯದೇಶೇ ತಂಡುಲಾದಿ ಪುಂಜತ್ರಯೋಪರಿ ತ್ರೀಣ್ಯಪಿ ತದಸ್ತು.... ಗೃಹಾವೈ.... ಇತಿ ಸ್ಥಾಪಯಿತ್ವಾ ಆವಾಹಿತದೇವತಾಭ್ಯೋ ನಮಃ ಇತಿ ಮಂತ್ರೇಣ ಚಂದನಾದಿ ಪಂಚೋಪಚಾರೈಃ ಸಂಪೂಜ್ಯ ಸ್ಥಾಪಿತದೇವತಾಪ್ರೀತ್ಯರ್ಥಂ ಬ್ರಾಹ್ಮಣಸುವಾಸಿನೀಭೋಜನಂ ಸಂಕಲ್ಪ್ಯ ಭೂಯಸೀಂ ದಕ್ಷಿಣಾಂ ದದ್ಯಾತ್ ॥

Scanned by CamScanner

Scanned with CamScanner

ತತೋ ನೀರಾಜಿತಾಭ್ಯಾಂ ದಂಪತೀಭ್ಯಾಂ ಸುಹೃದೋ ಯುವಂ ವಸ್ತ್ರಾಣಿ.... ಇತ್ಯಾದಿ ಮಂತ್ರೈಃ ವಸ್ತ್ರಾ ದದ್ಯುಃ ॥ ಓಂ ಯುವಂ ವಸ್ತ್ರಾಣಿ ಪೀವಸಾವಸಾಥೇಯುವೋರಚ್ಛಿದ್ರಾಮಂತವೋಹಸರ್ಗಾಃ । ಅವಾತಿರತಮನೃತಾನಿವಿಶ್ವಋತೇನಮಿತ್ರಾವರುಣಾಸಚೇಥೇ ॥ ಓಂ ಪುನಾನಃ ಕಲಶೇಷ್ವಾ ವಸ್ತ್ರಾಣ್ಯರುಷೋಹರಿಃ ॥ ಪರಿಗವ್ಯಾನ್ಯವ್ಯತ ॥ ಓಂ ಅಭಿವಸ್ತ್ರಾ ಸುವಸನಾನ್ಯರ್ಷಾಭಿಧೇನೂಃ ಸುದುಘಾಃಪೂಯಮಾನಾಃ ॥ ಅಭಿಚಂದ್ರಾಭರ್ತವೇನೋಹಿರಣ್ಯಾಭ್ಯಶ್ವಾನ್‌ರಥಿನೋ ದೇವಸೋಮ ॥ ಓಂ ಸತುತುವಸ್ತ್ರಾಣ್ಯಧಪೇಶನಾನಿವಸಾನೋಅಗ್ನಿರ್ನಾಭಾಃ ಪೃಥಿವ್ಯಾಃ ॥ ಅರುಷೋಜಾತಃ ಪದ ಇಳಾಯಾಃ ಪುರೋಹಿತೋರಾಜನ್ಯಕ್ಷೀಹದೇವಾನ್ ॥ ಓಂ ಪುಸೇನಾನೀಃ ಶೂರೋ ಅಗ್ನೇರಥಾನಾಂಗವ್ಯಂನೇತಿಹರ್ಷತೇ ಅಸ್ಯಸೇನಾ ॥ ಭದ್ರಾನ್ ಕೃಣ್ವನ್ನಿಂದ್ರಹವಾನ್ಸಖಿಭ್ಯ ಆಸೋಮೋವಸ್ತ್ರಾರಭಸ್ನಾನಿ ದತ್ತೇ ॥ ಓಂ ಉಭಾಊನೂನಂ ತದಿದರ್ಥಯೇತೇ ವಿತನ್ವಾಥೇಧಿಯೋವಸ್ತ್ರಾಪಸೇವ ॥ ಸಧ್ರೀಚೀನಾಯಾತವೇ ಪ್ರೇಮಜೀಗಃ ಸುದಿನೇವಪೃಕ್ಷ ಆತಂಸಯೇಥೇ ॥ ತತೋಽತಿಕ್ರಾಂತ ಜಾತಕರ್ಮಾದಿ ಸಂಸ್ಕಾರಾನುಷ್ಠಾನಂ ॥

॥ ಇತಿ ಮಂಡಪದೇವತಾ ಪ್ರತಿಷ್ಠಾ ॥

ಆಮೇಲೆ ಬಿದಿರಪಾತ್ರೆಯ ಸಮೇತ ಭಗವತಿಯನ್ನೂ ಗೌರ್ಯಾದಿ ಮಾತೃಕೆಗಳನ್ನೂ, ಆವಾಹಿಸಿದ ಪಾತ್ರೆಯನ್ನೂ ತಾನೇ ಎತ್ತಿಕೊಂಡು ಹೆಂಡತಿಯ ಕೈಯಲ್ಲಿ ಅವಿಘ್ನ ಗಣಪತಿ ಕಲಶವನ್ನು ಹಿಡಿಸಿಕೊಂಡು ಬ್ರಾಹ್ಮಣರೊಂದಿಗೆ ಈ ಮಂತ್ರಗಳನ್ನು ಹೇಳುತ್ತ ಮನೆಯ ಒಳಗೆ ಹೋಗಬೇಕು. ಮಂಗಲವಾದ್ಯಘೋಷದೊಂದಿಗೆ ಒಳಗೆ ಹೋಗಿ ಈಶಾನ್ಯ ದಿಕ್ಕಿನಲ್ಲಿ ಅಕ್ಕಿಯ ಮೂರು ರಾಶಿಗಳನ್ನು ಮಾಡಿ ಅವುಗಳ ಮೇಲೆ ಈ ಮೂರನ್ನೂ **"ತದಸ್ತು...."** **"ಗೃಹಾವೈ....."** ಈ ಮಂತ್ರಗಳನ್ನು ಹೇಳಿ ಸ್ಥಾಪಿಸಿ, ಪಂಚೋಪಚಾರ ಪೂಜೆಮಾಡಿ, ಬ್ರಾಹ್ಮಣರಿಗೆ, ಸುವಾಸಿನಿಯರಿಗೆ ಭೋಜನ ದಕ್ಷಿಣಾದಿಗಳನ್ನು ಕೊಟ್ಟು ಸತ್ಕರಿಸಬೇಕು.

ಆಮೇಲೆ ದಂಪತಿಗಳನ್ನು ಕುಳ್ಳಿರಿಸಿ ಆರತಿ ಎತ್ತಿ **"ಯುವಂ ವಸ್ತ್ರಾಣಿ"** ಮುಂತಾದ ಮಂತ್ರಗಳನ್ನು ಹೇಳುತ್ತ ಇಷ್ಟಮಿತ್ರವರ್ಗದವರು ಬಟ್ಟೆಗಳ ಉಡುಗೊರೆ ಕೊಡಬೇಕು.

Scanned by CamScanner

Scanned with CamScanner

೧೮

ಕರ್ಮವಿಶೇಷೇ ಅಗ್ನಿನಾಮಾನಿ

ಶ್ರೀಃ ॥ ಲೌಕಿಕೇ ಪಾವಕೋಽಹ್ಯಗ್ನಿಃ ಪ್ರಥಮಃ ಪರಿಕೀರ್ತಿತಃ । ಅಗ್ನಿಸ್ತು ಮಾರುತೋ ನಾಮ ಗರ್ಭಾಧಾನೇ ಪ್ರಕೀರ್ತಿತಃ ॥ ಪುಂಸವೇ ಪವಮಾನಸ್ತು ಶೋಭನಃ ಶುಭಕರ್ಮಸು ॥ ಸೀಮಂತೇ ಮಂಗಲೋ ನಾಮ ಪ್ರಬಲೋ ಜಾತಕರ್ಮಣಿ ॥ ಪಾರ್ಥಿವೋ ನಾಮಕರಣೇ ಪ್ರಾಶನೇಽನ್ನಸ್ಯ ವೈ ಶುಚಿಃ ॥ ಸಭ್ಯನಾಮಾತು ಚೂಡಾಯಾಂ ವ್ರತಾದೇಶೇ ಸಮುದ್ಭವಃ ॥ ಗೋದಾನೇ ಸೂರ್ಯನಾಮಾಸ್ಯಾದ್ವಿವಾಹೇ ಯೋಜಿಕಃ ಸ್ಮೃತಃ ॥ ಆವಸಥ್ಯೇ ದ್ವಿಜೋ ಜ್ಞೇಯೋ ವೈಶ್ವದೇವೇ ತು ರುಕ್ಮಕಃ ॥ ಪ್ರಾಯಶ್ಚಿತ್ತೇ ವಿಟಶ್ಚೈವ ಪಾಕಯಜ್ಞೇಷು ಪಾವಕಃ ॥ ದೇವಾನಾಂ ಹವ್ಯವಾಹಶ್ಚ ಪಿತೃಣಾಂ ಕವ್ಯ ವಾಹನಃ ॥ ಶಾಂತಿಕೇ ವರದಃ ಪ್ರೋಕ್ತಃ ಪೌಷ್ಟಿಕೇ ಬಲವರ್ಧನಃ ॥ ಪೂರ್ಣಾಹುತ್ಯಾಂ ಮೃಡೋ ನಾಮ ಕ್ರೋಧೋಗ್ನಿಶ್ಚಾಭಿಚಾರಿಕೇ ॥ ವಶ್ಯಾರ್ಥೇ ಕಾಮದೋ ನಾಮ ವನದಾಹೇ ತು ದೂಷಕಃ ॥ ಕುಕ್ಷೌ ತು ಜಾಠರೋ ಜ್ಞೇಯಃ ಕ್ರವ್ಯಾದೋ ಮೃತದಾಹನೇ ॥ ವಹ್ನಿನಾಮಾ ಲಕ್ಷಹೋಮೇ ಕೋಟಿಹೋಮೇ ಹುತಾಶನಃ ॥ ವೃಷೋತ್ಸರ್ಗೇಽಧ್ವರೋ ನಾಮ ಸುಚಯೇ ಬ್ರಾಹ್ಮಣಃ ಸ್ಮೃತಃ ॥ ಸಮುದ್ರೇ-

---

ಬೇರೆ ಬೇರೆ ಕರ್ಮಗಳಲ್ಲಿ ನಿರ್ದಿಷ್ಟವಾದ ಅಗ್ನಿಯ ಹೆಸರುಗಳು:-

ಲೌಕಿಕಕಾರ್ಯ-ಪಾವಕ; ಗರ್ಭಾಧಾನ-ಮಾರುತ; ಪುಂಸವನ-ಪವಮಾನ; ಶುಭಕಾರ್ಯ-ಶೋಭನ; ಸೀಮಂತೋನ್ನಯನ-ಮಂಗಲ; ಜಾತಕರ್ಮ-ಪ್ರಬಲ; ನಾಮಕರಣ-ಪಾರ್ಥಿವ; ಅನ್ನಪ್ರಾಶನ-ಶುಚಿ; ಚೂಡಾಕರ್ಮ-ಸಭ್ಯ; ಉಪನಯನ-ಸಮುದ್ಭವ; ಗೋದಾನ-ಸೂರ್ಯ; ವಿವಾಹ-ಯೋಜಿಕ; ಅಗ್ನಿಹೋತ್ರ-ದ್ವಿಜ; ವೈಶ್ವದೇವ-ರುಕ್ಮಕ; ಪ್ರಾಯಶ್ಚಿತ್ತ-ವಿಟ; ಸ್ವಯಂಪಾಕ ಪಾವಕ; ದೇವಕಾರ್ಯ-ಹವ್ಯವಾಹನ; ಪಿತೃಕಾರ್ಯ-ಕವ್ಯವಾಹನ; ಶಾಂತಿ-ವರದ; ಪೌಷ್ಟಿಕಕಾರ್ಯ-ಬಲವರ್ಧನ; ಪೂರ್ಣಾಹುತಿ-ಮೃಡ; ಮಾರಣಕ್ರಿಯೆ-ಕ್ರೋಧ; ವಶೀಕರಣ-ಕಾಮದ; ವನದಹನ-ದೂಷಕ; ಹೊಟ್ಟೆಯಲ್ಲಿ-ಜಠರ; ಶವದಹನ-ಕ್ರವ್ಯಾದ; ಲಕ್ಷಹೋಮ-ವಹ್ನಿ; ಕೋಟಿಹೋಮ-ಹುತಾಶನ; ವೃಷೋತ್ಸರ್ಗ-ಅಧ್ವರ; ಸುಚಯ-ಬ್ರಾಹ್ಮಣ; ಸಮುದ್ರದಲ್ಲಿ-ವಾಡವ; ಪ್ರಳಯ-ಸಂವರ್ತಕ; ಬ್ರಹ್ಮಾ-ಗಾರ್ಹಪತ್ಯ ; ಈಶ್ವರ-ದಕ್ಷಿಣ; ವಿಷ್ಣು-ಆಹವನೀಯ. ಈ ಪ್ರಕಾರ ಅಗ್ನಿಹೋತ್ರದಲ್ಲಿ ಮೂರು ಅಗ್ನಿಗಳಿವೆ.

Scanned by CamScanner

Scanned with CamScanner

ವಾಡವೋಹ್ಯಗ್ನಿಃ ಕ್ಷಯೇ ಸಂವರ್ತಕಸ್ತಥಾ ॥ ಬ್ರಹ್ಮಾ ವೈ ಗಾರ್ಹಪತ್ಯಶ್ಚ ಈಶ್ವರೋ ದಕ್ಷಿಣಸ್ತಥಾ ॥ ವಿಷ್ಣುರಾಹವನೀಯಃ ಸ್ಯಾದಗ್ನಿಹೋತ್ರೇ ತ್ರಯೋಽ-ಗ್ನಯಃ ॥ ಜ್ಞಾತ್ವೈವಮಗ್ನಿನಾಮಾನಿ ಗೃಹ್ಯಕರ್ಮಸಮಾರಭೇತ್ ॥ ಇಮಾನಿ ಸರ್ವಸಂಸ್ಕಾರ ಶಾಂತಿಕ ಪೌಷ್ಟಿಕಾದ್ಯನುಷ್ಠಾನೋಪಯುಕ್ತಾನಿ ತತ್ರ ತತ್ರ ಯೋಜ್ಯಾನ್ಯಗ್ನಿನಾಮಾನಿ ॥

॥ ಇತಿ ಕರ್ಮವಿಶೇಷೇ ಅಗ್ನಿನಾಮಾನಿ ॥

Scanned by CamScanner

Scanned with CamScanner

॥ ಕುಂಡಮಂಡಪವೇದೀ ಲಕ್ಷಣಂ ॥

ಕುಂಡಲಕ್ಷಣಂ:- ಭವಿಷ್ಯಪುರಾಣೇ ॥ ಮುಷ್ಟಿಮಾನಂ ಶತಾರ್ಧಂ ತು ಶತೇಚಾರತ್ರಿಮಾತ್ರಕಂ । ಸಹಸ್ರೇ ತ್ವಥ ಹೋತವ್ಯಂ ಕುಂಡಂ ಕುರ್ಯಾತ್ಕ-ರಾತ್ಮಕಂ ॥ ವಿಶ್ವಕರ್ಮಾ-ವ್ಯಾಸಾತ್ ಖಾತಪರಃ ಪ್ರೋಕ್ತೋ ನಿಮ್ನಂ ತಿಥ್ಯಂಗು-ಲೇನ ತು । ಕಂಠಾತ್ಪರಂ ಮೇಖಲಾ ತು ಉನ್ನತಾ ಸ್ಯಾನ್ನವಾಂಗುಲೈಃ ॥ ಚತುಸ್ತ್ರಿದ್ವ್ಯಂಗುಲವ್ಯಾಸೋ ಮೇಖಲಾ ತ್ರಿತಯಸ್ಯ ತು ॥ ಸಿದ್ಧಾಂತಶೇಖರೇ ॥ ಏಕಾ ಷಡಂಗುಲೋತ್ಸೇಧಾ ವಿಸ್ತಾರಾ ಮೇಖಲಾ ಮತಾ ॥ ತ್ರೈಲೋಕ್ಯಸಾರೇ ॥ ದೀರ್ಘಾ ಸೀಯರ್ಾಂಗುಲಾ ಯೋನಿಸ್ತ್ರ್ಯಂಶೇನ ವಿಸ್ತರೇಣ ತು । ಏಕಾಂಗುಲೋಚ್ಛ್ರಿತಾ ಸಾ ತು ಪ್ರವಿಷ್ಟಾಭ್ಯಂತರೇ ತಥಾ ॥ ಕುಂಭದ್ವಯಾರ್ಧಂ ಸಂಯುಕ್ತಾ ಚಾಶ್ವತ್ಥದಲವನ್ ಮತಾ । ಅಂಗುಷ್ಠಮೇಖಲಾಯುಕ್ತಾ ಮಧ್ಯೇ ತ್ವಾಜ್ಯಧೃತಿಸ್ತಥಾ ॥ ಕುಂಡಾನಾಂ ಕಲ್ಪಯೇದಂತರ್ನಾಭಿಮಂಬುಜಸನ್ನಿಭಂ । ತತ್ತತ್ಕುಂಡಾನುಕಾರಾ ವಾ ಮಾನಮಸ್ಯ ನಿಗದ್ಯತೇ ॥ ದ್ವಿತೀಯ ಮೇಖ-ಲಾಯಾಂ ಪರಿಧಿ-ಪರಿಸ್ತರಣಾರ್ಥಮಂತರಂ ರಕ್ಷೇತ್ ॥ ಯಾವಾನ್ ಕುಂಡಸ್ಯ ವಿಸ್ತಾರಃ ಖನನಂ ತಾವದೀರಿತಂ ॥ ಪಶ್ಚಿಮಮೇಖಲೋಪರಿ ಕುಂಡವಿಸ್ತಾರಾರ್ಧಂ ದೀರ್ಘಾಂ ಕುಂಡವಿಸ್ತಾರತೃತೀಯಾಂಶವಿಸ್ತೃತಾಂ ಯೋನಿಂ ಭೂಮಿತೋ ರಚಯೇತ್ ॥ ಶಾರದಾಯಾಂ-ಸರ್ವಸಿದ್ಧಿಕರಂ ಕುಂಡಂ ಚತುರಸ್ರಮುದಾಹೃತಂ । ಮಾತ್ಸ್ಯೇ-ಮಾನಹೀನಾಧಿಕಂ ಕುಂಡಮನೇಕಭಯದಂ ಭವೇತ್ ॥

ಕುಂಡಮಂಡಲವೇದೀ ಲಕ್ಷಣ:- ಗ್ರಹಯಜ್ಞ ಅಥವಾ ಇತರ ಹೋಮ ಕಾರ್ಯಗಳಿಂದ ಕೂಡಿದ ಕರ್ಮಗಳಿಗೆ ಯಜ್ಞಕುಂಡವನ್ನು ನಿರ್ಮಿಸಬೇಕಾದ ಸಂದರ್ಭದಲ್ಲಿ, ಒಂದರಿಂದ ನಲ್ವತ್ತೊಂಭತ್ತು ಸಂಖ್ಯೆಗಿಂತ ಕಡಿಮೆ ಆಹುತಿಗಳಾದರೆ ಕುಂಡವನ್ನು ಮಾಡದೆ ಹದಿನೆಂಟು ಅಂಗುಲ ಚಚ್ಚೌಕದ ಸ್ಥಂಡಿಲವನ್ನು ಮಾಡಬೇಕು. ಐವತ್ತರಿಂದ ತೊಂಭತ್ತೊಂಭತ್ತು ಆಹುತಿಗಳ ವರೆಗಾದರೆ (ಅರತ್ನಿಮಾನ ಅಂದರೆ ಇಪ್ಪತ್ತೆರಡೂವರೆ ಅಂದರೆ ೨೧ ಅಂಗುಲ) ಚೌಕಾಕಾರದ ಕುಂಡ ಮಾಡಬೇಕು. ನೂರರಿಂದ ಒಂಭೈನೂರತೊಂಭತ್ತೊಂಭತ್ತು ಆಹುತಿಗಳ ವರೆಗಾದರೆ (ಅರತ್ನಿಮಾನ ಅಂದರೆ ಇಪ್ಪತ್ತೆರಡೂರವೆ ಅಂಗುಲ ಪ್ರಮಾಣದ) ಚೌಕಾಕಾರದ ಕುಂಡ ಮಾಡಬೇಕು. ಒಂದು ಸಾವಿರದಿಂದ ಒಂಭತ್ತು ಸಾವಿರದ ಒಂಭೈನೂರತೊಂಭತ್ತೊಂಭತ್ತು ಆಹುತಿಯ ವರೆಗೆ ಹಸ್ತಮಾನ ಅಂದರೆ ೨೪ ಅಂಗುಲದ ಚೌಕಾಕಾರದ ಕುಂಡವನ್ನು ಮಾಡಬೇಕು. ಒಂದು ಮೊಳ ಅಂದರೆ ೨೪ ಅಂಗುಲದ ಕುಂಡಕ್ಕೆ ೧೫ ಅಂಗುಲದಷ್ಟು ಆಳಕ್ಕೆ ಹೊಂಡ ಮಾಡಬೇಕು. ಆ ಹೊಂಡಕ್ಕೆ ಚಚ್ಚೌಕವಾಗಿ ೧ ಅಂಗುಲದಷ್ಟು ಕುತ್ತಿಗೆಯನ್ನು ಬಿಟ್ಟು ಮೇಲೆ ೯ ಅಂಗುಲ ಪ್ರಮಾಣದ ವರೆಗೆ ಮೂರು ಪಟ್ಟಿಗಳನ್ನು ಮಾಡಬೇಕು. ಮೇಲಿನ ಮೊದಲನೆಯ ಪಟ್ಟಿಯು ೪ ಅಂಗುಲ ಎತ್ತರವೂ ೪ ಅಂಗುಲ ಅಗಲವೂ, ಎರಡನೆಯ ಪಟ್ಟಿಯು ೩-೩

Scanned by CamScanner

Scanned with CamScanner

ಔಪಾಸನಕುಂಡಲಕ್ಷಣಂ:- ಸ್ಮೃತಿಸಾರೇ–ಅರತ್ನಿಮಾತ್ರಂ ವಿಜ್ಞೇಯ ಮಗ್ನೇರಾಯತನಂ ಶುಭಂ । ಶ್ರೌತೇ ಚೌಪಾಸನೇ ಕುಂಡಖಾತಯೋನಿವಿವರ್ಜಿತಂ ॥ ಮೇಖಲಾದ್ವಿತಯಂ ಕಾರ್ಯಂ ರೇಖಾಲಗ್ನಂತು ಬಾಹ್ಯತಃ। ಬಾಹ್ಯದ್ವ್ಯಂಗುಲವಿಸ್ತಾರಾऽಭ್ಯಂತರಾ ಚತುರಂಗುಲಾ ॥ ಬಾಹ್ಯಾ ಷಡಂ ಗುಲೋತ್ಸೇಧಾऽಭ್ಯಂತರಾ ದ್ವಾದಶಾಂಗುಲಾ । ಚತುರ್ವಿಂಶತ್ಯಂಗುಲಯೋಽರತ್ನಿಸ್ತದರ್ಧಂ ಪ್ರಾದೇಶಃ ॥ ಪ್ರಯೋಗರತ್ನೇ–ಚತುರ್ವಿಂಶತ್ಯಂಗುಲಂ ಸಾರ್ಧಂ ದ್ವಾವಿಂಶತ್ಯಂಗುಲಪ್ರಮಾಣಂ ವಾ ಷೋಡಶಾಂಗುಲಪ್ರಮಾಣಂ ವಾ ಚತುರಸ್ರಂ ಪ್ರತ್ಯೇಕಂ ಚತುರಂಗುಲೋತ್ಸೇಧಮೇಖಲಾತ್ರಯಯುಕ್ತಮಾಯತನಂ ॥

ಅಂಗುಲವೂ ಕೆಳಗಿನ ಮೂರನೆಯ ಪಟ್ಟಿಯು ೨-೨ ಅಂಗುಲ ಪ್ರಮಾಣವಲ್ಲಿ ಚಚ್ಚೌಕವಾಗಿರಬೇಕು. ಒಂದೇ ಪಟ್ಟಿಯನ್ನು ಮಾಡುವುದಾದರೆ ಅದು ೬ ಅಂಗುಲ ಎತ್ತರವೂ ೬ ಅಂಗುಲ ಅಗಲವೂ ಇರಬೇಕು. ಪಶ್ಚಿಮಭಾಗದಲ್ಲಿರುವ ಪಟ್ಟಿಯ ಮೇಲೆ ಯೋನಿಯನ್ನು ನಿರ್ಮಿಸಬೇಕು. ಈ ಯೋನಿಯು ೨೪ ಅಂಗುಲ ಪ್ರಮಾಣದ ಕುಂಡಕ್ಕೆ ೧೨ ಅಂಗುಲ ಉದ್ದ ೮ ಅಂಗುಲ ಅಗಲವಿದ್ದು ಕುಂಡದ ಕೆಳಭಾಗದ ಪಟ್ಟಿಯಿಂದ ಆರಂಭಿಸಿ ಮೇಲಿನ ಪಟ್ಟಿಯ ಮೇಲೆ ೧ ಅಂಗುಲದಷ್ಟು ಎತ್ತರವಿರುವಂತೆ ಅಶ್ವತ್ಥದ ಎಲೆಯ ಆಕಾರದಲ್ಲಿ ಕುಂಡದ ಕಡೆಗೆ ಇಳಿಜಾರಾಗಿರಬೇಕು.

ಎಲೆಯ ದಂಟಿನ ಭಾಗದಲ್ಲಿ ಸುರಿದ ತುಪ್ಪವು ಸರಾಗವಾಗಿ ತುದಿಯ ವರೆಗೆ ಹರಿದು ಕುಂಡದಲ್ಲಿ ಬೀಳುವಂತಿರಬೇಕು. ಎಲೆಯ ದಂಟಿನ ಎರಡು ಬದಿಗಳಲ್ಲಿ ಅರ್ಧ ಕುಂಭಾಕೃತಿಯ ಎರಡು ಮುದ್ದೆಗಳನ್ನು ಇಡಬೇಕು. ೪-೪ ಅಂಗುಲ ಚೌಕಾಕಾರದ ಕುಂಡಾಕೃತಿಯನ್ನು ಮಾಡಿ ನಾಭಿಯನ್ನು ಕುಂಡದ ಮಧ್ಯಭಾಗದಲ್ಲಿ ಇಡಬೇಕು. ನಡುವಿನ ಪಟ್ಟಿಯ ಮೇಲೆ ಪರಿಧಿಯನ್ನು ವಿಸ್ತರಿಸಲು ಅಂತರವಿಡಬೇಕು. ಕುಂಡದ ವಿಸ್ತಾರದ ಪ್ರಮಾಣವನ್ನು ಹೊಂದಿಕೊಂಡು ಅದಕ್ಕನುಗುಣವಾಗಿ ಆಳವಾಗಿರುವಂತೆ ಹೊಂಡ ಮಾಡಬೇಕು. ಪಶ್ಚಿಮ ಭಾಗದಲ್ಲಿರುವ ಪಟ್ಟಿಯ ಮೇಲೆ ಕುಂಡದ ವಿಸ್ತಾರದ ಅರ್ಧ ಹಾಗೂ ಮೂರನೇ ಒಂದರಷ್ಟು ಉದ್ದ ಮತ್ತು ಅಗಲವಿರುವಂತೆ ಯೋನಿಯನ್ನು ನಿರ್ಮಿಸಬೇಕು. ಉದಾ:- ೨೧ ಅಂಗುಲ ವಿಸ್ತಾರದ ಕುಂಡವಾದರೆ ೧೦$\frac{೧}{೨}$ ಅಂಗುಲ ಉದ್ದ ಹಾಗೂ ೭ ಅಂಗುಲ ಅಗಲದ ಯೋನಿ ಇರಬೇಕು. ಈ ಪ್ರಕಾರ ಸಣ್ಣದು ಅಥವಾ ದೊಡ್ಡದು ಯಾವುದು ಬೇಕೋ ಅಂತಹ ಕುಂಡವನ್ನು ನಿರ್ಮಿಸಿಕೊಳ್ಳಬೇಕು. ಚತುರಸ್ರಕುಂಡವು ಸರ್ವಸಿದ್ಧಿಪ್ರದವಾಗಿದೆ. ಪ್ರಮಾಣಕ್ಕಿಂತ ಹೆಚ್ಚು ಅಥವಾ ಕಡಿಮೆಯಾಗಿ ಕುಂಡವನ್ನು ರಚಿಸಿದರೆ ಸುಖಪ್ರಾಪ್ತಿಯಾಗುವುದಿಲ್ಲ.

ಔಪಾಸನಕುಂಡಲಕ್ಷಣ:- ಔಪಾಸನ ಅಥವಾ ಗೃಹ್ಯೋಕ್ತ ಹೋಮಕ್ಕೆ ೨೪ ಅಂಗುಲ ಚೌಕಾಕಾರದ ಕುಂಡವಿರಬೇಕು. ಇದಕ್ಕೆ ಕುತ್ತಿಗೆ, ಹೊಂಡ, ಯೋನಿ ಇತ್ಯಾದಿಗಳ ಅವಶ್ಯಕತೆ ಇಲ್ಲ. ಕುಂಡದ ಹೊರಭಾಗದಲ್ಲಿ, ಬಾಹ್ಯ ಮತ್ತು ಅಭ್ಯಂತರವೆಂಬ ಎರಡು ಪಟ್ಟಿಗಳಿರಬೇಕು. ಬಾಹ್ಯ ಅಥವಾ ಹೊರಗಿನ ಪಟ್ಟಿಯು ಎರಡು ಅಂಗುಲ ಅಗಲವಾಗಿಯೂ ಎತ್ತರವಾಗಿಯೂ,

Scanned by CamScanner

ವೈಶ್ವದೇವಕುಂಡಲಕ್ಷಣಂ:- ಷಡಂಗುಲಮಿತೋಽಚ್ಛ್ರಾಯಂ ಗರ್ತೇಚ ಚತುರಂಗುಲಂ । ದ್ವಾದಶಾಂಗುಲವಿಸ್ತೀರ್ಣಂ ಕುಂಡಂ ತದ್ವೈಶ್ವದೇವಿಕಂ ॥

ಮಂಡಪಲಕ್ಷಣಂ:- ಹೇಮಾದ್ರೌ ಮತ್ಸ್ಯಪುರಾಣೇ-ಗೃಹಸ್ಯೋತ್ತರ ಪೂರ್ವೇಣ ಮಂಡಪಂ ಕಾರಯೇದ್ಬುಧಃ । ರುದ್ರಾಯತನಭೂಮೌ ನಾ ಚತುರಸ್ರಮುದಕ್ಪ್ಲವಂ ॥ ದಶಹಸ್ತಾನಥಾಷ್ಟೌ ವಾ ಹಸ್ತಾನ್ ಕುರ್ಯಾದ್ವಿಧಾ ನತಃ । ತಸ್ಯ ದ್ವಾರಾಣಿ ಚತ್ವಾರಿ ಕರ್ತವ್ಯಾನಿ ವಿಚಕ್ಷಣೈಃ

ಗೃಹವೇದೀ ಲಕ್ಷಣಂ:- ಮಾತ್ಸ್ಯಪುರಾಣೇ ತ್ರಿವಪ್ರಚತುರಸ್ರಂ ಚ ವಿತತ್ಯುಚ್ಛ್ರಾಯಸಂಮಿತಂ । ದ್ವಿರಂಗುಲೋಚ್ಛ್ರಿತೋ ವಪ್ರಃ ಪ್ರಥಮಃ ಸಮುದಾಹೃತಃ ॥ ಅಂಗುಲ್ಯುಚ್ಛ್ರಾಯಸಂಯುಕ್ತಂ ವಪ್ರದ್ವಯಮಥೋಪರಿ । ದ್ವ್ಯಂಗುಲಸ್ತತ್ರವಿಸ್ತಾರಃ ಸರ್ವೇಷಾಂ ಕಥಿತೋ ಬುಧೈಃ ॥

ಸ್ಥಂಡಿಲಂ:-ಸ್ಮೃತಿಸಾರೇ-ಕುಂಡೇ ವಾ ಸ್ಥಂಡಿಲೇ ವಾಪಿ ಹೋಮ ಕರ್ಮ ಸಮಾಚರೇತ್ ।

ಅಭ್ಯಂತರ ಅಥವಾ ಒಳಗಿನ ಪಟ್ಟಿಯು ೪ ಅಂಗುಲ ಅಗಲ ಮತ್ತು ೧೨ ಅಂಗುಲ ಎತ್ತರವಾಗಿ ಇರಬೇಕು. ಇಲ್ಲಿ ಅರತ್ನಿ ಅಂದರೆ ೨೪ ಅಂಗುಲವೆಂದೂ ಪ್ರಾದೇಶ ಅಂದರೆ ೧೨ ಅಂಗುಲವೆಂದೂ ಹೇಳಲ್ಪಟ್ಟಿದೆ. ಈ ಮೇಲೆ ಹೇಳಿದ ಕುಂಡದ ಪ್ರಮಾಣದಲ್ಲಿ ಅರತ್ನಿ ಎಂದರೆ ಮೊಣಕೈಯಿಂದ ಕನಿಷ್ಠಿಕೆಯ ತುದಿಯ ವರೆಗೆ ಒಂದು ಮೊಳ ಅಥವಾ ೨೨$\frac{೧}{೨}$ ಅಂಗುಲ ಎಂದು ತಿಳಿಯಬೇಕು. ಪ್ರಯೋಗ ರತ್ನದಲ್ಲಿ ಔಪಾಸನ ಕುಂಡವನ್ನು ೨೪, ೨೨$\frac{೧}{೨}$ ಅಥವಾ ೧೬ ಅಂಗುಲ ಚೌಕವಾಗಿದ್ದು ೪-೪ ಅಂಗುಲದ ೩ ಪಟ್ಟಿಗಳಿಂದ ಕೂಡಿರಬೇಕೆಂದು ಹೇಳಿದ್ದಾರೆ.

ವೈಶ್ವದೇವಕುಂಡಲಕ್ಷಣ:- ವೈಶ್ವದೇವ ಕುಂಡಕ್ಕೆ ೬ ಅಂಗುಲ ಎತ್ತರದ ಪಟ್ಟಿ, ೪ ಅಂಗುಲ ಆಳ ಮತ್ತು ಉದ್ದಗಲಗಳು ೧೨-೧೨ ಅಂಗುಲ ಇರಬೇಕು.

ಮಂಡಪಲಕ್ಷಣಂ:- ಗ್ರಹಯಜ್ಞಮಾಡಲು ಮಂಡಪವನ್ನು ನಿರ್ಮಿಸುವುದಾದರೆ ಅದು ಮನೆಯ ಉತ್ತರ ಅಥವಾ ಪೂರ್ವದಿಕ್ಕಿನಲ್ಲಿ ಇಲ್ಲವೇ ಈಶ್ವರದೇವರ ಮಂದಿರದ ಹತ್ತಿರ ೧೦ ಅಥವಾ ೮ ಮೊಳ ದಕ್ಷಿಣದಿಂದ ಉತ್ತರಕ್ಕೆ ಚೌಕಾಕಾರವಾಗಿರಬೇಕು. ಅದಕ್ಕೆ ನಾಲ್ಕು ಬಾಗಿಲುಗಳಿರಬೇಕು.

ಗೃಹವೇದೀಲಕ್ಷಣ:- ಗ್ರಹವೇದಿಯು ಒಂದು ಗೇಣು ಎತ್ತರವಿದ್ದು ಅದಕ್ಕೆ ಮೂರು ಪಟ್ಟಿಗಳಿರಬೇಕು. ಮೊದಲನೆಯ ಪಟ್ಟಿಯು ಎರಡು ಅಂಗುಲ ಹಾಗೂ ಎರಡನೆಯ ಮತ್ತು ಮೂರನೆಯ ಪಟ್ಟಿಗಳು ಒಂದೊಂದು ಅಂಗುಲ ಅಗಲವಿರಬೇಕು.

ಸ್ಥಂಡಿಲ:- ಅಗ್ನಿಗೆ ಆಧಾರವಾಗಿ ಕುಂಡವನ್ನು ರಚಿಸಬೇಕು. ಅದು ಅಸಾಧ್ಯವೆಂದಾದರೆ ಸ್ಥಂಡಿಲವನ್ನಾದರೂ ರಚಿಸಿ ಹೋಮಕಾರ್ಯ ಮಾಡಬೇಕು.

Scanned by CamScanner

Scanned with CamScanner

ಯಜ್ಞಪಾತ್ರಾಕೃತಯಃ ।



೧. ಚರುಸ್ಥಾಲೀ ೨. ಪ್ರೋಕ್ಷಣೀ ೩. ದರ್ವೀಸ್ರುಕ್ ೪. ಸ್ರುವ ೫. ಪ್ರಣೀತಾ
೬. ಆಜ್ಯಪಾತಂ ೭. ಶೂರ್ಪಂ ೮. ಕೃಷ್ಣಾಜಿನಂ ೯. ಉಲೂಖಲ ೧೦. ಇಧ್ಮ
೧೧. ಬರ್ಹಿ ೧೨. ಮುಸಲ ೧೩. ದೃಷದ್ ೧೪. ಉಪಲ ೧೫. ಮೇಕ್ಷಣಂ

Scanned by CamScanner
Scanned with CamScanner

॥ ಯಜ್ಞಪಾತ್ರಾಕೃತಯಃ ತತ್ಪರಿಮಾಣಂ ಚ ॥

೧. ಚರುಸ್ಥಾಲೀ – ಇಯಂ ತಾಮ್ರಮಯೀ ಮಾರ್ತಿಕೀ ವಾ ಅಷ್ಟಾಂಗುಲಾ ದ್ವಾದಶಾಂಗುಲಾ ವಾ ಸಂಕುಚಿತಾನನಾ ।

೨. ಪ್ರೋಕ್ಷಣೀ – ಇಯಂ ಸ್ರುಗಾಕಾರಾ ವಾರಣವೃಕ್ಷಜಾ ವಿಸ್ತಾರಾರ್ಧ ನಿಮ್ನಾ ।

೩. ದರ್ವೀಸ್ರುಕ್ – ಇಯಂ ಪಾಲಾಶೀ ದ್ವಾದಶಾಂಗುಲಾ ।

೪. ಸ್ರುವಃ – ಅಯಂ ಖಾದಿರೋ ವಿತಸ್ತಿಪ್ರಮಾಣೋಽರ್ಧಾಂಗುಲಛಿದ್ರಃ ।

೫. ಪ್ರಣೀತಾ – ಅಯಂ ಪೈಪ್ಪಲಃ ಷಡಂಗುಲಃ ಚತುರಂಗುಲದಂಡಃ

೬. ಆಜ್ಯಪಾತ್ರಂ – ಇದಂ ಕಾಂಸ್ಯಜಂ ಮೃಣ್ಮಯಂ ವಾ ಷಡಂಗುಲಂ ।

೭. ಇಧ್ಮ – ಇದಂ ಪಂಚದಶಯಜ್ಞಿಯಸಮಿತ್ಕಂ ಪ್ರಾದೇಶಮಿತಂ ।

೮. ಬರ್ಹಿಃ – ಇದಂ ಪ್ರಾದೇಶಮಾತ್ರಮುಷ್ಟಿಪರಿಮಿತದರ್ಭರೂಪಂ ।

೯. ಶೂರ್ಪಂ – ಇದಂ ವಂಶನಿರ್ಮಿತಂ ।

೧೦. ಕೃಷ್ಣಾಜಿನಂ – ಇದಂ ಪುಂರೂಪ ಹರಿಣಸ್ಯ ಚರ್ಮ ।

ಯಜ್ಞಪಾತ್ರೆಗಳ ಆಕಾರ ಮತ್ತು ಪ್ರಮಾಣ

೧. ಚರುಸ್ಥಾಲೀ – ೮ ಅಥವಾ ೧೨ ಅಂಗುಲ ಎತ್ತರವಿರುವ ಸಣ್ಣ ಬಾಯಿಯುಳ್ಳ ತಾಮ್ರ ಅಥವಾ ಮಣ್ಣಿನ ಪಾತ್ರೆ.

೨. ಪ್ರೋಕ್ಷಣೀ – ೮ ಅಂಗುಲ ಉದ್ದ ೪ ಅಂಗುಲ ಆಳವಿರುವ ಸ್ರುಕ್ಕಿನ ಆಕಾರದ ಕರೀಮರದ ಪಾತ್ರೆ.

೩. ದರ್ವೀಸ್ರುಕ್ – ಇದು ೧೩ ಅಂಗುಲ ಉದ್ದ ಹಾಗೂ ೬ ೧/೨ ಅಂಗುಲ ಆಳ ವಿರುವ ಪಲಾಶವೃಕ್ಷದ್ದಾಗಿರಬೇಕು.

೪. ಸ್ರುವಃ – ಇದು ಖಾದಿರವೃಕ್ಷದಾಗಿದ್ದು ೧೨ ಅಂಗುಲ ಉದ್ದ ೧/೨ ಅಂಗುಲ ಆಳ, ತಳಭಾಗ ಒಂದು ಅಂಗುಲವುಳ್ಳದ್ದಾಗಿದ್ದು ಬಾಯಿ ದುಂಡಗಿರಬೇಕು.

೫. ಪ್ರಣೀತಾ – ೪ ಅಂಗುಲ ಹಿಡಿ ಇದ್ದು ೬ ಅಂಗುಲ ಚಚ್ಚೌಕ ಬಾಯಿಯುಳ್ಳ ಅಶ್ವತ್ಥಮರದ್ದಾಗಿರಬೇಕು.

೬. ಆಜ್ಯಪಾತ್ರೆ – ಇದು ೬ ಅಂಗುಲ ವಿಸ್ತಾರವುಳ್ಳ ಕಂಚು ಅಥವಾ ಮಣ್ಣಿನ ಪಾತ್ರೆ

೭. ಇಧ್ಮ – ಚೋಟುದ್ದವುಳ್ಳ ೧೫ ಯಜ್ಞಿಯ ಸಮಿಧೆಗಳುಳ್ಳದ್ದು.

೮. ಬರ್ಹಿ – ಚೋಟುದ್ದದ ಒಂದು ಮುಷ್ಟಿ ದರ್ಭೆಗಳು

೯. ಶೂರ್ಪ – ಬಿದಿರಿನಿಂದ ಮಾಡಿದ ಗೆರಸೆ

೧೦. ಕೃಷ್ಣಾಜಿನ – ಗಂಡು ಜಿಂಕೆಯ ಚರ್ಮ

Scanned by CamScanner

೧೧. ಉಲೂಖಲಂ – ಇದಂ ಪಾಲಾಶದಾರುಕೃತಂ ।

೧೨. ಮುಸಲಂ – ಇದಂ ಖಾದಿರಂ ॥

೧೩. ಮೇಕ್ಷಣಂ – ಇದಂ ಯಜ್ಞಿಯದಾರುಜಂ ।

೧೪. ದೃಷದ್ – ಇಯಂ ಪಾಷಾಣಮಯೀ ।

೧೫. ಉಪಲಃ – ಅಯಂ ಪಾಷಾಣಃ ಪೇಷಣಸಾಧನಂ ।

॥ ಕುಂಡಸಂಸ್ಕಾರಃ ॥

ಛಾಯಾಮಂಡಪಸತ್ವೇ ತು ವಿಧಿವತ್ಪೂಜಾಭಾವಃ । ಗಂಧಾಕ್ಷತ ಪುಷ್ಪಾದಿಭಿಃ ಪೂಜಯೇತ್ । ಕುಂಡಮಂಡಪಂ ಪಂಚಗವ್ಯೇನ ಪ್ರೋಕ್ಷ್ಯ ಅಂಜಲೌ ಪುಷ್ಪಾಣ್ಯಾದಾಯ ಕುಂಡಂ ಸ್ಪೃಷ್ಟ್ವಾ ಆವಾಹಯೇತ್ । ಆವಾಹ ಯಾಮಿ ತತ್ಕುಂಡಂ ವಿಶ್ವಕರ್ಮವಿನಿರ್ಮಿತಂ । ಶರೀರಂ ಯಚ್ಛ ತೇ ದಿವ್ಯಮಗ್ನ್ಯ ಧಿಷ್ಠಾನಮದ್ಭುತಂ ॥ ೧ ॥ ಇತ್ಯಾವಾಹ್ಯ । ಯೇಚ ಕುಂಡೇ ಸ್ಥಿತಾ ದೇವಾಃ ಕುಂಡಾಂಗೇ ಯಾಶ್ಚ ದೇವತಾಃ । ಋದ್ಧಿಂ ಯಚ್ಛಂತು ತೇ ಸರ್ವೇ ಯಜ್ಞ ಸಿದ್ಧಿಂ ಮುದಾನ್ವಿತಾಃ ॥ ೨ ॥ ಹೇ ಕುಂಡ ತವ ನಿರ್ಮಾಣಂ ರಚಿತಂ ವಿಶ್ವ ಕರ್ಮಣಾ । ಅಸ್ಮಾಕಂ ವಾಛಿತಾಂ ಸಿದ್ಧಿಂ ಯಜ್ಞಸಿದ್ಧಿಂ ದದಾತು ಭೋ ॥ ೩ ॥

---

೧೧. ಉಲೂಖಲ – ಮುತ್ತುಗದ ಮರದಿಂದ ಮಾಡಿದ್ದಾಗಿರಬೇಕು.

೧೨. ಮುಸಲ – ಖಾದಿರಮರದ ಸಣ್ಣ ಒನಕೆ

೧೩. ಮೇಕ್ಷಣಂ – ಚರುಹೋಮದಲ್ಲಿ ಉಪಯೋಗಿಸುವ ಯಜ್ಞಿಯ ಮರದ ಸಟ್ಟುಗ

೧೪. ದೃಷದ್ – ಅರೆಯುವಕಲ್ಲು (ಅಡಿಗಲ್ಲು)

೧೫. ಉಪಲಃ – ಗುಂಡುಕಲ್ಲು

ಕುಂಡಸಂಸ್ಕಾರ:- ಛಾಯಾಮಂಡಪವಿದ್ದರೆ ವಿಧಿಪ್ರಕಾರ ಪೂಜೆ ಮಾಡುವ ಅಗತ್ಯವಿಲ್ಲ. ಗಂಧ, ಅಕ್ಷತೆ ಪುಷ್ಪ ಇತ್ಯಾದಿಗಳಿಂದ ಪೂಜೆ ಮಾಡಬೇಕು. ಕುಂಡ ಹಾಗೂ ಮಂಟಪವನ್ನು ಪಂಚಗವ್ಯದಿಂದ ಪ್ರೋಕ್ಷಿಸಬೇಕು. (೧) **"ಆವಾಹಯಾಮಿತತ್ಕುಂಡಂ"** ಎಂದು ಹೇಳುತ್ತ ಬೊಗಸೆಯಿಂದ ಹೂಗಳನ್ನು ಹಾಕಿ ಆವಾಹಿಸಬೇಕು. **"ಯೇಚಕುಂಡೇ"** (೨) **"ಹೇ ಕುಂಡ"** (೩) ಈ ಮಂತ್ರದಿಂದ ಪ್ರಾರ್ಥನೆ ಮಾಡಿ ಕುಂಡದ ಮಧ್ಯಭಾಗದಲ್ಲಿ ವಿಶ್ವಕರ್ಮನನ್ನು ಪೂಜಿಸಬೇಕು. **"ಓಂ ವಿಶ್ವಕರ್ಮಣೇ ನಮಃ"** (೪) ಈ ಮಂತ್ರದಿಂದ ಗಂಧ, ಅಕ್ಷತೆ ಪುಷ್ಪ, ಧೂಪ, ದೀಪ, ನೈವೇದ್ಯ ಇತ್ಯಾದಿ ಉಪಚಾರಗಳಿಂದ ಪೂಜಿಸಬೇಕು. **"ಅಜ್ಞಾನಾತ್ ಜ್ಞಾನತೋ"** (೫) ಈ ಮಂತ್ರದಿಂದ ಪ್ರಾರ್ಥನೆ ಮಾಡಬೇಕು. ನಂತರ ಬಿಳಿ ಬಣ್ಣದಿಂದ ಅಲಂಕರಿಸಿದ

Scanned by CamScanner
Scanned with CamScanner

ಇತಿ ಸಂಪ್ರಾರ್ಥ್ಯ ವಿಶ್ವಕರ್ಮಾಣಂ ಸಂಪೂಜ್ಯ ॥ ಓಂ ವಿಶ್ವಕರ್ಮಣೇ ನಮಃ ವಿಶ್ವಕರ್ಮಾಣಂ ಆವಾಹಯಾಮಿ ॥ ೪ ॥ ಇತಿ ಮಂತ್ರೇಣ ಸಂಪೂಜ್ಯ ಪ್ರಾರ್ಥಯೇತ್ ॥ ಅಜ್ಞಾನಾತ್ ಜ್ಞಾನತೋವಾಪಿ ದೋಷಾಃ ಸ್ಯುಃ ಖನನೋ-ದ್ಭವಾಃ । ನಾಶಯ ತ್ವಂ ಹಿ ತಾನ್ ಸರ್ವಾನ್ ವಿಶ್ವಕರ್ಮನ್ ನಮೋಸ್ತು ತೇ ॥ ೫ ॥ ತತೋ ಉಪರಿ ಮೇಖಲಾಯಾಂ "ಇದಂ ವಿಷ್ಣು" ರಿತಿ ವಿಷ್ಣುಂ ಮಧ್ಯಮೇಖಲಾಯಾಂ "ಬ್ರಹ್ಮಜಜ್ಞಾನ" ಮಿತಿ ಬ್ರಹ್ಮಾಣಂ ಅಧೋ ಮೇಖಲಾಯಾಂ "ತಮೀಶಾನ" ಮಿತಿ ರುದ್ರಂ ಯೋನ್ಯಾಂ "ಗೌರೀರ್ಮಿಮಾಯೇತಿ" ಗೌರೀಮಾವಾಹ್ಯ ಪೂಜಯೇತ್ ॥ ತತೋಽಗ್ನಿಂಪ್ರತಿಷ್ಠಾಪ್ಯ ॥

ಮೊದಲನೆಯ ಮೇಖಲೆಯ ಮೇಲೆ "ಇದಂ ವಿಷ್ಣು" ಎಂಬ ಮಂತ್ರದಿಂದ ವಿಷ್ಣುವನ್ನೂ, ಕೆಂಪು ಬಣ್ಣದಿಂದ ಅಲಂಕರಿಸಿದ ಎರಡನೆಯ ಪಟ್ಟಿಯ ಮೇಲೆ "ಬ್ರಹ್ಮಜಜ್ಞಾನ" ಎಂಬ ಮಂತ್ರದಿಂದ ಬ್ರಹ್ಮನನ್ನೂ, ಕಪ್ಪು ಬಣ್ಣವುಳ್ಳ ಮೂರನೆಯ ಪಟ್ಟಿಯ ಮೇಲೆ "ತಮೀಶಾನಂ" ಎಂಬ ಮಂತ್ರದಿಂದ ರುದ್ರನನ್ನೂ, ಯೋನಿಯ ಸ್ಥಾನದಲ್ಲಿ "ಗೌರೀರ್ಮಿಮಾಯ" ಎಂಬ ಮಂತ್ರದಿಂದ ಗೌರಿಯನ್ನೂ ಆವಾಹಿಸಬೇಕು. ಬಳಿಕ ಕುಂಡದಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಬೇಕು.

॥ ಗರ್ಭಾಧಾನಸಂಸ್ಕಾರ ನಿರ್ಣಯಃ ॥

ತದುಪಯೋಗಿತಯಾ ಪ್ರಥಮರಜೋದರ್ಶನೇ ದುಷ್ಟಮಾಸಾದಿ ನಿರ್ಣೀಯತೇ – ತತ್ರ ಚೈತ್ರಜ್ಯೇಷ್ಠಾಷಾಢಭಾದ್ರಪದಕಾರ್ತಿಕಪೌಷಮಾಸಾಃದುಷ್ಟಾಃ, ಪ್ರತಿದ್ರಿಕ್ತಾಷ್ಟಮೀಷಷ್ಠೀದ್ವಾದಶೀ ಪಂಚದಶೋಽನಿಷ್ಟಫಲಾಸ್ತಿಥಯಃ ತಥಾ ರವಿಭೌಮಮಂದವಾರೇಷು ಭರಣೀಕೃತ್ತಿದಾರ್ದ್ರಾಶ್ಲೇಷಾ ಮಘಾಪೂರ್ವಾ ತ್ರಯ ವಿಶಾಖಾಜ್ಯೇಷ್ಠಾನಕ್ಷತ್ರೇಷು ವಿಷ್ಕಂಭಗಂಡಾತಿಗಂಡಶೂಲವ್ಯಾಘಾತವಜ್ರಪರಿಘ ಪೂರ್ವಾರ್ಧಂ ವ್ಯತೀಪಾತವೈಧೃತಿಯೋಗೇಷು ವಿಷ್ಟ್ಯಾಂ ಗ್ರಹಣೇ ರಾತ್ರಿ-ಸಂಧ್ಯಾಪರಾಹ್ಣಕಾಲೇಷು ನಿದ್ರಾಯಾಂ ಜೀರ್ಣರಕ್ತನೀಲಚಿತ್ರವಸ್ತ್ರೇಷು ನಗ್ನತ್ವೇ ಪರಗೃಹಪರಗ್ರಾಮೇಷು ಅಲ್ಪಾಧಿಕ ನೀಲಾದಿರಕ್ತತ್ವೇಚಾನಿಷ್ಟಫಲಂ । ಸಂಮಾರ್ಜನೀ ಕಾಷ್ಠತೃಣಾಗ್ನಿಶೂರ್ಪಾನ್ ಹಸ್ತೇ ದಧಾನಾ ಕುಲಟಾ ಸ್ಯಾತ್ । ವಸ್ತ್ರೇ ವಿಷಮಾ ರಕ್ತಬಿಂದವಃ ಪುತ್ರಫಲಾಃ । ಸಮಾಃ ಕನ್ಯಾಫಲಾಃ ॥

ಅಥ ಪ್ರಥಮರ್ತೌ ಅಕ್ಷತೈರಾಸನಂ ಕೃತ್ವಾ ತತ್ರ ತಾಮುಪವಿಶ್ಯ ಪತಿಪುತ್ರವತ್ಯಃ ಸ್ತ್ರಿಯೋ ಹರಿದ್ರಾ ಕುಂಕುಮಗಂಧಪುಷ್ಪಸ್ರಕ್ ತಾಂಬೂಲಾದಿ ತಸ್ಯೈ ದತ್ವಾ ದೀಪೈರ್ನೀರಾಜ್ಯ ಸದೀಪಾಲಂಕೃತೇ ಗೃಹೇ ತಾಂ ವಾಸಯೇಯುಃ । ಸುವಾಸಿನೀಭ್ಯೋ ಗಂಧಾದಿಕಂ ಲವಣಮುದ್ಗಾದಿ ಚ ದದ್ಯಾತ್ ।

Scanned by CamScanner

ಗರ್ಭಾಧಾನಕ್ಕೆ ಉಪಯೋಗಿಯಾಗಿರುವುದರಿಂದ ಪ್ರಥಮ ರಜೋದರ್ಶನಕ್ಕೆ ಅನಿಷ್ಟವಾದ ತಿಂಗಳು ಇತ್ಯಾದಿಗಳ ನಿರ್ಣಯ :- ಚೈತ್ರ, ಜ್ಯೇಷ್ಠ, ಆಷಾಡ, ಭಾದ್ರಪದ, ಕಾರ್ತಿಕ, ಪೌಷ, - ಈ ತಿಂಗಳುಗಳು; ಪ್ರತಿಪದಾ, ರಿಕ್ತಾ (ಚತುರ್ಥೀ, ನವಮೀ, ಚತುರ್ದಶೀ) ಅಷ್ಟಮೀ, ಷಷ್ಠೀ, ದ್ವಾದಶೀ, ಪೂರ್ಣಿಮಾ—ಈ ತಿಥಿಗಳು; ರವಿವಾರ, ಮಂಗಳವಾರ, ಶನಿವಾರ—ಈ ವಾರಗಳು; ಭರಣೀ, ಕೃತ್ತಿಕಾ, ಆರ್ದ್ರಾ, ಆಶ್ಲೇಷಾ, ಮಘಾ, ಪೂರ್ವಾ, ಪೂರ್ವಾಷಾಡಾ, ಪೂರ್ವಾಭಾದ್ರಪದಾ, ವಿಶಾಖಾ, ಜ್ಯೇಷ್ಠ, ಈ ನಕ್ಷತ್ರಗಳಲ್ಲಿ ಮತ್ತು ವಿಷ್ಕಂಭ, ಗಂಡ, ಅತಿಗಂಡ, ಶೂಲ, ವ್ಯಾಘಾತ, ವಜ್ರ, ಪರಿಘದ ಪೂರ್ವಾರ್ಧ, ವ್ಯತೀಪಾತ, ವೈಧೃತಿ, ಭದ್ರಾ, ಗ್ರಹಣ ರಾತ್ರಿ, ಸಂಧಿಕಾಲ, ಅಪರಾಹ್ಣಕಾಲ, ನಿದ್ರಾವಸ್ಥೆ, ಹರಿದವಸ್ತ್ರ, ಕೆಂಪುನೀಲಿ ವಸ್ತ್ರ, ಬಣ್ಣಬಣ್ಣದ ವಸ್ತ್ರ; ನಗ್ನತೆ, ಬೇರೆಯವರ ಮನೆ, ಬೇರೆ ಊರು, ಇಂತಹ ಸಂದರ್ಭಗಳಲ್ಲಿ ಪ್ರಥಮ ರಜೋದರ್ಶನವಾದರೆ ಅದು ನಿಂದ್ಯವಾಗಿರುತ್ತದೆ. ರಜೋದರ್ಶನವು ಸ್ವಲ್ಪ, ಅಧಿಕ ಅಥವಾ ನೀಲವರ್ಣವಾಗಿದ್ದರೆ ದುಷ್ಟಫಲ. ಕಸಬರಿಕೆ, ಕಟ್ಟಿಗೆ, ಹುಲ್ಲು, ಅಗ್ನಿ, ಮೊರ ಇವುಗಳು ಕೈಯಲ್ಲಿರುವಾಗ ರಜೋದರ್ಶನವಾದರೆ ಆ ಸ್ತ್ರೀಯು ವ್ಯಭಿಚಾರಿಣಿಯಾಗುತ್ತಾಳೆ. ಬಟ್ಟೆಯ ಮೇಲೆ ವಿಷಮ ಸಂಖ್ಯೆಯಲ್ಲಿ (೧, ೩, ೫) ರಕ್ತದ ಬಿಂದುಗಳಿದ್ದರೆ ಪುತ್ರಫಲವೂ ಸಮಸಂಖ್ಯೆಯಲ್ಲಿ (೨, ೪, ೬) ಇದ್ದರೆ ಕನ್ಯಾಫಲವೂ ಪ್ರಾಪ್ತವಾಗುತ್ತದೆ.

ಪ್ರಥಮ ರಜೋದರ್ಶನದ ನಂತರ ಮಾಡಬೇಕಾದ ವಿಧಿ:- ಅಕ್ಕಿಯನ್ನು ಹರಡಿ ಆಸನ ಮಾಡಿ ಅದರ ಮೇಲೆ ಆಕೆಯನ್ನು ಕುಳ್ಳಿರಿಸಿ, ಗಂಡ ಮತ್ತು ಮಕ್ಕಳು, ಇರುವ ಸುವಾಸಿನಿಯರು ಅರಸಿನ, ಕುಂಕುಮ, ಗಂಧ, ಹೂಮಾಲೆ, ತಾಬೂಲಾದಿಗಳನ್ನು ಅವಳಿಗೆ ಕೊಟ್ಟು, ಆರತಿ ಎತ್ತಿ ದೀಪ ಕನ್ನಡಿ ಇತ್ಯಾದಿಗಳಿಂದ ಶೋಭಿತವಾದ ಮನೆಯಲ್ಲಿ ಇರಿಸಿ, ಸುವಾಸಿನಿಯರಿಗೆ ಗಂಧ ಅರಸಿನ, ಕುಂಕುಮ ಮತ್ತು ಪಚ್ಚೆ ಹೆಸರು ಇತ್ಯಾದಿಗಳನ್ನು ಕೊಡಬೇಕು.

ಗರ್ಭಾಧಾನ:- ಇದು ಮಹತ್ವಪೂರ್ಣ ಸಂಸ್ಕಾರವಾಗಿದೆ. ಪತಿಯಿಂದ ಪತ್ನಿಯು ಮುಂದೆ ಹೊಂದಬಹುದಾದ ಸಂತತಿಗೆ ಸಂಬಂಧಿಸಿದ ಸಂಸ್ಕಾರವು ಇದಾಗಿರುವುದರಿಂದ ಇದು ಕ್ಷೇತ್ರಸಂಸ್ಕಾರವೆನಿಸುತ್ತದೆ. ಕ್ಷೇತ್ರವೆಂದರೆ ಬೀಜಬಿತ್ತುವ ಸ್ಥಾನ. ಗರ್ಭದ ಸ್ಥಾಪನೆ, ಪೋಷಣೆ ಹಾಗೂ ವರ್ಧನೆ ಆಗುವ ಸ್ಥಾನ, ರೈತನು ಸರಿಯಾಗಿ ಬಿತ್ತದಿದ್ದರೆ ಅವನಿಗೆ ಹೇಗೆ ಒಳ್ಳೆಯ ಬೆಳೆ ಸಿಗಲಾರದೋ ಅಂತೆಯೇ ಸರಿಯಾಗಿ ಗರ್ಭಾಧಾನ ಸಂಸ್ಕಾರವನ್ನು ಮಾಡದಿದ್ದರೆ ಸತ್ಸಂತಾನ ಪ್ರಾಪ್ತಿಯಾಗಲಾರದು. ಗರ್ಭಾಧಾನವೆಂದರೆ ನಿಷೇಕ. ಅದು ರಾತ್ರಿಯಲ್ಲಿ ಆಗಬೇಕು.

Scanned by CamScanner

ಬಾಲರೋದನ ಪರಿಹಾರಾಯ ಯಂತ್ರಂ



ಯಜ್ಞಕುಂಡಂ (ಚತುಷ್ಕೋಣಾಕೃತಿಃ)



Scanned by CamScanner
Scanned with CamScanner

ಸ್ಥಾಲೀಪಾಕಪ್ರಯೋಗಃ

(1)

[ಶ್ರೀಃ ॥ ಯಜಮಾನೋ ದ್ವಿರಾಚಮ್ಯ ದರ್ಭಪಾಣಿಃ ಪ್ರಾಣಾನಾಯಮ್ಯ ಮಮೋಪಾತ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಅಮುಕ ಕರ್ಮ ಕರಿಷ್ಯೇ ॥ ತದಂಗಹೋಮಂ ಕರ್ತುಂ ಸ್ಥಂಡಿಲಾದಿ ಕರಿಷ್ಯೇ ॥ ಇತಿ ಸಂಕಲ್ಪ್ಯ ॥]

ಗೋಮಯಾದಿಲಿಪ್ತೇ ಶುದ್ಧದೇಶೇ ಶುದ್ಧಮೃದಾ ಐಶಾನ್ಯಾರಂಭಮುದಕ್ಸಂಸ್ಥಂ ಚತುರಸ್ರಂ ಚತುರಂಗುಲೋನ್ನತಮಂಗುಲೋನ್ನತಂ ವಾ ಚತುರ್ದಿಕ್ಷು ಮಿಲಿತ್ವಾ ದ್ವಿಸಪ್ತತಿ ಅಂಗುಲಪರಿಧಿಕಂ ಫಲಿತಮಷ್ಟಾದಶಾಂಗುಲವಿಸ್ತೃತಂ ಹೋಮಾನುಸಾರೇಣ ತದಧಿಕಂ ವಾ ನ ತು ತತೋ ನ್ಯೂನಂ ಮಧ್ಯೋನ್ನತಂ ಸ್ಥಂಡಿಲಂ ಕುರ್ಯಾತ್ ॥ ತದ್ಗೋಮಯೇನ ಪ್ರದಕ್ಷಿಣಮುಪಲಿಪ್ಯ ॥

ಸ್ಥಾಲೀಪಾಕತಂತ್ರ:- ಇದು ಮುಖ್ಯವಾಗಿ ವಿವಾಹಾಂಗವಾದ **'ಗೃಹಪ್ರವೇಶನೀಯ'** ಹೋಮ ಮಾಡಿದ ನಂತರ ಬರುವ ಹುಣ್ಣಿಮೆ ಅಥವಾ ಅಮಾವಾಸ್ಯೆಯ ದಿನ ಮಾಡಬೇಕಾದ ಕರ್ಮವಿಶೇಷವಾಗಿರುತ್ತದೆ. ಆದರೆ ಇತರ ಎಲ್ಲ ಕರ್ಮಗಳಲ್ಲಿಯೂ ಮಾಡಬೇಕಾದ ಹೋಮಕಾರ್ಯದ ಎಲ್ಲ ವಿಚಾರಗಳೂ ವಿಧಿವಿಧಾನಗಳೂ ಇದರಲ್ಲಿ ಬರುವುದರಿಂದ ಇದನ್ನು ಆರಂಭದಲ್ಲಿ ಇಲ್ಲಿಯೇ ಕೊಡಲಾಗಿದೆ. ಎಲ್ಲ ಹೋಮಕಾರ್ಯಗಳೂ ಇದರಲ್ಲಿ ಹೇಳಿದ ವಿಧಾನದಂತೆ ನಡೆಯುವುದರಿಂದ ಇದು ಹೋಮಕರ್ಮಗಳಿಗೆ ಮೂಲ ಸ್ವರೂಪದಂತಿದೆ. ಶಾಸ್ತ್ರದಲ್ಲಿ: ೧. ಸ್ಥಾಲೀಪಾಕತಂತ್ರ. ೨. ವೈಶ್ವದೇವಿಕತಂತ್ರ. ೩. ಅಗ್ನಿಹೋತ್ರಿಕತಂತ್ರ ಎಂದು ಒಟ್ಟು ಮೂರು ತಂತ್ರಗಳನ್ನು ಹೇಳಿದ್ದಾರೆ.

೧. ಸ್ಥಾಲೀಪಾಕತಂತ್ರ:- ಇದನ್ನು ಅನುಸರಿಸುವಾಗ ಹೋಮಕ್ಕೆ ಸಂಬಂಧಿಸಿದ ಎಲ್ಲ ಕರ್ಮಗಳನ್ನೂ ಯಥಾಯೋಗ್ಯವಾಗಿ, ವಿಸ್ತಾರವಾಗಿ ಮಾಡಬೇಕಾಗುತ್ತದೆ. ಆದ್ದರಿಂದ ಇದನ್ನು **"ಆಧಾರತಂತ್ರ"** ಎಂದು ಕರೆಯುತ್ತಾರೆ. **"ಪಾಕಯಜ್ಞಾನಾಮೇತತ್ತಂತ್ರಂ"** (ಆಶ್ವಲಾಯನಗೃಹ್ಯಸೂತ್ರ ೧-೧೦-೨೫) ಈ ಸೂತ್ರದಿಂದ ಈ ತಂತ್ರವನ್ನು ವಿಧಿಸಲಾಗಿದೆ.

೨. ವೈಶ್ವದೇವಿಕತಂತ್ರ:- ಇದನ್ನು **"ಆಪೂರ್ವಿಕತಂತ್ರ"** ಎಂದು ಕರೆಯುತ್ತಾರೆ. ಈ ಕುರಿತು ಬೌಧಾಯನಸೂತ್ರದಲ್ಲಿ ಹಿಗೆ ಹೇಳಲ್ಪಟ್ಟಿದೆ: **"ಆಪೂರ್ವಿಕೇಷು ಯಾವದರ್ಥಂ ದ್ರವ್ಯಸಂಸ್ಕಾರಃ ಪರಿಸ್ತರಣಪರಿಷೇಚಕೌ ॥ ಯಾವದುಕ್ತಾ ಆಹುತಯೋ ಅನ್ನಾನಿ ಚ ವೈಶೇಷಿಕಾಣಿ ಕರ್ಮಾಣಿ"** ಈ ತಂತ್ರದಲ್ಲಿ ದ್ರವ್ಯಸಂಸ್ಕಾರ, ಪರಿಸ್ತರಣ, ಪರಿಷೇಚನ, ಪ್ರಧಾನಹೋಮ ಮತ್ತು ಆ ಕರ್ಮಗಳಿಗಾಗಿಯೇ ಹೇಳಿದ ವಿಶೇಷ ಕರ್ಮಗಳನ್ನು ಮಾಡಿದರೆ ಸಾಕಾಗುತ್ತದೆ. ವೈಶ್ವದೇವದಲ್ಲಿ ಈ ತಂತ್ರವನ್ನೇ ಅಂಗೀಕರಿಸಲಾಗಿದೆ. ಆಶ್ವಲಾಯನ ಹಾಗೂ

Scanned by CamScanner

Scanned with CamScanner

ದಕ್ಷಿಣೇಷ್ಟೌ ಉದೀಚ್ಯಾಂ ದ್ವೇ ಪ್ರತೀಚ್ಯಾಂ ಚತುಃ ಪ್ರಾಚ್ಯಾಮರ್ಧ-ಮಿತ್ಯಂಗುಲಾನಿ ತ್ಯಕ್ತ್ವಾ ದಕ್ಷಿಣೋಪಕ್ರಮಾಮುದಕ್ಸಂಸ್ಥಾಂ ಪ್ರಾದೇಶಮಾತ್ರಾ-ಮೇಕಾಂ ಲೇಖಾಂ ಲಿಖಿತ್ವಾ ತಸ್ಯಾ ದಕ್ಷಿಣೋತ್ತರಯೋಃ ಪ್ರಾಗಾಯತೇ ಪೂರ್ವರೇಖಯಾ ಅಸಂಸ್ಪೃಷ್ಟೇ ಪ್ರಾದೇಶಸಮ್ಮಿತೇ ದ್ವೇ ಲೇಖೇ ಲಿಖಿತ್ವಾ ತಯೋರ್ಮಧ್ಯೇ ಪರಸ್ಪರಮಸಂಸ್ಪೃಷ್ಟಾ ಉದಕ್ಸಂಸ್ಥಾಃ ಪ್ರಾಗಾಯತಾಃ ಪ್ರಾದೇಶಸಮ್ಮಿತಾಸ್ತಿಸ್ರ ಇತಿ ಷಡ್ಲೇಖಾ ಯಜ್ಞಿಯಶಕಲಮೂಲೇನ ದಕ್ಷಿಣ-ಹಸ್ತೇನೋಲ್ಲಿಖ್ಯ ಲೇಖಾಸು ತಚ್ಛಕಲಮುದಗಗ್ರಂ ನಿಧಾಯ ಸ್ಥಂಡಿಲಮದ್ಭಿರ-ಭ್ಯುಕ್ಷ್ಯ ಶಕಲಂ ಭಂಕ್ತ್ವಾ ಆಗ್ನೇಯ್ಯಾಂ ನಿರಸ್ಯ ಪಾಣಿಂ ಪ್ರಕ್ಷಾಲ್ಯ ವಾಗ್ಯತೋ ಭವೇತ್ ॥

ಬೌಧಾಯನ ಸೂತ್ರಗಳ ಪ್ರಕಾರ ಈ ಎರಡು ತಂತ್ರಗಳ ಪೈಕಿ ಯಾವುದನ್ನು ಬೇಕಾದರೂ ಸ್ವೀಕರಿಸಿಕೊಳ್ಳಬಹುದು.

೩. ಅಗ್ನಿಹೋತ್ರಿಕ ತಂತ್ರ:- ಅಗ್ನಿಹೋತ್ರಕ್ಕೆ ಸಂಬಂಧಿಸಿದ ಕರ್ಮಗಳು ಮಾತ್ರ ಇದರಲ್ಲಿ ಇರುವುದರಿಂದ ಇತರ ಕರ್ಮಗಳಲ್ಲಿ ಇದರ ಉಪಯೋಗವೇನೂ ಇರುವುದಿಲ್ಲ. ಆದ್ದರಿಂದ ಈ ತಂತ್ರದ ಕುರಿತು ವಿಸ್ತಾರವಾದ ವಿವರಣೆಯ ಅವಶ್ಯಕತೆ ಇಲ್ಲ.

ಸ್ಥಾಲೀಪಾಕಪ್ರಯೋಗ:- ಯಜಮಾನನು ಎರಡು ಸಲ ಆಚಮನಮಾಡಿ, ಪವಿತ್ರ ಧರಿಸಿ ಪ್ರಾಣಾಯಾಮ ಮಾಡಿ, **"ಮಮೋಪಾತ್ತ...ಕರಿಷ್ಯೇ"** ಎಂದು ಸಂಕಲ್ಪಮಾಡಬೇಕು.

ಗೋಮಯಲೇಪದಿಂದ ಶುಚಿಯಾಗಿರುವ ಪ್ರದೇಶದಲ್ಲಿ ಶುದ್ಧವಾದ ಮಣ್ಣಿನಿಂದ ಈಶಾನ್ಯ ದಿಕ್ಕಿನಿಂದ ಆರಂಭಿಸಿ ಉತ್ತರದಿಂದ ಪ್ರದಕ್ಷಿಣಾಕಾರವಾಗಿ ನಾಲ್ಕು ಅಥವಾ ಒಂದು ಅಂಗುಲದಷ್ಟು ಎತ್ತರವಿರುವ ಎಪ್ಪತ್ತೆರಡು ಅಂಗುಲ ಸುತ್ತಳತೆ ಇರುವ ಚೌಕಾಕಾರದ ಸ್ಥಂಡಿಲವನ್ನು ಮಾಡಬೇಕು. ಅಂದರೆ ಒಂದೊಂದು ಬದಿಯು ಹದಿನೆಂಟು ಅಂಗುಲವಿದ್ದಂತಾಯಿತು. ಹೋಮವನ್ನನುಸರಿಸಿ ಇದಕ್ಕಿಂತ ದೊಡ್ಡ ಸ್ಥಂಡಿಲವನ್ನೂ ಮಾಡಬಹುದು, ಸಣ್ಣದಾಗಬಾರದು, ಮಧ್ಯಭಾಗದಲ್ಲಿ ಎತ್ತರವಾಗಿರುವ ಈ ಸ್ಥಂಡಿಲವನ್ನು ಪ್ರದಕ್ಷಿಣಾಕಾರವಾಗಿ ಗೋಮಯದಿಂದ ಲೇಪಿಸಬೇಕು.

ಆಮೇಲೆ ದಕ್ಷಿಣದಲ್ಲಿ ಎಂಟು, ಉತ್ತರದಲ್ಲಿ ಎರಡು, ಪಶ್ಚಿಮದಲ್ಲಿ ನಾಲ್ಕು, ಪೂರ್ವದಲ್ಲಿ ಅರ್ಧ ಅಂಗುಲದಷ್ಟು ಸ್ಥಳವನ್ನು ಬಿಟ್ಟು ನಿಲ್ಲುವಂತೆ ದಕ್ಷಿಣದಿಂದ ಉತ್ತರಕ್ಕೆ ಪ್ರಾದೇಶ ಮಾತ್ರದ (ಚೋಟುದ್ದ) ಒಂದು ಗೆರೆಯನ್ನೂ, ಆ ಗೆರೆಯ ದಕ್ಷಿಣ ಮತ್ತು ಉತ್ತರ ಭಾಗದಲ್ಲಿ ಅಷ್ಟೇ ಉದ್ದದ, ಅದಕ್ಕೆ ತಾಗದ ಎರಡು ಗೆರೆಗಳನ್ನೂ ಪೂರ್ವಾಭಿಮುಖವಾಗಿ ಎಳೆದು ಅವುಗಳ ಮಧ್ಯದಲ್ಲಿ ಅಂತಹುದೇ ಮೂರು ಗೆರೆಗಳನ್ನೂ ಸಮಿಧೆಯಿಂದ ಎಳೆದು ಆ ಸಮಿಧೆಯನ್ನು ರೇಖೆಗಳ ಮೇಲೆ ಉತ್ತರಕ್ಕೆ ತುದಿ ಇರುವಂತೆ ಇಟ್ಟು ಸ್ಥಂಡಿಲವನ್ನು ನೀರಿನಿಂದ ಪ್ರೋಕ್ಷಿಸಿ ಸಮಿಧೆಯನ್ನು ಮುರಿದು, ಆಗ್ನೇಯ ದಿಕ್ಕಿಗೆ ಎಸೆದು ಮೌನವಾಗಿರಬೇಕು.

Scanned by CamScanner

ತತಸ್ತೈಜಸೇನಾಸಂಭವೇನ ಮೃಣ್ಮಯೇನ ವಾ ಪಾತ್ರಯುಗ್ಮೇನ ಸಂಪುಟೀಕೃತ್ಯ ಸುವಾಸಿನ್ಯಾ ಶ್ರೋತ್ರಿಯಾಗಾರಾತ್ಸ್ವಗೃಹಾದ್ವಾ ಸಮೃದ್ಧಂ ನಿರ್ಧೂಮಮಗ್ನಿಮಾಹೃತಂ ಸ್ಥಂಡಿಲಾದಾಗ್ನೇಯ್ಯಾಂ ನಿಧಾಯ ॥ ಜುಷ್ಟೋದಮೂನಾ ಆತ್ರೇಯೋ ವಸುಶ್ರುತೋಗ್ನಿಸ್ತ್ರಿಷ್ಟುಪ್ ॥ ಏಹ್ಯಗ್ನೇ ರಾಹೂಗಣೋ ಗೋತಮೋಗ್ನಿಸ್ತ್ರಿಷ್ಟುಪ್ ॥ ಅಗ್ನ್ಯಾವಾಹನೇ ವಿನಿಯೋಗಃ ಓಂ ಜುಷ್ಟೋದಮೂನಾ ಅತಿಥಿರ್ದುರೋಣ ಇಮಂ ನೋ ಯಜ್ಞಮುಪಯಾಹಿವಿದ್ವಾನ್ ॥ ವಿಶ್ವಾ ಅಗ್ನೇ ಅಭಿಯುಜೋವಿಹತ್ಯಾಶತ್ರೂಯತಾಮಾಭರಾಭೋಜನಾನಿ ॥

ಪ್ರೋಕ್ಷಣ ಕ್ರಮಃ- ಉತ್ತಾನೇನ ತು ಹಸ್ತೇನ ಕರ್ತವ್ಯಂ ಪ್ರೋಕ್ಷಣಂ ಭವೇತ್ ॥ ಅವಾಚೀನೇನ ಹಸ್ತೇನ ಕರ್ತವ್ಯಂ ಸ್ಯಾದವೋಕ್ಷಣಂ ॥ ಮುಷ್ಟೀಕರೋತಿ ಯತ್ತೋಯಮಭ್ಯುಕ್ಷಣಮಿತಿ ಸ್ಮೃತಂ ॥ ತಿರ್ಯಗ್ಭೂತೇನ ಹಸ್ತೇನ ಕೃತಂ ಪರ್ಯುಕ್ಷಣಂ ತಥಾ ॥ ಉತ್ತಾನ ಹಸ್ತದಿಂದ, ಅಂಗೈಯಿಂದ, ನೀರು ಸಿಂಪಡಿಸಿದರೆ "**ಪ್ರೋಕ್ಷಣ**"ವೆಂದೂ, ಕೈಯನ್ನು ಕೆಳಮುಖವಾಗಿ ಹಿಡಿದು ಪ್ರೋಕ್ಷಿಸಿದಾಗ "**ಅವೋಕ್ಷಣ**"ವೆಂದೂ, ಮುಷ್ಟಿಯಿಂದ ಸಿಂಪಡಿಸಿದಾಗ "**ಅಭ್ಯುಕ್ಷಣ**"ವೆಂದೂ ಅಡ್ಡ ಅಡ್ಡವಾಗಿ ಚಿಮುಕಿಸಿದಾಗ "**ಪರ್ಯುಕ್ಷಣ**"ವೆಂದೂ ತಿಳಿಯಬೇಕು.

ಮೌನದಿಂದ ಇರಬೇಕಾದ ಆವಶ್ಯಕತೆ:-ಸ್ನಾಸ್ಯತೋ ವರುಣಃ ಕಾಂತಿಂ ಜುಹ್ವತೋಪಿ ಶ್ರಿಯಂ ಹರೇತ್ ॥ ಭುಂಜತೋ ಮೃತ್ಯುರಾಯುಷ್ಯಂ ತಸ್ಮಾನ್ಮೌನಂ ತ್ರಿಷು ಸ್ಮೃತಂ ॥ ಸ್ನಾನಮಾಡುವಾಗ ಮೌನಿಯಾಗಿರದಿದ್ದರೆ ವರುಣನು ಕಾಂತಿಯನ್ನೂ, ಹೋಮ ಮಾಡುವಾಗ ಅಗ್ನಿಯು ಸಂಪತ್ತನ್ನೂ, ಊಟಮಾಡುವಾಗ ಮೃತ್ಯುವು ಆಯುಷ್ಯವನ್ನೂ ಹರಣ ಮಾಡುತ್ತಾನೆ. ಆದ್ದರಿಂದ ಈ ಮೂರು ಸಂದರ್ಭಗಳಲ್ಲೂ ಮೌನದಿಂದಿರಬೇಕು.

ಆಮೇಲೆ ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಲೋಹದ ಪಾತ್ರೆ ಅಥವಾ ಮಣ್ಣಿನ ಪಾತ್ರೆಯಲ್ಲಿ ಅಗ್ನಿಯ ಹೊಗೆ ಇಲ್ಲದ ಉಜ್ವಲವಾದ ಕೆಂಡಗಳನ್ನು ತೆಕ್ಕೊಂಡು ಮತ್ತೊಂದು ಪಾತ್ರೆಯಿಂದ ಅದನ್ನು ಮುಚ್ಚಿ ತಂದು ಸ್ಥಂಡಿಲದ ಆಗ್ನೇಯ ದಿಕ್ಕಿನಲ್ಲಿಟ್ಟು "**ಜುಷ್ಟೋದಮೂನಾ**" "**ಏಹ್ಯಗ್ನೇ**" ಎಂಬ ಮಂತ್ರಗಳನ್ನು ಹೇಳಿ, ಅಕ್ಷತೆಗಳನ್ನು ಹಾಕಿ ಆವಾಹಿಸಿ, ಮುಚ್ಚಳ ತೆಗೆದು ಪಾತ್ರೆಯನ್ನು ಎರಡು ಕೈಗಳಿಂದಲೂ ಅಗ್ನಿಯು ತನಗೆ ಎದುರಾಗುವಂತೆ ಎತ್ತಿಹಿಡಿದು "**ಓಂ ಭೂರ್ಭುವಃ ಸ್ವಃ**" ಎಂದು ಹೇಳುತ್ತ ಆರು ಗೆರೆಗಳ ಮೇಲೆ ಪ್ರತಿಷ್ಠಾಪಿಸಬೇಕು. ಅಗ್ನಿ ತಂದ ಪಾತ್ರೆಗೆ ಅಕ್ಷತೋದಕವನ್ನು ಹಾಕಿ ಎರಡು ಪಾತ್ರೆಗಳನ್ನೂ ಒಂದುಗೂಡಿಸಿ ಪ್ರೋಕ್ಷಿಸಿದ ಕಟ್ಟಿಗೆಗಳನ್ನಿಟ್ಟು ಬಿದಿರ ಒಟೆಯಿಂದ ಗಾಳಿ ಹಾಕಿ ಅಗ್ನಿಯನ್ನು ಪ್ರಜ್ವಲಿಸಿ ಹೀಗೆ ಧ್ಯಾನಿಸಬೇಕು.

Scanned by CamScanner
Scanned with CamScanner

ಓಂ ಏಹ್ಯಗ್ನ ಇಹ ಹೋತಾನಿಷೀದಾದಬ್ಧಃ ಸುಪುರ ಏತಾ ಭವಾನಃ ॥ ಅವತಾಂತ್ವಾ ರೋದಸೀ ವಿಶ್ವಮಿನ್ವೇಯಜಾಮಹೇಸೌಮನಸಾಯ ದೇವಾನ್ ॥ ಇತ್ಯಕ್ಷತೈ-ರಾವಾಹ್ಯ ಆಚ್ಛಾದನಂ ದೂರೀಕೃತ್ಯ ॥ ಸಮಸ್ತವ್ಯಾಹೃತ್ಯಾಹುತೀನಾಂ ಪರಮೇಷ್ಠೀ ಪ್ರಜಾಪತಿಃ ಪ್ರಜಾಪತಿರ್ಬೃಹತೀ ॥ ಅಗ್ನಿಪ್ರತಿಷ್ಠಾಪನೇ ವಿನಿಯೋಗಃ ॥ ಓಂ ಭೂರ್ಭುವಃ ಸ್ವಃ ॥ ಇತ್ಯಾತ್ಮಾಭಿಮುಖಂ ಪಾಣಿಭ್ಯಾಂ ಷಟ್ಸು ಲೇಖಾಸು ಅಮುಕನಾಮಾನಮಗ್ನಿಂ ಪ್ರತಿಷ್ಠಾಪಯಾಮಿ ಇತ್ಯಗ್ನಿಂ ಪ್ರತಿಷ್ಠಾಪ್ಯ ॥ ಆನೀತಾಗ್ನಿಪಾತ್ರೇ ಅಕ್ಷತೋದಕಂ ಪ್ರಾಸ್ಯ ಪಾತ್ರದ್ವಯಮೇಕೀಕೃತ್ಯ ॥ ಪ್ರೋಕ್ಷಿತೇಂಧನಾನಿ ನಿಕ್ಷಿಪ್ಯ ವೇಣುಧಮನ್ಯಾ ಪ್ರಭೋಧ್ಯ ॥ ಧ್ಯಾಯೇದೇವಂ ॥ (3)

ಉತ್ತಮವಾದ ಅಗ್ನಿ ಯಾವುದು?:- ಉತ್ತಮೋಽರಣಿಜನ್ಯೋಽಗ್ನಿರುತ್ತಮಃ ಸೂರ್ಯ ಕಾಂತಜಃ ॥ ಮಧ್ಯಮಃ ಶ್ರೋತ್ರಿಯಾಗಾರಾದಧಮಃ ಸ್ವಗೃಹಾದಿಜಃ ॥ [ಸಿದ್ಧಾಂತಶೇಖರ] ಅರಣಿ, ಶಮೀವೃಕ್ಷ, ಸೂರ್ಯಕಾಂತ ಇತ್ಯಾದಿಗಳಿಂದ ಸೃಷ್ಟಿಸಿ ತೆಗೆದ ಅಗ್ನಿಯು ಉತ್ತಮವಾದುದು. ತನ್ನ ಮನೆ ಅಥವಾ ಇತರ ಕಡೆಗಳಿಂದ ತಂದ ಅಗ್ನಿಯು ಅಧಮವಾದುದು.

ಅಗ್ನಿಪ್ರತಿಷ್ಠಾಪನೆ:- ಕುಂಡೇ ವಾ ಸ್ಥಂಡಿಲೇ ವಾಪಿ ತತ್ತನ್ನಾಮ್ನಾ ಹವಿರ್ಭುಜಂ ॥ ವ್ಯಾಹೃತೀಭಿರ್ಮಧ್ಯದೇಶೇ ಯೋಗ್ಯಂ ಸ್ವಾಭಿಮುಖಂ ಕ್ಷಿಪೇತ್ ॥ ಯಜ್ಞಕುಂಡದಲ್ಲಿ ಅಥವಾ ಸ್ಥಂಡಿಲದಲ್ಲಿ **"ಓಂ ಭೂರ್ಭುವಃ ಸ್ವಃ"** ಎಂದು ವ್ಯಾಹೃತಿಗಳನ್ನು ಉಚ್ಚರಿಸಿ ಆಯಾ ಕರ್ಮಕ್ಕೆ ನಿರ್ದೇಶಿಸಿದ ಆಯಾ ಹೆಸರಿನ ಅಗ್ನಿಯನ್ನು ('ಅಮುಕ ನಾಮಾನಮಗ್ನಿಂ' ಎಂಬಲ್ಲಿ ಆ ಹೆಸರನ್ನು ಹೇಳಿ) ತನ್ನ ಮುಂಭಾಗದಲ್ಲಿ ಪ್ರತಿಷ್ಠಾಪಿಸಬೇಕು.

ಪ್ರೋಕ್ಷಿಸದೇ ಕಟ್ಟಿಗೆಗಳನ್ನು ಅಗ್ನಿಯಲ್ಲಿ ಹಾಕಬಾರದು:- "ನಾಪ್ರೋಕ್ಷಿತಮಿಂಧನ-ಮಗ್ನಾವಾದಧ್ಯಾತ್".

ಅಗ್ನಿಪ್ರಜ್ವಲನ ಕ್ರಮ:- ವೇಣೋರಗ್ನೇಃ ಪ್ರಸೂತತ್ವಾದ್ವೇಣುರಗ್ನಿಶ್ಚ ಪಾವನೌ ॥ ತಸ್ಮಾದ್ವೇಣುಧಮನ್ಯೈವ ಧಮೇದಗ್ನಿಂ ವಿಚಕ್ಷಣಃ ॥ "ನ ವೇಣುನಾ ಅಗ್ನಿಂ ಸ್ಪೃಶೇತ್" ಬಿದಿರಿನಿಂದ ಅಗ್ನಿಯು ಉತ್ಪನ್ನವಾಗುವುದರಿಂದ ವೇಣು ಮತ್ತು ಅಗ್ನಿ ಇವೆರಡೂ ಪವಿತ್ರ ವಾಗಿವೆ. ಮಾತ್ರವಲ್ಲ ಊದುವಾಗ ಬಿದಿರಕೊಳವೆಯನ್ನು ಅಗ್ನಿಗೆ ಮುಟ್ಟಿಸಬಾರದು. **"ವಸ್ತ್ರೇಣ ವಾಥ ಪರ್ಣೇನ ಪಾಣಿಶೂರ್ಪಾಸ್ಯದಾರುಭಿಃ ॥ ನ ಕುರ್ಯಾದಗ್ನಿಧಮನಂ ನಕುರ್ಯಾದ್ವ್ಯಜನಾದಿನಾ" ॥** ವಸ್ತ್ರ, ಎಲೆ, ಕಟ್ಟಿಗೆತುಂಡು, ಕೈ, ಮೊರ, ಬಾಯಿ, ಬೀಸಣಿಗೆ ಮುಂತಾದವುಗಳಿಂದ ಅಗ್ನಿಯನ್ನು ಊದಬಾರದು. **"ಚತ್ವಾರಿಶೃಂಗಾ ..."** ಎಂಬಲ್ಲಿಂದ

Scanned by CamScanner

ಚತ್ವಾರಿಶೃಂಗಾ ಗೋತಮೋ ವಾಮದೇವೋಽಗ್ನಿಸ್ತ್ರಿಷ್ಟುಪ್ ॥ ಅಗ್ನಿಮೂರ್ತಿ ಧ್ಯಾನೇ ವಿನಿಯೋಗಃ ॥ ಓಂ ಚತ್ವಾರಿಶೃಂಗಾತ್ರಯೋ ಅಸ್ಯಪಾದ್ದಾದ್ವೇ ಶೀರ್ಷೇ ಸಪ್ತಹಸ್ತಾಸೋ ಅಸ್ಯ ॥ ತ್ರಿಧಾಬದ್ಧೋ ವೃಷಭೋರೋರವೀತಿ ಮಹೋ- ದೇವೋ ಮರ್ತ್ಯಾ ಆವಿವೇಶ ॥ ಸಪ್ತಹಸ್ತಶ್ಚತುಃಶೃಂಗಃ ಸಪ್ತಜಿಹ್ವೋ ದ್ವಿಶೀರ್ಷಕಃ ॥ ತ್ರಿಪಾತ್ಪ್ರಸನ್ನವದನಃ ಸುಖಾಸೀನಃ ಶುಚಿಸ್ಮಿತಃ ॥ ಸ್ವಾಹಾಂ ತು ದಕ್ಷಿಣೇ ಪಾರ್ಶ್ವೇ ದೇವೀಂ ವಾಮೇ ಸ್ವಧಾಂ ತಥಾ ॥ ಬಿಭ್ರದ್ದಕ್ಷಿಣ ಹಸ್ತೈಸ್ತು ಶಕ್ತಿಮನ್ನಂ ಸ್ರುಚಂ ಸ್ರುವಂ ॥ ತೋಮರಂ ವ್ಯಜನಂ ವಾಮೈಃ ಘೃತಪಾತ್ರಂ ಚ ಧಾರಯನ್ ॥ ಮೇಷಾರೂಢೋ ಜಟಾಬದ್ಧೋ ಗೌರವರ್ಣೋ ಮಹೌ- ಜಸಃ ॥ ಧೂಮ್ರಧ್ವಜೋ ಲೋಹಿತಾಕ್ಷಃ ಸಪ್ತಾರ್ಚಿಃ ಸರ್ವಕಾಮದಃ ॥ ಆತ್ಮಾಭಿಮುಖಮಾಸೀನ ಏವಂ ರೂಪೋ ಹುತಾಶನಃ ॥ [ಅಥಾಗ್ನಿಮೂರ್ತಿಂ ವಕ್ಷ್ಯಾಮಿ ಸರ್ವಾಭೀಷ್ಟಪ್ರದಾಯಕಂ ॥ ಏಕದೇಹಂ ದ್ವಿಶೀರ್ಷಸ್ಕಂ ಜಟಾ- ಮುಕುಟಮಂಡಿತಂ ॥ ಸುದೀಪ್ತಸ್ವರ್ಣವಪುಷಂ ಶಶಾಂಕಶಕಲಾನ್ವಿತಂ ॥ ಚತುಃ ಶ್ರೋತ್ರಂ ದ್ವಿನಾಸಂ ಚ ಷಡಕ್ಷಂ ಪಿಂಗಲಪ್ರಭಂ ॥ ಆಸ್ಯದ್ವಯಂ ಸುತಾ- ಮ್ರೋಷ್ಠಂ ಸಪ್ತ ಜಿಹ್ವಾಸಮಾವೃತಂ ॥ ದಕ್ಷಿಣಾಸ್ಯೇ ಚತುರ್ಜಿಹ್ವಾಸ್ತಿಸ್ರೋ ವೈ ವಾಮವಕ್ತ್ರಕೇ ॥ ಪ್ರಸನ್ನಂ ಸುಸ್ಮಿತಂ ಶಾಂತಂ ಸಪ್ತಹಸ್ತಸಮನ್ವಿತಂ ॥ ದಕ್ಷಿಣೇ ಚ ಚತುರ್ಹಸ್ತಂ ವಾಮಭಾಗೇ ತ್ರಿಹಸ್ತಕಂ ॥ ಸ್ರುಕ್ ಸ್ರುವೌ ಶಕ್ತಿಮಿಧ್ಮಂ ಚ ಧಾರಯನ್ ದಕ್ಷಿಣೈರ್ಭುಜೈಃ ॥ ಧಾರಯನ್ತೋಮರಂ ವಾಮೇ ವ್ಯಜನಂ ಘೃತಪಾತ್ರಕಂ ॥ ತ್ರಿಮೇಖಲಂ ತ್ರಿಪಾದಂ ಚ ಮೇಷಾರೂಢಂ ವರ- ಪ್ರದಂ ॥ ಯಜ್ಞಸೂತ್ರಧರಂ ಸೌಮ್ಯಂ ಸರ್ವಾಭರಣಭೂಷಿತಂ ॥ ರಕ್ತಾಂಬರ- ಧರಂ ದೇವಂ ರಕ್ತಮಾಲಾವಿಭೂಷಿತಂ ॥ ರಕ್ತಚಂದನಲಿಪ್ತಾಂಗಂ ಜ್ವಾಲಾ- ಕೋಟಿಸಮಪ್ರಭಂ ॥ ಸ್ವಾಹಾ ಚ ದಕ್ಷಿಣೇ ಪಾರ್ಶ್ವೇ ದೇವೀ ವಾಮೇ ಸ್ವಧಾ

"ಏವಂ ರೂಪೋ ಹುತಾಶನಃ" [ಅಥಾಗ್ನಿ... ಸುವರದೋ ಭವ] ಎಂಬಲ್ಲಿ ವರೇಗೆ ಕೈ ಜೋಡಿಸಿ ಅಗ್ನಿಮೂರ್ತಿಯ ಧ್ಯಾನಮಾಡಬೇಕು.

Scanned by CamScanner
Scanned with CamScanner

ಭವೇತ್ ॥ ಏವಂ ಸಂಚಿತ್ಯ ಮನಸಾ ವಹ್ನಿಮಧ್ಯೇ ತಮಾಹ್ವಯೇತ್ ॥ ಅಗ್ನೇ ವೈಶ್ವಾನರ ಶಾಂಡಿಲ್ಯಗೋತ್ರ ಮೇಷಧ್ವಜ ಪ್ರಾಙ್ಮುಖೋ ಮಮ ಸಮ್ಮುಖೋ ಭವ ॥ ಸುಪ್ರತಿಷ್ಠಿತೋ ಭವ ॥ ಸುಪ್ರಸನ್ನೋ ಭವ ॥ ಸುವರದೋ ಭವ ॥]

ತತೋ ಯದಿ ಸಮಿಧಾದೌ ಸಮಾರೋಪಿತೋಽಗ್ನಿಸ್ತರ್ಹಿ ಪ್ರತ್ಯವರೋಹಣಂ ಕಾರ್ಯಂ ॥ ತಚ್ಚೈವಂ ॥ ಪ್ರತ್ಯವರೋಹೇತ್ಯಸ್ಯ ಹಿರಣ್ಯಗರ್ಭೋಽಗ್ನಿಸ್ತ್ರಿಷ್ಟುಪ್ ಸಮಾರೋಪಿತಸ್ಯಾಗ್ನೇಃಪ್ರತ್ಯವರೋಹಣೇ ವಿನಿಯೋಗಃ ॥ ಓಂ ಪ್ರತ್ಯವರೋಹ ಜಾತವೇದಃ ಪುನಸ್ತ್ವಂ ದೇವೇಭ್ಯೋ ಹವ್ಯಂ ವಹನಃ ಪ್ರಜಾನನ್ ॥ ಪ್ರಜಾಂ ಪುಷ್ಟಿಂ ರಯಿಮಸ್ಮಾಸುಧೇಹ್ಯಥಾ ಭವ ಯಜಮಾನಾಯಶಂಯೋಃ ॥ ಇತಿ ಮಂತ್ರೇಣ ಸಮಾರೋಪಿತಾಗ್ನಿಸಮಿಧಂ ಸ್ಥಾಪಿತೇಽಗ್ನೌ ಪ್ರಕ್ಷಿಪೇದಿತಿ ॥]

ಸಮಿದ್ದ್ವಯಮಾದಾಯ ॥ ತತ್ರ ದೇವತಾಪರಿಗ್ರಹಾರ್ಥಮನ್ವಾಧಾನಂ ಕರಿಷ್ಯೇ ॥ ಅಸ್ಮಿನ್ ಅನ್ವಾಹಿತೇಽಗ್ನೌ ಜಾತವೇದಸಮಗ್ನಿಮಿಧ್ಮೇನ ಪ್ರಜಾಪತಿಂ ಪ್ರಜಾಪತಿಂ ಚಾಘಾರದೇವತೇ ಆಜ್ಯೇನ ॥ ಅಗ್ನೀಷೋಮೌ ಚಕ್ಷುಷೀ ಆಜ್ಯೇನ ॥ ಅತ್ರ ಪ್ರಧಾನಂ ॥ (ಅಗ್ನಿಮಗ್ನೀಷೋಮೌ ಚ ಪ್ರಧಾನದೇವತೇ ಚರುದ್ರವ್ಯೇಣ ॥ ದರ್ಶೇತು ಅಗ್ನಿಮಿಂದ್ರಾಗ್ನೀ ಚ ಪ್ರಧಾನದೇವತೇ ಚರುದ್ರವ್ಯೇಣ ಇತಿ ವಿಶೇಷಃ) ॥

ಶೇಷೇಣ ಸ್ವಿಷ್ಟಕೃತಮಗ್ನಿಂ, ಇಧ್ಮಸನ್ನಹನೇನ ರುದ್ರಂ, ಅಯಾಸಮಗ್ನಿಂ, ದೇವಾನ್, ವಿಷ್ಣುಮಗ್ನಿಂ ವಾಯುಂ ಸೂರ್ಯಂ ಪ್ರಜಾಪತಿಂ ಚೈತಾಃ ಪ್ರಾಯಶ್ಚಿತ್ತ ದೇವತಾ ಆಜ್ಯೇನ ಜ್ಞಾತಾಜ್ಞಾತದೋಷನಿಬರ್ಹಣಾರ್ಥಂ ತ್ರಿವಾರಮಗ್ನಿಂ,

---

ಅಗ್ನಿಪ್ರತ್ಯವರೋಹಣ ಕ್ರಮ:- ಸಮಿಧೆಗಳ ಮೇಲೆ ಅಗ್ನಿಯನ್ನು ಆವಾಹಿಸಿ ಇಡುವ ಹಾಗೂ ಅದನ್ನು ಒಂದೆಡೆಯಿಂದ ಇನ್ನೊಂದು ಸ್ಥಳಕ್ಕೆ ಕೊಂಡೊಯ್ಯುವ ಕ್ರಮ ಉಂಟು. ಹಾಗೆ ಮಾಡಿರುವ ಸಂದರ್ಭದಲ್ಲಿ ಹಾಗೆ ಸಮಿಧೆಗಳ ಮೇಲೆ ಆರೋಹಿಸಿದ ಅಗ್ನಿಯನ್ನು **"ಪ್ರತ್ಯವರೋಹಣ"** ಮಾಡಬೇಕು, ಇಳಿಸಬೇಕು. ಅದರ ಕ್ರಮ ಹೀಗಿದೆ. ಅಗ್ನಿಯನ್ನು

Scanned by CamScanner

ಮರುತಶ್ಚಾಜ್ಯೇನ, ವಿಶ್ವಾನ್ ದೇವಾನ್ ಸಂಸ್ರಾವೇಣ ಯಕ್ಷ್ಯೇ ।। ಅಂಗ ದೇವತಾಃ ಪ್ರಧಾನದೇವತಾಃ ಸರ್ವಾಃ ಸನ್ನಿಹಿತಾಸ್ಸಂತು ।। ಏವಂ ಸಾಂಗೋಪಾಂಗೇನ ಕರ್ಮಣಾ ಸದ್ಯೋ ಯಕ್ಷ್ಯೇ ।। ಸಮಸ್ತವ್ಯಾಹೃತೀನಾಂ ಪರಮೇಷ್ಠೀ ಪ್ರಜಾಪತಿಃ ಪ್ರಜಾಪತಿರ್ಬೃಹತೀ ಅನ್ವಾಧಾನಸಮಿದ್ಧೋಮೇ ವಿನಿಯೋಗಃ ।। ಓಂ ಭೂರ್ಭುವಃ ಸ್ವಃ ಸ್ವಾಹಾ ।। ಪ್ರಜಾಪತಯ ಇದಂ ನಮಮ ।।

ಅಗ್ನ್ಯಾಯತನಾದಷ್ಟಾಂಗುಲಪರಿಮಿತೇ ದೇಶೇ ಐಶಾನೀಂ ದಿಶಮಾರಭ್ಯ ಪ್ರದಕ್ಷಿಣಂ ಸಮಂತಾತ್ಸೋದಕೇನ ಪಾಣಿನಾ ತ್ರಿಃ ಪರಿಮೃಜ್ಯ ಪೂರ್ವಮುಪರಿನಿಹಿತ ದರ್ಭೈಃ ದಶಾಂಗುಲಮಿತೇ ದೇಶೇ ಪ್ರಾಚ್ಯಾದಿಷು ಪರಿಸ್ತೃಣೀಯಾತ್ ।। ತತ್ರ ಪ್ರಾಚ್ಯಾಂ, ಪ್ರತೀಚ್ಯಾಂ ಚೋದಗಗ್ರಾ ದರ್ಭಾಃ । ಅವಾಚ್ಯಾಮುದೀಚ್ಯಾಂಚ ಪ್ರಾಗಗ್ರಾಃ ।। ಪೂರ್ವಪಶ್ಚಾತ್ಪರಿಸ್ತರಣಯೋರುಪರಿ ದಕ್ಷಿಣಪರಿಸ್ತರಣಂ ಉತ್ತರಪರಿಸ್ತರಣಂ ತು ತದಗ್ರಯೋರಧಸ್ತಾತ್ ।। ತೇ ಚ ದರ್ಭಾ ಅನಿಯತಸಂಖ್ಯಾ ಏಕೈಕಸ್ಯಾಂ ದಿಶಿ ಚತ್ವಾರಶ್ಚತ್ವಾರ ಇತಿ ಷೋಡಶ ವಾ ।। ತತೋಽಗ್ನೇರ್ದಕ್ಷಿಣತೋ ಬ್ರಹ್ಮಾಸನಾರ್ಥಂ ಉತ್ತರತಶ್ಚ ಪಾತ್ರಾಸಾದನಾರ್ಥಂ ಕಾಂಶ್ಚಿತ್ಪ್ರಾಗಗ್ರಾನ್ ದರ್ಭಾನಾಸ್ತೃಣೀಯಾತ್ ।। ಅಗ್ನೇರೈಶಾನತಃ ತ್ರಿರಂಭಸಾ ಪರಿಷಿಚ್ಯ ।।

ಆವಾಹಿಸಿದ ಸಮಿಧೆಗಳನ್ನು ಕೈಯಲ್ಲಿ ಹಿಡಿದು "ಪ್ರತ್ಯವರೋಹ" ಎಂಬ ಮಂತ್ರವನ್ನು ಹೇಳಿ ಕುಂಡದಲ್ಲಿ ಅಥವಾ ಸ್ಥಂಡಿಲದಲ್ಲಿ ಸ್ಥಾಪಿಸಿದ ಅಗ್ನಿಯಲ್ಲಿ ಅವುಗಳನ್ನು ಸಮರ್ಪಿಸಬೇಕು.

ಆಮೇಲೆ ಬಲಮೊಣಕಾಲಿನ ಮೇಲೆ ಎಡಗೈಯನ್ನಿಟ್ಟು ಅದರ ಮೇಲೆ ಬಲಗೈಯಿಂದ ಎರಡು ಸಮಿಧೆಗಳನ್ನು ಹಿಡಿದು, **"ತತ್ರ ದೇವತಾಪರಿಗ್ರಹಾರ್ಥಂ... ಚಕ್ಷುಷೀ ಆಜ್ಯೇನ'** ಎಂದು ಹೇಳಿ ಆಯಾ ಕರ್ಮಾಂಗವಾಗಿ ಮಾಡುವ ಹೋಮದ ಪ್ರಧಾನದೇವತೆ, ಹವನದ್ರವ್ಯ ಮತ್ತು ಆಹುತಿಗಳ ಸಂಖ್ಯೆನ್ನು ಹೇಳಬೇಕು. ಬಳಿಕ **"ಶೇಷೇಣ ಸ್ವಿಷ್ಟಕೃತ... ಇದಂ ನಮಮ"** ಎಂದಿಷ್ಟು ಹೇಳಿ ಆಸಮಿಧೆಗಳನ್ನು ಅಗ್ನಿಯಲ್ಲಿ ಆಹುತಿ ಕೊಡಬೇಕು. ಆವರಣದಲ್ಲಿ ಕೊಟ್ಟ ಪ್ರಧಾನದೇವತೆ ಸ್ಥಾಲೀಪಾಕಕ್ಕೆ ಮಾತ್ರ ಸಂಬಂಧಿಸಿದ್ದು ಇತರ ಹೋಮಗಳಲ್ಲಿ ಇದನ್ನು ಹೇಳುವ ಆವಶ್ಯಕತೆ ಇಲ್ಲ.

"ಇಧ್ಮಸನ್ನಹನ" ಎಂದರೆ ಇಧ್ಮವನ್ನು ಕಟ್ಟುವ ದರ್ಭೆಯ ಹಗ್ಗದ ಹೆಸರು. ಅದು ಈ ಪ್ರಕಾರವಾಗಿರಬೇಕು. ಸಾಧಾರಣ ಗೇಣುದ್ದದ ಮೂರು ಮೂರು ದರ್ಭೆಯ ತುಂಡುಗಳನ್ನು ಒಟ್ಟಿಗೆ ತಿರುವಬೇಕು. ಹಾಗೆ ತಿರುವಿಟ್ಟ ಆ ಮೂರನ್ನು ಒಟ್ಟುಸೇರಿಸಿ ತಿರುವಿ ಹಗ್ಗದಂತೆ ಮಾಡಬೇಕು. ತುದಿಮುಟ್ಟುವಾಗ ಪುನಃ ಮೂರು ಮೂರು ದರ್ಭೆಗಳನ್ನು ತೆಗೆದುಕೊಂಡು ಸೇರಿಸಿ ತಿರುವುತ್ತ ಹಗ್ಗದಂತೆ ಹೊಸೆಯಬೇಕು. ಹೀಗೆ ಒಟ್ಟು ಮೂವತ್ತಾರು ದರ್ಭೆಗಳಿರಬೇಕು. ಹೀಗೆ ಮಾಡಿದಾಗ ಮೂರು ಕಡೆ ಸಂದುಗಳಿದ್ದ ತ್ರಿಸಂಧಾನ ರಜ್ಜು ಆಗುತ್ತದೆ. ಈ ರಜ್ಜುವಿನಿಂದ ಹದಿನೈದು ಸಮಿಧೆಗಳನ್ನು ಒಟ್ಟಿಗೆ ಇಟ್ಟು ಕಟ್ಟಬೇಕು. ಅದನ್ನು ಇಧ್ಮವೆಂದು ಕರೆಯುತ್ತಾರೆ.

Scanned by CamScanner

Scanned with CamScanner

ಉತ್ತರಾಸ್ತೀರ್ಣೇಷು ದರ್ಭೇಷು ದಕ್ಷಿಣಸವ್ಯಪಾಣಿಭ್ಯಾಂ ಕ್ರಮೇಣ ಚರುಸ್ಥಾಲೀ ಪ್ರೋಕ್ಷಣ್ಯೌ ದರ್ವೀಸ್ರುವೌ ಪ್ರಣೀತಾಜ್ಯಪಾತ್ರೇ ಇಧ್ಮಾಬರ್ಹಿಷೀ ಶೂರ್ಪಕೃಷ್ಣಾಜಿನೇ ಉಲೂಖಲಮುಸಲೇ ಚೇತಿ ದ್ವೇ ದ್ವೇ ಉದಗಪವರ್ಗಂ ಪ್ರಾಕ್ಸಂಸ್ಥಂಚ ನ್ಯುಬ್ಜಾನ್ಯಾಸಾದಯೇತ್ ॥ ಆಜ್ಯಮಾತ್ರಹೋಮೇತು ಪ್ರೋಕ್ಷಣೀಸ್ರುವೌ ಪ್ರಣೀತಾಜ್ಯಪಾತ್ರೇ ಇಧ್ಮಾಬರ್ಹಿರ್ಚೇತ್ಯೇತಾವತಾಮೇವಾಸಾದನಂ ॥

ಪ್ರಾದೇಶಪ್ರಮಾಣ ಉದ್ದವಿರುವ ಎಂಭತ್ತೆಂಟು ಅಥವಾ ಒಂದು ಮುಷ್ಟಿ ದರ್ಭೆಗಳನ್ನು ಒಟ್ಟುಸೇರಿಸಿ ದರ್ಭೆಗಳಿಂದ ಕಟ್ಟಿ ಬರ್ಹಿಯನ್ನು ಮಾಡಿಕೊಳ್ಳಬೇಕು. **(ಅಷ್ಟಾಶೀತಿಃ ಕುಶಾಃ ಬರ್ಹಿರಿಧ್ಮ: ಪಂಚದಶ ಸ್ಮೃತಃ) "ಸದ್ಯೋಯಕ್ಷ್ಯೇ..."** ಮರುದಿನ ಹೋಮಮಾಡುವುದಾದರೆ **"ಶ್ವೋ ಯಕ್ಷ್ಯೇ"** ಎಂದು ಹೇಳಬೇಕು. ಇದಾದ ಮೇಲೆ **"ಸಮಸ್ತವ್ಯಾಹೃತೀನಾಂ...ಸ್ವಾಹಾ ನಮಮ"** ಎಂದು ಆ ಸಮಿಧೆಗಳನ್ನು ಹೋಮಮಾಡಬೇಕು.

ಸ್ಥಂಡಿಲ ಅಥವಾ ಕುಂಡದಿಂದ ಎಂಟು ಅಂಗುಲ ದೂರದಲ್ಲಿ ಈಶಾನ್ಯ ದಿಕ್ಕಿನಿಂದ ತೊಡಗಿ ಪ್ರದಕ್ಷಿಣಾಕಾರವಾಗಿ ಮೂರು ಸಲ ನೀರು ಚಿಮುಕಿಸಿ ಕೈಯಿಂದ ಉಜ್ಜಿ ಸ್ವಚ್ಛ ಮಾಡಬೇಕು. ಆಮೇಲೆ ಹತ್ತು ಅಂಗುಲ ಹೊರವಲಯದಲ್ಲಿ ಪರಿಸ್ತರಣಗಳನ್ನು ಹಾಕಬೇಕು. ಪೂರ್ವ ಮತ್ತು ಪಶ್ಚಿಮದಲ್ಲಿ ಇಡುವ ದರ್ಭೆಗಳ ತುದಿಗಳು ಉತ್ತರಕ್ಕಿರಬೇಕು. ಉತ್ತರ ಮತ್ತು ದಕ್ಷಿಣಕ್ಕಿರುವ ದರ್ಭೆಗಳ ತುದಿಗಳು ಪೂರ್ವಕ್ಕಿರಬೇಕು. ಪೂರ್ವ ಮತ್ತು ಪಶ್ಚಿಮ ಪರಿಸ್ತರಣ ದರ್ಭೆಗಳ ಬುಡಗಳ ಮೇಲೆ ದಕ್ಷಿಣ ಪರಿಸ್ತರಣ ಇರಬೇಕು. ಇವುಗಳ ತುದಿಗಳ ಕೆಳಭಾಗದಲ್ಲಿ ಉತ್ತರ ಪರಿಸ್ತರಣ ಇರಬೇಕು. ಪರಿಸ್ತರಣ ಹಾಕುವ ದರ್ಭೆಗಳ ಸಂಖ್ಯೆಯು ಇಂತಿಷ್ಟೇ ಎಂಬ ನಿಯಮವಿಲ್ಲ. ಆದರೂ ಬದಿಯಲ್ಲಿ ಕಡಿಮೆ ಎಂದರೆ ನಾಲ್ಕು ನಾಲ್ಕರಂತೆ ಒಟ್ಟು ಹದಿನಾರು ದರ್ಭೆಗಳು ಇರಲೇಬೇಕು.

ಬಳಿಕ ಅಗ್ನಿಯ ದಕ್ಷಿಣದಿಕ್ಕಿನಲ್ಲಿ ಬ್ರಹ್ಮಾಸನಕ್ಕೂ ಉತ್ತರದಲ್ಲಿ ಪಾತ್ರೆಗಳನ್ನು ಇಡುವುದಕ್ಕೂ ಉದ್ದವಾಗಿರುವ ಕೆಲವು ದರ್ಭೆಗಳನ್ನು ಹರಡಿ ಇಡಬೇಕು. ಇಷ್ಟುಮಾಡಿ ಅಗ್ನಿಯ ಈಶಾನ್ಯದಿಕ್ಕಿನಿಂದ ಮೂರು ಸಲ ಸುತ್ತಲೂ ನೀರು ಚಿಮುಕಿಸಬೇಕು. ಉತ್ತರ ದಿಕ್ಕಿನಲ್ಲಿ ಹಾಸಿದ ದರ್ಭೆಗಳ ಮೇಲೆ ಕ್ರಮವಾಗಿ ಮೊದಲು ಬಲಗೈಯಿಂದ ಆಮೇಲೆ ಎಡ ಕೈಯಿಂದ **ಚರುಸ್ಥಾಲೀ ಪ್ರೋಕ್ಷಣೀ** ...ಯಿಂದ ತೊಡಗಿ **ಉಲೂಖಲ ಮುಸಲೇ**ಯ ವರೆಗೆ ಪಾತ್ರೆಗಳನ್ನು ಕೆಳಮುಖವಾಗಿ ಇಡಬೇಕು. ಕೇವಲ ಆಜ್ಯಮಾತ್ರದ ಹೋಮವಾದರೆ ದರ್ವೀ-ಸ್ರುವ; ಪ್ರಣೀತಾ-ಆಜ್ಯಪಾತ್ರ; ಇಧ್ಮಾ-ಬರ್ಹಿ ಮಾತ್ರವಿಟ್ಟರೆ ಸಾಕು.

ಸಮಿಧೆಯನ್ನು ಹಿಡಿಯುವ ಕ್ರಮ:- "ಮೂಲ ಮಧ್ಯಮ ಮಧ್ಯೇನ ಸಮಿದ್ಧೋಮಸ್ಯ ಲಕ್ಷಣಂ" ಸಮಿತ್ತುಗಳ ಮೂಲ ಮತ್ತು ಮಧ್ಯ ಇವೆರಡರ ಮಧ್ಯಭಾಗದಲ್ಲಿ ಹಿಡಿದು ಹೋಮಮಾಡಬೇಕು.

"ತ್ರಿಭಿಶ್ಚೈವ ಚತುರ್ಭಿಶ್ಚ ಪಂಚಭಿಃ ಷಡ್ಭಿರಂಗುಲೈಃ ॥ ಸೇಚನಂ ಪರಿಧೀಂಶ್ಚೈವ ಸ್ತರಣಂ ಪೂಜನಂ ತಥಾ ॥ ಕುಂಡ ಅಥವಾ ಸ್ಥಂಡಿಲದ ಮೂರು ಅಂಗುಲಗಳಷ್ಟು ಹೊರಗೆ ಪರಿಷಿಂಚನ ಮಾಡಬೇಕು. ನಾಲ್ಕು ಅಂಗುಲ ಹೊರಭಾಗದಲ್ಲಿ ಯಜ್ಞದಲ್ಲಿ ಉಪಯೋಗಿಸುವ

Scanned by CamScanner

Scanned with CamScanner

ತತಃ ಪ್ರೋಕ್ಷಣೀಪಾತ್ರಮುತ್ತಾನಂ ಕೃತ್ವಾ ತತ್ರಾನಂತರ್ಗರ್ಭಿತಸಾಗ್ರ ಸಮಸ್ಥೂಲ ಪ್ರಾದೇಶಮಾತ್ರಕುಶದ್ವಯರೂಪೇ ಪವಿತ್ರೇ ನಿಧಾಯ ಶುದ್ಧಾಭಿರದ್ಭಿಃ ತತ್ಪಾತ್ರಂ ಪೂರಯಿತ್ವಾ ಗಂಧಪುಷ್ಪಾದಿ ಕ್ಷಿಪ್ತ್ವಾ ಹಸ್ತಯೋರಂಗುಷ್ಠೋಪಕನಿಷ್ಠಿಕಾಭ್ಯಾಂ ಉತ್ತಾನಾಭ್ಯಾಂ ಪಾಣಿಭ್ಯಾಂ ಉದಗಗ್ರೇ ಪೃಥಕ್ ಪವಿತ್ರೇ ಧೃತ್ವಾ ಅಪಸ್ತ್ರಿರುತ್ಪೂಯ ಪಾತ್ರಾಣ್ಯುತ್ತಾನಾನಿ ಕೃತ್ವಾ ಇಧ್ಮಂ ಚ ವಿಸ್ರಸ್ಯ ಸರ್ವಾಣಿ ಪಾತ್ರಾಣಿ ತ್ರಿಃ ಪ್ರೋಕ್ಷೇತ್ ॥ ತಾ ಆಪಃ ಕಿಂಚಿತ್ಕಮಂಡಲೌ ಕ್ಷಿಪೇದಿತ್ಯೇಕೇ ॥ (5)

ತತೋ ಬ್ರಹ್ಮಾ ಅಗ್ನಿಂ ಪರೀತ್ಯ ದಕ್ಷಿಣತಃ ಉದಙ್ಮುಖಃ ಸ್ಥಿತ್ವಾ ಆಸನಾರ್ಥದರ್ಭೇಷು ದಕ್ಷಿಣಭಾಗಸ್ಥಮೇಕಂ ದರ್ಭಮಂಗುಷ್ಠಾನಾಮಿಕಾಭ್ಯಾಂ ಗೃಹೀತ್ವಾ ನಿರಸ್ತಃ ಪರಾವಸುಃ ಇತಿ ನೈಋತ್ಯಾಂ ನಿರಸ್ಯ ಆಪಃ ಸ್ಪೃಷ್ಟ್ವಾ ॥ ಇದಮಹಮರ್ವಾವಸೋಃ ಸದನೇ ಸೀದಾಮಿ ॥ ಇತ್ಯುಕ್ತ್ವಾ ಉದಙ್ಮುಖ ಏವ

ಯಾವುದಾದರೂ ಒಂದು ಯಜ್ಞೀಯವೃಕ್ಷದ, ಬುಡದಲ್ಲಿ ಸಪುರವಾಗಿದ್ದು ತುದಿಯಲ್ಲಿ ಅಗಲವಿರುವ ಮೂವತ್ತಾರು ಅಂಗುಲ ಉದ್ದದ ಮೂರು ತುಂಡುಗಳನ್ನು ತೆಕ್ಕೊಂಡು ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಪರಿಧಿಯನ್ನು ಹಾಕಬೇಕು. ಪಶ್ಚಿಮದಲ್ಲಿ ಇಡುವ ತುಂಡಿನ ಅಗಲವಾದ ತುದಿಯು ಉತ್ತರಕ್ಕೂ ದಕ್ಷಿಣದ ಮತ್ತು ಉತ್ತರದ ತುಂಡಿನ ಆ ಭಾಗವು ಪೂರ್ವದ ಕಡೆಗೂ ಇರುವಂತೆ ಪರಿಧಿಯನ್ನು ಹಾಕಿ ಕೊಳ್ಳಬೇಕು. ಐದಂಗುಲಗಳಷ್ಟು ಹೊರಭಾಗದಲ್ಲಿ ಪರಿಸ್ತರಣಗಳನ್ನೂ ಆರಂಗುಲ ದೂರದಲ್ಲಿ ಅರ್ಚನೆಯನ್ನೂ ಮಾಡಬೇಕು. ಹೋಮಸಂಖ್ಯೆಯು ಹೆಚ್ಚಾಗಿದ್ದು ದೊಡ್ಡ ಹೋಮವಾದರೆ ಹತ್ತು ಅಂಗುಲ ಹೊರಗೆ ಪರಿಸ್ತರಣವಿರಬೇಕೆಂದು ಹೇಳಲಾಗಿದೆ. ಪರಿಸ್ತರಣ ಸುಟ್ಟುಹೋದರೆ ಪ್ರಾಯಶ್ಚಿತ್ತ ಮಾಡಬೇಕಾಗುವುದು.

ಆಮೇಲೆ ಪ್ರೋಕ್ಷಣೀಪಾತ್ರವನ್ನು ತೆಗೆದು ಅಂಗಾತ ಮಾಡಿಟ್ಟು ಅದರ ಮೇಲೆ (ಗರ್ಭವಿಲ್ಲದ) ಪ್ರಾದೇಶಪ್ರಮಾಣ ಉದ್ದವಿರುವ, ತುದಿಗಳುಳ್ಳ ಎರಡು ದರ್ಭೆಯ ತುಂಡುಗಳನ್ನು ಇಡಬೇಕು. ಅದರಲ್ಲಿ ಶುದ್ಧವಾದ ನೀರನ್ನು ತುಂಬಬೇಕು. ಗಂಧಾಕ್ಷತೆ ಪುಷ್ಪಗಳನ್ನು ಹಾಕಬೇಕು. ಬಳಿಕ ಉತ್ತಾನ ಹಸ್ತಗಳ ಅಂಗುಷ್ಠ ಮತ್ತು ಅನಾಮಿಕಾ ಬೆರಳುಗಳಿಂದ ಆ ಎರಡು ದರ್ಭೆಗಳನ್ನು ಬೇರೆ ಬೇರೆಯಾಗಿ ಉತ್ತರಕ್ಕೆ ತುದಿ ಇರುವಂತೆ ಹಿಡಿದು ಪಾತ್ರೆಯಲ್ಲಿರುವ ನೀರನ್ನು ಮೂರುಸಲ ಆಲೋಡನ ಮಾಡಬೇಕು. ಬಳಿಕ ಎಲ್ಲ ಪಾತ್ರೆಗಳನ್ನೂ ಅಂಗಾತವಾಗಿಟ್ಟು, ಇಧ್ಮವನ್ನೂ ಬಿಡಿಸಿಟ್ಟು ಎಲ್ಲವನ್ನೂ ಮೂರುಸಲ ಪ್ರೋಕ್ಷಿಸಬೇಕು. ಪ್ರೋಕ್ಷಣೀಪಾತ್ರೆಯ ಸ್ವಲ್ಪ ನೀರನ್ನು ಕಮಂಡಲುವಿನಲ್ಲಿ ಹಾಕಬೇಕೆಂದು ಕೆಲವರ ಅಭಿಪ್ರಾಯ.

ಬಳಿಕ ಬ್ರಹ್ಮನು ಅಗ್ನಿಗೆ ಪ್ರದಕ್ಷಿಣೆ ಬಂದು ದಕ್ಷಿಣ ದಿಕ್ಕಿನಲ್ಲಿ ಉತ್ತರಕ್ಕೆ ಮುಖಮಾಡಿ ನಿಂತು ಆಸನಕ್ಕಾಗಿ ಹಾಸಿದ ದರ್ಭೆಗಳಲ್ಲಿ ತೆಂಕು ದಿಕ್ಕಿಗಿರುವ ಒಂದು ದರ್ಭೆಯನ್ನು ಹೆಬ್ಬೆರಳು ಮತ್ತು ಅನಾಮಿಕೆಗಳಿಂದ ಹಿಡಿದು **"ನಿರಸ್ತಃ ಪರಾವಸುಃ"** ಎಂದು ಹೇಳಿ ನೈಋತ್ಯ ದಿಕ್ಕಿಗೆ ಎಸೆಯಬೇಕು. ನಂತರ ಕೈತೊಳೆದು **"ಇದಮಹ ... ಸೀದಾಮಿ"** ಎಂದು ಹೇಳಿ ಎಡತೊಡೆಯ

Scanned by CamScanner

(x) ಪ್ರ ಯಜ್ಞಂ ಪಾಹಿ । ಪ್ರ ಯಜ್ಞಪತಿಂ ಪಾಹಿ । ಪ್ರ ಮಾಂ ಪಾಹಿ

(x) ಸರ್ವದಾ ಯಜ್ಞಪುರುಷ ದೇವ ವರ್ತತೇ ।

ವಾಮೋರುಪರಿ ದಕ್ಷಿಣಪಾದಂ ಸಂಸ್ಥಾಪ್ಯ ಉಪವಿಶ್ಯ ಗಂಧಾಕ್ಷತಾದಿಭಿರರ್ಚಿತಃ ಸನ್ ಬ್ರಹ್ಮಾ-ಅಂಜಲಿಕೃತೋ ಜಪೇತ್ ॥ ಓಂ ಬೃಹಸ್ಪತಿರ್ಬ್ರಹ್ಮಾ ಬ್ರಹ್ಮಸದನ ಆಶಿಷ್ಯತೇ ಬೃಹಸ್ಪತೇ ಯಜ್ಞಂ ಗೋಪಾಯ (x) । ಇತಿ ಜಪಿತ್ವಾ (x) ॥ ತತೋ ಯಜಮಾನಃ ಪ್ರಣೀತಾಪಾತ್ರಮಗ್ನೇಃ ಪ್ರತ್ಯಙ್ ನಿಧಾಯ ತತ್ರ ಪ್ರಾಗಗ್ರೇ ಪವಿತ್ರೇ ನಿಧಾಯ ಉತ್ಪೂತಾಭಿರದ್ಭಿಃ ತತ್ಪಾತ್ರಂ ಪೂರಯಿತ್ವಾ ಗಂಧಪುಷ್ಪಾಕ್ಷತಾನ್ನಿಕ್ಷಿಪ್ಯ ಬ್ರಹ್ಮನ್ನಪಃ ಪ್ರಣೇಷ್ಯಾಮೀತಿ ಪೃಚ್ಛೇತ್ ॥ ತತೋ ಬ್ರಹ್ಮಾ ಉಪಾಂಶುಃ ಭೂರ್ಭುವಃ ಸ್ವಃ ಬೃಹಸ್ಪತಿಪ್ರಸೂತಃ ॥ ಉಚ್ಚೈಃ ಓಂ ಪ್ರಣಯ ಇತ್ಯನುಜಾನೀಯಾತ್ ॥ ಕರ್ತಾ ಪೂರ್ಣಪಾತ್ರಂ ಮುಖಸಮಮುದ್ಧೃತ್ಯ ಅಗ್ನೇರುತ್ತರತೋ ದರ್ಭೇಷು ನಿಧಾಯ ತೇ ಪವಿತ್ರೇ ಧೃತ್ವಾ ಅನ್ಯೈರ್ದರ್ಭೈರಾಚ್ಛಾದಯೇತ್ ॥

ತತಃ ಪ್ರತ್ಯಗಗ್ನೇಃ ಕುಶೇಷು ಶೂರ್ಪಂ ನಿಧಾಯ ತತ್ರ ಪ್ರಾಗಗ್ರೇ ಪವಿತ್ರೇ ನಿಧಾಯ (ಅಗ್ನಯೇ) ತ್ವಾ ಜುಷ್ಟಂ ನಿರ್ವಪಾಮಿ ಇತಿ ಮಂತ್ರಾ-

---

ಮೇಲೆ ಬಲಪಾದವನ್ನಿಟ್ಟು ಉತ್ತರಕ್ಕೆ ಮುಖಮಾಡಿ ಕುಳಿತುಕೊಳ್ಳಬೇಕು. ಯಜಮಾನನು ಅವನನ್ನು ಗಂಧಪುಷ್ಪಾದಿಗಳಿಂದ ಅರ್ಚಿಸಿದ ಮೇಲೆ ಅವನು ಕೈಜೋಡಿಸಿ. "**ಓಂ ಬೃಹಸ್ಪತಿ... ಗೋಪಾಯ**" ಎಂದು ಜಪಿಸಬೇಕು. ಯಜಮಾನನು ಪ್ರಣೀತಾ ಪಾತ್ರೆಯನ್ನು ಅಗ್ನಿಯ ಪಶ್ಚಿಮ ದಲ್ಲಿಟ್ಟು ಅದರ ಮೇಲೆ ಪೂರ್ವಕ್ಕೆ ತುದಿ ಇರುವಂತೆ ಎರಡು ದರ್ಭೆಗಳನ್ನಿಟ್ಟು, ಶುದ್ಧನೀರಿನಿಂದ ಆ ಪಾತ್ರೆಯನ್ನು ತುಂಬಿಸಿ, ಗಂಧಪುಷ್ಪಾಕ್ಷತೆಗಳನ್ನಿಟ್ಟು, "**ಬ್ರಹ್ಮನ್...ಷ್ಯಾಮಿ**" ಎಂದು ಕೇಳಿಕೊಳ್ಳಬೇಕು. ಬ್ರಹ್ಮನು ಮಂದಸ್ವರದಿಂದ "**ಭೂರ್ಭುವ... ಪ್ರಸೂತಃ**" ಎಂದು ಹೇಳಿ ಕೊಂಡು ಮತ್ತೆ ಗಟ್ಟಿಯಾಗಿ "**ಓಂ ಪ್ರಣಯ**" ಎಂದು ಹೇಳಬೇಕು. ಆಮೇಲೆ ಯಜಮಾನನು ಆ ಪಾತ್ರೆಯನ್ನು ತನ್ನ ಬಾಯಿಯ ವರೆಗೆ ಎತ್ತಿಹಿಡಿದು ಅಗ್ನಿಯ ಉತ್ತರದಲ್ಲಿರುವ ದರ್ಭೆಗಳ ಮೇಲಿಟ್ಟು ಅದರ ಮೇಲಿದ್ದ ಪವಿತ್ರಗಳನ್ನು ತೆಕ್ಕೊಂಡು ಬೇರೆ ದರ್ಭೆಗಳಿಂದ ಅದನ್ನು ಮುಚ್ಚಬೇಕು.

ಬ್ರಹ್ಮಾ ಅಂದರೆ ಯಜ್ಞಕರ್ಮವನ್ನು ಮಾಡಿಸುವ ಋತ್ವಿಜನು. ದಕ್ಷಿಣದಿಕ್ಕಿನಲ್ಲಿರುವ ಭೂತರಾಕ್ಷಸಾದಿಗಳಿಂದ ಯಜ್ಞರಕ್ಷಣೆಯನ್ನು ಮಾಡುವುದು ಬ್ರಹ್ಮನ ಕೆಲಸ. ಬ್ರಹ್ಮನು ಸಿಗದಿದ್ದರೆ, "**ಪಂಚಾಶದ್ಭಿರ್ದರ್ಭೈರ್ಬ್ರಹ್ಮಾ**" ಐವತ್ತು ಸಾಗ್ರದರ್ಭೆಗಳಿಂದ ಮಾಡಿದ ಒಂದು ಸೂಡಿಯನ್ನು ಬ್ರಹ್ಮನ ಸ್ಥಾನದಲ್ಲಿ ಇಡಬಹುದು. ಯಜ್ಞೋಪವೀತ ಅಥವಾ ಕಮಂಡಲು ಇರಿಸಿದರೂ ಸಾಕು. "**ಯದಿ ಬ್ರಹ್ಮಾನ ಭವೇತ್ತದಾ ಸ್ವಯಮೇವ ತತ್ಪ್ರಣೀತಾಪಾತ್ರಂ ನಾಸಿಕಾಸಮೀಪಂ ನೀತ್ವಾ**" ಬ್ರಹ್ಮನಿಲ್ಲದಿದ್ದರೆ ಯಜಮಾನನು ತಾನೇ ಪ್ರಣೀತಾಪಾತ್ರೆಯನ್ನು ಮೂಗಿನ ವರೆಗೆ ಎತ್ತಿಹಿಡಿದರೆ ಸಾಕು.

ಬಳಿಕ ಅಗ್ನಿಯ ಪಶ್ಚಿಮದಲ್ಲಿ ದರ್ಭೆಗಳ ಮೇಲೆ ಶೂರ್ಪವನ್ನಿಟ್ಟು ಅದರಲ್ಲಿ ಪೂರ್ವಕ್ಕೆ ತುದಿಮಾಡಿ ಎರಡು ದರ್ಭೆಗಳನ್ನು ಇಡಬೇಕು. "**ಅಗ್ನಯೇ ತ್ವಾ ...**" ಎಂದು ಹೇಳುತ್ತ ನಾಲ್ಕು ಸಲ ನಾಲ್ಕು ಮುಷ್ಟಿ ಅಕ್ಕಿಯನ್ನು ಅದರಲ್ಲಿ ಹಾಕಬೇಕು. "**ಅಗ್ನೀಷೋಮಾಭ್ಯಾಂ ...**"

Scanned by CamScanner

Scanned with CamScanner

ವೃತ್ಯಾ ವ್ರೀಹೀಣಾಂ ಯವಾನಾಂ ವಾ ಚತುರಶ್ಚತುರೋ ಮುಷ್ಟೀನ್ನಿರುಪ್ಯ (ಅಗ್ನೀಷೋಮಾಭ್ಯಾಂ) ತ್ವಾ ಜುಷ್ಟಂ ನಿರ್ವಪಾಮಿೇತಿ ತಥೈವ ನಿರುಪ್ಯ ತೇ ಪವಿತ್ರೇ ನಿರುಪ್ತವ್ರೀಹೀಣಾಮುಪರಿ ನಿಧಾಯ ಉತ್ಪೂತಾಭಿರದ್ಭಿಃ (ಅಗ್ನಯೇ) ತ್ವಾ ಜುಷ್ಟಂ ಪ್ರೋಕ್ಷಾಮಿ ಇತಿ ನಿರ್ವಾಪಸಂಖ್ಯಯಾ ಪ್ರೋಕ್ಷೇತ್ ॥ ॥ ಏವಂ (ಅಗ್ನೀಷೋಮಾಭ್ಯಾಂ) ತ್ವಾ ಜುಷ್ಟಂ ಪ್ರೋಕ್ಷಾಮಿ ಇತಿ ತಥೈವ ಪ್ರೋಕ್ಷೇತ್ ॥ [ದರ್ಶೇ ತು ಅಗ್ನೀಷೋಮಸ್ಥಾನೇ ಇಂದ್ರಾಗ್ನಿಭ್ಯಾಂ ತ್ವೇತ್ಯಾದಿ ನಿರ್ವಾಪ-ಪ್ರೋಕ್ಷಣೇ ಚ ವಿಶೇಷಃ]

ಏವಂ ನಾಮಮಂತ್ರಕಹೋಮೇ ನಿರ್ವಾಪಃ ಪ್ರೋಕ್ಷಣಂ ಚ ಯಥಾ ಪ್ರಧಾನದೈವತಂ ದೇವತಾನಾಮಗ್ರಹಣೇನ ಕಾರ್ಯಂ ॥ ಸಮಂತ್ರಕ ಹೋಮೇ ತು ಶ್ರವಣಾಕರ್ಮಾದೌ ತೂಷ್ಣೀಂ ಚತುರಶ್ಚತುರೋ ಮುಷ್ಟೀನ್ನಿರ್ವಪೇತ್ ಪ್ರೋಕ್ಷೇಚ್ಚ ॥

ತತಃ ಪಾತ್ರಾಣಾಮುತ್ತರತಃ ಪ್ರಾಗ್ಗ್ರೀವಮಾಸ್ತೀರ್ಣೇ ಊರ್ಧ್ವ-ಲೋಮ್ನಿ ಕೃಷ್ಣಾಜಿನೇ ನಿಹಿತೇ ಉಲೂಖಲೇ ಮುಸಲೇನ ಪತ್ನ್ಯವಹತ್ಯ ಶೂರ್ಪೇಣ ತುಷಾದೀನ್ ಸಂಶೋಧ್ಯ ತ್ರಿಃಶುಕ್ಲೀ ಕುರ್ಯಾತ್ ॥ ತಾಂಸ್ತ್ರಿಃ ಪ್ರಕ್ಷಾಲಿತಾನ್ ಪೃಥಕ್ಪಾತ್ರೇ ಏಕಪಾತ್ರೇ ಅವಿದಗ್ಧಮನವಸ್ರಾವಿತಮಂತ-ರೂಷ್ಮಪಕ್ವಂ ಸುಕೃತಂ ಚರುಂ ಪಚೇತ್ ॥

ಎಂದು ಹೇಳಿ ಅದೇ ರೀತಿ ನಾಲ್ಕು ಸಲ ಇಡಬೇಕು. ಬಳಿಕ ದರ್ಭೆಗಳನ್ನು ಅಕ್ಕಿಯ ಮೇಲೆ ಇಟ್ಟು, **"ಅಗ್ನಯೇ ... ಪ್ರೋಕ್ಷಾಮಿ" "ಅಗ್ನೀಷೋಮಾ ... ಪ್ರೋಕ್ಷಾಮಿ"** ಎಂದು ನೀರಿನಿಂದ ಪ್ರೋಕ್ಷಿಸಬೇಕು. (ನಾಲ್ಕು ಸಲ) ದರ್ಶನ ಹೋಮದಲ್ಲಿ **"ಇಂದ್ರಾಗ್ನಿಭ್ಯಾಂ ..."** ಎಂದು ಬದಲಿಸಿ ಹೇಳಬೇಕು. ಮೇಲೆ ಆವರಣದಲ್ಲಿ ಬರೆದ ದೇವತೆಯ ಸ್ಥಾನದಲ್ಲಿ ಬೇರೆ ಕರ್ಮಗಳಲ್ಲಾದರೆ ಆಯಾ ಕರ್ಮದ ಪ್ರಧಾನ ದೇವತೆಯ ಹೆಸರನ್ನು ಹೇಳಿ ನಿರ್ವಾಪ ಹಾಗೂ ಪ್ರೋಕ್ಷಣಗಳನ್ನು ಮಾಡಬೇಕು. ನಾಮಮಂತ್ರಕ ಹೋಮವಾದರೆ ನಿರ್ವಾಪ ಪ್ರೋಕ್ಷಣಗಳು ಮಂತ್ರಸಹಿತವಾಗಿಯೂ, ಸಮಂತ್ರಕ ಹೋಮವಾದರೆ, ಶ್ರಾವಣ ಇತ್ಯಾದಿ ಕರ್ಮಗಳಲ್ಲಿ ಮೌನವಾಗಿ ನಾಲ್ಕು ಸಲ ಮಾಡಬೇಕು.

ಆಮೇಲೆ ಪಾತ್ರೆಗಳ ಉತ್ತರದಲ್ಲಿ ರೋಮಗಳಿದ್ದ ಭಾಗವು ಮೇಲೆ ನಿಲ್ಲುವಂತೆ ಪೂರ್ವಕ್ಕೆ ತಲೆಮಾಡಿ ಹಾಸಿದ ಕೃಷ್ಣಾಜಿನದ ಮೇಲೆ ಉಲೂಖಲವನ್ನಿಟ್ಟು ಮುಸಲದಿಂದ ಪತ್ನಿಯು ಮೂರು ಬಾರಿ ಕುಟ್ಟಿ ಅಕ್ಕಿಯನ್ನು ತಯಾರಿಸಿ, ಅದನ್ನು ಶೂರ್ಪದಲ್ಲಿ ಹಾಕಿ ತೌಡು ಮುಂತಾದುವನ್ನು ತೆಗೆದು ಒಂದು ಅಥವಾ ಎರಡು ಪಾತ್ರೆಗಳಲ್ಲಿ ಸೀದುಹೋಗದಂತೆ ಜಾಗ್ರತೆಯಿಂದ ಹದವಾದ ಅನ್ನ ಬೇಯಿಸಬೇಕು.

ಇಲ್ಲಿ ನಾಲ್ಕು ನಾಲ್ಕು ಮುಷ್ಟಿ ಭತ್ತವನ್ನೇ ತೆಗೆದುಕೊಂಡು, ಕುಟ್ಟಿ ಅಕ್ಕಿಮಾಡಿ ಚರುವನ್ನು ಬೇಯಿಸುವುದು ವಿಹಿತವಾಗಿದ್ದರೂ ಸಮಯಾನುಕೂಲ್ಯಕ್ಕಾಗಿ ಅಕ್ಕಿಯನ್ನೇ ತೆಗೆದುಕೊಂಡು ಮಾಡುವುದು ವಾಡಿಕೆಗೆ ಬಂದಿದೆ.

Scanned by CamScanner

Scanned with CamScanner

ತತಸ್ತೇ ಪವಿತ್ರೇ ಆಜ್ಯಪಾತ್ರೇ ನಿಧಾಯ ತತ್ಪಾತ್ರಂ ಪುರತಃ ಸಂಸ್ಥಾಪ್ಯ ತಸ್ಮಿನ್ನಾಜ್ಯಮಾಸಿಚ್ಯ ಅಗ್ನೇರುತ್ತರತಃ ಸ್ಥಿತಾಂಗಾರಾನ್ ಭಸ್ಮನಾ ಸಹಾಗ್ನೇರುದಕ್ ಪರಿಸ್ತರಣಾದ್ಬಹಿರ್ನಿರುಹ್ಯ ತೇಷ್ವಾಜ್ಯಪಾತ್ರಮಧಿಶ್ರಿತ್ಯ ಜ್ವಲತಾದರ್ಭೋಲ್ಮುಕೇನಾವ-ಜ್ವಲ್ಯ ಅಂಗುಷ್ಠಪರ್ವಮಾತ್ರಂ ಪ್ರಕ್ಷಾಲಿತಂ ದರ್ಭಾಗ್ರದ್ವಯಮಾಜ್ಯೇ ಪ್ರಕ್ಷಿಪ್ಯ ಪುನರ್ಜ್ವಲತಾ ತೇನೈವ ದರ್ಭೋಲ್ಮುಕೇನ ಚರುಣಾ ಸಹಾಜ್ಯಂ ತ್ರಿಃ ಪರ್ಯಗ್ನಿ ಕೃತ್ವಾ ತದುಲ್ಮುಕಮಪಾಸ್ಯ ಅಪಸ್ಸ್ಪೃಶ್ಯಾ ಆಜ್ಯಸ್ಥಾಲೀಂ ಭುವಿ ಕರ್ಷಯಿತ್ವಾ ಉದಗುದ್ವಾಸ್ಯ ಅಂಗಾರಾನ್ಪ್ರತ್ಯೂಹ್ಯ ಅಪಸ್ಸ್ಪೃಶ್ಯಾ ತತ್ರಸ್ಥಮೇವಾಜ್ಯಂ ।

ಅಂಗುಷ್ಠೋಪಕನಿಷ್ಠಿಕಾಭ್ಯಾಂ ಪವಿತ್ರೇ ಗೃಹಿತ್ವಾ ॥ ಸವಿತುಷ್ಟ್ವಾ ಹಿರಣ್ಯಸ್ತೂಪಃ ಸವಿತಾಪುರ ಉಷ್ಣಿಕ್ ॥ ಆಜ್ಯಸ್ಯೋತ್ಪವನೇ ವಿನಿಯೋಗಃ ॥ ಓಂ ಸವಿತುಷ್ಟ್ವಾ ಪ್ರಸವಉತ್ಪುನಾಮ್ಯಚ್ಛಿದ್ರೇಣ ಪವಿತ್ರೇಣ ವಸೋಃ ಸೂರ್ಯಸ್ಯ ರಶ್ಮಿಭಿಃ ಇತಿ ಮಂತ್ರೇಣ ಏಕಶ್ರುತ್ಯೋಚ್ಚಾರಿತೇನ ಏಕವಾರಂ ದ್ವಿಸ್ತೂಷ್ಣೀಂ ಉತ್ತಾನ-ಪಾಣಿದ್ವಯಾಂಗುಷ್ಠೋಪಕನಿಷ್ಠಿಕಾಭ್ಯಾಂ ತಯೋರಸಂಸೃಷ್ಟಗೃಹೀತಾಭ್ಯಾಂ ಉದಗ ಗ್ರಾಭ್ಯಾಂ ಪವಿತ್ರಾಭ್ಯಾಂ ಪ್ರಾಗುತ್ಪೂಯ ತೇ ಪವಿತ್ರೇ ಅದ್ಭಿಃ ಪ್ರೋಕ್ಷ್ಯ ಅಗ್ನೌ ಪ್ರಹರೇತ್ ॥ ತೂಷ್ಣೀಂ ಸ್ಕಂದಾಯ ಸ್ವಾಹಾ ಸ್ಕಂದಾಯೇದಂ ನಮಮ ಇತಿ ಮಂತ್ರೇಣೇತಿ ಕೇಚಿತ್ ॥

ಆಮೇಲೆ ಆ ಪವಿತ್ರೆಯ ದರ್ಭೆಗಳನ್ನು ಆಜ್ಯಪಾತ್ರದಲ್ಲಿಟ್ಟು ಆ ಪಾತ್ರೆಯನ್ನು ತನ್ನ ಮುಂಭಾಗದಲ್ಲಿಟ್ಟ, ಅದರಲ್ಲಿ ತುಪ್ಪವನ್ನು ಹೊಯ್ದು, ಅಗ್ನಿಯ ಉತ್ತರದಿಕ್ಕಿನಲ್ಲಿರುವ ಕೆಂಡಗಳನ್ನು ಭಸ್ಮಸಮೇತ ತೆಗೆದು ಪರಿಸ್ತರಣದ ಹೊರಗೆ ಉತ್ತರದಿಕ್ಕಿನಲ್ಲಿ ಹಾಕಿ, ಅವುಗಳ ಮೇಲೆ ಆಜ್ಯ ಪಾತ್ರೆಯನ್ನಿಟ್ಟು, ಒಂದು ದರ್ಭೆಯ ತುಂಡನ್ನು ಉರಿಸಿ ಅದಕ್ಕೆ ತೋರಿಸಬೇಕು. ಉಂಗುಷ್ಠದಷ್ಟು ಉದ್ದದ ಎರಡು ದರ್ಭೆಯ ತುಂಡುಗಳನ್ನು ಅದರಲ್ಲಿ ಹಾಕಬೇಕು. ಪುನಃ ಅದೇ ಮೊದಲಿನ ಉರಿಯುವ ದರ್ಭೆಯ ತುಂಡಿನಿಂದ ಚರುಪಾತ್ರೆಯ ಸಹಿತ ಆಜ್ಯಪಾತ್ರೆಗೆ ಮೂರು ಸಲ ಸುತ್ತು ತಿರುಗಿ ತೋರಿಸಬೇಕು. ಬಳಿಕ ಅದನ್ನು ದೂರಕ್ಕೆ ಎಸೆದು ಕೈ ತೊಳೆಯಬೇಕು. ತುಪ್ಪದ ಪಾತ್ರೆಯನ್ನು ಕೆಂಡಗಳಿಂದ ಕೆಳಗೆ ಇಳಿಸಬೇಕು. ಆ ಕೆಂಡಗಳನ್ನು ಬದಿಗೆ ಸರಿಸಿ ಕೈತೊಳೆಯಬೇಕು.

ಆಮೇಲೆ ಎರಡು ದರ್ಭೆಗಳನ್ನು ಉತ್ತರದಿಕ್ಕಿಗೆ ತುದಿಗಳಿರುವಂತೆ ತೆರೆದ ಎರಡು ಕೈಗಳ ಅಂಗುಷ್ಠ ಮತ್ತು ಅನಾಮಿಕಾ ಬೆರಳುಗಳಿಂದ ಒಂದಕ್ಕೊಂದು ತಾಗದಂತೆ ಹಿಡಿದು ಅವುಗಳ ಮಧ್ಯಭಾಗವನ್ನು ತುಪ್ಪದಲ್ಲಿ ಅದ್ದಿ, **"ಸವಿತುಷ್ಟ್ವಾ ..."** ಎಂಬ ಮಂತ್ರವನ್ನು ಒಂದು ಸಲ ಹೇಳಿ, ಮತ್ತೆರಡು ಸಲ ಮೌನವಾಗಿ ತುಪ್ಪವನ್ನು ಆಲೋಡಿಸಬೇಕು. ಆ ದರ್ಭೆಗಳನ್ನು ನೀರಿನಿಂದ ಪ್ರೋಕ್ಷಿಸಿ ಅಗ್ನಿಗೆ ಸಮರ್ಪಿಸಬೇಕು. **"ಸ್ಕಂದಾಯ ... ನಮಮ"** ಎಂದು ಹೇಳಿ ಅರ್ಪಿಸ ಬೇಕೆಂದು ಕೆಲವರ ಮತ ಇದೆ.

Scanned by CamScanner

Scanned with CamScanner

ಅಥಾಗ್ನೇಃ ಪಶ್ಚಾತ್ಪರಿಸ್ತರಣಾದ್ಬಹಿರಾತ್ಮನೋಽಗ್ರತೋ ಭೂಮಿಂ ಪ್ರೋಕ್ಷ್ಯ ತತ್ರ ಬರ್ಹಿಃ ಸನ್ನಹನೀಂ ರಜ್ಜುಮುದಗಗ್ರಾಂ ಪ್ರಸಾರ್ಯ ತಸ್ಯಾಂ ಬರ್ಹಿಃ ಪ್ರಾಗಗ್ರಮುದಗಪವರ್ಗಮವಿರಲಮಾಸ್ತೀರ್ಯ ತಸ್ಮಿನ್ನಾಜ್ಯಪಾತ್ರಂ ನಿಧಾಯ ಸ್ರುವಾದಿ ಸಮ್ಮಾರ್ಜಯೇತ್ ॥

ತದ್ಯಥಾ ॥ ದಕ್ಷಿಣೇನ ಹಸ್ತೇನ ಸ್ರುಕ್ಸ್ರುವೌ ಗೃಹೀತ್ವಾ ಸವ್ಯೇನ ಕಾಂಶ್ಚಿದ್ದರ್ಭಾನಾದಾಯ ಸಹೈವಾಗ್ನೌ ಪ್ರತಾಪ್ಯ ಸ್ರುಚಂ ನಿಧಾಯ ಸ್ರುವಂ ವಾಮಹಸ್ತೇ ಗೃಹೀತ್ವಾ ದಕ್ಷಿಣಹಸ್ತೇನ ಸ್ರುವಸ್ಯ ಬಿಲಂ ದರ್ಭಾಗ್ರೈಃ ಪ್ರಾದಕ್ಷಿಣ್ಯೇನ ಪ್ರಾಗಾದಿಪ್ರಾಗಪವರ್ಗಂ ತ್ರಿಃ ಸಂಮೃಜ್ಯ ಅಧಸ್ತಾದ್ದರ್ಭಾಗ್ರೈರೇವ ಅಭ್ಯಾತ್ಮಂ ಬಿಲಪೃಷ್ಠಂ ತ್ರಿಃ ಸಂಮೃಜ್ಯ ತತೋ ದರ್ಭಾಣಾಂ ಮೂಲೈಃ ದಂಡಸ್ಯಾಧಸ್ತಾದ್ಬಿಲ-ಪೃಷ್ಠಾದಾರಭ್ಯ ಯಾವದುಪರಿಷ್ಟಾದ್ಬಿಲಂ ತಾವತ್ ತ್ರಿಃ ಸಂಮೃಜ್ಯ ಅದ್ಭಿಃ ಪ್ರೋಕ್ಷ್ಯಸ್ರುವಂ ನಿಷ್ಟಪ್ಯ ಆಜ್ಯಸ್ಥಾಲ್ಯಾ ಉತ್ತರತಃ ಸ್ರುಗಸಂಸ್ಪೃಷ್ಟಂ ನಿಧಾಯ ಉದಕಂ ಸ್ಪೃಷ್ಟ್ವಾ ತೈರೇವ ದರ್ಭೈರ್ಜುಹುಂ ಚೈವಮೇವ ಸಂಮೃಜ್ಯ ಸ್ರುವಾದುತ್ತರತೋ ನಿಧಾಯ ದರ್ಭಾನದ್ಭಿಃ ಕ್ಷಾಲಯಿತ್ವಾ ಅಗ್ನಾವನುಪ್ರಹರೇತ್ ॥

ತತಃ ಶ್ರುತಂ ಚರುಂ ಸ್ರುವಗೃಹೀತೇನಾಜ್ಯೇನಾಭಿಘಾರ್ಯ ಉದಗುದ್ವಾಸ್ಯ ಅಗ್ನ್ಯಾಜ್ಯಯೋರ್ಮಧ್ಯೇನ ನೀತ್ವಾ ಆಜ್ಯಾದ್ದಕ್ಷಿಣತೋ ಬರ್ಹಿಷಿ ಸಾಂತರಮಾಸಾದ್ಯ ಪುನರಪ್ಯಭಿಘಾರ್ಯ ನ ವಾಭಿಘಾರ್ಯ ಹವಿಃ ಪೃಥಕ್ಕರಣಾಯ ಪಾತ್ರಾಂತರಂ ಚರ್ವಾಜ್ಯಯೋರ್ಮಧ್ಯೇ ನಿಧಾಯ ॥ (6)

ಬಳಿಕ ಅಗ್ನಿಯ ಪಶ್ಚಿಮದಲ್ಲಿ ಪರಿಸ್ತರಣಗಳ ಹೊರಗೆ ತನ್ನ ಮುಂಭಾಗದಲ್ಲಿ ಭೂಮಿಯನ್ನು ಪ್ರೋಕ್ಷಿಸಿ ಅಲ್ಲಿ ಬರ್ಹಿಯನ್ನು ಕಟ್ಟಿದ ಹಗ್ಗವನ್ನು ಉತ್ತರಕ್ಕೆ ತುದಿ ಇರುವಂತೆ ಇಟ್ಟು ಅದರ ಮೇಲೆ ಬರ್ಹಿಯನ್ನು ಪೂರ್ವಕ್ಕೆ ತುದಿ ಇರುವಂತೆ ದಕ್ಷಿಣದಿಂದ ಉತ್ತರದ ಕಡೆಗೆ ಒತ್ತಾಗಿ ಹರಡಬೇಕು. ಅದರ ಮೇಲೆ ಆಜ್ಯಪಾತ್ರವನ್ನಿಟ್ಟು ಸ್ರುವಾದಿಗಳ ಸಂಮಾರ್ಜನ ಸಂಸ್ಕಾರ ಮಾಡಬೇಕು.

ಬಲಗೈಯಲ್ಲಿ ಸ್ರುಕ್ ಮತ್ತು ಸ್ರುವಗಳನ್ನೂ, ಎಡಗೈಯಲ್ಲಿ ಕೆಲವು ದರ್ಭೆಗಳನ್ನೂ ತೆಗೆದುಕೊಂಡು ಎರಡನ್ನೂ ಒಟ್ಟಿಗೆ ಅಗ್ನಿಯ ಹತ್ತಿರ ತೋರಿಸಿ ಕಾಯಿಸಬೇಕು. ಸ್ರುಕ್ಕನ್ನು ಕೆಳಗಿಟ್ಟು ಸ್ರುವವನ್ನು ಎಡಗೈಯಲ್ಲಿ ಹಿಡಿದು ಬಲಗೈಯಲ್ಲಿರುವ ದರ್ಭೆಗಳ ತುದಿಯಿಂದ ಅದರ ಮುಖವನ್ನು ಬಲಬದಿಯಿಂದ ಪೂರ್ವದಿಂದ ಪೂರ್ವದ ವರೆಗೆ ಮೂರು ಸಲ ಸಂಮಾರ್ಜನ ಮಾಡಬೇಕು. ದರ್ಭೆಗಳ ಬುಡದಿಂದ ಸ್ರುವದ ದಂಡದ ಕೆಳಭಾಗವನ್ನು ಅದರ ತೂತಿನಿಂದ ಪೂರ್ಣವಾಗಿ ಮೂರು ಸಲ ತಿಕ್ಕಬೇಕು ಆಮೇಲೆ ಅದಕ್ಕೆ ನೀರನ್ನು ಪ್ರೋಕ್ಷಿಸಿ ಬಿಸಿಮಾಡಿ ಆಜ್ಯಪಾತ್ರದ ಉತ್ತರದಲ್ಲಿ ಸ್ರುಕ್ಕಿಗೆ ತಾಗದಂತೆ ಇಡಬೇಕು. ಆ ದರ್ಭೆಗಳಿಂದ ಇದೇ ರೀತಿ ಸ್ರುಕ್ಕಿನ ಸಮ್ಮಾರ್ಜನೆಯನ್ನೂ ಮಾಡಿ ಅದನ್ನು ಸ್ರುವದ ಉತ್ತರದಲ್ಲಿಟ್ಟು ದರ್ಭೆಗಳನ್ನು ನೀರಿನಿಂದ ತೊಳೆದು ಅವುಗಳನ್ನು ಅಗ್ನಿಯಲ್ಲಿ ಅರ್ಪಿಸಬೇಕು.

Scanned by CamScanner

Scanned with CamScanner

ಏಕಾದಶಾಂಗುಲಮಿತೇ ದೇಶೇ ಗಂಧಾಕ್ಷತಪುಷ್ಪೈಃ ಅಗ್ನಿಂ ಸಮಂತ್ರ-ಮರ್ಚಯೇತ್ ॥ ವಿಶ್ವಾನಿನ ಇತಿ ತಿಸೃಣಾಂ ವಸುಶ್ರುತೋಽಗ್ನಿಸ್ತ್ರಿಷ್ಟುಪ್ ದ್ವಯೋರರ್ಚನೇ ಅಂತ್ಯಾಯಾ ಉಪಸ್ಥಾನೇ ವಿನಿಯೋಗಃ ॥ ಓಂ ವಿಶ್ವಾನಿನೋ ದುರ್ಗಹಾ ಜಾತವೇದಃ ॥ ಓಂ ಸ್ಸಿಂಧುಂ ನನಾವಾ ದುರಿತಾತಿಪರ್ಷಿ । ಓಂ ಅಗ್ನೇ ಅತ್ರಿವನ್ನಮಸಾ ಗೃಣಾನಃ ॥ ಓಂ ಅಸ್ಮಾಕಂ ಬೋಧ್ಯವಿತಾತನೂನಾಂ ॥ ಓಂ ಯಸ್ತ್ವಾ ಹೃದಾಕೀರಿಣಾಮನ್ಯಮಾನಃ ॥ ಓಂ ಅಮರ್ತ್ಯಂ ಮರ್ತ್ಯೋ ಜೋಹವೀಮಿ ॥ ಓಂ ಜಾತವೇದೋ ಯಶೋ ಅಸ್ಮಾಸುಧೇಹಿ ॥ ಓಂ ಪ್ರಜಾ-ಭಿರಗ್ನೇ ಅಮೃತತ್ವಮಶ್ಯಾಂ ॥ ಓಂ ಯಸ್ಮೈತ್ವಂ ಸುಕೃತೇ ಜಾತವೇದ-ಉಲೋಕಮಗ್ನೇಕೃಣವಸ್ಯೋನಂ ॥ ಅಶ್ವಿನಂ ಸಪುತ್ರಿಣಂ ವೀರವಂತಂ ಗೋಮಂತಂ ರಯಿಂನ ಶತೇ ಸ್ವಸ್ತಿ ॥ ಸ್ಥಂಡಿಲಾದಷ್ಟದಿಕ್ಷು ಗಂಧಪುಷ್ಪಾದಿಭಿ-ರಾಯತನಮಲಂಕೃತ್ಯ ॥ ಏಕಯೋಪಸ್ಥಾಯ ॥

ಬ್ರಾಹ್ಮಣಾನ್ ಅಲಂಕೃತ್ಯ, ಇಷ್ಟಂ ಅಲಂಕೃತ್ಯ

ತತ ಆತ್ಮಾನಂ ಚಾಲಂಕೃತ್ಯ ^ ಹಸ್ತಂ ಪ್ರಕ್ಷಾಲ್ಯ ಇಧ್ಮಬಂಧನರಜ್ಜು-ಮಿಧ್ಮಸ್ಥಾನೇ ನಿಧಾಯ ಪಾಣಿನೇಧ್ಮಮಾದಾಯ ಮೂಲಮಧ್ಯಾಗ್ರೇಷು ಸ್ರುವೇಣ ತ್ರಿರಭಿಘಾರ್ಯ ಮೂಲಮಧ್ಯಯೋರ್ಮಧ್ಯಭಾಗೇ ಗೃಹೀತ್ವಾ ॥

ನಂತರ ಸ್ರುವದಿಂದ ಚರುವಿಗೆ ಅಭಿಘಾರ ಮಾಡಿ ಅದನ್ನು ಅಗ್ನಿ ಹಾಗೂ ಆಜ್ಯಗಳ ಮಧ್ಯದಲ್ಲಿ ಈಚೆಗೆ ತಂದು ಆಜ್ಯದ ದಕ್ಷಿಣಕ್ಕೆ ಬರ್ಹಿಯ ಮೇಲೆ ಇಟ್ಟು ಮತ್ತೊಮ್ಮೆ ಅಭಿಘಾರ ಮಾಡಬೇಕು [ಮಾಡದಿದ್ದರೂ ಆಗಬಹುದು]. ಹವಿಸ್ಸನ್ನು ಪಾಲುಮಾಡುವುದಕ್ಕೆ ಇನ್ನೊಂದು ಪಾತ್ರೆಯನ್ನು ಚರು ಮತ್ತು ಅಗ್ನಿಗಳ ಮಧ್ಯದಲ್ಲಿ ಇರಿಸಬೇಕು.

ಸ್ಥಂಡಿಲದಿಂದ ಹನ್ನೊಂದು ಅಂಗುಲ ದೂರದಲ್ಲಿ, ಪೂರ್ವದಿಕ್ಕಿನಿಂದ ತೊಡಗಿ, **"ವಿಶ್ವಾನಿನೋ ದುರ್ಗಹಾ..."** ಎಂಬ ಮಂತ್ರವನ್ನು ಹೇಳುತ್ತ ಒಂದೊಂದು ಚರಣದಿಂದ ಒಂದೊಂದು ದಿಕ್ಕಿನಲ್ಲಿ ಗಂಧ ಅಕ್ಷತೆ ಮತ್ತು ಪುಷ್ಪಗಳನ್ನು ಇಡುತ್ತ ಅಗ್ನಿಯ ಸುತ್ತಲೂ ಎಂಟು ದಿಕ್ಕುಗಳಲ್ಲಿಯೂ ಅರ್ಚನೆ ಮಾಡಬೇಕು. ಕೊನೆಗೆ **"ಯಸ್ಮೈತ್ವಂ..."** ಎಂಬ ಋಕ್ಕನ್ನು ಕೈ ಜೋಡಿಸುತ್ತ ಹೇಳಿ ಉಪಸ್ಥಾನ ಮಾಡಬೇಕು.

ಬಳಿಕ ತನ್ನ ಹಣೆಗೆ ತಿಲಕವನ್ನಿಟ್ಟು ತನ್ನನ್ನು ಅಲಂಕರಿಸಿ, ಕೈತೊಳೆದು, ಇಧ್ಮವನ್ನು ಕೈಯಲ್ಲಿ ತಕ್ಕೊಂಡು ಅದರ ಮೂಲ, ಮಧ್ಯ ಮತ್ತು ತುದಿಯಲ್ಲಿ ಮೂರು ಕಡೆ ಅಭಿಘಾರ ಮಾಡಬೇಕು. ಅದನ್ನು ಮೂಲ, ಮಧ್ಯಗಳ ಮಧ್ಯಭಾಗದಲ್ಲಿ ಕೈಯಿಂದ ಹಿಡಿದು, **"ಅಯಂತ ಇಧ್ಮ..."**

Scanned by CamScanner

ಅಯಂತೇ ವಾಮದೇವೋ ಜಾತವೇದಾ ಅಗ್ನಿಸ್ತ್ರಿಷ್ಟುಪ್ ಇಧ್ಮಹವನೇ ವಿನಿಯೋಗಃ ॥ ಓಂ ಅಯಂತ ಇಧ್ಮ ಆತ್ಮಾಜಾತವೇದಸ್ತೇನೇಧ್ಯಸ್ವರ್ಧಸ್ವ- ಚೇದ್ಧವರ್ಧಯಚಾಸ್ಮಾನ್ಪ್ರಜಯಾಪಶುಭಿರ್ಬ್ರಹ್ಮವರ್ಚಸೇನಾನ್ನಾದ್ಯೇನ ಸಮೇಧಯ ಸ್ವಾಹಾ ॥ ಜಾತವೇದಸೇಗ್ನಯ ಇದಂ ನ ಮಮ ॥

ತತಃ ಸ್ರುವೇಣಾಜ್ಯಮಾದಾಯ ಅಗ್ನೇರಾಯತನಸ್ಯ ವಾಯವ್ಯಕೋಣ- ಮಾರಭ್ಯ ಆಗ್ನೇಯಕೋಣಪರ್ಯಂತಂ ಪ್ರಜಾಪತಯ ಇತಿ ಮನಸಾ ಸ್ಮರನ್ ಸ್ವಾಹೇತ್ಯುಚ್ಚಾರ್ಯ ನೈರಂತರ್ಯೇಣಾಜ್ಯಧಾರಾಂ ಅಗ್ನಾವಿಧ್ಮದಾರೂಪರಿಹುತ್ವಾ ॥ ಪುನರಾಜ್ಯಮಾದಾಯ ಅಗ್ನೇರಾಯತನಸ್ಯ ನೈಋತ್ಯಕೋಣತ ಐಶಾನೀಪರ್ಯಂತಂ ತಥೈವ ಹುತ್ವಾ ತ್ಯಕ್ತ್ವಾ ಚ ॥ ಸ್ರುವೇಣಾಜ್ಯಮಾದಾಯ ಅಗ್ನಯೇ ಸ್ವಾಹೇತಿ ಅಗ್ನೇರುತ್ತರ ಪಾರ್ಶ್ವೇ ಪೂರ್ವಭಾಗೇ ಹುತ್ವಾ ಪುನರಾಜ್ಯಂ ಸೋಮಾಯ ಸ್ವಾಹೇತಿ ಅಗ್ನಿ ದಕ್ಷಿಣಪಾರ್ಶ್ವೇ ತತ್ಸಮಪ್ರದೇಶೇ ಹುತ್ವಾ ॥

ಪೂರ್ವನಿಹಿತಪಾತ್ರೇ ಚರುಮುದ್ಧೃತ್ಯ ಪೃಥಕ್ಕೃತ್ಯ (ಇದಮಗ್ನಯೇ ಇದಮಗ್ನೀಷೋಮಾಭ್ಯಾಂ) ಇತಿ ಚರುಭಾಗದ್ವಯಂ ಉತ್ತರಸಂಸ್ಥಮಭಿಮೃಶ್ಯ ಅವದಾನಧರ್ಮೇಣ ಜುಹುಯಾತ್ ॥ ಏವಂ ನಾಮಮಂತ್ರಕ ಹೋಮೇ ಯಥಾದೈವತಂ ವಿಭಕ್ತಸ್ಯ ಚರೋರರಭಿಮರ್ಶಃ ॥ ಸಮಂತ್ರಕ ಹೋಮೇತು ನ ವಿಭಾಗೋ ನಾಭಿಮರ್ಶಶ್ಚ ॥

ಅಥಾವದಾನಧರ್ಮಃ ॥ ಸ್ರುವೇಣಸ್ರುಚ್ಯಾಜ್ಯಮುಪಸ್ತೀರ್ಯ ಪ್ರಥಮ ಪ್ರಧಾನದೇವತಾ ಚರುಭಾಗಮಧ್ಯಾದಂಗುಷ್ಠಪರ್ವಮಾತ್ರಂ ತಿರಶ್ಚೀನಾಭಿರಂ-

---

ಎಂಬ ಮಂತ್ರವನ್ನು ಹೇಳಿ **"ಸ್ವಾಹಾ"** ಎಂದು ಅಗ್ನಿಗೆ ಅರ್ಪಿಸಬೇಕು. **"ಜಾತವೇದಸೇಗ್ನಯ..."** ಎಂದು ಹೇಳಬೇಕು.

ಬಳಿಕ ಸ್ರುವದಲ್ಲಿ ತುಪ್ಪವನ್ನು ತೆಗೆದುಕೊಂಡು ಸ್ಥಂಡಿಲದ ವಾಯುವ್ಯಮೂಲೆಯಿಂದ ಆಗ್ನೇಯ ಮೂಲೆಯ ವರೆಗೆ **"ಪ್ರಜಾಪತಯೇ"** ಎಂದು ಮನಸ್ಸಿನಲೇ ಹೇಳಿಕೊಂಡು **"ಸ್ವಾಹಾ"** ಎಂದು ಗಟ್ಟಿಯಾಗಿ ಹೇಳಿ ತುಪ್ಪವು ಧಾರಾಕಾರವಾಗಿ ಬೀಳುವಂತೆ ಅಗ್ನಿಯಲ್ಲಿ ಇಧ್ಮದ ಮೇಲೆ ಹೋಮಮಾಡಬೇಕು. ಮತ್ತೊಮ್ಮೆ ಹಾಗೆಯೇ ನೈಋತ್ಯದಿಂದ ಈಶಾನ್ಯ ಮೂಲೆಯ ವರೆಗೆ ಹೋಮಿಸಬೇಕು. ಪುನಃ ಸ್ರುವದಲ್ಲಿ ತುಪ್ಪವನ್ನು ತೆಗೆದುಕೊಂಡು **"ಅಗ್ನಯೇ ಸ್ವಾಹಾ"** ಎಂದು ಹೇಳಿ ಅಗ್ನಿಯ ಉತ್ತರದಲ್ಲಿ ಪೂರ್ವ ದಿಕ್ಕಿನಲ್ಲೂ **"ಸೋಮಾಯ ಸ್ವಾಹಾ"** ಎಂದು ದಕ್ಷಿಣದಲ್ಲೂ ಹೋಮಿಸಬೇಕು.

ಆಮೇಲೆ ಚರುಪಾತ್ರೆಯಲ್ಲಿರುವ ಚರುವನ್ನು ಹೊರತೆಗೆದು **"ಇದಮಗ್ನಯೇ"** **"ಇದ ಮಗ್ನೀಷೋಮಾಭ್ಯಾಂ"** ಎಂದು ದಕ್ಷಿಣ ಮತ್ತು ಉತ್ತರಕ್ಕೆ ಎರಡು ಭಾಗ ಮಾಡಬೇಕು. ಆಮೇಲೆ ಅವದಾನಕ್ರಮದಿಂದ ಅದನ್ನು ಹವನ ಮಾಡಬೇಕು. ಹೀಗೆ, ಕೇವಲ ನಾಮಮಂತ್ರದ ಹೋಮವಾದರೆ ಎಷ್ಟು ದೇವತೆಗಳೋ ಅಷ್ಟು ಭಾಗ ಮಾಡಿ ಸ್ಪರ್ಶಮಾಡಬೇಕು. ಸಮಂತ್ರಕ ಹೋಮವಾದರೆ ಸ್ಪರ್ಶವೂ ಬೇಡ ವಿಭಾಗವೂ ಬೇಡ.

Scanned by CamScanner

ಗುಷ್ಠ ಮಧ್ಯಮಾನಾಮಿಕಾಭಿರುದಗಗ್ರಾಭಿರ್ನಖಸ್ಪರ್ಶಮಕುರ್ವನ್ನವದಾಯ ದರ್ವ್ಯಾ ಮೋಪ್ಯ ಪಾತ್ರಸ್ಥಂ ಹವಿರಭಿಘಾರ್ಯ ದರ್ವೀಸ್ಥಮವತ್ತಂ ಚಾಭಿಘಾರ್ಯ ವಿಧೂಮಜ್ವಾಲಾಗ್ನೌ ॥

ಓಂ ಅಗ್ನಯೇ ಸ್ವಾಹೇತ್ಯಾಜ್ಯಭಾಗಯೋರ್ಮಧ್ಯದೇಶೇ ತತ್ಪ್ರತ್ಯಗ್ದೇಶೇ ವಾ ಆಚ್ಛಾದಯನ್ನಿವ ದರ್ವ್ಯಾ ಪಾರ್ಶ್ವೇನ ಹುತ್ವಾ ಅಗ್ನಯ ಇದಂ ನ ಮಮೇತಿ ತ್ಯಕ್ತ್ವಾ ॥ ಪುನಃ ಪೂರ್ವವದುತ್ತರಹವಿರ್ಭಾಗಾದವದಾಯ । ಓಂ

ಅವದಾನ ಕ್ರಮ:- "ಅವದಾನ ಧರ್ಮ" ಈ ರೀತಿಯಾಗಿದೆ. ಸ್ರುವದಿಂದ ಸ್ರುಕ್ಕಿನಲ್ಲಿ ತುಪ್ಪ ಹಾಕಬೇಕು. ಮೊದಲು ಪ್ರಧಾನ ದೇವತೆಯ ಚರುಭಾಗವನ್ನು ಅದರ ನಡುವಿನಿಂದ ಅಂಗುಷ್ಠದ ಕಾಂಡದ ವರೆಗೆ ಬಗ್ಗಿಸಿದ ಉತ್ತರಕ್ಕೆ ತುದಿ ಇರುವ ಅಂಗುಷ್ಠ, ಅನಾಮಿಕೆ ಮತ್ತು ಮಧ್ಯಮಾಗಳಿಂದ (ಮೃಗೀಮುದ್ರೆಯಿಂದ) ಉಗುರಿನ ಸ್ಪರ್ಶವಾಗದಂತೆ ಚರುವನ್ನು ತೆಗೆದುಕೊಂಡು ಅದನ್ನು ದರ್ವಿಯಲ್ಲಿ ಹಾಕಬೇಕು. ಬಳಿಕ ಚರುವಿನಿಂದ ಪೂರ್ವಭಾಗವನ್ನು ಪೂರ್ವಕ್ಕೆ ತುದಿ ಇದ್ದ ಅಂಗುಷ್ಠ ಮಧ್ಯಮಾ ಅನಾಮಿಕೆಗಳಿಂದ ಅದೇ ರೀತಿ ತೆಗೆದು, ದರ್ವಿಯಲ್ಲಿ ಹಾಕಬೇಕು. ಆಮೇಲೆ ಪಾತ್ರೆಯಲ್ಲಿ ಉಳಿದ ಹಾಗೂ ದರ್ವಿಯ ಮೇಲಿರುವ ಚರುವನ್ನು ಅಭಿಘಾರ ಮಾಡಬೇಕು. **ಜಾಮದಗ್ನ್ಯಾ ವತ್ಸವಿದಾ ವಾರ್ಷ್ಟಿಷೇಣಾಸ್ತಥೈವ ಚ । ಭಾರ್ಗವಚ್ಯಾವನಾ ಔರ್ವಾಃ ಪಂಚಾವತ್ತಿನ ಈರಿತಾಃ ॥** ಈ ಗೋತ್ರದವರು ಪಂಚಾವತ್ತಿಗಳು.

ಸ್ರುವವನ್ನು ಹಿಡಿಯುವ ಕ್ರಮ:- "ಕಠಿಣದ್ರವ್ಯ ಹೋಮೇತು ಮುಷ್ಟಿನಾ ಧಾರಣಂ ಸ್ರುಚೈಃ । ದ್ರವದ್ರವ್ಯಸ್ಯ ಹೋಮೇ ತು ಉತ್ತಾನಾಂಗುಲಿಭಿಃ ಸ್ಮೃತಂ" ॥ ಕಠಿಣದ್ರವ್ಯಗಳನ್ನು ಹೋಮಿಸುವುದಾದರೆ ಸ್ರುಕ್ ಸ್ರುವಗಳನ್ನು ಮುಷ್ಟಿಯಿಂದ ಗಟ್ಟಿಯಾಗಿ ಹಿಡಿಯಬೇಕು. ದ್ರವವಸ್ತುಗಳಾದರೆ ಅಂಗಾತನೆ ಚಾಚಿದ ಬೆರಳುಗಳಿಂದ ಹಿಡಿಯಬೇಕು.

ಹೋಮಮುದ್ರೆಗಳು:- "ಹೋಮಮುದ್ರಾಸ್ತ್ರಯಃ ಪ್ರೋಕ್ತಾ ಮೃಗೀ ಹಂಸೀ ಚ ಸೂಕರೀ । ಸೂಕರೀ ಕರಸಂಕೋಚಂ ಹಂಸೀ ಮುಕ್ತಕನಿಷ್ಠಿಕಾ । ಕನಿಷ್ಠಿಕಾ ತರ್ಜನೀಮುಕ್ತಾ ತ್ರಯೋ ಮುದ್ರಾಃ ಪ್ರಕೀರ್ತಿತಾಃ ॥ ಶಾಂತಿಕೇ ಪೌಷ್ಟಿಕೇ ಕಾರ್ಯೇ ಮೃಗೀ ಹಂಸೀ ಪ್ರಶಸ್ಯತೇ । ವಶ್ಯೋಚ್ಚಾಟನಕಾರ್ಯೇಷು ಕುರ್ಕುಟೀ ಸೂಕರೀ ಭವೇತ್" ॥ ಹೋಮಮಾಡುವ ಮುದ್ರೆಗಳು ಮೂರು ವಿಧವಾಗಿವೆ. 1) **ಮೃಗೀಃ** ಕನಿಷ್ಠಿಕಾ ಮತ್ತು ತರ್ಜನಿಗಳನ್ನು ಬಿಟ್ಟು ಉಳಿದ ಬೆರಳುಗಳು. 2) **ಹಂಸೀಃ ಕನಿಷ್ಠಿಕಾ ಬಿಟ್ಟು ಉಳಿದ ಬೆರಳುಗಳು. 3) ಸೂಕರೀಃ** ಹಂದಿಯ ಬಾಯಿಯಂತೆ ಕೈಯನ್ನು ಚಿಕ್ಕದಾಗಿ ಮಾಡುವುದು. **ಕುರ್ಕುಟೀಃ** ಕೋಳಿಯ ಬಾಯಿಯಂತೆ. ಶಾಂತಿತ ಪೌಷ್ಟಿಕ ಕಾರ್ಯಗಳಿಗೆ ಮೃಗೀ ಮುದ್ರೆ ಹಾಗೂ ಹಂಸೀ ಮುದ್ರೆಗಳನ್ನು ವಶ್ಯ ಉಚ್ಚಾಟನ ಕಾರ್ಯಗಳಿಗೆ ಸೂಕರೀ ಕುರ್ಕುಟೀ ಮುದ್ರೆಗಳನ್ನೂ ಅನುಸರಿಸಬೇಕು.

Scanned by CamScanner

Scanned with CamScanner

(*) ಅಥ ಪ್ರಧಾನ ಹೋಮಂ .... ಪ್ರಧಾನಾಹುತೀರ್ಹುತ್ವಾ
ಸ್ವಿಷ್ಟಕೃತಂ ದ್ವಿರಭಿಘಾರ್ಯ

ಅಗ್ನೀಷೋಮಾಭ್ಯಾಂ ಸ್ವಾಹೇತಿ ಪೂರ್ವಾಹುತೇಃ ಪ್ರಾಗ್ಭಾಗೇ ಹುತ್ವಾ ಅಗ್ನೀಷೋಮಾಭ್ಯಾಮಿದಂ ನಮಮೇತಿ ತ್ಯಜೇತ್ ॥ ಪಂಚಾವತ್ತೀ ತು ದರ್ವ್ಯಾಮುಪಸ್ತೀರ್ಯ ಮಧ್ಯಾತ್ಪೂರ್ವಾರ್ಧಾತ್ ಪಶ್ಚಾರ್ಧಾಚ್ಚ ತ್ರಿರ್ಹವಿಷೋಽವದಾಯ ಅಭಿಘಾರ್ಯ ಜುಹುಯಾತ್ । ದರ್ಶೇತು ಅಗ್ನೀಷೋಮಸ್ಥಾನೇ ಇಂದ್ರಾಗ್ನಿಭ್ಯಾಂ ಸ್ವಾಹಾ ಇಂದ್ರಾಗ್ನಿಭ್ಯಾಮಿದಂ ನ ಮಮೇತಿ ವಿಶೇಷಃ ॥ ಪುನರ್ದರ್ವ್ಯಾಮುಪಸ್ತೀರ್ಯ ಪ್ರಥಮಹವಿರ್ಭಾಗಸ್ಯೋತ್ತರಾರ್ಧತಃ ಪೂರ್ವಾವದಾನತೋ ಭೂಯೋಽನೂಚೀನಾಭಿರಂಗುಲಿಭಿರವದಾಯ ದರ್ವ್ಯಾಮಾರೋಪ್ಯ ದ್ವಿತೀಯ ಹವಿರ್ಭಾಗಸ್ಯ ತಥೈವಾವದಾಯ ಪಾತ್ರಸ್ಥಮನಭಿಘಾರ್ಯ ಅವತ್ತಂ ತು ದ್ವಿರಭಿಘಾರ್ಯ ॥

(×) ಯದಸ್ಯೇತಿ ಹಿರಣ್ಯಗರ್ಭೋಽಗ್ನಿಃ ಸ್ವಿಷ್ಟಕೃದತಿಧೃತಿಃ । ಸ್ವಿಷ್ಟಕೃದ್ಧೋಮೇ ವಿನಿಯೋಗಃ ॥ ಓಂ ಯದಸ್ಯಕರ್ಮಣೋಽತ್ಯರೀರಿಚಂ ಯದ್ವಾನ್ಯೂನಮಿಹಾಕರಂ । ಅಗ್ನಿಷ್ಟ ತ್ಸ್ವಿಷ್ಟಕೃದ್ವಿದ್ವಾನ್ ಸರ್ವಂ ಸ್ವಿಷ್ಟಂ ಸುಹುತಂ ಕರೋತು ಮೇ ॥ ಅಗ್ನಯೇ ಸ್ವಿಷ್ಟಕೃತೇ ಸುಹುತಹುತೇ ಸರ್ವಪ್ರಾಯಶ್ಚಿತ್ತಾಹುತೀನಾಂ ಕಾಮಾನಾಂ ಸಮರ್ಧಯಿತ್ರೇ ಸರ್ವಾನ್ನಃ ಕಾಮಾನ್ ಸಮರ್ಧಯ ಸ್ವಾಹಾ ಇತ್ಯಗ್ನಾವೈಶಾನದೇಶೇ ಜುಹುಯಾತ್ ॥ ಸ್ವಿಷ್ಟಕೃತೇಽಗ್ನಯ ಇದಂ ನ ಮಮ ॥

"**ಓಂ ಅಗ್ನಯೇ ಸ್ವಾಹಾ**" ಎಂದು ಹೇಳಿ ಅಗ್ನಿಯ ಮಧ್ಯಭಾಗದಲ್ಲಿ ಅಥವಾ ಪಶ್ಚಿಮ ಭಾಗದಲ್ಲಿ ಮುಚ್ಚಿದಂತೆ ಮಾಡಿ ದರ್ವಿಯ ಪಾರ್ಶ್ವಭಾಗದಿಂದ ಹೋಮಮಾಡಿ "**ಅಗ್ನಯ ಇದಂ ನಮಮ**" ಎಂದು ಹೇಳಬೇಕು. ಪುನಃ ಮೊದಲಿನಂತೆ ಚರುವಿನ ಮುಂದಿನ ಭಾಗದಿಂದ ಚರುವನ್ನು ತೆಗೆದುಕೊಂಡು "**ಓಂ ಅಗ್ನೀಷೋಮಾಭ್ಯಾಂ ಸ್ವಾಹಾ**" "**ಅಗ್ನಿಷೋಮಾಭ್ಯಾಮಿದಂ**" ನ ಮಮ ಎಂದು ಹೋಮಮಾಡಬೇಕು. ಅಮಾವಾಸ್ಯೆಯ ದಿನ ಮಾಡುವ ಹೋಮವಾದರೆ "**ಇಂದ್ರಾಗ್ನಿಭ್ಯಾಂ ಸ್ವಾಹಾ**" "**ಇಂದ್ರಾಗ್ನಿಭ್ಯಾಮಿದಂ ನ ಮಮ**" ಎಂದು ಹೇಳಿ ಹೋಮಿಸಬೇಕು.

ಮತ್ತೊಮ್ಮೆ ದರ್ವಿಗೆ ಅಭಿಘಾರ ಮಾಡಿ ಮೊದಲ ಹವಿರ್ಭಾಗದ ಉತ್ತರಭಾಗದಿಂದ, ಈ ಮೊದಲು ಅವದಾನ ಕ್ರಮದಿಂದ ತೆಗೆದುಕೊಂಡಂತೆ, ಬೆರಳುಗಳನ್ನು ಇನ್ನಷ್ಟು ಬಗ್ಗಿಸಿ, ಚರುವನ್ನು ತೆಗೆದುಕೊಂಡು, ಅದನ್ನು ದರ್ವಿಯಲ್ಲಿ ಹಾಕಿ, ಅದೇ ರೀತಿಯಿಂದ ಎರಡನೆಯ ಹವಿರ್ಭಾಗದಿಂದಲೂ ತೆಗೆದುಕೊಂಡು, ಪಾತ್ರೆಯಲ್ಲಿ ಉಳಿದುದಕ್ಕೆ ಅಭಿಘಾರ ಮಾಡದೆ, ತೆಗೆದುಕೊಂಡದ್ದಕ್ಕೆ ಎರಡು ಸಲ ಅಭಿಘಾರ ಮಾಡಿ, "**ಯದಸ್ಯ ಕರ್ಮಣೋ...**" ಎಂಬ ಮಂತ್ರವನ್ನು ಹೇಳಿ ಅಗ್ನಿಯ ಈಶಾನ್ಯ ಮೂಲೆಯಲ್ಲಿ ಹೋಮಿಸಬೇಕು. "**ಸ್ವಿಷ್ಟಕೃತೇಽಗ್ನಯ ಇದಂ ನ ಮಮ**" ಎಂದು ಉಚ್ಚರಿಸಬೇಕು.

"**ಯತ್ರ ಪ್ರಜ್ವಲನಂ ತತ್ರ ಜಿಹ್ವಾ ಚೈವ ಪ್ರಕೀರ್ತಿತಾ । ಗಜವಾಜಿ ಪ್ರಣಾದೀತು ವಹ್ನಿಃ ಶುಭಫಲಪ್ರದಃ ॥**"

Scanned by CamScanner
Scanned with CamScanner

ತತೋಽಗ್ನೇರುತ್ತರತಃಸ್ಥಿತಮಿಧ್ಮಬಂಧನರಜ್ಜುಂ ವಿಸೃಜ್ಯ "ರುದ್ರಾಯ ಸ್ವಾಹಾ ರುದ್ರಾಯ ಇದಂ ನ ಮಮ" ॥ ಅಪಉಪಸ್ಪೃಶ್ಯ ॥

ಸ್ರುವೇಣ ಪ್ರಾಯಶ್ಚಿತ್ತಾಜ್ಯಾಹುತೀಃ ಸಪ್ತ ಜುಹುಯಾತ್ ॥ ಅಯಾಶ್ಚೇತಿ ವಿಮದೋ ಯಾ ಅಗ್ನಿಃ ಪಂಕ್ತಿಃ ಪ್ರಾಯಶ್ಚಿತ್ತಾಜ್ಯಹೋಮೇ ವಿನಿಯೋಗಃ ॥ ಓಂ ಅಯಾಶ್ಚಾಗ್ನೇಽಸ್ಯನಭಿಶಸ್ತೀಶ್ಚಸತ್ಯಮಿತ್ವಮಯಾಅಸಿ । ಅಯಾಸಾವಯ-ಸಾಕೃತೋಽಯಾಸನ್‌ಹವ್ಯಮೂಹಿಷೇಯಾನೋಧೇಹಿಭೇಷಜಂ ಸ್ವಾಹಾ ॥ ಅಯಾಸೇಽಗ್ನಯ ಇದಂ ನ ಮಮ ॥ ೧ ॥ ಅತೋದೇವಾಃ ಕಾಣ್ವೋ ಮೇಧಾತಿಥಿರ್ದೇವಾ ಗಾಯತ್ರೀ । ಪ್ರಾಯಶ್ಚಿತ್ತಾಜ್ಯಹೋಮೇ ವಿನಿಯೋಗಃ ॥ ಓಂ ಅತೋದೇವಾಅವಂತುನೋಯತೋವಿಷ್ಣುರ್ವಿಚಕ್ರಮೇ । ಪೃಥಿವ್ಯಾಃ ಸಪ್ತಧಾಮಭಿಃ ಸ್ವಾಹಾ ॥ ದೇವೇಭ್ಯ ಇದಂ ನ ಮಮ ॥ ೨ ॥ ಇದಂ ವಿಷ್ಣುಃ ಕಾಣ್ವೋ ಮೇಧಾತಿಥಿರ್ವಿಷ್ಣುರ್ಗಾಯತ್ರೀ । ಪ್ರಾಯಶ್ಚಿತ್ತಾಜ್ಯಹೋಮೇ ವಿನಿಯೋಗಃ ॥ ಓಂ ಇದಂವಿಷ್ಣುರ್ವಿಚಕ್ರಮೇತ್ರೇಧಾನಿದಧೇ ಪದಂ । ಸಮೂಹ್ಯಮಸ್ಯಪಾಂಸುರೇ ಸ್ವಾಹಾ ॥ ವಿಷ್ಣವ ಇದಂ ನ ಮಮ ॥ ೩ ॥ ವ್ಯಸ್ತಸಮಸ್ತವ್ಯಾಹೃತೀನಾಂ ವಿಶ್ವಾಮಿತ್ರಜಮದಗ್ನಿಭರದ್ವಾಜಪ್ರಜಾಪತಯ

ಹೋಮಕುಂಡದಲ್ಲಿ ಎಲ್ಲಿ ಅಗ್ನಿಯ ಜ್ವಾಲೆಯು ಚೆನ್ನಾಗಿ ಏಳುತ್ತದೋ ಅದು ಅಗ್ನಿಯ ಜಿಹ್ವೆ (ನಾಲಿಗೆ) ಎಂದು ತಿಳಿದು ಅಲ್ಲಿಯೇ ಹೋಮಿಸಬೇಕು. ಆನೆ ಕುದುರೆಗಳಂತೆ ಶಬ್ದಿಸುವ ಅಗ್ನಿಯು ಶುಭಫಲವನ್ನು ಕೊಡುತ್ತಾನೆಂದು ತಿಳಿಯಬೇಕು.

ಆಮೇಲೆ ಉತ್ತರದಲ್ಲಿರುವ ಇಧ್ಮಬಂಧನರಜ್ಜುವನ್ನು (ಇಧ್ಮವನ್ನು ಕಟ್ಟಿದ ದರ್ಭೆಯ ಹಗ್ಗವನ್ನು) ಬಿಚ್ಚಿ **"ರುದ್ರಾಯ ಸ್ವಾಹಾ" "ರುದ್ರಾಯ ಇದಂ ನ ಮಮ"** ಎಂದು ಹೇಳಿ ಆಹುತಿ ಕೊಡಬೇಕು. ನೀರಿನಿಂದ ಕೈತೊಳೆಯಬೇಕು. ಆಮೇಲೆ **"ಅಯಾಶ್ಚಾಗ್ನೇ" "ಅತೋ ದೇವಾ" "ಇದಂ ವಿಷ್ಣು"** ಎಂಬ ಈ ಮೂರು ಮಂತ್ರಗಳನ್ನೂ **ಭೂಃ ಭುವಃ ಸ್ವಃ ಭೂರ್ಭುವಃ ಸ್ವಃ** ನಾಲ್ಕು ವ್ಯಾಹೃತಿಗಳನ್ನೂ ಹೇಳಿ ಏಳು ಪ್ರಾಯಶ್ಚಿತ್ತ ಆಹುತಿಗಳನ್ನು ತುಪ್ಪದಿಂದ ಕೊಡಬೇಕು.

ನಂತರ ಬ್ರಹ್ಮನು ಕರ್ತನಿಗೆ ಪ್ರದಕ್ಷಿಣೆಯಾಗಿ ಬಂದು ಅಗ್ನಿಯ ವಾಯವ್ಯ ದಿಕ್ಕಿನಲ್ಲಿ ನಿಂತು ಈ ಏಳು ಆಹುತಿಗಳನ್ನು ಕೊಡಬೇಕು. **"ನ ಮಮ"** ಎಂದು ಯಜಮಾನನೇ ಹೇಳಬೇಕು.

Scanned by CamScanner

ಋಷಯಃ ॥ ಅಗ್ನಿವಾಯುಸೂರ್ಯಪ್ರಜಾಪತಯೋ ದೇವತಾಃ । ಗಾಯತ್ರ್ಯುಷ್ಣಿ-ಗನುಷ್ಟುಬ್ಬೃಹತ್ಯಶ್ಛಂದಾಂಸಿ ॥ ಪ್ರಾಯಶ್ಚಿತ್ತಾಜ್ಯಹೋಮೇ ವಿನಿಯೋಗಃ ॥ ಓಂ ಭೂಃ ಸ್ವಾಹಾ ಅಗ್ನಯ ಇದಂ ನ ಮಮ ॥೪॥ ಓಂ ಭುವಃ ಸ್ವಾಹಾ ವಾಯವ ಇದಂ ನ ಮಮ ॥ ೫ ॥ ಓಂ ಸ್ವಃ ಸ್ವಾಹಾ ಸೂರ್ಯಾಯೇದಂ ನ ಮಮ ॥ ೬ ॥ಓಂ ಭೂರ್ಭುವಃ ಸ್ವಃ ಸ್ವಾಹಾ ಪ್ರಜಾಪತಯ ಇದಂ ನ ಮಮ ॥

ತತೋ ಬ್ರಹ್ಮಾ ಕರ್ತಾರಂ ಪರೀತ್ಯಾಗ್ನೇರ್ವಾಯವ್ಯದೇಶೇ ತಿಷ್ಠನ್ನೇತಾ ಏವಂ ಸಪ್ತಾಜ್ಯಾಹುತೀರ್ಜುಹುಯಾತ್ ॥ ತ್ಯಾಗಂ ಯಜಮಾನೋಽತ್ರ ಕುರ್ಯಾತ್ ॥

ತತಸ್ತತ್ರಸ್ಥೋ ಬ್ರಹ್ಮೈವ ಮಂತ್ರವಿಪರ್ಯಾಸಾದಿ ನಿಯತನಿಮಿತ್ತೇ ಸತಿ ॥ ಅನಾಜ್ಞಾತಮಿತಿ ಮಂತ್ರದ್ವಯಸ್ಯ ಹಿರಣ್ಯಗರ್ಭೋಽಗ್ನಿರನುಷ್ಟುಪ್ । ಜ್ಞಾತಾಜ್ಞಾತದೋಷ ನಿಬರ್ಹಣಾರ್ಥಂ ಪ್ರಾಯಶ್ಚಿತ್ತಾಜ್ಯಹೋಮೇ ವಿನಿಯೋಗಃ ॥ ಓಂ ಅನಾಜ್ಞಾತಂ ಯದಾಜ್ಞಾತಂ ಯಜ್ಞಸ್ಯ ಕ್ರಿಯತೇ ಮಿಥು । ಅಗ್ನೇತದಸ್ಯಕಲ್ಪಯತ್ವಗ್ಂ ಹಿವೇತ್ಥಯಥಾತಥಗ್ಂ ಸ್ವಾಹಾ ॥ ಯಜಮಾನಃ ॥

ಬ್ರಹ್ಮನು ತಾನು ಮೊದಲು ನಿಂತ ಸ್ಥಳದಲ್ಲೇ ನಿಂತುಕೊಂಡು **"ಅನಾಜ್ಞಾತಂ"** **"ಪುರುಷಸಮ್ಮಿತೋ"** **"ಯತ್ಪಾಕತ್ರಾ"** **"ಯದ್ವೋದೇವಾ"** ಇತ್ಯಾದಿ ಮಂತ್ರಗಳಿಂದ ಪ್ರಾಯಶ್ಚಿತ್ತಾಜ್ಯಾಹುತಿಗಳನ್ನು ಕೊಡಬೇಕು.

ಪೂರ್ಣಾಹುತಿ:- ಯಜಮಾನನು, **"ಸರ್ವಕರ್ಮಪ್ರಪೂರಣೀಂ ... ಹೋಷ್ಯಾಮಿ"** ಎಂದು ಸಂಕಲ್ಪಿಸಿ, ಸ್ರುವದಿಂದ ತುಪ್ಪವನ್ನು ತೆಗೆದು ಸ್ರುಚಿಯಲ್ಲಿ ತುಂಬಾ ತುಂಬಿಸಿ ಅದರಲ್ಲಿ ಸ್ರುವವನ್ನು ಮೇಲ್ಮುಖವಾಗಿಯೂ ಪುನಃ ಕೆಳಮುಖವಾಗಿಯೂ ಇಟ್ಟು ಸ್ರುವದ ತುದಿಗೆ ಗಂಧಪುಷ್ಪಾಕ್ಷತೆಗಳನ್ನಿಟ್ಟು ಎಡಗೈಯಿಂದ ಸ್ರುಕ್ ಸ್ರುವಗಳ ಬುಡವನ್ನು ಹಿಡಿದು, ಬಲಗೈಯಿಂದ ಶಂಖಮುದ್ರೆಯಲ್ಲಿ ಅದನ್ನು ಹಿಡಿದು, ಕಾಲುಗಳನ್ನು ಹೊಂದಿಸಿಟ್ಟು ನೆಟ್ಟಗೆ ನಿಂತು ಸ್ರುವದ ತುದಿಯನ್ನೇ ನೋಡುತ್ತ ಪ್ರಸನ್ನಚಿತ್ತನಾಗಿ **"ಸಮುದ್ರಾದೂರ್ಮಿ"** ಎಂಬ ಮಂತ್ರವನ್ನು ಹೇಳುತ್ತ ಭತ್ತದ ಕಾಳಿನಷ್ಟು ದಪ್ಪದ ತುಪ್ಪದ ಧಾರೆಯು ಸಂತತವಾಗಿ ಬೀಳುವಂತೆ ಹೋಮಿಸಬೇಕು. **"ವಿಜ್ಯೋತಿಷಾ"** ಎಂಬ ಮಂತ್ರದಿಂದ ಶೇಷಾಜ್ಯವನ್ನೂ ಹೋಮಿಸಿ, ಸಂಸ್ರಾವವನ್ನು ಕೊಡಬೇಕು.

Scanned by CamScanner

Scanned with CamScanner

ಸ್ನಾನಾತಿರಿಕ್ತ ದೋಷ ಪರಿಹಾರಾರ್ಥಂ

ಅಗ್ನಯ ಇದಂ ನ ಮಮ ॥ ಓಂ ಪುರುಷಸಂಮಿತೋಯಜ್ಞೋಯಜ್ಞಃ ಪುರುಷ-ಸಂಮಿತಃ ॥ ಅಗ್ನೇತದಸ್ಯಕಲ್ಪಯತ್ವಗ್ಂ ಹಿವೇತ್ಥಯಥಾತಥಗ್ಂ ಸ್ವಾಹಾ ॥ ಅಗ್ನಯ ಇದಂ ನ ಮಮ ॥ ಯತ್ಪಾಕತ್ರೇತ್ಯಾಪ್ತ್ಯಸ್ತ್ರಿಷ್ಟುಪ್ ॥ ಪ್ರಾಯಶ್ಚಿತ್ತಾಜ್ಯ-ಹೋಮೇ ವಿನಿಯೋಗಃ ॥ ಓಂ ಯತ್ಪಾಕತ್ರಾಮನಸಾದೀನದಕ್ಷಾ ನ ಯಜ್ಞಸ್ಯ-ಮನ್ವತೇ ಮರ್ತ್ಯಾಸಃ । ಅಗ್ನಿಷ್ಟದ್ಧೋತಾಕ್ರತುವಿದ್ವಿಜಾನನ್ಯಜಿಷ್ಠೋ ದೇವಾಗ್ಂ ಋತುಶೋಯಜಾತಿಸ್ವಾಹಾ ॥ ಅಗ್ನಯ ಇದಂ ನ ಮಮ । ಯದ್ವೋ ದೇವಾ ಅಭಿತಪಾ ಮರುತಸ್ತ್ರಿಷ್ಟುಪ್ ॥ ಮಂತ್ರತಂತ್ರವಿಪರ್ಯಾಸಾದಿನಿಮಿತ್ತಕ-ಪ್ರಾಯಶ್ಚಿತ್ತಾಜ್ಯಹೋಮೇ ವಿನಿಯೋಗಃ ॥ ಓಂ ಯದ್ವೋ ದೇವಾ ಅತಿಪಾತಯಾನಿ ವಾಚಾ ಚ ಪ್ರಯೂತೀ ದೇವಹೇಳನಂ ॥ ಅರಾಯೋ ಅಸ್ಮಾಅಭಿದುಚ್ಛು-ನಾಯತ್ತೇನ್ಯತ್ರಾಸ್ಮಿನ್ಮರುತಸ್ತನ್ನಿಧೇತನ ಸ್ವಾಹಾ ॥ ಮರುದ್ಭ್ಯ ಇದಂ ನ ಮಮ ॥

ತತಃ ಸ್ಕನ್ನಭಿನ್ನಾದ್ಯನಿಯತನಿಮಿತ್ತೇ ಸತಿ ವಕ್ಷ್ಯಮಾಣಪ್ರಕಾರೇಣ ತತ್ತತ್ಪ್ರತಿ-ಪದೋಕ್ತಜಪಹೋಮಾನ್ ಕುರ್ಯಾತ್ ಬ್ರಹ್ಮಾ ॥ ಬ್ರಹ್ಮಣೋಽಭಾವೇ ಯಜ-ಮಾನ ಏವೈತಾನ್ ಪ್ರಾಯಶ್ಚಿತ್ತಾದೀನ್ ಕೃತ್ವಾ ಅನ್ಯಸ್ಮೈ ವರಂ ದದ್ಯಾತ್ ॥

ತತೋ ಯಜಮಾನಃ ಸರ್ವಕರ್ಮಪ್ರಪೂರಣೀಂ ಭದ್ರದ್ರವ್ಯದಾಂ ಪೂರ್ಣಾಹುತಿಮಾಜ್ಯೇನ ಹೋಷ್ಯಾಮಿ ಇತಿ ಸಂಕಲ್ಪ್ಯ ॥ ಸ್ರುವೇಣಾಜ್ಯಂ ಗೃಹೀತ್ವಾ ಸ್ರುಚಂ ಸಮಬಿಲಾಂ ಪೂರಯಿತ್ವಾ ತಸ್ಯಾಂ ಸ್ರುವಮೂರ್ಧ್ವಬಿಲಂ ನಿಧಾಯ ಪುನರಧೋಬಿಲಂ ನಿಕ್ಷಿಪ್ಯ ಸ್ರುವಾಗ್ರೇ ಕುಸುಮಾಕ್ಷತಾನ್ ನಿಧಾಯ ಸವ್ಯಪಾಣಿನಾ ಸ್ರುಕ್ಸ್ರುವಮೂಲೇ ಧೃತ್ವಾ ದಕ್ಷಿಣಪಾಣಿನಾ ಸ್ರುಕ್ಸ್ರುವಂ ಶಂಖಮುದ್ರಯಾ ಗೃಹೀತ್ವಾ ತಿಷ್ಠನ್ ಸಮಪಾದಋಜುಕಾಯಃ ಸ್ರುವಾಗ್ರ-ನ್ಯಸ್ತದೃಷ್ಟಿಃ ಪ್ರಸನ್ನಾತ್ಮಾ ॥ ಸಮುದ್ರಾದೂರ್ಮಿರಿತ್ಯೇಕಾದಶರ್ಚಸ್ಯ ಸೂಕ್ತಸ್ಯ ಗೌತಮೋ ವಾಮದೇವ ಆಪಸ್ತ್ರಿಷ್ಟುಪ್ ಅಂತ್ಯಾ ಜಗತೀ ಪೂರ್ಣಾಹುತೌ

Scanned by CamScanner

ವಿನಿಯೋಗಃ ॥ "ಸಮುದ್ರಾದೂರ್ಮಿ ..." ಋಕ್ ೧೧ ॥ ಮಧುಮಂತಂತ ಊರ್ಮಿಂ ಸ್ವಾಹಾ ॥ ಇತಿ ಪಠನ್ ಯವಪರಿಮಿತಾಂ ಧಾರಾಂ ಸಂತತಾಂ ಸ್ರುಗಗ್ರೇಣ ಸಶೇಷಂ ಹುತ್ವಾ ಅಧ್ಯ ಇದಂ ನ ಮಮೇತಿ ತ್ಯಕ್ತ್ವಾ ॥ ವಿಜ್ಯೋ-ತಿಷೇತ್ಯಸ್ಯಜಾರೋವೃಶೋಗ್ನಿಸ್ತ್ರಿಷ್ಟುಪ್ ॥ ಪೂರ್ಣಾಹುತಿಶೇಷಾಜ್ಯಹೋಮೇ ವಿನಿಯೋಗಃ ॥ ಓಂ ವಿಜ್ಯೋತಿಷಾಬೃಹತಾಭಾತ್ಯಗ್ನಿರಾವಿರ್ವಿಶ್ವಾನಿಕೃಣುತೇಮ-ಹಿತ್ವಾ ॥ ಪ್ರಾದೇವೀರ್ಮಾಯಾಃ ಸಹತೇ ದುರೇವಾಃ ಶಿಶೀತೇ ಶೃಂಗೇ ರಕ್ಷಸೇ ವಿನಿಕ್ಷೇ ಸ್ವಾಹಾ ॥ ಇತ್ಯನೇನ ಚ ತಥೈವಾವಶೇಷಂ ಹುತ್ವಾ ಅಗ್ನಯ ಇದಂ ನ ಮಮೇತಿ ತ್ಯಕ್ತ್ವಾ ॥ ವಿಶ್ವೇಭ್ಯೋ ದೇವೇಭ್ಯಃ ಸ್ವಾಹೇತಿ ಸಂಸ್ರಾವಂ ಹುತ್ವಾ । ವಿಶ್ವೇಭ್ಯೋ ದೇವೇಭ್ಯ ಇದಂ ನ ಮಮೇತಿ ತ್ಯಜೇತ್ ॥

ತತಸ್ತಂದುಲಕಣಾನ್ ಸಮಿದ್ದರ್ಭಶಕಲಾನದ್ಭಿಃ ಪ್ರೋಕ್ಷ್ಯ ಅಗ್ನೌ ಪ್ರಹರೇತ್ ॥

ಅಥಾವಭೃಥಸ್ನಾನೀಯಂ ಪೂರ್ಣಪಾತ್ರಜಲೇನ ಮಾರ್ಜನಂ ಕುರ್ಯಾತ್ ॥ ತದ್ಯಥಾ ॥ ಪೂರ್ವಾಸಾದಿತಂ ಪೂರ್ಣಪಾತ್ರಮಾಸ್ತೀರ್ಣೇ ಬರ್ಹಿಷಿ ದಕ್ಷಿಣಪಾಣಿನಾ ನಿಧಾಯ ತತ್ರ ಗಂಗಾದಿ ಪುಣ್ಯನದೀಃ ಸ್ಮರನ್ ದಕ್ಷಿಣ-ಪಾಣಿನಾ ಸ್ಪೃಶನ್ ॥ ಪೂರ್ಣಮಸಿ ಪೂರ್ಣಂ ಮೇ ಭೂಯಾಃ ॥ ಸುಪೂರ್ಣ-ಮಸಿ ಸುಪೂರ್ಣಂ ಮೇ ಭೂಯಾಃ ॥ ಸದಸಿ ಸನ್ಮೇ ಭೂಯಾಃ ॥ ಸರ್ವಮಸಿ ಸರ್ವಂ ಮೇ ಭೂಯಾಃ ॥ ಅಕ್ಷಿತಿರಸಿ ಮಾಮೇಕ್ಷೇಷ್ಠಾಃ ॥ ಇತಿ ಜಪಿತ್ವಾ ಕುಶಾಗ್ರೈಃ ಪ್ರಾಗಾದಿ ಪಂಚದಿಕ್ಷು ಜಲಂ ಮಂತ್ರೈರ್ಯಥಾಲಿಂಗಂ ಸಿಂಚೇತ್ ॥ ತೇ ಚ ಮಂತ್ರಾಃ ಪ್ರಾಚ್ಯಾಂ ದಿಶಿ ದೇವಾ ಋತ್ವಿಜೋ ಮಾರ್ಜಯಂತಾಂ ।

ಆ ಮೇಲೆ ಹೋಮಕುಂಡದ ಸುತ್ತಲೂ ಬಿದ್ದಿರುವ ಅಕ್ಕಿಕಾಳು, ಸಮಿಧೆ, ದರ್ಭೆ ಮುಂತಾದವುಗಳಿಗೆ ನೀರನ್ನು ಪ್ರೋಕ್ಷಿಸಿ, ಅವುಗಳನ್ನು ಅಗ್ನಿಯಲ್ಲಿ ಹಾಕಬೇಕು.

ಬಳಿಕ ಅವಭೃಥಸ್ನಾನಕ್ಕೋಸ್ಕರ ಪೂರ್ಣಪಾತ್ರೆಯ ನೀರಿನಿಂದ ಮಾರ್ಜನ ಮಾಡಬೇಕು. ಮೊದಲೇ ಇಟ್ಟಿದ್ದ ಪೂರ್ಣಪಾತ್ರೆಯನ್ನು ತನ್ನ ಮುಂಭಾಗದಲ್ಲಿ ಹರಡಿದ ಬರ್ಹಿಯ ಮೇಲೆ

Scanned by CamScanner

ದಕ್ಷಿಣಸ್ಯಾಂ ದಿಶಿ ಮಾಸಾಃ ಪಿತರೋ ಮಾರ್ಜಯಂತಾಂ ॥ ಅಪಉಪಸ್ಪೃಶ್ಯ ॥ ಪ್ರತೀಚ್ಯಾಂ ದಿಶಿ ಗ್ರಹಾಃ ಪಶವೋ ಮಾರ್ಜಯಂತಾಂ । ಉದೀಚ್ಯಾಂ ದಿಶ್ಯಾಪ ಓಷಧಿ ವನಸ್ಪತಯೋ ಮಾರ್ಜಯಂತಾಂ ॥ ಊರ್ಧ್ವಾಯಾಂ ದಿಶಿ ಯಜ್ಞಃ ಸಂವತ್ಸರಃ ಪ್ರಜಾಪತಿರ್ಮಾರ್ಜಯತಾಂ ॥ ಇತ್ಯೇಕಶ್ರುತ್ಯಾ ಪಠನ್ ಪ್ರತಿದಿಶಂ ಸಿಕ್ತ್ವಾ ಕುಶಾಗ್ರೈಃ ಸ್ವಶಿರಸಿ ಮಾರ್ಜಯೇತ್ ॥ ಆಪೋ ಅಸ್ಮಾನಿತ್ಯಸ್ಯ ದೇವಶ್ರವಾ ಆಪಸ್ತ್ರಿಷ್ಟುಪ್ ಮಾರ್ಜನೇ ವಿನಿಯೋಗಃ ॥ ಓಂ ಆಪೋ-ಅಸ್ಮಾನ್ಮಾತರಃ ಶುಂಧಯಂತು ಘೃತೇನ ನೋ ಘೃತಪ್ವಃ ಪುನಂತು ॥ ವಿಶ್ವಂ ಹಿರಿಪ್ರಂ ಪ್ರವಹಂತಿದೇವೀರುದಿದಾಭ್ಯಃ ಶುಚಿರಾಪೂತಏಮಿ ॥ ಇದಮಾಪಃ ಸಿಂಧುದ್ವೀಪ ಆಪೋಽನುಷ್ಟುಪ್ ಮಾರ್ಜನೇ ವಿನಿಯೋಗಃ । ಇದಮಾಪಃ ಪ್ರವಹತ ಯತ್ಕಿಂ ಚ ದುರಿತಂ ಮಯಿ ॥ ಯದ್ವಾಹಮಭಿದುದ್ರೋಹಯದ್ವಾಶೇಪ-ಉತಾನೃತಂ ॥ ಸುಮಿತ್ರ್ಯಾನ ಆಪ ಓಷಧಯಃ ಸಂತು ॥ ಇತ್ಯೇತೈಃ ಮಂತ್ರಾಂತೇ ಮಾರ್ಜನಂ ಕೃತ್ವಾ ॥ ದುರ್ಮಿತ್ರ್ಯಾಸ್ತಸ್ಮೈಸಂತು ಯೋಽಸ್ಮಾನ್ ದ್ವೇಷ್ಟಿ ಯಂ ಚ ವಯಂ ದ್ವಿಷ್ಮಸ್ತಂ ಹನ್ಮಿ ॥ ಇತಿ ನಿರ್ಋತಿದೇಶೇ ಕುಶಾಗ್ರೈರಪಃ ಸಿಂಚೇತ್ ॥

ಇಡಬೇಕು. ಅದರ ಮೇಲೆ ಬಲಗೈಯನ್ನಿಟ್ಟು ಗಂಗಾ ಮೊದಲಾದ ಪುಣ್ಯನದಿಗಳ ಸಾನ್ನಿಧ್ಯವು ಇದರಲ್ಲಿದೆ ಎಂದು ಸ್ಮರಿಸುತ್ತ **"ಪೂರ್ಣಮಸಿ"** ಈ ಮಂತ್ರವನ್ನು ಜಪಿಸಬೇಕು. ದರ್ಭೆಗಳ ತುದಿಯಿಂದ, **"ಪ್ರಾಚ್ಯಾಂ ದಿಶಿ ..."** ಇತ್ಯಾದಿ ಒಂದೊಂದೇ ಮಂತ್ರವನ್ನು ಹೇಳುತ್ತ ಒಂದೊಂದು ದಿಕ್ಕಿಗೆ ನೀರನ್ನು ಸಿಂಪಡಿಸಬೇಕು. ದಕ್ಷಿಣ ದಿಕ್ಕಿಗೆ ಆದಮೇಲೆ ಕೈ ತೊಳೆಯಬೇಕು. **"ಆಪೋ ಅಸ್ಮಾನ್"** ಎಂಬ ಮಂತ್ರದಿಂದ ತನ್ನ ಮೇಲೆ ಮಾರ್ಜನ ಮಾಡಿಕೊಂಡು, **"ದುರ್ಮಿತ್ರ್ಯಾ"** ಎಂಬ ಮಂತ್ರವನ್ನು ಹೇಳಿ ನೈಋತ್ಯ ದಿಕ್ಕಿಗೆ ನೀರನ್ನು ಪ್ರೋಕ್ಷಿಸಬೇಕು.

ಬಳಿಕ ಬ್ರಹ್ಮನು ಯಜಮಾನನ ಪತ್ನಿಯ ಅಂಜಲಿಯಲ್ಲಿ ಪೂರ್ಣಪಾತ್ರೆಯಲ್ಲಿರುವ ನೀರನ್ನು, **"ಮಾಹಂ ಪ್ರಜಾಂ ... "** ಎಂಬ ಮಂತ್ರವನ್ನು ಅವಳಿಂದ ಹೇಳಿಸಿ ಅಥವಾ ತಾನೇ ಹೇಳುತ್ತ ಪಶ್ಚಿಮಕ್ಕೆ ಮುಖಮಾಡಿ ಸುರಿಯಬೇಕು. ಅಂಜಲಿಯಲ್ಲಿರುವ ನೀರನ್ನು ತನ್ನ ಯಜಮಾನನ ಮತ್ತು ಪತ್ನಿಯ ಮೇಲೆ ಪ್ರೋಕ್ಷಿಸಬೇಕು. ಅವಳು ಉಳಿದ ನೀರನ್ನು ಬರ್ಹಿಯ ಮೇಲೆ ಸುರಿಯಬೇಕು. ಅಥವಾ ಯಜಮಾನನೇ ತನ್ನ ಎಡಗೈಯ ಮೇಲೆ ಬರ್ಹಿಯನ್ನು ಇಟ್ಟು ಬಲಗೈಯಿಂದ ಪೂರ್ಣಪಾತ್ರೆಯಲ್ಲಿರುವ ನೀರನ್ನು **"ಮಾಹಂ ಪ್ರಜಾಂ"** ಎಂಬ ಮಂತ್ರದಿಂದ

Scanned by CamScanner

ತತೋ ಬ್ರಹ್ಮಾ ಯಜಮಾನವಾಮಪಾರ್ಶ್ವಸ್ಥಿತ ಪತ್ನ್ಯಂಜಲೌ ಪೂರ್ಣಪಾತ್ರಸ್ಥಂ ಜಲಂ ॥ ಓಂ ಮಾಹಂ ಪ್ರಜಾಂ ಪರಾಸಿಚಂ ಯಾನಃ ಸಯಾವರೀಸ್ಥನ । ಸಮುದ್ರೇವೋ ನಿನಯಾನಿ ಸ್ವಂ ಪಾಥೋ ಅಪೀಥೇತಿ ಮಂತ್ರಂ ಪತ್ನ್ಯಾ ವಾಚಯನ್ ಸ್ವಯಂ ವಾ ಪಠನ್ ಪ್ರತ್ಯಙ್ಮುಖಂ ನಿಷಿಚ್ಯ ಅಂಜಲಿಸ್ಥಜಲೈಃ ಪಾಪಾಪನೋದನಾರ್ಥಮಾತ್ಮಾನಂ ಯಜಮಾನಂ ಪತ್ನೀಂ ಚ ಪ್ರೋಕ್ಷೇತ್ ॥ ಪತ್ನೀ ತಜ್ಜಲಂ ಬರ್ಹಿಷಿ ನಿಷಿಂಚೇತ್ ॥ ಅಥವಾ ಯಜಮಾನ ಏವ ಸ್ವ ವಾಮಪಾಣಾವುತ್ತಾನೇ ಬರ್ಹಿರ್ನಿಧಾಯ ತತ್ರ ದಕ್ಷಿಣಪಾಣಿನಾ ಪೂರ್ಣಪಾತ್ರಮಾದಾಯ ಮಾಹಂ ಪ್ರಜಾಮಿತ್ಯನೇನ ತಜ್ಜಲಂ ಪ್ರತ್ಯಙ್ಮುಖಂ ನಿಷಿಚ್ಯ ತಾ ಆಪಃ ಸಮುದ್ರಂ ಗಚ್ಛಂತೀತಿ ಧ್ಯಾತ್ವಾ ಪಾಣಿಸ್ಥಜಲೈರಾತ್ಮಾನಂ ಪತ್ನೀಂ ಚ ಪ್ರೋಕ್ಷೇತ್ ॥

ತತಃ ಕರ್ತಾಗ್ನೇರ್ವಾಯವ್ಯದೇಶೇ ಸ್ಥಿತಃ ಸಂಸ್ಥಾಜಪೇನೋಪತಿಷ್ಠೇತ ॥ ತದ್ಯಥಾ ॥ ಅಗ್ನೇ ತ್ವಂ ನ ಇತಿ ಚತಸೃಣಾಂ ಗೌಪಾಯನಾ ಲೌಪಾಯನಾ ವಾಬಂಧುಃ ಸುಬಂಧುಃ ಶ್ರುತಬಂಧುರ್ವಿಪ್ರಬಂಧುಶ್ಚೈಕರ್ಚಾ ಋಷಯಃ ॥ ಅಗ್ನಿರ್ದೇವತಾ ॥ ದ್ವಿಪದಾ ವಿರಾಟ್ ಛಂದಃ ॥ ಅಗ್ನ್ಯುಪಸ್ಥಾನೇ ವಿನಿಯೋಗಃ ॥ ಓಂ ಅಗ್ನೇತ್ವಂ ನೋ ಅಂತಮಉತತ್ರಾತಾಶಿವೋಭವಾವರೂಥ್ಯಃ ವಸುರಗ್ನಿರ್ವಸುಶ್ರವಾಅಚ್ಛಾನಕ್ಷಿದ್ಯುಮತ್ತಮಂರಯಿಂದಾಃ । ಸನೋಬೋಧಿಶ್ರುಧೀಹವಮುರುಷ್ಯಾಣೋ ಅಘಾಯತಃ ಸಮಸ್ಮಾತ್ ॥ ತಂತ್ವಾಶೋಚಿಷ್ಠದೀದಿವಃ ಸುಮ್ನಾಯನೂನಮೀಮಹೇ ಸಖಿಭ್ಯಃ ॥ ಓಂ ಚ ಮೇ ಸ್ವರಶ್ಚ ಮೇ ಯಜ್ಞೋಪಚತೇನಮಶ್ಚ ॥ ಯತ್ತೇ ನ್ಯೂನಂ ತಸ್ಮೈತ ಉಪ ಯತ್ತೇತಿರಿಕ್ತಂ ತಸ್ಮೈ ತೇ ನಮಃ ॥ ಅಗ್ನಯೇ ನಮಃ ಓಂ ಸ್ವಸ್ತಿ ॥ ಶ್ರದ್ಧಾಂ ಮೇಧಾಂ ಯಶಃ

ಸುರಿದು "ಈ ನೀರು ಸಮುದ್ರಕ್ಕೆ ಹೋಗುವುದೆಂದು" ಸ್ಮರಿಸಿ ಉಳಿದ ನೀರಿನಿಂದ ತನ್ನನ್ನೂ, ಪತ್ನಿಯನ್ನೂ ಪ್ರೋಕ್ಷಿಸಬೇಕು.

ಆಮೇಲೆ ಕರ್ತನು ಅಗ್ನಿಯ ವಾಯವ್ಯ ದಿಕ್ಕಿನಲ್ಲಿ ನಿಂತು ಉಪಸ್ಥಾನ ಮಾಡಬೇಕು.

ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಂ ॥ ಆಯುಷ್ಯಂ ತೇಜ ಆರೋಗ್ಯಂ ದೇಹಿ ಮೇ ಹವ್ಯವಾಹನ ॥

ಮಾನಸ್ತೋಕ ಇತ್ಯಸ್ಯ ಕುತ್ಸೋ ರುದ್ರೋ ಜಗತೀ ॥ ವಿಭೂತಿಗ್ರಹಣೇ ವಿನಿಯೋಗಃ ॥ ಓಂ ಮಾನಸ್ತೋಕೇತನಯೇ ಮಾನ ಆಯೌ ಮಾನೋ ಗೋಷು ಮಾನೋ ಅಶ್ವೇಷು ರೀರಿಷಃ । ವೀರಾನ್ಮಾನೋ ರುದ್ರಭಾಮಿತೋವ-ಧೀರ್ಹವಿಷ್ಮಂತಃ ಸದಮಿತ್ವಾಹವಾಮಹೇ ॥ ಇತಿ ಸ್ರುವಬಿಲಪೃಷ್ಠೇನ ಐಶಾನೀಗತಾಂ ವಿಭೂತಿಂ ಗೃಹೀತ್ವಾ ॥ ಓಂ ತ್ರ್ಯಾಯುಷಂ ಜಮದಗ್ನೇರಿತಿ ಲಲಾಟೇ ॥ ಕಶ್ಯಪಸ್ಯ ತ್ರ್ಯಾಯುಷಮಿತಿ ಕಂಠೇ ॥ ಅಗಸ್ತ್ಯಸ್ಯ ತ್ರ್ಯಾಯುಷಮಿತಿ ನಾಭೌ ॥ ಯದ್ದೇವಾನಾಂ ತ್ರ್ಯಾಯುಷಮಿತಿ ದಕ್ಷಿಣಸ್ಕಂಧೇ ॥ ತನ್ನ ಅಸ್ತು ತ್ರ್ಯಾಯುಷಮಿತಿ ವಾಮಸ್ಕಂಧೇ ॥ ಸರ್ವಮಸ್ತು ಶತಾಯುಷಮಿತಿ ಶಿರಸಿ ॥ ಕೇಚಿತ್ತೂಪಸ್ಥಾನಾ-ತ್ಪೂರ್ವಂ ವಿಭೂತಿ ಧಾರಣಮಿತ್ಯಾಹುಃ ॥ ತತಃ ಪರಿಸ್ತರಣಾನಿ ಉತ್ತರೇ ವಿಸೃಜ್ಯ ಅಗ್ನಿಂ ಪರಿಸಮುಹ್ಯ ಪರಿಷಿಚ್ಯ "ವಿಶ್ವಾನಿನ" ಇತ್ಯರ್ಚಯಿತ್ವಾ ನತ್ವಾ ಚ ಪುಷ್ಪಾದಿಭಿರಲಂಕೃತ್ಯ ನೈವೇದ್ಯಂ ತಾಂಬೂಲಂ ಚ ನಿವೇದ್ಯ ॥ ಬ್ರಹ್ಮಣೇ ಯಥೋಕ್ತ ದಕ್ಷಿಣಾಂ ದಕ್ಷಿಣಾಭಾವೇ ಹುತಶೇಷಂ ಘೃತಾದಿ ಸಹಿರಣ್ಯಂ ದತ್ವಾ ಬ್ರಹ್ಮಾಭಾವೇ ಅನ್ಯಸ್ಮೈ

"ಮಾನಸ್ತೋಕ ... " ಎಂಬ ಮಂತ್ರವನ್ನು ಹೇಳಿ ಸ್ರುವದ ತುದಿಯಲ್ಲಿ ಈಶಾನ್ಯ ದಿಕ್ಕಿನಿಂದ ವಿಭೂತಿಯನ್ನು ತೆಗೆದುಕೊಂಡು, **"ತ್ರ್ಯಾಯುಷಂ"** ಎಂದು ಮುಂತಾಗಿ ಕ್ರಮಪ್ರಕಾರ ಲಲಾಟ, ಕಂಠ, ನಾಭಿ, ಬಲಗೈಭುಜ, ಎಡಗೈಭುಜ ಮತ್ತು ತಲೆಯ ಮೇಲೆ ವಿಭೂತಿ ಧಾರಣ ಮಾಡಬೇಕು.

ಆಮೇಲೆ ಪರಿಸ್ತರಣಗಳನ್ನು ಉತ್ತರದಿಕ್ಕಿನಲ್ಲಿ ವಿಸರ್ಜಿಸಿ, ಅಗ್ನಿಯನ್ನು ಪರಿಸಮೂಹನ ಪರ್ಯುಕ್ಷಣಗಳಿಂದ ಸಂಸ್ಕರಿಸಿ, **"ವಿಶ್ವಾನಿನ"** ಎಂಬ ಮಂತ್ರದಿಂದ ಅರ್ಚಿಸಿ, ಅಲಂಕರಿಸಿ **"ಅಗ್ನಯೇ ನಮಃ"** ಎಂಬ ಮಂತ್ರವನ್ನು ಹೇಳುತ್ತ ಪೂಜೆ ಮಾಡಿ ನೈವೇದ್ಯ ತಾಂಬೂಲಾದಿಗಳನ್ನು ಅರ್ಪಿಸಿ ನಮಸ್ಕಾರ ಮಾಡಬೇಕು.

ಬ್ರಹ್ಮನಿಗೆ ವಿಹಿತವಾದ ದಕ್ಷಿಣೆಯನ್ನಿತ್ತು, ಬ್ರಹ್ಮನಿಲ್ಲವಾದರೆ ಯಾವನಾದರೊಬ್ಬ ಬ್ರಾಹ್ಮಣನಿಗೆ, ದಕ್ಷಿಣೆ ಇಲ್ಲವೆಂದಾದರೆ ಹೋಮಮಾಡಿ ಉಳಿದ ತುಪ್ಪವನ್ನು ಹಿರಣ್ಯಸಹಿತ

Scanned by CamScanner

ಬ್ರಾಹ್ಮಣಾಯ ದತ್ವಾ ಪಾತ್ರಾಣಿ ಪ್ರಕ್ಷಾಲ್ಯ ಪೂರ್ವಕ್ರಮೇಣ ದ್ವಂದ್ವಶ ಉತ್ಸೃಜ್ಯ ಯಸ್ಯಸ್ಮೃತ್ಯೇತಿ ಶ್ರೀವಿಷ್ಣುಂ ನತ್ವಾ ಕರ್ಮೇಶ್ವರಾರ್ಪಣಂ ಕೃತ್ವಾಚಾಮೇತ್ ॥ ಧೃತಪವಿತ್ರಗ್ರಂಥಿಂ ವಿಸೃಜ್ಯ ಶುದ್ಧದೇಶೇ ಕ್ಷಿಪೇತ್ ॥

॥ ಇತಿ ಸ್ಥಾಲೀಪಾಕಪ್ರಯೋಗಃ ॥

ಕೊಟ್ಟು, ಪಾತ್ರಾದಿಗಳನ್ನು ಮೊದಲು ಇಟ್ಟ ಕ್ರಮದಲ್ಲೇ ಎರಡೆರಡಾಗಿ ತೊಳೆದು ಹಾಗೇ ಇಟ್ಟು, ವಿಷ್ಣುಸ್ಮರಣೆ ಮಾಡಿ, ಕರ್ಮವನ್ನು ಈಶ್ವರಾರ್ಪಣೆ ಮಾಡಿ, ಪವಿತ್ರವನ್ನು ವಿಸರ್ಜಿಸ ಬೇಕು.

॥ ಸ್ಥಾಲೀಪಾಕಪ್ರಯೋಗ ಸಮಾಪ್ತ ॥

Scanned by CamScanner

Scanned with CamScanner

॥ ಗೃಹ್ಯಾಗ್ನೇಃ ಪುನಃ ಸಂಧಾನಂ ॥

॥ ಶ್ರೀಃ ॥ ಪತ್ನ್ಯಾ ಸಹ ಕೃತಸ್ನಾನಾದಿಃ ಕೃತನಿತ್ಯಕ್ರಿಯೋ ದೇಶಕಾಲೌ ಸಂಕೀರ್ತ್ಯ, ಮಮ ಗೃಹ್ಯಾಗ್ನಿವಿಚ್ಛೇದದಿನಾದಾರಭ್ಯ ಏತಾವಂತಂ ಕಾಲಂ ಗೃಹ್ಯಾಗ್ನಿವಿಚ್ಛೇದಜನಿತ ದೋಷಪರಿಹಾರದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ, ಗೃಹ್ಯಾಗ್ನಿವಿಚ್ಛೇದದಿನಾದಾರಭ್ಯ ಏತಾವದಬ್ದಪರ್ಯಂತಂ ಪ್ರತ್ಯಬ್ದಮೇಕೈಕ-ಕೃಚ್ಛ್ರಂ ಯಥಾಶಕ್ತಿ ತತ್ಪ್ರತ್ಯಾಮ್ನಾಯ ಗೋನಿಷ್ಕ್ರಯೀಭೂತರಜತನಿಷ್ಕ-ನಿಷ್ಕಾರ್ಧಂ ನಿಷ್ಕಪಾದನಿಷ್ಕಪಾದಾರ್ಧಾನ್ಯತಮದ್ರವ್ಯದಾನೇನಾಹಮಾಚರಿಷ್ಯೇ ॥ ತಥಾ ಏತಾವದ್ದಿನೇಷು ಗೃಹ್ಯಾಗ್ನಿವಿಚ್ಛೇದೇನ ಲುಪ್ತಸಾಯಂಪ್ರಾತರೌಪಾಸನ ಹೋಮದ್ರವ್ಯಂ ತಥಾ ಲುಪ್ತದರ್ಶಪೌರ್ಣಮಾಸಸ್ಥಾಲೀಪಾಕಾದಿ ಕರ್ಮ-ಪರ್ಯಾಪ್ತವ್ರೀಹ್ಯಾಜ್ಯದ್ರವ್ಯಂ ತನ್ನಿಷ್ಕ್ರಯಂ ವಾ ದಾತುಮಹಮುತ್ಸೃಜ್ಯೇ ॥ ಇತಿ ಸಂಕಲ್ಪ್ಯ ಕೃತ್ವಾ ಪುನಃ ದೇಶಕಾಲೌ ಸ್ಮೃತ್ವಾ ವಿಚ್ಛಿನ್ನಸ್ಯ ಗೃಹ್ಯಾಗ್ನೇಃ ಪುನಃ ಸಂಧಾನಂ ಕರಿಷ್ಯ ಇತಿ ಸಂಕಲ್ಪ್ಯ ಸ್ಥಂಡಿಲೋಪಲೇಪನೋಲ್ಲೇಖನಾಭ್ಯುಕ್ಷಣ ದ್ವಿಜನಾಮಾಗ್ನಿ ಪ್ರತಿಷ್ಠಾಪನಾನಿ ಕೃತ್ವಾನ್ವಾಧಾನಂ ಕುರ್ಯಾತ್ ॥

ಸಮಿದ್ದ್ವಯಮಾದಾಯ ಪುನಃಸಂಧಾನಹೋಮೇ ದೇವತಾಪರಿಗ್ರಹಾರ್ಥ-ಮನ್ವಾಧಾನಂ ಕರಿಷ್ಯೇ ॥ ಅಸ್ಮಿನ್ನನ್ವಾಹಿತೇಗ್ನೌ ಜಾತವೇದಸಮಗ್ನಿಮಿಧ್ಮೇನ

ಪುನಃಸಂಧಾನಃ– ಪತ್ನಿಯೊಂದಿಗೆ ಸ್ನಾನ ನಿತ್ಯಕರ್ಮಾದಿಗಳನ್ನು ಮಾಡಿ, ದೇಶಕಾಲಾದಿ ಗಳನ್ನು ಸ್ಮರಿಸಿ **"ಮಮ"** ಎಂಬಲ್ಲಿಂದ ಪ್ರಾರಂಭಿಸಿ, **"ಪುನಃ ಸಂಧಾನಂ ಕರಿಷ್ಯೇ"** ಎಂಬಲ್ಲಿ ವರೇಗೆ ಉಚ್ಚರಿಸಿ ಸಂಕಲ್ಪ ಮಾಡಬೇಕು. ಗೃಹ್ಯಾಗ್ನಿವಿಚ್ಛೇದವಾದ ದಿನದಿಂದ ಮೊದಲ್ಗೊಂಡು ಇಂದಿನ ವರೆಗೆ, ಅಂತಹ ವಿಚ್ಛೇದದಿಂದ ಉಂಟಾದ ದೋಷ ಪರಿಹಾರವಾಗುವುದರ ಮೂಲಕ ಶ್ರೀ ಪರಮೇಶ್ವರಪ್ರೀತ್ಯರ್ಥವಾಗಿ ಆ ದಿನದಿಂದ ಆರಂಭಿಸಿ, ಈ ವರ್ಷದ ವರೆಗೆ ವರ್ಷ ವೊಂದರ ಒಂದೊಂದು ಕೃಚ್ಛ್ರದಂತೆ, ಅಥವಾ ಅದಕ್ಕೆ ಬದಲಾಗಿ ಯಥಾಶಕ್ತಿ ಗೋನಿಷ್ಕ್ರಯ ರೂಪದಲ್ಲಿ ಒಂದೊಂದು ಬೆಳ್ಳಿಯ ನಾಣ್ಯ, ಅದರ ಅರ್ಧ ಅಥವಾ ಕಾಲಂಶ ಇಲ್ಲವೇ ಅದರ ಅರ್ಧದಷ್ಟನ್ನಾದರೂ ದಾನಮಾಡುವೆನೆಂದು ನೀರುಬಿಡಬೇಕು. ಅಂತೆಯೇ ಇಷ್ಟು ಸಮಯದ ವರೆಗೆ ಲೋಪವಾದ ಸಾಯಂಪ್ರಾತರೌಪಾಸನಹೋಮಗಳು, ದರ್ಶಪೌರ್ಣಮಾಸೀಹೋಮ ಗಳು, ಅವುಗಳಲ್ಲಿ ಉಪಯೋಗಿಸಲ್ಪಡಬೇಕಾದ ಭತ್ತ, ತುಪ್ಪ ಮುಂತಾದ ದ್ರವ್ಯಗಳನ್ನು ಅಥವಾ ಅದರ ಕ್ರಯವನ್ನು ಕೊಡುವೆನೆಂದು ನೀರುಬಿಡಬೇಕು. ಹೀಗೆ ಸಂಕಲ್ಪಿಸಿ ಅದನ್ನು ಮಾಡಿ, ಮತ್ತೊಮ್ಮೆ ದೇಶಕಾಲಗಳನ್ನು ಸ್ಮರಿಸಿ ಸ್ಥಂಡಿಲವನ್ನು ನಿರ್ಮಾಣಮಾಡಿ, ಉಪಲೇಪನ ಅಭ್ಯುಕ್ಷಣ, ಮುಂತಾದವುಗಳನ್ನು ಪೂರಯಿಸಿ **'ದ್ವಿಜ'** ಎಂಬ ಅಗ್ನಿಯನ್ನು ಪ್ರತಿಷ್ಠಾಪಿಸಿ ಅನ್ವಾಧಾನವನ್ನು ಮಾಡುವುದು.

Scanned by CamScanner

Scanned with CamScanner

ಪ್ರಜಾಪತಿಂ ಪ್ರಜಾಪತಿಂ ಚಾಘಾರದೇವತೇ ಆಜ್ಯೇನ, ಅತ್ರ ಪ್ರಧಾನಂ ತ್ರಿರಗ್ನಿಂ ಪವಮಾನಂ ಸಕೃದಗ್ನಿಂ ಪ್ರಜಾಪತಿಂ ಚಾಜ್ಯೇನ ಅರ್ಯಮಾಗ್ನಿಂ ವರುಣಾಗ್ನಿಂ ಪೂಷಾಗ್ನಿಂ ಪ್ರಜಾಪತಿಂ ಚ ಲಾಜದ್ರವ್ಯೇಣ ಸೂರ್ಯಾಸಾವಿತ್ರೀಂ ಚತುರ್ವಾರ-ಮಾಜ್ಯದ್ರವ್ಯೇಣ ।

ಶೇಷೇಣ ಸ್ವಿಷ್ಟಕೃತಮಿತ್ಯಾದಿ ಪರಿಸಮೂಹನಾದಿ ಕೃತ್ವಾ ॥ ಪಾತ್ರಾ-ಸಾದನೇ ವಿಶೇಷಃ ॥ ಪ್ರೋಕ್ಷಣೀಂ ಸ್ರುವಂ ಪ್ರಣೀತಾಮಾಜ್ಯಪಾತ್ರಂ ಲಾಜ-ಶೂರ್ಪಂ ಇಧ್ಮಂ ಬರ್ಹಿಶ್ಚ ದಧಿಪ್ರಾಶನಪಕ್ಷೇ ದಧಿ ಚಾಸಾದಯೇತ್ ॥ ಆಜ್ಯ-ಸಂಸ್ಕಾರಾದಿ ಕೃತ್ವಾ ॥ ತತ್ರಾಜ್ಯೇನ ಸಹ ಲಾಜಾನಾಮಪಿ ಪರ್ಯಗ್ನಿಕರಣಂ ॥ ಆಜ್ಯೋತ್ಪವನಮಾತ್ರೇ ಕೃತೇ ಲಾಜಾನಾಂ ತ್ರಿಃ ಪ್ರೋಕ್ಷಣಂ ॥ ಸ್ರುವಸಂಮಾರ್ಜನಾದಿ ಪತ್ನ್ಯಾನ್ವಾರಬ್ಧ ಇಧ್ಮಾಧಾನಾದ್ಯಾಘಾರಾಂತಂ ಕುರ್ಯಾನ್ನ ಚಕ್ಷುಷೀ ॥

ಅಗ್ನ ಆಯೂಂಷೀತಿ ತಿಸೃಣಾಂ ಶತಂ ವೈಖಾನಸಾ ಋಷಯಃ । ಅಗ್ನಿಃ ಪವಮಾನೋ ದೇವತಾ । ಗಾಯತ್ರೀ ಛಂದಃ । ಪುನಃಸಂಧಾನ-ಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ಅಗ್ನ ಆಯೂಂಷಿಪವಸಆಸು-ವೋರ್ಜಮಿಷಂ ಚನಃ । ಆರೇಬಾಧಸ್ವದುಚ್ಛನಾಂ ಸ್ವಾಹಾ ॥ ಅಗ್ನಯೇ ಪವಮಾನಾಯ ಇದಂ ನ ಮಮ ॥ ಓಂ ಅಗ್ನಿರ್ಋಷಿಃ ಪವಮಾನಃ ಪಾಂಚಜನ್ಯಃ ಪುರೋಹಿತಃ ॥ ತಮೀಮಹೇಮಹಾಗಯಂ ಸ್ವಾಹಾ ॥ ಅಗ್ನಯೇ ... ॥ ಓಂ ಅಗ್ನೇಪವಸ್ವಸ್ವಪಾ ಅಸ್ಮೇವರ್ಚಃ ಸುವೀರ್ಯಂ ॥ ದಧದ್ರಯಿಂಮಯಿ-

---

ಎರಡು ಸಮಿಧೆಗಳನ್ನು ತೆಕ್ಕೊಂಡು ಅನ್ವಾಧಾನ ಮಾಡುವುದು. ಆಮೇಲೆ ಸ್ಥಾಲೀಪಾಕದಲ್ಲಿ ಹೇಳಿದಂತೆ ಪಾತ್ರಾಸಾದನದ ವರೆಗಿನ ಕರ್ಮಗಳನ್ನು ಮಾಡಬೇಕು. ಪಾತ್ರಾಸಾದನದಲ್ಲಿ ಮಾತ್ರ ವಿಶೇಷವಿದೆ, ಪ್ರೋಕ್ಷಣೀ ಸ್ರುವ, ಪ್ರಣೀತಾ ಆಜ್ಯಪಾತ, ಹೊದಳಿನ ಮೊರ, ಇಧ್ಮಾ ಬರ್ಹಿ, ಧದಿಪ್ರಾಶನವಿದ್ದರೆ ಮೊಸರು ಇವಿಷ್ಟನ್ನು ಇಡಬೇಕು. ಆಜ್ಯಸಂಸ್ಕಾರದ ವರೇಗೆ ಸ್ಥಾಲೀಪಾಕದಲ್ಲಿ ಹೇಳಿದಂತೆ, ಇಧ್ಮಾಧಾನ ಅಘಾರಪರ್ಯಂತ ಮಾಡಿ, ಚಕ್ಷುಷಿ ಹೋಮಮಾಡದೆ ಮುಂದೆ **"ಅಗ್ನ ಆಯೂಂಷಿ"** ಮುಂತಾಗಿ ಮಂತ್ರಗಳನ್ನು ಹೇಳಿ ಆಹುತಿ ಕೊಡಬೇಕು.

Scanned by CamScanner

Scanned with CamScanner

ಪೋಷಂ ಸ್ವಾಹಾ ॥ ಅಗ್ನಯೇ ... ॥ ತ್ವಮರ್ಯಮಾ ವಸುಶ್ರುತೋಗ್ನಿಸ್ತ್ರಿ-ಷ್ಟುಪ್ ॥ ಪುನಃಸಂಧಾನಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ತ್ವಮರ್ಯಮಾ ಭವಸಿ ಯತ್ಕನೀನಾಂ ನಾಮಸ್ವಧಾವನ್ಗುಹ್ಯಂ ಬಿಭರ್ಷಿ ॥ ಅಂಜಂತಿ ಮಿತ್ರಂ ಸುಧಿತಂ ನ ಗೋಭಿರ್ಯದ್ದಂಪತೀ ಸಮನಸಾ ಕೃಣೋಷಿ ಸ್ವಾಹಾ ॥ ಅಗ್ನಯ ಇದಂ ನ ಮಮ ॥ ಪ್ರಜಾಪತೇ ಹಿರಣ್ಯಗರ್ಭಃ ಪ್ರಜಾಪತಿಸ್ತ್ರಿಷ್ಟುಪ್ ॥ ಪುನಃಸಂಧಾನಪ್ರಧಾನಾ... ॥ ಓಂ ಪ್ರಜಾಪತೇನ ... ॥ ಪ್ರಜಾಪತಯ ... ॥ ಅಥ ಪತ್ನ್ಯಾಃ ಪ್ರಕ್ಷಾಲಿತೇಂಜಲೌ ಪತಿರಾಜ್ಯೇನೋಪಸ್ತೀರ್ಯ ದ್ವಿರ್ಲಾಜಾನೋಪ್ಯ ಪಂಚಾವತ್ತೀ ತು ತ್ರಿರೋಪ್ಯ ಶೂರ್ಪಸ್ಥಾನಭಿಘಾರ್ಯ ಅಂಜಲಿಸ್ಥಾನಪ್ಯಭಿಘಾರ್ಯ ಸ್ವಯಮುಪವಿಷ್ಟ ಏವ ತಿಷ್ಠಂತ್ಯಾ ಅಂಜಲಿಂ ಸ್ವಕರಾಭ್ಯಾಂ ಧೃತ್ವಾ ॥ ಅರ್ಯಮಣಂ ವರುಣಂ ಪೂಷಣಮಿತಿ ತಿಸೃಣಾಂ ವಾಮದೇವೋರ್ಯಮಾಗ್ನಿರ್ವರುಣಾಗ್ನಿಃ-ಪೂಷಾಗ್ನಿರನುಷ್ಟುಪ್ ॥ ಗೃಹ್ಯಾಗ್ನಿ ಪುನಃಸಂಧಾನಲಾಜಹೋಮೇ ವಿನಿಯೋಗಃ ॥ ಓಂ ಅರ್ಯಮಣಂ ನು ದೇವಂ ಕನ್ಯಾ ಅಗ್ನಿಮಯಕ್ಷತ ॥ ಸ ಇಮಾಂ ದೇವೋ ಅರ್ಯಮಾ । ಪ್ರೇತೋಮುಂಚಾತುನಾಮುತಸ್ವಾಹಾ ಇತಿ ಪಠಿತಮಂತ್ರಾಂತೇ ಅಂಜಲಿಮವಿಚ್ಛಿಂದಂತೀ ಅಂಗುಲ್ಯಗ್ರೈರಂಗುಲಿವಾಮಪಾರ್ಶ್ವೇನ ವಾ ಪತ್ನೀ

ಆಮೇಲೆ ಪತಿಯು ಪತ್ನಿಯ ತೊಳೆದ ಬೊಗಸೆಗೆ ತುಪ್ಪ ಸುರಿದು ಅದರಲ್ಲಿ ಎರಡು ಸಲ ಹೊದಲನ್ನು ಹಾಕಬೇಕು. ಪಂಚಪ್ರವರದವನಾದರೆ ಮೂರು ಸಲ ಹಾಕಬೇಕು. ಮೊರದಲ್ಲಿದ್ದ ಹೊದಲಿಗೂ ಬೊಗಸೆಯಲ್ಲಿದ್ದ ಹೊದಲಿಗೂ ಅಭಿಘಾರ ಮಾಡಿ, ನಿಂತುಕೊಂಡಿದ್ದ ಪತ್ನಿಯ ಅಂಜಲಿಯನ್ನು ತಾನು ಕುಳಿತಲ್ಲಿಂದಲೇ ತನ್ನ ಕೈಗಳಿಂದ ಹಿಡಿದು, **"ಅರ್ಯಮಣಂ ನು"** ಮುಂತಾಗಿ ಮೂರು ಮಂತ್ರಗಳನ್ನು ಹೇಳಿ ಮೂರು ಸಲ ಬೊಗಸೆಯ ಬೆರಳುಗಳ ತುದಿಯಿಂದ ಅಥವಾ ಬೆರಳುಗಳ ಎಡಬದಿಯಿಂದ ಬೀಳುವಂತೆ ಹೊದಲನ್ನು ಹೋಮಮಾಡಬೇಕು. **"ಸ್ವಾಹಾ"** ಎಂದು ಹೇಳಿದ ಮೇಲೆ **"ಅರ್ಯಮ್ಣೇಗ್ನಯ ಇದಂ ನ ಮಮ ವರುಣಾಯಾಗ್ನಯ..."** ಹಾಗೂ **"ಪೂಷ್ಣೇಗ್ನಯ ಇದಂ ನ ಮಮ"** ಎಂದು ಹೇಳಬೇಕು. ಆಮೇಲೆ ಮೊರದಲ್ಲಿ ಉಳಿದ ಹೊದಲನ್ನು ಪೂರ್ಣವಾಗಿ ಅದರ ತುದಿಯಿಂದ ಬೀಳುವಂತೆ ಮನಸ್ಸಿನಲ್ಲಿ ಪ್ರಜಾಪತಿಯನ್ನು ಧ್ಯಾನಿಸುತ್ತ ಹೋಮಿಸಿ **"ಪ್ರಜಾಪತಯ ಇದಂ ನ ಮಮ"** ಎಂದು ಹೇಳಬೇಕು.

Scanned by CamScanner

ಜುಹುಯಾತ್ ॥ ಅರ್ಯಮ್ಣೇಗ್ನಯ ಇದಂ ನ ಮಮ ॥ ಏವಮಗ್ರೇಪಿ ॥ ಓಂ ವರುಣಂನು ದೇವಂ ಕನ್ಯಾ ಅಗ್ನಿಮಯಕ್ಷತ ॥ ಸ ಇಮಾಂ ದೇವೋ ವರುಣಃ ॥ ಪ್ರೇತೋ ಮುಂಚಾತು ನಾಮುತ ಸ್ವಾಹಾ ॥ ವರುಣಾಗ್ನಯ ಇದಂ ನ ಮಮ ॥ ಓಂ ಪೂಷಣಂ ನು ದೇವಂ ಕನ್ಯಾ ಅಗ್ನಿಮಯಕ್ಷತ ॥ ಸ ಇಮಾಂ ದೇವಃ ಪೂಷಾ । ಪ್ರೇತೋ ಮುಂಚಾತು ನಾ ಮುತ ಸ್ವಾಹಾ ॥ ಪೂಷ್ಣೇ-ಗ್ನಯ ಇದಂ ನ ಮಮ ॥ ತತಃ ಶೂರ್ಪಕೋಣೇನಾವಶಿಷ್ಟಾನ್ ಸರ್ವಾನ್ ಲಾಜಾನ್ ಪತಿಃ ಪತ್ನೀ ವಾಽ ಭ್ಯಾತ್ಮಂ ಪ್ರಜಾಪತಿಂ ಧ್ಯಾಯನ್ ಜುಹುಯಾತ್ ॥ ಪ್ರಜಾಪತಯ ಇದಂ ನ ಮಮ ॥ ಲಾಜಾನಾಂ ಸ್ವಿಷ್ಟಕೃನ್ನಾಸ್ತಿ ॥

ತಿಷ್ಠನ್ ಹೋಮೇ ಕೃತೇ ಉಪವಿಶ್ಯಾಜ್ಯಂ ಪತಿರ್ಜುಹುಯಾತ್ ॥ ಆನಃ ಪ್ರಜಾಮಿತಿ ಚತಸೃಣಾಂ ಸೂರ್ಯಾಸಾವಿತ್ರೀ ಸೂಯಾ ಸಾವಿತ್ರೀ । ಆದ್ಯಾ ಜಗತೀ ದ್ವಿತೀಯಾ ತ್ರಿಷ್ಟುಬಂತ್ಯೇ ದ್ವೇ ಅನುಷ್ಟುಭೌ ಅಗ್ನಿಪುನಃಸಂಧಾನಾಜ್ಯ-ಹೋಮೇ ವಿನಿಯೋಗಃ ॥ ಓಂ ಆನಃ ಪ್ರಜಾಂ ಜನಯತು ಪ್ರಜಾಪತಿರಾಜ-ರಸಾಯಸಮನಕ್ತ್ವರ್ಯಮಾ ॥ ಅದುರ್ಮಂಗಲೀಃ ಪತಿ ಲೋಕಮಾವಿಶಶಂ-ನೋಭವದ್ವಿಪದೇ ಶಂ ಚತುಷ್ಪದೇ ಸ್ವಾಹಾ ॥ ಸೂರ್ಯಾಸಾವಿತ್ರ್ಯಾ ಇದಂ ನ ಮಮ ॥ ಏವಮಗ್ರೇಪಿತ್ಯಾಗಃ ॥ ಓಂ ಅಘೋರಚಕ್ಷುರಪತಿಘ್ನ್ಯೇಧಿಶಿವಾ. ಪಶುಭ್ಯಃ ಸುಮನಾಃ ಸುವರ್ಚಾಃ ॥ ವೀರಸೂರ್ದೇವಕಾಮಾಸ್ಯೋನಾಶಂನೋ-ಭವದ್ವಿಪದೇಶಂ ಚತುಷ್ಪದೇ ಸ್ವಾಹಾ ॥ ಓಂ ಇಮಾಂತ್ವಮಿಂದ್ರಮೀಢ್ವಃ ಸುಪುತ್ರಾಂ ಸುಭಗಾಂ ಕೃಣು ॥ ದಶಾಸ್ಯಾಂ ಪುತ್ರಾನಾಧೇಹಿಪತಿಮೇಕಾದಶಂ ಕೃಧಿ ಸ್ವಾಹಾ ॥ ಓಂ ಸಮ್ರಾಜ್ಞೀಶ್ವಶುರೇ ಭವ ಸಮ್ರಾಜ್ಞೀಶ್ವಶ್ರ್ವಾಂ ಭವ । ನನಾಂದರಿ ಸಮ್ರಾಜ್ಞೀ ಭವ ಸಮ್ರಾಜ್ಞೀ ಅಧಿದೇವೃಷುಸ್ವಾಹಾ ॥ ಸಮಂ-ಜಂತ್ವಿತ್ಯಸ್ಯ ಸೂರ್ಯಾಸಾವಿತ್ರೀ ಸೂರ್ಯಾಸಾವಿತ್ರ್ಯನುಷ್ಟುಪ್ ॥ ದಧಿಪ್ರಾಶನೇ ಆಜ್ಯಶೇಷೇಣ ಹೃದಯಾಂಜನೇ ವಾ ವಿನಿಯೋಗಃ ॥ ಓಂ ಸಮಂಜಂತು ವಿಶ್ವೇ-ದೇವಾಃ ಸಮಾಪೋ ಹೃದಯಾನಿ ನೌ ॥ ಸಂಮಾತರಿಶ್ವಾ ಸಂಧಾತಾಸಮುದೇ-

Scanned by CamScanner

ಷ್ಪ್ರೀದಧಾತು ನೌ ॥ ಏತೇನ ಸ್ವಯಂ ದಧಿ ಪ್ರಾಶ್ನೀಯಾತ್ ॥ ಆಜ್ಯಶೇಷೇಣ ಹೃದಯಾಂಜನಂ ವಾ ಕುರ್ಯಾತ್ ॥ ಪತ್ನ್ಯೈಚ ದಧಿ ಪ್ರಯಚ್ಛೇತ್ ॥ ಸಾ ಚ ತೂಷ್ಣೀಂ ಪ್ರಾಶ್ನೀಯಾತ್ ॥ ಸ್ವಹೃದಯಾಂಜನಪಕ್ಷೇ ಪತ್ನ್ಯಾ ಅಪಿ ತೂಷ್ಣೀಂ ಹೃದಯಾಂಜನಂ ॥ ಅಥಾಜ್ಯೇನ ಯದಸ್ಯಕರ್ಮಣ ಇತಿ ಸ್ವಿಷ್ಟಕೃತಂ ಹುತ್ವಾ ಇಧ್ಮ ಸನ್ನಹನಾದಿ ಕರ್ಮಶೇಷಂ ಸಮಾಪಯೇತ್ ॥ ಅತ್ರ ಕಾರಿಕಾ ॥ ಉಪಲೇಪಾದಿಕಂ ಕುರ್ಯಾಧಾಘಾರಾಂತಂ ವಿವಾಹವತ್ । ವಿವಾಹಾಜ್ಯಾ-ಹುತೀರ್ಹುತ್ವಾ ಲಾಜಹೋಮೋ ಭವೇದಿಹ ॥ ಗೃಹಪ್ರವೇಶನೀಯಾಶ್ಚಹುತ್ವಾ-ಸ್ಯಾದ್ಧೃದಯಾಂಜನಂ । ಪರಿಣೀತ್ಯಾದಿನಾಸ್ತ್ವತ್ರಲಾಜಾನಾವಪತಿಸ್ವಯಂ ॥

॥ ಇತಿ ಗೃಹ್ಯಾಗ್ನೇಃ ಪುನಃ ಸಂಧಾನಂ ॥

ಎದ್ದುನಿಂತು ಹೋಮ ಮಾಡಿದ ಮೇಲೆ ಕುಳಿತು **"ಆನಃ ಪ್ರಜಾಂ"** ಇತ್ಯಾದಿ ನಾಲ್ಕು ಮಂತ್ರಗಳಿಂದ ಪತಿಯು ಆಜ್ಯಹೋಮವನ್ನು ಮಾಡಬೇಕು. **"ಸಮಂಜಂತು"** ಎಂಬ ಮಂತ್ರವನ್ನು ಹೇಳಿ ಸ್ವತಃ ಮೊಸರನ್ನು ಕುಡಿಯಬೇಕು ಅಥವಾ ಉಳಿದ ತುಪ್ಪದಿಂದ ಹೃದಯಾಂಜನ ಮಾಡಬೇಕು. ಪತ್ನಿಯು ಮೌನವಾಗಿ ಮೊಸರನ್ನು ಪ್ರಾಶನಮಾಡಬೇಕು. ತನಗೂ ಪತ್ನಿಗೂ ಆಜ್ಯದಿಂದ ಹೃದಯಾಂಜನ ಮಾಡಬೇಕು. ಆಮೇಲೆ **"ಯದಸ್ಯ ಕರ್ಮಣಃ"** ಎಂದು ಮೊದಲಾಗಿ ಸ್ವಿಷ್ಟಕೃತ್ ಹೋಮ, ಇಧ್ಮಬಂಧನರಜ್ಜು ಹೋಮ ಇತ್ಯಾದಿ ಸ್ಥಾಲೀಪಾಕದಲ್ಲಿ ಹೇಳಿದ ಎಲ್ಲ ಕರ್ಮಗಳನ್ನೂ ಮಾಡಿ ಹೋಮಕಾರ್ಯವನ್ನು ಮುಗಿಸಬೇಕು.

Scanned by CamScanner

Scanned with CamScanner

೨೧

॥ ಅಥ ಭುವನೇಶ್ವರೀ ಶಾಂತಿಃ ॥

॥ ಶ್ರೀಃ ॥ ರಜೋದರ್ಶನಾನಂತರಂ ಪಂಚಮಾದಿದಿನೇ ಚಂದ್ರತಾರಾದ್ಯಾನುಕೂಲ್ಯೇ ಶುಚಿದೇಶೇ ಸುಸ್ನಾತಯಾ ಪತ್ನ್ಯಾಯುತಃ ಪತಿಃ ಪ್ರಾಙ್ಮುಖಃ ಉಪವಿಶ್ಯಾಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ, ಮಮ ಪತ್ನ್ಯಾಃ ಪ್ರಥಮರಜೋದರ್ಶನೇ ಅಮುಕದುಷ್ಟಮಾಸಾದಿಸೂಚಿತಸಕಲಾರಿಷ್ಟನಿರಸನದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಸಗ್ರಹಮಖಾಂ ಶೌನಕೋಕ್ತಾಂ ಶಾಂತಿಂ ಕರಿಷ್ಯೇ ಇತಿ ಸಂಕಲ್ಪ್ಯ ಗಣೇಶಪೂಜನ ಪುಣ್ಯಾಹವಾಚನಮಾತೃಕಾಪೂಜನನಾಂದೀಶ್ರಾದ್ಧಾನಿ ಕೃತ್ವಾ, ಶಾಂತಂ ದಾಂತಂ ಕುಟುಂಬಿನಂ ಮಂತ್ರತಂತ್ರಜ್ಞಮಾಚಾರ್ಯಂ ಬ್ರಹ್ಮಾಣಂ ಜಪಹೋಮಾರ್ಥಮಷ್ಟೌ ಷಟ್‌ಚತುರೋ ವಾ ಋತ್ವಿಜೋ ವೃತ್ವಾ ಗಂಧಾದಿನಾ ಪೂಜಯೇತ್ ॥

ತತ ಆಚಾರ್ಯ ಆಚಮ್ಯ ಪ್ರಾಣಾನಾಯಮ್ಯ ಕಾಲ ದೇಶಾದ್ಯುಚ್ಚಾರ್ಯ ಯಜಮಾನಾನುಜ್ಞಯಾ ಆಚಾರ್ಯಕರ್ಮ ಕರಿಷ್ಯ ಇತಿ ಸಂಕಲ್ಪ್ಯ ಯದತ್ರೇತಿ-ಗೌರಸರ್ಷಪವಿಕಿರಣಾದ್ಯಾಚಾರ್ಯಕರ್ಮ ಕೃತ್ವಾ ॥ ತತೋ ಗೃಹೈಶಾನದೇಶೇ-ಶುಚೌ ಓಂ ಮಹೀದ್ಯೌರಿತಿ ಭೂಮಿಂ ಸ್ಪೃಷ್ಟ್ವಾ ತದ್ದಕ್ಷಿಣೋತ್ತರಯೋಶ್ಚ ತಥೈವ ಭೂಮಿಂ ಸ್ಪೃಷ್ಟ್ವಾ ಓಷಧಯಃ ಸಂವದಂತ ಇತಿ ದ್ರೋಣಪ್ರಮಾಣವ್ರೀಹಿಭಿರ್ಮಧ್ಯೇ ತದ್ದಕ್ಷಿಣೋತ್ತರತಶ್ಚ ಸ್ಪೃಷ್ಟದೇಶೇ ಮಂತ್ರಾವೃತ್ತ್ಯಾ ರಾಶಿತ್ರಯಂ ಕೃತ್ವಾ ತೇನೈವ ಕ್ರಮೇಣ ರಾಶಿತ್ರಯೇ ನವಮಕಾಲಕಮಭಗ್ನಂ ಕುಂಭತ್ರಯಮಾಕಲಶೇಷ್ವಿತಿ ಮಂತ್ರಾವೃತ್ತ್ಯಾ ಸ್ಥಾಪಯೇತ್ ॥

ಭುವನೇಶ್ವರೀಶಾಂತಿ:- ಪತ್ನಿಯಲ್ಲಿ ರಜೋದರ್ಶನವಾದ ಐದನೆಯ ದಿನದ ನಂತರ ಚಂದ್ರತಾರಾನುಕೂಲವಿರುವ ಸುಮುಹೂರ್ತದಲ್ಲಿ ಶುದ್ಧಸ್ನಾತಳಾದ ಪತ್ನಿಯೊಡನೆ ಪತಿಯು ಪೂರ್ವಮುಖವಾಗಿ ಕುಳಿತು, ಆಚಮನ ಪ್ರಾಣಾಯಾಮ ದೇಶಕಾಲ ಸ್ಮರಣ ಇತ್ಯಾದಿಗಳನ್ನು ಮಾಡಿ "**ಮಮ.... ಶಾಂತಿಂ ಕರಿಷ್ಯೇ**" ಎಂದು ಸಂಕಲ್ಪ ಮಾಡಬೇಕು. ಆಮೇಲೆ ಗಣಪತಿ ಪೂಜನ, ಪುಣ್ಯಾಹವಾಚನ, ಮಾತೃಕಾಪೂಜನ, ನಾಂದೀ ಶ್ರಾದ್ಧಗಳನ್ನು ಮಾಡಿ, ಗುಣಸಂಪನ್ನನೂ, ಮಂತ್ರತಂತ್ರಜ್ಞನೂ ಆದ ಆಚಾರ್ಯನನ್ನೂ, ಬ್ರಹ್ಮನನ್ನೂ ಜಪ, ಹೋಮ ಮುಂತಾದವುಗಳಿಗೆ ಎಂಟು, ಆರು ಅಥವಾ ನಾಲ್ಕು ಮಂದಿ ಋತ್ವಿಜರನ್ನೂ ವರಣಮಾಡಬೇಕು. ಅವರನ್ನು ಗಂಧಾಕ್ಷತಾದಿಗಳಿಂದ ಪೂಜಿಸಬೇಕು. ಆಚಾರ್ಯನು ಆಚಮನ ಪ್ರಾಣಾಯಾಮಗಳನ್ನು ಮಾಡಿ "**ಯಜಮಾನಾ..... ಕರಿಷ್ಯೇ**" ಎಂದು ಸಂಕಲ್ಪಿಸಿ, "**ಯದತ್ರ**" ಎಂಬ ಮಂತ್ರದಿಂದ ಬಿಳಿಸಾಸಿವೆಗಳನ್ನು ಚೆಲ್ಲಿ ಆಚಾರ್ಯಕರ್ಮವನ್ನು ಮಾಡಬೇಕು. ಬಳಿಕ ಮನೆಯ ಈಶಾನ್ಯ ದಿಕ್ಕಿನಲ್ಲಿ

Scanned by CamScanner

Scanned with CamScanner

ತತಃ ಪ್ರಸುವಆಪ ಇತಿ ನವರ್ಚಸ್ಯ ಸೂಕ್ತಸ್ಯ ಸಿಂಧುಕ್ಷಿತ್ ಪ್ರೈಯ-ಮೇಧೋನದ್ಯೋ ಜಗತೀ ॥ ಕಲಶೇಷೂದಕಪೂರಣೇ ವಿನಿಯೋಗಃ ॥ ಓಂ ಪ್ರಸುವ ಆಪೋಮಹಿಮಾನಮುತ್ತಮಂ ಕಾರುರ್ವೋಚಾತಿಸದನೇ ವಿವಸ್ವತಃ ॥ ಪ್ರಸಪ್ತಸಪ್ತತ್ರೇಧಾಹಿಚಕ್ರಮುಃ ಪ್ರಸೃತ್ವರೀಣಾಮತಿಸಿಂಧುರೋಜಸಾ ॥ ಪ್ರತೇ-ರದದ್ವರುಣೋಯಾತವೇಪಥಃ ಸಿಂಧೋಯದ್ವಾಜಾಂಅಭ್ಯದ್ರವಸ್ತ್ವಂ ॥ ಭೂಮ್ಯಾ ಅಧಿಪ್ರವತಾಯಾಸಿಸಾನುನಾಂಯದೇಷಾಮಗ್ರಂ ಜಗತಾಮಿರಜ್ಯಸಿ ॥ ದಿವಿಸ್ವನೋಯತತೇಭೂಮ್ಯೋಪರ್ಯನಂತಂಶುಷ್ಮ ಮುದಿಯರ್ತಿ ಭಾನುನಾ ॥ ಅಭ್ರಾದಿವಪ್ರಸ್ತನಯಂತಿವೃಷ್ಟಯಃ ಸಿಂಧುರ್ಯದೇತಿವೃಷಭೋನರೋರುವತ್ ॥ ಅಭಿತ್ವಾಸಿಂಧೋಶಿಶುಮಿನ್ನಮಾತರೋವಾಶ್ರಾಅರ್ಷಂತಿಪಯಸೇವಧೇನವಃ ॥ ರಾಜೇವಯುಧ್ವಾನಯಸಿತ್ವಮಿತ್ಸಿಚೌಯದಾಸಾಮಗ್ರಂಪ್ರವತಾಮಿನಕ್ಷಸಿ ॥ ಇಮಂ ಮೇ ಗಂಗೇ ಯಮುನೇ ಸರಸ್ವತಿಶುತುದ್ರಿಸ್ತೋಮಂ ಸ ಚ ತಾಪರುಷ್ಣ್ಯಾ ॥ ಅಸಿಕ್ನ್ಯಾಮರುದ್ವೃಧೇವಿತಸ್ತಯಾರ್ಜೀಕೀಯೇ ಶೃಣುಹ್ಯಾಸುಷೋಮಯಾ ॥ ೧ ॥ ತೃಷ್ಟಾಮಯಾಪ್ರಥಮಂ ಯಾತವೇಸಜೂಃ ಸುಸರ್ತ್ವಾರಸಯಾಶ್ವೇತ್ಯಾತ್ಯಾ ॥ ತ್ವಂ ಸಿಂಧೋಕುಭಯಾಗೋಮತೀಂಕ್ರುಮುಂಮೇಹತ್ನ್ವಾಸರಥಂಯಾಭಿರೀಯಸೇ ॥ ಋಜೀತ್ಯೇನೀರುಶತೀಮಹಿತ್ವಾಪರಿಜ್ರಯಾಂಸಿ ಭರತೇರಜಾಂಸಿ ॥

"**ಮಹೀದ್ಯೌ**" ಎಂಬ ಮಂತ್ರದಿಂದ ಭೂಮಿಯನ್ನು ಮುಟ್ಟಿ, ಮುಟ್ಟಿದ ಸ್ಥಳದ ದಕ್ಷಿಣೋತ್ತರ ಭಾಗಗಳಲ್ಲಿ ಹಾಗೆಯೇ ಸ್ಪರ್ಶಿಸಿ, "**ಓಷಧಯಃ**" ಎಂಬ ಮಂತ್ರದಿಂದ ಕುಡುತೆ ಅಕ್ಕಿಯ ಮೂರು ರಾಶಿಗಳನ್ನು ಮೊದಲಿನ ಕ್ರಮದಂತೆ ಮಾಡಿ ಅವುಗಳ ಮೇಲೆ "**ಆ ಕಲಶೇಷು**" ಎಂಬ ಮಂತ್ರದಿಂದ ಹೊಸತಾದ, ಒಡೆಯದ ಮೂರು ಕಲಶಗಳನ್ನು ಸ್ಥಾಪಿಸಬೇಕು.

"**ಪ್ರಸುವ ಆಪಃ**" ಎಂಬಲ್ಲಿಂದ "**...ಅಶಿಮಿದಾ ಭವಂತು**" ಎಂಬಲ್ಲಿ ವರೆಗೆ ಮಂತ್ರಗಳನ್ನು ಹೇಳಿ ಕಲಶಗಳಲ್ಲಿ ನೀರನ್ನು ತುಂಬಿಸಬೇಕು. "**ಗಂಧದ್ವಾರಾಂ**" "**ಯಾ ಓಷಧೀ**" "**ಓಷಧಯಃ ಸಂ.**" ಎಂಬ ಮಂತ್ರಗಳಿಂದ ಕ್ರಮವಾಗಿ ಗಂಧ, ಓಷಧಿಗಳು ಮತ್ತು ಅಕ್ಷತೆಗಳನ್ನು ಹಾಕಬೇಕು.

Scanned by CamScanner

Scanned with CamScanner

ಅದಬ್ಧಾಸಿಂಧುರಪಸಾಮಪಸ್ತಮಾಶ್ವಾನಚಿತ್ರಾವಪುಷೀದರ್ಶತಾ ॥ ಸ್ವಶ್ವಾಸಿಂಧುಃ ಸುರಥಾಃ ಸುವಾಸಾಃ ಹಿರಣ್ಯಯಿಾಸುಕೃತಾವಾಜಿನೀವತೀ ॥ ಊರ್ಣಾವತೀಯುವತಿಃ ಸೀಲ ಮಾವತ್ಯುತಾಧಿವಸ್ತೇಸುಭಗಾಮಧುವೃಧಂ ॥ ಸುಖಂ ರಥಂ ಯುಯುಜೇ ಸಿಂಧುರಶ್ವಿನಂ ತೇನವಾಜಂ ಸನಿಷದಸ್ಮಿನ್ನಾಜೌ ॥ ಮಹಾನ್ಹ್ಯಸ್ಯಮಹಿಮಾಪನಸ್ಯತೇಽ ದಬ್ಧಸ್ಯಸ್ವಯಶಸೋವಿರಪ್ಶಿನಃ ॥

ಯಾಃ ಪ್ರವತ ಇತ್ಯಸ್ಯ ವಾಸಿಷ್ಠೋ ನದ್ಯಃ ಶಕ್ವರೀ ॥ ಅಭಿಮಂತ್ರಣೇ ವಿನಿಯೋಗಃ ॥ ಓಂ ಯಾಃ ಪ್ರವತೋನಿವತಉದ್ವತಉದನ್ವತೀರನುದಕಾಶ್ಚಯಾಃ ॥ ತಾ ಅಸ್ಮಭ್ಯಂ ಪಯಸಾಪಿನ್ವಮಾನಾಃ ಶಿವಾದೇವೀರಶಿಪದಾಭವಂತುಸರ್ವಾನದ್ಯೋ ಅಶಿಮಿದಾಭವಂತು ॥ ಇತ್ಯುದಕೇನಾಪೂರ್ಯ ॥ ಗಂಧದ್ವಾರಾಮಿತಿ ತ್ರಿಷ್ಟಪಿ ಗಂಧಂ ಪ್ರಕ್ಷಿಪ್ಯ ॥ ಓಂ ಯಾ ಓಷಧೀಃ ಪೂರ್ವಾಜಾತಾದೇವೇಭ್ಯಸ್ತ್ರಿಯುಗಂ ಪುರಾ ॥ ಮನ್ನೈನುಬಭ್ರೂಣಾಮಹಂಶತಂಧಾಮಾನಿಸಪ್ತಚ ॥ ಇತಿ ಸರ್ವೌ-ಷಧೀಃ ॥ ಓಷಧಯಃ ಸಂ. ಇತಿ ಯವಾನ್ ಕ್ಷಿಪೇತ್ ॥

ತತೋ ಮಧ್ಯಕುಂಭೇ ಯವವ್ರೀಹಿತಿಲಮಾಷಕಂಗುಶ್ಯಾಮಾಕಮು-ದ್ಗಾನ್ ಕ್ಷಿಪ್ತ್ವಾ ॥ ಗಾಯತ್ರ್ಯೋದುಂಬರಕುಶದೂರ್ವಾರಕ್ತೋತ್ಪಲಚಂಪಕ-ಬಿಲ್ವವಿಷ್ಣುಕ್ರಾಂತಾತುಲಸೀಬರ್ಹಿಷಶಂಖಪುಷ್ಪೀಶತಾವರ್ಯಶ್ವಗಂಧಾನಿರ್ಗುಂ-ಡೀರಕ್ತಪೀತಸರ್ಷಪಾಪಾಮಾರ್ಗಪಲಾಶಪನಸಜೀವಕಪ್ರಿಯಂಗುಗೋಧೂಮ-ವ್ರೀಹ್ಯಶ್ವತ್ಥದಧಿದುಗ್ಧಘೃತಪದ್ಮಪತ್ರನೀಲೋತ್ಪಲಸಿತರಕ್ತಪೀತಕುರಂಟಕಗುಂಜಾವಚಾ-ಭದ್ರಮುಸ್ತಕಾಖ್ಯಾನಿ ದ್ವಾತ್ರಿಂಶದೌಷಧಾನಿ ಸರ್ವಾಣಿ ಯಥಾಸಂಭವಂ ವಾ ಕ್ಷಿಪೇತ್ ॥

ಬಳಿಕ ಮಧ್ಯದ ಕಲಶದಲ್ಲಿ ಯವ, ಅಕ್ಕಿ, ಎಳ್ಳು, ಉದ್ದು, ಕಂಗು, ಶ್ಯಾಮಾಕ, ಪಚ್ಚೆಹೆಸರುಗಳನ್ನು ಹಾಕಿ ಗಾಯತ್ರೀ ಮಂತ್ರದಿಂದ ಔದುಂಬರ, ದರ್ಭೆ, ದೂರ್ವೆ, ಕೆಂಪುಕಮಲ, ಚಂಪಕ, ಬಿಲ್ವ, ವಿಷ್ಣುಕ್ರಾಂತ, ತುಲಸೀ, ಬರ್ಹಿ, ಬಿಳಿಯ ವಿಷ್ಣುಕ್ರಾಂತ, ಶತಾವರೀ, ಅಶ್ವಗಂಧಾ, ನಿರ್ಗುಂಡೀ, ಕೆಂಪು ಹಳದಿ ಸಾಸಿವೆ, ಅಪಾಮಾರ್ಗ, ಪಲಾಶ, ಹಲಸು, ಜೀವಕ, ಪ್ರಿಯಂಗು,

Scanned by CamScanner
Scanned with CamScanner

ತತಸ್ತ್ರಿಷು ಕಲಶೇಷು ಕಾಂಡಾತ್ಕಾಂಡಾದಿತಿ ದೂರ್ವಾಃ । ಅಶ್ವತ್ಥೇವೋ ಇತಿ ಅಶ್ವತ್ಥೋದುಂಬರಪ್ಲಕ್ಷಚೂತನ್ಯಗ್ರೋಧಪಂಚಪಲ್ಲವಾನ್ ॥ ಸ್ಯೋನಾ-ಪೃಥಿವೀತಿ ಗಜಾಶ್ವಸ್ಥಾನರಥ್ಯಾವಲ್ಮೀಕಸಂಗಮಹ್ರದಗೋಷ್ಠಸ್ಥಾ ಮೃದಃ ಕ್ಷಿಪ್ತ್ವಾ ॥ ಯಾಃ ಫಲಿನೀರಿತಿ ಪೂಗೀಫಲಾನಿ ॥ ಸಹಿರತ್ನಾನೀತಿ ಕನಕಕುಲಿಶನೀಲಪದ್ಮರಾಗ-ಮೌಕ್ತಿಕಾನಿ ಪಂಚರತ್ನಾನಿ ॥ ಹಿರಣ್ಯರೂಪ ಇತಿ ಹಿರಣ್ಯಂ ಚ ಕ್ಷಿಪೇತ್ ॥ ಯುವಾ ಸುವಾಸಾ ಇತಿ ಸೂತ್ರೇಣ ವಾಸಸಾ ಚ ಕಲಶಕಂಠಾನ್ವೇಷ್ಟಯಿತ್ವಾ ಗಂಧಾಕ್ಷತಪುಷ್ಪಮಾಲಾಭಿಃ ಕಲಶಾನ್ ಭೂಷಯೇತ್ ॥

ತತಃ ಕಲಶತ್ರಯೋಪರಿ ತೇನೈವ ಕ್ರಮೇಣ ಸೌವರ್ಣಂ ರಾಜತಂ ಕಾಂಸ್ಯಮಯಂ ವೈಣವಂ ಮೃಣ್ಮಯಂ ವಾ ಯವಾದಿಪೂರಿತಂ ಪಾತ್ರತ್ರಯಂ ಪೂರ್ಣಾದರ್ವೀತಿ ನಿಧಾಯ ತದುಪರಿ ಶ್ವೇತಂ ವಸ್ತ್ರತ್ರಯಂ ನ್ಯಸ್ಯ ತತ್ರ ಚಂದನಾದಿನಾ ಅಷ್ಟದಲಾನಿ ಕುರ್ಯಾತ್ ॥

ಭುವನೇಶ್ವರ್ಯಾದಿಪ್ರತಿಮಾತ್ರಯಸ್ಯ ಆದಾವಗ್ನ್ಯುತ್ತಾರಣಂ ಕೃತ್ವಾ ಯಥಾ ಕ್ರಮಂ ಸ್ಥಾಪನಂ ಕುರ್ಯಾತ್ ॥ ತತ್ರ ಮಧ್ಯಮೇ ॥ ಗಾಯತ್ರ್ಯಾ ವಿಶ್ವಾಮಿತ್ರೋ ಭುವನೇಶ್ವರೀ ಗಾಯತ್ರೀ ಭುವನೇಶ್ವರ್ಯಾವಾಹನಾದೌ ವಿನಿಯೋಗಃ ॥ ಓಂ

ಗೋಧಿ, ಭತ್ತ, ಅಶ್ವತ್ಥ, ಮೊಸರು, ಹಾಲು, ತುಪ್ಪ, ಪದ್ಮಪತ್ರ, ನೀಲಕಮಲ, ಬಿಳಿ ಕೆಂಪು ಹಳದಿ ಕುರಂಜಕ ಗುಂಜಾ, ವೇಬಂಡ, ಭದ್ರಮುಸ್ತಕಾ -ಎಂಬ ಮೂವತ್ತೆರಡು ಔಷಧಗಳನ್ನು ಅಥವಾ ದೊರಕಿದಷ್ಟನ್ನು ಹಾಕಬೇಕು. ಆಮೇಲೆ ಮೂರೂ ಕಲಶಗಳಲ್ಲಿ **"ಕಾಂಡಾತ್ಕಾಂಡಾ"** ದೂರ್ವೆ, **"ಅಶ್ವತ್ಥೇವೋ"** ಅಶ್ವತ್ಥ, ಔದುಂಬರ, ಪಿಂಪರೀ, ಮಾವು, ಆಲ - ಈ ಐದು ಪಲ್ಲವ, **"ಸ್ಯೋನಾಪೃಥಿವೀ"** ಆನೆ, ಕುದುರೆ ಇರುವ ಸ್ಥಳ, ಹುತ್ತ, ಸಂಗಮ, ಮಡು, ಹಟ್ಟಿಗಳಿಂದ ತೆಗೆದ ಮಣ್ಣು, **"ಯಾಃಫಲಿನೀ"** ಅಡಿಕೆ, **"ಸಹಿರತ್ನಾನಿ"** ಬಂಗಾರ, ವಜ್ರ, ನೀಲ, ಪದ್ಮರಾಗ, ಮುತ್ತು, **"ಹಿರಣ್ಯರೂಪ"** ಚಿನ್ನ, **"ಯುವಾ ಸುವಾಸಾ"** ಕಲಶಗಳ ಕಂಠಕ್ಕೆ ನೂಲು ಅಥವಾ ಬಟ್ಟೆ, ಇವುಗಳನ್ನು ಹಾಕಿ ಅಲಂಕರಿಸಬೇಕು. ಮೂರು ಕಲಶಗಳ ಮೇಲೆ ಸ್ಥಾಪಿಸಿದ ಕ್ರಮದಂತೆ, ಚಿನ್ನ, ಬೆಳ್ಳಿ ಮತ್ತು ಕಂಚಿನ; ತಾಮ್ರ, ಬೆತ್ತ ಅಥವಾ ಮಣ್ಣಿನ ಮೂರು ಪಾತ್ರೆಗಳನ್ನು ಅಕ್ಕಿ ಹಾಕಿ ಇಡಬೇಕು. ಅವುಗಳ ಮೇಲೆ ವಸ್ತ್ರ ಹೊದಿಸಿ ಗಂಧಾದಿಗಳಿಂದ ಅಷ್ಟದಳವನ್ನು ಮಾಡಬೇಕು.

Scanned by CamScanner

Scanned with CamScanner

ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ॥ ಧಿಯೋ ಯೋ ನಃ ಪ್ರಚೋದಯಾತ್ ॥ ಭುವನೇಶ್ವರೀಮಾವಾಹಯಾಮೀತಿ ಯಥಾಶಕ್ತಿ ಸುವರ್ಣ-ನಿರ್ಮಿತಾಂ ಭುವನೇಶ್ವರೀಪ್ರತಿಮಾಂ ಸ್ಥಾಪಯೇತ್ ॥ ತದ್ದಕ್ಷಿಣಕುಂಭೋಪರಿ ವಸ್ತ್ರೇ ॥ ಇಂದ್ರಾಣೀಮಾಸ್ವಿತ್ಯಸ್ಯ ವೃಷಾಕಪಿರಿಂದ್ರಾಣೀ ಪಂಕ್ತಿಃ ಇಂದ್ರಾಣ್ಯಾವಾಹನಾದೌ ವಿನಿಯೋಗಃ ॥ ಓಂ ಇಂದ್ರಾಣೀಮಾಸುನಾರಿಷುಸುಭಗಾಮಹಮಶ್ರವಂ ॥ ನಹ್ಯಸ್ಯಾ ಅಪರಂಚನಜರಸಾಮರತೇಪತಿರ್ವಿಶ್ವಸ್ಮಾದಿಂದ್ರ ಉತ್ತರಃ ॥ ಇಂದ್ರಾಣೀಮಾವಾಹ-ಯಾಮೀತಿ ತಥೈವ ಸೌವರ್ಣೀಂ ಇಂದ್ರಾಣೀಪ್ರತಿಮಾಂ ಸಂಸ್ಥಾಪಯೇತ್ ॥ ಉತ್ತರಕಲಶೋಪರಿ ॥ ಇಂದ್ರ ತ್ವಾ ವಿಶ್ವಾಮಿತ್ರ ಇಂದ್ರೋ ಗಾಯತ್ರೀ ॥ ಇಂದ್ರಾವಾಹನೇ ವಿನಿಯೋಗಃ ॥ ಓಂ ಇಂದ್ರತ್ವಾವೃಷಭಂ ವಯಂ ಸುತೇ ಸೋಮೇ ಹವಾಮಹೇ ॥ ಸಪಾಹಿಮಧ್ವೋ ಅಂಧಸಃ ॥ ಇಂದ್ರಮಾವಾಹಯಾಮೀತಿ ಸೌವರ್ಣೀಮಿಂದ್ರ ಪ್ರತಿಮಾಂ ಸಂಸ್ಥಾಪಯೇತ್ ॥ ತತ ಉಕ್ತಮಂತ್ರೈರುಕ್ತಕ್ರಮೇಣ ದೇವತಾತ್ರಯಸ್ಯ ಕಾಂಡಾನುಸಮಯೇನ ಪದಾರ್ಥಾನುಸಮಯೇನ ವಾ ಷೋಡಶೋಪಚಾರೈಃ ಪೂಜಾಂ ಕುರ್ಯಾತ್ ॥

ತತೋ ಮಧ್ಯಕುಂಭೇ ಆಚಾರ್ಯೋಽಷ್ಟಸಹಸ್ರಮಷ್ಟಶತಕಂ ವಾ ಗಾಯತ್ರೀ ಜಪ್ತ್ವಾ ಶ್ರೀಸೂಕ್ತಂ ಜಪೇತ್ ॥ ತತ ಏಕಃ ಋತ್ವಿಕ್ ದಕ್ಷಿಣಕುಂಭೇ ರುದ್ರಸೂಕ್ತಾನಿ ಜಪೇತ್ ॥ ಯಥಾ ॥

ಭುವನೇಶ್ವರೀ, ಇಂದ್ರಾಣೀ ಮತ್ತು ಇಂದ್ರ ಈ ಮೂರು ಸುವರ್ಣಪ್ರತಿಮೆಗಳಿಗೆ ಅಗ್ನ್ಯುತ್ತಾರಣ ಹಾಗೂ ಪ್ರಾಣಪ್ರತಿಷ್ಠೆಯನ್ನು (ಗ್ರಹಯಜ್ಞದಲ್ಲಿ ಹೇಳಿದ ಕ್ರಮದಂತೆ) ಮಾಡಿ ಮಧ್ಯದಲ್ಲಿರುವ ಕಲಶದ ಮೇಲೆ ಗಾಯತ್ರೀಮಂತ್ರದಿಂದ ಭುವನೇಶ್ವರಿಯನ್ನೂ **"ಇಂದ್ರಾಣೀಮಾಸು"** ಎಂಬ ಮಂತ್ರದಿಂದ ದಕ್ಷಿಣ ಕಲಶದ ಮೇಲೆ ಇಂದ್ರಾಣಿಯನ್ನೂ, **"ಇಂದ್ರ ತ್ವಾ ವೃಷಭಂ"** ಎಂಬ ಮಂತ್ರದಿಂದ ಉತ್ತರ ಕಲಶದ ಮೇಲೆ ಇಂದ್ರನನ್ನೂ ಆವಾಹಿಸಬೇಕು. ಆಮೇಲೆ ಮೇಲೆ ಹೇಳಿದ ಮೂರು ದೇವತೆಗಳ ಬೇರೆ ಬೇರೆ ಮೂರು ಮಂತ್ರಗಳಿಂದ ಸ್ಥಾಪನೆಮಾಡಿದ ಕ್ರಮದಂತೆ ಒಂದೊಂದು ದೇವತೆಗೆ

Scanned by CamScanner

ಕದ್ರುದ್ರಾಯೇತಿ ನವರ್ಚಸ್ಯ ಸೂಕ್ತಸ್ಯ ಘೌರಃ ಕಣ್ವೋ ರುದ್ರೋ ಗಾಯತ್ರೀ ಅಂತ್ಯಾನುಷ್ಟುಪ್ ತೃತೀಯಾಮೈತ್ರಾವರುಣೀ ಜಪೇ ವಿನಿಯೋಗಃ ॥ ಓಂ ಕದ್ರುದ್ರಾಯಪ್ರಚೇತಸೇಮೀಳ್ಹುಷ್ಟಮಾಯತವ್ಯಸೇ ॥ ವೋಚೇಮಶಂತ ಮಂಹೃದೇ ॥ ಯಥಾನೋ ಅದಿತಿಃ ಕರತ್ಪಶ್ವೇನೃಭ್ಯೋಯಥಾಗವೇ ॥ ಯಥಾ-ತೋಕಾಯರುದ್ರಿಯಂ ॥ ಯಥಾ ನೋ ಮಿತ್ರೋವರುಣೋ ಯಥಾರುದ್ರಶ್ಚಿ-ಕೇತತಿ ॥ ಯಥಾವಿಶ್ವೇಸಜೋಷಸಃ ॥ ಗಾಥಪತಿಂ ಮೇಧಪತಿಂ ರುದ್ರಂ ಜಲಾಷ ಬೇಷಜಂ ॥ ತಚ್ಛಂ ಯೋಃ ಸುಮ್ನಮೀಮಹೇ ॥ ಯಃ ಶುಕ್ರ ಇವ ಸೂರ್ಯೋಹಿರಣ್ಯಮಿವರೋಚತೇ ॥ ಶ್ರೇಷ್ಠೋ ದೇವಾನಾಂ ವಸುಃ ॥ ೧ ॥ ಶಂ ನಃ ಕರತ್ಯರ್ವತೇಸುಗಂ ಮೇಷಾಯಮೇಷ್ಯೇ ॥ ನೃಭ್ಯೋನಾರಿಭ್ಯೋಗವೇ ॥ ಅಸ್ಮೇಸೋಮಶ್ರಿಯಮಧಿನಿಧೇಹಿಶತಸ್ಯನೃಣಾಂ ॥ ಮಹಿಶ್ರವಸ್ತುವಿನೃಮ್ಣಂ ॥ ಮಾನಃ ಸೋಮಪರಿಬಾಧೋಮಾರಾತಯೋಜುಹುರಂತ ॥ ಆನ ಇಂದೋ ವಾಜೇಭಜ ॥ ಯಾಸ್ತೇ ಪ್ರಜಾ ಅಮೃತಸ್ಯ ಪರಸ್ಮಿನ್ ಧಾಮನ್ನೃತಸ್ಯ ॥ ಮೂರ್ಧಾನಾಭಾಸೋಮವೇನ ಆಭೂಷಂತೀ ಸೋಮವೇದಃ ॥ ೨ ॥

ಇಮಾರುದ್ರಾಯತವಸ ಇತ್ಯೇಕಾದಶರ್ಚಸ್ಯ ಸೂಕ್ತಸ್ಯ ಕುತ್ಸೋ ರುದ್ರ ಆದ್ಯಾನವಜಗತ್ಯೋಂತೇ ದ್ವೇ ತ್ರಿಷ್ಟುಭೌ ಜಪೇ ವಿನಿಯೋಗಃ ॥ ಓಂ ಇಮಾ-ರುದ್ರಾಯ...... ॥ ಆತೇ ಪಿತರಿತಿ ಪಂಚದಶರ್ಚಸ್ಯ ಸೂಕ್ತಸ್ಯ ಗೃತ್ಸಮದೋ ರುದ್ರಸ್ತ್ರಿಷ್ಟುಪ್ ಜಪೇ ವಿನಿಯೋಗಃ ॥ ಓಂ ಆತೇಪಿತ... ॥ ಇಮಾರುದ್ರಾಯ

ಪ್ರತ್ಯೇಕ ಪ್ರತ್ಯೇಕವಾಗಿ, ಸಂಗ್ರಹಿಸಿದ ಪೂಜಾದ್ರವ್ಯಗಳಿಗೆ ಅನುಸಾರವಾಗಿ ಷೋಡಶೋಪಚಾರ ಪೂಜೆಯನ್ನು ಮಾಡಬೇಕು.

ಆಮೇಲೆ ಆಚಾರ್ಯನು ಮಧ್ಯದ ಕಲಶದಲ್ಲಿ ಎಂಟುಸಾವಿರ ಅಥವಾ ಎಂಟು ನೂರು ಗಾಯತ್ರೀಜಪಮಾಡಿ ಶ್ರೀಸೂಕ್ತವನ್ನು ಜಪಿಸಬೇಕು. ಬಳಿಕ **"ಕದ್ರುದ್ರಾಯ"** **"ಇಮಾರುದ್ರಾಯ"** **"ಆತೇಪಿತರಿ"** **"ಇಮಾರುದ್ರಾಯ ಸ್ಥಿರಧನ್ವನೇ"** ಮುಂತಾದ ಸೂಕ್ತಗಳನ್ನು ಜಪಿಸಬೇಕು. [ಇಲ್ಲಿ ಪೂರ್ತಿಯಾಗಿ ಕೊಡದಿರುವ ಸೂಕ್ತಗಳನ್ನು ಬೇರೆಡೆಯಲ್ಲಿ ಕೊಡಲಾಗಿದೆ.]

Scanned by CamScanner

Scanned with CamScanner

ಸ್ಥಿರಧನ್ವನ ಇತಿ ಚತಸೃಣಾಂ ವಸಿಷ್ಠೋರುದ್ರಸ್ತಿಸ್ರೋ ಜಗತ್ಯೋಂತ್ಯಾ ತ್ರಿಷ್ಟುಪ್ ॥ ಜಪೇ ವಿನಿಯೋಗಃ ॥ ಓಂ ಇಮಾರುದ್ರಾಯಸ್ಥಿರ ಧನ್ವನೇಗಿರಃ-ಕ್ಷಿಪ್ರೇಷವೇದೇವಾಯಸ್ವಧಾಮ್ನೇ ॥ ಅಷಾಹ್ಲಾಯಸಹಮಾನಾಯವೇಧಸೇತಿಗ್ಮಾಯು-ಧಾಯಭರತಾಶೃಣೋತುನಃ ॥ ಸಹಿಕ್ಷಯೇಣ ಕ್ಷಮ್ಯಸ್ಯಜನ್ಮನಃ ಸಾಮ್ರಾಜ್ಯೇನದಿ-ವ್ಯಸ್ಯಚೇತತಿ ॥ ಅವಂನವಂತೀರುಪನೋದುರಶ್ಚರಾನಮೀವೋರುದ್ರಜಾಸುನೋ-ಭವ ॥ ಯಾತೇದಿದ್ಯುದವಸೃಷ್ಟಾದಿವಸ್ಪರಿಕ್ಷ್ಮಯಾಚರತಿಪರಿಸಾವೃಣಕ್ತುನಃ ॥

ಸಹಸ್ರಂತೇಸ್ವಪಿವಾತಭೇಷಜಾಮಾನಸ್ತೋಕೇಷುತನಯೇಷು ರೀರಿಷಃ ॥ ಮಾನೋವಧೀರುದ್ರಮಾಪರಾದಾಮಾತೇ ಭೂಮಪ್ರಸಿತೌ ಹೀಳಿತಸ್ಯ ॥ ಆ ನೋ ಭಜಬರ್ಹಿಷಿ ಜೀವಶಂಸೇ ಯೂಯಂ ಪಾತಸ್ವಸ್ತಿಭಿಃ ಸದಾನಃ ॥ ೧ ॥ ಆವೋ ರಾಜಾನಂ ವಾಮದೇವೋ ರುದ್ರಸ್ತ್ರಿಷ್ಟುಪ್ ಜಪೇ ವಿನಿಯೋಗಃ ॥ ಓಂ ಆವೋರಾಜಾನಮಧ್ವರಸ್ಯರುದ್ರಂ ಹೋತಾರಂ ಸತ್ಯಜಂರೋದಸ್ಯೋಃ ॥ ಅಗ್ನಿಂ ಪುರಾತನಯಿತ್ನೋರಚಿತ್ತಾದ್ಧಿರಣ್ಯರೂಪಮುವಸೇಕೃಣುಧ್ವಂ ॥ ತಮುಷ್ಟು-ಹಿಭೌಮೋತ್ರೀರುದ್ರಸ್ತ್ರಿಷ್ಟುಪ್ ॥ ಜಪೇ ವಿನಿಯೋಗಃ ॥ ಓಂ ತಮುಷ್ಟುಹಿಯಃ ಸ್ವಿಷುಃ ಸುಧನ್ವಾಯೋವಿಶ್ವಸ್ಯಕ್ಷಯತಿಭೇಷಜಸ್ಯ ॥ ಯಕ್ಷ್ವಾಮಹೇಸೌಮನ-ಸಾಯ ರುದ್ರಂ ನಮೋಭಿರ್ದೇವಮಸುರಂ ದುವಸ್ಯ ॥ ಭುವನಸ್ಯಪಿತರಂ

ಇನ್ನೊಬ್ಬ ಋತ್ವಿಜನು ಉತ್ತರದಲ್ಲಿರುವ ಕಲಶದಲ್ಲಿ ಹನ್ನೊಂದು ಆವೃತ್ತಿ ರುದ್ರಾಧ್ಯಾಯವನ್ನು ಜಪಿಸಬೇಕು. **"ನಮಕಾನುವಾಕ"** **"ಶಂ ನ ಇಂದ್ರಾಗ್ನೀ ಸೂಕ್ತ"**ವನ್ನೂ ಜಪಿಸಬೇಕು. ನಂತರ ಕಲಶಗಳ ಪಶ್ಚಿಮಭಾಗದಲ್ಲಿ ಸ್ಥಾಲೀಪಾಕದಲ್ಲಿ ಹೇಳಿದಂತೆ ಸ್ಥಂಡಿಲ ಸಂಸ್ಕಾರಾದಿಗಳನ್ನು ಮಾಡಿ **"ವರದ"** ಅಗ್ನಿಯನ್ನು ಪ್ರತಿಷ್ಠಾಪಿಸಬೇಕು. ಅದರ ಈಶಾನ್ಯದಿಕ್ಕಿನಲ್ಲಿ **'ಗೃಹಯಜ್ಞ'**ದಲ್ಲಿ ಹೇಳಿದಂತೆ ಆಯಾ ಮಂತ್ರಗಳಿಂದ ನವಗ್ರಹಗಳನ್ನು ಆವಾಹಿಸಿ, ಷೋಡಶೋಪಚಾರಗಳಿಂದ ಪೂಜಿಸಿ, ಅದರ ಈಶಾನ್ಯದಲ್ಲಿ ಕಲಶವನ್ನಿಟ್ಟು ಅದರಲ್ಲಿ ವರುಣನನ್ನು ಆವಾಹಿಸಿ ಅಗ್ನಿಯ ಬಳಿಗೆ ಬಂದು ಅನ್ವಾಧಾನವನ್ನು ಈ ಪ್ರಕಾರ ಮಾಡಬೇಕು.

Scanned by CamScanner

Scanned with CamScanner

ಮೃಜಿಶ್ವಾರುದ್ರಸ್ತ್ರಿಷ್ಟುಪ್ ॥ ಜಪೇ ವಿನಿಯೋಗಃ ॥ ಓಂ ಭುವನಸ್ಯಪಿತರಂ ಗೀರ್ಭಿರಾಭೀರುದ್ರಂ ದಿವಾವರ್ಧಯಾರುದ್ರಮಕ್ತೌ ॥ ಬೃಹಂತಮೃಷ್ವಮಜರಂ ಸುಷುಮ್ನಮೃಧಗ್ಘುವೇಮಕವಿನೇಷಿತಾಸಃ ॥ ತ್ರ್ಯಂಬಕಂ ಮೈತ್ರಾವರುಣಿರ್ವ-ಸಿಷ್ಠೋರುದ್ರೋಽನುಷ್ಟುಪ್ ॥ ಜಪೇ ವಿನಿಯೋಗಃ ॥ ಓಂ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ ॥ ಉರ್ವಾರುಕಮಿವಬಂಧನಾನ್ ಮೃತ್ಯೋರ್ಮುಕ್ಷೀಯಮಾಮೃತಾತ್ ॥

ಅಥನ್ಯುಋತ್ವಿಗುತ್ತರಕುಂಭೇ ಏಕಾದಶಾವೃತ್ತಿಭೀ ರುದ್ರಂ ನ್ಯಾಸಸ್ಪರ್ಶಾದಿ-ಸ್ಮರಣಪೂರ್ವಕಂ ಜಪ್ತ್ವಾ ॥ ನಮಕಾನುವಾಕಾನಾಮಗ್ನೀರುದ್ರೋ ಮಹಾ-ವಿರಾಟ್ ॥ ಜಪೇ ವಿನಿಯೋಗಃ ॥ ಶಂ ನ ಇಂದ್ರಾಗ್ನೀ ಇತಿ ಸೂಕ್ತಂ ಜಪೇತ್ ॥ ಶಂ ನ ಇಂದ್ರಾಗ್ನೀತಿ ಪಂಚದಶರ್ಚಸ್ಯ ಸೂಕ್ತಸ್ಯ ವಸಿಷ್ಠೋ ವಿಶ್ವೇದೇವಾಸ್ತ್ರಿಷ್ಟುಪ್ ॥ ಜಪೇ ವಿನಿಯೋಗಃ ॥

ತತಃ ಕುಂಭಪಶ್ಚಿಮದೇಶೇ ಸ್ಥಂಡಿಲೇ ವರದನಾಮಾನಮಗ್ನಿಂ ಪ್ರತಿ-ಷ್ಠಾಪ್ಯ ತದೀಶಾನ್ಯಾಂ ವೇದ್ಯಾದೌ ನವಗ್ರಹಾದೀನ್ ತತ್ತನ್ಮಂತ್ರೈರಾವಾಹ್ಯ ಷೋಡಶೋಪಚಾರೈಃ ಸಂಪೂಜ್ಯ ತದೀಶಾನ್ಯಾಂ ಪ್ರಾಗ್ವತ್ ಕುಂಭಂ ಸಂಸ್ಥಾಪ್ಯ ತತ್ರ ವರುಣಮಾವಾಹ್ಯ ಅಗ್ನಿಸಮೀಪಮೇತ್ಯಾನ್ವಾಧಾನಂ ಕುರ್ಯಾತ್ ॥ ತದ್ಯಥಾ ॥

ಕ್ರಿಯಾಮಾಣೇ ಸಗ್ರಹಮಖದುಷ್ಟರಜೋದರ್ಶನಶಾಂತಿಹೋಮೇ ದೇವತಾ-ಪರಿಗ್ರಹಾರ್ಥಮನ್ವಾಧಾನಂ ಕರಿಷ್ಯೇ ॥ ಅಸ್ಮಿನ್ನನ್ವಾಹಿತೇಗ್ನಾವಿತ್ಯಾದಿ ಚಕ್ಷುಷೀ ಆಜ್ಯೇನೇತ್ಯಂತಮುಕ್ತ್ವಾ ನವಗ್ರಹಾನ್ ಪ್ರತ್ಯೇಕಮಮುಕಸಂಖ್ಯಾಭಿಃ ಸಮಿತ್ತಿ-ಲಾಜ್ಯಾಹುತಿಭಿಃ ॥ ಅಧಿದೇವತಾ ಪ್ರತ್ಯಧಿದೇವತಾಶ್ಚ ಪ್ರತ್ಯೇಕಮಮುಕ-

---

ಅನ್ವಾಧಾನ:- "ಕ್ರಿಯಮಾಣೇ... ಅನ್ವಾಧಾನಂ ಕರಿಷ್ಯೇ" ಎಂದು ಸಂಕಲ್ಪಿಸಿ "ಅಸ್ಮಿನ್ನನ್ವಾಹಿತೇಗ್ನೌ" ಎಂಬಲ್ಲಿಂದ "ಚಕ್ಷುಷೀ ಆಜ್ಯೇನ" ಎಂಬಲ್ಲಿ ವರೆಗೆ ಸ್ಥಾಲೀಪಾಕದಲ್ಲಿ ಹೇಳಿದಂತೆ ಉಚ್ಚರಿಸಿ; ನವಗ್ರಹಗಳಲ್ಲಿ ಪ್ರತಿಯೊಂದಕ್ಕೂ "ಅಮುಕ" ಎಂಬಲ್ಲಿ ೧೦೮, ೨೮, ಅಥವಾ ೮ ಸಂಖ್ಯೆಯ ಸಮಿಧೆ ಎಳ್ಳು ಮತ್ತು ತುಪ್ಪದ ಆಹುತಿಗಳು ಎಂದು ಹೇಳಿಕೊಳ್ಳಬೇಕು. ಅಂತೆಯೇ ಅಧಿದೇವತೆ ಪ್ರತ್ಯಧಿದೇವತೆಗಳಿಗೆ 8 ಅಥವಾ 4 ಸಮಿಧೆ, ಎಳ್ಳು ಮತ್ತು ತುಪ್ಪದ

Scanned by CamScanner

ಸಂಖ್ಯಾಭಿಃ ಸಮಿತ್ತಿಲಾಜ್ಯಾಹುತಿಭಿಃ ॥ ಕ್ರತುಸಾದ್ಗುಣ್ಯದೇವತಾಃ ಕ್ರತುಸಂರಕ್ಷಕ-ದೇವತಾಶ್ಚ ಅಮುಕಸಂಖ್ಯಾತಾಭಿಃ ಸಮಿತ್ತಿಲಾಜ್ಯಾಹುತಿಭಿಃ ॥ ಭುವನೇ-ಶ್ವರೀಂ ಪ್ರತಿದ್ರವ್ಯಂ ಅಮುಕಸಂಖ್ಯಾಭಿಃ ದೂರ್ವಾತಿಲ ಮಿಶ್ರ ಗೋಧೂಮ-ಪಾಯಸಾಜ್ಯಾಹುತಿಭಿರಿಂದ್ರಾಣೀಮಿಂದ್ರಂ ಚ ಪ್ರತ್ಯೇಕಂ ಅಮುಕ ಸಂಖ್ಯಾಭಿ-ರ್ದೂರ್ವಾತಿಲಮಿಶ್ರಗೋಧೂಮಪಾಯಸಾಜ್ಯಾಹುತಿಭಿಃ ॥ ಶೇಷೇಣ ಸ್ವಿಷ್ಟಕೃತ-ಮಿತ್ಯಾದಿ ಸದ್ಯೋ ಯಕ್ಷ್ಯ ಇತ್ಯುಕ್ತ್ವಾ ॥ ತತಃ ಪರಿಸಮೂಹನಪರಿಸ್ತರಣಾದಿ ಪೂರ್ಣಪಾತ್ರನಿಧಾನಾಂತಂ ಕೃತ್ವಾ ಭುವನೇಶ್ವರೀಂದ್ರಾಣೀಂದ್ರೇಭ್ಯೋಮುಷ್ಟೀನ್ನಿರುಪ್ಯ ಆಹುತಿಬಹುತ್ವಾಚ್ಚಾನಿರುಪ್ಯ ವಾ ಗೋದುಗ್ಧೇ ಪಾಯಸಂ ಶ್ರಪಯಿತ್ವಾಜ್ಯಸಂಸ್ಕಾರಾ-ದ್ಯಾಜ್ಯಭಾಗಾಂತಂ ಕುರ್ಯಾತ್ ॥

ತತೋ ಯಜಮಾನೋ ದಕ್ಷಿಣತ ಉಪವಿಶ್ಯ ಅಂಗಪ್ರಧಾನದೇವತಾ ಉದ್ದಿಶ್ಯ ಏತಾಭ್ಯ ಇದಂ ನ ಮಮ ಇತಿ ತ್ಯಜೇತ್ ॥

ತತಃ ಸರ್ತ್ವಿಗಾಚಾರ್ಯಃ ನವಗ್ರಹೇಭ್ಯೋಽಷ್ಟಶತಾಷ್ಟಾವಿಂಶತ್ಯಷ್ಟಾನ್ಯತಮ-ಸಂಖ್ಯಾಕಾ ಘೃತಾಕ್ತಾ ಅರ್ಕಾದಿಸಮಿಧಃ ತಿಲಾಜ್ಯಾಹುತೀಶ್ಚ ಹುತ್ವಾಧಿದೇವತಾ ಪ್ರತ್ಯಧಿದೇವತಾ ವಿನಾಯಕಾದಿಪಂಚಲೋಕಪಾಲೇಭ್ಯಸ್ತನ್ನ್ಯೂನಸಂಖ್ಯಯಾ ಜುಹು-ಯಾತ್ ॥ ಗ್ರಹಾಣಾಂ ಯದಾಷ್ಟೌ ತದಾನ್ಯೇಭ್ಯಶ್ಚತಸ್ರ ಇತಿ ಸಂಪ್ರದಾಯಃ ॥ ತತೋ ಭುವನೇಶ್ವರ್ಯೈ ಗಾಯತ್ರ್ಯಾ ದಧಿಮಧುಘೃತಾಕ್ತಾಭಿಸ್ತಿಸೃಭಿಃ ದೂರ್ವಾಭಿ-ರೇಕಾಹುತಿರಿತ್ಯೇವಮಷ್ಟಸಹಸ್ರಮಷ್ಟಶತಂ ವಾ ದೂರ್ವಾಹುತೀರ್ಘೃತಾಕ್ತತಿಲಮಿ-ಶ್ರಗೋಧೂಮಾಹುತೀಃ ಪಾಯಸಾಹುತೀಶ್ಚ ಜುಹುಯಾತ್ ॥ ಏವಮಿಂದ್ರಾ-ಣೀಂದ್ರಯೋಃ ಪ್ರಾಗುಕ್ತ ಮಂತ್ರಾಭ್ಯಾಂ ಕ್ರಮೇಣ ತದೇವ ಹವಿಃ ಚತುಷ್ಟಯಂ

ಆಹುತಿಗಳು. ಹಾಗೆಯೇ ಕ್ರತುಸಾದ್ಗುಣ್ಯ ದೇವತೆ ಮತ್ತು ಕ್ರತುಸಂರಕ್ಷಕದೇವತೆಗಳಿಗೆ 4 ಅಥವಾ 2 ಅವೇ ಆಹುತಿಗಳು. ಭುವನೇಶ್ವರೀದೇವಿಗೆ ಪ್ರತಿಯೊಂದು ದ್ರವ್ಯದ 1008, 108 ಅಥವಾ 28 ಆಹುತಿಗಳು, ದ್ರವ್ಯಗಳು 1) ದೂರ್ವೆ, 2) ಎಳ್ಳು ಮಿಶ್ರಮಾಡಿದ ಗೋಧಿ, 3) ಪಾಯಸ, 4) ಆಜ್ಯ, ಇಂದ್ರಾಣೀ ಮತ್ತು ಇಂದ್ರರನ್ನು ಉದ್ದೇಶಿಸಿ, 108, 28 ಅಥವಾ 8 ಮೊದಲು ಹೇಳಿದ ಆಹುತಿಗಳು. **"ಶೇಷೇಣಸ್ವಿಷ್ಟಕೃತ...ಸದ್ಯೋ ಯಕ್ಷ್ಯೇ"** ಎಂದು ಹೇಳಿ ಪರಿಸಮೂಹನ ಪರಿಸ್ತರಣ ಮುಂತಾಗಿ ಸ್ಥಾಲೀಪಾಕದಲ್ಲಿ ಹೇಳಿದಂತೆ ಪೂರ್ಣಪಾತ್ರೆಯನ್ನಿಡುವಲ್ಲಿವರೆಗಿನ ಕರ್ಮಗಳನ್ನು ಮಾಡಬೇಕು. ಭುವನೇಶ್ವರೀ ಆದಿಯಾಗಿ 4 ದೇವತೆಗಳನ್ನು ಮನಸ್ಸಿನಲ್ಲಿ ಧ್ಯಾನಿಸಿ ಅವರಿಗೆಂದು 4-4 ಮುಷ್ಟಿ ಅಕ್ಕಿಯನ್ನು ತೆಗೆದಿಟ್ಟು ದನದ ಹಾಲಿನಲ್ಲಿ ಬೇಯಿಸಿ ಪಾಯಸಮಾಡಬೇಕು. ಆಜ್ಯಸಂಸ್ಕಾರವನ್ನೂ ಮಾಡಿದ ಬಳಿಕ ಯಜಮಾನನು ದಕ್ಷಿಣದಲ್ಲಿ ಕುಳಿತು **"ಏತಾಭ್ಯ ಇದಂ ನ ಮಮ"** ಎಂದು ಹೇಳಬೇಕು.

Scanned by CamScanner

ಪ್ರತ್ಯೇಕಮಷ್ಟಶತಸಂಖ್ಯಂ ಭುವನೇಶ್ವರ್ಯಾ ಅಷ್ಟ ಸಹಸ್ರಪಕ್ಷೇ ಜುಹುಯಾತ್ ॥ ತಸ್ಯಾ ಅಷ್ಟಶತಪಕ್ಷೇತು ತಯೋರಷ್ಟಾವಿಂಶತಿರಿತಿ ಸಂಪ್ರದಾಯಃ ॥

ತತಃ ಸ್ವಿಷ್ಟಕೃದಾದಿ ಪ್ರಾಯಶ್ಚಿತ್ತಹೋಮಾಂತಂ ಕೃತ್ವಾ ॥

ಯಜಮಾನಃ ಇಂದ್ರಾದಿದಿಕ್ಪಾಲೇಭ್ಯೋ ನವಗ್ರಹೇಭ್ಯೋ ಭುವನೇಶ್ವರೀ-ದ್ರಾಣೀಂದ್ರೇಭ್ಯಶ್ಚ ಕ್ಷೇತ್ರಪಾಲಾಯ ಚ ಸದೀಪಾನ್ ಮಾಷಭಕ್ತಬಲೀಂಸ್ತತ್ತ-ನ್ಮಂತ್ರೈರ್ದತ್ವಾ ॥

ಅಗ್ನೇರಂತಿಕಮಾಗತ್ಯ ಪೂರ್ಣಾಹುತೀಂ ಸಮುದ್ರಾದೂರ್ಮಿರಿತ್ಯೃ-ಚೇನ ಜುಹುಯಾತ್ ॥ ತತಃ ಪ್ರಣೀತಾವಿಮೋಕಂ ಕೃತ್ವಾ ಭುವನೇಶ್ವ-ರ್ಯಾದಿ ಕಲಶೋದಕಂ ಗ್ರಹಕಲಶೋದಕಂ ಚ ಪಾತ್ರಾಂತರೇ ಗೃಹೀತ್ವಾ ತೇನ ತತ್‌ಸ್ಥಪಂಚಪಲ್ಲವೈಃ ಸಕುಶದೂರ್ವೈಃ ಧೃತನವವಸ್ತ್ರಂ ಯಜಮಾನಂ ಧೃತನ ವವಸ್ತ್ರಕಂಚುಕೀಂ ಚ ತದ್ವಾಮಸ್ಥಾಂ ಋತುಮತೀಂ ಪತ್ನೀಂ ಸರ್ತ್ವಿಗುದಙ್ಮುಖ ಆಚಾರ್ಯೋ ಅಭಿಷಿಂಚೇದೇಭಿರ್ಮಂತ್ರೈಃ ॥

ಆಮೇಲೆ ಋತ್ವಿಜರ ಸಹಿತ ಆಚಾರ್ಯನು ನವಗ್ರಹಗಳಿಗೆ ಎಂಟುನೂರು, ಇಪ್ಪತ್ತೆಂಟು ಅಥವಾ ಎಂಟು ಸಂಖ್ಯೆಯ, ತುಪ್ಪದಲ್ಲಿ ತೋಯ್ಸಿದ ಎಕ್ಕೆ ಸಮಿಧೆ; ಎಳ್ಳು ಮತ್ತು ತುಪ್ಪದ ಆಹುತಿಗಳನ್ನು ಕೊಟ್ಟು ಅಧಿದೇವತೆ, ಪ್ರತ್ಯಧಿದೇವತೆಗಳಿಗೆ, ವಿನಾಯಕನೇ ಮುಂತಾಗಿ ಐದು ಲೋಕಪಾಲರಿಗೆ ಮೊದಲಿನ ಸಂಖ್ಯೆಗಿಂತ ಕಡಿಮೆ ಸಂಖ್ಯೆಯಿಂದ ಹೋಮಿಸಬೇಕು. ಗ್ರಹಗಳಿಗೆ ಎಂಟೆಂಟು ಆಹುತಿಗಳಾದರೆ ಇತರರಿಗೆ ನಾಲ್ಕು ಆಹುತಿಗಳನ್ನು ಕೊಡುವುದು ಸಂಪ್ರದಾಯ ವಾಗಿದೆ. ಗ್ರಹಗಳನ್ನು ಆವಾಹಿಸಿದ ಮಂತ್ರಗಳಿಂದಲೇ ಆಹುತಿಗಳನ್ನೂ ಕೊಡಬೇಕು. ಬಳಿಕ ಭುವನೇಶ್ವರಿಯನ್ನು ಉದ್ದೇಶಿಸಿ ಗಾಯತ್ರೀಮಂತ್ರದಿಂದ ಮೊಸರು, ಜೇನು ಹಾಗೂ ತುಪ್ಪದಿಂದ ತೋಯಿಸಿದ ಮೂರು ಮೂರು ದೂರ್ವೆಗಳ ಒಂದೊಂದು ಕಟ್ಟಿನ ಒಂದೊಂದು ಆಹುತಿಯಂತೆ ಎಂಟುಸಾವಿರ ಅಥವಾ ಎಂಟುನೂರು, ಹಾಗೆಯೇ ಎಳ್ಳು ಬೆರಸಿದ ಗೋಧಿಯ ಮತ್ತು ಪಾಯಸದ ಆಹುತಿಗಳನ್ನೂ ಕೊಡಬೇಕು. ಹಾಗೆಯೇ ಇಂದ್ರಾಣೀ ಮತ್ತು ಇಂದ್ರರಿಗೂ ಮೊದಲು ಹೇಳಿದ ಮಂತ್ರಗಳಿಂದ ಅದೇ ನಾಲ್ಕು ಬಗೆಯ ಹವಿಸ್ಸಿನ ಎಂಟುನೂರು ಆಹುತಿಗಳನ್ನು ಕೊಡಬೇಕು. ಭುವನೇಶ್ವರಿಗೆ ಎಂಟ್ನೂರು ಆಹುತಿಗಳಾದರೆ ಇವರಿಗೆ ಇಪ್ಪತ್ತೆಂಟು ಆಹುತಿಗಳನ್ನು ಕೊಡುವ ಸಂಪ್ರದಾಯವಿದೆ.

ಇದಾದ ಮೇಲೆ ಸ್ಥಾಲೀಪಾಕದಲ್ಲಿ ಹೇಳಿದಂತೆ **"ಯದಸ್ಯೇತಿ"** ಎಂಬಲ್ಲಿಂದ **"ತ್ಯಜೇತ್"** ಎಂಬಲ್ಲಿ ವರೆಗೆ ಸ್ವಿಷ್ಟಕೃತ್ ಹೋಮ, ಪ್ರಾಯಶ್ಚಿತ್ತಾಹುತಿ ಮುಂತಾದವುಗಳನ್ನು ಮಾಡಬೇಕು.

ಬಳಿಕ ಗ್ರಹಯಜ್ಞದಲ್ಲಿ **"ಅಥ ಬಲಿದಾನಂ"** ಎಂಬ ಶೀರ್ಷಿಕೆಯಲ್ಲಿ ವಿವರಿಸಿದ ಪ್ರಕಾರ ಯಜಮಾನನು ಇಂದ್ರಾದಿ ದಿಕ್ಪಾಲರು, ನವಗ್ರಹಗಳು ಹಾಗೂ ಕ್ಷೇತ್ರಪಾಲರುಗಳಿಗೆ ದೀಪಗಳ ಸಮೇತ ಉದ್ದು ಸೇರಿಸಿದ ಅನ್ನವನ್ನು ಬಲಿಕೊಡಬೇಕು. ಆದರೆ ನವಗ್ರಹಗಳ ಬಲಿ ಆದ

Scanned by CamScanner

Scanned with CamScanner

ಆಪೋಹಿಷ್ಠೇತಿ ನವರ್ಚಸ್ಯ ಸಿಂಧುದ್ವೀಪ ಆಪೋ ಗಾಯತ್ರೀ ಪಂಚಮಿಾ ವರ್ಧಮಾನಾ ಸಪ್ತಮಿಾ ಪ್ರತಿಷ್ಠಾ ಅಂತ್ಯೇ ದ್ವೇ ಅನುಷ್ಟುಭೌ ಅಭಿಷೇಕೇ ವಿನಿಯೋಗಃ ॥ ಓಂ ಆಪೋಹಿಷ್ಠಾ ... ॥ ೯ ॥ ಯ ಏಕ-ದ್ವಿದಯತ ಇತಿ ಗೋತಮೋ ರಾಹೂಗಣಇಂದ್ರ ಉಷ್ಣಿಕ್ ॥ ಯ ಏಕಇದ್ವಿದ-ಯತೇವಸುಮರ್ತಾಯದಾಶುಷೇ ॥ ಈಶಾನೋ ಅಪ್ರತಿಷ್ಕುತಇಂದ್ರೋಅಂಗ ॥ ತ್ರಿಭಿಷ್ಟ್ವಂ ದೇವೇತಿ ಸಪ್ತರ್ಚಸ್ಯ ವಸಿಷ್ಠ ಆದ್ಯಾನಾಂ ತ್ರಯಾಣಾಮಗ್ನಿಸ್ತತಃ ಚತುರ್ಣಾಂ ವಿಶ್ವೇದೇವಾ ಆದ್ಯಾ ಗಾಯತ್ರೀ । ದ್ವಿತೀಯಾನುಷ್ಟುಪ್ । ತತ-ಸ್ತಿಸ್ರೋ ಗಾಯತ್ರ್ಯಃ । ಅಂತ್ಯೇ ದ್ವೇ ಅನುಷ್ಟುಭೌ ॥ ಓಂ ತ್ರಿಭಿಷ್ಟ್ವಂ ದೇವ ಸವಿ... ॥ ಉಭಯಂ ಶೃಣವಚ್ಚನೇತಿ ಪ್ರಗಾಥೋ ಭರ್ಗ ಇಂದ್ರೋ ಬೃಹತೀ ॥ ಉಭಯಂ ಶೃಣವಚ್ಚನಇಂದ್ರೋಅರ್ವಾಗಿದಂವಚಃ ॥ ಸತ್ರಾಚ್ಯಾಮ ಘುವಾಸೋಮಪೀತಯೇಧಿಯಾಶವಿಷ್ಠಆಗಮತ್ ॥ ಸ್ವಸ್ತಿದಾವಿಶೋ ಭರದ್ವಾಜಃ-ಶಾಸ ಇಂದ್ರೋನುಷ್ಟುಪ್ ॥ ಸ್ವಸ್ತಿದಾವಿಶಸ್ಪತಿಃ ವೃತ್ರಹಾವಿಮೃಧೋವಶೀ ॥ ವೃಷೇಂದ್ರಃ ಪುರ ಏತುನಃ ಸೋಮಪಾಅಭಯಂಕರಃ ॥ ತ್ರ್ಯಂಬಕಂ

ನಂತರ ಕ್ಷೇತ್ರಪಾಲರ ಬಲಿಗೆ ಮೊದಲು ಭುವನೇಶ್ವರೀ, ಇಂದ್ರಾಣೀ ಹಾಗೂ ಇಂದ್ರರಿಗೆ ಬಲಿಗಳನ್ನು ಸಮರ್ಪಿಸಬೇಕು. ಆಯಾ ದೇವತೆಯ ಮಂತ್ರವನ್ನೇ ಬಲಿಕಾರ್ಯದಲ್ಲೂ ಉಪಯೋಗಿಸಿಕೊಳ್ಳಬೇಕು.

ಆಮೇಲೆ ಯಜಮಾನನು ಅಗ್ನಿಯ ಬಳಿಗೆ ಬಂದು, ಸ್ಥಾಲೀಪಾಕದಲ್ಲಿ ಹೇಳಿದಂತೆ **"ಸಮುದ್ರಾದೂರ್ಮಿ"** ಇತ್ಯಾದಿ ಮಂತ್ರಗಳಿಂದ ಪೂರ್ಣಾಹುತಿಯನ್ನು ಕೊಡಬೇಕು. ಇಷ್ಟಾದ ಮೇಲೆ ಸ್ಥಾಲೀಪಾಕದಲ್ಲಿ **"ತತಸ್ತಂಡುಲ"** ಎಂಬಲ್ಲಿಂದ **"ಪ್ರೋಕ್ಷೇತ್"** ಎಂಬಲ್ಲಿವರೆಗೆ ಹೇಳಿದ ಕ್ರಮದಿಂದ ಪ್ರಣೀತಾವಿಮೋಕ ಮಾಡಬೇಕು.

ಆಮೇಲೆ ಭುವನೇಶ್ವರೀ ಮೊದಲಾದ ಕಲಶಗಳಲ್ಲಿರುವ ಹಾಗೂ ನವಗ್ರಹಕಲಶಗಳಲ್ಲಿರುವ ನೀರನ್ನು ಬೇರೆ ಪಾತ್ರೆಯಲ್ಲಿ ತೆಗೆದುಕೊಂಡು, ಅವುಗಳಲ್ಲಿದ್ದ ಪಂಚಪಲ್ಲವಗಳು ಹಾಗೂ ದರ್ಭೆ ಮತ್ತು ದೂರ್ವೆಗಳನ್ನು ಸೇರಿಸಿ, ಹೊಸಬಟ್ಟೆ ಧರಿಸಿದ ಯಾಜಮಾನ ಮತ್ತು ಹೊಸ ಸೀರೆ ಕುಪ್ಪಸಗಳನ್ನು ಧರಿಸಿದ ಋತುಮತೀ ಪತ್ನಿಯು ಅವನ ಎಡಭಾಗದಲ್ಲಿ ಕುಳಿತಂತೆ ಋತ್ವಿಜರ ಸಹಿತ ಆಚಾರ್ಯನು ಈ ಮುಂದಿನ ಮಂತ್ರಗಳಿಂದ ಅಭಿಷೇಕ ಮಾಡಬೇಕು.

Scanned by CamScanner

Scanned with CamScanner

ವಸಿಷ್ಠೋರುದ್ರೋಽನುಷ್ಟುಪ್ ॥ ತ್ರ್ಯಂಬಕಂ... ॥ ಜಾತವೇದಸೇ ಕಶ್ಯಪೋ ಜಾತವೇದಾ ಅಗ್ನಿಸ್ತ್ರಿಷ್ಟುಪ್ ॥ ಓಂ ಜಾತವೇದಸೇ... ॥ ಸಮುದ್ರಜ್ಯೇಷ್ಠಾ ಇತಿ ಚತಸೃಣಾಂ ವಸಿಷ್ಠ ಆಪಸ್ತ್ರಿಷ್ಟುಪ್ ॥ ಓಂ ಸಮುದ್ರಜ್ಯೇಷ್ಠಾಃ ॥ ತ್ರಾಯಂತಾಮಿತಿ ತಿಸೃಣಾಂ ಸಪ್ತರ್ಷಯ ಆಪೋಽನುಷ್ಟುಪ್ ॥ ತ್ರಾಯಂತಾ-ಮಿಹ... ॥ ಇಮಾ ಆಪ ಇತಿ ತಿಸೃಣಾಂ ಐತರೇಯ ಆಪೋನುಷ್ಟುಪ್ ಜಗತ್ಯನುಷ್ಟುಭಃ ॥ ಇಮಾ ಆಪಃ ..... ॥ ದೇವಸ್ಯತ್ವೇತ್ಯಸ್ಯೈತರೇಯಃ ಸವಿತಾಶ್ವಿನೌ ಪೂಷಾ ಚ ಯಜುಃ ॥ ಅಭಿಷೇಕೇ ವಿನಿಯೋಗಃ ॥ ಓಂ ದೇವ-ಸ್ಯತ್ವಾಸವಿತುಃ ಪ್ರಸವೇಽಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಮಗ್ನೇಸ್ತೇ-ಜಸಾಸೂರ್ಯಸ್ಯವರ್ಚಸೇಂದ್ರಸ್ಯೇಂದ್ರಿಯೇಣಾಭಿಷಿಂಚಾಮಿ ॥ ತಮೀಶಾನಂ ಗೋತಮ ಈಶಾನೋ ಜಗತೀ ॥ ತಮೀಶಾನಂ ಜಗತಃ ... ॥ ತ್ವಮಗ್ನೇ-ರುದ್ರೋಗೃತ್ಸಮದೋಽಗ್ನಿರ್ಜಗತೀ ॥ ತ್ವಮಗ್ನೇರುದ್ರೋ ಅಸುರೋ ಮಹೋ-ದಿವಸ್ತ್ವಂಶರ್ಧೋಮಾರುತಂಪೃಕ್ಷಈಶಿಷೇ ॥ ತ್ವಂ ವಾತೈರರುಣೈರ್ಯಾಸಿಶಂ-ಗಯಸ್ತ್ವಂ ಪೂಷಾ ವಿಧತಃ ಪಾಸಿನುತ್ಮನಾ ॥ ತಮುಷ್ಟುಹಿಭೌಮಾತ್ರೀರುದ್ರಸ್ತ್ರಿ-ಷ್ಟುಪ್ ॥ ತಮುಷ್ಟುಹಿ... ॥ ಭುವನಸ್ಯಪಿತರಮ್ಮೃಜಿಶ್ವಾರುದ್ರಸ್ತ್ರಿಷ್ಟುಪ್ ॥ ಭುವನಸ್ಯಪಿತರಂ...... ॥ ಯಾತೇರುದ್ರೇತಿ ಕಶ್ಯಪೋರುದ್ರಃ ಸ್ವರಾಡನು-ಷ್ಟುಪ್ ॥ ಯಾತೇರುದ್ರಶಿವಾತನೂರಘೋರಾಪಾಪಕಾಶಿನೀ ॥ ತಯಾನಸ್ತನು-ವಾಶಂತಮಯಾಗಿರಿಶಂತಾಭಿಚಾಕಶೀಹಿ ॥ ಯಜ್ಜಾಗ್ರತ ಇತಿ ಷಣ್ಣಾಂ ಶಿವ-ಸಂಕಲ್ಪಮಂತ್ರಾಣಾಂ ಪ್ರಜಾಪತಿರ್ಮನಸ್ತ್ರಿಷ್ಟುಪ್ ॥ ಯಜ್ಜಾಗ್ರತೋದೂರ-ಮುದೈತುದೈವಂತದುಸುಪ್ತಸ್ಯ ತಥೈವೈತಿ ॥ ದೂರಂಗಮಂ ಜ್ಯೋತಿಷಾಂ ಜ್ಯೋತಿ-

---

ಮೇಲೆ ಅಪೂರ್ಣವಾಗಿ ಬರೆದ ಮಂತ್ರಗಳಲ್ಲಿ ಕೆಲವನ್ನು ಈ ಮೊದಲು ಬೇರೆಬೇರೆ ಸ್ಥಳಗಳಲ್ಲಿ ಬರೆಯಲಾಗಿದೆ. ಅಲ್ಲಿ ಅವುಗಳನ್ನು ನೋಡಿಕೊಳ್ಳಬೇಕು. ಮಂತ್ರಾನು ಕ್ರಮಣಿಕೆಯನ್ನು ನೋಡಿ ಸುಲಭವಾಗಿ ಕಂಡುಹಿಡಿಯಬಹುದು.

Scanned by CamScanner

Scanned with CamScanner

ರೇಕಂ ತನ್ಮೇ ಮನಃ ಶಿವಸಂಕಲ್ಪಮಸ್ತು ॥ ಯೇನಕರ್ಮಾಣ್ಯಪಸೋಮನೀಷಿಣೋ ಯಜ್ಞೇ ಕೃಣ್ವಂತಿ ವಿದಥೇಷು ಧೀರಾಃ ಯದಪೂರ್ವಂಯಕ್ಷ್ಮಮಂತಃ ಪ್ರಜಾನಾಂ ತನ್ಮೇ...... ॥ ಯತ್ಪ್ರಜ್ಞಾನಮುತಚೇತೋಧೃತಿಶ್ಚಯುಜ್ಯೋತಿರಂತರಮೃತಂ ಪ್ರಜಾಸು ॥ ಯಸ್ಮಾನ್ನಋತೇಕಿಂಚ ನ ಕರ್ಮಕ್ರಿಯತೇ ತನ್ಮೇ.... ॥ ಯೇನೇದಂ ಭೂತಂ ಭುವನಂ ಭವಿಷ್ಯ ತ್ಪರಿಗೃಹೀತ ಮಮೃತೇನ ಸರ್ವಂ ॥ ಯೇನಯಜ್ಞಸ್ತಾಯತೇ ಸಪ್ತಹೋತಾ ತನ್ಮೇ...... ॥ ಯಸ್ಮಿನ್ ಋಚಃ ಸಾಮಯಜೂಗ್‌ಂಷಿ ಯಸ್ಮಿನ್ ಪ್ರತಿಷ್ಠಿತಾರಥನಾಭಾವಿವಾರಾಃ ॥ ಯಸ್ಮಿಗ್‌ಂ ಶ್ಚಿತ್ತಗ್‌ಂ ಸರ್ವಮೋತಂ ಪ್ರಜಾನಾಂ ತನ್ಮೇ .... ॥ ಸುಷಾರಥಿರಶ್ವಾನಿವಯನ್ಮನುಷ್ಯಾನ್ನೇನೀಯತೇಽಭೀಶುಭಿರ್ವಾಜಿನ ಇವ ॥ ಹೃತ್ಪ್ರತಿಷ್ಠಂಯದಜಿರಂ ಯವಿಷ್ಠಂ ತನ್ಮೇ... ॥ ಇಂದ್ರತ್ವಾ ವೃಷಭಂ ವಯಮಿತಿ ಪಂಚಾನಾಂ ವಿಶ್ವಾಮಿತ್ರಇಂದ್ರೋಗಾಯತ್ರೀ ॥ ಇಂದ್ರತ್ವಾ ವೃಷಭಂ ವಯಂ ಸುತೇ ಸೋಮೇ ಹವಾಮಹೇ ॥ ಸಪಾಹಿಮಧ್ವೋ ಅಂಧಸಃ ॥

ಮೇಲೆ ಹೇಳಿದ ಮಂತ್ರಗಳಿಂದ ಅಭಿಷೇಕ ಮಾಡಿದ ಮೇಲೆ **"ಸುರಾಸ್ತ್ವಾ...."** ಮುಂತಾದ ಪೌರಾಣಿಕ ಮಂತ್ರಗಳಿಂದ ಅಭಿಷೇಕ ಮಾಡಬೇಕು. ಬಳಿಕ ಕಲಶಗಳಲ್ಲಿದ್ದ ನೀರು ಹಾಗೂ ಬೇರೆ ನೀರಿನಿಂದ ಶುದ್ಧವಾಗಿ ಸ್ನಾನಮಾಡಿ ದಂಪತಿಗಳು ಶುಭ್ರವಸ್ತ್ರಗಳನ್ನು ಧರಿಸಿ ಪತ್ನಿಯು ಬಲಭಾಗದಲ್ಲಿರುವಂತೆ ಅಗ್ನಿಯ ಬಳಿಯಲ್ಲಿ ಕುಳಿತುಕೊಳ್ಳಬೇಕು. ಕಳಚಿದ ಬಟ್ಟೆಗಳನ್ನು ಆಚಾರ್ಯನಿಗೆ ಕೊಡಬೇಕು. **"ತತಃ ಕರ್ತಾಗ್ನೇಃ"** ಎಂಬಲ್ಲಿಂದ ಸ್ಥಾಲೀ ಪಾಕದಲ್ಲಿ ಹೇಳಿದಂತೆ ವಿಭೂತಿಧಾರಣ ವರೆಗಿನ ಕರ್ಮಗಳನ್ನು ಮಾಡಿ ಯಜಮಾನನು ಆಚಾರ್ಯ ಮೊದಲಾದವರನ್ನು ಗಂಧ, ಪುಷ್ಪ, ವಸ್ತ್ರ, ಅಲಂಕಾರಾದಿಗಳಿಂದ ಪೂಜಿಸಿ ಆಚಾರ್ಯನಿಗೆ ಗೋಸಹಿತ ದಕ್ಷಿಣೆಯನ್ನೂ ಮಿಕ್ಕವರಿಗೆ ಕೈತುಂಬಾ ದಕ್ಷಿಣೆಯನ್ನೂ ಕೊಡಬೇಕು. ಆಮೇಲೆ ಗ್ರಹಪೀಠದೇವತೆಗಳಿಗೂ, ಭುವನೇಶ್ವರೀ ದೇವತೆಗಳಿಗೂ ಪಂಚೋಪಚಾರಗಳಿಂದ ಉತ್ತರಪೂಜೆ ಮಾಡಿ **"ಯಾಂತು ದೇವಗಣಾ ..."** ಎಂದು ಹೇಳಿ ವಿಸರ್ಜಿಸಬೇಕು. ಆಚಾರ್ಯನ ಕೈಯಲ್ಲಿ ಅಗ್ನಿಯನ್ನು ಒಪ್ಪಿಸಿ, ಪೂಜಿಸಿ, **"ಗಚ್ಛ ಗಚ್ಛ"** ಎಂದು ವಿಸರ್ಜಿಸಬೇಕು. ಮಹಾಶಾಂತಿ ಮಂತ್ರಗಳನ್ನು ಬೇರೆ ಕಡೆ ಕೊಡಲಾಗಿದೆ. ಆಮೇಲೆ ನವಗ್ರಹಗಳ ಪ್ರೀತ್ಯರ್ಥವಾಗಿ ಮೂರು, ಹಾಗೂ ಭುವನೇಶ್ವರ್ಯಾದಿ ದೇವತೆಗಳ ಪ್ರೀತ್ಯರ್ಥ ತಲಾ ಮೂರರಂತೆ ಬ್ರಾಹ್ಮಣರಿಗೆ ಭೋಜನ ಕೊಟ್ಟು ತಾನೂ ಮಿತ್ರರೊಂದಿಗೆ ಉಣ್ಣಬೇಕು.

Scanned by CamScanner

Scanned with CamScanner

ಇಂದ್ರಕ್ರತುವಿದಂ ಸುತಂ ಸೋಮಂ ಹರ್ಯಪುರುಷ್ಟುತ ॥ ಪಿಬಾವೃಷಸ್ವತಾ-ತೃಪಿಂ ॥ ಇಂದ್ರಪ್ರಣೋಧಿತಾವಾನಂ ಯಜ್ಞಂ ವಿಶ್ವೇಭಿರ್ದೇವೇಭಿಃ ॥ ತಿರಃ ಸ್ತವಾನವಿಶ್ಪತೇ ಇಂದ್ರಸೋಮಾಃಸುತಾ ಇಮೇ ತವಪ್ರಯಂತಿಸತ್ಪತೇ ॥ ಕ್ಷಯಂ ಚಂದ್ರಾಸಇಂದವಃ ॥ ದಧಿಷ್ವಾಜಠರೇಸುತಂ ಸೋಮಮಿಂದ್ರವರೇಣ್ಯಂ ॥ ತವದ್ಯುಕ್ಷಾಸಇಂದವಃ ॥

"ತತಃ ಸುರಾಸ್ತ್ವಾಮಭಿಷಿಂಚಂತು" ಇತ್ಯಾದಿ ಪೌರಾಣ್ಯೈರ್ಮಂತ್ರೈರಭಿ-ಷಿಂಚೇತ್ ॥ ತತಃ ಕಲಶೋದಕೇನಾನ್ಯೇನಚೋದಕೇನ ಸುಸ್ನಾತೌ ದಂಪತೀ ಶುಕ್ಲವಾಸೋಗಂಧಮಾಲ್ಯಾದಿ ಧೃತ್ವೋಪವಿಶೇತಾಂ ॥ ತತ್ರಪತ್ನೀ ದಕ್ಷಿಣತಃ ॥ ತ್ಯಕ್ತವಾಸಾಂಸ್ಯಾಚಾರ್ಯಸ್ಯ ॥

ತತೋ ಯಜಮಾನೋ ಅಗ್ನಿಂ ಸಂಪೂಜ್ಯ ವಿಭೂತಿಂ ಧೃತ್ವಾ ಆಚಾರ್ಯಾದೀನ್ ಗಂಧಪುಷ್ಪವಸ್ತ್ರಾಲಂಕಾರಾದಿಭಿರ್ಯಥಾಶಕ್ತಿ ಪೂಜಯಿತ್ವಾ ಆಚಾರ್ಯಾಯ ಧೇನುಂ ದಕ್ಷಿಣಾಂ ಚ ದದ್ಯಾತ್ ॥ ತತೋ ಅನ್ಯೇಭ್ಯ ಋತ್ವಿಗ್ಭ್ಯೋಽನ್ಯೇಭ್ಯಶ್ಚ ಬ್ರಾಹ್ಮಣೇಭ್ಯೋ ಭೂಯಸೀಂ ದಕ್ಷಿಣಾಂ ದದ್ಯಾತ್ ॥ ತತೋ ಗ್ರಹಪೀಠದೇವತಾನಾಂ ಭುವನೇಶ್ವರ್ಯಾದೀನಾಂ ಚೋತ್ತರಪೂಜಾಂ ಪಂಚೋಪಚಾರೈಃ ಕೃತ್ವಾ ಕ್ಷಮಾಪ್ಯ "ಯಾಂತು ದೇವಗಣಾ" ಇತಿ ವಿಸೃಜ್ಯ ಆಚಾರ್ಯಹಸ್ತೇ ಪ್ರತಿಪಾದ್ಯಾಗ್ನಿಂ ಸಂಪೂಜ್ಯ ಗಚ್ಛ ಗಚ್ಛ ಸುರಶ್ರೇಷ್ಠೇತಿ ವಿಸರ್ಜಯೇತ್ ॥ ತತೋ ಬ್ರಾಹ್ಮಣಾ ಮಹಾಶಾಂತಿಂ ಪಠೇಯುಃ ॥ ಸಾ ಯಥಾ ॥ ಆ ನೋ ಭದ್ರಾ ಇತಿ ದಶಾನಾಂ ಗೋತಮೋರಾಹೂಗಣೋ ವಿಶ್ವೇದೇವಾ ಆದ್ಯಾಃ ಪಂಚ ಸಪ್ತಮೀ ಜಗತ್ಯಃ ಷಷ್ಠೀ ವಿರಾಟ್‌ಸ್ಥಾನಾ ಚ ಅಷ್ಟಮಾದ್ಯಾಸ್ತಿಸ್ರಃ ತ್ರಿಷ್ಟುಭಃ ॥ ಸ್ವಸ್ತಿ ನೋ ಮಿಮೀತಾಮಿತಿ ಪಂಚಾನಾಂ ಸ್ವಸ್ತ್ಯಾತ್ರೇಯೋ ವಿಶ್ವೇದೇವಾ ಆದ್ಯಾಸ್ತಿಸ್ರಸ್ತ್ರಿಷ್ಟುಭಃ ತತೋ ದ್ವೇನುಷ್ಟುಭೌ ॥ ಶಂ ನ ಇಂದ್ರಾಗ್ನೀರಿತಿ ಪಂಚದಶಾನಾಂ ವಸಿಷ್ಠೋ ವಿಶ್ವೇದೇವಾಸ್ತ್ರಿಷ್ಟುಪ್ ॥

Scanned by CamScanner

ಶಂವತೀರಿತಿ ಪಂಚಾನಾಂ ವಸಿಷ್ಠೋ ವಿಶ್ವೇದೇವಾಸ್ತ್ರಿಷ್ಟುಪ್ ॥ ತ್ಯಮೂಷ್ವಿತಿ ತಿಸೃಣಾಂ ತಾರ್ಕ್ಷ್ಯೋಽರಿಷ್ಟನೇಮಿಸ್ತಾರ್ಕ್ಷ್ಯಸ್ತ್ರಿಷ್ಟುಪ್ ॥ ತಚ್ಛಂಯೋಃಶಂಯುಃ ವಿಶ್ವೇದೇವಾಃ ಶಕ್ವರೀ ॥ ಸರ್ವೇಷಾಂ ಶಾಂತಿಪಾಠೇ ವಿನಿಯೋಗಃ ॥ ಓಂ ಆನೋ ಭದ್ರಾಃ ॥ ೧೦ ॥ ಓಂ ಸ್ವಸ್ತಿನೋ ॥ ೫ ॥ ಓಂ ಶಂ ನ ಇಂದ್ರಾಗ್ನೀ ॥ ೧೫ ॥ ಓಂ ತ್ಯಮೂಷುವಾಜಿನಂ ॥ ೩ ॥ ಓಂ ತಚ್ಛಂ ಯೋ ರಾವೃಣೀ ॥ ೧ ॥ ತತೋ ಯಜಮಾನೋ ನವಗ್ರಹಪ್ರೀತ್ಯರ್ಥಂ ತ್ರೀನ್ ಭುವನೇಶ್ವರೀಂದ್ರಾಣೀಂದ್ರಪ್ರೀತಯೇ ಚ ಪ್ರತ್ಯೇಕಂ ತ್ರೀಂಸ್ತ್ರೀನ್ ಬ್ರಾಹ್ಮಣಾನ್ ಭೋಜಯಿತ್ವಾ ಸಂಕಲ್ಪ್ಯ ವಾ ವಿಪ್ರಾಶಿಷೋ ಗೃಹೀತ್ವಾ ಸುಹೃದ್ಯುಕ್ತೋ ಭುಂಜೀತ ॥

॥ ಇತಿ ಭುವನೇಶ್ವರೀ ಶಾಂತಿಃ ॥

Scanned by CamScanner

Scanned with CamScanner

ಗರ್ಭಾಧಾನಾದಿ ಸಂಸ್ಕಾರಾಣಾಂ ನಿರ್ಣಯಃ

॥ ಸತ್ಸಂತತಿ ಜನಕವಿಧಾನಂ ॥

ತತೋ ವಿಧಾನಂ ಪುತ್ರೀಯಮುಪಾಧ್ಯಾಯಃ ಸಮಾಚರೇತ್ ।
ಕರ್ಮಾಂತೇ ಚ ಕ್ರಮಂ ಹ್ಯೇನಮಾರಭೇತ ವಿಚಕ್ಷಣಃ ॥ ೧ ॥

ಪ್ರಜನಾರ್ಥಂ ಮಹಾಭಾಗಾಃ ಪೂಜಾರ್ಹಾ ಗೃಹದೀಪ್ತಯಃ ।
ಸ್ತ್ರಿಯಃ ಶ್ರಿಯಶ್ಚ ಗೇಹೇಷು ನ ವಿಶೇಷೋಸ್ತಿ ಕಶ್ಚನ ॥ ೨ ॥

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ।
ಯತ್ರೈತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ ॥ ೩ ॥

ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ ಚ ।
ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಂ ॥ ೪ ॥

ಯದಿ ಹಿ ಸ್ತ್ರೀ ನ ರೋಚೇತ ಪುಮಾಂಸಂ ನ ಪ್ರಮೋದಯೇತ್ ।
ಅಪ್ರಮೋದಾತ್ ಪುನಃ ಪುಂಸಃ ಪ್ರಜನಂ ನ ಪ್ರವರ್ತತೇ ॥ ೫ ॥ ಮನುಃ ॥

ಪಾಪಕರ್ಮಕೃತಂ ಕಿಂಚಿದ್ಯದಿ ತಸ್ಮಿನ್ನ ದೃಶ್ಯತೇ ।
ನೃಪತೇ ತಸ್ಯ ಪುತ್ರೇಷು ಪೌತ್ರೇಷ್ವಪಿ ಚ ನಪ್ತೃಷು ॥ ೬ ॥

ಆಹಾರಾಚಾರಚೇಷ್ಟಾಭಿರ್ಯಾದೃಶೀಭಿಃ ಸಮನ್ವಿತೌ ।
ಸ್ತ್ರೀಪುಂಸೌ ಸಮುಪೇಯಾತಾಂ ತಯೋಃ ಪುತ್ರೋಪಿ ತಾದೃಶಃ ॥ ೭ ॥

ತತೋಪರಾಹ್ಣೇ ಪುಮಾನ್ ಮಾಸಂ ಬ್ರಹ್ಮಚಾರೀ ಸರ್ಪಿಃ ಸ್ನಿಗ್ಧಃ ಸರ್ಪಿಃ ಕ್ಷೀರಾಭ್ಯಾಂ ಶಾಲ್ಯೋದನಂ ಭುಕ್ತ್ವಾ ಮಾಸಂ ಬ್ರಹ್ಮಚಾರಿಣೀಂ ತೈಲಸ್ನಿಗ್ಧಾಂ ತೈಲಮಾಷೋತ್ತರಾಹಾರಾಂ ನಾರೀಮುಪೇಯಾದ್ರಾತ್ರೌ ಸಾಮಾದಿಭಿರ್ವಿಶ್ವಾಸ್ಯ ವಿಕಲ್ಪಯೇಯಂ ಚತುರ್ಥ್ಯಾಂ ಷಷ್ಠ್ಯಾಂ ಅಷ್ಟಮ್ಯಾಂ ದ್ವಾದಶ್ಯಾಂ ಚೋಪೇಯಾದಿತಿ ಪುತ್ರಕಾಮಃ ॥ ಸುಶ್ರುತಃ ॥

ಸತ್ಸಂತಾನ ಪ್ರಾಪ್ತಿಯಾಗಲು ಕೈಗೊಳ್ಳಬೇಕಾದ ವಿಧಾನಗಳು:- ಬುದ್ಧಿವಂತನಾದವನು ಸತ್ಸಂತಾನವನ್ನು ಪಡೆಯಲು ಪುತ್ರೇಷ್ಟಿಯನ್ನು ಮಾಡಬೇಕು. ಆ ಕರ್ಮವನ್ನು ಪೂರಯಿಸಿದ ಬಳಿಕ ಕೆಲವು ವಿಧಾನಗಳನ್ನು ಅನುಸರಿಸಬೇಕು. ॥ ೧ ॥ ಮನೆಯಲ್ಲಿ ಜ್ಯೋತಿಗಳಂತೆ ಬೆಳಗುತ್ತಿರುವ ಉತ್ತಮ ಸ್ತ್ರೀಯರೇ ಒಳ್ಳೆಯ ಸಂತತಿಗೆ ಪ್ರಧಾನ ಕಾರಣರಾಗಿದ್ದಾರೆ.

Scanned by CamScanner

ಸ್ತ್ರೀ ಎಂದರೆ ಸಾಕ್ಷಾತ್ ಲಕ್ಷ್ಮೀಸ್ವರೂಪಳಾಗಿದ್ದಾಳೆ. ಶ್ರೀ ಮತ್ತು ಸ್ತ್ರೀ ಇವರಲ್ಲಿ ಯಾವ ಭೇದವೂ ಇಲ್ಲ. ॥ ೨ ॥ ಯಾವ ಮನೆಯಲ್ಲಿ ಅಥವಾ ದೇಶದಲ್ಲಿ ಸ್ತ್ರೀಯರನ್ನು ಗೌರವ ಹಾಗೂ ಆದರದಿಂದ ಕಾಣಲಾಗುತ್ತದೋ ಅಲ್ಲಿ ದೇವತೆಗಳೂ ಸಂತೋಷಪಡುತ್ತಾರೆ. ಎಲ್ಲಿ ಸ್ತ್ರೀಯರನ್ನು ನೀಚದೃಷ್ಟಿಯಿಂದ ನೋಡಿ ಅವಹೇಳನ ಮಾಡಲಾಗುತ್ತದೋ ಅಲ್ಲಿ ನಡೆಸಿದ ಯಾವ ಕರ್ಮವೂ ಫಲಕಾರಿಯಾಗುವುದಿಲ್ಲ. ॥ ೩ ॥ ಪತ್ನಿಯಿಂದ ಪತಿಯೂ ಪತಿಯಿಂದ ಪತ್ನಿಯೂ ಪರಸ್ಪರ ಪ್ರೀತ್ಯನುರಾಗಗಳಿಂದ ಯಾವ ಮನೆಯಲ್ಲಿ ಸಂತೃಪ್ತರಾಗಿರುತ್ತಾರೋ ಆ ಮನೆಯು ಯಾವಾಗಲೂ ಮಂಗಲಕರವಾಗಿರುತ್ತದೆ. ॥ ೪ ॥ ಹೆಂಡತಿಯು ಗಂಡನಿಗೆ ಪ್ರಿಯಳಾಗಿ ಇಲ್ಲದಿದ್ದರೆ, ಅಸಂತುಷ್ಟನಾದ ಅವನಿಂದ ಎಂದಿಗೂ ಸತ್ಸಂತಾನಪ್ರಾಪ್ತಿಯಾಗಲಾರದು. ॥ ೫ ॥ ಪತಿಪತ್ನಿಯರು ದುಷ್ಕರ್ಮಗಳನ್ನು ಮಾಡದವರೂ, ಸದಾಚಾರಸಂಪನ್ನರೂ ಆಗಿರಬೇಕು. ಪರಸ್ಪರ ಜಗಳಾಡುವವರೂ, ಪಾಪಕರ್ಮಗಳನ್ನು ಮಾಡುವವರೂ ಆಗಿದ್ದರೆ ಅಂತಹ ದೋಷಗಳು ಪರಂಪರೆಯಿಂದ ಹಲವು ತಲೆಮಾರುಗಳ ವರೆಗೆ ಅವರ ಸಂತತಿಗೂ ಹಾನಿಯನ್ನುಂಟುಮಾಡುತ್ತವೆ. ॥ ೬ ॥ ಆಹಾರ, ಆಚಾರ, ವಿಚಾರ ಇತ್ಯಾದಿಗಳಲ್ಲಿ ದಂಪತಿಗಳು ಯಾವ ಕ್ರಮಗಳನ್ನು ಅನುಸರಿಸುತ್ತಾರೋ ಅವೇ ಕ್ರಮಗಳು, ಸ್ವಭಾವಗಳು ಅವರ ಮಕ್ಕಳಿಗೂ ಬರುತ್ತವೆ. ॥ ೭ ॥

ಪುತ್ರೇಷ್ಟಿಯನ್ನು ಮಾಡಿದ ಮೇಲೆ ಪುರುಷನು ಒಂದು ತಿಂಗಳ ಕಾಲ ಬ್ರಹ್ಮಚಾರಿಯಾಗಿದ್ದು, ಮೈಗೆ ತುಪ್ಪವನ್ನು ಲೇಪಿಸಿಕೊಳ್ಳಬೇಕು. ಹಾಗೂ ತುಪ್ಪ, ಹಾಲು ಮುಂತಾದುವುಗಳಿಂದ ಕೂಡಿದ ಪೌಷ್ಟಿಕ, ಸಾತ್ವಿಕ ಆಹಾರವನ್ನು ಸ್ವೀಕರಿಸುತ್ತಿರಬೇಕು. ಅಂತೆಯೇ ಸ್ತ್ರೀಯೂ ಬ್ರಹ್ಮಚಾರಿಣಿಯಾಗಿದ್ದು ಮೈಗೆ ಎಳ್ಳೆಣ್ಣೆಯನ್ನು ತಿಕ್ಕಿ ಹಚ್ಚಿಕೊಂಡು, ಎಳ್ಳೆಣ್ಣೆ ಮತ್ತು ಉದ್ದಿನ ಪದಾರ್ಥಗಳಿಂದ ಕೂಡಿದ ಆಹಾರವನ್ನು ಸ್ವೀಕರಿಸುತ್ತಿರಬೇಕು. ನಂತರ ಹೆಂಗುಸು ರಜಸ್ವಲೆಯಾದ ಮೇಲೆ ೪-೬-೮-೧೦-೧೨ ಇವುಗಳಲ್ಲಿ ಯಾವುದಾದರೊಂದು ಶುಭದಿನದಲ್ಲಿ ಪುರುಷನು ಆಕೆಯೊಡನೆ ಸಂಭೋಗ ನಡೆಸಬೇಕು. ಪ್ರೀತಿಯ ಮಾತುಗಳಿಂದ ಆಕೆಯನ್ನು ರಮಿಸಿ, ಸಂತೋಷಗೊಳಿಸಿ ಅನುರಾಗದಿಂದ ಋತುದಾನ ಮಾಡಿದರೆ ಅದರಿಂದ ಒಳ್ಳೆಯ ಗುಣಗಳುಳ್ಳ ಸತ್ಪುತ್ರನು ಜನಿಸುತ್ತಾನೆ.

ಮೂಗಿನ ಬಲರಂಧ್ರದಲ್ಲಿ ಶ್ವಾಸ ಸಂಚಾರವಾಗುತ್ತಿರುವಾಗ ಸ್ತ್ರೀಸಂಗಮಾಡಿದರೆ ಗಂಡು ಸಂತಾನವೂ, ಎಡರಂಧ್ರದಲ್ಲಿ ಶ್ವಾಸೋಚ್ಛ್ವಾಸ ನಡೆದಾಗ ಮಾಡಿದರೆ ಹೆಣ್ಣು ಸಂತಾನವೂ ಜನಿಸುವುದು. ಎರಡೂ ರಂಧ್ರಗಳಲ್ಲಿ ಶ್ವಾಸಗತಿ ಇರುವಾಗ ಸಂಭೋಗಮಾಡಿದರೆ ನಪುಂಸಕ ಸಂತತಿಯು ಹುಟ್ಟುತ್ತದೆ. ಆದ್ದರಿಂದ ದಂಪತಿಗಳು ತಮಗೆ ಬೇಕಾದ ಸಂತಾನವನ್ನು ಪಡೆಯಲು ಈ ವಿಷಯವನ್ನು ನೆನಪಿನಲ್ಲಿಟ್ಟು ಆಯಾ ಶ್ವಾಸಗತಿ ಇರುವಾಗ ಸಂಭೋಗಮಾಡಬೇಕು. ಬಲಮಗ್ಗುಲಿಗೆ ಮಲಗಿದಾಗ ಎಡರಂಧ್ರದಲ್ಲೂ, ಎಡಮಗ್ಗುಲಿಗೆ ಮಲಗಿದಾಗ ಬಲರಂಧ್ರದಲ್ಲೂ ಶ್ವಾಸಗತಿಯು ನಡೆಯುತ್ತದೆ. ಋತುಸ್ನಾತೆಯಾದ ಪತ್ನಿಯು ಸೂರ್ಯದರ್ಶನ ಮಾಡಿ "ಸೂರ್ಯನಂತೆ ತೇಜಸ್ವಿಯಾದ ಕುಮಾರನು ತನಗೆ ಜನಿಸಲಿ" ಎಂದು ಪ್ರಬಲವಾಗಿ ಇಚ್ಛಿಸಬೇಕು. ಅಂತಹ ಪ್ರಬಲವಾದ ಮಾನಸಿಕ ಇಚ್ಛೆ ಇದ್ದರೆ ಅದೇ ಫಲಪ್ರಾಪ್ತಿಯಾಗುತ್ತದೆ. ಗರ್ಭಾಧಾನಕ್ಕೆ ಉದ್ಯುಕ್ತರಾದಾಗ ಪತಿಪತ್ನಿಯರಿಬ್ಬರೂ ಆರೋಗ್ಯದೃಢಕಾಯರಾಗಿರಬೇಕು.

Scanned by CamScanner

Scanned with CamScanner

ಉತ್ತಮ ಆಹಾರ ವ್ಯವಹಾರಗಳಿಂದ ಸುಪುಷ್ಟರಾಗಿರಬೇಕು. ಪರಸ್ಪರ ಅನುರಾಗ ಪ್ರೀತಿ ವಿಶ್ವಾಸಗಳಿದ್ದವರಾಗಿರಬೇಕು.

॥ ಗರ್ಭಪಾತಲಕ್ಷಣಾನಿ ॥

ದೋಷಾಭಿಘಾತೈರ್ಗರ್ಭಿಣ್ಯಾ ಯೋ ಯೋ ಭಾಗಃ ಪ್ರಪೀಡ್ಯತೇ ॥
ಸ ಸ ಭಾಗಃ ಶಿಶೋಸ್ತಸ್ಯ ಗರ್ಭಸ್ಥಸ್ಯ ಪ್ರಪೀಡ್ಯತೇ ॥ ಸುಶ್ರುತಃ ॥

ಗರ್ಭಪಾತದ ಕಾರಣಗಳು:- ಆಘಾತ, ಅಪಘಾತ, ಆಹಾರದೋಷ ಇತ್ಯಾದಿಗಳಿಂದ ಗರ್ಭಿಣಿಯ ಯಾವ ಯಾವ ಅಂಗಕ್ಕೆ ಹಾನಿಯಾಗುವುದೋ ಗರ್ಭದಲ್ಲಿರುವ ಶಿಶುವಿನ ಆ ಅಂಗಕ್ಕೆ ಊನವುಂಟಾಗುತ್ತದೆ. ಆದರಿಂದ ಗರ್ಭಪಾತವಾಗುವ ಸಂಭವವೂ ಇದೆ. ಅದೇ ರೀತಿ ಗರ್ಭಿಣಿಯು ಕಠಿಣಶ್ರಮದ ಕೆಲಸಗಳನ್ನು ಮಾಡುವುದು, ಮಲಮೂತ್ರ ವಿಸರ್ಜನೆಯನ್ನು ತಡೆಹಿಡಿಯುವುದು, ಗುಡ್ಡೆಗಳನ್ನು ಏರುವುದು, ಭಯಂಕರವಾದ ಶಬ್ದಗಳನ್ನು ಕೇಳುವುದು, ಮನಸ್ಸಿಗೆ ಆಘಾತವನ್ನುಂಟುಮಾಡುವ ದುರ್ವಾರ್ತೆಗಳನ್ನು ಕೇಳುವುದು, ಕೋಪ, ಅಸೂಯೆ ಮುಂತಾದ ದುರ್ಭಾವನೆಗಳು ಮನಸ್ಸಿನಲ್ಲಿ ಉಂಟಾಗುವುದು-ಇವುಗಳಿಂದಲೂ ಗರ್ಭಕ್ಕೆ ಬಾಧೆ ಉಂಟಾಗಿ ಗರ್ಭಪಾತವಾಗುವ ಸಂಭವವಿದೆ. ಮೂರನೆಯ ತಿಂಗಳಲ್ಲಿ ಬಹಳ ಎಚ್ಚರಿಕೆಯಿಂದ ಸಂಭೋಗವನ್ನು ತಪ್ಪಿಸಲೇಬೇಕು. ಮೊದಲ ಮೂರು ತಿಂಗಳಲ್ಲಿ ಗರ್ಭಪಾತವಾಗುವ ಭಯ ಹೆಚ್ಚಾಗಿರುತ್ತದೆ. ನಾಲ್ಕನೆಯ ಅಥವಾ ಐದನೆಯ ತಿಂಗಳ ನಂತರ ಮೈಥುನವನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಅನಾರೋಗ್ಯವನ್ನುಂಟುಮಾಡುವ ಅಯೋಗ್ಯ ಆಹಾರವನ್ನು ಗರ್ಭಿಣಿಯು ಸೇವಿಸಿದರೆ ಅದರಿಂದ ಗರ್ಭದ ಮೇಲೆ ಕೆಟ್ಟ ಪರಿಣಾಮ ಉಂಟಾಗಿ, ಮುಂದೆ ಶಿಶುವಿನ ಆರೋಗ್ಯಕ್ಕೆ ಹಾನಿಯಾಗಬಹುದು. ಆದ್ದರಿಂದ ಗರ್ಭಿಣೀಸ್ತ್ರೀಯು ಸಾತ್ವಿಕ ಹಾಗೂ ಪೌಷ್ಟಿಕ ಆಹಾರವನ್ನೇ ನಿಯಮಿತವಾಗಿ ಸ್ವೀಕರಿಸಬೇಕು. ಯಾವಾಗಲೂ ಪ್ರಸನ್ನಚಿತ್ತಳಾಗಿರಬೇಕು. ದೈವಭಕ್ತಿ, ಸದಾಚಾರ, ಪರೋಪಕಾರ, ವಾತ್ಸಲ್ಯ, ದಯೆ ಮುಂತಾದ ಸದ್ಭಾವಗಳನ್ನೇ ಯಾವಾಗಲೂ ಮನಸ್ಸಿನಲ್ಲಿ ಚಿಂತಿಸುತ್ತಿರಬೇಕು. ಇದರಿಂದ ಗರ್ಭಸ್ಥ ಶಿಶುವಿನ ಮೇಲೆ ಸತ್ಪರಿಣಾಮ ಉಂಟಾಗುತ್ತದೆ.

॥ ವಂಧ್ಯಾತ್ವನಿವಾರಣಂ ॥

ಹಂತಿ ವೈ ಬಾಲಕಂ ಸುಪ್ತಂ ತ್ವಸಂಜಾತಂ ಚ ಮೂಲಕಂ ॥
ತೇನ ಸಾ ಜಾಯತೇ ವಂಧ್ಯಾ ಮೃತವತ್ಸಾ ಚ ನಾರಕೀ ॥
ತತ್ಪಾತಕವಿನಾಶಾಯ ತಥಾ ಕಾರ್ಯಂ ಪ್ರಯತ್ನತಃ ।
ಸೌವರ್ಣಂ ಬಾಲಕಂ ಕೃತ್ವಾ ದದ್ಯಾದ್ದೋಲಾಸಮನ್ವಿತಂ ॥
ಅನಡ್ವಾಹಂ ತತೋ ದದ್ಯಾತ್ ವಸ್ತ್ರದ್ವಯಸಮನ್ವಿತಂ ॥
ತತ್ಪಾತಕವಿನಿರ್ಮುಕ್ತಾ ಪಶ್ಚಾದ್ಭವತಿ ಪುತ್ರಿಣೀ ॥

Scanned by CamScanner
Scanned with CamScanner

ಮಲಗಿ ನಿದ್ದೆಮಾಡುತ್ತಿರುವ ಮಗುವನ್ನು ಕೊಂದವಳು, ಗರ್ಭನಾಶ ಮಾಡುವವಳು ಬಂಜೆಯಾಗುತ್ತಾಳೆ ಮಾತ್ರವಲ್ಲ ಅವಳಿಗೆ ಹುಟ್ಟಿದ ಮಕ್ಕಳು ಸಾಯುತ್ತಾರೆ. ಆ ಪಾತಕ ಪರಿಹಾರವಾಗಬೇಕಾದರೆ ಚಿನ್ನದ ಶಿಶುವನ್ನು ತೊಟ್ಟಿಲುಸಹಿತ ದಾನಮಾಡಬೇಕು. ವಸ್ತ್ರಸಹಿತ ಎರಡು ಎತ್ತುಗಳನ್ನೂ ದಾನಮಾಡಬೇಕು. ಆದರಿಂದ ಬಂಜೆತನವು ದೂರವಾಗಿ ಆಕೆಯು ಪುತ್ರವತಿಯಾಗುತ್ತಾಳೆ.

॥ ಅನಪತ್ಯತ್ವ ನಿವಾರಣಂ ॥

ವಿಪ್ರರತ್ನಾಪಹಾರೀ ಚ ಸೋಽನಪತ್ಯಃ ಪ್ರಜಾಯತೇ ।
ತೇನ ಕಾರ್ಯಂ ವಿಶುದ್ಧ್ಯರ್ಥಂ ಮಹಾರುದ್ರಜಪಾದಿಕಂ ॥
ಆದಿಪದಾತ್ ಬ್ರಾಹ್ಮಣೋದ್ವಾಹನಂ, ಹರಿವಂಶಶ್ರವಣಂ ॥
ಮೃತವತ್ಸಾದಿತಃ ಸರ್ವೋ ವಿಧಿರತ್ರ ವಿಧೀಯತೇ ॥
ದಶಾಂಶಹೋಮಃ ಕರ್ತವ್ಯಃ ಪಾಲಾಶೇನ ಯಥಾವಿಧಿ ॥
ದಶಾಂಶೋ ಮಹಾರುದ್ರಸ್ಯ ॥

ಬ್ರಾಹ್ಮಣರ ಹಾಗೂ ಸದಾಚಾರಸಂಪನ್ನರಾದ ಸಜ್ಜನರ ದ್ರವ್ಯಾಪಹಾರ ಮಾಡಿದವನಿಗೆ ಪುತ್ರಸಂತಾನವಾಗುವುದಿಲ್ಲ. ಆ ದೋಷ ಪರಿಹಾರವಾಗಬೇಕಾದರೆ ಮಹಾರುದ್ರ ಜಪ ಮಾಡಬೇಕು. ಅಥವಾ ಬ್ರಾಹ್ಮಣನೊಬ್ಬನಿಗೆ ವಿವಾಹಮಾಡಬೇಕು. "ಹರಿವಂಶ" ಪುರಾಣಶ್ರವಣ ಮಾಡಬೇಕು. ಬಂಜೆತನವನ್ನು ಹೋಗಲಾಡಿಸುವ ವಿಧಿಗಳನ್ನೂ ಮಾಡಬೇಕು. ಮಹಾರುದ್ರಜಪದ ಹತ್ತನೇ ಒಂದಂಶದಷ್ಟು ಪಲಾಶಸಮಿತ್ತುಗಳಿಂದ ಯಥಾವಿಧಿ ಹೋಮ ಮಾಡಬೇಕು.

॥ ಮೃತಪುತ್ರತ್ವ ನಿವಾರಣಂ ॥

ಬಾಲಘಾತೀ ಚ ಪುರುಷೋ ಮೃತವತ್ಸಃ ಪ್ರಜಾಯತೇ ।
ಮಹಾರುದ್ರಜಪಂ ಚೈವ ಕಾರಯೇಚ್ಚ ಯಥಾವಿಧಿ ॥
ಜುಹುಯಾಚ್ಚ ದಶಾಂಶೇನ ದೂರ್ವಾಮಾಜ್ಯಪರಿಪ್ಲುತಾಂ ॥

ಮಕ್ಕಳನ್ನು ಕೊಂದ ಪುರುಷನ ಸಂತತಿಯು ಹುಟ್ಟಿದೊಡನೆಯೇ ಸಾಯುತ್ತದೆ. ಮಹಾರುದ್ರಜಪ ಹಾಗೂ ಅದರ ದಶಾಂಶದಷ್ಟು ತುಪ್ಪದಲ್ಲಿ ತೋಯಿಸಿದ ದೂರ್ವೆಗಳ ಹೋಮದಿಂದ ಆ ದೋಷವನ್ನು ಪರಿಹರಿಸಬಹುದು.

Scanned by CamScanner
Scanned with CamScanner

॥ ಸರ್ವರ್ತುಸಾಧಾರಣ ನಿಯಮಾಃ ॥

ತ್ರಿರಾತ್ರಮಸ್ಪೃಶ್ಯಾ ಭೂತ್ವಾ ಅಭ್ಯಂಗಾಂಜನಸ್ನಾನದಿವಾಸ್ವಾಪಾಗ್ನಿಸ್ಪರ್ಶ-ದಂತಧಾವನಸೂರ್ಯಾದ್ಯವಲೋಕನ ಭೂಮೌ ರೇಖಾಕರಣಂ ಚ ವರ್ಜ-ಯೇದಧಃ ಶಯೀತ ಅಂಜಲಿನಾ ತಾಮ್ರಲೋಹಪಾತ್ರೇಣ ವಾ ಜಲಂ ನ ಪಿಬೇತ್ । ಯಾ ಖರ್ವಪಾತ್ರೇಣ ಜಲಂ ಪಿಬತಿ ತಸ್ಯಾಃ ಖರ್ವಃ ಪುತ್ರಃ ನಖನಿಕೃಂತನೇ ಕುನಖೀಪುತ್ರಃ ಪರ್ಣೇನ ಪಾನೇ ಉನ್ಮತ್ತ ಇತಿ । ದ್ವಿತೀಯಾದಿಷು ಋತುಷು ಪ್ರವಾಸಗಂಧಮಾಲ್ಯಾದಿಧಾರಣತಾಂಬೂಲಗೋರಸಭಕ್ಷಣಪೀಠಾದ್ಯಾ-ರೋಹಣಂ ವರ್ಜಯೇತ್ । ಮೃಣ್ಮಯೇ ಆಯಸೇ ಭೂಮೌ ವಾ ಭುಂಜೀತ । ಗ್ರಹಣಾದಿನಿಮಿತ್ತಕಸ್ನಾನಪ್ರಾಪ್ತೌ ನೋದಕೇ ಮಜ್ಜನರೂಪಂ ಸ್ನಾನಂ ಕಿಂ ತು ಪಾತ್ರಾಂತರಿತಜಲೇನ ಸ್ನಾತ್ವಾ ನ ವಸ್ತ್ರಪೀಡನಂ ಕುರ್ಯಾನ್ನಾನ್ಯದ್ವಾಸಶ್ಚ ಧಾರಯೇತ್ । ಏವಂ ಮೃತಾಶೌಚಾದಿ ನಿಮಿತ್ತಕಸ್ನಾನ ಪ್ರಾಪ್ತಾವಪಿ ॥

ಏವಂ ತ್ರಿದಿನಂ ಸ್ಥಿತ್ವಾ ಚತುರ್ಥೇಽಹನಿ ಶುದ್ಧ್ಯಂತೇ । ಶುಭೇ ದಿನೇ ದುಷ್ಟರಜೋದರ್ಶನಪ್ರಯುಕ್ತಾಂ ಶೌನಕೋಕ್ತಾಂ ಭುವನೇಶ್ವರೀಶಾಂತಿಂ ವಿಧಾಯ ಗರ್ಭಾಧಾನಂ ಕಾರ್ಯಂ । ತತ್ರ ಪ್ರಥಮಋತುಗಮನಂ ಗರ್ಭಾಧಾನಂ ಕೃತ್ವಾ ಗೃಹ್ಯಾಗ್ನೌ ಕಾರ್ಯಂ । ಔಪಾಸನಾಗ್ನಿವಿಚ್ಛೇದೇ ಪ್ರಾಯಶ್ಚಿತ್ತಪೂರ್ವಕಂ ಪುನಃ ಸಂಧಾನವಿಧಿನಾಗ್ನಿಮುತ್ಪಾದ್ಯ ತತ್ರ ಕಾರ್ಯಂ ॥

ಸಾರ್ವಕಾಲಿಕ ರಜೋದರ್ಶನದ ಸಾಧಾರಣ ನಿಯಮ:- ಮೂರು ರಾತ್ರಿಗಳು ಕಳೆಯುವ ವರೆಗೆ ಯಾರನ್ನೂ ಮುಟ್ಟಕೂಡದು: ಅಭ್ಯಂಗಸ್ನಾನ, ಕಾಡಿಗೆ, ಸ್ನಾನ, ಹಗಲು ನಿದ್ದೆ, ಅಗ್ನಿಸ್ಪರ್ಶ, ಹಲ್ಲುಜ್ಜಿಕ್ಕುವುದು, ಸೂರ್ಯ ಮೊದಲಾದವುಗಳ ದರ್ಶನ, ನೆಲದ ಮೇಲೆ ಗೆರೆ ಎಳೆಯುವುದು-ಇತ್ಯಾದಿಗಳನ್ನು ವರ್ಜಿಸಬೇಕು. ಬೊಗಸೆಯಿಂದ, ತಾಮ್ರ ಅಥವಾ ಕಬ್ಬಿಣದ ಪಾತ್ರೆಯಿಂದ ನೀರು ಕುಡಿಯಬಾರದು. ಸಣ್ಣ ಪಾತ್ರೆಯಿಂದ ನೀರು ಕುಡಿದವಳಿಗೆ ಗಿಡ್ಡ ಮಗನಾಗುತ್ತಾನೆ. ಉಗುರು ತೆಗೆದರೆ ಕೆಟ್ಟ ಉಗುರುಗಳುಳ್ಳ ಮಗನಾಗುತ್ತಾನೆ. ಎಲೆಯಿಂದ ನೀರು ಮೊದಲಾದ ಪಾನೀಯಗಳನ್ನು ಕುಡಿದರೆ ಉನ್ಮತ್ತ ಮಗನಾಗುತ್ತಾನೆ. ಎರಡನೆಯ ಸಲ ಮೂರನೆಯ ಸಲ ಇತ್ಯಾದಿ ಋತುವಾದಾಗ ಪ್ರವಾಸ, ಗಂಧ ಹೂಮುಡಿಯುವುದು, ತಾಂಬೂಲ ಗೋರಸಭಕ್ಷಣ, ಮಣೆ ಆಸನ ಇತ್ಯಾದಿಗಳ ಮೇಲೆ ಕುಳಿತುಕೊಳ್ಳುವುದು-ಇವುಗಳನ್ನು ವರ್ಜಿಸಬೇಕು. ಮಣ್ಣಿನ ಅಥವಾ ಕಬ್ಬಿಣದ ಪಾತ್ರೆಯಲ್ಲಿ ನೆಲದ ಮೇಲೆ ಕುಳಿತು ಊಟ ಮಾಡಬೇಕು. ಗ್ರಹಣ, ಆಶೌಚ ಇತ್ಯಾದಿಗಳಿಂದ ಸ್ನಾನ ಮಾಡಬೇಕಾಗಿ ಬಂದರೆ, ನೀರಿನಲ್ಲಿ ಮುಳುಗಿ ಸ್ನಾನಮಾಡಬಾರದು. ಬೇರೆ ಪಾತ್ರೆಯಲ್ಲಿ ನೀರು ತುಂಬಿಸಿ ಸ್ನಾನ ಮಾಡಿ ಬಟ್ಟೆಯನ್ನು ಹಿಂಡಿಕೊಳ್ಳದೆ ಅದೇ ಬಟ್ಟೆಯನ್ನು ಧರಿಸಬೇಕು. ಬೇರೆ ಬಟ್ಟೆ ಧರಿಸಕೂಡದು.

Scanned by CamScanner

ಈ ರೀತಿ ಮೂರು ದಿನಗಳಿದ್ದು ನಾಲ್ಕನೆಯ ದಿನ ಶುದ್ಧವಾದ ನಂತರ ಶುಭದಿನದಲ್ಲಿ ಮಷ್ಪ ರಜೋದರ್ಶನಕ್ಕಾಗಿ ಶೌನಕೋಕ್ತ ಭುವನೇಶ್ವರೀ ಶಾಂತಿಯನ್ನು ಮಾಡಿ ಗರ್ಭಾಧಾನ ಮಾಡಬೇಕು. ಮೊದಲನೆಯ ಋತುಕಾಲದಲ್ಲಿ ಗೃಹ್ಯಾಗ್ನಿಯ ಮೇಲೆ ಗರ್ಭಾಧಾನ ಹೋಮಮಾಡಿ ಗಮನ ಮಾಡಬೇಕು. ಅಗ್ನಿಯು ನಾಶವಾಗಿದ್ದರೆ ಪುನಃಸಂಧಾನವಿಧಿಯಿಂದ ಪುನಃ ಅಗ್ನಿಯನ್ನು ಉತ್ಪಾದಿಸಿ ಆ ಅಗ್ನಿಯ ಮೇಲೆ ಗರ್ಭಾಧಾನಹೋಮ ಮಾಡಬೇಕು.

ಗರ್ಭಾಧಾನಾಂಗಹೋಮಾಕರಣೇ ಪ್ರಾಯಶ್ಚಿತ್ತಮಾಹ ಪಾರಿಜಾತೇ ಆಶ್ವಲಾಯನಃ- ಗರ್ಭಾಧಾನಸ್ಯಾಕರಣಾತ್ತಸ್ಯಾಂ ಜಾತಸ್ತು ದುಷ್ಯತಿ । ಕೃತ್ವಾ ತು ಗಾಂ ದ್ವಿಜೇ ದತ್ವಾ ಕುರ್ಯಾತ್ಪುಂಸವನಂ ಪತಿಃ ॥

ಋತುಕಾಲಸ್ತು ಆರ್ತವದರ್ಶನಾತ್ ಷೋಡಶರಾತ್ರಂ ಜ್ಞೇಯಃ ಅತ್ರ ಮನುಃ ॥ ಋತುಃ ಸ್ವಾಭಾವಿಕಃ ಸ್ತ್ರೀಣಾಂ ರಾತ್ರಯಃ ಷೋಡಶಃ ಸ್ಮೃತಾಃ । ತಾಸಾಮಾದ್ಯಾಃ ಚತಸ್ರಸ್ತು ನಿಂದಿತೈಕಾದಶೀ ಸ್ಮೃತಾ । ತ್ರಯೋದಶೀ ಚ ಶೇಷಾಃ ಸ್ಯುಃ ಪ್ರಶಸ್ತಾ ದಶರಾತ್ರಯಃ ॥ ಅತ್ರ ಚತುರ್ಥದಿವಸೋ ನಿಷೇಧೇಽಪಿ ಕೈಶ್ಚಿದಗೃಹೀತೋಽಪಿ ವರ್ತತೇ । ತಥಾ ಚ ಮಹಾಭಾರತೋಕ್ತಿಃ- ಸ್ನಾತಾಂ ಚತುರ್ಥದಿವಸೇ ರಾತ್ರೌ ಗಚ್ಛೇದ್ವಿಚಕ್ಷಣಃ ॥ ತಥಾ ಮದನರತ್ನೇ ದೇವಲೋಕ್ತಿಃ- ತಸ್ಮಾತ್ ತ್ರಿರಾತ್ರಂ ಚಾಂಡಾಲೀಂ ಪುಷ್ಪಿತಾಂ ಪರಿವರ್ಜಯೇತ್ ॥ ಅತ್ರಿಸಂಹಿತಾ ಚ ಪ್ರಥಮೇಽಹನಿ ಚಾಂಡಾಲೀ ದ್ವಿತೀಯೇ ಬ್ರಹ್ಮಘಾತಕೀ । ತೃತೀಯೇ ರಜಕೀ ಪ್ರೋಕ್ತಾ ಚತುರ್ಥೇಽಹನಿ ಶುದ್ಧ್ಯತಿ ॥ ಅತ್ರ ಯದ್ಯಪಿ ಚತುರ್ಥದಿವಸೋ ಗೃಹೀತಸ್ತಥಾಪಿ ಸರ್ವಥಾ ರಜೋ ನಿವೃತ್ತೌ ಜ್ಞೇಯಃ । ಅವಶಿಷ್ಟದಿನೇಷು ಪುತ್ರಾರ್ಥಿನಾಸಮದಿನೇಷು ಕನ್ಯಾರ್ಥಿನಾ ವಿಷಮದಿನೇಷು ಗಮನಂ ಕಾರ್ಯಂ ॥ ತಥಾ ಹೇಮಾದ್ರೌ ಶಂಖೋಕ್ತಿಃ ಯುಗ್ಮಾಸು ಪುತ್ರಾ ಜಾಯಂತೇ ಸ್ತ್ರಿಯೋಽಯುಗ್ಮಾಸು ರಾತ್ರಿಷು ॥

ಗರ್ಭಾಧಾನಸಂಸ್ಕಾರ ಆಗದೆ ಸ್ತ್ರೀಯು ಗರ್ಭಿಣಿಯಾದರೆ ಆಶ್ವಲಾಯನರು ಈ ರೀತಿ ಪ್ರಾಯಶ್ಚಿತ್ತವನ್ನು ಹೇಳಿದ್ದಾರೆ. ಗರ್ಭಾಧಾನ ಮಾಡದೆ ಜನಿಸಿದ ಸಂತತಿಯು ದೋಷಯುಕ್ತವಾಗುತ್ತದೆ. ಅದಕ್ಕಾಗಿ ಒಂದು ಗೋದಾನ ಮಾಡಿ, ಧರಿಸಿದ ಗರ್ಭಕ್ಕೆ ಪತಿಯು ಪುಂಸವನ ಸಂಸ್ಕಾರವನ್ನು ಮಾಡಬೇಕು.

ಗರ್ಭಾಧಾನವನ್ನು ಋತುಕಾಲದಲ್ಲಿ ಮಾಡಬೇಕು. ರಜೋದರ್ಶನವಾದಂದಿನಿಂದ ಹದಿನಾರು ದಿನಗಳ ವರೆಗೆ ಋತುಕಾಲವೆನಿಸುವುದು. ಈ ವಿಚಾರದಲ್ಲಿ ಮನುವಿನ ಅಭಿಪ್ರಾಯ ಹೀಗಿದೆ. ರಜೋದರ್ಶನವಾದಂದಿನಿಂದ 16 ದಿನಗಳು ಸ್ತ್ರೀಯರಿಗೆ ಋತುಕಾಲವೆನಿಸುವುದು.

Scanned by CamScanner
Scanned with CamScanner

ಇವುಗಳಲ್ಲಿ ಮೊದಲ ನಾಲ್ಕು ಮತ್ತು ಹನ್ನೊಂದು ಹದಿಮೂರನೆಯ ರಾತ್ರಿಗಳನ್ನು ವರ್ಜಿಸಬೇಕು. ಉಳಿದ ಹತ್ತು ರಾತ್ರಿಗಳು ಆ ಸಂಸ್ಕಾರಕ್ಕೆ ಪ್ರಶಸ್ತವಾಗಿವೆ. ಮನುವಿನ ಅಭಿಪ್ರಾಯದಲ್ಲಿ ನಾಲ್ಕನೆಯ ರಾತ್ರಿಯು ವರ್ಜ್ಯವಾಗಿದ್ದರೂ ಇತರ ಹಲವರು ಆ ರಾತ್ರಿಯನ್ನು ಅಂಗೀಕರಿಸಿದ್ದಾರೆ. ಮಹಾಭಾರತದಲ್ಲಿ ನಾಲ್ಕನೆಯ ದಿನ ಸ್ನಾನ ಮಾಡಿದ ನಂತರ ಸ್ತ್ರೀಸಮಾಗಮ ಮಾಡಬೇಕೆಂದು ಹೇಳಿದೆ. ಮದನರತ್ನದಲ್ಲಿ ದೇವಲರ ವಚನವೂ ಅತ್ರಿಸಂಹಿತೆಯೂ ಹೀಗೆ ಅನುಕೂಲಾಭಿಪ್ರಾಯವನ್ನೇ ಕೊಡುತ್ತವೆ. ಮೂರು ದಿನಗಳ ವರೆಗೆ ಋತುಮತಿಯು ಚಾಂಡಾಲೀ ಎನಿಸಿ ವರ್ಜ್ಯವಾಗುತ್ತಾಳೆ. ಮೊದಲ ದಿನ ಚಾಂಡಾಲೀ ಎಂದೂ, ಎರಡನೆಯ ಮತ್ತು ಮೂರನೆಯ ದಿನ ಅನುಕ್ರಮವಾಗಿ ಬ್ರಹ್ಮಘಾತಕೀ, ರಜಕೀ, ಎಂದೂ ಹೇಳಲ್ಪಟ್ಟು ಅವಳು ವರ್ಜ್ಯಳೆನಿಸುತ್ತಾಳೆ. ನಾಲ್ಕನೆಯ ದಿನ ಶುದ್ಧಳಾಗುತ್ತಾಳೆ. ನಿಷಿದ್ಧರಾತ್ರಿಗಳನ್ನು ಬಿಟ್ಟು ಉಳಿದ ರಾತ್ರಿಗಳಲ್ಲಿ ಗಂಡುಸಂತತಿಯನ್ನು ಬಯಸುವವನು 4, 6, 8, 10, 12, 14, 16 ಈ ಸಮರಾತ್ರಿಗಳಲ್ಲೂ ಹೆಣ್ಣು ಸಂತತಿಯನ್ನು ಬಯಸುವವನು 5, 7, 9, 11, 13, 15 ಈ ವಿಷಮ ರಾತ್ರಿಗಳಲ್ಲೂ ಸ್ತ್ರೀಸಂಗ ಮಾಡಬೇಕು. ಇದು ಹೇಮಾದ್ರಿಯಲ್ಲಿ ಶಂಖನು ಹೇಳಿದ ಅಭಿಪ್ರಾಯವಾಗಿದೆ.

ಶಿವರಹಸ್ಯೇ:-

ದಿವಾ ಜನ್ಮದಿನೇ ಚೈವ ನ ಕುರ್ಯಾನ್ಮೈಥುನಂ ವ್ರತೀ । ಶ್ರಾದ್ಧಂ ದತ್ವಾ ಚ ಭುಕ್ತ್ವಾ ಚ ಶ್ರೇಯೋರ್ಥೀ ನ ಚ ಪರ್ವಸು ॥ ಏವಂ ಅಷ್ಟಮೀ ಚತುರ್ದಶೀ ಜನ್ಮನಕ್ಷತ್ರ ಸಂಧ್ಯಾಕಾಲೇಷು ಸ್ತ್ರೀಗಮನಂ ನ ಕಾರ್ಯಂ । ದ್ವೇಷಾದಿನಾ ಋತಾವಗಮನೇ ದೋಷಮಾಹ ಪರಾಶರಃ- ಋತುಸ್ನಾತಾಂ ತು ಯೋ ಭಾರ್ಯಾಂ ಸನ್ನಿಧೌ ನೋಪಗಚ್ಛತಿ । ಘೋರಾಯಾಂ ಭ್ರೂಣಹತ್ಯಾಯಾಂ ಪಚ್ಯತೇ ನಾತ್ರ ಸಂಶಯಃ ॥ ಋತುಕಾಲೇ ನಿಷಿದ್ಧದಿನಪ್ರಾಪ್ತಿಶ್ಚೇತ್ ಉತ್ತರರಾತ್ರೌ ಗಮನಂ ಕಾರ್ಯಂ । ರೋಗಾದಿನಾ ಗಮನಾಭಾವೇ ಅದೋಷಃ । ಯತ್ತು ಮಿತಾಕ್ಷರಾಕಾರೇಣೋಕ್ತಂ ಋತೌ ಶ್ರಾದ್ಧದಿನೇಪಿ ಗಚ್ಛತೋ ನ ದೋಷ ಇತಿ ತತ್ತು ಷೋಡಶ ದಿನೇಷು ತದಿತರಕಾಲಾಸಂಭವವಿಷಯಂ ॥ ಪ್ರಾಗ್ರಜೋದರ್ಶನಾತ್ಪತ್ನೀಂ ನೇಯಾದ್ಗತ್ವಾ ಪತತ್ಯಧಃ । ವ್ಯರ್ಥೀಕಾರೇಣ ಶುಕ್ರಸ್ಯ ಬ್ರಹ್ಮಹತ್ಯಾಮವಾಪ್ನುಯಾತ್ ॥

ಶಿವರಹಸ್ಯದಲ್ಲಿ:- ಇಹಪರಲೋಕಗಳಲ್ಲಿ ಶ್ರೇಯಸ್ಸನ್ನು ಬಯಸುವವನು ಹಗಲು, ಜನ್ಮದಿನ, ಶ್ರಾದ್ಧಮಾಡಿದ ಹಾಗೂ ಶ್ರಾದ್ಧಭೋಜನ ಮಾಡಿದ ದಿನ, ಪರ್ವದಿನ, ಹುಣ್ಣಿಮೆ, ಅಮಾವಾಸ್ಯೆ, ವ್ಯತೀಪಾತ, ಉಪವಾಸವಿದ್ದ ದಿನ, ಅಷ್ಟಮೀ, ಚತುರ್ದಶೀ, ಜನ್ಮನಕ್ಷತ್ರ, ಸಂಧ್ಯಾಕಾಲ- ಮುಂತಾದವುಗಳಲ್ಲಿ ಸ್ತ್ರೀಸಂಗ ಮಾಡಬಾರದು. ದ್ವೇಷ ಮುಂತಾದ ಕಾರಣಗಳಿಂದ

Scanned by CamScanner
Scanned with CamScanner

ಗರ್ಭಾಧಾನಮುಹೂರ್ತ ನಿರ್ಣಯಃ:-

ತತ್ರ ಅಸ್ತಾದಿವಿಚಾರಃ- ಗರ್ಭಾಧಾನಾದಿ ಸಂಸ್ಕಾರೇ ತಥಾನ್ನಪ್ರಾಶನೇ ಶಿಶೋಃ । ನ ತತ್ರ ಗುರುಶುಕ್ರಾಸ್ತಮಲಮಾಸಾದಿದೂಷಣಂ ॥ ಇದಂ ಪ್ರಥಮ ಋತೌ ಗರ್ಭಾಧಾನಕರಣೇ । ಅನ್ಯಥಾ ದೋಷೋಸ್ತ್ಯೇವ । ಉಕ್ತಂ ಚ ವಸಿಷ್ಠೇನ- ಅತೀತಕಾಲಾನ್ಯಖಿಲಾನಿ ಯಾನಿ ಕಾರ್ಯಾಣಿ ಸೌಮ್ಯಾಯನಗೇ ದಿನೇಶೇ । ಗುರೌ ಭೃಗೌ ವಾಪ್ಯಥ ದೃಶ್ಯಮಾನೇ ತದುಕ್ತ ಪಂಚಾಂಗದಿನೇಪ್ಯಖಂಡೇ ॥ ಗರ್ಭಾಧಾನ ಸಂಸ್ಕಾರತಿಥಯಃ- ಷಷ್ಠ್ಯಷ್ಟಮಿಾ ಪಂಚದಶೀ ಚತುರ್ಥೀ ಚತುರ್ದಶೀ ತಿಥ್ಯುಭಯತ್ರ ಹಿತ್ವಾ । ಶೇಷಾಃ ಶುಭಾಃ ಸ್ಯುಸ್ತಿಥಯೋ ನಿಷೇಕೇ ವಾರಾ ಶಶಾಂಕಾರ್ಯಸಿತೇಂ ದುಜಾನಾಂ ॥ ನಕ್ಷತ್ರಾಣಿಃ- ಸ್ವಾತೌ ಹಸ್ತೇನುರಾಧಾಯಾಂ ರೋಹಿಣ್ಯಾಂ ವಾಶ್ರವತ್ರಯೇ । ತ್ರ್ಯುತ್ತರೇ ಮೃಗಶೀರ್ಷೇ ಚ ಗರ್ಭಾಧಾನಂ ಶುಭಾವಹಂ ॥ ಚಿತ್ರಾಪುನರ್ವಸೌ ಪುಷ್ಯೇ ಅಶ್ವಿನ್ಯಾ ಮಧ್ಯಮಂ ಸ್ಮೃತಂ । ಜನ್ಮರ್ಕ್ಷಂ ಭರಣೀ ಮೂಲೇ ವರ್ಜಯೇತ್ ರೇವತೀಂ ಮಘಾಂ ॥ ಯಸ್ಮಿನ್ ಋಕ್ಷೇ ಭವೇದ್ಗರ್ಭಃ ತಸ್ಮಾದ್ಯದ್ದಶಮಂ ಭವೇತ್ । ತತ್ರಾಪತ್ಯಂ ಪ್ರಜಾಯೇತ ತಸ್ಮಾದೇತತ್ರಯಂ ತ್ಯಜೇತ್ ॥ ಸಂಸ್ಕಾರಕೌಸ್ತುಭೇ ಜ್ಯೇಷ್ಠಾಪಿ ವರ್ಜ್ಯಾಸ್ತಿ ॥

ಋತುಕಾಲದಲ್ಲಿ ಸ್ತ್ರೀಸಂಗ ಮಾಡದಿದ್ದರೆ ದೋಷವಿದೆ ಎಂದು ಹೇಳಿದ್ದಾರೆ. ಈ ಕುರಿತು ಪರಾಶರಸ್ಮೃತಿಯಲ್ಲಿ ಹೀಗೆಂದು ಹೇಳಲಾಗಿದೆ. ಋತುಮತಿಯಾದ ಪತ್ನಿಯು ಸಮೀಪವಿದ್ದು ಅವಳೊಡನೆ ಸಂಭೋಗಮಾಡದಿದ್ದರೆ ಭ್ರೂಣಹತ್ಯಾ ದೋಷ ಬರುತ್ತದೆ. ಋತುಕಾಲದಲ್ಲಿ ನಿಷಿದ್ಧದಿನ ಬಂದರೆ ಮುಂದಿನ ರಾತ್ರಿಯಲ್ಲಿ ಸಂಗಮಾಡಬೇಕು. ಪತ್ನಿಯು ರೋಗಿ, ಪ್ರವಾಸಿ ಅಥವಾ ದುರಾಚಾರಿಣಿಯಾಗಿದ್ದರೆ, ಋತುಕಾಲದಲ್ಲಿ ಸಂಗ ಮಾಡದಿದ್ದರೂ ದೋಷವಿಲ್ಲ. ಋತುಕಾಲವಾಗಿದ್ದರೆ ಶ್ರಾದ್ಧದ ದಿನವಾದರೂ ಪತ್ನೀಸಂಗ ಮಾಡಿದರೆ ದೋಷವಿಲ್ಲವೆಂದು ಮಿತಾಕ್ಷರದಲ್ಲಿ ಹೇಳಲ್ಪಟ್ಟಿದೆ. ಆದರೆ ಈ ಮಾತು ಋತುಕಾಲದ ಹದಿನಾರು ದಿನಗಳಲ್ಲಿ ಆ ಒಂದು ದಿನ ಬಿಟ್ಟು ಉಳಿದ ದಿನಗಳಲ್ಲಿ ಅಸಂಭವವೆಂದಾದರೆ ಮಾತ್ರ ಎಂದು ಅಂಗೀಕರಿಸಬೇಕು. ಋತುಮತಿಯಾಗುವ ಮೊದಲು ಪತ್ನೀಸಂಗಮ ಮಾಡಿದರೆ ದೋಷವಿದೆ ಎಂದು ಹೇಳಲಾಗಿದೆ.

ಋತುಕಾಲದ ರಾತ್ರಿಗಳನ್ನು ಬಿಟ್ಟು ಉಳಿದ ರಾತ್ರಿ ಅಥವಾ ಹಗಲು, ಅಂತೆಯೇ ನಿಷಿದ್ಧ ಕಾಲಗಳಲ್ಲಿ ಋತುದಾನ ಮಾಡಿದರೆ ಗರ್ಭ ಉಳಿಯುವುದಿಲ್ಲ, ಒಂದು ವೇಳೆ ಗರ್ಭ ನಿಂತು ಸಂತಾನೋತ್ಪತ್ತಿಯಾದರೂ ಅಂತಹ ಸಂತಾನವು ದುರ್ಬಲ, ರೋಗಿ, ಮಂದಮತಿ, ಅಲ್ಪಾಯುಷಿ, ನಪುಂಸಕ ಇತ್ಯಾದಿಯಾಗಿರುತ್ತದೆ. ಆದ್ದರಿಂದ ಅಯೋಗ್ಯದಿನಗಳಲ್ಲಿ

Scanned by CamScanner

ಗರ್ಭಾಧಾನಗ್ರಹಬಲವಿಚಾರಃ- ಕೇಂದ್ರ ತ್ರಿಕೋಣಗೈಃ ೧-೪-೭-೧೦-೯-೫- ಸೌಮ್ಯೈಃ ಶಶಾಂಕೇ ಸಬಲಸ್ಥಿತೇ । ತ್ರಿಲಾಭಾರಿಗತೈಃ ಪಾಪೈಃ ೩-೧೧-೬-ಗರ್ಭಾಧಾನಂ ಸುತಪ್ರದಂ ॥

ಅಯೋಗ್ಯಕಾಲದಲ್ಲಿ ವೀರ್ಯಹಾನಿ ಮಾಡಿಕೊಂಡು ತಮ್ಮ ಜೀವಿತವನ್ನು ಕೆಡಿಸಿಕೊಳ್ಳಬಾರದು. ಅಂತೆಯೇ ದುರ್ಬಲ ಸಂತಾನವನ್ನೂ ಉಂಟುಮಾಡಬಾರದು.

ಗರ್ಭಾಧಾನಮುಹೂರ್ತನಿರ್ಣಯಃ- ಗರ್ಭಾಧಾನದಿಂದ ಅನ್ನಪ್ರಾಶನದವರೆಗಿನ ಸಂಸ್ಕಾರಗಳಿಗೆ ಅಧಿಕಮಾಸ, ಕ್ಷಯಮಾಸ, ಗುರು ಶುಕ್ರ ಅಸ್ತ ಇತ್ಯಾದಿ ದೋಷಗಳಿಲ್ಲ.

ಇದು ಮೊದಲಿನ ಋತುಕಾಲಕ್ಕೆ ಮಾತ್ರ ಅನ್ವಯಿಸುವ ವಿಷಯವಾಗಿದೆ. ಇತರ ಸಂದರ್ಭಗಳಲ್ಲಿ ದೋಷವಿದ್ದೇ ಇದೆ. ಈ ವಿಷಯದಲ್ಲಿ ವಸಿಷ್ಠರ ಅಭಿಪ್ರಾಯ ಹೀಗಿದೆ:- ವಿಹಿತಕಾಲದಲ್ಲಿ ಮಾಡದೆ ಕಾಲಾತೀತವಾದ ಸಂಸ್ಕಾರವನ್ನು ದಕ್ಷಿಣಾಯನ, ಗುರು ಶುಕ್ರರ ಅಸ್ತಮಾನಕಾಲ ಇತ್ಯಾದಿಗಳಿರುವ ಸಮಯದಲ್ಲಿ ಮಾಡದೆ, ಯಾವ ಸಂಸ್ಕಾರಕ್ಕೆ ಯಾವ ತಿಥಿ ನಕ್ಷತ್ರಾದಿಗಳು ಯೋಗ್ಯವೆಂದು ಹೇಳಲಾಗಿದೆಯೋ ಆ ದಿನಗಳಲ್ಲಿಯೇ ಮಾಡಬೇಕು. ಗರ್ಭಾಧಾನ ಸಂಸ್ಕಾರಕ್ಕೆ – ಷಷ್ಠೀ, ಅಷ್ಟಮೀ, ಪೂರ್ಣಿಮಾ, ಅಮಾವಾಸ್ಯಾ, ಚತುರ್ಥೀ, ಚತುರ್ದಶೀ ಇವುಗಳನ್ನು ಬಿಟ್ಟು ಉಳಿದ ತಿಥಿಗಳೂ; ಸೋಮ, ಗುರು, ಶುಕ್ರ, ಬುಧವಾರಗಳೂ; ಸ್ವಾತೀ, ಹಸ್ತಾ, ಅನುರಾಧಾ, ರೋಹಿಣೀ, ಶ್ರವಣಾ, ಧನಿಷ್ಠಾ, ಶತತಾರೆ ಮೂರು ಉತ್ತರಾ ಈ ನಕ್ಷತ್ರಗಳೂ ಶುಭವಾಗಿವೆ. ಚಿತ್ರಾ, ಪುನರ್ವಸು, ಪುಷ್ಯ, ಅಶ್ವಿನೀ-ಈ ನಕ್ಷತ್ರಗಳು ಮಧ್ಯಮ. ಜನ್ಮನಕ್ಷತ್ರ ಭರಣೀ, ಮೂಲಾ, ರೇವತೀ, ಮಘಾ ಇವುಗಳು ವರ್ಜ್ಯಗಳು. ಯಾವ ನಕ್ಷತ್ರದಲ್ಲಿ ಗರ್ಭಧಾರಣೆ ಆಗುತ್ತದೋ ಆ ನಕ್ಷತ್ರದಿಂದ ಹತ್ತನೆಯ ನಕ್ಷತ್ರದಲ್ಲಿ ಸಂತಾನೋತ್ಪತ್ತಿಯಾಗುತ್ತದೆ. ಆದ್ದರಿಂದ ಈ ಮೂರು ನಕ್ಷತ್ರಗಳು ವರ್ಜ್ಯವೆನಿಸಿವೆ. ಕೌಸ್ತುಭದಲ್ಲಿ ಜ್ಯೇಷ್ಠಾ ನಕ್ಷತ್ರವೂ ವರ್ಜ್ಯವೆಂದು ಹೇಳಲಾಗಿದೆ.

ಗರ್ಭಾಧಾನಕ್ಕೆ ಗ್ರಹಬಲಃ- ಗರ್ಭಾಧಾನ ಮಾಡುವ ಲಗ್ನದ ಕೇಂದ್ರಸ್ಥಾನದಲ್ಲಿ ಅಂದರೆ ೧-೪-೭-೧೦ ಹಾಗೆಯೇ ತ್ರಿಕೋಣದಲ್ಲಿ ಅಂದರೆ ೯-೫ ಸ್ಥಾನಗಳಲ್ಲಿ ಶುಕ್ರ, ಗುರು, ಮತ್ತು ಬುಧ ಗ್ರಹಗಳಿರಬೇಕು. ಚಂದ್ರಬಲ ಹಾಗೂ ಪಾಪಗ್ರಹಗಳಾದ ಮಂಗಳ, ರವಿ, ಶನಿ ಮತ್ತು ರಾಹು ಇವುಗಳು ೩-೧೧-೬ನೆಯ ಸ್ಥಾನದಲ್ಲಿದ್ದಾಗ ಗರ್ಭಾಧಾನ ಮಾಡಿದರೆ ಸತ್ಸಂತಾನ ಪ್ರಾಪ್ತಿಯಾಗುತ್ತದೆ.

Scanned by CamScanner

।। ವಂಧ್ಯಾಯಾಃ ಪುತ್ರವತೀಕರಣಂ ।।

ಮೂಲಂ ಶಿಖಾಯಾಃ ಖಲು ಲಕ್ಷಣಾಯಾಃ ಋತೌ
ನಿಪೀಯಂ ತ್ರಿದಿನಂ ಪಯೋಭಿಃ ।।
ಕ್ಷೀರಾನ್ನಚರ್ಯಾ ನಿಯಮೇನ ಭುಂಕ್ತೇ ಪುತ್ರಂ ಪ್ರಸೂತೇ
ವನಿತಾ ಚ ಚಿತ್ರಂ ।। ವಂಧ್ಯಾತಂತ್ರಂ ।।

ಸಂಸ್ಕೃತದಲ್ಲಿ 'ಗರ್ಭದಾ' ಎಂಬ ಹೆಸರಿರುವ ಬಿಳಿಯ ರಿಂಗಣಿಯ ಬೇರು ಮತ್ತು ಎಲೆಗಳನ್ನು ಬಿಳಿ ದನದ ಹಾಲಿನಲ್ಲಿ ಕುಟ್ಟಿ ಕಲಸಿ, ಋತುಮತಿಯಾದ ಸ್ತ್ರೀಯು 3 ದಿನಗಳಲ್ಲಿ ಕೆಲವು ತಿಂಗಳ ಕಾಲ ಸೇವಿಸಿದರೆ ಆಕೆಯು ಗರ್ಭಿಣಿಯಾಗುತ್ತಾಳೆ. ಈ ವನಸ್ಪತಿಯು ಗರ್ಭರಕ್ಷಣೆಮಾಡುವ ಶಕ್ತಿ ಉಳ್ಳದ್ದಾಗಿದೆ.

।। ಗರ್ಭಿಣೀ ಧರ್ಮಾಃ ।।

ಗರ್ಭಿಣೀ ಕುಂಜರಾಶ್ವಾದಿ ಶೈಲ ಹರ್ಮ್ಯಾಧಿರೋಹಣಂ ।
ವ್ಯಾಯಾಮಂ ಶೀಘ್ರಗಮನಂ ಶಕಟಾರೋಹಣಂ ತ್ಯಜೇತ್ ।।
ನ ಭಸ್ಮಾದಾವುಪವಿಶೇತ್ ಮುಸಲೋಲೂಖಲಾದಿಷು ।
ತ್ಯಜೇಜ್ಜಲಾವಗಾಹಂ ಚ ಶೂನ್ಯಂ ಸದ್ಮತರೋಸ್ತಲಂ ।।
ಕಲಹಂ ಗಾತ್ರಭಂಗಂ ಚ ತೀಕ್ಷ್ಣೋತ್ಕಟ್ವಾದಿಭಕ್ಷಣಂ ।
ಸಂಧ್ಯಾಯಾಮತಿಶೀತಾಮ್ಲಂ ಗುರ್ವಾಹಾರಂ ಪರಿತ್ಯಜೇತ್ ।।
ವ್ಯವಾಯಶೋಕಾಸೃಜ್ಮೋಕ್ಷಂ ದಿವಾಸ್ವಾಪನಿಶಿಸ್ಥಿತಿಃ ।।
ಭಸ್ಮಾಂಗಾರನಖೈರ್ಭೂಮಿಲೇಖನಂ ಶಯನಂ ಸದಾ ।।
ತ್ಯಜೇದಮಂಗಲಂ ವಾಕ್ಯಂ ನ ಚ ಹಾಸ್ಯಾಧಿಕಾ ಭವೇತ್ ।
ಪ್ರಶಸ್ತಮಂತ್ರಲಿಖನಾಚ್ಛಸ್ತಮಾಲ್ಯಾನುಲೇಪನಾತ್ ।
ವಿಶುದ್ಧಗೇಹವಸನಾದ್ದಾನೈಃ ಶ್ವಶ್ರ್ವಾದಿಪೂಜನೈಃ ।
ಹರಿದ್ರಾಕುಂಕುಮಂ ಚೈವ ಸಿಂದೂರಂ ಕಜ್ಜಲಂ ತಥಾ ।।
ಕೇಶಸಂಸ್ಕಾರತಾಂಬೂಲಂ ಮಾಂಗಲ್ಯಾಭರಣಂ ಶುಭಂ ।।
ಯಾತ್ರಾಂ ವಿವರ್ಜಯೇನ್ನಿತ್ಯಮಾಷಷ್ಠಾತ್ತು ವಿಶೇಷತಃ ।।

ಗರ್ಭಿಣಿಯು ಅನುಸರಿಸಬೇಕಾದ ನಿಯಮಗಳು:- ಗರ್ಭಿಣಿಯಾದ ಸ್ತ್ರೀಯು ಆನೆ, ಕುದರೆ, ಪರ್ವತ, ಮಾಳಿಗೆ ಇತ್ಯಾದಿಗಳನ್ನು ಹತ್ತಬಾರದು. ಮಿತಿಮೀರಿದ ವ್ಯಾಯಾಮ, ಓಡುವುದು, ಗಾಡಿಯಲ್ಲಿ ಕುಳಿತು ಪ್ರಯಾಣಮಾಡುವುದು ಮುಂತಾದವುಗಳನ್ನು ಬಿಡಬೇಕು. ಬೂದಿ ಇರುವ ಸ್ಥಳ, ಒನಕೆ, ಒರಳು ಇವುಗಳ ಮೇಲೆ ಕುಳಿತುಕೊಳ್ಳಬಾರದು. ನೀರಿನಲ್ಲಿ ಮುಳುಗಿ ಸ್ನಾನಮಾಡಬಾರದು, ಜನವಸತಿಯಿಲ್ಲದ ಮನೆಯಲ್ಲಿ, ಮರದ ತಳದಲ್ಲಿ ಕುಳಿತು

Scanned by CamScanner

Scanned with CamScanner

ಕೊಳ್ಳಬಾರದು. ಜಗಳಾಡುವುದು, ಮೈಮುರಿದು ಕೆಲಸ ಮಾಡುವುದು, ಅತ್ಯಂತ ಖಾರ ಹಾಗೂ ಬಿಸಿಯಾದ ಆಹಾರ ಪಾನೀಯಗಳನ್ನು ಸೇವಿಸುವುದು, ಸಂಧ್ಯಾಕಾಲಗಳಲ್ಲಿ ಆಹಾರವನ್ನು ತೆಕ್ಕೊಳ್ಳುವುದು, ಅತಿಶೀತ, ತುಂಬ ಹುಳಿ, ಹಾಗೂ ಗಟ್ಟಿಯಾದ ಪದಾರ್ಥಗಳನ್ನು ತಿನ್ನುವುದು ಮುಂತಾದುವುಗಳನ್ನು ಬಿಡಬೇಕು. ಸಂಭೋಗವನ್ನು ವರ್ಜಿಸಬೇಕು. ಬಹಳ ದುಃಖಿಸಬಾರದು. ರಕ್ತಸ್ರಾವ ಆಗದಂತೆ ಎಚ್ಚರವಹಿಸಬೇಕು. ಹಗಲು ನಿದ್ರೆ, ರಾತ್ರಿ ಜಾಗರಣೆ ಇವೆರಡೂ ಕೂಡದು. ಬೂದಿ, ಕೆಂಡ, ಉಗುರು ಮುಂತಾದವುಗಳಿಂದ ನೆಲದ ಮೇಲೆ ಬರೆಯಬಾರದು. ಯಾವಾಗಲೂ ನಿದ್ದೆಮಾಡುತ್ತಿರಬಾರದು. ಅಮಂಗಲಕರವಾದ ಕೆಟ್ಟಮಾತುಗಳನ್ನು ಆಡಬಾರದು. ಹೆಚ್ಚು ನಗಾಡಬಾರದು. ಒಳ್ಳೆಯ ಮಂತ್ರಾದಿಗಳನ್ನು ಬರೆಯುವುದು, ಸುಗಂಧವುಳ್ಳ ಹೂಮಾಲೆ ಗಂಧ ಮುಂತಾದವುಗಳನ್ನು ಮೂಸಿನೋಡುವುದು, ಶುಚಿಯಾಗಿರುವ ಮನೆಯಲ್ಲಿ ವಾಸಿಸುವುದು, ದಾನಧರ್ಮಗಳನ್ನು ಮಾಡುವುದು, ಅತ್ತೆ-ಮಾವಂದಿರ ಸೇವೆಮಾಡುವುದು, ಮುಂತಾದ ಒಳ್ಳೆಯ ಕೆಲಸಗಳನ್ನು ಮಾಡುತ್ತಿರಬೇಕು. ಅರಸಿನ, ಕುಂಕುಮ, ಸಿಂದೂರ, ಕಾಡಿಗೆ ಮತ್ತು ಎಣ್ಣೆಹಾಕಿ ಸ್ನಾನಮಾಡುವುದು, ಹೆರಳುಹಾಕಿಕೊಳ್ಳುವುದು, ತಾಂಬೂಲಸೇವನೆ, ಸೌಭಾಗ್ಯಲಕ್ಷಣವುಳ್ಳ ಆಭರಣಗಳನ್ನು ತೊಡುವುದು ಇತ್ಯಾದಿ ಕೆಲಸಗಳು ಶುಭಪ್ರದವಾಗಿರುತ್ತವೆ. ಆರನೆಯ ತಿಂಗಳು ಕಳೆದ ಮೇಲೆ ನಿತ್ಯಪ್ರಯಾಣವನ್ನು ಸಂಪೂರ್ಣವಾಗಿ ವರ್ಜಿಸಬೇಕು.

।। ಗರ್ಭಿಣೀಪತಿಧರ್ಮಾಃ ।।

ಗರ್ಭಿಣೀವಾಂಛಿತಂ ದ್ರವ್ಯಂ ತಸ್ಮೈ ದದ್ಯಾತ್ ಯಥೋಚಿತಂ ।
ದೌಹೃದಸ್ಯಾಪ್ರದಾನೇನ ಗರ್ಭೋದೋಷಮವಾಪ್ನುಯಾತ್ ।।
ವೈರೂಪ್ಯಂ ಮರಣಂ ವಾಪಿ ತಸ್ಮಾತ್ಕಾರ್ಯಂ ಪ್ರಿಯಂ ಸ್ತ್ರಿಯಃ ।
ಸಿಂಧುಸ್ನಾನಂ ದ್ರುಮಚ್ಛೇದಂ ವಪನಂ ಪ್ರೇತವಾಹನಂ ।।
ವಿದೇಶಗಮನಂ ಚೈವ ನ ಕುರ್ಯಾದ್ಗರ್ಭಿಣೀಪತಿಃ ।
ವಪನಂ ಮೈಥುನಂ ತೀರ್ಥಶ್ರಾದ್ಧಭೋಜನಮೇವ ಚ ।।
ವರ್ಜಯೇತ್ ಸಪ್ತಮಾನ್ಮಾಸಾತ್ ನಾವ ಆರೋಹಣಂ ತಥಾ ।
ಯುದ್ಧಾದಿ ವಾಸ್ತುಕರಣಂ ನಖಕೇಶವಿಕರ್ತನಂ ।
ಚೌಲಂ ಶವಾನುಗಮನಂ ವಿವಾಹಂ ಚ ವಿವರ್ಜಯೇತ್ ।
ಮಂಡನಂ ಪಿಂಡದಾನಂ ಚ ಪ್ರೇತಕರ್ಮ ಚ ಸರ್ವಶಃ ।।
ನ ಜೀವತ್ಪಿತೃಕಃ ಕುಯಾದ್ಗರ್ಭಿಣೀಪತಿರೇವ ಚ ।।

ಗರ್ಭಿಣಿಯ ಪತಿಯು ಅನುಸರಿಸಬೇಕಾದ ನಿಯಮಗಳು:– ಗರ್ಭಿಣಿಗೆ ಉಂಟಾಗುವ ಬಯಕೆಗಳನ್ನು ತಿಳಿದು ಅವುಗಳನ್ನು ಸರಿಯಾಗಿ ಆಯಾ ಕಾಲಕ್ಕೆ ಒದಗಿಸಿ ಪೂರಯಿಸಬೇಕು. ಗರ್ಭಿಣಿಯ ಬಯಕೆಗಳನ್ನು ಈಡೇರಿಸದಿದ್ದರೆ, ಹುಟ್ಟುವ ಮಗುವಿಗೆ ಅಂಗವೈಕಲ್ಯವುಂಟಾಗಬಹುದು ಅಥವಾ ಗರ್ಭವೇ ನಾಶವಾದರೂ ಆಗಬಹುದು. ಸಮುದ್ರ ಸ್ನಾನ, ಮರಕಡಿಯು

Scanned by CamScanner

ವುದು, ಕ್ಷೌರ, ಹೆಣ ಹೊರುವುದು, ಪರದೇಶ ಯಾತ್ರೆ ಮುಂತಾದುವುಗಳನ್ನು ಗರ್ಭಿಣೀಪತಿಯು ವರ್ಜಿಸಬೇಕು. ಕ್ಷೌರ, ಮೈಥುನ, ತೀರ್ಥಯಾತ್ರೆ, ಶ್ರಾದ್ಧಭೋಜನ, ನೌಕಾಯಾನ ಇತ್ಯಾದಿಗಳನ್ನು ತ್ಯಜಿಸಬೇಕು. ಏಳನೆಯ ತಿಂಗಳಾದ ಮೇಲೆ ಯುದ್ಧ, ಮನೆಕಟ್ಟುವುದು, ಉಗುರು, ಕೂದಲು ಮುಂತಾದುವುಗಳನ್ನು ಕತ್ತರಿಸುವುದು, ಪ್ರೇತದ ಸಂಗಡ ಹೋಗುವುದು, ಪಿಂಡದಾನ, ಪ್ರೇತಕ್ರಿಯೆ ಮುಂತಾದವುಗಳನ್ನೂ ಮಾಡಕೂಡದು.

॥ ಸುಖಪ್ರಸವೋಪಾಯಃ ॥

ಪಾರಸ್ಕರ ಗೃಹ್ಯಸೂತ್ರ ಕಾ.೧. ಕ.೧೬. ಸೂತ್ರ ೧. ಸೋಷ್ಯಂತೀಮದ್ಭಿರಭ್ಯುಕ್ಷತಿ ... ॥ ಪ್ರಸವಪ್ರತಿಬಂಧೇ ಋಗ್ವಿಧಾನೇ ವಿಜಿಹೀಷ್ವೇತಿ ಸೂಕ್ತಂ ಜಪೇತ್ । ಏತೇನ ಮಾರ್ಜಯೇತ್ ಅಭಿಮಂತ್ರಿತಂ ಜಲಂ ವಾ ಪಾಯಯೇತ್ ॥ ತೇನ ಸುಖಪ್ರಸವಃ ॥

ವಿಜಿಷ್ವೇತಿ ಸೂಕ್ತಸ್ಯ ಸಪ್ತವಧ್ರಿರಾತ್ರೇಯಃ ಅಶ್ವಿನೌ ಅನುಷ್ಟುಪ್ ॥ ಸುಖ ಪ್ರಸೂತ್ಯೈ ವಿನಿಯೋಗಃ ॥ ಓಂ ವಿಜಿಹೀಷ್ವ ವನಸ್ಪತೇ ಯೋನಿಃ ಸೂಷ್ಯಂತ್ಯಾ ಇವ ॥ ಶ್ರುತಂ ಮೇ ಆಶಿನಾಹವಂ ಸಪ್ತಂಧ್ರಿಂ ಚ ಮುಂಚತಂ ॥ ೧ ॥ ಭೀತಾಯ ನಾಧಮಾನಾಯ ಋಷಯೇ ಸಪ್ತವಧ್ರಯೇ ॥ ಮಾಯಾಭಿರಾಶ್ವಿನಾ ಯುವಂ ವೃಕ್ಷಂ ಸಂಚವಿಜಾಚಥಃ ॥ ೨ ॥ ಯಥಾವಾತಃ ಪುಷ್ಕರಿಣೀಂ ಸಮಿಂಗಯತಿ ಸರ್ವತಃ ॥ ಏವಾ ತೇ ಗರ್ಭ ಯಜತು ನಿರೈತು ದಶಮಾಸ್ಯಃ ॥ ೩ ॥ ಯಥಾವಾತೋ ಯಥಾವನಂ ಯಥಾ ಸಮುದ್ರ ಏಜತಿ ॥ ಏವಾ ತ್ವಂ ದಶಮಾಸ್ಯಃ ಸಹಾವೇಹಿ ಜರಾಯುಣಾ ॥ ೪ ॥ ದಶಮಾಸಾನ್ ಛಶಯಾನಃ ಕುಮಾರೋ ಅಧಿ ಮಾತರಿ ॥ ನಿರೈತು ಜೀವೋ ಜೀವಂತ್ಯಾ ಅಧಿ ॥ ೫ ॥

ಸುಖಪ್ರಸಮಂತ್ರಸ್ತು ॥ ಹಿಮವತ್ಯುತ್ತರೇ ಪಾರ್ಶ್ವೇ ಸುರಥಾ ನಾಮ ಯಕ್ಷಿಣೀ । ತಸ್ಯಾಃ ಸ್ಮರಣಮಾತ್ರೇಣ ವಿಶಲ್ಯಾ ಗರ್ಭಿಣೀ ಭವೇತ್ ॥ ಓಂ ಕ್ಷೀಂ ಸ್ವಾಹಾ ॥ ಇತಿ ಮಂತ್ರೇಣ ದೂರ್ವಾಂಕುರೇಣ ತಿಲತೈಲಶತಂ ಸಹಸ್ರಂ ವಾ ಅಭಿಮಂತ್ರ್ಯ ಕಿಂಚಿತ್ಪಾಯಯೇತ್ ॥ ಕಿಂಚನ್ಮಾತ್ರಸ್ಯ ಗರ್ಭಲೇಪಶ್ಚ ॥ ಸಮ್ಯಕ್ ಲೇಪೇ ಶೀಘ್ರಸುಖಪ್ರಸವಃ ॥ ವಂಶನಿಂಬಯೋಃ ತ್ವಕ್ ತುಲಸೀಮೂಲಂ ಕಪಿತ್ಥಪತ್ರಂ ಕರವೀರಬೀಜಂ ಚ ಸಮಭಾಗಂ ಮಹಿಷೀದುಗ್ಧೇನ ಪೇಷಯಿತ್ವಾ ತೇನ ಸತ್ತೈಲೇನೇ ಯೋನಿಲೇಪೇ ಸದ್ಯಃ ಪ್ರಸವಃ ॥

ಸೂತಿಕಾಗೃಹಂ ನೈಋತೇ ಕಾರ್ಯಮಿತಿ ವಸಿಷ್ಠೋಕ್ತಿಃ ॥ ದಶಾಹಂ ಸೂತಿಕಾಗಾರಮಾಯುಧೈಶ್ಚ ವಿಶೇಷತಃ । ವಹ್ನಿನಾತಿಂದುಕಾಲಾತ್ಯೈಃ ಪೂರ್ಣ

Scanned by CamScanner

ಕುಂಭ್ಯೈಃ ಪ್ರದೀಪಕ್ಯೈಃ । ಮುಸಲೇನ ತಥಾ ವಾರಿವರ್ಣಕೈಶ್ಚಿತ್ರಿತೇನ ಚೇತಿ ವಿಷ್ಣುಧರ್ಮೇ ॥

ಸುಖಪ್ರಸವೋಪಾಯಃ- ಗರ್ಭಿಣಿಗೆ ಪ್ರಸವವೇದನೆ ಪ್ರಾರಂಭವಾಗಿ ಹೆರಿಗೆ ಕಷ್ಟವಾದರೆ, ಪತಿಯು ಸ್ನಾನಮಾಡಿ ಪವಿತ್ರ ಸ್ಥಳದಲ್ಲಿ ಕುಳಿತು ತಟ್ಟೆಯಲ್ಲಿ ನೀರುಹಾಕಿ ಅದರಲ್ಲಿ ದರ್ಭೆಗಳನ್ನಿಟ್ಟು **"ವಿಜಿಹೀಷ್ವ"** ಎಂಬ ಸೂಕ್ತವನ್ನು ಜಪಿಸಿ ದರ್ಭೆಗಳಿಂದ ಆ ನೀರನ್ನು ಗರ್ಭಿಣಿಯ ಮೇಲೆ ಪ್ರೋಕ್ಷಿಸಬೇಕು. ಅಥವಾ **"ಹಿಮವತ್ಯುತ್ತರೇ ... ಸ್ವಾಹಾ"** ಈ ಮಂತ್ರದಿಂದ ದೂರ್ವೆಯಿಂದ ಎಳ್ಳೆಣ್ಣೆಯನ್ನು ನೂರು ಅಥವಾ ಸಾವಿರಸಲ ಅಭಿಮಂತ್ರಿಸಿ ಆ ಎಣ್ಣೆಯನ್ನು ಸ್ವಲ್ಪ ಗರ್ಭಿಣಿಗೆ ಕುಡಿಸಬೇಕು. ಸ್ವಲ್ಪ ಗರ್ಭಕ್ಕೆ ಲೇಪಿಸಬೇಕು. ಅಂತೆಯೇ ಬಿದಿರು ಮತ್ತು ಬೇವಿನ ತೊಗಟೆ, ತುಳಸಿಯ ಬೇರು, ಬೆಳವಲ ಗಿಡದ ಎಲೆ, ಕಣಗಿಲದ ಬೀಜ ಇವನ್ನು ಸಮತೂಕದಷ್ಟು ಎಮ್ಮೆಯ ಹಾಲಿನಲ್ಲಿ ಅರೆದು ಎಳ್ಳೆಣ್ಣೆಯನ್ನು ಕಲಸಿ ಯೋನಿಗೆ ಲೇಪಿಸಬೇಕು. ಈ ಉಪಾಯಗಳಿಂದ ಸುಖಪ್ರಸವ ವಾಗುತ್ತದೆ. ಪ್ರಸೂತಿಗೃಹ ನೈಋತ್ಯದಿಕ್ಕಿಗೆ ಇರಬೇಕು. ಅದರಲ್ಲಿ ಶಸ್ತ್ರ, ಅಗ್ನಿ, ಉರಿಯುವ ಕಟ್ಟಿಗೆ, ನೀರು ತುಂಬಿದ ಕೊಡ, ಒನಕೆ, ನೀರು ಇತ್ಯಾದಿಗಳು ಇರಬೇಕು. ರಂಗೋಲಿಯನ್ನೂ ಹಾಕಿರಬೇಕು.

॥ ಪುಂಸವನಾನವಲೋಭನಸೀಮಂತೋನ್ನಯನ ಸಂಸ್ಕಾರಾಣಾಂ ನಿರ್ಣಯಃ ॥

ಪುಂಸವನಂ:- ಪುಮಾನ್ ಸೂಯತೇ ಯಸ್ಮಾತ್ ಇತಿ ಪುಂಸವನಂ ॥ ತಚ್ಚ ವ್ಯಕ್ತೇ ಗರ್ಭೇ ದ್ವಿತೀಯೇ ಚತುರ್ಥೇ ಷಷ್ಠೇ ಅಷ್ಟಮೇ ವಾ ಮಾಸೇ ಸೀಮಂತೇನ ಸಹ ವಾ ಕಾರ್ಯಂ ॥

ಮೂಲಾದಿತ್ರಿತಯೇ ಕರೇ ಶ್ರವಣಕೇ ಭಾದ್ರದ್ವಯಾದ್ರಾತ್ರಯೇ
ರೇವತ್ಯಾಂ ಮೃಗಪಂಚಕೇ ದಿನಕರಾರೇಜ್ಯೇಷ್ವರಿಕ್ತಾತಿಥೌ ।
ನೇತ್ರೇಮಾಸ್ಯಥವಾಗ್ನಿಮಾಸಿ ಧನುಷಿ ಸ್ತ್ರೀಮೀನಯೋಶ್ಚಸ್ಥಿರೇ
ಲಗ್ನೇ ಪುಂಸವನೇ ತಥೈವ ಶುಭದಂ ಸೀಮಂತಕರ್ಮಾಷ್ಟಮೇ ॥

ಪುಂಸವನೋಕ್ತಾನ್ಯೇವತಂತ್ರೇ ॥ ಆಪೂರ್ಯಮಾಣಪಕ್ಷೇ ಯದಾ ಪುಂಸಾ ನಕ್ಷತ್ರೇಣ ಚಂದ್ರಮಾ ಯುಕ್ತಃ ಸ್ಯಾತ್ ॥ ಅತ್ರ ನಿಯತಕಾಲತ್ವಾತ್ ಗುರು ಶುಕ್ರಾಸ್ತಬಾಲ್ಯವಾರ್ಧಕ್ಯಮಲಮಾಸಾದಿಷ್ವಪಿ ನ ದೋಷಃ ॥

Scanned by CamScanner

ಪುಂಸವನ ಅನವಲೋಭನ ಸೀಮಂತೋನ್ನಯನ ಸಂಸ್ಕಾರಗಳ ನಿರ್ಣಯ.

ಪುಂಸವನ:- ಪುಮಾನ್ ಅಂದರೆ ವೀರ್ಯವಾನ್, ಬಲವಾನ್ ಸಂತತಿ ಯಾವ ಸಂಸ್ಕಾರದಿಂದ ಉಂಟಾಗುತ್ತದೋ ಅದು ಪುಂಸವನ. ಗರ್ಭದ ಸ್ಪಷ್ಟಜ್ಞಾನವಾದ ನಂತರ ಎರಡು, ನಾಲ್ಕು, ಆರು, ಎಂಟನೆಯ ತಿಂಗಳಲ್ಲಿ ಅಥವಾ ಸೀಮಂತೋನ್ನಯನ ಸಂಸ್ಕಾರದ ಜತೆಗೆ ಈ ಸಂಸ್ಕಾರವನ್ನು ಮಾಡಬೇಕು. ನಕ್ಷತ್ರಗಳಲ್ಲಿ ಮೂಲಾ, ಹಸ್ತಾ, ಶ್ರವಣಾ, ಪೂರ್ವಾಭಾದ್ರಾ, ಉತ್ತರಾಭಾದ್ರಾ, ಪುನರ್ವಸು, ಪುಷ್ಯ, ಮೃಗಶಿರಾ, ಅಶ್ವಿನೀ, ಪೂರ್ವಾಷಾಢಾ, ಉತ್ತರಾಷಾಢಾ, ಆರ್ದ್ರಾ, ಸ್ವಾತಿ, ಅನುರಾಧಾ, ಭರಣಿ, ಕೃತ್ತಿಕಾ, ರೋಹಿಣೀ; ವಾರಗಳಲ್ಲಿ ರವಿ, ಮಂಗಳ, ಗುರು; ತಿಥಿಗಳಲ್ಲಿ ೪, ೯, ೧೪, ೩೦ ಈ ರಿಕ್ತತಿಥಿಗಳನ್ನು ಬಿಟ್ಟು ಉಳಿದ ತಿಥಿಗಳಲ್ಲಿ ಮತ್ತು ಗರ್ಭಧಾರಣಾನಂತರ ಎರಡನೆಯ ಅಥವಾ ಮೂರನೆಯ ತಿಂಗಳು ಧನು, ಕನ್ಯಾ, ಮೀನಮಾಸಗಳು ಹಾಗೂ ಸ್ಥಿರಲಗ್ನ ಪುಂಸವನಕ್ಕೆ ಯೋಗ್ಯವಾದವು. ಇವೇ ತಿಥಿ, ವಾರ, ನಕ್ಷತ್ರಗಳು ಅನವಲೋಭನ ಸೀಮಂತೋನ್ನಯನ ಸಂಸ್ಕಾರಗಳಿಗೂ ಯೋಗ್ಯವಾಗಿವೆ. ಈ ಸಂಸ್ಕಾರಗಳಿಗೆ ವಿಶೇಷವಾಗಿ ಶುಕ್ಲಪಕ್ಷವಿದ್ದು ಚಂದ್ರನು ಪುರುಷನಕ್ಷತ್ರಗಳಲ್ಲಿ (ಕೃಷ್ಣಪಂಚಮಿ ವರೆಗೆ) ಇರಬೇಕು. ಸ್ತ್ರೀಸಂಜ್ಞಕ ನಕ್ಷತ್ರಗಳಲ್ಲಿ ಜಲವನ್ನು ಹೆಚ್ಚಾಗಿ ಉಂಟುಮಾಡುವ ಶಕ್ತಿಯೂ ಪುರುಷಸಂಜ್ಞಕ ನಕ್ಷತ್ರಗಳಲ್ಲಿ ಸೂರ್ಯನಂತೆ ತೇಜಸ್ಸನ್ನು ಉಂಟುಮಾಡುವ ಶಕ್ತಿಯೂ ಇರುತ್ತದೆ. ಈ ಸಂಸ್ಕಾರಗಳನ್ನು ನಿಯತಕಾಲದಲ್ಲೇ ಮಾಡಬೇಕಾದ್ದರಿಂದ ಇವುಗಳಿಗೆ ಗುರು, ಶುಕ್ರಾಸ್ತ, ಬಾಲ್ಯ, ವಾರ್ಧಕ್ಯ, ಮಲಮಾಸ ಮೊದಲಾದ ದೋಷಗಳಿಲ್ಲ.

ಅನವಲೋಭನಂ:- ನ ಅವಲೋಭನಂ ಅನವಲೋಭನಂ ॥ ಗರ್ಭಸಂಸ್ಕಾರತ್ವಾತ್ ಪುಂಸವನಾನವಲೋಭನಯೋಸ್ತು ಪ್ರಥಮಗರ್ಭೇ ಅನುಷ್ಠಾನೇಪಿ ಪ್ರತಿ ಗರ್ಭಂ ಕಾರ್ಯೇ ॥ ಪುಂಸವನೇ ಪತಿಃ ಕರ್ತಾ ॥ ತದಭಾವೇ ದೇವರಾದಿಃ ॥ ಅನವಲೋಭನಸಂಸ್ಕಾರಃ ಬಹ್ವೃಚಾನಾಮೇವ ವರ್ತತೇ ನಾನ್ಯೇಷಾಂ ॥

ಸೀಮಂತೋನ್ನಯನಂ:- ಸೀಮಂತಸ್ಯ ಉನ್ನಯನಂ, ಉದ್ಭಾವನಂ ಇತಿ ಸೀಮಂತೋನ್ನಯನಂ ॥ ಪಂಚ ಸಂಧಯಃ ಶಿರಸಿ ವಿಭಕ್ತಾಃ ಸೀಮಂತಾಃ ತತ್ರಾಘಾತೇನೋನ್ಮಾದಭಯಚೇಷ್ಟಾನಾಶೈರ್ಮರಣಂ ॥ ಯಾದೃಶಂ ಭಜತೇ ಹಿ ಸ್ತ್ರೀ ಸುತಂ ಸೂತೇ ತಥಾವಿಧಂ । ತಸ್ಮಾತ್ಪ್ರಜಾವಿಶುದ್ಧ್ಯರ್ಥಂ ಸ್ತ್ರಿಯಂ ರಕ್ಷೇತ್ಪ್ರಯತ್ನತಃ ॥ ಮನುಃ ॥

ಏತಚ್ಚತುರ್ಥೇ ಅಷ್ಟಮೇ ಷಷ್ಠೇ ಪಂಚಮೇ ಮಾಸಿ ವಾ ವಿಹಿತಂ ॥ ನವಮೇ ಮಾಸಿ ವಾ ಕುರ್ಯಾತ್ ॥ ಯಾವದ್ಗರ್ಭವಿಮೋಚನಂ ಸ್ತ್ರೀ ಯದ್ಯಕೃತ-ಸೀಮಂತಾ ಪ್ರಸೂಯೇತ ಕದಾಚನ ॥ ಗೃಹೀತಪುತ್ರಾ ವಿಧಿವತ್ಸಾ ತಂ ಸಂಸ್ಕಾರಮರ್ಹತಿ ॥

ತಲೆಯ ಮೇಲಿರುವ ಪಂಚಸಂಧಿಗೆ **"ಸೀಮಂತ"** ಎಂದು ಹೆಸರು ಅದರ ಉನ್ನಯನ ಅಂದರೆ ವೃದ್ಧೀಕರಣ ಅಥವಾ ರಕ್ಷಣಾ ಈ ಸಂಸ್ಕಾರದ ಪ್ರಧಾನ ಉದ್ದೇಶ. ಸೀಮಂತವು

Scanned by CamScanner

Scanned with CamScanner

ಮಾನಸಿಕ ಶಕ್ತಿಯ ಕೇಂದ್ರವಾಗಿದೆ. ಅದರ ಆಘಾತವಾದರೆ ಮನುಷ್ಯನು ಮೂರ್ಛಿತನಾಗುತ್ತಾನೆ. ಗರ್ಭವತಿಯಾದ ಸ್ತ್ರೀಯ ಮಾನಸಿಕ ವಿಚಾರ, ಆಚಾರ, ಆಹಾರ ಮುಂತಾದವುಗಳ ಪ್ರಭಾವವು ಗರ್ಭಸ್ಥ ಬಾಲಕನ ಮೇಲೆ ಬೀಳುತ್ತದೆ. ಮುಂದೆ ಹುಟ್ಟುವ ಶಿಶುವು ಶಾರೀರಿಕ, ಮಾನಸಿಕ ಹಾಗೂ ಬೌದ್ಧಿಕ ವಿಚಾರಗಳಲ್ಲಿ ಸರ್ವಾಂಗಪೂರ್ಣವಾಗಿರಬೇಕೆಂದು ಬಯಸುವುದಾದರೆ, ಗರ್ಭಿಣಿಯ ಶಾರೀರಿಕ, ಮಾನಸಿಕ ಹಾಗೂ ಬೌದ್ಧಿಕ ಸ್ಥಿತಿಯು ಉತ್ತಮವಾಗಿರುವಂತೆ ನಾವು ಎಚ್ಚರಿಕೆ ವಹಿಸಬೇಕು. ಬಾಲಕನು ದೃಢಮನಸ್ಕ, ತೇಜಸ್ವಿ, ಈಶ್ವರಭಕ್ತ, ಶಾಸ್ತ್ರವೇತ್ತ, ವಿದ್ಯಾವಿನಯಸಂಪನ್ನ ಇತ್ಯಾದಿ ಯಾವುದೇ ಸ್ವರೂಪವುಳ್ಳವನಾಗಿರಬೇಕೆಂದು ನಾವು ಬಯಸುವೆವೋ ಅದೇ ರೀತಿಯ ಸಂಸ್ಕಾರವನ್ನು ಗರ್ಭಿಣಿಯಾದ ಸ್ತ್ರೀಗೆ ನಾವು ಒದಗಿಸಿ ಕೊಡಬೇಕು. ಗರ್ಭಿಣಿಯು ಮುಂದೆ ಜನಿಸುವ ಬಾಲಕನ ಮೇಲೆ ಸರ್ವವಿಧದ ಪರಿಣಾಮವನ್ನು ಬೀರುವ ಸಮರ್ಥ ಸಾಧನವಾಗಿರುತ್ತಾಳೆ. ಸೀಮಂತೋನ್ನಯನ ಸಂಸ್ಕಾರದಿಂದ ಗರ್ಭವತಿಯ ಮಾನಸಿಕ ಶಕ್ತಿಯ ಮೇಲೆ ಪರಿಣಾಮವುಂಟಾಗುವುದರಿಂದ ಇದು ಅತ್ಯಂತ ಪ್ರಭಾವಶಾಲಿಯಾದ ಸಂಸ್ಕಾರವಾಗಿರುತ್ತದೆ. ಈ ಸಂಸ್ಕಾರವನ್ನು ४, ६, ೬, ೮, ೯ನೆಯ ತಿಂಗಳುಗಳಲ್ಲಿ ಮಾಡಬಹುದು.

"ಅವಲೋಭನ" ಎಂದರೆ ಪತನ. ಗರ್ಭಪತನವಾಗದಂತೆ ಎಚ್ಚರವಹಿಸುವುದೇ ಅನವಲೋಭನ ಸಂಸ್ಕಾರದ ಉದ್ದೇಶ. ಪುಂಸವನ ಮತ್ತು ಅನವಲೋಭನ ಸಂಸ್ಕಾರಗಳನ್ನು ಪ್ರತಿಗರ್ಭಕ್ಕೂ ಮಾಡುವುದು ಒಳ್ಳೇದು.

॥ ಜಾತಕರ್ಮಸಂಸ್ಕಾರನಿರ್ಣಯಃ ॥

ಪ್ರಾಙ್ನಾಭಿವರ್ಧನಾತ್ಪುಂಸೋ ಜಾತಕರ್ಮ ವಿಧೀಯತೇ ।
ಕಾಲಾತಿಕ್ರಮಣೇ ಕಾರ್ಯಂ ಶುಭೇ ವಾರೇ ಶುಭೇ ತಿಥೌ ॥
ಮೃದುಧ್ರುವಚರಕ್ಷಿಪ್ರಭೇಷು ಚಂದ್ರಬಲಾನ್ವಿತೇ ।
ಮಂತ್ರವತ್ಪ್ರಾಶನಂ ಚಾಸ್ಯ ಹಿರಣ್ಯಮಧುಸರ್ಪಿಷಾಂ ॥ ಮನುಃ ॥
ಜಾತಮಾತ್ರಕುಮಾರಸ್ಯ ಮುಖಮಸ್ಯಾವಲೋಕಯನ್ ।
ಪಿತಾ ಋಣಾದಿ ಮುಚ್ಯಂತೇ ಪುತ್ರಸ್ಯ ಮುಖದರ್ಶನಾತ್ ॥
ಪುತ್ರೇ ಜಾತೇ ಪಿತಾ ತಸ್ಮಿನ್ ಸಚೈಲಂ ಸ್ನಾನಮಾಚರೇತ್ ।
ಉತ್ತರಾಭಿಮುಖೋ ಭೂತ್ವಾ ನದ್ಯಾಂ ವಾ ದೇವಖಾತಕಂ ॥ ವಸಿಷ್ಠಃ ॥
ತದಸಂಭವೇ ಗೃಹೇ ಆನೀತಾಭಿಃ ಶೀತಾಭಿಃ ಸ್ವರ್ಣಯುತಾಭಿರದ್ಭಿಃ ಸ್ನಾಯಾತ್ ॥
ಏತತ್ ಸ್ನಾನಂ ರಾತ್ರಾವಪಿ ಕಾರ್ಯಂ ॥
ರಾತ್ರೌ ತಟಾಕಾದಿಗಮನಾಶಕ್ತೌ ವಿಶೇಷಮಾಹ ॥ ಸಾಂಖ್ಯಾಯನಃ ॥
ದಿವಾ ಯದಾ ಹೃದಾ ತೋಯಂ ಕೃತ್ವಾ ಸ್ವರ್ಣಯುತಂ ನರಃ ।
ರಾತ್ರಿಸ್ನಾನೇ ತು ಸಂಪ್ರಾಪ್ತೇ ಸ್ನಾಯಾದನಲಸನ್ನಿಧೌ ॥

Scanned by CamScanner

ಅತ್ರ ನಾಂದೀಶ್ರಾದ್ಧಂ ಹಿರಣ್ಯೇನ ಕಾರ್ಯಂ ॥
ಪುತ್ರಜನ್ಮನಿ ಕುರ್ವೀತ ಶ್ರಾದ್ಧಂ ಹೇಮ್ನೈವ ಬುದ್ಧಿಮಾನ್ ।
ನ ಪಕ್ವೇನ ನ ಚಾಮೇನ ಕಲ್ಯಾಣಾಭ್ಯಭಿಕಾಮಯನ್ ॥
ಅತ್ರ ಪ್ರಥಮ ಷಷ್ಠ ದಶಮದಿನೇಷು ದಾನಪ್ರತಿಗ್ರಹಾದಿ ನ ದೋಷಃ ॥
ಪ್ರಥಮೇ ದಿವಸೇ ಷಷ್ಠೇ ದಶಮೇ ಚೈವ ಸರ್ವದಾ ।
ಅತ್ರ ಶೌಚಂ ನ ಕುರ್ವೀತ ಸೂತಕಂ ಪುತ್ರಜನ್ಮನಿ ॥
ಏವಂ ಪಂಚಮದಿನೇಪಿ ॥ ಜನ್ಮಕಾಲೇ ಕುಯೋಗೋಸ್ತಿ ತದಾ
ನಾಮಕರಣೇ ಸರ್ವಂ ಕಾರ್ಯಂ ॥

ಜಾತಕರ್ಮಸಂಸ್ಕಾರದ ನಿರ್ಣಯ:- ಜಾತಕರ್ಮ ಸಂಸ್ಕಾರದ ಕುರಿತು ಮನು ಹೀಗೆ ಹೇಳುತ್ತಾನೆ. ಮಗು ಹುಟ್ಟಿದ ಒಡನೆಯೇ ಹೊಕ್ಕಳಬಳ್ಳಿಯನ್ನು ಕತ್ತರಿಸುವ ಮೊದಲು ಈ ಸಂಸ್ಕಾರವನ್ನು ಮಾಡಬೇಕು. ಆಗ ಸಾಧ್ಯವಾಗದಿದ್ದರೆ, ಶುಭಮುಹೂರ್ತವನ್ನು ನೋಡಿ, ಮೃಗಶಿರಾ, ಚಿತ್ರಾ, ರೇವತಿ, ಅನುರಾಧಾ, ಶ್ರವಣಾ, ಸ್ವಾತಿ ಶತಭಿಷಾ, ಧನಿಷ್ಠಾ, ರೋಹಿಣೀ, ಉತ್ತರಾ, ಅಶ್ವಿನೀ, ಹಸ್ತಾ, ಪುಷ್ಯ ಈ ನಕ್ಷತ್ರಗಳಲ್ಲಿ ಚಂದ್ರಬಲವನ್ನು ನೋಡಿ ಮಾಡಬೇಕು. ಗರ್ಭಾಶಯದಲ್ಲಿರುವಾಗ ಉಂಟಾಗಬಹುದಾದ ಮಾಲಿನ್ಯವನ್ನು ದೂರಮಾಡಿ ಮಗುವಿಗೆ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವುಂಟಾಗಿ ಆಯುಷ್ಯಾಭಿವೃದ್ಧಿಯಾಗುವಂತೆ ಮಾಡುವುದೇ ಈ ಸಂಸ್ಕಾರದ ಪ್ರಧಾನ ಉದ್ದೇಶವಾಗಿದೆ. ಸ್ವಲ್ಪ ಬಂಗಾರ, ಜೇನು, ತುಪ್ಪ ಇವುಗಳನ್ನು ಕಲಸಿ ಮಂತ್ರೋಚ್ಚಾರದೊಂದಿಗೆ ಕುಡಿಸಬೇಕು. ಬಾಲಕನ ಹೃದಯದಲ್ಲಿ ಆಸ್ತಿಕ್ಯಬುದ್ಧಿಯು ಉಂಟಾಗ ಬೇಕೆಂದು ಆತನ ಎಡಬಲಕಿವಿಗಳಲ್ಲಿ ಮಂತ್ರಶ್ರವಣಮಾಡಿಸುತ್ತಾರೆ. ಆಯುರ್ವೃದ್ಧಿಯಾಗುವಂತೆ ಹವನವನ್ನೂ ಮಾಡಬಹುದು.

ಪುತ್ರಮುಖದರ್ಶನದಿಂದ ತಂದೆಯಾದವನು ಪಿತೃಋಣದಿಂದ ಮುಕ್ತನಾಗುತ್ತಾನೆ. ಪುತ್ರ ಜನನವಾದೊಡನೆಯೇ ತಂದೆಯು ನದೀ ತಟಾಕಾದಿಗಳಲ್ಲಿ ಸ್ನಾನಮಾಡಬೇಕು. ಅದು ಅಸಾಧ್ಯವಾದರೆ ಮನೆಯಲ್ಲೇ ಆದರೂ ತಣ್ಣೀರಿನಲ್ಲಿ ಸ್ನಾನಮಾಡಬೇಕು. ಪುತ್ರಜನನಸಂಬಂಧಿ ಯಾಗಿ ಮಾಡುವ ನಾಂದೀಶ್ರಾದ್ಧವನ್ನು ಪಕ್ವಾನ್ನ ಅಥವಾ ಆಮಾನ್ನದಿಂದ ಮಾಡದೆ ದ್ರವ್ಯದ ಮೂಲಕವೇ ಮಾಡಬೇಕು. ಈ ಸಂಬಂಧವಾಗಿ ಮಾಡುವ ದಾನಾದಿಗಳಿಗೆ ಅಶೌಚದ ದೋಷವಿಲ್ಲ, ಜನನಕಾಲದಲ್ಲಿ ಯಾವುದಾದರೂ ದುರ್ಯೋಗವಿದ್ದರೆ, ಜಾತಕರ್ಮ-ನಾಮಕರಣ ಸಂಸ್ಕಾರದೊಂದಿಗೆ ಅದರ ಪರಿಹಾರಕರ್ಮವನ್ನು ಮಾಡಬೇಕು.

॥ ಜನನಶಾಂತಿವಿಚಾರಃ ॥

ಜನ್ಮಕಾಲೇಪಿ ವಿಷ್ಟಿ ವೈಧೃತಿ ವ್ಯತೀಪಾತ ಚಂದ್ರಸೂರ್ಯಗ್ರಹಣಸಂಕ್ರಾಂತಿ ಅಮಾ ಶ್ರಾದ್ಧದಿನೇ ಕ್ಷಯದಿನೇ ಚ ಪಿತುಃ ಜನ್ಮಮಾಸಿ ಜನ್ಮದಿವಸೇ ಜನ್ಮನಕ್ಷತ್ರೇ ಚ ಅಶ್ವಿನೀ ಆಶ್ಲೇಷಾಮಘಾಮೂಲರೇವತೀಪುಷ್ಯಜ್ಯೇಷ್ಠಾ ನಕ್ಷತ್ರೇಷು ಚ ಪುತ್ರತ್ರ-

Scanned by CamScanner
Scanned with CamScanner

ಯೋಪರಿ ಕನ್ಯಾತ್ರಯೋಪರಿ ಕನ್ಯಾಪುತ್ರಜಾತಶ್ಚೇತ್ತದಾ ಯಥೋಕ್ತಾಂ ಶಾಂತಿಂ ಭುವನೇಶ್ವರೀಶಾಂತಿವತ್ ಕೃತ್ವಾ ತದಾ ಪುತ್ರಮುಖಂ ನಿರೀಕ್ಷೇತ ಆದೌ ನ ನಿರೀಕ್ಷೇತ ||

ಜನನಶಾಂತಿ ವಿಚಾರ:- ಜನ್ಮಕಾಲದಲ್ಲಿ ಭದ್ರಾ, ವೈಧೃತಿ, ವ್ಯತೀಪಾತ, ಚಂದ್ರ ಸೂರ್ಯಗ್ರಹಣ, ಸಂಕ್ರಾಂತಿ, ಅಮಾವಾಸ್ಯೆ ಮೊದಲನೆಯ ಪ್ರಹರ ಹಾಗೂ ಕೊನೆಯ ಎರಡು ಪ್ರಹರ, ದರ್ಶ, ಶ್ರಾದ್ಧದಿವಸ, ವೃದ್ಧಿದಿವಸ, ದಿನಕ್ಷಯ, ಯಮಘಂಟಾಯೋಗ, ದಗ್ಧಯೋಗ, ಮೃತ್ಯುಯೋಗ, ವಿಷ್ಕಂಭ ಮತ್ತು ವಜ್ರ ಇವುಗಳ ಮೊದಲನೆಯ ೩/೩ ಘಳಿಗೆಗಳು, ಗಂಡ ಹಾಗೂ ಅತಿಗಂಡ ಇವುಗಳ ೬/೬ ಘಳಿಗೆಗಳು, ಪರೀಘದ ಅರ್ಧ, ಶೂಲದ ೫ ಘಳಿಗೆಗಳು, ವ್ಯಾಘಾತದ ೯ ಘಳಿಗೆಗಳು, ಚತುರ್ಥಿಯ ೮, ಷಷ್ಠಿಯ ೯, ಅಷ್ಟಮಿಯ ೧೪, ದ್ವಾದಶಿಯ ೧೦, ಚತುರ್ದಶಿಯ ೫ ಘಳಿಗೆಗಳು, ತಂದೆ ಹಾಗೂ ಅಣ್ಣ ಇವರ ಜನ್ಮಮಾಸ, ನಕ್ಷತ್ರ ಹಾಗೂ ತಿಥಿ ಇವುಗಳಲ್ಲಿ ಜನ್ಮವಾಗಿದ್ದರೆ; ಅಶ್ವಿನೀ ಮಘಾ ಇವುಗಳ ಮೊದಲನೆಯ ೨/೨ ಘಳಿಗೆಗಳು, ರೇವತಿಯ ಕೊನೆಯ ೨ ಘಳಿಗೆಗಳು, ಚಿತ್ರಾ ನಕ್ಷತ್ರದ ಮೂರನೆಯ ಪಾದ, ಉತ್ತರಾದ ಮೊದಲನೆಯ ಪಾದ, ವಿಶಾಖಾದ ನಾಲ್ಕನೆಯ ಚರಮ, ಜ್ಯೇಷ್ಠಾ, ಆಶ್ಲೇಷಾ, ಮೂಲಾ, ಕೃಷ್ಣ ಚತುರ್ದಶೀ ತಿಥಿಗಂಡಾಂತ (ಪಂಚಮೀ, ಷಷ್ಠೀ, ದಶಮೀ, ಏಕಾದಶೀ, ಪೂರ್ಣಿಮಾ ಅಥವಾ ಅಮಾವಾಸ್ಯಾ ಪ್ರತಿಪದಾತಿಥಿಯ ಸಂಧಿಯ ೨ ಘಳಿಗೆಗಳು) ಲಗ್ನಗಂಡಾಂತ (ಕರ್ಕ, ಸಿಂಹ, ವೃಶ್ಚಿಕ, ಧನು, ಮೀನ, ಮೇಷ ಈ ಲಗ್ನದ ಸಂಧಿಯ ಒಂದು ಘಳಿಗೆ) ವಿಷಘಳಿಗೆ, ಅವಳಿಜವಳಿ ಜನನ, ಮೂರು ಗಂಡು ಮಕ್ಕಳಾದ ಮೇಲೆ ನಾಲ್ಕನೆಯದು ಹೆಣ್ಣಾಗುವುದು, ಮೂರು ಹೆಣ್ಣುಮಕ್ಕಳಾದ ಮೇಲೆ ನಾಲ್ಕನೆಯದು ಗಂಡಾಗುವುದು, ಹಲ್ಲುಸಹಿತ ಹುಟ್ಟುವುದು. ವಿಪರೀತ ಉತ್ಪತ್ತಿ, ಈ ರೀತಿ ಜನ್ಮವಾಗಿದ್ದರೆ ಆಯಾ ಯೋಗದ ಬಗ್ಗೆ ಧರ್ಮಸಿಂಧುವಿನಲ್ಲಿ ಹೇಳಿದಂತೆ ಯಥಾವಿಧಿ ಹನ್ನೊಂದನೆಯ ಅಥವಾ ಹನ್ನೆರಡನೆಯ ದಿನ ಶಾಂತಿಮಾಡಿದ ಮೇಲೆ ಪುತ್ರಮುಖದರ್ಶನ ಮಾಡಬೇಕು; ಮೊದಲು ಕೂಡದು.

|| ಕನ್ಯಾಸಂಸ್ಕಾರವಿಚಾರಃ ||

ಕುಮಾರ್ಯಾ ಅಪಿ ಜಾತಕರ್ಮಾದಿಸಂಸ್ಕಾರಾಃ ಚೌಲಾಂತಾಃ ಸರ್ವೇ ಅಮಂತ್ರಕಂ ಕಾರ್ಯಾಃ || ವಿವಾಹಸ್ತು ಸಮಂತ್ರಕಃ || ಅತಃ ಕನ್ಯಾಯಾಃ ಜಾತಕರ್ಮಾದಿ ಸಂಸ್ಕಾರಲೋಪೇ ತತ್ತತ್ಕಾಲೇ ವಿವಾಹಕಾಲೇ ವಾ ಪ್ರಾಯಶ್ಚಿತ್ತಂ ಕೃತ್ವಾ ವಿವಾಹಃ ಕಾರ್ಯಃ ||

ಕನ್ಯೆಯ ಸಂಸ್ಕಾರವಿಚಾರ:- ಹೆಣ್ಣುಮಕ್ಕಳಿಗೂ ಜಾತಕರ್ಮದಿಂದ ಮೊದಲ್ಗೊಂಡು ಚೌಲದ ವರೆಗೆ ಎಲ್ಲ ಸಂಸ್ಕಾರಗಳನ್ನೂ ಮಂತ್ರರಹಿತವಾಗಿ ಮಾಡಬೇಕು. ವಿವಾಹಸಂಸ್ಕಾರವನ್ನು ಮಾತ್ರ ಮಂತ್ರಸಹಿತ ಮಾಡಬೇಕು. ಈ ಸಂಸ್ಕಾರಗಳನ್ನು ಸಕಾಲದಲ್ಲಿ ಮಾಡದಿದ್ದರೆ, ಮುಂದೆ ಯಾವುದೇ ಸಂಸ್ಕಾರ ಮಾಡುವಾಗ, ಅಥವಾ ವಿವಾಹ ಕಾಲದಲ್ಲಿ ಪೂರ್ವಸಂಸ್ಕಾರಗಳ ಪ್ರಾಯಶ್ಚಿತ್ತ ಮಾಡಬೇಕು.

Scanned by CamScanner

॥ ನಾಮಕರಣಸಂಸ್ಕಾರನಿರ್ಣಯಃ ॥

ಆಶ್ವಲಾಯನಗೃಹ್ಯಸೂತ್ರೇ ಅ. ೧. ಖಂ. ೧೫-ನಾಮಚಾಸ್ಮೈದದ್ಯುಃ ॥ "ಘೋಷವದಾದ್ಯಂತರಸ್ಥಮಭಿನಿಷ್ಠಾನಾಂತಂ ದ್ವ್ಯಕ್ಷರಂ ಚತುರಕ್ಷರಂ ವಾ ಯುಗ್ಮಾನೀತ್ಯೇವ ಪುಂಸಾಂ ॥ ಅಯುಜಾನಿ ಸ್ತ್ರೀಣಾಂ ॥

ಜನ್ಮತ ಏಕಾದಶೇ ದ್ವಾದಶೇ ವಾ ಯಥಾಚಾರಂ ನಿಯತದಿನೇ ವಾ ನಾಮಕರಣಂ ಕಾರ್ಯಂ ॥ ನಿಯತಕಾಲೇಪಿ ವಿಷ್ಟಿವೈಧೃತಿವ್ಯತೀಪಾತಗ್ರಹಣ-ಸಂಕ್ರಾಂತ್ಯಮಾವಾಸ್ಯಾ ಶ್ರಾದ್ಧದಿನೇಷು ನ ಕಾರ್ಯಂ ॥ ನಿಯತಕಾಲೇ ಕ್ರಿಯಮಾಣೇ ಗುರುಶುಕ್ರಾಸ್ತಬಾಲ್ಯವಾರ್ಧಕ ವಕ್ರಾತಿಚಾರಮಲಮಾಸಾದಿ ನಿಷೇಧೋ-ನಾಸ್ತಿ ॥ ನಿಯತಕಾಲಾತಿಕ್ರಮೇತು ಜ್ಯೋತಿಃಶಾಸ್ತ್ರೋಕ್ತಶುಭೇ ಕಾಲೇ ಕಾರ್ಯಂ ॥ ಸರ್ವಥಾತ್ರ ಪೂರ್ವಾಹ್ಣಃ ಪ್ರಶಸ್ತಃ ॥

ಪುಷ್ಯಾರ್ಕತ್ರಯಮೈತ್ರಭೇಷು ಮೃಗಭೇಜ್ಯೇಷ್ಠಾಧನಿಷ್ಠೋತ್ತರಾ-
ದಿತ್ಯಾಖ್ಯೇಷು ಚ ನಾಮಕರ್ಮ ಶುಭದೇ ಯೋಗೇ ಪ್ರಶಸ್ತೇ ತಿಥೌ ॥
ಅಹ್ನಿದ್ವಾದಶಕೇ ತಥಾನ್ಯದಿವಸೇ ಶಸ್ತಂ ತಥೈಕಾದಶೇ
ಗೋಸಿಂಹಾಲಿಘಟೇಷು ಹ್ಯರ್ಕ ಬುಧಯೋರ್ಜೀವೇ ಶಶಾಂಕೇಷು ಚ ॥

ನಾಮಕರಣಸಂಸ್ಕಾರನಿರ್ಣಯ:- ವೈಯಕ್ತಿಕ ಪರಿಚಯಕ್ಕೋಸ್ಕರ ಮಗುವಿಗೆ ಗಂಭೀರವೂ, ಸುಂದರವೂ, ಉಚ್ಚಾರಸುಲಭವೂ ಆದ ಹೆಸರನ್ನಿಡಬೇಕು. ಹೆಸರಿನ ಪ್ರಭಾವದಿಂದ ಅದಕ್ಕೆ ಮುಂದೆ ಬುದ್ಧಿ, ಶಾರೀರಬಲ, ವಿದ್ಯೆ, ಸದ್ಗುಣ, ಸದಾಚಾರ ಇತ್ಯಾದಿಗಳು ಲಭಿಸಬೇಕು. ಅದಕ್ಕಾಗಿಯೇ ಭಗವಂತನನ್ನು ಧ್ಯಾನಿಸಿ ವಿಧಿಪ್ರಕಾರ ಹೆಸರಿಡುವ ಸಂಸ್ಕಾರಕ್ಕೆ "ನಾಮಕರಣ" ಎಂದು ಹೇಳುತ್ತಾರೆ. ಹೆಸರನ್ನಿಡುವ ಸಾಮಾನ್ಯ ನಿಯಮ ಈ ಪ್ರಕಾರವಾಗಿದೆ. ಹೆಸರಿನ ಆರಂಭದ ಅಕ್ಷರವು ಮೃದುವರ್ಣವಾಗಿರಬೇಕು. ಯ ರ ಲ ವ ಈ ವರ್ಣಗಳಲ್ಲಿ ಯಾವುದಾದರೊಂದು ಮಧ್ಯದ ಅಕ್ಷರವಾಗಿರಬೇಕು. ಕೊನೆಯ ಅಕ್ಷರವು ದೀರ್ಘ ಅಥವಾ ವಿಸರ್ಗದಿಂದ ಕೂಡಿರಬೇಕು. ಗಂಡುಮಕ್ಕಳಿಗೆ ಎರಡು ನಾಲ್ಕು ಮುಂತಾಗಿ ಯುಗ್ಮ ಅಕ್ಷರಗಳಿರುವ ಹೆಸರುಗಳೂ, ಹೆಣ್ಣುಮಕ್ಕಳಿಗೆ ಅಯುಗ್ಮ ಅಕ್ಷರಗಳುಳ್ಳ ಹೆಸರುಗಳೂ ಪ್ರಶಸ್ತವಾಗಿವೆ. ಆರಂಭದ ಅಕ್ಷರವು ಒತ್ತಕ್ಷರವಾಗಿರುವುದು ಒಳ್ಳೆಯದಲ್ಲ. ಯಾವುದಾದರೂ ವಸ್ತು ಅಥವಾ ಪಶುಪಕ್ಷಿಗಳ ಹೆಸರನ್ನು ಸ್ತ್ರೀಯರಿಗೆ ಇಡಬಾರದು.

ಹುಟ್ಟಿದ ೧೧, ೧೨, ೧೦೧ನೆಯ ದಿನ ಅಥವಾ ಎರಡನೆಯ ವರ್ಷದ ಮೊದಲ ದಿನ ನಾಮಕರಣಮಾಡಬೇಕು. ಅದೇ ದಿನ ಭದ್ರಾ, ವೈಧೃತೀ ವ್ಯತೀಪಾತ, ಗ್ರಹಣ, ಸಂಕ್ರಾಂತಿ, ಅಮಾವಾಸ್ಯೆ, ಶ್ರಾದ್ಧದಿನ ಮುಂತಾದ ಯಾವುದಾದರೂ ದೋಷವಿದ್ದರೆ ಕೂಡದು. ಆದರೆ

Scanned by CamScanner
Scanned with CamScanner

ಅಧಿಕಮಾಸ, ಗುರುಶುಕ್ರಮೌಢ್ಯ ಇತ್ಯಾದಿಗಳಲ್ಲಿ ನಾಮಕರಣಕ್ಕೆ ದೋಷವಿಲ್ಲ. ನಿಯತವಾದ ದಿನವಲ್ಲಿ ಸಾಧ್ಯವಾಗದಿದ್ದರೆ ಜೋಯಿಸರಲ್ಲಿ ಒಳ್ಳೇ ಮುಹೂರ್ತವನ್ನು ತಿಳಿದು ಮಾಡಬೇಕು. ನಾಮಕರಣ ಸಂಸ್ಕಾರಕ್ಕೆ ಪ್ರಾತಃಕಾಲ ಒಳ್ಳೇದು. ಪುಷ್ಯ, ಹಸ್ತಾ, ಚಿತ್ರಾ, ಸ್ವಾತಿ, ಅನುರಾಧಾ, ಮೃಗಶಿರಾ, ಜ್ಯೇಷ್ಠಾ ಮೂರು ಉತ್ತರಾ, ಈ ನಕ್ಷತ್ರಗಳೂ ವೃಷಭ, ಸಿಂಹ, ಕುಂಭ, ವೃಶ್ಚಿಕ ಈ ಲಗ್ನಗಳೂ ನಾಮಕರಣಕ್ಕೆ ಪ್ರಶಸ್ತವಾಗಿವೆ. ರಿಕ್ತ ತಿಥಿಗಳನ್ನೂ ದುಷ್ಟಯೋಗಗಳನ್ನೂ ವರ್ಜಿಸಬೇಕು.

॥ ಆಂದೋಲಾರೋಹಣಂ ॥

ಆಂದೋಲಾಶಯನೇ ಪುಂಸೋ ದ್ವಾದಶೋ ದಿವಸಃ ಶುಭಃ ।
ತ್ರಯೋದಶಸ್ತು ಕನ್ಯಾಯಾಃ ನ ನಕ್ಷತ್ರವಿಚಾರಣಾ ॥
ಅನ್ಯಸ್ಮಿನ್ ದಿವಸೇ ಚೇತ್ಸ್ಯಾಚ್ಛುಭಕಾಲಂ ವಿಚಾರಯೇತ್ ।

ಯಥಾಚಾರಂ ಕುಲದೇವತಾದಿ ಪೂಜಾಂ ವಿಧಾಯ ತತಃ ಅಲಂಕೃತಂ ಶಿಶುಂ ಹರಿದ್ರಾದಿನಾಲಂಕೃತೇ ಪರ್ಯಂಕೇ ಮಾತ್ರಾದ್ಯಾಃ ಸೌಭಾಗ್ಯಯುಕ್ತಾಃ ಸ್ತ್ರಿಯಃ ಯೋಗಶಾಯಿನಂ ಹರಿಂ ಸ್ಮರಂತ್ಯಃ ಗೀತವಾದ್ಯಾದಿಸಮಕಾಲೇ ಪ್ರಾಕ್‌ಶಿರಸಂ ನ್ಯಸೇಯುಃ ॥ ಸ್ವಸ್ಯ ಆಚಾರಪ್ರಾಪ್ತಂ ಚ ಅನ್ಯದಪಿ ಕಾರ್ಯಂ ॥ ಸ್ತ್ರೀಣಾಂ ಸೌಭಾಗ್ಯದ್ರವ್ಯಾಣಿ ದೇಯಾನಿ ॥

ಮಗುವನ್ನು ತೊಟ್ಟಲಿನಲ್ಲಿ ಇಡುವುದು:- ಗಂಡುಮಗುವಿಗೆ ಹನ್ನೆರಡನೆಯ ದಿನವೂ, ಹೆಣ್ಣುಮಗುವಿಗೆ ಹದಿಮೂರನೆಯ ದಿನವೂ ಯೋಗ್ಯವಾಗಿದೆ. ಆ ದಿನದ ನಕ್ಷತ್ರವನ್ನು ಪರಿಗಣಿಸಬೇಕಾಗಿಲ್ಲ. ಶುಭಕಾಲವನ್ನು ನೋಡಿಕೊಂಡರೆ ಸಾಕು. ಕುಲಾಚಾರದಂತೆ ಕುಲದೇವತಾ ಪೂಜೆಯನ್ನು ಮಾಡಿ ಶೃಂಗರಿಸಿದ ಮಗುವನ್ನು ಹರಿದ್ರಾದಿಗಳಿಂದ ಅಲಂಕರಿಸಿದ ತೊಟ್ಟಿಲಿನಲ್ಲಿ, ಯೋಗಶಾಯಿಯಾದ ವಿಷ್ಣುವನ್ನು ಧ್ಯಾನಿಸುತ್ತ ತಾಯಿಯೇ ಮುಂತಾಗಿ ಸುಮಂಗಲೆಯರು ಮಲಗಿಸಬೇಕು. ಸ್ತ್ರೀಯರಿಗೆ ಮಂಗಲದ್ರವ್ಯಗಳನ್ನು ಕೊಡಬೇಕು.

॥ ಕರ್ಣವೇಧಸಂಸ್ಕಾರ ॥

ಸುಶ್ರುತಸೂತ್ರಸ್ಥಾನೇ ೧೬ ಅಧ್ಯಾಯೇ - ರಕ್ಷಾಭೂಷಣನಿಮಿತ್ತಂ
ಬಾಲಸ್ಯ ಕರ್ಣೌ ವಿಧ್ಯೇತ್ ॥ ಜ್ಯೋತಿರ್ನಿಬಂಧೇ-
ಮಾಸೇ ಷಷ್ಠೇ ಸಪ್ತಮೇ ವಾಪ್ಯಷ್ಟಮೇ ಮಾಸಿ ವತ್ಸರೇ ।
ಕರ್ಣವೇಧಂ ಪ್ರಶಂಸಂತಿ ಪುಷ್ಟ್ಯಾಯುಃ ಶ್ರೀವಿವರ್ಧಯೇ ॥

Scanned by CamScanner

ವೇಧ್ಯೌ ಕರ್ಣೌ ಶುಭೇ ವಾರೇ ಜಯಾಪೂರ್ಣಾತಿಥಿಷ್ವಪಿ ।
ಕರ್ಣವೇಧಃ ಶಿಶೋಃ ಪ್ರೋಕ್ತಃ ಪುನರ್ವಸುಧನಿಷ್ಠಯೋಃ ॥
ಮೃಗಪುಷ್ಯಾಶ್ವಿನೀಹಸ್ತ ಶ್ರವಣೇಷೂತ್ತರಾತ್ರಯೇ ॥
ಶುಕ್ಲಪಕ್ಷಃ ಶುಭಃ ಪ್ರೋಕ್ತೋ ಜನ್ಮಮಾಸೋ ನಿಷೇಧಿತಃ ॥
ಭದ್ರಾಯಾಂ ವಿಷ್ಣುಶಯನೇ ಕರ್ಣವೇಧೋ ವಿವರ್ಜಯೇತ್ ।
ದಶಮೇ ದ್ವಾದಶೇ ವಾಹ್ನಿ ಷೋಡಶೇ ಕರ್ಣವೇಧನಂ ॥

ಜ್ಯೋತಿಃ ಶಾಸ್ತ್ರೋಕ್ತ ಶುಭೇ ದಿನೇ ವಿಷ್ಣುರುದ್ರಬ್ರಹ್ಮಸೂರ್ಯಚಂದ್ರದಿಕ್ಪಾಲ ನಾಸತ್ಯಸರಸ್ವತೀ ಗೋಬ್ರಾಹ್ಮಣ ಗುರುಪೂಜಾಂ ಕೃತ್ವಾ ಅಲಕ್ತಕರಸಾಂಕಿತಂ ಕರ್ಣಂ ಪುಂಸಃ ಪೂರ್ವಂ ದಕ್ಷಿಣಂ ವಿಧ್ಯೇತ್ ಪಶ್ಚಾದ್ವಾಮಂ ॥

ಸ್ತ್ರೀಣಾಂ ಪೂರ್ವಂ ವಾಮಂ ॥
ಸೌವರ್ಣೀ ರಾಜಪುತ್ರಸ್ಯ ರಾಜತೀ ವಿಪ್ರವೈಶ್ಯಯೋಃ ।
ಶೂದ್ರಸ್ಯ ಚಾಯಸೀ ಸೂಚೀ ಬಾಲಕಾಷ್ಟಾಂಗುಲಾ ಮತಾ ॥
ಕರ್ಣರಂಧ್ರೇ ರವೇಶ್ಛಾಯಾ ಪ್ರವಿಶೇದ್ವರ್ಧಯೇತ್ತಥಾ ।
ಅನ್ಯಥಾ ದರ್ಶನೇ ತಸ್ಯ ಪೂರ್ವಪುಣ್ಯವಿನಾಶನಂ ॥

ಕಿವಿಚುಚ್ಚುವುದು:- ಸುಶ್ರುತ ಸೂತ್ರದಲ್ಲಿ "ಮಗುವಿನ ರಕ್ಷಣೆ ಹಾಗೂ ಭೂಷಣವನ್ನು ತೊಡುವುದಕ್ಕಾಗಿ ಕಿವಿಗಳನ್ನು ಚುಚ್ಚಬೇಕು" ಎಂದು ಹೇಳಲಾಗಿದೆ. ಜ್ಯೋತಿರ್ನಿಬಂಧದಲ್ಲಿ-ಪುಷ್ಟಿ, ಆಯುಸ್ಸು ಮತ್ತು ಸಂಪತ್ತು ವೃದ್ಧಿಯಾಗುವುದಕ್ಕೋಸ್ಕರ ಆರನೆಯ, ಏಳನೆಯ ಅಥವಾ ಎಂಟನೆಯ ತಿಂಗಳಲ್ಲಿ ಇಲ್ಲವೇ ವರ್ಷ ಕಳೆದಾಗ ಶುಭವಾರದಲ್ಲಿ ತೃತೀಯಾ, ಅಷ್ಟಮೀ, ತ್ರಯೋದಶೀ, ಪಂಚಮೀ, ದಶಮೀ, ಪೂರ್ಣಿಮಾ ಮುಂತಾದ ತಿಥಿಗಳಲ್ಲಿ, ಪುನರ್ವಸು, ಧನಿಷ್ಠಾ, ಮೃಗಶಿರಾ, ಪುಷ್ಯಾ, ಅಶ್ವಿನೀ, ಹಸ್ತಾ, ಶ್ರವಣಾ, ಉತ್ತರಾ ಈ ನಕ್ಷತ್ರಗಳಲ್ಲಿ ಶುಕ್ಲಪಕ್ಷದಲ್ಲಿ ಕಿವಿಚುಚ್ಚುವ ಸಂಸ್ಕಾರವನ್ನು ಮಾಡಬೇಕು. ಜನ್ಮಮಾಸ, ಭದ್ರಾ, ಚಾತುರ್ಮಾಸ ಇವುಗಳನ್ನು ವರ್ಜಿಸಬೇಕು. ಜನ್ಮದಿನದಿಂದ ಹತ್ತನೆಯ, ಹನ್ನೆರಡನೆಯ ಅಥವಾ ಹದಿನಾರನೆಯ ದಿನ ಕರ್ಣವೇಧವನ್ನು ಮಾಡುವುದು ಒಳ್ಳೆಯದು. ಜ್ಯೋತಿಃಶಾಸ್ತ್ರದಲ್ಲಿ ಹೇಳಿದ ಒಳ್ಳೆಯ ದಿನ ವಿಷ್ಣು, ರುದ್ರ, ಬ್ರಹ್ಮಾ, ಸೂರ್ಯ, ಚಂದ್ರ, ದಿಕ್ಪಾಲ, ಅಶ್ವಿನೀದೇವತೆಗಳು, ಸರಸ್ವತಿ, ಗೋವು, ಬ್ರಾಹ್ಮಣ, ಗುರು ಮುಂತಾದವರನ್ನು ಪೂಜಿಸಿ, ಚುಚ್ಚುವ ಸ್ಥಾನವನ್ನು ಅರಗಿನ ರಸದಿಂದ ಗುರುತಿಸಿ ಗಂಡು ಮಗುವಿನ ಬಲಕಿವಿಯನ್ನೂ, ಹೆಣ್ಣುಮಗುವಿನ ಎಡಕಿವಿಯನ್ನೂ ಮೊದಲು ಚುಚ್ಚಬೇಕು. ಕ್ಷತ್ರಿಯರಿಗೆ ಚಿನ್ನ, ಬ್ರಾಹ್ಮಣ, ವೈಶ್ಯರಿಗೆ ಬೆಳ್ಳಿ, ಶೂದ್ರರಿಗೆ ಕಬ್ಬಿಣದ ಸೂಜಿಯನ್ನು ಉಪಯೋಗಿಸಬೇಕು. ಕರ್ಣರಂಧ್ರವು ಸೂರ್ಯಕಿರಣವು ಹಾದುಹೋಗುವಷ್ಟಿರಬೇಕು.

॥ ಅನ್ನಪ್ರಾಶನಸಂಸ್ಕಾರನಿರ್ಣಯಃ ॥

ಆಶ್ವಲಾಯನಗೃಹ್ಯಸೂತ್ರೇ ಅ. ೧. ಖಂ. ೧೬. ಸೂ. ೧-೪-೫:- ಷಷ್ಠೇ ಮಾಸ್ಯನ್ನಪ್ರಾಶನಂ ॥ ಘೃತೌದನಂ ತೇಜಸ್ಕಾಮಃ ॥ ದಧಿಮಧುಘೃತಮಿಶ್ರಿತಮನ್ನಂ

Scanned by CamScanner

Scanned with CamScanner

ಪ್ರಾಶಯೇತ್ ॥ ಸುಶ್ರುತೇ ಶಾರೀರಸ್ಥಾನೇ ಅ. ೧೧. ಸೂ ೬೪. ಷಣ್ಮಾಸಂಚೈನಮನ್ನಂ ಪ್ರಾಶಯೇತ್ ಲಘು ಹಿತಂ ಚ ॥ ನಿತ್ಯಮವರೋಧತಾಸ್ಯಾತ್ಕೃತರಕ್ಷ ಉಪಸರ್ಗಭಯಾತ್ ॥ ಪ್ರಯತ್ನತಶ್ಚ ಗ್ರಹೋಪಸರ್ಗೇಭ್ಯೋ ರಕ್ಷ್ಯಾ ಬಾಲಾ ಭವಂತಿ ॥ ಷಷ್ಠೇ ಅಷ್ಟಮೇ ದಶಮೇ ದ್ವಾದಶೇ ವಾ ಮಾಸೇ ಪೂರ್ಣೇ ವತ್ಸರೇ ವಾ ಪುಂಸೋನ್ನಪ್ರಾಶನಂ ಪಂಚಮ ಸಪ್ತಮ ನವಮ ಮಾಸೇಷು ಸ್ತ್ರೀಣಾಂ ॥ ದ್ವಿತೀಯಾ ಚ ತೃತೀಯಾ ಚ ಪಂಚಮೀ ಸಪ್ತಮೀ ತಥಾ ॥ ತ್ರಯೋದಶೀ ಚ ದಶಮೀ ಪ್ರಾಶನೇ ತಿಥಯಃ ಶುಭಾಃ ॥ ಬುಧಶುಕ್ರಗುರುವಾಸರಾಃ ಶುಭಾಃ ॥ ರವಿಚಂದ್ರವಾರೌ ಕ್ವಚಿತ್ ॥ ಅಶ್ವಿನೀರೋಹಿಣೀಮೃಗಪುನರ್ವಸು ಪುಷ್ಯೋತ್ತರಾತ್ರಯಹಸ್ತಚಿತ್ರಾಸ್ವಾತ್ಯನುರಾಧಾಶ್ರವಣಧನಿಷ್ಠಾ ಶತತಾರಕಾ ರೇವತ್ಯಃ ಶುಭಾಃ ॥ ಜನ್ಮನಕ್ಷತ್ರಂ ಶುಭಮಿತಿ ಕೇಚಿತ್ ॥ ಭದ್ರಾವೈಧೃತಿವ್ಯತೀಪಾತಗಂಡವಜ್ರಶೂಲಪರಿಘಾಃ ವರ್ಜ್ಯಾಃ ॥

ಅನ್ನಪ್ರಾಶನಸಂಸ್ಕಾರನಿರ್ಣಯಃ- ಆರನೆಯ ತಿಂಗಳಲ್ಲಿ ಅನ್ನಪ್ರಾಶನ ಮಾಡಬೇಕು. ಚೆನ್ನಾಗಿ ಪುಷ್ಟಿಯಾಗಿ ಬೆಳೆದ ಮಗುವಿಗೆ ಆರನೆಯ ತಿಂಗಳಲ್ಲಿ ಅನ್ನವು ಜೀರ್ಣವಾಗುವಷ್ಟು ಪಚನಶಕ್ತಿ ಬರುತ್ತದೆ. ಮಗುವು ದುರ್ಬಲವಾಗಿದ್ದರೆ ಎಂಟು ಅಥವಾ ಒಂಭತ್ತನೆಯ ತಿಂಗಳಲ್ಲಿ ಅನ್ನಪ್ರಾಶನ ಮಾಡಬಹುದು.

ಆರನೆಯ, ಎಂಟನೆಯ, ಹತ್ತನೆಯ ಹನ್ನೆರಡನೆಯ ತಿಂಗಳಲ್ಲಿ ಅಥವಾ ಒಂದು ವರ್ಷ ಪೂರ್ಣವಾದ ಮೇಲೆ ಗಂಡುಮಗುವಿಗೂ, ಏಳನೆಯ ಒಂಭತ್ತನೆಯ ತಿಂಗಳಲ್ಲಿ ಹೆಣ್ಣು ಮಗುವಿಗೂ ಅನ್ನಪ್ರಾಶನ ಮಾಡಬಹುದು. ಬಿದಿಗೆ, ತದಿಗೆ ಪಂಚಮೀ, ಸಪ್ತಮೀ, ದಶಮೀ, ತ್ರಯೋದಶೀ, ತಿಥಿಗಳೂ, ಬುಧ, ಗುರು, ಶುಕ್ರವಾರಗಳೂ ಅನ್ನಪ್ರಾಶನಕ್ಕೆ ಶುಭವಾಗಿವೆ. ರವಿ-ಸೋಮವಾರಗಳೂ ಆಗಬಹುದೆಂದು ಕೆಲವರ ಅಭಿಪ್ರಾಯವಿದೆ. ಅಶ್ವಿನೀ, ರೋಹಿಣೀ ಮೃಗಶಿರಾ, ಪುನರ್ವಸು, ಪುಷ್ಯ ಮೂರು ಉತ್ತರಾ ನಕ್ಷತ್ರಗಳು, ಹಸ್ತಾ, ಚಿತ್ರಾ, ಸ್ವಾತಿ, ಅನುರಾಧಾ, ಶ್ರವಣಾ, ಧನಿಷ್ಠಾ, ಶತಭಿಷಾ ಮತ್ತು ರೇವತೀ ನಕ್ಷತ್ರಗಳೂ ಶುಭ, ಜನ್ಮನಕ್ಷತ್ರವೂ ಒಳ್ಳೆಯದೆಂದು ಕೆಲವರು ಹೇಳುತ್ತಾರೆ. ಭದ್ರಾ, ವೈಧೃತೀ, ವ್ಯತೀಪಾತ, ಗಂಡ, ಅತಿಗಂಡ, ವಜ್ರ, ಶೂಲ, ಪರಿಘ ಈ ಯೋಗಗಳನ್ನು ಬಿಡಬೇಕು.

॥ ಅಕ್ಷರಾರಂಭನಿರ್ಣಯಃ ॥

ಪಂಚಮೇ ವರ್ಷೇ ಅಕ್ಷರಲೇಖನಾರಂಭ ಉತ್ತರಾಯಣೇ ಕಾರ್ಯಃ ॥ ಅತ್ರ ಕುಂಭಸ್ಥಃ ಸೂರ್ಯೋ ವರ್ಜ್ಯಃ ॥ ಶುಕ್ಲಪಕ್ಷಃ ಶುಭಃ ಪ್ರೋಕ್ತಃ ಕೃಷ್ಣೇಶ್ಚಾಂತ್ಯತ್ರಿಕಂ ವಿನಾ ॥ ದ್ವಿತೀಯಾ ತೃತೀಯಾ ಪಂಚಮೀದಶಮ್ಯೇಕಾದಶೀ-ದ್ವಾದಶೀತ್ರಯೋದಶ್ಯಃ ಶ್ರೇಷ್ಠಾಃ ॥ ಅಶ್ವಿನೀಮೃಗಾರ್ದ್ರಾಪುನರ್ವಸುಪುಷ್ಯಹಸ್ತ-

Scanned by CamScanner

ಚಿತ್ರಾಸ್ವಾತ್ಯನುರಾಧಾ ಶ್ರವಣಧನಿಷ್ಠಾಶತತಾರಕಾರೇವತ್ಯೋ ಭೌಮಶನಿಭಿನ್ನವಾರಾಶ್ಚ ಶುಭಾಃ ॥

ಅಕ್ಷರಾರಂಭಕಾಲನಿರ್ಣಯಃ– ಐದನೆಯ ವರ್ಷದಲ್ಲಿ, ಉತ್ತರಾಯಣದಲ್ಲಿ ಅಕ್ಷರಲೇಖನಾರಂಭ ಮಾಡಬೇಕು. ಕುಂಭರಾಶಿಯಲ್ಲಿ ಸೂರ್ಯನಿರುವ ಕಾಲವನ್ನು ವರ್ಜಿಸಬೇಕು. ಶುಕ್ಲಪಕ್ಷ ಒಳ್ಳೆಯದು. ಕೃಷ್ಣಪಕ್ಷದ ಕೊನೆಯ ಮೂರು ತಿಥಿಗಳನ್ನು ಸಂಪೂರ್ಣ ಬಿಡಬೇಕು. ಬಿದಿಗೆ, ತದಿಗೆ, ಪಂಚಮೀ, ದಶಮೀ, ಏಕಾದಶೀ, ದ್ವಾದಶೀ, ತ್ರಯೋದಶೀ ತಿಥಿಗಳೂ, ಅಶ್ವಿನೀ, ಮೃಗಶಿರಾ, ಆರ್ದ್ರಾ, ಪುನರ್ವಸು, ಪುಷ್ಯ, ಹಸ್ತಾ, ಚಿತ್ರಾ, ಸ್ವಾತಿ, ಅನುರಾಧಾ, ಶ್ರವಣಾ, ಧನಿಷ್ಠಾ, ಶತಭಿಷಾ, ರೇವತೀ ನಕ್ಷತ್ರಗಳೂ, ಕುಜ ಮತ್ತು ಶನಿ ಈ ಎರಡು ವಾರಗಳನ್ನು ಬಿಟ್ಟು ಉಳಿದ ಎಲ್ಲ ವಾರಗಳೂ ಅಕ್ಷರಲೇಖನಾರಂಭಕ್ಕೆ ಉತ್ತಮವಾಗಿವೆ.

॥ ಚೌಲಸಂಸ್ಕಾರನಿರ್ಣಯಃ ॥

ಜನ್ಮತೋ ಗರ್ಭತೋವಾಬ್ದೇ ಪ್ರಥಮೇಥ ದ್ವಿತೀಯಕೇ ।
ತೃತೀಯೇ ಪಂಚಮೇ ವಾಪಿ ಚೌಲಕರ್ಮಪ್ರಶಸ್ಯತೇ ॥
ಯದ್ವಾ ಸಹೋಪನೀತ್ಯಾತ್ರ ಕುಲಾಚಾರಾದ್ವ್ಯವಸ್ಥಿತಿಃ ॥

ಉದಗಯನೇ ಶುಕ್ಲಪಕ್ಷೇ ಗುರುಶುಕ್ರಯೋರ್ಬಾಲ್ಯವಾರ್ಧಕಾಸ್ತಮಯಾಭಾವೇ ಅಕ್ಷಯೇ ಅನಧಿಕೇ ಚ ಮಾಸಿ ಜ್ಯೋತಿಃಶಾಸ್ತ್ರೋಕ್ತಪ್ರಶಸ್ತತಿಥಿವಾರಲಗ್ನೇಷು ಶುಭೇ ಮುಹೂರ್ತೇ ದಿವೈವ ನ ತು ರಾತ್ರೌ ಕಾರ್ಯಂ ॥ ಇದಂ ಕರ್ಮ ಲೌಕಿಕಾಗ್ನೌ–ತಸ್ಯ ಸಭ್ಯ ಇತಿ ನಾಮ ॥ ಯದಿ ಗರ್ಭಾಧಾನಾದಿಸಂಸ್ಕಾರಲೋಪಃ ತದಾ ಪ್ರಾಯಶ್ಚಿತ್ತಂ ಕೃತ್ವಾ ಕಾಲಾತ್ಯಯನಿಮಿತ್ತಂ ಪ್ರಾಯಶ್ಚಿತ್ತಹೋಮಂ ಚ ಕೃತ್ವಾ ಚೌಲಹೋಮಃ ಕಾರ್ಯಃ ॥ ತದಾಹ ಭಗವಾನ್ ॥
ಆರಭ್ಯಾಧಾನಮಾಚೌಲಾತ್ಕಾಲೇತೀತೇ ತು ಕರ್ಮಣಾಂ ।
ವ್ಯಾಹೃತ್ಯಾಜ್ಯಂ ಸುಸಂಸ್ಕೃತ್ಯ ಹುತ್ವಾ ಕರ್ಮ ಯಥಾಕ್ರಮಂ ॥ ಕಾರ್ಯಮಿತಿ ಶೇಷಃ ॥

ಜಾತಕರ್ಮಾದಿ ಸಂಸ್ಕಾರಾಃ ಸ್ವಕಾಲೇ ನ ಭವಂತಿ ಚೇತ್ ।
ಚೌಲಾದರ್ವಾಕ್ ಪ್ರಕುರ್ವೀತ ಪ್ರಾಯಶ್ಚಿತ್ತಾದನಂತರಂ ॥
ಶಿಶೋರ್ಮಾತರಿ ಗರ್ಭಿಣ್ಯಾಂ ಚೂಡಾಕರ್ಮ ನ ಕಾರಯೇತ್ ॥
ಪಂಚಮಾಬ್ದಾತ್ ಪ್ರಾಗೂರ್ಧ್ವಂತು ಗರ್ಭಿಣ್ಯಾಮಪಿ ಕಾರಯೇತ್ ॥
ಸಹೋಪನೀತ್ಯಾ ಕುರ್ಯಾಚ್ಚೇತ್ ತದಾ ದೋಷೋ ನ ವಿದ್ಯತೇ ॥ ಮನುಃ ॥

ಅತ್ರ ಶಿಖಾನಿರ್ಣಯಃ । ಮಧ್ಯೇ ಮುಖ್ಯಾ ಏಕಾ ಶಿಖಾ ಅನ್ಯಾಶ್ಚ ಪಾರ್ಶ್ವಾದಿಭಾಗೇಷ್ವಿತಿ ಯಥಾ ಕುಲಾಚಾರಂ ಪ್ರವರಸಂಖ್ಯಯಾ ಶಿಖಾಶ್ಚೂಡಾ-

Scanned by CamScanner

Scanned with CamScanner

ಸಮಯೇ ಕಾರ್ಯಾಃ ॥ ಉಪನಯನಕಾಲೇ ಮಧ್ಯಶಿಖೇತರಶಿಖಾನಾಂ ವಪನಂ ಕೃತ್ವಾ ಮಧ್ಯಭಾಗೇ ಏವ ಉಪಯನಯನೋತ್ತರಂ ಶಿಖಾ ಧಾರ್ಯಾ ॥

ಚೌಲಸಂಸ್ಕಾರನಿರ್ಣಯ:- ಜನ್ಮದಿಂದ ಅಥವಾ ಗರ್ಭದಿಂದ ಮೊದಲನೆಯ, ಎರಡನೆಯ, ಮೂರನೆಯ ಅಥವಾ ಐದನೆಯ ವರ್ಷದಲ್ಲಿ ಚೌಲಸಂಸ್ಕಾರ ಮಾಡಬೇಕು. ಉಪನಯನ ಕಾಲದಲ್ಲಿ ಜತೆಯಾಗಿಯೂ ಮಾಡಬಹುದು. ಉತ್ತರಾಯಣದಲ್ಲಿ, ಶುಕ್ಲಪಕ್ಷದಲ್ಲಿ ಗುರುಶುಕ್ರರಿಗೆ ಬಾಲ್ಯ ವೃದ್ಧಾಪ್ಯ ಅಸ್ತ ಇಲ್ಲದಿರುವಾಗ, ಕ್ಷಯಮಾಸ ಅಧಿಕಮಾಸಗಳನ್ನು ಬಿಟ್ಟು ಜ್ಯೋತಿಃಶಾಸ್ತ್ರದಲ್ಲಿ ಹೇಳಿದ ಶುಭಮುಹೂರ್ತದಲ್ಲಿ ಹಗಲು ಚೌಲಕರ್ಮವನ್ನು ಮಾಡಬೇಕು. ರಾತ್ರಿಯಲ್ಲಿ ಮಾಡಬಾರದು. "ಸಭ್ಯ" ಹೆಸರಿನ ಅಗ್ನಿಯನ್ನು ಪ್ರತಿಷ್ಠಾಪಿಸಬೇಕು. ಗರ್ಭಾಧಾನಾದಿ ಪೂರ್ವಸಂಸ್ಕಾರಗಳು ಲೋಪವಾಗಿದ್ದರೆ ಪ್ರಾಯಶ್ಚಿತ್ತ ಹೋಮಾದಿಗಳನ್ನು ಮಾಡಬೇಕು. ಸಂಸ್ಕಾರ್ಯನ ವಯಸ್ಸು ಐದು ವರ್ಷಗಳಿಗಿಂತ ಕಡಿಮೆಯಾಗಿದ್ದರೆ ತಾಯಿಯು ಗರ್ಭಿಣಿಯಾಗಿದ್ದಾಗ ಈ ಸಂಸ್ಕಾರ ಮಾಡಬಾರದು. ಐದು ವರ್ಷ ಕಳೆದಿದ್ದರೆ, ತಾಯಿಯು ಗರ್ಭಿಣಿಯಾಗಿದ್ದರೂ ಚೌಲವನ್ನು ಮಾಡಬಹುದು.

ಶಿಖೆಯನ್ನು ಇಡುವ ಕ್ರಮ:- ಚೌಲ ಮಾಡುವಾಗ ತಲೆಯ ಮಧ್ಯಭಾಗದಲ್ಲಿ ಒಂದು ಚಂಡಿಕೆಯನ್ನಿಟ್ಟು, ಅದರ ಪಾರ್ಶ್ವಗಳಲ್ಲಿ ಕುಲಾಚಾರವನ್ನು ಹೊಂದಿಕೊಂಡು, ಪ್ರವರಸಂಖ್ಯೆಯಲ್ಲಿ ಅಂದರೆ ೩ ಪ್ರವರಗಳಾದರೆ, ೩. ೫ ಪ್ರವರಗಳಾದರೆ ೫ ಶಿಖೆಗಳನ್ನಿಡಬೇಕು. ಉಪನಯನ ಕಾಲದಲ್ಲಿ ಮಧ್ಯದ ಒಂದು ಶಿಖೆಯನ್ನು ಮಾತ್ರ ಉಳಿಸಿ ಉಳಿದವುಗಳನ್ನು ತೆಗೆಯಬೇಕು.

॥ ಉಪನಯನಸಂಸ್ಕಾರವಿಚಾರಃ ನಿರ್ಣಯಶ್ಚ ॥

ಉಪನಯನಂ ನಾಮ ಆಚಾರ್ಯಸಮೀಪನಯನಾಂಗಕೋ ಗಾಯತ್ರ್ಯು-ಪದೇಶ ಪ್ರಧಾನಕಃ ಕರ್ಮವಿಶೇಷಃ ಉಪನಯನಪದಸ್ಯ ಯೋಗರೂಢತ್ವಾತ್ ॥

ಕುಮಾರಸ್ಯೋಪನಯನಂ ಶ್ರುತಾಭಿಜನವೃತ್ತವಾನ್ ।
ತಪಸಾಧೂತ ನಿಃಶೇಷ ಪಾಪ್ಮಾ ಕುರ್ಯಾದ್ದ್ವಿಜೋತ್ತಮಃ ॥ ಶೌನಕಃ ॥
ಯಾವತ್ ಪ್ರಭೃತಿ ವಾಮಾಂಸೇ ಬ್ರಹ್ಮಸೂತ್ರಂ ದ್ವಿಜಸ್ಯ ತತ್ ।
ಗುರುಃ ಪ್ರತಿಷ್ಠಾಪಯತಿ ಕಾಲೇ ಪ್ರಭೃತಿ ಸಂಯತಃ ॥
ತಾವತ್ ಪ್ರಭೃತಿ ತಸ್ಯೈವ ಪಿತಾಚಾರ್ಯಃ ಸ ಉಚ್ಯತೇ ॥
ಮಾತಾ ಚ ತಸ್ಯ ಸಾವಿತ್ರೀ ದ್ವಿತೀಯಂ ಜನ್ಮಚೋಚ್ಯತೇ ॥ ಸ್ಮೃತಿಸಾರೇ ॥
ಕಾಮಾನ್ಮಾತಾ ಪಿತಾ ಚೈನಂ ಯದುತ್ಪಾದಯತೋ ಮಿಥಃ ।
ಸಂಭೂತಿಂ ತಸ್ಯ ತಾಂ ವಿದ್ಯಾದ್ಯದ್ಯೋನಾವಭಿಜಾಯತೇ ॥

Scanned by CamScanner

ಆಚಾರ್ಯಸ್ತ್ವಸ್ಯ ಯಾಂ ಜಾತಿಂ ವಿಧಿವದ್ವೇದ ಪಾರಗಃ ।
ಉತ್ಪಾದಯತಿ ಸಾವಿತ್ರ್ಯಾ ಸಾ ಸತ್ಯಾ ಸಾಜರಾಮರಾ ॥ ಮನುಃ ॥

ಉಪನಯನಸಂಸ್ಕಾರಲೋಪೇ ಪ್ರಾಯಶ್ಚಿತ್ತಂ ॥ ಆಪಸ್ತಂಬಧರ್ಮಸೂತ್ರೇ-ಅಥ ಯಸ್ಯ ಪಿತಾ ಪಿತಾಮಹ ಇತ್ಯನುಪನೇತೌ ಸ್ಯಾತಾಂ ತೇ ಬ್ರಹ್ಮಹಸಂಸ್ತುತಾಃ ॥ ತೇಷಾಮಭ್ಯಾಗಮನಂ ಭೋಜನಂ ವಿವಾಹವಿಧಿಂ ವರ್ಜಯೇತ್ ॥ ಅತಿಕ್ರಾಂತೇ ಸಾವಿತ್ರ್ಯಾಃ ಕಾಲೇ ಕ್ರತುಂ ತ್ರೈವಿದ್ಯಕಂ ಬ್ರಹ್ಮಚರ್ಯಂ ಚರೇತ್ತತಃ ಉಪನಯನಮಥೋದಕಸ್ಪರ್ಶನಮಥಾಧ್ಯಾಪಃ ॥ ತೇಷಾಮಿಚ್ಛತಾಂ ಪ್ರಾಯಶ್ಚಿತ್ತಂ ಯಥಾ ಪ್ರಥಮೇತಿಕ್ರಮೇ ಋತುರೇವ ಸಂವತ್ಸರಂ ಪ್ರತಿಪುರುಷಂ ಸಂಖ್ಯಾಯ ಸಂವತ್ಸರಾನ್ಯಾವಂತೋ ಅನುಪನೀತಾ ಸ್ಯುಃ ॥

ಅನುಕ್ತನಿಷ್ಕೃತೀನಾಂ ತು ಪಾಪಾನಾಮಪನುತ್ತಮೇ ।
ಶಕ್ತಿಂ ಚಾವೇಕ್ಷ್ಯ ಪಾಪಂ ಚ ಪ್ರಾಯಶ್ಚಿತ್ತಂ ಪ್ರಕಲ್ಪಯೇತ್ ॥ ಮನುಃ ॥
ದೇಶಂ ಕಾಲಂ ವಯಃ ಶಕ್ತಿಂ ಪಾತ್ರಂ ಚಾವೇಕ್ಷ್ಯ ಯತ್ನತಃ ।
ಪ್ರಾಯಶ್ಚಿತ್ತಂ ಪ್ರಕಲ್ಪ್ಯಂ ಸ್ಯಾದ್ಯತ್ರ ಚೋಕ್ತಾ ನ ನಿಷ್ಕೃತಿಃ ॥ ಯಾಜ್ಞವಲ್ಕ್ಯಃ ॥
ಅನಾಮ್ನಾತೇಷು ಧರ್ಮೇಷು ಕಥಂ ಸ್ಯಾದಿತಿ ಚೇದ್ಭವೇತ್ ।
ಯಂ ಶಿಷ್ಟಾ ಬ್ರಾಹ್ಮಣಾ ಬ್ರೂಯುಃ ಸ ಧರ್ಮಃ ಸ್ಯಾದಶಂಕಿತಃ ॥

ಉಪನಯನಕಾಲಃ- ತತ್ರೇದಂ ಗೃಹ್ಯಂ, ಅಷ್ಟಮೇ ವರ್ಷೇ ಬ್ರಾಹ್ಮಣಮುಪನಯೇತ್ ಗರ್ಭಾಷ್ಟಮೇ ವೇತಿ ॥ ತಥಾ ಚ ಮನುಃ ॥
ಗರ್ಭಾಷ್ಟಮೇಬ್ದೇ ಕುರ್ವೀತ ಬ್ರಾಹ್ಮಣಸ್ಯೋಪನಾಯನಂ ।
ಗರ್ಭಾದೇಕಾದಶೇ ರಾಜ್ಞೋ ಗರ್ಭಾಚ್ಚ ದ್ವಾದಶೇ ವಿಶಃ ॥

ಆಷೋಡಶಾದ್ವರ್ಷಾತ್ ಬ್ರಾಹ್ಮಣಸ್ಯ ಅನತೀತಃ ಕಾಲೋ ಭವತ್ಯಾವಿಂಶಾತ್ ಕ್ಷತ್ರಿಯಸ್ಯ ಚತುರ್ವಿಂಶಾದ್ವೈಶ್ಯಸ್ಯ ॥ ಅತ ಊರ್ಧ್ವಂ ಪತಿತಸಾವಿತ್ರಿಕಾ ಭವಂತಿ ॥ ನೈನಾನುಪನಯೇಯುರ್ನಾಧ್ಯಾಪಯೇಯುರ್ನಯಾಜಯೇಯುರ್ನೈಭಿರ್ವಿವಹೇಯುಃ ॥
ಬ್ರಹ್ಮವರ್ಚಸಕಾಮಸ್ಯ ಕಾರ್ಯಂ ವಿಪ್ರಸ್ಯ ಪಂಚಮೇ ।
ಷಷ್ಠೇ ತು ಧನಕಾಮಸ್ಯ ವಿದ್ಯಾಕಾಮಸ್ಯ ಸಪ್ತಮೇ ॥
ಅಷ್ಟಮೇ ಸರ್ವಕಾಮಸ್ಯ ನವಮೇ ಕಾಂತಿಮಿಚ್ಛತಃ ।

ವಸಂತೇ ಬ್ರಾಹ್ಮಣಮುಪನಯೀತ ಮಾಘಾದಿ ಜ್ಯೇಷ್ಠಾಂತಕ ಪಂಚಮಾಸಾಃ ಸಾಧಾರಣಾ ವಾ ಸಕಲದ್ವಿಜಾನಾಮಿತಿ ಗರ್ಗೋಕ್ತೇಃ ವಸಂತಾಲಾಭೇ ಶಿಶಿರಗ್ರೀಷ್ಮಾವಪಿ ಗ್ರಾಹ್ಯೌ ॥

Scanned by CamScanner

ತತ್ರಾಧಿಕಾರಿಣ! ಪ್ರಯೋಗರತ್ನೇಃ-

ಪಿತೈವೋಪನಯೇತ್ಪುತ್ರಂ ತದಭಾವೇ ಪಿತುಃ ಪಿತಾ ।
ತದಭಾವೇ ಪಿತುರ್ಭ್ರಾತಾ ತದಭಾವೇ ತು ಸೋದರಃ ॥
ಪಿತಾ ಪಿತಾಮಹೋ ಭ್ರಾತಾ ಜ್ಞಾತಯೋ ಗೋತ್ರಜಾಗ್ರಜಾಃ ।
ಉಪಾಯನೇಧಿಕಾರೀ ಸ್ಯಾತ್ಪೂರ್ವಾಭಾವೇ ಪರಃ ಪರಃ ॥

ಉಪನಯನಕರ್ತಾರಃ ಕುಮಾರಾತ್ ವಯೋಜ್ಯೇಷ್ಠಾ ವಿವಕ್ಷಿತಾಃ ।
ಕನಿಷ್ಠ ಕರ್ತೃಕೋಪನಯನಸ್ಯ ನಿಷೇಧಾತ್ ॥

ಉಪನಯನೇಷ್ಟ ಬೃಹಸ್ಪತಿಬಲಂಃ-

ದ್ವಿಪಂಚಸಪ್ತಮದೇಶಸ್ಥಿತೋ ಜೀವಃ ಶುಭಪ್ರದಃ ।
ವ್ರತಬಂಧೇಷು ಪುತ್ರಸ್ಯ ಕನ್ಯಾಯಾಶ್ಚ ಕರಗ್ರಹೇ ॥
ಜನ್ಮತ್ರಿದಶಮಾರಿಸ್ಥಃ ಪೂಜಯಾ ಶುಭದೋ ಗುರುಃ ।
ಚತುರ್ಥೋಽಹ್ಯಷ್ಟಮಸ್ಥಶ್ಚ ದ್ವಾದಶಸ್ಥೋ ಮೃತಿಪ್ರದಃ ॥
ಗರ್ಭಾಷ್ಟಮೇಽಷ್ಟಮೇವಾಬ್ದೇ ಯಸ್ಯ ನಾಸ್ತಿಗುರೋರ್ಬಲಂ ।
ತಸ್ಯೋಪನಯನಂ ಕಾರ್ಯಂ ಚೈತ್ರೇ ಮೀನಗತೇ ರವೌ ॥
ನ ವಿಚಾರ್ಯಂ ಬಲಂ ತತ್ರ ದಶವರ್ಷಾಧಿಕೋ ಯದಿ ॥

ಸಂಭವೇ ವಟೋಃ ಪಿತುರಪಿ ಜೀವಬಲಂ ವಿಲೋಕ್ಯಂ ॥ ಏವಮು-ಭಯೋಶ್ಚಂದ್ರಬಲಮಪಿ ಆವಶ್ಯಕಂ ॥ ಪಿತುಶ್ಚಂದ್ರಬಲಾಭಾವೇ ವಟೋರೇವ ಕೇವಲಂ ॥

ಜನ್ಮನಾ ಬ್ರಾಹ್ಮಣೋ ಜ್ಞೇಯಃ ಸಂಸ್ಕಾರೈರ್ದ್ವಿಜ ಉಚ್ಯತೇ ॥
ವಿದ್ವತ್ವಾಚ್ಚಾಪಿ ವಿಪ್ರತ್ವಂ ತ್ರಿಭಿಃ ಶ್ರೋತ್ರಿಯ ಉಚ್ಯತೇ ।
ಕೃಚ್ಛ್ರತ್ರಯಂ ಚೋಪನೇತಾ ತ್ರೀನ್ ಕೃಚ್ಛ್ರಾಂಶ್ಚ ವಟುಶ್ಚರೇತ್ ॥

ಗಾಯತ್ರ್ಯಾ ದ್ವಾದಶಾಧಿಕ ಸಹಸ್ರ ಜಪಶ್ಚೋಪನಯನೇ ಅಧಿಕಾರಸಿದ್ಧ್ಯರ್ಥಂ ಕಾರ್ಯಃ ॥ ಕೇಚಿತ್ ದ್ವಾದಶಸಾಹಸ್ರೀಂ ಜಪಂತಿ ॥

ಉಪನಯನೇ ವೇದಿವಿಚಾರಃ-

ವಿವಾಹೋಪನಯನೇ ಯಜ್ಞೇ ವೇದಿಂ ಕುರ್ಯಾತ್ಪ್ರಯತ್ನತಃ ।
ವೇದಿಂ ವಿನಾ ಯದಾ ಹೋಮಃ ಕರ್ಮಭ್ರಷ್ಟೋಽಭಿಜಾಯತೇ ॥

ಇತಿ ವಚನಾತ್ ಉಪನಯನೇ ವೇದಿಃ ಕಾರ್ಯಾ ॥ ತಲ್ಲಕ್ಷಣಂ ॥

ಆಚಾರ್ಯಸ್ಯ ಪದ್ಯೈಃ ಷಡ್ಭಿಃ ಚತುರ್ಭಿರಥವಾ ಕರೈಃ ।
ವಿಸ್ತೃತಾ ಚತುರಸ್ರಾ ಚ ವಟೋರ್ವೇದಿಃ ಕರೋನ್ನತಾ ।
ವಾಮೇ ಗೃಹಸ್ಯ ವೇದಿಃ ಸ್ಯಾತ್ ವಿವಾಹೇಚೋಪನಾಯನೇ ॥
ಅನ್ಯತ್ರ ಚ ॥

ಪ್ರಾಕ್ಪಶ್ಚಿಮಾಯಾಂ ಪದಷಟ್ಕಯುಕ್ತಾ ಉದೀಚಿಯಾಮ್ಯಾಂ ಚ
ಪದಾನಿ ಪಂಚ ।
ಏವಂ ವಿಧಾ ಜ್ಯೋತಿಷರತ್ನನಿರ್ಮಿತಾ ವಟುಃ
ಶತಾಯುರ್ಭವತೀತಿ ವೇದೇ ॥

ಯಮಲ ವಿಚಾರಃ- ಜ್ಯೋತಿರ್ನಿಬಂಧೇ.

ಏಕಸ್ಮಿನ್ಮಂಡಪೇ ಚೈಕವಾಸರೇ ಮಂಡಪೇ ತಥಾ ।
ಕರ್ತವ್ಯಂ ಮಂಗಲಂ ಸ್ವಸ್ರೋರ್ಭ್ರಾತ್ರೋರ್ಯಮಲಜಾತಯೋಃ ॥

ಸ್ತ್ರಿಯೋಪನಯನಂ:-

ಪುರಾ ಕಲ್ಪೇಷು ನಾರೀಣಾಂ ಮೌಂಜೀಬಂಧನಮಿಷ್ಯತೇ ।
ಅಧ್ಯಾಪನಂ ಚ ವೇದಾನಾಂ ಸಾವಿತ್ರೀವಚನಂ ಯಥಾ ॥

ಉಪನಯನಸಂಸ್ಕಾರದ ವಿಚಾರ ಮತ್ತು ನಿರ್ಣಯ:- ಉಪ = ಸಮೀಪಕ್ಕೆ ನಯನ = ಕೊಂಡೊಯ್ಯುವುದು. ತಂದೆ ಅಥವಾ ರಕ್ಷಕನು ವಟುವನ್ನು ಆಚಾರ್ಯನ ಬಳಿಗೆ ಅಧ್ಯಯನಕ್ಕಾಗಿ ಕೊಂಡೊಯ್ದು ಬಿಡುವುದು. ಚೂಡಾಕರ್ಮದ ವರೆಗಿನ ಎಲ್ಲ ಸಂಸ್ಕಾರಗಳನ್ನೂ ಮಗನಿಗೆ-ಮಗಳಿಗೆ, ತಂದೆಯಾದವನೇ ಮಾಡಬೇಕು. ಉಪನಯನ ಸಂಸ್ಕಾರವನ್ನು ಶ್ರೋತ್ರಿಯನಾದ ಆಚಾರ್ಯನು ಮಾಡಬೇಕು. ವೇದಾಧ್ಯಯನಕ್ಕಾಗಿ ವಟುವು ಗುರುಕುಲಕ್ಕೆ ಆಚಾರ್ಯನ ಹತ್ತಿರ ಹೋಗುವ ಪದ್ಧತಿ ಇರುವಷ್ಟು ಕಾಲ ಹೀಗೇ ನಡೆಯುತ್ತಿತ್ತು. ಈಗ ಆ ಪದ್ಧತಿ ಇಲ್ಲದಿರುವುದರಿಂದ ತಂದೆಯಾದವನೇ ಈ ಸಂಸ್ಕಾರವನ್ನು ಮಾಡುತ್ತಾನೆ. ಗಾಯತ್ರಿಯಿಂದಲೇ ವೇದಾಧ್ಯಯನದ ಆರಂಭವಾಗುವುದರಿಂದ ಈ ಸಂಸ್ಕಾರಕ್ಕೆ ಅತ್ಯಂತ ಮಹತ್ತ್ವ ಕೊಡಲಾಗಿದೆ.

ತಂದೆ-ತಾಯಿಗಳಿಂದ ಲಭಿಸುವ ಜನ್ಮದಿಂದ ಕೇವಲ ಮನುಷ್ಯಶರೀರವು ಪ್ರಾಪ್ತವಾಗುತ್ತದೆ. ಉಪನಯನದಿಂದ "ದ್ವಿಜತ್ವವು" ಎರಡನೆಯ ಜನ್ಮವೇ ಲಭಿಸುತ್ತದೆ. ಈ ಜನ್ಮದಲ್ಲಿ ವೇದಾಧ್ಯಯನ ಮಾಡಿಸುವ ಆಚಾರ್ಯನೇ ತಂದೆ, ಗಾಯತ್ರೀಮಾತೆಯೇ ತಾಯಿ. ಈ ನೂತನ ಮಾತಾಪಿತರ ರಕ್ಷಣೆಯಲ್ಲಿ ವಟುವು ತನ್ನ ಪುರೋಭಿವೃದ್ಧಿಯನ್ನು ಸಾಧಿಸಬೇಕು. ತಂದೆ-ತಾಯಿಗಳ ಆಸರೆ ಇಲ್ಲದ ಮಗುವು ಹೇಗೆ ಬದುಕಲಾರದೋ ಅಂತೆಯೇ ಅಧ್ಯಯನ ಮಾಡಿಸುವ ಆಚಾರ್ಯರೂಪೀ ತಂದೆ, ಹಾಗೂ ಗಾಯತ್ರೀ ರೂಪಿಯಾದ ತಾಯಿಯ ಆಶ್ರಯವಿಲ್ಲದೆ ವಟುವು ಆರೋಗ್ಯವಂತನಾಗಿ ಬದುಕಲಾರ. ಆದ್ದರಿಂದ ಸಂಧ್ಯಾವಂದನ ಗಾಯತ್ರೀಜಪ ಇತ್ಯಾದಿಗಳನ್ನು ತಪ್ಪದೆ ಅವಶ್ಯ ಮಾಡಲೇಬೇಕು. ಪ್ರತಿಯೋರ್ವ ವ್ಯಕ್ತಿಯ ಸಮಗ್ರ ಭಾವೀಜೀವನವನ್ನೇ ರೂಪಿಸುವ ಸಂಸ್ಕಾರವು ಇದಾಗಿರುವುದರಿಂದ ಉಪನಯನವು ಅತ್ಯಂತ ಅವಶ್ಯಕವೂ ಅನಿವಾರ್ಯವೂ ಆದ ಸಂಸ್ಕಾರವಾಗಿದೆ.

ಉಪನಯನಸಂಸ್ಕಾರವಾಗದಿದ್ದರೆ ಪ್ರಾಯಶ್ಚಿತ್ತ:- ತಂದೆ ಹಾಗೂ ಅಜ್ಜ ಇವರಿಗೆ ಉಪನಯನವಾಗಿರದಿದ್ದರೆ ಅವರನ್ನು ಬ್ರಹ್ಮಘಾತಕಿಗಳೆಂದು ತಿಳಿದು ಅವರ ಸಂಪರ್ಕವನ್ನು ಬಿಡಬೇಕು. ಅವರೊಡನೆ ಭೋಜನ ವಿವಾಹ ಮುಂತಾದ ಸಂಬಂಧಗಳನ್ನಿಡಕೂಡದು.

Scanned by CamScanner

ಉಪನಯನ ಕಾಲ ಮೀರಿದ್ದರೆ ಒಂದು ಋತುವಿನಷ್ಟು ಕಾಲ ತ್ರೈವಿದ್ಯಕ ಬ್ರಹ್ಮಚರ್ಯವನ್ನು (೧. ಗುರುಶುಶ್ರೂಷೆ, ೨. ಅಗ್ನಿಸೇವೆ, ೩. ಅಧ್ಯಯನ) ಆಚರಿಸಿ ನಂತರ ಉಪನಯನ ಮಾಡಬೇಕು. ಉಪನಯನ ಆಗದೇ ಇರುವರಿಗೆ ಅವರು ಬಯಸಿದರೆ ಪ್ರಾಯಶ್ಚಿತ್ತ ಮಾಡಬೇಕು. ಒಂದು ವರ್ಷ ಕಾಲ ಮೀರಿದ್ದರೆ ಒಂದು ಋತುವಿನ ಪ್ರಾಯಶ್ಚಿತ್ತ. ಆದೇ ರೀತಿ ಒಂದೊಂದು ತಲೆಮಾರಿಗೆ ಒಂದೊಂದು ವರ್ಷದ ಪ್ರಾಯಶ್ಚಿತ್ತ ಮಾಡಬೇಕು. ಮನು ಯಾಜ್ಞವಲ್ಕ್ಯ ಮುಂತಾದವರು ಪ್ರಾಯಶ್ಚಿತ್ತವನ್ನು ವಿಧಿಸುವಾಗಲೂ ಬಹಳ ಸಹಾನುಭೂತಿಯನ್ನು ತೋರಿದ್ದಾರೆ. ಅವರವರ ಯೋಗ್ಯತೆ, ಸಾಮರ್ಥ್ಯ ಇತ್ಯಾದಿಗಳನ್ನು ಹೊಂದಿಕೊಂಡು ಪ್ರತಿಯೊಬ್ಬನೂ ಪ್ರಾಯಶ್ಚಿತ್ತ ಮಾಡಿಕೊಳ್ಳಬಹುದು.

ಉಪನಯನ ಸಂಸ್ಕಾರದ ನಿರ್ಣಯ:- ಜನ್ಮದಿಂದ ಅಥವಾ ಗರ್ಭದಿಂದ ಎಂಟನೆಯ ವರ್ಷ ಬ್ರಾಹ್ಮಣನಿಗೆ ಉಪನಯನ ಮಾಡಬೇಕು. ಮನುವಿನ ಅಭಿಪ್ರಾಯದಂತೆ ಎಂಟನೆಯ ವರ್ಷದಲ್ಲಿ ಬ್ರಾಹ್ಮಣನಿಗೆ, ಹನ್ನೊಂದನೆಯ ವರ್ಷದಲ್ಲಿ ಕ್ಷತ್ರಿಯನಿಗೆ, ಹನ್ನೆರಡನೆಯ ವರ್ಷದಲ್ಲಿ ವೈಶ್ಯನಿಗೆ ಉಪನಯನ ಮಾಡಬೇಕು. ಇಂತಹ ನಿರ್ದಿಷ್ಟಕಾಲದಲ್ಲಿ ಅನಿವಾರ್ಯ ಕಾರಣಗಳಿಂದ ಉಪನಯನ ಮಾಡಲು ಸಾಧ್ಯವಾಗದಿದ್ದರೆ, ಬ್ರಾಹ್ಮಣನಿಗೆ ೧೬ ವರ್ಷ, ಕ್ಷತ್ರಿಯನಿಗೆ ೨೨ ವರ್ಷ, ವೈಶ್ಯನಿಗೆ ೨೪ ವರ್ಷದ ಕಾಲಾವಧಿ ಇದೆ. ಈ ಅವಧಿಯನ್ನೂ ಮೀರಿದರೆ ಅಂಥವನು ಪತಿತನಾಗಿ ವೇದಾಧ್ಯಯನಕ್ಕೆ ಅನಧಿಕಾರಿಯಾಗುತ್ತಾನೆ. ಅಂಥವನೊಡನೆ ವಿವಾಹಾದಿಯಾಗಿ ಯಾವುದೇ ಸಂಬಂಧ. ಇಡಬಾರದು. ಬ್ರಹ್ಮತೇಜಸ್ಸನ್ನು ಇಚ್ಛಿಸುವ ಬ್ರಾಹ್ಮಣನಿಗೆ ೫ನೆಯ ವರ್ಷದಲ್ಲೂ, ದ್ರವ್ಯವನ್ನು ಇಚ್ಛಿಸುವವನಿಗೆ ೬ನೆಯ ವರ್ಷದಲ್ಲೂ, ವಿದ್ಯೆಯನ್ನು ಇಚ್ಛಿಸುವವನಿಗೆ ೭ನೆಯ ವರ್ಷದಲ್ಲೂ, ಇವೆಲ್ಲವುಗಳನ್ನು ಇಚ್ಛಿಸುವವನಿಗೆ ೮ನೆಯ ವರ್ಷದಲ್ಲೂ, ಶಾಂತಿಯನ್ನು ಇಚ್ಛಿಸುವವನಿಗೆ ೯ನೆಯ ವರ್ಷದಲ್ಲೂ ಉಪನಯನ ಮಾಡಬೇಕು. ಬ್ರಾಹ್ಮಣನಿಗೆ ವಸಂತಋತುವಿನಲ್ಲಿ ಉಪನಯನ ಮಾಡುವುದು ಉತ್ತಮ. ಮಾಘಮಾಸದಿಂದ ಜ್ಯೇಷ್ಠಮಾಸದ ವರೆಗೆ ಸಾಧಾರಣವಾಗಿ ಎಲ್ಲ ಮಾಸಗಳೂ ಬ್ರಾಹ್ಮಣರಿಗೆ ಯೋಗ್ಯವೆಂದು ಗರ್ಗಮಹರ್ಷಿಗಳು ಅಭಿಪ್ರಾಯಪಡುತ್ತಾರೆ.

ಉಪನಯನ ಅಧಿಕಾರಿಗಳು:- ಉಪನಯನ ಮಾಡಲು ತಂದೆಯಾದವನೇ ಮೊದಲನೆಯ ಅಧಿಕಾರಿಯಾಗಿರುತ್ತಾನೆ. ಆತನಿಲ್ಲದಿದ್ದಾಗ ಅಜ್ಜ, ಚಿಕ್ಕಪ್ಪ, ಅಣ್ಣ, ಸಪಿಂಡದವ, ಸಗೋತ್ರದವ, ಪ್ರಾಯದಲ್ಲಿ. ಹಿರಿಯನಾಗಿರುವ ಯಾವನಾದರೊಬ್ಬ ಶ್ರೋತ್ರಿಯ ಬ್ರಾಹ್ಮಣ. ಉಪನಯನ ಮಾಡುವವನು ವಟುವಿಗಿಂತ ವಯಸ್ಸಿನಲ್ಲಿ ದೊಡ್ಡವನೇ ಆಗಿರಬೇಕು. ಕಿರಿಯನು ಹಿರಿಯನಿಗೆ ಉಪನಯನ ಮಾಡುವುದನ್ನು ನಿಷೇಧಿಸಲಾಗಿದೆ.

ಉಪನಯನಕಾಲದಲ್ಲಿ ಇರಬೇಕಾದ ಗುರುಬಲ:- ೨, ೫, ೭, ೯ ೧೧ ಈ ಸ್ಥಾನಗಳಲ್ಲಿರುವ ಗುರುವು ಉಪನಯನಕ್ಕೂ, ಕನ್ಯೆಯ ವಿವಾಹಕ್ಕೂ ಶುಭಫಲದಾಯಕನಾಗಿರುತ್ತಾನೆ. ೧, ೩, ೬ ಮತ್ತು ೧೦ನೆಯ ಸ್ಥಾನದಲ್ಲಿರುವ ಗುರುವನ್ನು ಪೂಜಾದಿಗಳಿಂದ ಶುಭಪ್ರದನನ್ನಾಗಿ ಮಾಡಬಹುದು. ೪, ೮ ಮತ್ತು ೧೨ನೆಯ ಸ್ಥಾನದಲ್ಲಿರುವ ಗುರುವು

ಸಂಪೂರ್ಣವಾಗಿ ಅಶುಭಕಾರಿಯಾಗಿರುತ್ತಾನೆ. ಆನೆಯ ವರ್ಷದಲ್ಲಿ ಗುರುವು ಅಶುಭಸ್ಥಾನದಲ್ಲಿದ್ದರೂ ಶಾಂತ್ಯಾದಿಗಳನ್ನು ಮಾಡಿ ಉಪನಯನ ಮಾಡಬಹುದು. ಹತ್ತು ವರ್ಷಗಳು ಕಳೆದ ಮೇಲೆ ಗುರುಬಲವನ್ನು ನೋಡುವ ಅವಶ್ಯಕತೆ ಇಲ್ಲ. ವಟುವಿನ ತಂದೆಯ ಗುರುಬಲ ಹಾಗೂ ಚಂದ್ರಬಲಗಳನ್ನು ನೋಡುವುದು ಒಳ್ಳೆಯದು. ಉಪನಯನ ಮಾಡುವವನು ಮೂರು ಕೃಚ್ಛ್ರಗಳ ಪ್ರಾಯಶ್ಚಿತ್ತವನ್ನೂ, ವಟುವು ಮೂರು ಕೃಚ್ಛ್ರಗಳ ಪ್ರಾಯಶ್ಚಿತ್ತವನ್ನೂ ಮಾಡಿಕೊಳ್ಳಬೇಕು. ಉಪನಯನ ಮಾಡುವ ಅಧಿಕಾರ ಬರಬೇಕಾದರೆ, ಒಂದು ಸಾವಿರದ ಹನ್ನೆರಡು ಗಾಯತ್ರೀಜಪ ಮಾಡಬೇಕು. ಕೆಲವರು ಹನ್ನೆರಡುಸಾವಿರ ಗಾಯತ್ರೀಜಪ ಮಾಡಬೇಕೆಂದು ಹೇಳುತ್ತಾರೆ.

ಉಪನಯನಕ್ಕೆ ವೇದಿಯ ನಿರ್ಮಾಣ:- ಉಪನಯನ, ವಿವಾಹ ಹಾಗೂ ಯಜ್ಞಗಳಲ್ಲಿ ವೇದಿಯನ್ನು ನಿರ್ಮಾಣಮಾಡಿಯೇ ಹೋಮಮಾಡಬೇಕು. ವೇದಿ ಇಲ್ಲದೆ ಹೋಮ ಮಾಡಿದವನು ಕರ್ಮಭ್ರಷ್ಟನೆನಿಸುತ್ತಾನೆ. ಉಪನಯನಕ್ಕೆ ನಿರ್ಮಿಸಲ್ಪಡುವ ವೇದಿಯು ಆಚಾರ್ಯನ ಕಾಲಿನ ಅಳತೆಯಿಂದ ಆರು ಹೆಜ್ಜೆ ಉದ್ದ ಹಾಗೂ ಆರು ಹೆಜ್ಜೆ ಅಗಲವಿರಬೇಕು. ಅದಕ್ಕೆ ಸೋಪಾನಗಳನ್ನು ನಿರ್ಮಿಸಬೇಕು. ಅಥವಾ ವಟುವಿನ ಕೈಯ ಅಳತೆಯಿಂದ ನಾಲ್ಕು ಮೊಳ ಉದ್ದ ಹಾಗೂ ಅಗಲ ಇರಬೇಕು. ಎತ್ತರ ಒಂದು ಮೊಳದಷ್ಟಿರಬೇಕು. ವೇದಿಯು ಮನೆಯ ಎಡಭಾಗದಲ್ಲಿರಬೇಕು. ವೇದಿಯು ಪೂರ್ವ ಪಶ್ಚಿಮಕ್ಕೆ ಆರು ಹೆಜ್ಜೆ ಉದ್ದ ಮತ್ತು ದಕ್ಷಿಣೋತ್ತರಕ್ಕೆ ಐದು ಹೆಜ್ಜೆ ಅಗಲವಿದ್ದರೆ ವಟುವು ಶತಾಯುಷಿ ಆಗುತ್ತಾನೆಂದು ಜ್ಯೋತಿಷರತ್ನದಲ್ಲಿ ಹೇಳಲಾಗಿದೆ.

ಅವಳಿಮಕ್ಕಳು:- ಅವಳಿಮಕ್ಕಳಿಗೆ ಒಂದೇ ದಿನ ಒಂದೇ ಮಂಟಪದಲ್ಲಿ ಮಂಗಲ ಕಾರ್ಯವನ್ನು ಮಾಡಬಹುದು.

ಸ್ತ್ರೀಯರ ಉಪನಯನ ವಿಚಾರ:- ಪೂರ್ವಕಾಲದಲ್ಲಿ ಸ್ತ್ರೀಯರಿಗೂ ಉಪನಯನ, ವೇದಾಧ್ಯಯನ ಮತ್ತು ಗಾಯತ್ರ್ಯುಪದೇಶಗಳ ಅಧಿಕಾರವಿತ್ತು. ಪ್ರೌಢವಿವಾಹವು ಬಳಕೆಯಲ್ಲಿರುವ ವರೆಗೆ, ಅಂದರೆ ಸುಮಾರು ಕ್ರಿ.ಶ. ೭ನೇ ಶತಮಾನದ ವರೆಗೆ ಸ್ತ್ರೀಯರಿಗೂ ಉಪನಯನಸಂಸ್ಕಾರ ನಡೆಯುತ್ತಿತ್ತು. ಬಾಣಭಟ್ಟನ ಕಾದಂಬರಿಯಲ್ಲಿ **"ಬ್ರಹ್ಮಸೂತ್ರೇಣ ಪವಿತ್ರೀಕೃತಕಾಯಾಂ"** ಎಂದು ಸ್ತ್ರೀವರ್ಣನೆ ಬರುತ್ತದೆ. ನಂತರ ಬಾಲ್ಯವಿವಾಹ ಪದ್ಧತಿಯು ಜಾರಿಗೆ ಬಂದಾಗ, ವಿವಾಹಸಂಸ್ಕಾರವೇ ಸಾಕೆಂಬ ಭಾವನೆಯಿಂದ ಸ್ತ್ರೀಯರಿಗೆ ಉಪನಯನ ಮಾಡುವ ಕ್ರಮವು ನಿಂತುಹೋಯಿತು. ಈಗ ಪುನಃ ಪ್ರೌಢವಿವಾಹವು ಪ್ರಚಲಿತವಾದುದರಿಂದ ಹೆಣ್ಣುಮಕ್ಕಳಿಗೂ ಉಪನಯನಸಂಸ್ಕಾರ ಮಾಡುವುದು ಉಚಿತವಾಗಿದೆ.

ಉಪನಯನಸಂಸ್ಕಾರವಾದ ಮೇಲೆ ಬ್ರಹ್ಮಚರ್ಯಾಶ್ರಮವನ್ನು ಪ್ರವೇಶಿಸಿ ವಟುವು ಶಿಕ್ಷಣವನ್ನು ಪಡೆಯಬೇಕಾಗಿದೆ. ವಿದ್ಯಾಭ್ಯಾಸ ಮಾಡುವಾಗ ಆತನು ಕಠಿಣವಾದ ವ್ರತವನ್ನು ಪಾಲಿಸುತ್ತ ನಿಯಮಬದ್ಧನಾಗಿರಬೇಕು. ಆದ್ದರಿಂದಲೇ ಈ ಸಂಸ್ಕಾರವನ್ನು **"ವ್ರತಬಂಧ"** ಎಂದು ಕರೆಯುತ್ತಾರೆ. ಆದರೆ ಈಗ ನಡೆಯುತ್ತಿರುವ ಉಪನಯನಗಳಲ್ಲಿ ಊಟ, ಉಪಚಾರ, ಪಾಯಸ,

Scanned by CamScanner
Scanned with CamScanner

ಭಕ್ಷ್ಯ, ಭಿಕ್ಷೆ, ವಾದ್ಯ ಇತ್ಯಾದಿಗಳಿಗೇ ಪ್ರಾಧಾನ್ಯವನ್ನು ಕೊಟ್ಟು, ವೈಭವದ ಸಮಾರಂಭವನ್ನು ನಡೆಸಿ ತಮ್ಮ ಐಶ್ವರ್ಯ ಅಂತಸ್ತು ಇತ್ಯಾದಿಗಳ ಪ್ರದರ್ಶನವಾಗುತ್ತಿದೆಯೇ ಹೊರತು ಈ ಸಂಸ್ಕಾರದ ಯಥಾರ್ಥವಾದ ಉದ್ದೇಶ ಈಡೇರುವುದಿಲ್ಲ. ಅನವಶ್ಯಕಗಳಾದ ಅರ್ಥಶೂನ್ಯ ರೂಢಿಗಳನ್ನು ಬಿಟ್ಟು ಆವಶ್ಯಕವೂ, ಅರ್ಥ ಪೂರ್ಣವೂ ಆಗಿರುವ ವೈದಿಕಕ್ರಿಯಾಭಾಗಗಳಿಗೆ ಪ್ರಾಶಸ್ತ್ಯವನ್ನಿತ್ತರೆ, ಮಾಡಿದ ಕರ್ಮವು ಸಾರ್ಥಕವಾದೀತು.

॥ ಸಮಾವರ್ತನಸಂಸ್ಕಾರನಿರ್ಣಯಃ ॥

ಗುರುಣಾನುಮತೋ ಸ್ನಾತ್ವಾ ಸಮಾವೃತ್ತೋ ಯಥಾವಿಧಿ ॥ ಮನುಃ ॥ ಸ್ನಾನಂ ನಾಮ ಸಮಾವರ್ತನಂ ತತ್ರೋಪನಯನೋಕ್ತಕಾಲೇ ಸಮಾವರ್ತನಮತಿ-ಮುಖ್ಯಃ ಕಾಲಃ ॥ ತಥಾಪಿ ಮಾರ್ಗಶೀರ್ಷೇ ವಿವಾಹಪ್ರಸಕ್ತೌ ದಕ್ಷಿಣಾಯನೇಪಿ ಭವತಿ ॥ ಅನಾಶ್ರಮೀ ನ ತಿಷ್ಠೇತ ದಿನಮೇಕಮಪಿ ದ್ವಿಜಃ ॥ ಆಶ್ರಮೇಣ ವಿನಾ ತಿಷ್ಠನ್ ಪ್ರಾಯಶ್ಚಿತ್ತೀಯತೇ ಹಿ ಸಃ ॥ ಇತಿ ನಿಷೇಧಾತಿಕ್ರಮಾಪತ್ತೇಃ ॥ ಅನ್ಯೇತು ಶುಭದಿನೇ ಸಮಾವರ್ತನಂ ಕಾರ್ಯಮಿತ್ಯಾಹುಃ ॥ ಬ್ರಹ್ಮಚರ್ಯದಶಾಯಾಂ ದಶಾಹಾಶೌಚೋತ್ಪಾದಕಸಪಿಂಡಮೃತೌ ಸಮಾವರ್ತನೋತ್ತರಂ ತ್ರಿರಾತ್ರಮಧ್ಯೇ ವಿವಾಹೋ ನ ಕಾರ್ಯಃ ॥ ಕಸ್ಯಚಿನ್ಮರಣಾಭಾವೇ ತು ನ ವಿವಾಹೇ ದೋಷಃ ॥

ಸಮಾವರ್ತನಸಂಸ್ಕಾರನಿರ್ಣಯ:- ವೇದಾಧ್ಯಯನವು ಪೂರ್ಣವಾದ ಬಳಿಕ ಗುರುವಿನ ಅನುಜ್ಞೆಯನ್ನು ಪಡೆದು 'ಸ್ನಾನ' ಅಂದರೆ ಸಮಾವರ್ತನ ಮಾಡಬೇಕು. (ಸಮ್=ಪೂರ್ಣವಾಗಿ, ಆವರ್ತನ=ನಿವೃತ್ತನಾಗುವುದು). ಬ್ರಹ್ಮಚಾರಿಯು ತನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಗುರು ಹಾಗೂ ತಂದೆ-ತಾಯಿಗಳ ಅನುಮತಿಯಿಂದ, ತನಗೆ ಅನುರೂಪಳಾದ ಕನ್ಯೆಯನ್ನು ಆಯ್ಕೆ ಮಾಡಿದ ಮೇಲೆ ಈ ಸಂಸ್ಕಾರವನ್ನು ಮಾಡಲಾಗುತ್ತದೆ. ಈಗ ಪರಿಸ್ಥಿತಿಯು ತೀರ ಬದಲಾಗಿದೆ. ಮೊದಲಿನಂತೆ ವೇದಾಧ್ಯಯನ ನಡೆಯುವುದಿಲ್ಲ. ವಿದ್ಯಾರ್ಥಿಯಾದವನು ವ್ರತಸ್ಥನಾಗಿರುವುದೂ ಇಲ್ಲ. ಉಪನಯನವಾದ ಮೇಲೆ ಬ್ರಹ್ಮಚಾರಿಯು ಅನುಸರಿಸಬೇಕಾದ ಯಾವುದೇ ನಿಯಮವನ್ನು ಪಾಲಿಸದಿದ್ದರೂ, ಆ ನಿಯಮಗಳ ಸಮಾಪ್ತಿಸೂಚಕವಾದ ಈ ಸಮಾವರ್ತನಸಂಸ್ಕಾರವನ್ನು ಮಾಡುತ್ತಾರೆ. ಸರ್ವಲೋಕೋಪಕಾರಕವಾದ ಈ ಗೃಹಸ್ಥಾಶ್ರಮದ ಮಹತ್ತ್ವವನ್ನೂ, ಹೊಣೆಯನ್ನೂ ಮನಸ್ಸಿನಲ್ಲಿ ದೃಢೀಕರಿಸುವುದೇ ಈ ಸಂಸ್ಕಾರದ ಮುಖ್ಯ ಉದ್ದೇಶ. ಮೌಂಜೀಬಂಧನಕ್ಕೆ ನಿರ್ದಿಷ್ಟವಾದ ಮುಹೂರ್ತದಲ್ಲಿಯೇ ಸಮಾವರ್ತನವನ್ನೂ ಮಾಡಬೇಕು. ಮಾರ್ಗಶೀರ್ಷ ಮಾಸದಲ್ಲಿ ವಿವಾಹವಾಗುವುದಾದರೆ ದಕ್ಷಿಣಾಯನದಲ್ಲಾದರೂ ಸಮಾವರ್ತನ ಮಾಡಬಹುದು. ಯಾವ ಆಶ್ರಮವೂ ಇಲ್ಲದೆ ಮನುಷ್ಯನು ಒಂದೇ ಒಂದು ದಿನವಾದರೂ ಇರಬಾರದು ಎಂಬ ನಿಯಮವಿದೆ.

Scanned by CamScanner

Scanned with CamScanner

॥ ವಿವಾಹಸಂಸ್ಕಾರನಿರ್ಣಯಃ ॥

ವಿವಾಹೋದ್ದೇಶಃ- ವೀರಸೂರ್ದೇವಕಾಮಾಸ್ಯೋನಾ ... ॥ ಇಮಾಂತ್ವಮಿಂದ್ರಮೀಢ್ವಃ ಸುಪುತ್ರಾಂ ಸುಭಗಾಂ ಕೃಣು ॥ ಪ್ರಜಾಭಿರಗ್ನೇ ಅಮೃತತ್ವಮಶ್ಯಾಂ ॥ ಭಾಷ್ಯೇ ॥ ವೀರಸೂಃ ಪುತ್ರಾಣಾಮೇವ ಪ್ರಸವಿತ್ರೀ ಭವ ॥ ಹೇ ಇಂದ್ರ, ಇಮಾಂ ವಧೂಂ ಸುಪುತ್ರಾಂ, ಶೋಭನ ಪುತ್ರಾಂ ಸುಭಗಾಂ ಚ ಕೃಣು ॥ ಅಗ್ನೇ ಪ್ರಜಾಭಿಃ ತ್ವದ್ದತ್ತಾಭಿಃ ಅಮೃತತ್ವಂ ಸಂತತ್ಯವಿಚ್ಛೇದಂ ಅವಿನಾಶಿತ್ವಂ ಅಶ್ಯಾಂ ಪ್ರಾಪ್ನುಯಾಂ ॥ ಮನುಸ್ಮೃತಿ ಭಾಷ್ಯೇ ವಿವಾಹೇನ ಭಾರ್ಯಾ ಭವತೀತಿ ॥ ವಿವಾಹನಂ ದಾರಕರ್ಮ ಪಾಣಿಗ್ರಹಣಮಿತಿ ॥

ವಿವಾಹಭೇದಾಃ-

ಬ್ರಾಹ್ಮೋ ದೈವಸ್ತಥಾಚಾರ್ಷಃ ಪ್ರಾಜಾಪತ್ಯಸ್ತಥಾಸುರಃ ।
ಗಾಂಧರ್ವೋ ರಾಕ್ಷಸಶ್ಚೈವ ಪೈಶಾಚಸ್ತ್ವಷ್ಟಮೋ ಮತಃ ॥ ಮನುಃ ॥

ಪೂರ್ವೇಷು ಚತುರ್ಷು ಪೂರ್ವಃ ಪೂರ್ವಃ ಪ್ರಶಸ್ತಃ ॥ ಉತ್ತರೇಷು ಉತ್ತರೋತ್ತರಃ ಪಾಪೀಯಾನ್ ॥ ನಾರಾಯಣ ವೃತ್ತಿಕಾರಃ ॥

ವಿವಾಹಫಲಾನಿ:-

ಬ್ರಾಹ್ಮಾದಿಷು ವಿವಾಹೇಷು ಚತುರ್ಷ್ವೇವಾನುಪೂರ್ವಶಃ ॥
ಬ್ರಹ್ಮವರ್ಚಸಿನಃ ಪುತ್ರಾ ಜಾಯಂತೇ ಶಿಷ್ಟಸಂಮತಾಃ ॥
ಇತರೇಷ್ವವಶಿಷ್ಟೇಷು ನೃಶಂಸಾನೃತವಾದಿನಃ ।
ಜಾಯಂತೇ ದುರ್ವಿವಾಹೇಷು ಬ್ರಹ್ಮಧರ್ಮದ್ವಿಷಃ ಸುತಾಃ ॥

ವಧೂಲಕ್ಷಣಾನಿ:-

ಅವಿಪ್ಲುತಬ್ರಹ್ಮಚರ್ಯೋ ಲಕ್ಷಣ್ಯಾಂ ಸ್ತ್ರಿಯಮುದ್ವಹೇತ್ ।
ಅಸಪಿಂಡಾ ಚ ಯಾ ಮಾತುರಸಗೋತ್ರಾ ಚ ಯಾ ಪಿತುಃ ॥
ಸಾ ಪ್ರಶಸ್ತಾ ದ್ವಿಜಾತೀನಾಂ ದಾರಕರ್ಮಣಿ ಮೈಥುನೇ ।
ನೋದ್ವಹೇತ್ ಕಪಿಲಾಂ ಕನ್ಯಾಂ ನಾಧಿಕಾಂಗೀಂ ನ ರೋಗಿಣೀಂ ॥
ನಾಲೋಮಿಕಾಂ ನಾತಿಲೋಮಾಂ ನ ವಾಚಾಟಾಂ ನ ಪಿಂಗಲಾಂ ॥
ಅವ್ಯಂಗಾಂಗೀಂ ಸೌಮ್ಯನಾಮ್ನೀಂ ಹಂಸವಾರಣಗಾಮಿನೀಂ ॥
ತನುಲೋಮಕೇಶದಶನಾಂ ಮೃದ್ವಂಗೀಮುದ್ವಹೇತ್ ಸ್ತ್ರಿಯಂ ॥ ಮನುಃ ॥

ವರಲಕ್ಷಣಾನಿ:-

ಕುಲಂ ಚ ಶೀಲಂ ಚ ವಪುರ್ವಯಶ್ಚ ವಿದ್ಯಾಂ ಚ ವಿತ್ತಂ ಚ
ಸನಾಥತಾಂ ಚ ।

Scanned by CamScanner

Scanned with CamScanner

ಏತಾನ್ ಗುಣಾನ್ ಸಪ್ತ ಪರೀಕ್ಷ್ಯ ದೇಯಾ ಕನ್ಯಾ ಬುಧೈಃ
ಶೇಷಮಚಿಂತನೀಯಂ ॥

ದಶದೋಷಾಃ-

ಮಹಾಂತ್ಯಪಿ ಸಮೃದ್ಧಾನಿ ಗೋಜಾವಿಧನಧಾನ್ಯತಃ ।
ಸ್ತ್ರೀಸಂಬಂಧೇ ದಶೇಮಾನಿ ಕುಲಾನಿ ಪರಿವರ್ಜಯೇತ್ ॥
ಹೀನಜಾತೀಯ ಪಾಖಂಡ ಸುಜನೋದ್ವೇಗಕಾರಿಣಂ ।
ಛದ್ಮಾಮಯ ಸದಾವಾಚ್ಯಶ್ವಿತ್ರಿಕುಷ್ಠಿಕುಲಾನಿ ಚ ॥
ಯಸ್ಯಾಸ್ತು ನ ಭವೇತ್ ಭ್ರಾತಾ ನ ಚ ವಿಜ್ಞಾಯತೇ ಪಿತಾ ।
ನೋಪಯಚ್ಛೇತ್ತು ತಾಂ ಪ್ರಾಜ್ಞಃ ಪುತ್ರಿಕಾಧರ್ಮಶಂಕಯಾ ॥ ಸ್ಮೃತಿಃ ॥

ಜ್ಯೋತಿಃ ಶಾಸ್ತ್ರೋಕ್ತವಿಚಾರಃ-

ಜನ್ಮಸ್ಥಂ ಚ ವಿಲೋಕ್ಯ ಬಾಲವಿಧವಾಯೋಗಂ ವಿಧಾಪ್ಯ ವ್ರತಂ
ಸಾವಿತ್ರ್ಯಾ ಉತ ಪೈಪ್ಪಲಂ ಹಿ ಸುತಯಾ ದದ್ಯಾದಿಮಾಂ ವಾ ರಹಃ ।
ಸಲ್ಲಗ್ನೇಚ್ಯುತಮೂರ್ತಿ ಪಿಪ್ಪಲಘಟ್ಯೈಃ ಕೃತ್ವಾ ವಿವಾಹಂ ಸ್ಫುಟಂ
ದದ್ಯಾತ್ತಾಂ ಚಿರಜೀವಿನೇಽತ್ರ ನ ಭವೇದ್ದೋಷಃ ಪುನರ್ಭೂರ್ಭವಃ ॥

ಸೂತ್ರೋಕ್ತವಧೂಲಕ್ಷಣ ಪರೀಕ್ಷಾ:- ದುರ್ಜ್ಞೇಯಾನಿ ಲಕ್ಷಣಾನೀತಿ ಅಷ್ಟೌ ಪಿಂಡಾನ್ ಕೃತ್ವಾ ॥ ಋತಮಗ್ರೇ ... ಗೃಹಾಣೇತಿ ॥ ಕ್ಷೇತ್ರಾಚ್ಚೇದುಭಯತಃ ಸಸ್ಯಾದ್ಗೃಹ್ಣೀಯಾತ್ ಭವತ್ಯಸ್ಯಾಃ ಪ್ರಜಾ ಭವಿಷ್ಯತೀತಿ ವಿದ್ಯಾತ್, ಗೋಷ್ಠಾತ್ ಪಶುಮತೀ ವೇದಿ ಪುರೀಷಾತ್ ಬ್ರಹ್ಮವರ್ಚಸ್ವಿನ್ಯವಿದಾಸಿನೋ ಹ್ರದಾತ್ ಸರ್ವಸಂಪನ್ನಾ ದೇವನಾತ್ ಕಿತವೀ ಚತುಷ್ಪಥಾತ್ ವಿಪ್ರವ್ರಾಜಿನೀರಿಣಾದಧಾನಾ ಶ್ಮಶಾನಾತ್ಪತಿಘ್ನೀ ॥ ಆಶ್ವಲಾಯನಗೃಹ್ಯಸೂತ್ರಂ ॥

ವಿರುದ್ಧ ಸಂಬಂಧಃ-

ಮಾತುಃ ಸಪತ್ನ್ಯಾ ಭಗಿನೀಂ ತತ್ಸುತಾಂ ಚ ವಿವರ್ಜಯೇತ್ ।
ಪಿತೃವ್ಯಪತ್ನೀಭಗಿನೀಂ ತತ್ಸುತಾಂ ಚ ವಿವರ್ಜಯೇತ್ ॥

ಕೇಚಿತ್ ಜ್ಯೇಷ್ಠಭ್ರಾತಾ ಪಿತುಃ ಸಮ ಇತ್ಯುಕ್ತೇ ಜ್ಯೇಷ್ಠಭ್ರಾತೃಪತ್ನ್ಯಾ ಭಗಿನೀ ಮಾತೃಷ್ವಸ್ರ ತುಲ್ಯತ್ವಾತ್ ನ ವಿವಾಹ್ಯೇತ್ಯಾಹುಃ ॥ ಸ್ಮೃತಿಃ ॥

ವಿವಾಹವಯೋಮರ್ಯಾದಾಃ-

ಪಂಚವಿಂಶೇ ತತೋ ವರ್ಷೇ ಪುಮಾನ್ನಾರೀತು ಷೋಡಶೇ ।
ಸಮತ್ವಾಗತವೀರ್ಯೌ ತೌ ಜಾನೀಯಾತ್ಕುಶಲೋ ಭಿಷಕ್ ॥ ಸುಶ್ರುತ ॥
ಅನಗ್ನಿಕಾ ತು ಶ್ರೇಷ್ಠಾ ॥ ಗೋಭಿಲಗೃಹ್ಯ ಸೂತ್ರೇ ॥

Scanned by CamScanner

Scanned with CamScanner

ಭಿನ್ನಶಾಖೀಯ ವಿವಾಹಃ:-

ಉದ್ವಹೇತ್ತು ದ್ವಿಜೋ ಭಾರ್ಯಾಂ ಸವರ್ಣಾಂ ಲಕ್ಷಣೈರ್ಯುತಾಂ ।
ಅವ್ಯಂಗಾಂಗೀಂ ಸೌಮ್ಯನಾಮ್ನೀಂ ಮೃದ್ವಂಗೀಂಚ ಮನೋಹರಾಂ ।। ಸ್ಮೃತಿಃ ।।

ವಿವಾಹಮುಹೂರ್ತಃ:- ಉದಗಯನ ಆಪೂರ್ಯಮಾಣೇ ಪಕ್ಷೇ ಕಲ್ಯಾಣೇ ನಕ್ಷತ್ರೇ ಚೌಲಕರ್ಮೋಪನಯನಗೋದಾನವಿವಾಹಾಃ ।। ಸಾರ್ವಕಾಲಮೇಕೇ ವಿವಾಹಂ ।। ಆ. ಗೃ. ಸೂ. ೧. ।।

ಹೇತುರ್ಧರ್ಮಾರ್ಥಕಾಮಾನಾಂ ಭಾರ್ಯಾ ಸಚ್ಛೀಲಶಾಲಿನೀ ।
ವಿವಾಹಕಾಲಶುದ್ಧ್ಯಾ ತಚ್ಛೀಲಂ ತಸ್ಮಾದ್ಬ್ರವೀಮಿ ತೇ ।।

ಗುರ್ವರ್ಕಬಲಂ:-

ಜ್ಯೋತಿರ್ನಿಬಂಧೇ ಗರ್ಗಃ ।।
ಸ್ತ್ರೀಣಾಂ ಗುರುಬಲಂ ಶ್ರೇಷ್ಠಂ ಪುರುಷಾಣಾಂ ರವೇರ್ಬಲಂ ।
ತಯೋಶ್ಚಂದ್ರಬಲಂ ಶ್ರೇಷ್ಠಮಿತಿ ಗರ್ಗೇಣ ಭಾಷಿತಂ ।।
ಜನ್ಮತ್ರಿದಶಮಾರಿಸ್ಥಃ ಪೂಜಯಾ ಶುಭದೋ ಗುರುಃ ।
ವಿವಾಹೇಥ ಚತುರ್ಥಾಷ್ಟದ್ವಾದಶಸ್ಥೋ ಮೃತಿಪ್ರದಃ ।।

ಕನ್ಯಾದಾನಾಧಿಕಾರಿಣಃ:- ಯಾಜ್ಞವಲ್ಕ್ಯಃ ।।

ಪಿತಾ ಪಿತಾಮಹೋ ಭ್ರಾತಾ ಪಿತೃವ್ಯೋ ಗೋತ್ರಿಣೋ ಗುರುಃ ।
ಮಾತಾಮಹೋ ಮಾತುಲೋ ವಾ ಜನನೀ ಬಾಂಧವಾಃ ಕ್ರಮಾತ್ ।।
ಕನ್ಯಾಪ್ರದಃ ಪೂರ್ವನಾಶೇ ಪ್ರಕೃತಿಸ್ಥಃ ಪರಃ ಪರಃ ।
ಪ್ರಕೃತಿಸ್ಥ ಉನ್ಮಾದಾದಿ ದೋಷಹೀನಃ।।

ಜ್ಯೇಷ್ಠವಿಚಾರಃ:- ರತ್ನಕೋಶೇ ।।

ಜನ್ಮನಕ್ಷತ್ರೇ ಜನ್ಮದಿವಸೇ ಜನ್ಮಮಾಸೇ ಶುಭಂ ತ್ಯಜೇತ್ ।
ಜ್ಯೇಷ್ಠೇಮಾಸ್ಯಾದ್ಯಗರ್ಭಸ್ಯ ಶುಭಂ ವರ್ಜ್ಯಂ ಸ್ತ್ರಿಯಾ ಅಪಿ ।।
ಅಜ್ಯೇಷ್ಠಾ ಕನ್ಯಕಾ ಯತ್ರ ಜ್ಯೇಷ್ಠಪುತ್ರೋ ವರೋ ಯದಿ ।
ವ್ಯತ್ಯಯೋ ವಾ ತಯೋಸ್ತತ್ರ ಜ್ಯೇಷ್ಠಮಾಸಃ ಶುಭಪ್ರದಃ ।।

ಸಗೋತ್ರಾದಿ ವಿವಾಹೇ ಪ್ರಾಯಶ್ಚಿತ್ತಂ:-

ಇತ್ಥಂ ಸಗೋತ್ರಸಂಬಂಧಂ ವಿವಾಹ ವಿಷಯೇ ಸ್ಥಿತೇ ।
ಯದಿ ಕಶ್ಚಿತ್ ಜ್ಞಾನತಸ್ತಾಂ ಕನ್ಯಾಮೂಢ್ವೋಪಗಚ್ಛತಿ ।।
ಗುರುತಲ್ಪವ್ರತಾತ್ ಶುದ್ಧ್ಯೇತ್ ।। ಸ್ಮೃತ್ಯರ್ಥಸಾರೇ ।।

ವಿವಾಹೇ ಜನನಾಶೌಚವಿಚಾರಃ:-

ವ್ರತಯಜ್ಞವಿವಾಹೇಷು ಶ್ರಾದ್ಧೇ ಹೋಮೇರ್ಚನೇ ಜಪೇ ।

Scanned by CamScanner

Scanned with CamScanner

ಆರಬ್ಧೇ ಸೂತಕಂ ನ ಸ್ಯಾದನಾರಬ್ಧೇ ತು ಸೂತಕಂ ॥
ಪ್ರಾರಂಭೋ ವರಣಂ ಯಜ್ಞೇ ಸಂಕಲ್ಪೋ ವ್ರತಸತ್ರಯೋಃ ।
ನಾಂದೀಮುಖಂ ವಿವಾಹಾದೌ ಶ್ರಾದ್ಧೇ
ಪಾಕಪರಿಕ್ರಿಯಾ ॥ ಬ್ರಹ್ಮಪುರಾಣ ॥

ಗೃಹೀತಮಧುಪರ್ಕಸ್ಯ ಯಜಮಾನಾಚ್ಚ ಋತ್ವಿಜಃ ।
ಪಶ್ಚಾದಶೌಚೇ ಪತಿತೇ ನ ಭವೇದಿತಿ ನಿಶ್ಚಯಃ ॥
ಅನಾರಬ್ಧೇ ವಿಶುದ್ಧ್ಯರ್ಥಂ ಕೂಷ್ಮಾಂಡೈರ್ಜುಹುಯಾತ್ ಘೃತಂ ।
ಗಾಂ ದತ್ವಾ ಪಂಚಗವ್ಯಾಶೀಃ ತತಃ ಶುದ್ಧ್ಯತಿ ಸೂತಕೀ ॥
ಚೂಡೋಪನಯನೋದ್ವಾಹ ಪ್ರತಿಷ್ಠಾದಿಕಮಾಚರೇತ್ ।
ಯದ್ಯೈವ ಸೂತಕಪ್ರಾಪ್ತಿಃ ತದ್ಯೈವಾಭ್ಯುದಯಕ್ರಿಯಾ ॥

ವಿವಾಹಸಂಸ್ಕಾರದ ನಿರ್ಣಯ

ವಿವಾಹದ ಉದ್ದೇಶ:- ಋಗ್ವೇದದಲ್ಲಿ ಹೀಗೆ ಹೇಳಿದೆ: ಎಲೈ ವಧು, ನೀನು ವೀರರಾದ ಪುತ್ರರನ್ನೇ ಪ್ರಸವಿಸು. ಹೇ ಇಂದ್ರ, ನೀನು ಈ ವಧುವನ್ನು ಸುಪುತ್ರವತಿಯನ್ನಾಗಿಯೂ, ಸೌಭಾಗ್ಯವತಿಯನ್ನಾಗಿಯೂ ಮಾಡು. ಹೇ ಅಗ್ನಿ, ನೀನು ಕೊಟ್ಟಿರುವ ಸತ್ಸಂತಾನದಿಂದ ನಾನು ಅವಿಚ್ಛಿನ್ನಸಂತತಿಯುಳ್ಳವನಾಗಿ ಅವಿನಾಶಿತ್ವನ್ನು ಪಡೆಯುವೆನು. ಈ ಮಾತುಗಳಿಂದ ಉತ್ತಮ ಸಂತಾನವನ್ನು ಪಡೆಯುವುದೇ ವಿವಾಹದ ಪ್ರಧಾನ ಉದ್ದೇಶವೆಂಬುದು ಸ್ಪಷ್ಟವಾಗುತ್ತದೆ. ಕೇವಲ ಕಾಮತೃಪ್ತಿಗಾಗಿ ಮಾಡುವ ಅತಿಸಂಭೋಗವನ್ನು ವೇದವು ನಿಷೇಧಿಸುತ್ತದೆ. ಆದರೆ ಸಂಭೋಗವು ಪ್ರಾಣಿಸಹಜವಾದ ಪ್ರವೃತ್ತಿಯಾದುದರಿಂದ ಮನುಷ್ಯನು ವಿಧಿವತ್ತಾಗಿ ವಿವಾಹಮಾಡಿಕೊಂಡು ತನ್ನ ಭಾರ್ಯೆಯಲ್ಲಿ, ಮುಖ್ಯವಾಗಿ ಸತ್ಸಂತತಿಯನ್ನೂ, ಕಾಮತೃಪ್ತಿಯನ್ನೂ ಪಡೆಯುವುದು ದೋಷವಲ್ಲ. 'ವಹ್ ಪ್ರಾಪಣೇ' ಎಂಬ ಧಾತುವಿನಿಂದ ವಿವಾಹ ಶಬ್ದ ರೂಪಿತವಾಗಿದೆ. ಹೊಂದುವುದು, ಪಡೆದುಕೊಳ್ಳುವುದು ಪಾಣಿಗ್ರಹಣಮಾಡುವುದು ಎಂದರ್ಥ.

ವಿವಾಹಭೇದಗಳು:- ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ ಮತ್ತು ಪೈಶಾಚ ಎಂಬ ಎಂಟು ವಿಧದ ವಿವಾಹಗಳಿವೆ. ಇವುಗಳಲ್ಲಿ ಒಂದು, ಎರಡು ಮೂರು, ನಾಲ್ಕು ಕ್ರಮವಾಗಿ ಮೊದಲು ಹೇಳಿದ್ದು ಶ್ರೇಷ್ಠವಾಗಿವೆ. ನಂತರದ ನಾಲ್ಕರಲ್ಲಿ ಕ್ರಮವಾಗಿ ನಂತರ ಹೇಳಿದ್ದು ನಿಕೃಷ್ಟವಾಗಿದೆ.

ವಿವಾಹದ ಫಲಗಳು:- ಬ್ರಾಹ್ಮವೇ ಮೊದಲಾದ ಮೊದಲಿನ ನಾಲ್ಕು ವಿವಾಹಗಳಲ್ಲಿ ಯಾವುದಾದರೊಂದನ್ನು ವಿಧಿವತ್ತಾಗಿ ಮಾಡಿದಲ್ಲಿ ತೇಜಸ್ವಿಗಳೂ, ಸದಾಚಾರ ಸಂಪನ್ನರೂ ಆದ ಮಕ್ಕಳು ಹುಟ್ಟುತ್ತಾರೆ. ಮುಂದಿನ ನಾಲ್ಕು ಪ್ರಕಾರಗಳ ವಿವಾಹಗಳಿಂದ ಧರ್ಮದ್ವೇಷಿಗಳೂ, ಸಮಾಜಘಾತಕಿಗಳೂ, ವಂಚಕರೂ, ಅನೃತವಾದಿಗಳೂ ಆದ ಮಕ್ಕಳು ಹುಟ್ಟುತ್ತಾರೆ.

Scanned by CamScanner

ವಧುವಿನ ಲಕ್ಷಣ:- ಅಸ್ಖಲಿತ ಬ್ರಹ್ಮಚಾರಿಯಾದ ಪುರುಷನು ಸಮಾವರ್ತನವಾದ ಮೇಲೆ ಉತ್ತಮ ಲಕ್ಷಣಗಳಿಂದ ಕೂಡಿದ ವಧುವನ್ನು ಆಯ್ದು ವಿವಾಹವಾಗಬೇಕು. ತಂದೆಯ ಪಕ್ಷದಲ್ಲಿ ಏಳು ಹಾಗೂ ತಾಯಿಯ ಪಕ್ಷದಲ್ಲಿ ಐದು ತಲೆಮಾರುಗಳ ಸಂಬಂಧ ಇಲ್ಲದ ಭಿನ್ನಗೋತ್ರದ ವಧೂವರರು ಇರಬೇಕು. ಅರಸಿನ ಬಣ್ಣ, ಅಂಗಾಧಿಕ್ಯ ಅಥವಾ ನ್ಯೂನತೆ, ಸದಾರೋಗ, ಅತಿರೋಮ ಅಥವಾ ರೋಮವೇ ಇಲ್ಲದಿರುವಿಕೆ, ವಾಚಾಳಿ-ಇತ್ಯಾದಿ ದೋಷಗಳಿರುವ ಕನ್ಯೆಯನ್ನು ಲಗ್ನವಾಗಬಾರದು. ಸುಂದರವಾದ ಶರೀರ, ಸೌಮ್ಯವಾದ ಹೆಸರು, ಹಂಸ ಅಥವಾ ಆನೆಯಂತಹ ನಡಿಗೆ, ನುಣುಪೂ ಭೂಯಿಷ್ಠವೂ ಆದ ತಲೆಕೂದಲು, ಸುಂದರವಾದ ಹಲ್ಲುಗಳು ಹಾಗೂ ಕೋಮಲವಾದ ಅವಯವಗಳುಳ್ಳ ವಧುವನ್ನು ವರಿಸಬೇಕು.

ವರನ ಲಕ್ಷಣ:- ಕುಲ, ಶೀಲ, ಶರೀರ, ವಯಸ್ಸು, ವಿದ್ಯೆ, ದ್ರವ್ಯ ಮತ್ತು ಸನಾಥತ್ವ ಈ ಏಳು ವಿಚಾರಗಳಲ್ಲಿ ವಧುವಿನ ಕುಲಶೀಲಗಳಿಗೆ ಅನುರೂಪನಾದ ವರನನ್ನು ಆಯ್ದು ಕೊಳ್ಳಬೇಕು. ಅಂತೆಯೇ ಈ ಕೆಳಗಿನ ಹತ್ತು ದೋಷಗಳಿರುವವನನ್ನು ಅವನು ಎಷ್ಟೇ ಶ್ರೀಮಂತನಾಗಿದ್ದರೂ ಸರ್ವಥಾ ತ್ಯಜಿಸಬೇಕು. ಜಾತಿಭ್ರಷ್ಟ, ಪಾಷಂಡ, ಸಜ್ಜನ ವಿರೋಧಿ, ವಂಚಕ, ರೋಗಿ, ದುಷ್ಟಸ್ವಭಾವವುಳ್ಳವ, ಒರಟು ಮಾತಿನವ, ಕುಷ್ಠರೋಗಿ, ಬಂಧುಬಾಂಧವ ರಿಲ್ಲದವ, ತಂದೆಯ ಹೆಸರೇ ಗೊತ್ತಿಲ್ಲದವ ಇಂಥವನಿಗೆ ಕನ್ಯಾದಾನಮಾಡಿದರೆ ಕನ್ನಿಕೆಯೂ ಅಧರ್ಮಿಯಾಗಿ ನಾಶಹೊಂದುತ್ತಾಳೆ.

ಜ್ಯೋತಿಶ್ಶಾಸ್ತ್ರದಲ್ಲಿ ಹೇಳಿದ ವಿಚಾರ:- ಉತ್ತಮ ವಿದ್ವಾಂಸನಾದ ಜ್ಯೋತಿಷ್ಯನಿಗೆ ತೋರಿಸಿ ವಧೂವರರ ಜಾತಕಗಳನ್ನು ಪರೀಕ್ಷಿಸಬೇಕು. ಅವುಗಳಲ್ಲಿ ಯಾವುದಾದರೂ ದೋಷಗಳಿದ್ದರೆ ಅವುಗಳಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿ ಮೊದಲು ಪರಿಹರಿಸಿಕೊಳ್ಳಬೇಕು. ವಧೂವರರ ಜಾತಕಗಳ ಹೊಂದಾಣಿಕೆಯನ್ನು ನೋಡುವುದು ಅತ್ಯಂತ ಜಟಿಲವಾದ ಕಾರ್ಯವಾಗಿದೆ. ವಿವಾಹವಾದ ಮೇಲೆ ವಧೂವರರು ಸುಖಶಾಂತಿಯಲ್ಲಿ ಬಾಳಬೇಕು. ಅವರಿಗೆ ಸತ್ಸಂತಾನವಾಗಬೇಕು. ಆದ್ದರಿಂದ ರಾಶಿಕೂಟ, ಗ್ರಹಮೈತ್ರೀ, ಗಣಶುದ್ಧಿ, ನಾಡೀಭೇದ ಇತ್ಯಾದಿಗಳನ್ನು ಕೂಲಂಕಷವಾಗಿ ನೋಡಬೇಕು. ಕಡಿಮೆ ಎಂದರೆ ಇಪ್ಪತ್ತು ಗುಣಗಳಾದರೂ ಕೂಡಿಬರಬೇಕು.

ವಧೂಪರೀಕ್ಷೆ:- ವಧುವಿನ ಜನ್ಮಪತ್ರಿಕೆ ಇಲ್ಲದೆ, ಜಾತಕಾನುಕೂಲ್ಯವನ್ನು ನೋಡಲು ಸಾಧ್ಯವಾಗದ ಸಂದರ್ಭದಲ್ಲಿ ಈ ಕೆಳಗಿನಂತೆ ವಧೂಪರೀಕ್ಷೆ ಮಾಡಬಹುದು. ೧. ಎರಡು ಬೆಳೆ ಬರುವ ಜಮೀನು. ೨. ದನಕಟ್ಟುವ ಸ್ಥಳ. ೩. ಉಳಿದ ದರ್ಭೆ ಸಮಿಧೆ ಇತ್ಯಾದಿಗಳನ್ನು ಬಿಸಾಡುವ ಸ್ಥಳ. ೪. ನೀರು ಹರಿದುಹೋಗುವ ಕೆರೆ. ೫. ಜೂಜಾಡುವ ಸ್ಥಳ. ೬. ಸಾರ್ವಜನಿಕ ಚೌಕ. ೭. ಬೆಳೆಬಾರದ ಬಂಜರುಭೂಮಿ. ೮. ಶ್ಮಶಾನ-ಈ ಮಣ್ಣಿನಿಂದ ಎಂಟು ಉಂಡೆಗಳನ್ನು ಮಾಡಿ, ಗುರುತು ಹಾಕಿ ಒಂದು ಮಣೆಯ ಮೇಲಿಟ್ಟು,

"ಋತಮಗ್ರೇ ಪ್ರಥಮಂ ಜಜ್ಞ್ಞಋತೇ ಸತ್ಯಂ ಪ್ರತಿಷ್ಠಿತಂ ||
ಯದಿಯಂ ಕುಮಾರ್ಯಭಿಜಾತಾ ತದಿಯಮಿಹ ಪ್ರತಿಪದ್ಯತಾಂ
ಯತ್ಸತ್ಯಂ ತದ್ದೃಶ್ಯತಾಂ || "

Scanned by CamScanner

Scanned with CamScanner

ಎಂಬ ಮಂತ್ರವನ್ನು ಹೇಳಿ ಅವುಗಳನ್ನು ಅಭಿಮಂತ್ರಿಸಬೇಕು. 'ನಿನಗೆ ಇಷ್ಟಬಂದ ಒಂದು ಉಂಡೆಯನ್ನು ಎತ್ತಿಕೋ' ಎಂದು ಹೇಳಿದಾಗ ಅವಳು ಎತ್ತಿಕೊಂಡ ಉಂಡೆಯು ಯಾವುದೆಂದು ನೋಡಿ. ಈ ಕೆಳಗಿನಂತೆ ಕ್ರಮವಾಗಿ ಅದರ ಫಲವನ್ನು ತಿಳಿಯಬೇಕು. ೧. ಧನಧಾನ್ಯ ಸಂಪನ್ನೆ. ೨. ಪಶುಸಂಪತ್ತು ಉಳ್ಳವಳು. ೩. ವೇದಶಾಸ್ತ್ರಾದಿ ಪಾರಂಗತೆ. ೪. ಸರ್ವವಿಧದ ಸಂಪತ್ತುಳ್ಳವಳು. ೫. ಜೂಜುಕೋರಳು. ೬. ವ್ಯಭಿಚಾರಿಣಿ. ೭. ದಾರಿದ್ರ್ಯವುಳ್ಳವಳು. ೮. ಪತಿಯನ್ನೇ ಕೊಲ್ಲುವವಳು. ಈ ಪರೀಕ್ಷೆಯಿಂದ ವಧು ಎಂಥವಳೆಂಬುದನ್ನು ಅರಿತು ಬಳಿಕ ಆಕೆಯನ್ನು ವರಿಸಬೇಕು. ಇದು ಹಿಂದಿನ ಕಾಲದ ಒಂದು ಪದ್ಧತಿಯಾಗಿದೆಯಷ್ಟೆ.

ವಿರುದ್ಧ ಸಂಬಂಧ:- ಹತ್ತಿರದ ಸಂಬಂಧವುಳ್ಳ ಹುಡುಗಿಯನ್ನು ಮದುವೆ ಆಗಬಾರದು. ಉದಾಹರಣೆಗೆ ತಾಯಿಯ ತಂಗಿಯ ಮಗಳು, ಚಿಕ್ಕಪ್ಪನ ತಂಗಿ ಅಥವಾ ಮಗಳು, ಚಿಕ್ಕಪ್ಪನ ಹೆಂಡತಿಯ ತಂಗಿ, ಅವಳ ಮಗಳು-ಇತ್ಯಾದಿಗಳು. "ಜ್ಯೇಷ್ಠೋಭ್ರಾತಾ ಪಿತುಃ ಸಮಃ" ಎಂಬ ಮಾತಿನಂತೆ ಅಣ್ಣನು ತಂದೆಗೆ ಸಮಾನನಾದವನಾಗಿರುವುದರಿಂದ ಅವನ ಹೆಂಡತಿಯ ತಂಗಿಯು ಚಿಕ್ಕಮ್ಮನಾಗಿರುತ್ತಾಳೆ. ಅಂಥವಳನ್ನೂ ಮದುವೆಯಾಗಬಾರದು.

ವಿವಾಹಕ್ಕೆ ಯೋಗ್ಯ ಪ್ರಾಯ:- ವೈದ್ಯಶಾಸ್ತ್ರದ ದೃಷ್ಟಿಯಿಂದ ಗಂಡುಸಿಗೆ ಇಪ್ಪತ್ತೈದು ವರ್ಷ ಹಾಗೂ ಹೆಣ್ಣಿಗೆ ಹದಿನಾರು ವರ್ಷ ಪ್ರಾಯ ಆದ ಮೇಲೆ ವಿವಾಹ ಮಾಡಬೇಕು. ಆಗ ಇಬ್ಬರ ಶರೀರದ ಬೆಳವಣಿಗೆಯು ಸಾಕಷ್ಟು ಆಗಿದ್ದು ಇಬ್ಬರೂ ಸತ್ಸಂತಾನೋತ್ಪತ್ತಿಗೆ ಅರ್ಹರಾಗಿರುತ್ತಾರೆ. ಮಾತ್ರವಲ್ಲ ಅವರಿಗೆ ಆ ಪ್ರಾಯಕ್ಕೆ ಚೆನ್ನಾಗಿ ತಿಳುವಳಿಕೆ ಬಂದಿರುತ್ತದೆ.

ಭಿನ್ನಶಾಖೀಯ ವಿವಾಹ:- ಸಮಾನವರ್ಣದ ವಧುವನ್ನು ವರಿಸಬೇಕು. ವರ್ಣಗಳು ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಮತ್ತು ಶೂದ್ರ ಎಂದು ನಾಲ್ಕೇ ಇವೆ. ಈ ಕಾಲದಲ್ಲಿ ಬ್ರಾಹ್ಮಣರಲ್ಲಿ ಹಾಗೂ ಇತರ ವರ್ಣಗಳಲ್ಲಿ ನೂರಾರು ಆಂತರಿಕಪ್ರಭೇದಗಳು, ಜಾತಿಗಳು ಇವೆ. ಒಂದೇ ವರ್ಣದ ಬೇರೆಬೇರೆ ಜಾತಿಯವರು ತಮ್ಮತಮ್ಮಲ್ಲಿ ವಿವಾಹವಾಗಬಹುದು.

ವಿವಾಹ ಮುಹೂರ್ತ:- ಒಳ್ಳೆಯ ಮುಹೂರ್ತವನ್ನು ನೋಡಿ ಸಕಾಲಕ್ಕೆ ಮಾಡಿದ ಸತ್ಕರ್ಮವು ನಿಃಸಂದೇಹವಾಗಿ ಶುಭಫಲವನ್ನು ಕೊಡುತ್ತದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ತನ್ನ ಸಹಧರ್ಮಿಣಿಯನ್ನು ವರಿಸುವ ವಿವಾಹವನ್ನು, ಉತ್ತರಾಯಣ ಶುಕ್ಲಪಕ್ಷ ಮಂಗಲಪ್ರದವಾದ ತಿಥಿ, ನಕ್ಷತ್ರ, ಯೋಗ, ಕರಣ ಇತ್ಯಾದಿಗಳನ್ನು ನೋಡಿ ಜೋಯಿಸರು ಹೇಳಿದ ಶುಭಮುಹೂರ್ತದಲ್ಲಿ ಮಾಡಬೇಕು.

ಗುರುಬಲ ಹಾಗೂ ರವಿಬಲ:- ಸ್ತ್ರೀಯರಿಗೆ ಗುರುಬಲವೂ, ಪುರುಷರಿಗೆ ರವಿಬಲವೂ ಶ್ರೇಷ್ಠವಾಗಿರುತ್ತದೆ. ಸ್ತ್ರೀಪುರುಷರಿಬ್ಬರಿಗೂ ಚಂದ್ರಬಲ ಶ್ರೇಷ್ಠವಾಗಿರುತ್ತದೆ. ವಿವಾಹ ಕಾಲದಲ್ಲಿ ಗುರು ಜನ್ಮ, ಮೂರನೆಯ, ಹತ್ತನೆಯ ಹಾಗೂ ಆರನೆಯ ಸ್ಥಾನದಲ್ಲಿದ್ದರೆ ಬೃಹಸ್ಪತಿಶಾಂತಿ ಮೊದಲಾದವುಗಳಿಂದ ಶುಭಕಾರಕನಾಗುತ್ತಾನೆ. ನಾಲ್ಕು, ಎಂಟು ಮತ್ತು ಹನ್ನೆರಡನೆಯ ಸ್ಥಾನದಲ್ಲಿದ್ದರೆ ಮೃತ್ಯುಕಾರಕನಾಗುತ್ತಾನೆ. ಉಳಿದ ಸ್ಥಾನದಲ್ಲಿದ್ದಾಗ ಶುಭಪ್ರದನೆಂದು ತಿಳಿಯಬೇಕು.

Scanned by CamScanner

Scanned with CamScanner

ಕನ್ಯಾದಾನಕ್ಕೆ ಅಧಿಕಾರಿಗಳು:- ತಂದೆ, ಅಜ್ಜ, ಅಣ್ಣ, ಚಿಕ್ಕಪ್ಪ, ಕೌಟುಂಬಿಕ, ಆಚಾರ್ಯ, ತಾಯಿಯ ತಂದೆ, ಮಾವ, ತಾಯಿಯ ಇತರ ಬಂಧುಗಳು - ಅನುಕ್ರಮವಾಗಿ ಒಬ್ಬನಿಲ್ಲದಿದ್ದಾಗ ಇನ್ನೊಬ್ಬನು ಅಧಿಕಾರಿಯಾಗುತ್ತಾನೆ.

ಜ್ಯೇಷ್ಠ ವಿಚಾರ:- ಜನ್ಮನಕ್ಷತ್ರ, ಜನ್ಮದಿನ, ಜನ್ಮಮಾಸದಲ್ಲಿ ಶುಭಕರ್ಮ ಮಾಡಬಾರದು. ಜ್ಯೇಷ್ಠ ಮಾಸದಲ್ಲಿ ಜ್ಯೇಷ್ಠ ಪುತ್ರ ಹಾಗೂ ಜ್ಯೇಷ್ಠ ಕನ್ಯೆಯ ಯಾವುದೇ ಮಂಗಲಕರ್ಮವನ್ನು ವರ್ಜಿಸಬೇಕು. ವರನು ಜ್ಯೇಷ್ಠನಾಗಿದ್ದು ವಧುವು ಜ್ಯೇಷ್ಠಳಲ್ಲದಿದ್ದರೆ ಅಥವಾ ವಧುವು ಜ್ಯೇಷ್ಠಳಾಗಿದ್ದು ವರನು ಜ್ಯೇಷ್ಠನಲ್ಲದಿದ್ದರೆ ಅವರ ವಿವಾಹಕ್ಕೆ ಜ್ಯೇಷ್ಠ ಮಾಸವು ಶುಭದಾಯಕ.

ಸಗೋತ್ರವಿವಾಹ ಪ್ರಾಯಶ್ಚಿತ್ತ:- ಯಾರಾದರೂ ತಿಳಿದೂ ಸಗೋತ್ರವಿವಾಹ ಮಾಡಿಕೊಂಡಿದ್ದಾರೆಂದಾದರೆ, ಅಂಥವನು ಗುರುತಲ್ಪಗಮನಕ್ಕೆ ಹೇಳಿದ ಪ್ರಾಯಶ್ಚಿತ್ತವನ್ನು ಮಾಡಿದರೆ ದೋಷಮುಕ್ತನಾಗುತ್ತಾನೆಂದು ಸ್ಮೃತ್ಯರ್ಥಸಾರದಲ್ಲಿ ಹೇಳಿದ್ದಾರೆ.

ವಿವಾಹದಲ್ಲಿ ಜನನಾಶೌಚವಿಚಾರ:- ವ್ರತ, ಯಜ್ಞ, ವಿವಾಹ, ಶ್ರಾದ್ಧ, ಹೋಮ, ಪೂಜೆ, ಜಪ ಇವುಗಳನ್ನು ಪ್ರಾರಂಭಿಸಿದ ಮೇಲೆ ಮಧ್ಯದಲ್ಲಿ ಸೂತಕ ಬಂದರೆ, ಅದರಿಂದಲಾಗಿ ಆರಂಭಿಸಿದ ಕರ್ಮವನ್ನು ನಿಲ್ಲಿಸಬಾರದು. ಕರ್ಮದ ಆರಂಭ ಎಂಬುದನ್ನು ಈ ರೀತಿ ನಿರ್ದೇಶಿಸಿದ್ದಾರೆ. ಯಜ್ಞದ ಆರಂಭ ಋತ್ವಿಗ್ವರಣದಿಂದ; ವ್ರತ ಮತ್ತು ಸತ್ರಗಳ ಆರಂಭ ಸಂಕಲ್ಪದಿಂದ; ವಿವಾಹದ ಆರಂಭ ನಾಂದೀಶ್ರಾದ್ಧದಿಂದ; ಶ್ರಾದ್ಧದ ಆರಂಭ ಪಾಕಪ್ರೋಕ್ಷಣದಿಂದ. ಋತ್ವಿಗ್ವರಣದಲ್ಲಿ ಋತ್ವಿಜರಿಗೆ ಯಜಮಾನನು ಮಧುಪರ್ಕವನ್ನು ಕೊಟ್ಟ ಮೇಲೆ ಅವರಿಗೆ ಸೂತಕದ ದೋಷವಿಲ್ಲ. ಕರ್ಮಾರಂಭದ ಮೊದಲು ಸೂತಕ ಬಂದಿದ್ದರೆ, ಕೂಷ್ಮಾಂಡಮಂತ್ರ ಗಳಿಂದ ತುಪ್ಪದ ಹೋಮಮಾಡಿ ಪಂಚಗವ್ಯಪಾನಮಾಡಿದರೆ ಸೂತಕಿಯು ಶುದ್ಧನಾಗುತ್ತಾನೆ. ಆಮೇಲೆ ಚೌಲ, ಉಪನಯನ, ವಿವಾಹ, ದೇವಪ್ರತಿಷ್ಠೆ ಮುಂತಾದ ಕರ್ಮಗಳನ್ನು ಮಾಡಬಹುದು. ಸೂತಕ ಪ್ರಾಪ್ತವಾದ ಅದೇ ದಿನ ವೃದ್ಧಿ ಶ್ರಾದ್ಧಾದಿ ಆಭ್ಯುದಾಯಿಕ ಕರ್ಮಗಳನ್ನು ಮಾಡಬೇಕು.

Scanned by CamScanner
Scanned with CamScanner

॥ ವರ್ಧಾಪನ ನಿರ್ಣಯಃ ॥

ಸ ಚ ವರ್ಷಪರ್ಯಂತಂ ಪ್ರತಿಮಾಸಂ ಜನ್ಮತಿಥೌ ಕಾರ್ಯಃ । ವರ್ಷೋತ್ತರಂ ಪ್ರತ್ಯಬ್ದಂ ಜನ್ಮತಿಥೌ ಕಾರ್ಯಃ । ತಿಥಿದ್ವೈಧೇ ಯತ್ರ ಜನ್ಮರ್ಕ್ಷಯೋಗಃ ಸಾ ಗ್ರಾಹ್ಯಾ । ದಿನದ್ವಯೇ ಜನ್ಮನಕ್ಷತ್ರಯೋಗಸತ್ವಾಸತ್ವ-ಯೋಃಔದಯಿಕೀ ದ್ವಿಮುಹೂರ್ತಾಧಿಕಾ ಗ್ರಾಹ್ಯಾ । ದ್ವಿಮೂಹೂರ್ತ ನ್ಯೂನತ್ವೇ ಪೂರ್ವಾ । ಜನ್ಮಮಾಸಸ್ಯ ಅಧಿಮಾಸತ್ವೇ ಶುದ್ಧಮಾಸೇ ಪ್ರತ್ಯಾಬ್ದಿಕವರ್ಧಾಪನ ವಿಧಿರ್ನತ್ವಧಿಕೇ ॥

ಪುಂಸವನಾದಿನವಸಂಸ್ಕಾರಲೋಪನಿಮಿತ್ತಕ ಪ್ರಾಯಶ್ಚಿತ್ತ ಹೋಮಃ :-

ಆಚಮ್ಯ ಪವಿತ್ರಪಾಣಿಃ ಪ್ರಾಣಾನಾಯಮ್ಯ । ಮಮಾಸ್ಯ ಕುಮಾರಸ್ಯ ಸ್ವಸ್ವಕಾಲೇಷು ಕರ್ತವ್ಯಾನಾಂ ಪುಂಸವನಾದಿ ಚೌಲಾಂತನವಸಂಸ್ಕಾರಾಣಾಂ ಲೋಪಜನಿತಪ್ರತ್ಯವಾಯಪರಿಹಾರದ್ವಾರಾ ಶ್ರೀ ಪರಮೇಶ್ವರಪ್ರೀತ್ಯರ್ಥಂ ಏತೇಷು ಏಕೈಕಲೋಪೇ ಪಾದಕೃಛ್ರಂ ಚೂಡಾಯಾಶ್ಚಾರ್ಧಕೃಚ್ಛ್ರಮಿತ್ಯೇವಂ ಸಾರ್ಧ-ಕೃಚ್ಛ್ರದ್ರವ್ಯಪರಿಮಿತಪ್ರಾಯಶ್ಚಿತ್ತಂ ಯಥಾಶಕ್ತಿರಜತಪ್ರತ್ಯಾಮ್ನಾಯೇನ ಆಚರಿಷ್ಯೇ ಇತಿ ಸಂಕಲ್ಪ್ಯ ಬ್ರಾಹ್ಮಣಾನ್ ಸಂಪೂಜ್ಯ। ಇದಂ ಸಾರ್ಧಕೃಚ್ಛ್ರ ದ್ವಯಪ್ರತ್ಯಾಮ್ನಾಯ-ಗೋನಿಷ್ಕ್ರಯೀಭೂತಂ ಪ್ರತಿಕೃಚ್ಛ್ರಂ ನಿಷ್ಕತದರ್ಧತದರ್ಧಾನ್ಯತಮಪ್ರಮಾಣ-

---

ವರ್ಧಾಪನ ನಿರ್ಣಯ (ಹುಟ್ಟುಹಬ್ಬ):- ಒಂದು ವರ್ಷ ಪರ್ಯಂತ ಜನ್ಮ ದಿನ ವಿಧಿಯನ್ನು ಜನ್ಮತಿಥಿಯ ದಿವಸ ಪ್ರತಿತಿಂಗಳಲ್ಲಿಯೂ ಮಾಡಬೇಕು. ನಂತರ ವರ್ಷಕ್ಕೊಂದು ಸಲ ಸಾಕು. ಜನ್ಮತಿಥಿ ಎರಡು ದಿನಗಳಿದ್ದರೆ ಜನ್ಮನಕ್ಷತ್ರದ ಯೋಗವಿದ್ದ ದಿವಸ ಮಾಡಬೇಕು. ಎರಡು ದಿನವೂ ಜನ್ಮನಕ್ಷತ್ರದ ಯೋಗವಿದ್ದರೆ, ಯೋಗವಿದ್ದ ದಿವಸ ಮಾಡಬೇಕು. ಅಥವಾ ಎರಡು ದಿನಗಳಲ್ಲೂ ಇಲ್ಲವೆಂದಾದರೆ ಸೂರ್ಯೋದಯಕಾಲ ವ್ಯಾಪಿನೀ ನಾಲ್ಕು ಘಳಿಗೆಗಳಿಗಿಂತ ಅಧಿಕವಿರುವ ದಿನವನ್ನು ತೆಕ್ಕೊಳ್ಳಬೇಕು. ಹುಟ್ಟಿದ ತಿಂಗಳು ಅಧಿಕಮಾಸವಾಗಿದ್ದರೆ ಪ್ರತಿವರ್ಷವೂ ಶುದ್ಧಮಾಸದಲ್ಲಿ ವರ್ಧಾಪನವಿಧಿಯನ್ನು ಮಾಡಬೇಕು.

ಪುಂಸವನಾದಿ ಚೌಲಾಂತ ಸಂಸ್ಕಾರಲೋಪದ ಪ್ರಾಯಶ್ಚಿತ್ತ:- ಆಚಮನ ಮಾಡಿ ಪವಿತ್ರ ಧರಿಸಿ, ಪ್ರಾಣಾಯಾಮವನ್ನು ಮಾಡಿ **"ಮಮಾಸ್ಯ ಕುಮಾರಸ್ಯ ..... ಆಚರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ಬಳಿಕ ಬ್ರಾಹ್ಮಣರನ್ನು ಅರ್ಚಿಸಿ, **"ಇದಂ ಸಾರ್ಧ ..... ಮುತ್ಸೃಜೇ"** ಎಂದು ಹೇಳಿ ಗರ್ಭಾದಾನ ಅಥವಾ ಪುಂಸವನದಿಂದ ಯಾವ ಸಂಸ್ಕಾರ ಮಾಡದೆ

Scanned by CamScanner

ರಜತದ್ರವ್ಯಂ ನಾನಾನಾಮಗೋತ್ರೇಭ್ಯೋ ಬ್ರಾಹ್ಮಣೇಭ್ಯೋ ದಾತುಮಹ-ಮುತ್ಸೃಜೇ ॥ ತತಃ ಪ್ರಾಯಶ್ಚಿತ್ತಹೋಮಸಂಕಲ್ಪಂ ಕುರ್ಯಾತ್ ॥ ತಥಾ ಚ ಅಸ್ಯ ಚೂಡಾಂತಾನಾಂ ಸಂಸ್ಕಾರಾಣಾಂ ಕಾಲಾತ್ಯಯನಿಮಿತ್ತಪ್ರಾಯಶ್ಚಿತ್ತಹೋಮಂ ಕರಿಷ್ಯೇ । ತತ್ರಾದೌ ನಿರ್ವಿಘ್ನತಾಸಿದ್ಧ್ಯರ್ಥಂ ಗಣಪತಿಪೂಜನಂ ಕರಿಷ್ಯೇ । ಗಣಪತಿಂ ಸಂಪೂಜ್ಯ ॥ ಸ್ಥಂಡಿಲಾದಿಕೃತ್ವಾ ವಿಟ್ ನಾಮಾಗ್ನಿಂ ಪ್ರತಿಷ್ಠಾಪ್ಯ । ಅನ್ವಾಧಾನಂ ಕುರ್ಯಾತ್ । ಅಸ್ಮಿನ್ನನ್ವಾಹಿತೇಗ್ನೌ ಜಾತವೇದಸಮಗ್ನಿಮಿಧ್ಮೇನ ಪ್ರಜಾಪತಿಂ ಪ್ರಜಾಪತಿಂ ಚಾಘಾರದೇವತೇ ಆಜ್ಯೇನ ಅತ್ರ ಪ್ರಧಾನಂ । ಸಮಸ್ತಾಭಿರೇಕೇತಿ ನವಾಜ್ಯಾಹುತಿಭಿಃ ಪುನರ್ವ್ಯಾಹೃತಿಭಿಶ್ಚ ಯಕ್ಷ್ಯೇ । ಶೇಷೇಣ ಸ್ವಿಷ್ಟಕೃತಮಿತ್ಯಾದಿ ಆಜ್ಯಭಾಗಾಂತಂ ಕೃತ್ವಾ । ಪ್ರಧಾನಹೋಮಂ ಕುರ್ಯಾತ್ ॥ ಓಂ ಭೂರ್ಭುವಃ ಸ್ವಃ ಸ್ವಾಹಾ ಇತಿ ಮಂತ್ರೇಣ ನವಾಹುತಿಂ ದದ್ಯಾತ್ । ಓಂ ಭೂಃ ಸ್ವಾಹಾ ॥ ೧ ॥ ಓಂ ಭುವಃ ಸ್ವಾಹಾ ॥ ೨ ॥ ಓಂ ಸ್ವಃ ಸ್ವಾಹಾ ॥ ೩ ॥ ಓಂ ಭೂರ್ಭುವಃ ಸ್ವಃ ಸ್ವಾಹಾ ॥ ೪ ॥ ಐಂ ಭೂರಗ್ನಯೇ ಪೃಥಿವ್ಯೈ ಚ ಮಹತೇ ಸ್ವಾಹಾ ॥ ೫ ॥ ಓಂ ಭುವೋ ವಾಯವೇ ಚಾಂತರಿಕ್ಷಾಯ ಮಹತೇ ಸ್ವಾಹಾ ॥ ೬ ॥ ಓಂ ಸುವರಾದಿತ್ಯಾಯ ಚ ದಿವೇ ಚ ಮಹತೇ ಸ್ವಾಹಾ ॥ ೭ ॥ ಓಂ ಭೂರ್ಭುವಃ ಸ್ವಃ ಚಂದ್ರಮಸೇ ಚ ನಕ್ಷತ್ರೇಭ್ಯಶ್ಚ ದಿಗ್ಭ್ಯಶ್ಚ ಮಹತೇ ಸ್ವಾಹಾ ॥ ೮ ॥ ಓಂ ಪಾಹಿನೋ ಅಗ್ನ ಏವಸೇ ಸ್ವಾಹಾ ॥ ೯ ॥ ಓಂ ಪಾಹಿನೋ ವಿಶ್ವವೇದಸೇ ಸ್ವಾಹಾ ॥ ೧೦ ॥ ಓಂ ಯಜ್ಞಂ ಪಾಹಿ

ಬಾಕಿಯಾಗಿದೆಯೋ ಆಯಾ ಒಂದೊಂದು ಸಂಸ್ಕಾರದ ಬಗ್ಗೆ ಕಾಲು ಕೃಚ್ಛ್ರದಂತೆಯೂ ಹಾಗೂ ಚೂಡಾಕರ್ಮಕ್ಕೆ ಅರ್ಧ ಕೃಚ್ಛ್ರದಂತೆಯೂ ಯಥಾಶಕ್ತಿ ನಿಶ್ಚಯಮಾಡಿದ ಪ್ರಮಾಣದಲ್ಲಿ ಬ್ರಾಹ್ಮಣರಿಗೆ ಕೊಡಬೇಕು. ಪುನಃ **"ತಥಾ ಚ ಅಸ್ಯ... ಪ್ರಾಯಶ್ಚಿತ್ತಹೋಮಂ ಕರಿಷ್ಯೇ"** ಎಂದು ಸಂಕಲ್ಪಿಸಿ ಗಣಪತಿಪೂಜೆಯನ್ನು ಮಾಡಬೇಕು. ಸ್ಥಂಡಿಲಾದಿಗಳನ್ನು ಮಾಡಿ **"ವಿಟ್"** ಎಂಬ ಅಗ್ನಿಯನ್ನು ಪ್ರತಿಷ್ಠಾಪಿಸಿ ಅನ್ವಾಧಾನ ಮಾಡಬೇಕು. **"ಶೇಷೇಣ ಸ್ವಿಷ್ಟಕೃತ...."** ಎಂದು ಮೊದಲಾಗಿ ಹೇಳಿ ಸ್ಥಾಲೀಪಾಕದಲ್ಲಿ ಹೇಳಿದಂತೆ ಆಜ್ಯ ಭಾಗಾಂತದ ವರೆಗಿನ ಕರ್ಮಗಳನ್ನು

Scanned by CamScanner

Scanned with CamScanner

ವಿಭಾವಸೋ ॥ ೧೧ ॥ ಓಂ ಸರ್ವಂ ಪಾಹಿ ಶತಕ್ರತೋ ಸ್ವಾಹಾ ॥ ೧೨ ॥ ಓಂ ಪುನರುರ್ಜಾನಿವರ್ತಸ್ವ ಪುನರಗ್ನ ಇಹಾಯುಷಾ ॥ ಪುನರ್ನಃ ಪಾಹ್ಯಹಂಸಃ ಸ್ವಾಹಾ ॥ ೧೩ ॥ ಓಂ ಸಹರಯ್ಯಾನಿವರ್ತಸ್ವಾಗ್ನೇಪಿನ್ವಸ್ವಧಾರಯಾ ॥ ವಿಶ್ವಪ್ಸಿಯಾಪಿ ವಿಶ್ವತಸ್ಪರಿ ಸ್ವಾಹಾ ॥ ೧೪ ॥ ಓಂ ಭೂರ್ಭುವಃ ಸ್ವಃ ಸ್ವಾಹಾ ॥ ೧೫ ॥ ತತಃ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪಯೇತ್ ॥ ವಿಭೂತಿಂ ಧೃತ್ವಾ ಅಗ್ನಿಂ ಸಂಪೂಜಯೇತ್ ॥

ಗರ್ಭಾಧಾನಾದಿಪ್ರಾಶನಾಂತನವಸಂಸ್ಕಾರಾಣಾಂ ಸಹತಂತ್ರಪ್ರಯೋಗಃ

ಆಚಮ್ಯ ಪವಿತ್ರಪಾಣಿಃ ಪ್ರಾಣಾನಾಯಮ್ಯ ॥ ಶ್ರೀಮನ್ಮಹಾಗಣಾಧಿಪತಯೇ .... ॥ ಸುಮುಖಶ್ಚೈಕ .... ॥ ಮಮಾಸ್ಯ ಕುಮಾರಸ್ಯ ಸ್ವಸ್ವ ಕಾಲೇ ಕರ್ತವ್ಯಾನಾಂ ಗರ್ಭಾಧಾನಾದಿ ಪ್ರಾಶನಾಂತ ನವಸಂಸ್ಕಾರಾಣಾಂ ಯಥೋಕ್ತಫಲಪ್ರಾಪ್ತ್ಯರ್ಥಂ ಬೀಜಗರ್ಭಸಮುದ್ಭವೈನೋನಿಬರ್ಹಣೇನ ಬಲಾಯುರ್ವರ್ಚೋರ್ವೃದ್ಧಿದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಗರ್ಭಾಧಾನಪುಂಸವನಾದಿ ಅನ್ನಪ್ರಾಶನಾಂತಸಂಸ್ಕಾರಾನ್ ಸಹ ತಂತ್ರೇಣ ಕರಿಷ್ಯೇ ॥ ತದಂಗಭೂತಂ ಸ್ವಸ್ತಿಪುಣ್ಯಾಹವಾಚನಂ ಮಾತೃಕಾಪೂಜನಂ ನಾಂದೀಶ್ರಾದ್ಧಂ ಗ್ರಹಯಜ್ಞಂ ಚ ಕರಿಷ್ಯೇ ॥ ತತ್ರಾದೌ ನಿರ್ವಿಘ್ನತಾಸಿದ್ಧ್ಯರ್ಥಂ ಮಹಾಗಣಪತಿ ಪೂಜನಂ ಕರಿಷ್ಯೇ ।

ಮಾಡಿ ಪ್ರಧಾನಹೋಮವನ್ನು ನೆರವೇರಿಸಬೇಕು. "ಓಂ ಭೂರ್ಭುವಃ ಸ್ವಃ ಸ್ವಾಹಾ" ಈ ಮಂತ್ರದಿಂದ ಒಂಭತ್ತು ಆಜ್ಯಾಹುತಿಗಳನ್ನೂ ಕೊಡಬೇಕು. ಬಳಿಕ ಸ್ಥಾಲೀಪಾಕದಲ್ಲಿ ಹೇಳಿದಂತೆ ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಮುಗಿಸಬೇಕು.

ಗರ್ಭಾಧಾನಾದಿ ಅನ್ನಪ್ರಾಶನದ ವರೆಗಿನ ಸಂಸ್ಕಾರಗಳನ್ನು ಸಹತಂತ್ರದಿಂದ ಮಾಡುವ ಕ್ರಮ:– ಆಚಮನ ಮಾಡಿ ಪವಿತ್ರ ಧರಿಸಿ ಪ್ರಾಣಾಯಾಮ ಮಾಡಿ **"ಮಮಾಸ್ಯ ಕುಮಾರಸ್ಯ.... ನಾಂದೀಶ್ರಾದ್ಧಂ ಚ ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. **"ತತ್ರಾದೌ..... ಗಣಪತಿಪೂಜನಂ ಕರಿಷ್ಯೇ"** ಎಂದು ಹೇಳಿ, ಗಣಪತಿ ಪೂಜೆ, ಪುಣ್ಯಾಹವಾಚನ, ಮಾತೃಕಾಪೂಜನ, ನಾಂದೀಶ್ರಾದ್ಧ ಗ್ರಹಯಜ್ಞಗಳನ್ನು ಮಾಡಬೇಕು.

Scanned by CamScanner

ತಾನಿಕೃತ್ವಾ । ಅಥ ಸಾಮಗ್ರಿಂ ದರ್ಭದೂರ್ವಾಗೋಮಯಗೋಧಿಯವೈಕಮಾಷದ್ವಯದೂರ್ವಾಕಲ್ಕವಸ್ತ್ರಸಂಚಲೇ ಸಂಗ್ರಹಣಂ । ಆಜ್ಯ ಚರುಸಿದ್ಧಂ । ಅಪಕ್ವಫಲಯುತೌದುಂಬರಸ್ತಬಕಾ ಕಂಬಲಾಸನಂ ಇಧ್ಮಾಬರ್ಹಿಷೀ ಔದುಂಬರಫಲಮಾಲಾ । ದಕ್ಷಿಣತೋಗ್ನೇ ವಿಷ್ಣುಬಲ್ಯಂಗತ್ವೇನ ಸ್ಥಂಡಿಲೇ ಪೀಠೇ ಅಷ್ಟದಲೇ ಪದ್ಮೇ ಸ್ವಸ್ತಿಕೇ ವಾ ವಿಷ್ಣೋಃ ಪ್ರತಿಮಾಪೂಜನಂ ॥ ಅಗ್ನೇರೈಶಾನ್ಯಾಂ ದ್ವಾತ್ರಿಂಶದಂಗುಲಾಯಾಮವಿಸ್ತಾರಂ ಗೋಮಯೇನೋಪಲಿಪ್ತೇ ಸ್ಥಂಡಿಲೇ ಚತುರಂಗುಲಕ್ರೀಡಾವತ್ಸಮಚತುರಸ್ರ ಚತುಃ ಷಷ್ಟಿಪದಂ ಸಿತೇನ ರಜಸಾಮಂಡಲಕರಣಂ ॥ ಅಥಜಾತಕರ್ಮಾರ್ಥಂ ವಿಷಮ ಮಾನೇನ ಮಧುಸ-

---

ಬಳಿಕ ಈ ಸಂಸ್ಕಾರಗಳಿಗೆ ಬೇಕಾದ ಯಜ್ಞಸಾಮಗ್ರಿಗಳನ್ನು ದಕ್ಷಿಣದಿಂದ ಉತ್ತರಕ್ಕೆ ತಯಾರಿಸಿ ಇಡಬೇಕು. ಪುಂಸವನಕ್ಕೆ ದರ್ಭೆ, ದೂರ್ವೆ, ಗೋಮಯ, ದನದ ಮೊಸರು, ಒಂದು ಯವ, ಎರಡು ಉದ್ದಿನ ಕಾಳು, ದೂರ್ವೆಯನ್ನು ಜಜ್ಜಿ ಅದನ್ನು ಶುಭ್ರ ವಸ್ತ್ರದಲ್ಲಿ ಕಟ್ಟಿದ ಗಂಟು, ಆಜ್ಯ, ಚರು, ಎರಡು ಕಾಯಿಗಳಿರುವ ಔದುಂಬರದ ಟೊಂಗೆ ಒಂದು, ಕೆಂಪುಬಟ್ಟೆಯ ಆಸನ, ಇಧ್ಮ, ಬರ್ಹಿ, ಶೂರ್ಪ, ಕೃಷ್ಣಾಜಿನ ಮುಂತಾದ ಸ್ಥಾಲೀಪಾಕದಲ್ಲಿ ಹೇಳಿದ ವಸ್ತುಗಳು-ಇವುಗಳನ್ನು ಸ್ಥಂಡಿಲದಿಂದ ಪೂರ್ವಭಾಗದಲ್ಲಿ ದಕ್ಷಿಣದಿಕ್ಕಿನಲ್ಲಿಡಬೇಕು. ಅದರ ಉತ್ತರಭಾಗದಲ್ಲಿ ವಿಷ್ಣುಬಲಿಗಾಗಿ ವೇದಿ ಅಥವಾ ಮಣೆಯ ಮೇಲೆ ಗಂಧದಿಂದ ಅಷ್ಟದಳ ಪದ್ಮ ಅಥವಾ ಸ್ವಸ್ತಿಕಚಿಹ್ನೆಯನ್ನು ಬರೆದು, ಅದರ ಮೇಲೆ ವಿಷ್ಣು ಪ್ರತಿಮೆಯನ್ನು ಅಗ್ನ್ಯುತ್ತಾರಣ ವಿಧಿಯಿಂದ ಇಡಬೇಕು. ಆ ಪ್ರತಿಮೆಯ ಉತ್ತರಕ್ಕೆ ಮೂವತ್ತೆರಡು ಅಂಗುಲ ಚಚ್ಚೌಕವಾಗಿರುವ ವೇದಿಯನ್ನು ನಿರ್ಮಿಸಿ ಅದನ್ನು ಗೋಮಯದಿಂದ ಶುದ್ಧೀಕರಿಸಿ, ಅದರ ಮೇಲೆ ಬಿಳಿ ರಂಗವಲ್ಲಿಯಿಂದ ನಾಲ್ಕು ನಾಲ್ಕು ಅಂಗುಲದ ಅರವತ್ತನಾಲ್ಕು ಚೌಕಗಳನ್ನು ಬರೆಯಬೇಕು. ಅದರ ಉತ್ತರಕ್ಕೆ ಜಾತಕರ್ಮಕ್ಕಾಗಿ ಜೇನು ಮತ್ತು ತುಪ್ಪಗಳನ್ನು ಕಡಿಮೆ ಹಾಗೂ ಹೆಚ್ಚು ಇರುವ ಪ್ರಮಾಣದಲ್ಲಿ ಬೆರೆಸಿ ಸ್ವಚ್ಛವಾದ ಕಲ್ಲಿನ ಮೇಲೆ ಇಟ್ಟು ಅದರಲ್ಲಿ ಬಂಗಾರದ ಒಂದು ವಸ್ತುವನ್ನು ಹಾಕಿ, ಅದನ್ನು ಚಿನ್ನ ಅಥವಾ ಬೆಳ್ಳಿಯ ಪಾತ್ರೆಯಲ್ಲಿ ಇಡಬೇಕು. ನಾಮಕರಣಕ್ಕಾಗಿ ಪಾತ್ರೆಯಲ್ಲಿ ಅಕ್ಕಿ ಹಾಕಿ, ಅದರ ಮೇಲೆ ಕುಲದೇವತಾ ಭಕ್ತನಾಮ ಮೊದಲಾಗಿ ನಾಲ್ಕು ಹೆಸರುಗಳನ್ನು ಬರೆಯಬೇಕು. ನಿಷ್ಕ್ರಮಣ ಸಂಸಾರಕ್ಕೆ ಬಟ್ಟೆಯಿಂದ ಮುಚ್ಚಿದ ಮಣೆಯ ಮೇಲೆ ಇಂದ್ರಾದಿ ಅಷ್ಟದಿಕ್ಪಾಲ, ಚಂದ್ರ, ಸೂರ್ಯ, ವಾಸುದೇವ ಮತ್ತು ಗಗನದೇವತೆಗಳನ್ನು ಉತ್ತರದಿಕ್ಕಿಗೆ ಆಗುವಂತೆ ಇಡಬೇಕು. ಮಗುವಿಗೆ ತೋರಿಸಲಿಕ್ಕೆಂದು ಅಗ್ನಿಮೂರ್ತಿ, ಚಂದ್ರಮೂರ್ತಿ ಮತ್ತು ಧೇನು ಕುಳಿತುಕೊಳ್ಳಲು ಕುದುರೆ ಇವಿಷ್ಟನ್ನು ಹೊರಗೆ ತಂದಿಡಬೇಕು. ಹುಡುಗನ ರಕ್ಷಣೆಗೆ ವಿಭೂತಿ, ಮಂತ್ರಾಕ್ಷತೆ ಇಟ್ಟು ಅದರ ಉತ್ತರಕ್ಕೆ ಸಪ್ತಧಾನ್ಯ ರಾಶಿಯ ಮೇಲೆ ಎರಡು ಕಲಶಗಳನ್ನು ಸ್ಥಾಪಿಸಿ, ಅದರ ಮೇಲೆ ಭೂತೇಶ ಮತ್ತು ಗಣೇಶನ ಪ್ರತಿಮೆಗಳನ್ನು ಅಗ್ನ್ಯುತ್ತಾರಣವಿಧಿಯಿಂದ ಸ್ಥಾಪಿಸಿ ಅದರ ಹತ್ತಿರ ಎರಡು ಬಲಿಪಾತ್ರೆಗಳನ್ನೂ ಪೂಜಾಸಾಮಗ್ರಿಗಳನ್ನೂ ಇಡಬೇಕು.

Scanned by CamScanner
Scanned with CamScanner

ರ್ಷಿಷೀ ಮಿಶ್ರೀಕೃತ್ಯ ಶಿಲಾತಲೇ ನಿಧಾನಂ । ಸುವರ್ಣರಜೋವಿಮೋಕಂ ಯಾವದವಘರ್ಷಣಂ ಭಾಜನೇ ॥ ನಾಮಕರ್ಮಾರ್ಥಂ ಕಾಂಸ್ಯಪಾತ್ರೇ ತಂದುಲ-ಪೂರ್ಣೇ ಸುವರ್ಣಶಲಾಕಯಾ ನಾಮಚತುಷ್ಟಯಂ (ಕುಲದೇವತಾ ಭಕ್ತನಾಮ ಮಾಸನಾಮ ನಾಕ್ಷತ್ರಂ ನಾಮ ವ್ಯಾವಹಾರಿಕಂ ನಾಮೇತಿ) ॥ ನಿಷ್ಕ್ರಮಣಾರ್ಥಂ ಇಂದ್ರಾದಿ ಅಷ್ಟದಿಕಾಲ್ಪಾನಾಂ ಚಂದ್ರಾರ್ಕವಸುದೇವಗಗನಾನಾಂ ಚ ಯಥಾಕ್ರಮಂ ಪೀಠೇಸ್ಥಾಪನಾ ॥ ಅಗ್ನಿಚಂದ್ರಧೇನುದರ್ಶನಂ ಚ ॥ ಅಶ್ವಾರೋಹಣಂ ಗೃಹಾದ್ಬಹಿಃ ಶಿವವಿಷ್ಣ್ವಾದಿದೇವಾಯ ಪುಷ್ಪೋಪಹಾರಾಃ ಪೂಜನಾರ್ಥಂ ॥ ಶಿಶೋರುಪವೇಶ-ನಾರ್ಥಂ ಗೋಮಯಲಿಪ್ತೇ ದೇಶೇ ಚತುರಸ್ರೇ ದೇಶೇ ಧಾನ್ಯಾದಿ ನಿಧಾನಂ ॥ ರಕ್ಷಾರ್ಥಂ ವಿಭೂತಿರ್ಮಂತ್ರಾಕ್ಷತಾಃ । ಭೂತೇಶಗಣೇಶಯೋಃ ಸ್ಥಾಪನಾ ॥ ಅನ್ನಪ್ರಾಶನೇ ದಧಿಮಧುಘೃತಮಿಶ್ರಂ ಅನ್ನಂ ಶುಭೇ ಭಾಜನೇ ಪ್ರಕ್ಷಿಪತಿ ॥ ಪುಸ್ತಕ ಶಸ್ತ್ರ ವಸ್ತ್ರಾದಿಕಂ ಚ ಸಂಪಾದ್ಯ ॥ ಅದ್ಯೇತ್ಯಾದಿ ..... ॥ ಅಸ್ಯ ಕುಮಾರಸ್ಯ ಗರ್ಭಾಧಾನಪುಂಸವನಾನವಲೋಭನಸೀಮಂತೋನ್ನಯನ ವಿಷ್ಣುಬಲಿಜಾತಕರ್ಮ ನಾಮಕರಣನಿಷ್ಕ್ರಮಣಾನ್ನಪ್ರಾಶನೇತಿ ನವ ಸಂಸ್ಕಾರಾಣಾಂ ಸಹ ತಂತ್ರೇಣ ಕರ್ಮ ಕರ್ತುಂ ಆದೌ ಸ್ಥಂಡಿಲಾದಿ ಕರ್ಮ ಕರಿಷ್ಯೇ ॥ ಗೋಮಯಾಲಿಪ್ತೇ... । ಬಲವರ್ಧನನಾಮಾಗ್ನಿಂ ಪ್ರತಿಷ್ಠಾಪ್ಯ । ಅಭ್ಯುದಯಿಕಸಂಸ್ಕಾರಾಣಾಂ ಪೌಷ್ಟಿಕಾತ್ವಾವ-ಗಮಾತ್ ಪೌಷ್ಟಿಕೇಷು ಬಲವರ್ಧನನಾಮಾಗ್ನಿರಿತಿ ವಚನಾತ್ । ಅನ್ವಾಧಾನಂ ಕುರ್ಯಾತ್ । ಮಯಾ ಕ್ರಿಯ ಮಾಣೇ ಗರ್ಭಾಧಾನಾದಿ ನವಸಂಸ್ಕಾರಾಣಾಂ ಸಹ ತಂತ್ರೇಣ ಹೋಮೇ ದೇವತಾಪರಿಗ್ರಹಾರ್ಥಮನ್ವಾಧಾನಂ ಕರಿಷ್ಯೇ ॥ ಸಮಿದ್ದ್ವ-ಯಮಾದಾಯ । ಅಸ್ಮಿನ್ನನ್ವಾಹಿತೇಗ್ನೌ ಜಾತವೇದಸಮಗ್ನಿಮಿಧ್ಮೇನ ಪ್ರಜಾಪತಿಂ ಪ್ರಜಾಪತಿಂ ಚಾಘಾರದೇವತೇ ಆಜ್ಯೇನ ಅತ್ರಪ್ರಧಾನಂ । ಪ್ರಜಾಪತಿಂ ಚರುಣಾ ವಿಷ್ಣುಂ ಷಡ್ವಾರಮಾಜ್ಯೇನ ಪ್ರಜಾಪತಿಂ ಚಾಜ್ಯೇನೇತಿ ಗರ್ಭಾಧಾನದೇವತಾಃ । ಪ್ರಜಾಪತಿಂ ಚರುದ್ರವ್ಯೇಣೇತಿ ಪುಂಸವನಾನವಲೋಭನದೇವತಾಃ । ದ್ವಿರ್ಧಾತಾರಂ ದ್ವಿರಾಕಾಂ ತ್ರಿರ್ವಿಷ್ಣುಂ ಪ್ರಜಾಪತಿಂ ಚೈತಾಃ ಸೀಮಂತೋನ್ನಯನ ದೇವತಾಃ ಆಜ್ಯೇನ । ವಿಷ್ಣುಂ ಚತುಃಷಷ್ಟಿವಾರಂ ಚರುಣೇತಿ ಬಲಿಪ್ರಧಾನದೇವತಾಃ । ಅಗ್ನಿಮಿಂದ್ರಂ ಪ್ರಜಾಪತಿಂ ವಿಶ್ವಾನ್ ದೇವಾನ್ ಬ್ರಹ್ಮಾಣಂ ಚೈತಾಃ ಜಾತಕರ್ಮ ದೇವತಾ ಆಜ್ಯೇನ । ಪುನಶ್ಚೈತಾ ಏವ ನಾಮಕರ್ಮದೇವತಾ ಆಜ್ಯೇನ ಪುನರ-ಪಿಶ್ಚೈತಾ ಏವ ನಿಷ್ಕ್ರಮಣಾನ್ನಪ್ರಾಶನ ಪ್ರಧಾನಾದೇಶದೇವತಾಃ ಅಗ್ನಿಮಿಂದ್ರಂ ಪ್ರಜಾಪತಿಂ ವಿಶ್ವಾನ್ ದೇವಾನ್ ಬ್ರಹ್ಮಾಣಂ ಚೈತಾಃ ಅನಾದೇಶದೇವತಾ

Scanned by CamScanner
Scanned with CamScanner

ದ್ವಿವಾರಮಾಜ್ಯೇನ ॥ ಶೇಷೇಣ ಸ್ವಿಷ್ಟಕೃತಮಿತ್ಯಾದಿ ಅವದಾನಧರ್ಮಾಂತಂ ಸ್ಥಾಲೀಪಾಕಂ ಕರ್ಮ ಕುರ್ಯಾತ್ ॥ ನವಸಂಸ್ಕಾರಪ್ರಯೋಗೇಷು ಯಥೋಕ್ತಾನಿ ಪ್ರಧಾನ ಹೋಮಾದ್ಯಂಗಭೂತಾನಿ ಕರ್ಮಾಣಿ ಕುರ್ಯಾತ್ । ತತಃ ಸ್ವಿಷ್ಟಕೃದಾದಿ ಹೋಮಶೇಷಂ ಕರ್ಮ ಸಮಾಪಯೇತ್ ॥

॥ ರಜೋದೋಷವಿಚಾರಃ ॥

ಮೇಧಾತಿಥಿಃ ॥ ಚೌಲೇ ಚ ವ್ರತಬಂಧೇ ಚ ವಿವಾಹೇ ಯಜ್ಞ-ಕರ್ಮಣಿ । ಭಾರ್ಯಾ ರಜಸ್ವಲಾ ಯಸ್ಯ ಪ್ರಾಯಸ್ತಸ್ಯ ನ ಶೋಭನಂ ॥ ನಾಂದೀಶ್ರಾದ್ಧೋತ್ತರಂ ರಜೋದೋಷೇ ತು ಕಪರ್ದಿಕಾಕಾರಿಕಾಸು-ಸೂತಿಕೋದ-ಕ್ಯಯೋಃ ಶುದ್ಧ್ಯೈ ಗಾಂ ದದ್ಯಾದ್ಧೋಮಪೂರ್ವಕಂ । ಪ್ರಾಪ್ತೇ ಕರ್ಮಣಿ ಶುದ್ಧಿಃ ಸ್ಯಾದಿತರಸ್ಮಿನ್ನ ಶುದ್ಧ್ಯತಿ ॥ ಅಲಾಭೇ ಸುಮುಹೂರ್ತಸ್ಯ ರಜೋದೋಷೇ ಚ ಸಂಗತೇ । ಶ್ರಿಯಂ ಸಂಪೂಜ್ಯ ತತ್ಕುರ್ಯಾತ್ಪಾಣಿಗ್ರಹಣಮಂಗಲಂ ॥

ಅನ್ನಪ್ರಾಶನಕ್ಕೆ ಮೊಸರು, ಜೇನು, ತುಪ್ಪ ಇತ್ಯಾದಿಗಳನ್ನು ಬೇಕಾದಾಗ ತರಬೇಕು. ಪುಸ್ತಕ, ಶಸ್ತ್ರ, ವಸ್ತ್ರ ಮೊದಲಾದವುಗಳನ್ನು ತಂದಿಡಬೇಕು. ನಂತರ ಹೋಮವನ್ನು ಪ್ರಾರಂಭಿಸಬೇಕು. **"ಅಸ್ಯ ಕುಮಾರಸ್ಯ... ಕರಿಷ್ಯೇ"** ಎಂದು ಸಂಕಲ್ಪಿಸಿ, ಸ್ಥಾಲೀಪಾಕದಲ್ಲಿ ಹೇಳಿದಂತೆ ಸ್ಥಂಡಿಲ ಸಂಸ್ಕಾರಾದಿಗಳನ್ನು ಮಾಡಿ 'ಬಲವರ್ಧನ' ಅಗ್ನಿಯನ್ನು ಪ್ರತಿಷ್ಠಾಪಿಸಿ, ಮೇಲೆ ಹೇಳಿದಂತೆ ಎಲ್ಲ ಸಂಸ್ಕಾರಗಳಿಗೂ ಅನ್ವಾಧಾನ ಮಾಡಿ ಪ್ರತಿಯೊಂದು ಸಂಸ್ಕಾರದ ಪ್ರಯೋಗದಲ್ಲಿ ಹೇಳಿದಂತೆ ಹೋಮಾದಿಗಳನ್ನು ಸ್ವಿಷ್ಟಕೃದಾದಿಹೋಮಶೇಷಕರ್ಮಗಳನ್ನು ಮಾಡಿ ಮುಗಿಸಬೇಕು.

ರಜೋದೋಷವಿಚಾರ: ಚೌಲ, ಉಪನಯನ, ವಿವಾಹ, ಯಜ್ಞ - ಈ ಕರ್ಮಗಳಲ್ಲಿ ಹೆಂಡತಿಯು ರಜಸ್ವಲೆಯಾದರೆ ಆ ಕರ್ಮಗಳು ಶುಭಪ್ರದವಾಗುವುದಿಲ್ಲವೆಂದು ಮೇಧಾತಿಥಿ ಯವರು ಹೇಳುತ್ತಾರೆ. ನಾಂದೀಶ್ರಾದ್ಧಾನಂತರ ಪತ್ನಿಯು ರಜಸ್ವಾಲೆಯಾದರೆ, ಸೂತಿಕಾ ಹಾಗೂ ರಜಸ್ವಲೆಯ ಶುದ್ಧಿಗೋಸ್ಕರ ಹೋಮಮಾಡಿ ಗೋದಾನ ಮಾಡಬೇಕೆಂದು ಕಪರ್ದಿಕಾಕಾರಿಕೆಗಳಲ್ಲಿ ಹೇಳಲಾಗಿದೆ. ರಜೋದೋಷ ಉಂಟಾಗಿದ್ದು ಬೇರೆ ಒಳ್ಳೆಯ ಮುಹೂರ್ತವು ಸಿಗದಿದ್ದರೆ ಶ್ರೀಪೂಜೆಯನ್ನು ಮಾಡಿ ವಿವಾಹಾದಿ ಮಂಗಲ ಕಾರ್ಯಗಳನ್ನು ಮಾಡಬೇಕು.

Scanned by CamScanner

Scanned with CamScanner

ಏಕೋದರವಿಚಾರಃ:-

ಜ್ಯೋತಿರ್ನಿಬಂಧೇ ಮನುಃ-ಏಕಮಾತೃಜಯೋರೇಕವತ್ಸರೇ ಪುರುಷ ಸ್ತ್ರಿಯೋಃ ನ ಸಮಾನಕ್ರಿಯಾಂ ಕುರ್ಯಾತ್ । ಮಾತೃಭೇದಾಭಾವಾತ್ ॥ ನಾರದಃ- ಪುತ್ರೋದ್ವಾಹಾತ್ಪರಂ ಪುತ್ರೀವಿವಾಹೋ ನ ಋತುತ್ರಯೇ । ನ ತಯೋರ್ವ್ರತಮುದ್ವಾಹಾನ್ಮಂಡನಾದಪಿ ಮಂಡನಂ ॥ ಸಾರಾವಲ್ಯಾಂ-ಫಾಲ್ಗುನೇ ಚೈತ್ರಮಾಸೇ ತು ಪುತ್ರೋದ್ವಾಹೋಪನಾಯನೇ । ಭೇದಾದ್ವರ್ಷಸ್ಯ ಕುರ್ವೀತ ನರ್ತುತ್ರಯವಿಲಂಬನಂ ॥ ಮದನರತ್ನೇ ವಸಿಷ್ಠಃ- ದ್ವಿಶೋಭನಂ ತ್ವೇಕಗೃಹೇಽಪಿ ನೇಷ್ಟಂ ಶುಭಂ ತು ಪಶ್ಚಾನ್ನವಭಿರ್ದಿನೈಸ್ತು । ಆವಶ್ಯಕಂ ಶೋಭನಮುತ್ಸವೋ ವಾ ದ್ವಾರೇಥವಾಚಾರ್ಯ ವಿಭೇದತೋ ವಾ ॥ ಏಕೋದರ ಪ್ರಸೂತಾನಾಂ ನಾಗ್ನಿಕಾರ್ಯತ್ರಯಂ ಭವೇತ್ । ಭಿನ್ನೋದರಪ್ರಸೂತಾನಾಂ ನೇತಿ ಶಾತಾತಪೋಽಬ್ರವೀತ್ ॥ ಜ್ಯೋತಿರ್ನಿಬಂಧೇ ಕಾತ್ಯಾಯನಃ-ಅಭಿನ್ನವತ್ಸರೇಽಪಿ ಸ್ಯಾತ್

ಮೇಧಾತಿಥಿ:- ತನ್ನ ಗೋತ್ರದಲ್ಲಿ ಮೂರು ಪುರುಷರ ವರೇಗೆ ಯಾರಾದರೂ ಮೃತಿಹೊಂದಿದರೆ ಪ್ರತಿಕೂಲವೆಂದು ತಿಳಿಯಬೇಕು. ಅದೇ ರೀತಿ "ಪ್ರವೇಶ" ಪುತ್ರ ವಿವಾಹಮಾಡಿದ ಒಡನೇ "ನಿರ್ಗಮ" ಕನ್ಯಾವಿವಾಹ ಮಾಡಬಾರದು. ಹಾಗೆಯೇ ಮಂಡನ (ವಿವಾಹ) ಮಾಡಿದ ನಂತರ ಮುಂಡನ (ಚೌಲ) ಮಾಡಬಾರದು.

ಏಕೋದರ ವಿಚಾರ:- ಒಬ್ಬಳೇ ತಾಯಿಯ ಪುತ್ರ ಮತ್ತು ಪುತ್ರಿಯ ಸಮಾನ ಸಂಸ್ಕಾರವನ್ನು ಒಂದೇ ವರ್ಷದಲ್ಲಿ ಮಾಡಬಾರದೆಂದು, ತಾಯಿ ಬೇರೆಯಾದರೆ ನಿಷೇಧವಿಲ್ಲ ವೆಂದು, ತಾಯಿ ಒಬ್ಬಳೇ ಆಗಿರುವುದರಿಂದ ಒಬ್ಬ ಪುರುಷನಿಗೆ ಒಂದೇ ದಿನ ಎರಡು ವಿವಾಹಗಳು ನಿಷಿದ್ಧವೆಂದೂ ಜ್ಯೋತಿರ್ನಿಬಂಧದಲ್ಲಿ ವೃದ್ಧಮನು ಹೇಳಿದ್ದಾರೆ.

ನಾರದ:- ಪುತ್ರನ ವಿವಾಹದ ನಂತರ ಆರು ತಿಂಗಳ ಒಳಗೆ ಕನ್ಯೆಯ ವಿವಾಹ ಮಾಡಬಾರದು. ಪುತ್ರ ಅಥವಾ ಕನ್ಯೆಯ ವಿವಾಹದ ನಂತರ ಆರು ತಿಂಗಳ ಒಳಗೆ ಮೌಂಜೀ ಬಂಧನ ಮಾಡಬಾರದು. ವರ್ಷವು ಬೇರೆ ಆಗಿರದಿದ್ದರೆ ಮಾತ್ರ ಈ ನಿಷೇಧವಿರುವುದೆಂದು ತಿಳಿಯಬೇಕು.

ಸಾರಾವಲೀ:- ಫಾಲ್ಗುನ ಮಾಸದಲ್ಲಿ ಮಗನ ಮದುವೆ ಮಾಡಿದ ನಂತರ ವರ್ಷವು ಬೇರೆ ಆಗುವುದರಿಂದ ಚೈತ್ರದಲ್ಲಿ ಮಗನ ಉಪನಯನ ಮಾಡಬಹುದು. ಇಲ್ಲಿ 6 ತಿಂಗಳು ಕಳೆಯಬೇಕೆಂದಿಲ್ಲ

ಮದನರತ್ನದಲ್ಲಿ ವಸಿಷ್ಠರು:- ಒಂದೇ ಮನೆಯಲ್ಲಿ ಎರಡು ಮಂಗಲಕಾರ್ಯಗಳನ್ನು ಮಾಡಬಾರದು. ಒಂದಾದ ಬಳಿಕ ಒಂಭತ್ತು ದಿನಗಳು ಕಳೆದ ಮೇಲೆ ಮತ್ತೊಂದನ್ನು

Scanned by CamScanner

ತದಹಸ್ತತ್ರ ಭೇದಯೇತ್ ॥ ಅಭೇದೇ ತು ವಿನಾಶಃ ಸ್ಯಾತ್ ನ ಕುರ್ಯಾದೇಕಮಂಡಪೇ ॥ ಜ್ಯೋತಿರ್ನಿಬಂಧೇ ನಾರದಃ ಪ್ರತ್ಯುದ್ವಾಹೋ ನೈವ ಕಾರ್ಯೋ ನೈಕಸ್ಮೈ ದುಹಿತೃದ್ವಯಂ । ನೈಕಜನ್ಯಯೋಃ ಪುಂಸೋರ್ನೈಕಜನ್ಯೇ ತು ಕನ್ಯಕೇ । ನೈವಂ ಕದಾಚಿದುದ್ವಾಹೋ ನೈಕದಾಮುಂಡನದ್ವಯಂ ॥ ನೈಕಜನ್ಯೇ ತು ಕನ್ಯೇ ದ್ವೇ ಪುತ್ರಯೋರೇಕಜನ್ಯಯೋಃ । ನ ಪುತ್ರೀದ್ವಯಮೇಕಸ್ಮೈ ಪ್ರದದ್ಯಾತ್ತು ಕದಾಚನ ॥ ಇತಿ ॥

ಕನ್ಯಾವಿಕ್ರಯದೋಷವಿಚಾರಃ:-

ಯಃ ಕನ್ಯಾಪಾಲನಂ ಕೃತ್ವಾ ಕರೋತಿ ವಿಕ್ರಯಂ ಯದಿ । ವಿಪದಾ ಧನಲೋಭೇನ ಕುಂಭೀಪಾಕಂ ಸ ಗಚ್ಛತಿ ॥ ಕನ್ಯಾಮೂತ್ರಂ ಪುರೀಷಂ ಚ ತತ್ರ ಭಕ್ಷತಿ ಪಾತಕೀ । ಕೃಮಿಭಿರ್ದಂಶಿತಃ ಕಾಕೈಃ ಯಾವದಿಂದ್ರಾಶ್ಚತುರ್ದಶ ॥ ತದಂತೇ

ಮಾಡಬಹುದು. ಅನಿವಾರ್ಯ ಸಂದರ್ಭ ಒದಗಿಬಂದರೆ, ದ್ವಾರಭೇದ ಹಾಗೂ ಆಚಾರ್ಯ ಭೇದವನ್ನು ಮಾಡಿಕೊಂಡು ನೆರವೇರಿಸಬೇಕು. ಆರು ತಿಂಗಳ ಒಳಗೆ ಸಹೋದರರ ಅಗ್ನಿಕಾರ್ಯ, ಉಪನಯನ, ವಿವಾಹ ಮೂರು ಮಾಡಬಾರದು. ಶಾತಾತಪರು ಭಿನ್ನೋದರರ ಮೂರು ಅಗ್ನಿಕಾರ್ಯಗಳನ್ನು ಆರು ತಿಂಗಳೊಳಗೆ ಮಾಡಬಾರದೆಂದು ಹೇಳುತ್ತಾರೆ. ಸಂಕಟ ಪ್ರಾಪ್ತವಾದರೆ ಸೋದರರ ಸಮಾನ ಸಂಸ್ಕಾರವನ್ನೂ ಒಂದೇ ವರ್ಷದಲ್ಲಿ ಮಾಡಬಹುದೆಂದು ಜ್ಯೋತಿರ್ನಿಬಂಧದಲ್ಲಿ ಕಾತ್ಯಾಯನರು ಹೇಳುತ್ತಾರೆ. ದಿನಗಳು ಮಾತ್ರ ಭಿನ್ನವಾಗಿರಬೇಕು. ಒಂದೇ ದಿನ ಮಾಡಿದರೆ ಒಬ್ಬನ ನಾಶವಾಗುವುದು. ಸೋದರರ ಸಮಾನಸಂಸ್ಕಾರವನ್ನು ಒಂದೇ ಮಂಟಪದಲ್ಲಿ ಮಾಡಬಾರದು. ಜ್ಯೋತಿರ್ನಿಬಂಧದಲ್ಲಿ ನಾರದ:- ಪ್ರತ್ಯುದ್ವಾಹ (ತನ್ನ ಮಗಳನ್ನು ಇನ್ನೊಬ್ಬನ ಮಗನಿಗೂ ಇನ್ನೊಬ್ಬನ ಮಗಳನ್ನು ತನ್ನ ಮಗನಿಗೂ) ಮಾಡಬಾರದು. ಒಬ್ಬನಿಗೆ ಇಬ್ಬರು ಪುತ್ರಿಯರನ್ನು ಕೊಡಬಾರದು. ಅಣ್ಣ-ತಮ್ಮಂದ್ಯರಿಗೆ ಅಕ್ಕ-ತಂಗಿಯರನ್ನು ಕೊಡಬಾರದು. ಒಬ್ಬನಿಂದಲೇ ಜನ್ಮತಾಳಿದ ಇಬ್ಬರ ವಿವಾಹವನ್ನು, ಚೌಲಾದಿಗಳನ್ನು ಒಂದೇ ಸಲ ಮಾಡಬಾರದು. ಒಬ್ಬರಿಂದ ಉತ್ಪನ್ನರಾದ ಇಬ್ಬರು ಕನ್ಯೆಯರನ್ನು ಇಬ್ಬರಿಗೆ ಅಥವಾ ಒಬ್ಬನಿಗೇ ಕೊಡಕೂಡದು.

ಕನ್ಯಾವಿಕ್ರಯದೋಷ:- ಆಪತ್ತಿನಲ್ಲಿ ಸಿಲುಕಿ ಅಥವಾ ಧನದಾಸೆಯಿಂದ ಯಾವ ತಂದೆಯು ತನ್ನ ಮಗಳನ್ನು ವಿಕ್ರಯಿಸುತ್ತಾನೋ ಆತನು ಕುಂಭೀಪಾಕ ನರಕದಲ್ಲಿ ಬಿದ್ದು ಕ್ರಿಮಿಕೀಟಾದಿಗಳಿಂದ ಕಚ್ಚಲ್ಪಟ್ಟು ಕನ್ಯೆಯ ಮಲಮೂತ್ರಗಳನ್ನು ಭಕ್ಷಿಸುತ್ತ ಪುನಃ ಭೂಮಿಯ ಮೇಲೆ ಹುಟ್ಟುವಾಗ ರೋಗಿಯೂ ಮಾಂಸವಿಕ್ರಯ ಮಾಡುವವನೂ ಆಗುತ್ತಾನೆ. ರಿಕ್ತವಲ್ಲದ ತಿಥಿಯ ದಿವಸ; ಶ್ರವಣ, ಪುಷ್ಯ, ಪುನರ್ವಸು, ಮೃಗ, ಹಸ್ತಾ, ಮೂಲಾ, ಅನುರಾಧಾ

Scanned by CamScanner

ವ್ಯಾಧಿತೋ ಭೂತ್ವಾ ಲಭೇಜ್ಜನ್ಮ ಸುನಿಶ್ಚಿತಂ ॥ ವಿಕ್ರೀಣಾತಿ ಮಾಂಸಭಾರಂ ವಹತ್ಯೇವ ದಿವಾನಿಶಂ ॥

॥ ಬಾಲಕಸ್ಯ ದೃಷ್ಟಿದೋಷಾದೌ ರಕ್ಷಾವಿಧಿಃ ॥

ವಾಸುದೇವೋ ಜಗನ್ನಾಥಃ ಪೂತನಾತರ್ಜನೋ ಹರಿಃ । ರಕ್ಷತು ತ್ವರಿತೋ ಬಾಲಂ ಮುಂಚ ಮುಂಚ ಕುಮಾರಕಂ ॥ ಕೃಷ್ಣ ರಕ್ಷ ಶಿಶುಂ ಶಂಖಮಧುಕೈಟಭಮರ್ದನ । ಪ್ರಾತಃ ಸಮಯ ಮಧ್ಯಾಹ್ನ ಸಾಯಾಹ್ನೇಷು ಚ ಸಂಧ್ಯಯೋಃ । ಮಹಾನಿಶಿ ಸದಾ ರಕ್ಷ ಕಂಸಾರಿಷ್ಟನಿಷೂದನ । ಯದ್ಘೋರಜಃ ಪಿಶಾಚಾಂಶ್ಚ ಗ್ರಹನ್ಮಾತೃಗ್ರಹಾನಪಿ ॥ ಬಾಲಗ್ರಹಾನ್ವಿಶೇಷೇಣ ಛಿಂದಿ ಛಿಂದಿ ಮಹಾಭಯಾತ್ । ತ್ರಾಹಿ ತ್ರಾಹಿ ಹರೇ ನಿತ್ಯಂ ತ್ವದ್ರಕ್ಷಾ-ಭೂಷಿತಂ ಶಿಶುಂ ॥ ಇತಿ ಭಸ್ಮಾಭಿಮಂತ್ರ್ಯೈವ ಭೂಷಯೇತ್ತೇನ ಭಸ್ಮನಾ । ಶಿರೋ ಲಲಾಟಾದ್ಯಂಗೇಷು ರಕ್ಷಾಂ ಕುರ್ಯಾದ್ಯಥಾವಿಧಿ ॥ ಇತಿ ॥ ಪ್ರಯೋಗಸಾರೇ-ರಕ್ಷ ರಕ್ಷ ಮಹಾದೇವ ನೀಲಗ್ರೀವ ಜಟಾಧರ । ಗ್ರಹೈಸ್ತು ಸಹಿತೋ ರಕ್ಷ ಮುಂಚ ಮುಂಚ ಕುಮಾರಕಂ ॥ ಅಮುಂ ಮಂತ್ರಂ ಭೂರ್ಜಪತ್ರೇ ವಿಲಿಖ್ಯ ತತ್ಪತ್ರಂ ಭುಜೇ ಬಧ್ನೀಯಾತ್ ॥ ಬಾಲರೋದನ-ಪರಿಹಾರಾರ್ಥಂ ಯಂತ್ರಮುಕ್ತಂ ಮಯೂಖೇ-ಷಡಸ್ರಮಧ್ಯೇ ಹ್ರಿಂಕಾರ-ಸ್ತನ್ಮಧ್ಯೇ ಶಿಶೋರ್ನಾಮಾಲಿಖ್ಯಷಟ್‌ಕೋಣೇಷು ಓಂ ಲುಲುವಸ್ವಾಹಾ ಇತಿ ಮಂತ್ರ ಷಡಕ್ಷರಾಣಿ ವಿಲಿಖ್ಯ ತದ್ಬಹಿರ್ನೇಮಿವತ್ ವೃತ್ತದ್ವಯಂ ವಿಲಿಖ್ಯ ತದ್ಬಹಿರಧೋಮುಖೈರರ್ಧಚಂದ್ರೈರಾವೇಷ್ಟ್ಯ ಪಂಚೋಪಚಾರೈಃ ಸಂಪೂಜ್ಯ

ನಕ್ಷತ್ರಗಳಲ್ಲಿ ನೀರಿದ್ದ ಸ್ಥಳಕ್ಕೆ ಹೋಗಿ ಪೂಜೆ ಮಾಡಬೇಕು. ಗುರು, ಶುಕ್ರಾಸ್ತ, ಚೈತ್ರ, ಪೌಷ್ಯ ಹಾಗೂ ಅಧಿಕಮಾಸಗಳನ್ನು ಬಿಡಬೇಕು.

ಬಾಲಕನಿಗೆ ದೃಷ್ಟಿದೋಷವಾಗಿದ್ದರೆ ರಕ್ಷಾವಿಧಿ:- ಮಗುವಿಗೆ ಯಾರದಾದರೂ ದೃಷ್ಟಿ ತಾಗಿದರೆ **"ವಾಸುದೇವೋ... ಶಿಶುಂ"** ಎಂಬಲ್ಲಿ ವರೆಗಿನ ಶ್ಲೋಕಗಳಿಂದ ಭಸ್ಮವನ್ನು ಅಭಿಮಂತ್ರಿಸಿ ತಲೆ ಹಣೆ ಮುಂತಾದ ಅವಯವಗಳಿಗೆ ಹಚ್ಚಬೇಕು.

"ರಕ್ಷ ರಕ್ಷ....." ಎಂಬ ಮಂತ್ರವನ್ನು ಭೂರ್ಜಪತ್ರದಲ್ಲಿ ಬರೆದು ಅದನ್ನು ಮಗುವಿನ ತೋಳಿಗೆ ಕಟ್ಟಬೇಕೆಂದು ಪ್ರಯೋಗಸಾರದಲ್ಲಿ ಹೇಳಿದೆ.

ಬಾಲಕನು ಅಳುತ್ತಿದ್ದರೆ ಅದರ ಪರಿಹಾರಕ್ಕೆ ಮಯೂಖ ಗ್ರಂಥದಲ್ಲಿ ಈ ಕೆಳಗಿನ ಯಂತ್ರವನ್ನು ಬರೆದು ಮಧ್ಯದಲ್ಲಿ **ಹ್ರೀಂ** ಎಂತ ದೊಡ್ಡ ಅಕ್ಷರವನ್ನು ಬರೆದು, ಅದರ ನಡುವೆ ಮಗುವಿನ ಹೆಸರು ಬರೆದು, ಆರು ಕೋನಗಳಲ್ಲಿ **"ಓಂ ಲು ಲು ವ ಸ್ವಾ ಹಾ"** ಎಂಬ

Scanned by CamScanner
Scanned with CamScanner

ಬಾಲಹಸ್ತೇ ಬಧ್ನೀಯಾದಿತಿ ॥ ಬಾಲಗ್ರಹಶಾಂತ್ಯಾದಿಕಂ ಬಾಲಗ್ರಹಸ್ತವಶ್ಚ ಶಾಂತಿ-ಕಮಲಾಕರ ಶಾಂತಿಮಯೂಖಯೋರ್ದ್ರಷ್ಟವ್ಯಃ ॥

ಕಟಿಸೂತ್ರಧಾರಣಂ ಭೂಮ್ಯುಪವೇಶನಂ ಚಃ-

ಧರಾವರಾಹಾವಪಿ ಸಂಪೂಜ್ಯ ಪಂಚಮೇ ಮಾಸೇ ಧರಾಯಾಮುಪವೇಶ-ಯೇಚ್ಛಿಶುಂ । ಶುಭೇಹ್ನಿ ಬದ್ಧ್ವಾ ಕಟಿಸೂತ್ರಮೈಂದವ ಕ್ಷಿಪ್ರೇಂದ್ರಮಿತ್ರ-ಧ್ರುವಭೈರಸೃಗ್ಬಲೇ ॥

ಪಂಚಮೇ ಮಾಸಿ ಶುಕ್ಲಪಕ್ಷೇ ಜ್ಯೋತಿಃಶಾಸ್ತ್ರೋಕ್ತ ಶುಭತಿಥ್ಯಾದೌ ಪೂರ್ವಾಹ್ಣೇ ಸ್ವಸ್ತಿವಾಚನಂ ಕೃತ್ವಾ ವರಾಹಪೃಥಿವೀಗುರುದೇವದ್ವಿಜಾನ್ ಪೂಜಯಿತ್ವಾ ಭೂಭಾಗಮುಪಲಿಪ್ಯ ತತ್ರ ಮಂಡಲಂ ಕೃತ್ವಾ ಶಂಖ ತೂರ್ಯಾದಿ ಮಾಂಗಲಿಕಧ್ವನೌ ಕ್ರಿಯಮಾಣೇ ಭೂಮೌ ಶಿಶುಮುಪವೇಶ-ಯೇತ್ ಏತೈರ್ಮಂತ್ರೈಃ ॥ ರಕ್ಷೈನಂ ವಸುಧೇ ದೇವಿ ಸದಾ ಸರ್ವಗತಂ ಶುಭೇ । ಆಯುಃ ಪ್ರಮಾಣಂ ನಿಖಿಲಂ ನಿಕ್ಷಿಪಸ್ವ ಹರಿಪ್ರಿಯೇ । ಅಚಿರಾದಾ-ಯುಷಸ್ತ್ವಸ್ಯ ಯೇ ಕೇಚಿತ್ಪರಿಪಂಥಿನಃ । ಜೀವಿತಾರೋಗ್ಯವಿತ್ತೇಷು ನಿರ್ದಹ ಸ್ವಾಚಿರೇಣ ತಾನ್ ॥ ಧಾರಿಣ್ಯಶೇಷಭೂತಾನಾಂ ಮಾತಸ್ತ್ವಮಧಿಕಾಹ್ಯಸಿ । ಕುಮಾರಂ ಪಾಹಿ ಮಾತಸ್ತ್ವಂ ಬ್ರಹ್ಮಾ ತದನುಮನ್ಯತಾಂ ॥ ಇತಿ ॥ ತತೋ

ಆರು ಅಕ್ಷರಗಳನ್ನೂ ಬರೆದು ಯಂತ್ರದ ಹೊರಬದಿಯಲ್ಲಿ ರಥಚಕ್ರದ ಪ್ರಾಂತಭಾಗದಂತೆ ಎರಡು ವರ್ತುಲಗಳನ್ನೂ ರಚಿಸಿ, ಅದಕ್ಕಿಂತ ಹೊರಗೆ ಸುತ್ತಲೂ ಕೆಳಮುಖವಾಗಿರುವ ಅರ್ಧಚಂದ್ರ ಆಕೃತಿಯನ್ನು ಮಾಡಿ ಪಂಚೋಪಚಾರಗಳಿಂದ ಯಂತ್ರವನ್ನು ಪೂಜಿಸಬೇಕು.

ಬಾಲಗ್ರಹಶಾಂತಿ, ಬಾಲಗ್ರಹಸ್ತೋತ್ರ ಇತ್ಯಾದಿಗಳನ್ನು ಶಾಂತಿಕಮಲಾಕರ ಶಾಂತಿಮಯೂಖ ಮುಂತಾದ ಗ್ರಂಥಗಳಲ್ಲಿ ನೋಡಬೇಕು.

ಮಗುವಿನ ಸೊಂಟಕ್ಕೆ ನೂಲುಕಟ್ಟುವುದು ಮತ್ತು ನೆಲದ ಮೇಲೆ ಕುಳ್ಳಿರಿಸುವುದು:- ಐದನೆಯ ತಿಂಗಳಿನಲ್ಲಿ ಶುಭದಿನ ಮತ್ತು ಮುಹೂರ್ತಗಳನ್ನು ನೋಡಿ ಮೃಗ, ಹಸ್ತಾ, ಪುಷ್ಯ, ಅಶ್ವಿನೀ, ಜ್ಯೇಷ್ಠಾ, ಮೂರು ಉತ್ತರಾ, ರೋಹಿಣೀ ಈ ನಕ್ಷತ್ರವಿರುವ ದಿವಸ ಭೂದೇವಿ ಮತ್ತು ವರಾಹಸ್ವಾಮಿಯ ಪೂಜೆಮಾಡಿ ಬಾಲಕನಿಗೆ ಉಡುದಾರವನ್ನು ಕಟ್ಟಿ ಭೂಮಿಯ ಮೇಲೆ ಕುಳ್ಳಿರಿಸಬೇಕು.

ಐದನೆಯ ತಿಂಗಳಿನಲ್ಲಿ ಶುಕ್ಲಪಕ್ಷದಲ್ಲಿ ಜ್ಯೋತಿಃಶಾಸ್ತ್ರದಲ್ಲಿ ಹೇಳಿದ ಶುಭತಿಥಿ ಇರುವ ದಿನ ಪೂರ್ವಾಹ್ಣ ಸ್ವಸ್ತಿವಾಚನ ಮಾಡಿ ವರಾಹ, ಪೃಥ್ವೀ, ಗುರು, ದೇವ ಮತ್ತು ಬ್ರಾಹ್ಮಣರನ್ನು ಪೂಜಿಸಿ, ನೆಲವನ್ನು ಗೋಮಯದಿಂದ ಶುಚಿಗೊಳಿಸಿ, ಮಂಡಲ ಬರೆದು ಮಂಗಲವಾದ್ಯಧ್ವನಿ ಯೊಂದಿಗೆ ಶಿಶುವನ್ನು **"ರಕ್ಷೈನಂ ..."** ಮುಂತಾದ ಮಂತ್ರಗಳನ್ನು ಹೇಳಿ ನೆಲದ ಮೇಲೆ ಕೂತುಕೊಳ್ಳಿಸಬೇಕು. ನಂತರ ಬ್ರಾಹ್ಮಣರ ಪೂಜೆಮಾಡಿ ಆಶೀರ್ವಾದ ಪಡೆದು ನೀರಾಜನ ಮೊದಲಾದ ಉತ್ಸವಗಳನ್ನು ಮಾಡಬೇಕು.

Scanned by CamScanner

ಬ್ರಾಹ್ಮಣಾನ್ ಪೂಜಯಿತ್ವಾ ಆಶಿಷೋ ವಾಚಯಿತ್ವಾ ನೀರಾಜನಾದ್ಯುತ್ಸವಂ ಕುರ್ಯಾತ್ ॥ ಏವಂ ಕುಮಾರ್ಯಾ ಅಪಿ ॥

ಪ್ರಥಮಕೇಶಕರ್ತನ ನಿರ್ಣಯಃ-

ಚರಕಸಂಹಿತಾ ಅ. ೫ ಸೂ. ೮೩ ॥ ಪೌಷ್ಟಿಕಂ ಹೃದ್ಯಮಾಯುಷ್ಯಂ ಶುಚಿರೂಪವಿರಾಜನಂ । ಕೇಶಶ್ಮಶ್ರುನಖಾದೀನಾಂ ಕರ್ತನಂ ಸಂಪ್ರಸಾಧನಂ ॥ ಜನ್ಮಾದೌ ಸಮಮಾಸಿ ಪುತ್ರವಿಷಯೇ ಸ್ತ್ರೀಣಾಂ ತು ತದ್ವ್ಯತ್ಯಯೇ ॥ ಕಾರ್ಯಂ ಚಾದಿಮಕೇಶಖಂಡನಮಿದಂ ಪೂರ್ವಾಹ್ನ ಸೌಮ್ಯಾಯನೇ । ಆದಿತ್ಯದ್ವಯದಸ್ರ-ಪೌಷ್ಣ ಶಶಭೃದ್ವಿಷ್ಣುತ್ರಯಾರ್ಕತ್ರಯೇ । ಪೂರ್ವಾಹ್ಣೇ ಶುಭವಾಸರೇ ಜಯದಿನೇ-ಷ್ವಷ್ಟಮ್ಯಮಾವರ್ಜಯೇತ್ ॥

"ಹೇ ಭೂದೇವಿ, ನೀನು ಯಾವಾಗಲೂ ಈ ಬಾಲಕನನ್ನು ರಕ್ಷಿಸುತ್ತಿರು. ಇವನ ಆಯುಸ್ಸನ್ನು ವರ್ಧಿಸು. ಆಯುಸ್ಸನ್ನು ಕಡಿಮೆ ಮಾಡುವ ಹಾಗೂ ಜೀವಿತ, ಸಂಪತ್ತು ಮತ್ತು ಆರೋಗ್ಯವನ್ನು ಕೆಡಿಸುವ ಶತ್ರುಗಳನ್ನು ನಾಶಮಾಡು. ಸಕಲ ಪ್ರಾಣಿಗಳನ್ನೂ ಧಾರಣೆ ಮಾಡಿರುವ ನೀನು ಎಲ್ಲರಿಗೂ ಮಹಾಮಾತೆಯಂತಿರುವಿ. ಆದ್ದರಿಂದ ತಾಯಿಯಂತೆ ಈತನನ್ನು ಕಾಪಾಡು. ಬ್ರಹ್ಮನ ಅನುಗ್ರಹವೂ ಇವನ ಮೇಲೆ ಇರಲಿ" - ಇದು ಪ್ರಾರ್ಥನಾಶ್ಲೋಕಗಳ ಅರ್ಥವಾಗಿದೆ.

ಪ್ರಥಮಕೇಶಕರ್ತನ (ಕ್ಷೌರ) ನಿರ್ಣಯಃ- ಮಗುವಿನ ತಲೆಕೂದಲನ್ನು ಬಹಳ ಎಚ್ಚರಿಕೆಯಿಂದ ತೆಗೆದು ತಲೆಗೆ ಕೆನೆಯನ್ನು ಲೇಪಿಸಿದರೆ ತಲೆಯ ಚರ್ಮಕ್ಕೆ ಬರುವ ರೋಗಗಳು ಉಂಟಾಗುವುದಿಲ್ಲ. ಕೂದಲು ಬೆಳೆಯದ ಭಾಗಗಳೂ ಉಳಿಯುವುದಿಲ್ಲ. ತಲೆಯ ಎಲ್ಲ ಭಾಗಗಳಿಗೂ ಸರಿಯಾಗಿ ರಕ್ತಸಂಚಾರವಾಗುತ್ತಿದ್ದು ಮುಂದೆ ಹುಟ್ಟುವ ಕೂದಲು ದಟ್ಟವಾಗಿಯೂ ಗಟ್ಟಿಯಾಗಿಯೂ ಇರುತ್ತದೆ. ಕೂದಲು, ರೋಮ ಮತ್ತು ಉಗುರುಗಳನ್ನು ತೆಗೆಯುವುದರಿಂದ ಸೌಂದರ್ಯವರ್ಧನೆಯಾಗಿ ಸಂತೋಷ, ಉತ್ಸಾಹ ಹಾಗೂ ಸುಖ ಪ್ರಾಪ್ತಿಯಾಗುತ್ತದೆ. ಆಯುಷ್ಯ, ಪಾವಿತ್ರ್ಯ, ಪುಷ್ಟಿಗಳು ವೃದ್ಧಿಯಾಗುತ್ತವೆ. ಗಂಡುಮಗುವಿನ ಕ್ಷೌರಕರ್ಮವನ್ನು ಜನ್ಮದಿನದಿಂದ ಸಮತಿಂಗಳುಗಳಲ್ಲೂ ಹೆಣ್ಣು ಮಗುವಿನ ಕ್ಷೌರಕರ್ಮವನ್ನು ವಿಷಮ ತಿಂಗಳುಗಳಲ್ಲಿಯೂ ಮಾಡಬೇಕು. ಉತ್ತರಾಯಣದಲ್ಲಿ ಶುಭವಾರ, ಪೂರ್ಣತಿಥಿ ಮತ್ತು ಪುನರ್ವಸು, ಪುಷ್ಯ, ಅಶ್ವಿನೀ, ಮೃಗಶಿರ, ಶ್ರವಣಾ, ಧನಿಷ್ಠಾ, ಶತತಾರಕಾ, ಹಸ್ತಾ, ಚಿತ್ರಾ ಮತ್ತು ಸ್ವಾತಿ ನಕ್ಷತ್ರಗಳಲ್ಲಿ ಎರಡು ಜಾವಗಳೊಳಗೆ ಈ ಕರ್ಮವನ್ನು ಮಾಡಬೇಕು.

Scanned by CamScanner

Scanned with CamScanner

॥ ಶ್ರೀಪೂಜನಾದಿಶಾಂತಿಃ ॥

ಯಜಮಾನಃ ಆಚಮ್ಯ ಪವಿತ್ರಪಾಣಿಃ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಅಸ್ಯ ಕುಮಾರಸ್ಯೋಪನಯನೇ (ಕನ್ಯಾಯಾ ಉದ್ವಾಹೇ ವಾ) ಸಂಸ್ಕಾರ್ಯಜನನೀ ರಜೋದೋಷೋಪಸ್ಥಿತಿಸೂಚಿತಸಕಲಾನಿಷ್ಟನಿರಾಸಪೂರ್ವಕ-ಶುಭಫಲಪ್ರಾಪ್ತಿದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಶ್ರೀ ಪೂಜನಾದಿಶಾಂತಿಂ ಕರಿಷ್ಯೇ ॥ ಆದೌ ನಿರ್ವಿಘ್ನತಾಸಿದ್ಧ್ಯರ್ಥಂ ಗಣಪತಿಪೂಜನಂ ಪುಣ್ಯಾಹವಾಚನಂ ಚ ಕರಿಷ್ಯೇ ಇತಿ ಸಂಕಲ್ಪ್ಯ ಕೃತ್ವಾ ॥ ಗೋತ್ರೋಚ್ಚಾರಪೂರ್ವಕಮಾಚಾರ್ಯಂ ವೃತ್ವಾ ಸಂಪೂಜ್ಯ ॥ ಆಚಾರ್ಯಃ ಕರ್ಮ ಸಂಕಲ್ಪ್ಯ ಪ್ರಾದೇಶಕರಣಾಂತಂ ಕೃತ್ವಾ. ರಂಗವಲ್ಯಾದ್ಯಲಂಕೃತೇ ಐಶಾನಪ್ರದೇಶೇ ಮಹೀದ್ಯೌಃ ಇತ್ಯಾದಿಭಿರ್ಮಂತ್ರೈಃ ವಿಧಿವತ್ಕಲಶಂ ಸಂಸ್ಥಾಪ್ಯ ತದುಪರಿ ಪೂರ್ಣಾದರ್ವೀತಿ ಪಾತ್ರಂ ನಿಧಾಯ ತದುಪರ್ಯಗ್ನ್ಯುತ್ತಾರಣಪೂರ್ವಕಂ ಸೌವರ್ಣಪ್ರತಿಮಾಯಾಂ ಹಿರಣ್ಯವರ್ಣಾ-ಮಿತ್ಯಸ್ಯ ಆನಂದಕರ್ದಮಚಿಕ್ಲೀತೇಂದಿರಾ ಸುತಾಃ ಶ್ರೀರನುಷ್ಟುಪ್ ಶ್ರೀಪೂಜನೇ ವಿನಿಯೋಗಃ ॥ ಓಂ ಹಿರಣ್ಯವರ್ಣಾಂ ... ॥ ೧ ॥ ಓಂ ಭೂರ್ಭುವಃ ಸ್ವಃ ಶ್ರಿಯೈ ನಮಃ ಶ್ರಿಯಮಾವಾಹಯಾಮಿ ಇತ್ಯಾವಾಹ್ಯ ಶ್ರೀ ಸೂಕ್ತೇನ ಷೋಡ-ಶೋಪಚಾರೈಃ ಪೂಜಯೇತ್ ॥ ತತಃ ಸ್ಥಂಡಿಲೋಲ್ಲೇಪನಾದ್ಯಗ್ನಿಪ್ರತಿಷ್ಠಾಂತಂ ಕೃತ್ವಾ ಸಮಿದ್ದ್ವಯಮಾದಾಯ ಕ್ರಿಯಮಾಣೇ ಶ್ರೀಪೂಜನಶಾಂತಿಹೋಮೇ ದೇವತಾಪರಿ-ಗ್ರಹಾರ್ಥಮಿತ್ಯಾದಿ ಚಕ್ಷುಷೀ ಆಜ್ಯೇನೇತ್ಯಂತಮುಕ್ತ್ವಾ ಅತ್ರಪ್ರಧಾನಂ ॥ ಶ್ರಿಯಂ ಶ್ರೀಸೂಕ್ತೇನ ಪ್ರತ್ಯೃಚಂ ಪಾಯಸಾಹುತ್ಯಾ ಶೇಷೇಣ ಸ್ವಿಷ್ಟಕೃತಮಿತ್ಯಾದ್ಯಾಜ್ಯಭಾ-ಗಾಂತಂ ಕೃತ್ವಾ ಪ್ರಧಾನ ಹೋಮಃ ॥ ಯಥಾ ಹಿರಣ್ಯವರ್ಣಾಮಿತಿ ಪಂಚದಶರ್ಚಸ್ಯ

ಶ್ರೀಪೂಜನಾದಿಶಾಂತಿ:- ಯಜಮಾನನು ಆಚಮನ ಪವಿತ್ರಧಾರಣ ಪ್ರಾಣಾಯಾಮ ದೇಶಕಾಲಸಂಕೀರ್ತನಾದಿಗಳನ್ನು ಮಾಡಿ **"ಅಸ್ಯ ಕುಮಾರಸ್ಯ ....ಕರಿಷ್ಯೇ"** ಎಂದೂ **"ಆದೌ.... ಪುಣ್ಯಾಹವಾಚನಂ ಚ ಕರಿಷ್ಯೇ"** ಎಂದೂ ಸಂಕಲ್ಪಮಾಡಿ ಆ ಕರ್ಮಗಳನ್ನು ಮಾಡಬೇಕು. ಬಳಿಕ ಆಚಾರ್ಯವರಣ ಮಾಡಿ, ಆಚಾರ್ಯನು ಪಂಚಗವ್ಯವಿಧಿ ಭೂಮಿಪ್ರೋಕ್ಷಣ ಮುಂತಾದವುಗಳನ್ನು ಮಾಡಿದ ಮೇಲೆ ಮಹೀದ್ಯೌ ಇತ್ಯಾದಿ ಮಂತ್ರಗಳಿಂದ ಕಲಶಸ್ಥಾಪನಾದಿ ಗಳನ್ನು ಮಾಡಿ ಅಗ್ನ್ಯುತ್ತಾರಣ ಕ್ರಮದಂತೆ ಲಕ್ಷ್ಮಿಯ ಸುವರ್ಣಪ್ರತಿಮೆಯನ್ನು ಸ್ಥಾಪಿಸಿ, ಶ್ರೀಸೂಕ್ತದ ಮೊದಲನೆಯ ಋಕ್ಕಿನಿಂದ ಶ್ರೀಯನ್ನು ಆವಾಹಿಸಿ ಉಳಿದ ೧೪ ಋಕ್ಕುಗಳಿಂದ ಷೋಡಶೋಪಚಾರ ಪೂಜೆಯನ್ನು ಮಾಡಬೇಕು.

ಬಳಿಕ ಸ್ಥಾಲೀಪಾಕದಲ್ಲಿ ಹೇಳಿದಂತೆ ಸ್ಥಂಡಿಲಸಂಸ್ಕಾರಾದಿಗಳನ್ನು ಮಾಡಿ, **"ಕ್ರಿಯಮಾಣೇ ಶ್ರೀಪೂಜನಶಾಂತಿಹೋಮೇ...."** ಎಂದು ಹೇಳಿ ಅನ್ವಾಧಾನ ಮಾಡಬೇಕು. ಆಜ್ಯಭಾಗಾಂತದ

Scanned by CamScanner

ಸೂಕ್ತಸ್ಯ ..... ಶ್ರೀ ಮಹಾಲಕ್ಷ್ಮೀ ಪ್ರೀತ್ಯರ್ಥೇ ಪಾಯಸಹೋಮೇ ವಿನಿಯೋಗಃ ॥ ಓಂ ಹಿರಣ್ಯವರ್ಣಾಂ ... ಇತ್ಯಾದಿ ಪಂಚದಶ ಋಗ್ಭಿಃ ಪ್ರತ್ಯೃಚಮೇಕಾಂ ಪಾಯಸಾಹುತಿಂ ಹುತ್ವಾ ॥ ಸ್ವಿಷ್ಟಕೃದಾದಿ ಹೋಮೇಶೇಷಂ ಸಮಾಪ್ಯ ಸ್ಥಾಪಿತ ಕಲಶೋದಕೇನ ಶ್ರೀಸೂಕ್ತೇನ ಯಜಮಾನಮಭಿಷಿಚ್ಯ ಆವಾಹಿತದೇವತಾಃ ಪಂಚೋಪಚಾರೈಃ ಸಂಪೂಜ್ಯ ಆಚಾರ್ಯಾಯ ಗಾಂ ದಕ್ಷಿಣಾಂ ದತ್ವಾ ಪೀಠದಾನಾದಿ ಕೃತ್ವಾ ಯಥಾಶಕ್ತಿ ತ್ರಯೋ ವಾ ಬ್ರಾಹ್ಮಣಾ ಭೋಜ್ಯಾಃ ॥

॥ ಮಂಡಪದೇವತೋತ್ಥಾಪನಂ ॥

ತಚ್ಚ ಸ್ಥಾಪನದಿನಾತ್ಸಪ್ತಮದಿವಸೇ ಪಂಚಮಸಪ್ತದಿನಯೋಶ್ಚ ಶುಭಂ ಷಷ್ಠದಿನೇ ವಿಷಮದಿನೇಚಾಶುಭಂ ॥ ಮಂಡಪದೇವತೋತ್ಥಾಪನಪ್ರಯೋಗೋ

ವರೆಗೆ ಕರ್ಮಗಳನ್ನು ಮಾಡಿ ಶ್ರೀಸೂಕ್ತದ ೧೫ ಋಕ್ಕುಗಳಿಂದ ೧೫ ಪಾಯಸದ ಆಹುತಿಗಳನ್ನು ಕೊಟ್ಟು ಪ್ರಧಾನಹೋಮವನ್ನು ಮಾಡಬೇಕು. ಬಳಿಕ ಸ್ವಿಷ್ಟಕೃದಾದಿ ಹೋಮಶೇಷವನ್ನು ಮುಗಿಸಿ ಕಲಶೋದಕದಿಂದ ಶ್ರೀಸೂಕ್ತವನ್ನು ಹೇಳಿ ಯಜಮಾನನಿಗೆ ಅಭಿಷೇಕ ಮಾಡಿ ದಕ್ಷಿಣೆಗಳನ್ನೂ ಇತರರಿಗೆ ಸಾಕಷ್ಟು ದಕ್ಷಿಣೆಯನ್ನೂ ಕೊಟ್ಟು **"ಯಸ್ಯ ಸ್ಮೃತ್ಯಾ...."** ಎಂದು ವಿಷ್ಣುಸ್ಮರಣೆಯನ್ನು ಮಾಡಿ ಕರ್ಮ ಸಮಾಪ್ತಿ ಮಾಡಬೇಕು. ಈ ಕರ್ಮದಲ್ಲಿ ಹತ್ತು ಅಥವಾ ಮೂರು ಮಂದಿ ಬ್ರಾಹ್ಮಣರ ಸಂತರ್ಪಣೆ ಆಗಬೇಕು.

ಮಂಡಪದೇವತೆಗಳ ಉತ್ಥಾಪನ:- ಇದನ್ನು ಮಂಡಪದೇವತೆಗಳನ್ನು ಸ್ಥಾಪನೆಮಾಡಿದ ದಿನದಿಂದ ಮುಂದೆ ಸಮದಿನಗಳಲ್ಲಿ ಅಥವಾ ಏಳನೆಯ ದಿನ ಮಾಡಬೇಕು. ಆರನೆಯ ದಿನ ಅಥವಾ ವಿಷಮದಿನಗಳಲ್ಲಿ ಮಾಡುವುದು ಅಶುಭ. ಇದರ ಪ್ರಯೋಗವನ್ನು ವಿವಾಹಪ್ರಕರಣದಲ್ಲಿ ಕೊಡಲಾಗಿದೆ. ಉಪನಯನಾದಿಗಳಲ್ಲಿ **"ಉಪನಯನಾಂಗತ್ವೇನ .... ಕರಿಷ್ಯೇ"** ಎಂದು ಸಂಕಲ್ಪವನ್ನು ಮಾತ್ರ ಬೇರೆ ಮಾಡಿದರಾಯಿತು.

ಸೂತ್ರಕಾರರು ಮಂಡಪಪ್ರತಿಷ್ಠೆ, ಪುಣ್ಯಾಹವಾಚನ, ಮಾತೃಕಾಪೂಜನ, ನಾಂದೀಶ್ರಾದ್ಧ ಇವುಗಳ ಉಲ್ಲೇಖವನ್ನು ಮಾಡಿಲ್ಲ. ನಿಬಂಧಾದಿ ಗ್ರಂಥಕಾರರು ಇದರ ವಿಸ್ತೃತ ವಿವರಣೆ ಮಾಡಿದ್ದಾರೆ. ಪ್ರಧಾನ ಕರ್ಮಕ್ಕೆ ಉಪಕಾರವೆಂದು ಇವುಗಳ ಸಂಗ್ರಹ ಮಾಡಿದ್ದಾರೆ. **"ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ"** ಎಂಬ ಮಾತಿನಂತೆ ಅಂಗೋಪಾಂಗಕ್ಕಾಗಿ ಪ್ರಧಾನಕರ್ಮವನ್ನು ಬಿಡಬೇಕಾದ ಸಂದರ್ಭ ಬಂದರೆ ಅಂಗೋಪಾಂಗ ಕರ್ಮವನ್ನು ಬಿಡಬೇಕೇ ಹೊರತು ಪ್ರಧಾನಕರ್ಮವನ್ನು ಬಿಡಬಾರದು.

Scanned by CamScanner
Scanned with CamScanner

ವಿವಾಹಪ್ರಕರಣೇ ದ್ರಷ್ಟವ್ಯಃ ॥ ತತ್ರ ಸಂಕಲ್ಪವಿಶೇಷಃ ಉಪನಯನಾಂಗತ್ವೇನ ಸ್ಥಾಪಿತದೇವತಾನಾಂ ಉತ್ಥಾಪನಂ ಮಂಡಪೋದ್ವಾದಸನಂ ತದಂಗ ಗಣಪತಿ ಪೂಜನಂ ಪುಣ್ಯಾಹವಾಚನಂ ಚ ಕರಿಷ್ಯೇ । ಶೇಷಂ ವಿವಾಹವತ್ ॥

॥ ವಿವಾಹಸಂಸ್ಕಾರನಿರ್ಣಯಃ ॥

ಪ್ರತಿಕೂಲವಿಚಾರಃ:-

ಶೌನಕಃ:- ಪಿತಾ ಪಿತಾಮಹಶ್ಚೈವ ಮಾತಾ ಚೈವ ಪಿತಾಮಹೀ । ಪಿತೃವ್ಯಃ ಸ್ತ್ರೀಸುತಭ್ರಾತಾ ಭಗಿನೀಚಾವಿವಾಹಿತಾ ॥ ಏಭಿರತ್ರ ವಿಪನ್ನೈಶ್ಚ ಪ್ರತಿಕೂಲಂ ಬುಧೈಃ ಸ್ಮೃತಂ ॥ ಸಂಕಟೇ ಸಮನುಪ್ರಾಪ್ತೇ ಯಾಜ್ಞವಲ್ಕ್ಯೇನ ಯೋಗಿನಾ । ಶಾಂತಿರುಕ್ತಾ ಗಣೇಶಸ್ಯ ಕೃತ್ವಾ ತಾಂ ಶುಭಮಾಚರೇತ್ ॥ ಮೇಧಾತಿಥಿಃ- ಪುರುಷತ್ರಯಪರ್ಯಂತೇ ಪ್ರತಿಕೂಲಂ ಸ್ವಗೋತ್ರಿಣಾಂ । ಪ್ರವೇಶಾನಿಗಣಸ್ತದ್ವತ್ತಥಾ ಮಂಡನಮುಂಡನೇ ॥

ಜ್ಯೋತಿಃಶಾಸ್ತ್ರದ ದೃಷ್ಟಿಯಿಂದ ಅನಧ್ಯಾಯ, ಕುಯೋಗ, ಜನ್ಮಮಾಸ, ಜನ್ಮಲಗ್ನ, ಜನ್ಮಸ್ಥಚಂದ್ರ ಶಾಖಾಧಿಪತಿಯ ಪ್ರಾತಿಕೂಲ್ಯ ಮುಂತಾದವು ಉಪನಯನಕ್ಕೆ ವರ್ಜ್ಯವಾಗಿವೆ. ಗಾಯತ್ರಿಯ ಉಪದೇಶಕ್ಕೆ ವಿದ್ವಾಂಸನಾದ ಜ್ಯೋತಿಷಿಯಿಂದ ಮುಹೂರ್ತವನ್ನು ನಿರ್ಣಯಿಸ ಬೇಕು. ಈಗೀಗ ಮಂಗಲಾಷ್ಟಕದ ನಂತರ ನಿರೀಕ್ಷಣೆಗಾಗಿ ಮಾತ್ರ ಮುಹೂರ್ತ ನೋಡುತ್ತಾರೆ. ಪತ್ರಿಕಾಪೂಜನ ಘಟಿಕಾಪೂಜನ ಮುಂತಾದುವುಗಳ ಆವಶ್ಯಕತೆ ಇಲ್ಲ. ಜ್ಯೋತಿಷಿಗೆ ಸರಿಯಾಗಿ ದಕ್ಷಿಣೆ ಕೊಡಬೇಕು.

ಪ್ರತಿಕೂಲವಿಚಾರಃ- ವಿವಾಹನಿರ್ಣಯಾನಂತರ ವಧೂವರರ ತಂದೆ, ಅಜ್ಜ, ತಾಯಿ, ಪಿತೃವ್ಯ, ಪೂರ್ವಪತ್ನಿ ಹಾಗೂ ಮೊದಲಿನ ಮಗ, ಅಣ್ಣ, ಅವಿವಾಹಿತೆಯಾದ ಅಕ್ಕ, ತಂಗಿ ಇವರಲ್ಲಿ ಯಾರಾದರೂ ಮರಣಹೊಂದಿದರೆ ಅದು ವಿವಾಹಕ್ಕೆ ಪ್ರತಿಕೂಲವೆಂದು ತಿಳಿಯಬೇಕು. ಸಂಕಟ (ಎರಡನೆಯ ಯೋಗ್ಯವರ ಸಿಕ್ಕದೆ ಇರುವುದು) ಪ್ರಾಪ್ತವಾದರೆ, ವಿನಾಯಕಶಾಂತಿಯನ್ನು ಮಾಡಿ ಮಂಗಲಕಾರ್ಯವನ್ನು ಮಾಡಬೇಕೆಂದು ಯಾಜ್ಞವಲ್ಕ್ಯರು ಹೇಳುತ್ತಾರೆ.

Scanned by CamScanner

ಕನ್ಯಾದಾನ ಪ್ರಶಂಸಾ:-

ಸಂವರ್ತಃ ॥ ಅಲಂಕೃತ್ಯ ತು ಯಃ ಕನ್ಯಾಂ ಭೂಷಣಾಚ್ಛಾದನಾದಿಭಿಃ । ದತ್ವಾ ಸ್ವರ್ಗಮವಾಪ್ನೋತಿ ಪೂಜ್ಯತೇ ವಾಸವಾದಿಭಿಃ ॥ ವೃಕುದಶ್ಚಾಶ್ವ ಮೇದೀ ಚ ಪ್ರಾಣದಾನಾಭಯೇಷು ಚ । ಸಮಂ ಯಾತಿ ರಥಾ ಯೇಷಾಂ ತ್ರಯೋ ವೈ ನಾತ್ರ ಸಂಶಯಃ ॥ ಸಾಲಂಕೃತ ಕನ್ಯಾದಾತಾ ವೈಕುದಃ ॥ ವಹ್ನಿಪುರುಣೇ-ಶ್ರುತ್ವಾ ಕನ್ಯಾಪ್ರದಾನಂ ಚ ಪಿತರಃ ಸಪಿತಾಮಹಾಃ ॥ ವಿಮುಕ್ತಾಃ ಸರ್ವಪಾಪೇಭ್ಯೋ ಬ್ರಹ್ಮಲೋಕಂ ವ್ರಜಂತಿ ತೇ ॥

॥ ವಿವಾಹೇ ಮಂಡಪವೇದ್ಯಾದಿ ನಿರ್ಣಯಃ ॥

ವಸಿಷ್ಠಃ- ಷೋಡಶಾರತ್ನಿಕಂ ಕುರ್ಯಾಚ್ಚತುರ್ದ್ವಾರೋಪಶೋಭಿತಂ । ಮಂಡಪಂ ತೋರಣೈರ್ಯುಕ್ತಂ ತತ್ರ ವೇದಿಂ ಪ್ರಕಲ್ಪಯೇತ್ ॥ ಅಷ್ಟಹಸ್ತಂ ತು ರಚಯೇತ್ ಮಂಡಪಂ ವಾ ದ್ವಿಷಟ್ಕರಂ ॥ ಸಪ್ತರ್ಷಿಮತೇ-ಮಂಗಲೇಷು ಚ ಸರ್ವೇಷು ಮಂಡಪೋ ಗೃಹಮಾನತಃ । ಕಾರ್ಯಃ ಷೋಡಶಹಸ್ತೋ ವಾ ನ್ಯೂನಹಸ್ತೋ ದಶಾವಧಿಃ ॥ ದೈವಜ್ಞಮನೋಹರಃ- ಚಿತ್ರಾ ವಿಶಾಖಾ ಶತ-

---

ಕನ್ಯಾದಾನ ಪ್ರಶಂಸಾ:- ವಸ್ತ್ರಾಲಂಕಾರಭೂಷಿತಳಾದ ಕನ್ಯೆಯನ್ನು ದಾನ, ಮಾಡಿದವನು ಸ್ವರ್ಗವನ್ನು ಸೇರಿ ದೇವತೆಗಳಿಂದ ಸ್ತುತಿಸಲ್ಪಡುತ್ತಾನೆ. ಕನ್ಯಾದಾನ, ಅಶ್ವಮೇಧ, ಪ್ರಾಣರಕ್ಷಣೆ ಈ ಮೂರರ ಪುಣ್ಯ ಸಮಾನವಾದುದು. ತಮ್ಮ ಕುಲದಲ್ಲಿ ಕನ್ಯಾದಾನವನ್ನು ಮಾಡಿದ ವಾರ್ತೆಯನ್ನು ಕೇಳಿದ ಪಿತೃಗಳು ಪಾಪಮುಕ್ತರಾಗಿ ಬ್ರಹ್ಮಲೋಕವನ್ನು ಸೇರುತ್ತಾರೆಂದು ಅಗ್ನಿಪುರಾಣದಲ್ಲಿ ಹೇಳಲಾಗಿದೆ.

ವಿವಾಹಕ್ಕೆ ಸಂಬಂಧಿಸಿದ ಮಂಡಪ ಹಾಗೂ ವೇದಿಗಳ ನಿರ್ಣಯ:-

ವಸಿಷ್ಠ:- ಕಿರುಬೆರಳಿನ ವರೆಗಿನ ಕೈ ಅಳತೆಗೆ ಅರತ್ನಿ ಎನ್ನುತ್ತಾರೆ. ಅಂತಹ ಹದಿನಾರು ಅರತ್ನಿ ಉದ್ದಗಲವಿರುವ ಮಂಟಪವನ್ನು ನಿರ್ಮಿಸಿ ಅದಕ್ಕೆ ನಾಲ್ಕು ಬಾಗಿಲುಗಳನ್ನಿಟ್ಟು ತೋರಣಾದಿಗಳಿಂದ ಸಿಂಗರಿಸಬೇಕು.

ಸಪ್ತರ್ಷಿಮತ:- ಎಲ್ಲ ಮಂಗಲಕಾರ್ಯಗಳಲ್ಲಿ ಮಂಟಪವನ್ನು ತನ್ನ ಮನೆಯ ಮಾನಕ್ಕೆ ಹೊಂದಿಕೆಯಾಗುವ ಅಳತೆಯಲ್ಲಿ ಮಾಡಬೇಕು. ಹತ್ತು ಕೈ ಅಳತೆಗಿಂತ ಸಣ್ಣದಾಗಿರಬಾರದು. ಅಂತಹ ಮಂಟಪದಲ್ಲಿ ವೇದಿಯನ್ನು ನಿರ್ಮಿಸಬೇಕು.

ದೈವಜ್ಞಮನೋಹರಮತ:- ಚಿತ್ರಾ, ವಿಶಾಖಾ, ಶತತಾರಕಾ, ಅಶ್ವಿನೀ, ಜ್ಯೇಷ್ಠಾ, ಭರಣೀ, ಆರ್ದ್ರಾ, ಪುನರ್ವಸು, ಪುಷ್ಯ, ಆಶ್ಲೇಷಾ ಈ ನಕ್ಷತ್ರಗಳನ್ನು ಬಿಟ್ಟು

Scanned by CamScanner

Scanned with CamScanner

ತಾರಕಾಶ್ವಿನೀ ಜ್ಯೇಷ್ಠಾಭರಣೌ ಶಿವಭಾಚ್ಚತುಷ್ಟಯಂ । ಹಿತ್ವಾ ಪ್ರಶಸ್ತಂ ಫಲ ತೈಲ ವೇದಿಕಾ ಪ್ರದಾನಕಂ ಕಂಡನಮಂಡಪಾದಿಕಂ ॥ ಹೇಮಾದ್ರೌ ವ್ಯಾಸಃ- ಕಂಡನ ದಲನ ಯವಾರಕಂ ಮಂಡಪಮೃದ್ವೇದಿವರ್ಣಕಾದ್ಯಖಿಲಂ । ತತ್ಸಂಬಂಧಿ ಗತಾಗತಂ ಮೃಗೇ ವೈವಾಹಿಕೇ ಕುರ್ಯಾತ್ । ಯವಾರಕಂ ಚಿಕಸಾ ಇತಿ ಪ್ರಸಿದ್ಧಂ । ವೇದಿಮಾಹ ನಾರದಃ-ಹಸ್ತೋಚ್ಛ್ರಿತಾಂ ಚತುರ್ಹಸ್ತೈಃ ಚತುರಸ್ರಾಂ ಸಮಂತತಃ । ಸ್ತಂಭೈಶ್ಚತುರ್ಭಿಃ ಸುಶ್ಲಕ್ಷ್ಣಂ ವಾಮಭಾಗೇ ತು ಸದ್ಮನಿ । ಸಮಾಂ ತಥಾ ಚತುರ್ದಿಕ್ಷು ಸೋಪಾನೈರತಿಶೋಭಿತಾಂ । ಪ್ರಾಗುದಕ್ಪ್ರವಣಾರಂಭಾಂ ಸ್ತಂಭೈರ್ಹಂಸಶುಕಾದಿಭಿಃ । ಏವಂ ವಿಧಾಮಾರುರುಕ್ಷೇನ್ಮಿಥುನಂ ಸಾಗ್ನಿವೇದಿಕಾಂ ॥ ಇತಿ ॥ ಹಸ್ತೋ ವಧ್ವಾಃ । ಸೋಪಾನಂ ಪಶ್ಚಿಮತಃ ಉಪರಿಭಾಗೇ ಉಕ್ತಪರಿಮಾಣಾಚ್ಛಿನ್ನಂ ॥

ಉಳಿದ ನಕ್ಷತ್ರಗಳಲ್ಲಿ ಫಲ, ತೈಲ, ವೇದಿಕಾ ಮುಂತಾದ ವಿವಾಹಕ್ಕೆ ಸಂಬಂಧಿಸಿದ ಕರ್ಮಗಳನ್ನು ಮಾಡಬೇಕು.

ಹೇಮಾದ್ರಿಯಲ್ಲಿ ವ್ಯಾಸವಚನ:- ವಿವಾಹ ನಕ್ಷತ್ರಕ್ಕೆ ಹೊಂದಾಣಿಕೆಯಾಗುವ ನಕ್ಷತ್ರಗಳಲ್ಲಿ ವಿವಾಹಕ್ಕೆ ಸಂಬಂಧಿಸಿದ ಇತರ ಕರ್ಮಗಳನ್ನು ಮಾಡಬೇಕು.

ನಾರದವೇದೀಮತ:- ಮನೆಯ ವಾಮಭಾಗದಲ್ಲಿ ಒಂದು ಮೊಳ ಎತ್ತರ ಹಾಗೂ ನಾಲ್ಕು ಮೊಳ ಉದ್ದಗಲವಿರುವ ವೇದಿಕೆಯ ನಿರ್ಮಾಣ ಮಾಡಬೇಕು. ಅದಕ್ಕೆ ನಾಲ್ಕು ಬದಿಗಳಲ್ಲಿ ಬಾಳೆಯ ಕಂಬಗಳನ್ನಿರಿಸಿ ಪಶ್ಚಿಮದಲ್ಲಿ ಮೆಟ್ಟಲುಗಳನ್ನು ಮಾಡಿಡಬೇಕು. ಬಾಳೆಯ ತೋರಣ, ಹಂಸ, ಗಿಳಿ ಮುಂತಾದ ಪಕ್ಷಿಗಳು ಮುಂತಾದ ಅಲಂಕಾರಗಳುಳ್ಳ ಆ ವೇದಿಕೆಯ ಮೇಲೆ ಅಗ್ನಿಸಹಿತರಾಗಿ ವಧೂವರರು ಹತ್ತಿಹೋಗಬೇಕು. **"ಸಾಗ್ನಿ ವೇದಿಕಾಂ"** ಎಂದು ಹೇಳಿರುವುದರಿಂದ ವಧೂವರರು ಅಲ್ಲಿಗೆ ಬರುವ ಮೊದಲೇ ಅಲ್ಲಿ ಅಗ್ನಿ ಪ್ರತಿಷ್ಠಾಪನೆ ಮಾಡಿರಬೇಕೆಂದು ಊಹಿಸಬೇಕು. ಇಲ್ಲಿ ವಧುವಿನ ಕೈ ಅಳತೆಯನ್ನು ಇಟ್ಟುಕೊಳ್ಳಬೇಕು. ಹನ್ನೆರಡು ಮೊಳ ಉದ್ದಗಲವಿರುವ ಮಂಡಪವು ಅಷ್ಟು ಪ್ರಶಸ್ತವಲ್ಲ.

Scanned by CamScanner
Scanned with CamScanner

॥ ಗರ್ಭಾಧಾನಸಂಸ್ಕಾರಃ ॥

॥ ಶ್ರೀಃ ॥ ಯಜಮಾನಃ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ ॥ ಅಸ್ಯಾಃ ಮಮ ಭಾರ್ಯಾಯಾಃ ಪ್ರತಿಗರ್ಭಸಂಸ್ಕಾರಾತಿಶಯದ್ವಾರಾ ಅಸ್ಯಾಂ ಜನಿಷ್ಯಮಾಣಸರ್ವಗರ್ಭಾಣಾಂ ಬೀಜಗರ್ಭಸಮುದ್ಭವೈನೋನಿಬರ್ಹಣ ದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಗರ್ಭಾಧಾನಾಖ್ಯಂ ಕರ್ಮ ಕರಿಷ್ಯೇ ॥

ತದಂಗತಯಾದೌ ಗಣಪತಿಪೂಜನಂ ಪುಣ್ಯಾಹವಾಚನಂ ಮಾತೃಕಾಪೂಜನಂ ನಾಂದೀಶ್ರಾದ್ಧಂ ಚ ಕರಿಷ್ಯೇ ॥ ಇತಿ ಸಂಕಲ್ಪ್ಯ ತಾನಿ ಕೃತ್ವಾ ॥ (ನಾಂದೀಶ್ರಾದ್ಧೇ ಕೃತುದಕ್ಷಸಂಜ್ಞಕಾ ವಿಶ್ವೇದೇವಾಃ)

ಪ್ರಾಜಾಪತ್ಯಹೋಮಂ ಕರ್ತುಂ ಸ್ಥಂಡಿಲಾದಿ ಕರಿಷ್ಯೇ ॥ ಸ್ಥಂಡಿಲ ಸಂಸ್ಕಾರಾದಿ ಮಾರುತನಾಮಾಗ್ನಿಪ್ರತಿಷ್ಠಾಂತಂ ಕೃತ್ವಾಗ್ನಿಂ ಧ್ಯಾತ್ವಾ ಸಮಿದ್ವಯ ಮಾದಾಯ ಕ್ರಿಯಮಾಣೇ ಗರ್ಭಾಧಾನಹೋಮೇ ದೇವತಾಪರಿಗ್ರಹಾರ್ಥಮಿತ್ಯಾದಿ ಚಕ್ಷುಷೀ ಆಜ್ಯೇನೇತ್ಯಂತಮುಕ್ತ್ವಾ ಪ್ರಜಾಪತಿಂ ಚರುಣಾ ವಿಷ್ಣುಂ ಷಡ್ವಾರಮಾಜ್ಯೇನ ಪ್ರಜಾಪತಿಂಚಾಜ್ಯೇನ ಶೇಷೇಣಸ್ವಿಷ್ಟಕೃತಮಿತ್ಯಾದಿ ಸದ್ಯೋಯಕ್ಷ್ಯ ಇತ್ಯಂತಮುಕ್ತ್ವಾ ಸಮಿದ್ವಯಮಗ್ನಾವಾಧಾಯ ಪರಿಸಮೂಹನಾದಿ ಪೂರ್ಣಪಾತ್ರನಿಧಾನಾಂತಂ ಕೃತ್ವಾ ॥

ಪ್ರಜಾಪತಯೇ ತ್ವಾ ಜುಷ್ಟಂ ನಿರ್ವಪಾಮಿ ಪ್ರೋಕ್ಷಾಮೀತ್ಯಾಜ್ಯಭಾಗಾಂತಂ ಕೃತ್ವಾ ಅವದಾನಧರ್ಮೇಣ ಚರುಮವದಾಯ ॥ ಓಂ ಪ್ರಜಾಪತಯೇ ಸ್ವಾಹಾ ಪ್ರಜಾಪತಯ ಇದಂ ನಮಮ ॥ ಇತಿ ಚರುಣಾ ಏಕಾಹುತಿಂ ಹುತ್ವಾ ॥

ಯಜಮಾನನು ಆಚಮನ ಪ್ರಾಣಾಯಾಮಗಳನ್ನು ಮಾಡಿ, ದೇಶಕಾಲಗಳನ್ನು ಸ್ಮರಿಸಿ, **"ಅಸ್ಯಾಃ ಮಮ...ಕರಿಷ್ಯೇ"** ಮತ್ತು **"ತದಂಗತಯಾದೌ... ಕರಿಷ್ಯೇ"** ಎಂದು ಸಂಕಲ್ಪಮಾಡಬೇಕು, ಅಂತೆಯೇ ಗಣಪತಿಪೂಜೆ, ಪುಣ್ಯಾಹವಾಚನ, ಮಾತೃಕಾಪೂಜನ, ನಾಂದೀಶ್ರಾದ್ಧಗಳನ್ನು ಮಾಡಬೇಕು. ನಾಂದೀಶ್ರಾದ್ಧದಲ್ಲಿ ಕ್ರತುದಕ್ಷ ಸಂಜ್ಞೆಯ ವಿಶ್ವೇದೇವರು.

ಆಮೇಲೆ **"ಪ್ರಾಜಾಪತ್ಯ...ಕರಿಷ್ಯೇ"** ಎಂದು ಸಂಕಲ್ಪಿಸಿ ಸ್ಥಾಲೀಪಾಕದಲ್ಲಿ ಹೇಳಿದಂತೆ ಸ್ಥಂಡಿಲಸಂಸ್ಕಾರಾದಿಗಳನ್ನು ಮಾಡಿ, **"ಮರುತ್"** ಎಂಬ ಅಗ್ನಿಯನ್ನು ಪ್ರತಿಷ್ಠೆ ಮಾಡಬೇಕು. ಅಗ್ನಿಧ್ಯಾನಾದಿಗಳನ್ನು ಪೂರಯಿಸಿ ಎರಡು ಸಮಿಧೆಗಳನ್ನು ತೆಕ್ಕೊಂಡು **"ಕ್ರಿಯಮಾಣೇ... ಪ್ರಜಾಪತಿಂ ಚಾಜ್ಯೇನ"** **"ಶೇಷೇಣ ಸ್ವಿಷ್ಟಕೃತ...ಸದ್ಯೋ ಯಕ್ಷ್ಯೇ"** ಎಂಬಲ್ಲಿ ವರೆಗೆ ಹೇಳಿ

Scanned by CamScanner

Scanned with CamScanner

ವಿಷ್ಣುರ್ಯೋನಿಮಿತಿ ತಿಸೃಣಾಂ ತ್ವಷ್ಟಾ ವಿಷ್ಣುರನುಷ್ಟುಪ್ ಗರ್ಭಾಧಾನ ಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ವಿಷ್ಣುರ್ಯೋನಿಂ ಕಲ್ಪಯ-ತುತ್ವಷ್ಟಾ ರೂಪಾಣಿಪಿಂಶತು ॥ ಆಸಿಂಚತು ಪ್ರಜಾಪತಿರ್ಧಾತಾ ಗರ್ಭಂ ದಧಾತು ತೇ ಸ್ವಾಹಾ ॥ ವಿಷ್ಣವ ಇದಂ ನಮಮ ॥ ಓಂ ಗರ್ಭಂ ಧೇಹಿಸಿನೀವಾಲಿ-ಗರ್ಭಂ ದೇಹಿ ಸರಸ್ವತಿ । ಗರ್ಭಂ ತೇ ಅಶ್ವಿನೌ ದೇವಾ ವಾಧತ್ತಾಂ ಪುಷ್ಕರ-ಸ್ರಜಾ ಸ್ವಾಹಾ ॥ ವಿಷ್ಣವ ಇದಂ ನಮಮ ॥ ಓಂ ಹಿರಣ್ಯಯೀ ಅರಣೀಯಂ ನಿರ್ಮಂಥತೋ ಅಶ್ವಿನಾ । ತಂ ತೇ ಗರ್ಭಂ ಹವಾಮಹೇ ದಶಮೇ ಮಾಸಿ ಸೂತವೇ ಸ್ವಾಹಾ ॥ ವಿಷ್ಣವ ಇದಂ ನಮಮ ॥ ನೈಜಮೇಷೇತಿ ತಿಸೃಣಾಂ ತ್ವಷ್ಟಾ ವಿಷ್ಣುರನುಷ್ಟುಪ್ ॥ ಗರ್ಭಾಧಾನಪ್ರಧಾನಾಜ್ಯ ಹೋಮೇ ವಿನಿ-ಯೋಗಃ ॥ ನೇಜಮೇಷಪರಾಪತ ಸುಪುತ್ರಃ ಪುನರಾಪತ ॥ ಅಸ್ಯೈ ಮೇ ಪುತ್ರ-ಕಾಮಾಯೈ ಗರ್ಭಮಾಧೇಹಿ ಯಃ ಪುಮಾನ್ ಸ್ವಾಹಾ ॥ ವಿಷ್ಣವ ಇದಂ ನಮಮ ॥ ಓಂ ಯಥೇಯಂಪೃಥಿವೀ ಮಹ್ಯುತ್ತಾನಾಗರ್ಭಮಾದಧೇ । ಏವಂ ತಂ ಗರ್ಭಮಾಧೇಹಿ ದಶಮೇ ಮಾಸಿಸೂತವೇ ಸ್ವಾಹಾ ॥ ವಿಷ್ಣವ ಇದಂ ನಮಮ ॥ ಓಂ ವಿಷ್ಣೋ ಶ್ರೇಷ್ಠೇನ ರೂಪೇಣಾಸ್ಯಾಂ ನಾರ್ಯಾಂ ಗವೀನ್ಯಾಂ ॥ ಪುಮಾಂಸಂ ಪುತ್ರಾನಾಧೇಹಿ ದಶಮೇ ಮಾಸಿ ಸೂತವೇ ಸ್ವಾಹಾ ॥ ವಿಷ್ಣವ ಇದಂ ನಮಮ ॥

ಪ್ರಜಾಪತೇ ಹಿರಣ್ಯಗರ್ಭಃ ಪ್ರಜಾಪತಿಸ್ತ್ರಿಷ್ಟುಪ್ ॥ ಗರ್ಭಾಧಾನಾಜ್ಯ ಹೋಮೇ ವಿನಿಯೋಗಃ ॥ ಓಂ ಪ್ರಜಾಪತೇ ನತ್ವದೇತಾನ್ಯನ್ಯೋವಿಶ್ವಾಜಾತಾನಿ

ಆ ಸಮಿಧೆಗಳನ್ನು ಅಗ್ನಿಯಲ್ಲಿ ಹೋಮಿಸಿ, ಪರಿಸಮೂಹನ ಮುಂತಾಗಿ ಪೂರ್ಣಪಾತ್ರವನ್ನು ಇಡುವಲ್ಲಿ ವರೆಗಿನ ಎಲ್ಲ ಕ್ರಿಯಾಭಾಗಗಳನ್ನೂ ಮಾಡಬೇಕು.

ಆಮೇಲೆ **"ಪ್ರಜಾಪತಯೇ ತ್ವಾ..."** ಎಂಬಲ್ಲಿಂದ ಆಜ್ಯಭಾಗಾಂತದ ವರೆಗೆ ಸ್ಥಾಲೀಪಾಕದಲ್ಲಿ ಹೇಳಿದ ಕ್ರಿಯೆಗಳನ್ನು ಮಾಡಿ, ಅವದಾನಕ್ರಮದಿಂದ ಚರುವನ್ನು ತೆಗೆದುಕೊಂಡು **"ಪ್ರಜಾಪತಯೇ...ನಮಮ"** ಎಂದು ಚರುವಿನಿಂದ ಒಂದು ಆಹುತಿಯನ್ನು ಕೊಡಬೇಕು. ಮುಂದೆ **"ವಿಷ್ಣುರ್ಯೋನಿ..."** ಮುಂತಾಗಿ ಒಂದೊಂದೇ ಮಂತ್ರವನ್ನು ಉಚ್ಚರಿಸಿ ಒಂದೊಂದು

Scanned by CamScanner

ಪರಿತಾ ಬಭೂವ ॥ ಯತ್ಕಾಮಾಸ್ತೇ ಜಹುಮಸ್ತನ್ನೋ ಅಸ್ತು ವಯಂ ಸ್ಯಾಮ ಪತಯೋ ರಯೀಣಾಂ ಸ್ವಾಹಾ ॥ ಪ್ರಜಾಪತಯ ಇದಂ ನಮಮ ॥ ಏವಂ ಸಪ್ತಾಜ್ಯಾಹುತೀರ್ಹುತ್ವಾ ॥ ಅಪನಃ ಶೋಶುಚದಘಮಿತ್ಯಷ್ಟರ್ಚಸ್ಯ ಸೂಕ್ತಸ್ಯ ಕುತ್ಸೋಗ್ನಿರ್ಗಾಯತ್ರೀ ಪತ್ನ್ಯಾ ಮೂರ್ಧಾಭಿಮರ್ಶನೇ ವಿನಿಯೋಗಃ ॥ ಓಂ ಅಪನಃ ಶೋಶುಚದಘಮಗ್ನೇಶುಶುಧ್ಯಾರಯಿಂ ॥ ಅಪನಃ ಶೋಶುಚದಘಂ ॥ ಸುಕ್ಷೇತ್ರಿಯಾಸುಗಾತುಯಾವಸೂಯಾ ಚ ಯಜಾಮಹೇ ॥ ಅಪನಃ ಶೋ ..... ॥ ಪ್ರಯದ್ಭಂದಿಷ್ಠ ಏಷಾಂ ಪ್ರಾಸ್ಮಾಕಾಸಶ್ಚಸೂರಯಃ ॥ ಅಪನಃ ಶೋ ... ॥ ಪ್ರಯತ್ತೇ ಅಗ್ನೇ ಸೂರಯೋ ಜಾಯೇ ಮಹಿಪ್ರತೇವಯಂ ॥ ಅಪನಃ ಶೋ ..... ॥ ಪ್ರಯದಗ್ನೇಃ ಸಹಸ್ವತೋವಿಶ್ವತೋಯಂತಿ ಭಾನವಃ ॥ ಅಪನಃ ಶೋ ... ॥ ತ್ವಂ ಹಿ ವಿಶ್ವತೋಮುಖವಿಶ್ವತಃ ಪರಿಭೂರಸಿ ॥ ಅಪನಃ ಶೋ ... ॥ ದ್ವಿಷೋನೋ ವಿಶ್ವತೋಮುಖಾತಿ ನಾವೇವ ಪಾರಯ ॥ ಅಪನಃ ಶೋ ... ॥ ಸನಃ ಸಿಂಧುಮಿವನಾವಯಾತಿಪರ್ಷಾ ಸ್ವಸ್ತಯೇ ॥ ಅಪನಃ ಶೋಶುಚದಘಂ ॥ ಸೂಕ್ತಾಂತೇ ಪ್ರಾಗಂಗುಲಿನಾನ್ಯಬ್ಜುಖೇನ ಹಸ್ತೇನ ಪತ್ನ್ಯಾ ಮೂರ್ಧಾನಮಭಿಮೃಶ್ಯ ॥ ಯಾಃ ಫಲಿನೀರಿತ್ಯಸ್ಯಾಥರ್ವಣೋ ಭಿಷಗೋಷಧಯೋನುಷ್ಟುಪ್ ॥ ಜಪೇ ವಿನಿಯೋಗಃ ॥ ಓಂ ಯಾಃ ಫಲಿನೀ ... ॥ ಏತಾಂ ಜಪಿತ್ವಾ ॥

ಮಂತ್ರದಿಂದ ಒಂದೊಂದು ಆಜ್ಯಾಹುತಿಯನ್ನು ಕೊಡುತ್ತ **"ವಿಷ್ಣವ ಇದಂ ನಮಮ"** ಎಂದು ಸಮರ್ಪಿಸಬೇಕು. ಹೀಗೆ ಆರು ಆಹುತಿಗಳನ್ನು ಕೊಟ್ಟಾದ ಮೇಲೆ, **"ಓಂ ಪ್ರಜಾಪತೇ ನತ್ವ ..."** ಈ ಮಂತ್ರದಿಂದ ಪ್ರಜಾಪತಿಗೆ ಒಂದು ಆಜ್ಯಾಹುತಿಯನ್ನು ಕೊಡಬೇಕು. ಆಮೇಲೆ **"ಅಪನಃ ಶೋಶುಚದಘಂ"** ಎಂಬ ಎಂಟು ಋಕ್ಕುಗಳುಳ್ಳ ಮಂತ್ರವನ್ನು ಹೇಳಿ ಚಾಚಿದ ಬೆರಳುಗಳು ಕವಚಿ ಕೈಯಿಂದ ಪತ್ನಿಯ ತಲೆಯನ್ನು ಸ್ಪರ್ಶಿಸಬೇಕು. **"ಯಾಃ ಫಲಿನೀ..."** ಎಂಬ ಮಂತ್ರವನ್ನು ಜಪಿಸಬೇಕು. ಮುಂದೆ **"ವರ್ಧೇನದಸ್ಯು.."** ಈ ಮಂತ್ರಗಳಿಂದ ಉಪಸ್ಥಾನಮಾಡುವುದು. **"ಉದೀರ್ಷ್ವಾ"** ಎಂಬ ಮಂತ್ರಗಳನ್ನು ಹೇಳಿ ಪತ್ನಿಯ ಬಲಮೂಗಿನಲ್ಲಿ

Scanned by CamScanner

ವಧೇನ ದಸ್ಯುಮಿತಿ ಷಣ್ಣಾಂ ವಸುಶ್ರುತೋಗ್ನಿಸ್ತ್ರಿಷ್ಟುಪ್ ॥ ಅಗ್ನ್ಯು-ಪಸ್ಥಾನೇ ವಿನಿಯೋಗಃ ॥ ಓಂ ವಧೇನದಸ್ಯುಂ ಪ್ರಹಿಚಾತಯಸ್ವಯಃ ಕೃಷ್ಣಾ-ನಸ್ತನ್ವೇ ೧ ಸ್ವಾಯೈ ॥ ಪಿಪರ್ಷಿಯತ್ಸಹಸಸ್ಪುತ್ರದೇವಾನ್ ಸೋ ಅಗ್ನೇ ಪಾಹಿನೃತಮವಾಜೇ ಅಸ್ಮಾನ್ ॥ ವಯಂತೇ ಅಗ್ನ ಉಕ್ಥೈರ್ವಿಧೇಮ ವಯಂ ಹವ್ಯೈಃ ಪಾವಕಭದ್ರಶೋಚೇ ॥ ಅಸ್ಮೇರಯಿಂವಿಶ್ವವಾರಂ ಸಮಿನ್ವಾಸ್ಮೇ ವಿಶ್ವಾನಿದ್ರ-ವಿಣಾನಿ ಧೇಹಿ ॥ ಅಸ್ಮಾಕಮಗ್ನೇ ಅಧ್ವರಂ ಜುಷಸ್ವಸಹಸಃ ಸೂನೋತ್ರಿಷಧಸ್ಥ-ಹವ್ಯಂ ॥ ವಯಂ ದೇವೇಷು ಸುಕೃತಃ ಸ್ಯಾಮಶರ್ಮಣಾ ನ ಸ್ತ್ರಿವರೂಥೇನ ಪಾಹಿ ॥ ವಿಶ್ವಾನಿನೋ 114 ... ೩ ॥ ಅಗ್ನಿಸ್ತುವಿಶ್ರವಸ್ತಮಮಿತಿ ದ್ವಯೋರ್ವಸೂಯ-ವೋಗ್ನಿರನುಷ್ಟುಪ್ ಅಗ್ನ್ಯುಪಸ್ಥಾನೇ ವಿನಿಯೋಗಃ ॥ ಓಂ ಅಗ್ನಿಸ್ತುವಿಶ್ರವಸ್ತ-ಮಂತುವಿಬ್ರಹ್ಮಾಣಮುತ್ತಮಂ ॥ ಅತೂರ್ತಂ ಶ್ರಾವಯತ್ಪತಿಂ ಪುತ್ರಂ ದದಾತಿದಾ-ಶುಷೇ ॥ ಅಗ್ನಿರ್ದದಾತಿ ಸತ್ಪತಿಂಸಾಸಾಹಯೋಯುಧಾನೃಭಿಃ ॥ ಅಗ್ನಿರತ್ಯಂರಘು-ಷ್ಯದಂಜೇತಾರಮಪರಾಜಿತಂ ॥ ಇತ್ಯಾಭ್ಯಾಭಿರಗ್ನಿಮುಪಸ್ಥಾಯ ॥

ಉದೀರ್ಷ್ವೇತಿ ದ್ವಯೋಃ ಸೂರ್ಯಾಸಾವಿತ್ರೀ ಸೂರ್ಯಾಸಾವಿತ್ರೀ ಆದ್ಯಾ ತ್ರಿಷ್ಟುಬಂತ್ಯಾನುಷ್ಟುಪ್ ॥ ಭಾರ್ಯಾಯಾ ದಕ್ಷಿಣನಾಸಾಪುಟೇಶ್ವಗಂ-ಧಾಯಾ (ದೂರ್ವಾಯಾ ವಾ) ರಸಸೇಚನೇ ವಿನಿಯೋಗಃ ॥ ಓಂ ಉದೀ-ರ್ಷ್ವಾತಃ ಪತಿವತೀಹ್ಯೇ ೩ ಷಾವಿಶ್ವಾವಸುಂ ನಮಸಾಗೀರ್ಭಿರೀಳೇ ॥ ಅನ್ಯಾಮಿಚ್ಛ ಪಿತೃಷದಂವ್ಯಕ್ತಾಂ ಸ ತೇ ಭಾಗೋಜನುಷಾತಸ್ಯವಿದ್ಧಿ ॥ ಉದೀರ್ಷ್ವಾತೋ ವಿಶ್ವಾವಸೋನಮಸೇಳಾಮಹೇತ್ವಾ ॥ ಅನ್ಯಾಮಿಚ್ಛಪ್ರಫರ್ವ್ಯಂ ೧ ಸಂಜಾಯಾಂ ಪತ್ಯಾ ಸೃಜಸ್ವಾಹಾ ॥ ಇತಿ ವಾಮಭಾಗೋಪವಿಷ್ಟಾಯಾ ಭಾರ್ಯಾಯಾ ದಕ್ಷಿಣನಾಸಾಬಿ ಲೇಶ್ವಗಂಧಾದಿ ರಸಂ ಸಿಕ್ತ್ವಾ ತದ್ರಸೇ ಉದರಂ ಗತೇ ತಾ ಮಾಚಾಮಯ್ಯೋಪೇ-ಯಾತ್ ॥ ತತಃ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯ ॥

Scanned by CamScanner

Scanned with CamScanner

ಸೂರ್ಯೋನೋ ದಿವಸ್ಪಾತ್ವಿತಿ ಪಂಚರ್ಚಸ್ಯ ಸೂಕ್ತಸ್ಯ ಚಕ್ಷುಃ ಸೂರ್ಯೋ ಗಾಯತ್ರೀ ॥ ಸೂರ್ಯೋಪಸ್ಥಾನೇ ವಿನಿಯೋಗಃ ॥ ಓಂ ಸೂರ್ಯೋನೋ ದಿವಸ್ಪಾತುವಾತೋ ಅಂತರಿಕ್ಷಾತ್ ॥ ಅಗ್ನಿರ್ನಃ ಪಾರ್ಥಿವೇಭ್ಯಃ ॥ ಜೋಷಾಸವಿತರ್ಯಸ್ಯತೇ ಹರಃ ಶತಂ ಸವಾಂ ಅರ್ಹತಿ ॥ ಪಾಹಿನೋದಿದ್ಯುತಃ ಪತಂತ್ಯಾಃ ॥ ಚಕ್ಷುರ್ನೋ ದೇವಃ ಸವಿತಾ ಚಕ್ಷುರ್ನ ಉತಪರ್ವತಃ । ಚಕ್ಷುರ್ಧಾತಾ ದಧಾತುನಃ ॥ ಚಕ್ಷುರ್ನೋ ಧೇಹಿ ಚಕ್ಷುಷೇ ಚಕ್ಷುರ್ವಿಖ್ಯೈತನೂಭ್ಯಃ ॥ ಸಂ ಚೇದಂ ವಿಚಪಶ್ಯೇಮ ॥ ಸುಸಂದೃಶಂತ್ವಾ ವಯಂ ಪ್ರತಿ ಪಶ್ಯೇಮ ಸೂರ್ಯ ॥ ವಿಪಶ್ಯೇಮನೃಚಕ್ಷಸಃ ॥ ಅನೇನ ಸಪತ್ನೀಕಃ ಸೂರ್ಯಮುಪಸ್ಥಾಯ ಬ್ರಾಹ್ಮಣಾನ್ ಭೋಜಯಿತ್ವಾ ತೇಭ್ಯಃ ಸ್ವಸ್ತ್ಯಯನಪೂರ್ವಕಮಾಶಿಷೋ ಗೃಹೀತ್ವಾ ಭುಂಜೀತ ॥ ಇದಾನೀಂ ಶಿಷ್ಟಾ ನಸ್ಯಂದತ್ತ್ವೈವ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪಯಂತಿ ॥

ತತೋ ರಾತ್ರೌ ವಿಹಿತಃ ಸಮಂತ್ರಕೋ ವಿಧಿರಗ್ರೇ ಲಿಖಿತಃ । ತನ್ಮಂತ್ರಾನ್ ಕೇವಲಮತ್ರ ಪಠಂತಿ ಶಿಷ್ಟಾಃ ॥

ತತೋ ಭರ್ತಾ ಅಭಗ್ನಂ ಜಂತುವರ್ಜಿತಂ ಸುಖಸ್ಪರ್ಶವಿತಾನೋಪರಿಮಂಡಿತಂ ಮಂಚಕಮಾರುಹ್ಯ ಪ್ರಾಗುಕ್ತಶೋಭನೇ ಮುಹೂರ್ತೇ ಸ್ತ್ರಿಯಮಾರೋಪ್ಯ ॥ ಉಪಗಮನೇ ಚಾಯಂ ಕ್ರಮಃ ॥ ಓಂ ಗಂಧರ್ವಸ್ಯ ವಿಶ್ವಾವಸೋರ್ಮುಖಮಸಿ ಇತಿ ಮಂತ್ರೇಣ ಹೋಮೋಕ್ತಮುಖ್ಯಾದಿಭಿರ್ವಿಷ್ಣುರ್ಯೋನಿಮಿತಿ ತಿಸೃಭಿರ್ನೇಜಮೇಷೇತಿ ತ್ರಿಸೃಭಿರಂಗುಲೀಭಿರ್ಯೋನಿಮಭಿಮೃಶ್ಯ ॥ ತಾಂ ಪೂಷನ್ನಿತ್ಯಸ್ಯ ಸೂರ್ಯಾಸಾವಿತ್ರೀ ತ್ರಿಷ್ಟುಪ್ ಜಪೇ ನಿಯೋಗಃ ॥ ಓಂ ತಾಂಪೂಷಂಚ್ಛಿವತಮಾಮೇರಯಸ್ವಯಸ್ಯಾಂಬೀಜಂ ಮನುಷ್ಯಾ ೩ ವಪಂತಿ ॥ ಯಾನ ಊರೂಉಶತೀ ವಿಶ್ರಯಾತೇ ಯಸ್ಯಾಮುಶಂತಃ ಪ್ರಹರಾಮ-

Scanned by CamScanner

Scanned with CamScanner

ಶೇಪಂ ॥ ೧ ॥ ಯೋ ಗರ್ಭಮಿತ್ಯಸ್ಯ ವಸಿಷ್ಠಃ ಪರ್ಜನ್ಯೋ ಗಾಯತ್ರೀ ॥ ಜಪೇ ವಿ... ॥ ಓಂ ಯೋಗರ್ಭಮೋಷಧೀ ನಾಂಗವಾಂಕ್ಯೃಣೋತ್ಯರ್ವತಾಂ ॥ ಪರ್ಜನ್ಯಃ ಪುರುಷೀಣಾಂ ॥ ೨ ॥ ಅಹಂಗರ್ಭಃ ಪ್ರಜಾವಾನ್ ಪ್ರಜಾಪತ್ಯೋ ಭರ್ಗ ಇಂದ್ರೋ ವಾ ತ್ರಿಷ್ಟುಪ್ ॥ ಜಪೇ ವಿ ... ॥ ಓಂ ಅಹಂ ಗರ್ಭಮದಧಾಮೋ-ಷಧೀಷ್ವಹಂ ವಿಶ್ವೇಷು ಭುವನೇಷ್ವಂತಃ ॥ ಅಹಂ ಪ್ರಜಾಅಜನಯಂಪೃಥಿವ್ಯಾಮ-ಹಂಜನಿಭ್ಯೋ ಅಪರೀಷು ಪುತ್ರಾನ್ ॥ ೩ ॥ ಇತಿ ತ್ರೀನ್ ಮಂತ್ರಾನ್ ಜಪಿತ್ವಾ ಸಕೃದುಪಗಚ್ಛೇತ್ ॥ ತತಃ ಪ್ರಾಣೇತೇ ರೇತೋದಧಾಮ್ಯಸಾವಿತ್ಯನುಪ್ರಾಣ್ಯ ॥ ಯಥಾ ಭೂಮಿರಗ್ನಿಗರ್ಭಾ ಯಥಾ ದ್ಯೌರಿಂದ್ರೇಣ ಗರ್ಭಿಣೀ ॥ ವಾಯುರ್ಯಥಾ ದಿಶಾಂ ಗರ್ಭ ಏವಂ ತೇ ಗರ್ಭಂ ದಧಾಮ್ಯಸಾವಿತಿ ಸ್ತ್ರೀಹೃದಯಂ ಅಭಿಮೃಶಾಚಾ-ಮೇತ್ ॥ ಅಸ್ಮಿನ್ ಕರ್ಮಣಿ ಶತಂ ದಶ ವಾ ಬ್ರಾಹ್ಮಣಾ ಭೋಜ್ಯಾಃ ॥

॥ ಇತಿ ಗರ್ಭಾಧಾನ ಸಂಸ್ಕಾರಃ ॥

ಅಶ್ವಗಂಧ ಅಥವಾ ದೂರ್ವಾರಸವನ್ನು ಸುರಿಯಬೇಕು. ಅದು ಹೊಟ್ಟೆಗೆ ಹೋದ ಮೇಲೆ ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಮುಗಿಸಬೇಕು. ಬಳಿಕ "ಸೂರ್ಯೋನೋ..." ಮಂತ್ರಗಳಿಂದ ಸೂರ್ಯೋಪಸ್ಥಾನ ಮಾಡಿ ಬ್ರಾಹ್ಮಣರಿಗೆ ಭೋಜನವಿತ್ತು ಆಶೀರ್ವಾದ ಪಡೆದು ತಾನು ಊಟಮಾಡಬೇಕು. ರಾತ್ರಿಕಾಲದ ಮಂತ್ರಸಹಿತ ಉಪಗಮನವಿಧಿ. ಈ ಮಂತ್ರಗಳನ್ನು ಪಠನಮಾತ್ರ ಮಾಡಿದರೆ ಸಾಕೆಂದು ಶಿಷ್ಟಸಂಪ್ರದಾಯ. ಪತಿಯು ಒಡಕಿಲ್ಲದ, ಜಂತುಗಳಿಲ್ಲದ, ಸುಖಸ್ಪರ್ಶದಿಂದ ಕೂಡಿದ ಮಂಚದ ಮೇಲೆ ಪತ್ನಿಯನ್ನು ಮಲಗಿಸಿ, **"ಗಂಧರ್ವಸ್ಯ ವಿಶ್ವಾಸೋ"**, **"ವಿಷ್ಣುರ್ಯೋನಿಂ"**, **"ನೇಜಮೇಷ"** ಈ ಮಂತ್ರಗಳನ್ನು ಹೇಳುತ್ತ ಮೂರು ಬೆರಳುಗಳಿಂದ ಯೋನಿಸ್ಪರ್ಶ ಮಾಡಬೇಕು. ಬಳಿಕ **"ತಾಂ ಪೂಷನ್"** **"ಯೋ ಗರ್ಭ"** **"ಅಹಂ ಗರ್ಭ"** ಎಂಬ ಮೂರು ಮಂತ್ರಗಳನ್ನು ಜಪಿಸಿ ಉಪಗಮನ ಮಾಡಬೇಕು. ಆಮೇಲೆ **"ಪ್ರಾಣೇ ರೇತೋ"** **"ಯಥಾ ಭೂಮಿ"** ಎಂಬ ಎರಡು ಮಂತ್ರಗಳನ್ನು ಹೇಳಿ ಪತ್ನಿಯ ಹೃದಯಸ್ಪರ್ಶ ಮಾಡಬೇಕು. ನೂರು ಅಥವಾ ಹತ್ತು ಮಂದಿ ಬ್ರಾಹ್ಮಣರಿಗೆ ಭೋಜನ ಕೊಡಬೇಕು.

॥ ಗರ್ಭಾಧಾನ ಸಂಸ್ಕಾರ ಸಮಾಪ್ತ ॥

Scanned by CamScanner

Scanned with CamScanner

॥ ಪುಂಸವನಾನವಲೋಭನಸೀಮಂತೋನ್ನಯನಾನಿ ॥

॥ ಶ್ರೀಃ [ಹವಿಷ್ಯೇಣ ಕೃತೈಕ ಲಘುಭೋಜನಯಾ ಭಾರ್ಯಯಾ ಅಪರೇದ್ಯುಃ ಕೃತಮಂಗಲಸ್ನಾನಯಾ ಪರಿಹಿತಾಹತವಸ್ತ್ರಯಾಲಂಕೃತಯಾ ದಕ್ಷಿಣತ ಉಪವೇಶ್ಯ] ಯಜಮಾನಃ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ ಅಸ್ಯಾಂ ಮಮ ಭಾರ್ಯಾಯಾಂ ಉತ್ಪತ್ಸ್ಯಮಾನ ಸರ್ವಗರ್ಭಾಣಾಂ ಬೈಜಿಕಗಾರ್ಭಿಕ-ದೋಷಪರಿಹಾರಪುಂರೂಪತಾ ಜ್ಞಾನೋದಯಪ್ರತಿರೋಧಿಪರಿಹಾರದ್ವಾರಾಪುಂಸ-ವನಮನವಲೋಭನಂ ಚ ತಥಾ ಮಮಾಸ್ಯಾಂ ಭಾರ್ಯಾಯಾಂ ಗರ್ಭಾಭಿವೃದ್ಧಿ ಪರಿಪಂಥಿಪಿಶಿತರುಧಿರಪ್ರಿಯಾಲಕ್ಷ್ಮೀಭೂತರಾಕ್ಷಸೀಗಣದೂರನಿರಸನಕ್ಷೇಮ ಸಕಲ-ಸೌಭಾಗ್ಯನಿದಾನಭೂತ ಮಹಾಲಕ್ಷ್ಮೀಸಮಾವೇಶನದ್ವಾರಾ ಪ್ರತಿಗರ್ಭಂ ಬೀಜ-ಗರ್ಭಸಮುದ್ಭವೈನೋನಿಬರ್ಹಣಜನಕಾತಿಶಯದ್ವಾರಾ ಚ ಸ್ತ್ರೀಸಂಸ್ಕಾರರೂಪಂ ಸೀಮಂತೋನ್ನಯನಾಖ್ಯಸಂಸ್ಕಾರಂ ಚ ತಂತ್ರೇಣ ಕರಿಷ್ಯೇ ॥ ತದಂಗತಯಾ ಗಣಪತಿಪೂಜನಂ ಪುಣ್ಯಾಹವಾಚನಂ ಮಾತೃಕಾಪೂಜನಂ ನಾಂದೀಶ್ರಾದ್ಧಂ ಚ ಕರಿಷ್ಯೇ ಇತಿ ಸಂಕಲ್ಪ್ಯ ತಾನಿ ಕ್ರಮೇಣ ಕುರ್ಯಾತ್ ॥ [ಸ್ವಸ್ತಿವಾಚನೇ, ಏತೇಷಾಂ ಪುಂಸವನಾನವಲೋಭನಸೀಮಂತೋನ್ನಯನ ಕರ್ಮಣಾಂ ಪುಣ್ಯಾಹಂ ಭವಂತೋ ಬ್ರುವಂತ್ವಿತಿ ಉಕ್ತಕರ್ಮಭ್ಯಃ ಸ್ವಸ್ತೀತಿ ಕರ್ಮಾಣಿ ಋಧ್ಯಂತಾಮಿತ್ಯಾದ್ಯೂಹಃ ॥ ನಾಂದೀಶ್ರಾದ್ಧೇ ಕ್ರತುದಕ್ಷಸಂಜ್ಞಕಾ ವಿಶ್ವೇದೇವಾಃ]

ಹಿಂದಿನ ಹವಿಷ್ಯಾನ್ನದಿಂದ ಒಂದೇ ಊಟಮಾಡಿದ, ಹಾಗೂ ಮಂಗಲಸ್ನಾನ ಮಾಡಿ ಹೊಸವಸ್ತ್ರವನ್ನು ಧರಿಸಿ ಅಲಂಕೃತಳಾದ ಪತ್ನಿಯನ್ನು ತನ್ನ ಬಲಭಾಗದಲ್ಲಿ ಕೂತುಕೊಳ್ಳಿಸಿ ಯಜಮಾನನು ಆಚಮನ ಪ್ರಾಣಾಯಾಮ ದೇಶ ಕಾಲ ಸಂಕೀರ್ತನಾದಿಗಳನ್ನು ಮಾಡಿ, **"ಅಸ್ಯಾಂ ಮಮ ಭಾರ್ಯಾಯಾಂ...ನಾಂದೀಶ್ರಾದ್ಧಂ ಚ ಕರಿಷ್ಯೇ"** ಎಂದು ಸಂಕಲ್ಪಮಾಡಿ ಅವುಗಳನ್ನು ಈ ಮೊದಲು ಹೇಳಿದ ಪ್ರಕಾರ ಮಾಡಿ ಮುಗಿಸಬೇಕು. ಪುಣ್ಯಾಹವಾಚನದಲ್ಲಿ **"ಏತೇಷಾಂ ಪುಂಸವನಾನವಲೋಭನ ಸೀಮಂತೋನ್ನಯನಕರ್ಮಣಾಂ ಪುಣ್ಯಾಹಂ ಭವಂತೋ ಬ್ರುವಂತು ಉಕ್ತಕರ್ಮಭ್ಯಃ ಸ್ವಸ್ತಿ ಭವಂತೋ ಬ್ರುವಂತು ಕರ್ಮಾಣಿ ಋಧ್ಯಂತಾಂ"** ಎಂದು ಮೊದಲಾಗಿ ಈ ಕರ್ಮಗಳಿಗೆ ಹೊಂದಿಕೆಯಾಗುವಂತೆ ಹೇಳಬೇಕು.

ನಾಂದೀಶ್ರಾದ್ಧದಲ್ಲಿ **"ಕ್ರತುದಕ್ಷ ಸಂಜ್ಞಕಾ ವಿಶ್ವೇದೇವಾ"** ಎಂದು ಹೇಳಬೇಕು.

Scanned by CamScanner

Scanned with CamScanner

ತದಂಗಹೋಮಂ ಕರ್ತುಂ ಸ್ಥಂಡಿಲಾದಿ ಕರಿಷ್ಯೇ ॥ ವಿಧಿವದೌಪಾಸನಾಗ್ನಿಂ ಪವಮಾನಂ ಪುಂಸವನಾದಿ ಪೃಥಕ್ತ್ವೇ ॥ ತ್ರಯಾಣಾಂ ಸಹತ್ವೇ ತು ಮಂಗಲನಾಮಾನಮಗ್ನಿಂ ಪ್ರತಿಷ್ಠಾಪ್ಯ ಕ್ರಿಯಮಾಣೇ ಪುಂಸವನಾನವಲೋಭನಸೀಮಂತೋನ್ನಯನಹೋಮೇ ದೇವತಾಪರಿಗ್ರಹಾರ್ಥಮನ್ವಾಧಾನಂ ಕರಿಷ್ಯೇ ॥ ಅಸ್ಮಿನ್ನನ್ವಾಹಿತೇಗ್ನಾವಿತ್ಯಾದಿ ಚಕ್ಷುಷೀ ಆಜ್ಯೇನೇತ್ಯಂತಮುಕ್ತ್ವಾ ಪ್ರಜಾಪತಿಂ ಚರುಣಾ ದ್ವಿರ್ಧಾತಾರಂ ದ್ವಿರಾಕಾಂ ತ್ರಿರ್ವಿಷ್ಣುಂ ಪ್ರಜಾಪತಿಂ ಚಾಜ್ಯೇನ ಶೇಷೇಣ ಸ್ವಿಷ್ಟಕೃತಮಿತ್ಯಾದ್ಯುಕ್ತ್ವಾ ಅನ್ವಾಧಾಯ ಪರಿಸಮೂಹನಪರಿಸ್ತರಣಾದಿ-ಪ್ರಣೀತಾಪ್ರಣಯನಾವಧಿ ಪ್ರಾಕ್ತನತಂತ್ರಂ ಕೃತ್ವಾ ಪ್ರಜಾಪತಯೇ ತ್ವಾ ಜುಷ್ಟಂ ನಿರ್ವಪಾಮೀತಿ ಚತುರೋ ವ್ರೀಹಿಮುಷ್ಟೀನ್ನಿರುಪ್ಯ ಪ್ರೋಕ್ಷಣಾವಘಾತಾದಿ ಬರ್ಹಿಷಿ ಹವಿರಾಸಾದನಾಂತಂ ಕೃತ್ವಾ ॥

ಸ್ವದಕ್ಷಿಣತಃ ಪ್ರತ್ಯಗ್ಗ್ರೀವಮುತ್ತರಲೋಮಾನಡುಹಂ ಚರ್ಮಾಸ್ತೀರ್ಯ ಆತ್ಮಾನಮಗ್ನಿಂ ಚಾಂತರಾ ಪತ್ನೀಮಾಚಾಂತಸಲಿಲಾಂ ತೀರ್ಥಪ್ರವೇಶೇನಾನೀಯ ಚರ್ಮಣ್ಯುಪವೇಶ್ಯ ತಯಾನ್ವಾರಬ್ಧ ಇಧ್ಮಾಧಾನಾದ್ಯಾಜ್ಯಭಾಗಾಂತಂ ಕೃತ್ವಾ ॥ ಪ್ರಕ್ಷಾಲಿತೇ ಪ್ರಸೃತೀಕೃತೇ ದಕ್ಷಿಣೇ ಪತ್ನೀಪಾಣಾವಂತರ್ಜಾನುಸ್ಥಿತೇ ಪ್ರಸೃತಿ ಮಿತಂ ಸಮಾನರೂಪವತ್ಸಾಯಾ ಗೋರನ್ಯಸ್ಯಾ ವಾ ಕ್ಷೀರೇಣ ನಿರ್ಮಿತಂ ದಧಿ ನಿಕ್ಷಿಪ್ಯ

"ತದಂಗ...ಕರಿಷ್ಯೇ" ಎಂದು ಸಂಕಲ್ಪಮಾಡಿ ಸ್ಥಾಲೀಪಾಕದಲ್ಲಿ ಹೇಳಿದಂತೆ ಸ್ಥಂಡಿಲರಚನೆ ಸಂಸ್ಕಾರಾದಿಗಳನ್ನು ಮಾಡಬೇಕು. ಈ ಮೂರು ಸಂಸ್ಕಾರಗಳನ್ನು ಬೇರೆ ಬೇರೆಯಾಗಿ ಮಾಡುವುದಾದರೆ ಪುಂಸವನ ಅನವಲೋಭನಗಳಿಗೆ ಔಪಾಸನಾಗ್ನಿ ಪವಮಾನಾಗ್ನಿ ಹಾಗೂ ಮೂರನ್ನೂ ಒಟ್ಟಾಗಿ ಮಾಡುವುದಾದರೆ **"ಮಂಗಲ"** ನಾಮಾಗ್ನಿಯನ್ನೂ ಪ್ರತಿಷ್ಠಾಪಿಸಬೇಕು. ಆಮೇಲೆ ಅನ್ವಾಧಾನಕ್ಕೆ ಸಮಿಧೆಗಳನ್ನು ತೆಗೆದುಕೊಂಡು **"ಕ್ರಿಯಮಾಣೇ...ಕರಿಷ್ಯೇ"** ಎಂದೂ **"ಅಸ್ಮಿನ್ನನ್ವಾಹಿತೇಗ್ನೌ...ಪ್ರಜಾಪತಿಂ ಚಾಜ್ಯೇನ"** ಎಂದೂ **"ಶೇಷೇಣ ಸ್ವಿಷ್ಟಕೃತ..."** ಎಂದು ಪೂರ್ತಿಯಾಗಿ ಹೇಳಿ ಅನ್ವಾಧಾನವನ್ನು ಪೂರ್ತಿಗೊಳಿಸಬೇಕು. ಬಳಿಕ ಪರಿಸಮೂಹನ ಪರ್ಯುಕ್ಷಣ ಮೊದಲಾಗಿ ಪ್ರಣೀತಾಪಾತ್ರಸ್ಥಾಪನೆಯ ವರೆಗಿನ ಕ್ರಮಗಳನ್ನು ಮಾಡಿ **"ಪ್ರಜಾಪತಯೇ ತ್ವಾಜುಷ್ಟಂ ನಿರ್ವಪಾಮಿ"** ಎಂದು ನಾಲ್ಕು ಮುಷ್ಟಿ ಅಕ್ಕಿಯನ್ನು ತೆಗೆದು ಹವಿರಾಸಾದನದ ವರೆಗಿನ ಕರ್ಮ ಮಾಡಬೇಕು.

ಬಳಿಕ ತನ್ನ ಬಲಭಾಗದಲ್ಲಿ ಪಶ್ಚಿಮಕ್ಕೆ ಮುಖವಿರುವಂತೆ ಉತ್ತರಕ್ಕೆ ರೋಮಗಳಿರುವಂತೆ ಎತ್ತಿನ ಚರ್ಮವನ್ನು ಹಾಸಿ (ಬದಲಾಗಿ ಕೆಂಪುಬಟ್ಟೆಯನ್ನು ಹಾಸುತ್ತಾರೆ) ಅದರ ಮೇಲೆ ತನ್ನ ಮತ್ತು ಅಗ್ನಿಯ ಮಧ್ಯದ ದಾರಿಯಾಗಿ ಆಚಮನ ಮಾಡಿದ ಪತ್ನಿಯನ್ನು ಕರೆತಂದು ಕೂತುಕೊಳ್ಳಿಸಬೇಕು. ಅವಳ ಕರಸ್ಪರ್ಶ ಮಾಡಿಸಿ ಇಧ್ಮಾಧಾನದಿಂದ ಮೊದಲ್ಗೊಂಡು ಆಜ್ಯಭಾಗಾಂತ ಕರ್ಮಗಳನ್ನು ಸ್ಥಾಲೀಪಾಕದಲ್ಲಿ ಹೇಳಿದಂತೆ ಮಾಡಿ ಮುಗಿಸಬೇಕು.

Scanned by CamScanner

ತದುಪರಿ ಲಿಂಗವದ್ಯವಂ ಪ್ರಾಗಗ್ರಂ ತತ್ಪಾರ್ಶ್ವಯೋರಂಡದ್ವಯವನ್ಮಾಷ-ದ್ವಯಂ ಚ ನಿಧಾಯ ಕಿಂ ಪಿಬಸೀತಿ ತ್ರಿಃ ಪತಿಃ ಪತ್ನೀಂ ಪೃಚ್ಛೇತ್ ॥ ಸಾ ಚ ಪುಂಸವನಮಿತಿ ತ್ರಿರುಕ್ತ್ವಾ ಸಯವಮಾಷಂ ತದ್ದಧಿ ನಿಃಶ್ಶೇಷಂ ಪೀತ್ವಾ ಬಹಿರಾಚಾಮೇತ್ ॥ ಪುನರೇವಂ ದ್ವಿಃ ಪ್ರಶ್ನಪ್ರತಿವಚನಪೂರ್ವಕಂ ಪ್ರಾಶ್ಯಾ-ಚಾಮೇತ್ ॥

॥ ಇತಿ ಪುಂಸವನಂ ॥

ಪತ್ನಿಯು ಎರಡು ಕೈಗಳನ್ನು ತೊಳೆದು ಅವುಗಳನ್ನು ಬಿಡಿಸಿ, ಚಾಚಿ ಮೊಣಕಾಲುಗಳ ಮಧ್ಯದಲ್ಲಿರಿಸಬೇಕು. ಸಮಾನ ಆಕಾರವುಳ್ಳ ಕರುವಿದ್ದಂಥ ದನದ ಅಥವಾ ಬೇರೆ ದನದ ಹಾಲಿನಿಂದ ತಯಾರಿಸಿದ ಮೊಸರನ್ನು ಅವಳ ಬಲಗೈಯಲ್ಲಿ ಸ್ವಲ್ಪ ಹಾಕಬೇಕು. ಮೊಸರಿನ ಮೇಲೆ ಲಿಂಗಾಕೃತಿಯುಳ್ಳ ಅಕ್ಕಿಕಾಳನ್ನು ಪೂರ್ವಕ್ಕೆ ತಲೆ ಇರುವಂತೆ ಇಡಬೇಕು. ಕಾಳಿನ ಎರಡು ಬದಿಗಳಲ್ಲಿ ವೃಷಣದಂತೆ ಎರಡು ಉದ್ದಿನ ಕಾಳುಗಳನ್ನಿಟ್ಟು **"ಕಿಂ ಪಿಬಸಿ?"** ಎಂದು ಮೂರು ಬಾರಿ ಪತಿಯು ಕೇಳಿದಾಗ **"ಪುಂಸವನಂ"** ಎಂದು ಮೂರು ಬಾರಿ ಹೇಳಿ ಪತ್ನಿಯು ಅದನ್ನು ಕುಡಿಯಬೇಕು. ಇದೇ ಕ್ರಮದಿಂದ ಇನ್ನೆರಡು ಬಾರಿ ಕುಡಿಯಬೇಕು. ಆಚಮನ ಮಾಡಬೇಕು.

Scanned by CamScanner

Scanned with CamScanner

॥ ಅನವಲೋಭನಂ ॥

॥ ಶ್ರೀಃ ॥ ತತೋ ದೂರ್ವಾಃ ಕನ್ಯಯಾ ದೃಷದ್ಯುಪಲೇನ ಪೇಷಯಿತ್ವಾ ಪಿಂಡೀಕೃತ್ಯ ಶುದ್ಧವಸನಾಂಚಲೇ ಸಂಗೃಹ್ಯ ಪ್ರಜಾವದಾಖ್ಯಂ ಜೀವಪುತ್ರಸಂಜ್ಞಕಂ ಚ ಸೂಕ್ತಂ ಜಪಿತ್ವಾ ಮಂಡಲಾಗಾರಚ್ಛಾಯಾಯಾಮುಪವಿಷ್ಟಾಯಾಃ ಪತ್ನ್ಯಾಃ ಪಶ್ಚಿಮತಸ್ತಿಷ್ಠನ್ ಪತಿಃ ವಾಮಹಸ್ತೇನ ತದಾನನಮುನ್ನಮಯ್ಯ ದಕ್ಷಿಣೇ ನಾಸಾಬಿಲೇ ಸ್ವಾಂಗುಷ್ಠಾಗ್ರೇಣ ದೂರ್ವಾರಸಮಾಸಿಂಚೇತ್ ಯಥೋದರಪರ್ಯಂತಂ ಗಚ್ಛತಿ ॥

ತತ್ರ ಪ್ರಜಾವದಾಖ್ಯಂ ಸೂಕ್ತಂ ಯಥಾ ॥ ಓಂ ಆತೇ ಗರ್ಭೋ-ಯೋನಿಮೈತು ಪುಮಾನ್ಬಾಣ ಇವೇಷುಧಿಂ ॥ ಆವೀರೋಜಾಯತಾಂ ಪುತ್ರ-ಸ್ತೇದಶಮಾಸ್ಯಃ॥ ಕರೋಮಿ ತೇ ಪ್ರಾಜಾಪತ್ಯಮಾಗರ್ಭೋಯೋನಿಮ್ಮೇತು ತೇ ॥ ಅನೂನಃ ಪೂರ್ಣೋ ಜಾಯತಾಮಶ್ಲೋಣೋಽಪಿಶಾಚಧೀತಃ ॥ ಪುಮಾಂಸ್ತೇ ಪುತ್ರೋನಾರೀ ತಂ ಪುಮಾನನುಜಾಯತಾಂ ॥ ಯಾನಿ ಭದ್ರಾಣಿ ಬೀಜಾನ್ ಋಷಭಾ ಜನಯಂತು ತೇ ॥ ಯಾನಿ ಭದ್ರಾಣಿಬೀಜಾನ್ಯೃಷಭಾಜನಯಂತಿ ನಃ ॥ ತೈಸ್ತ್ವಂ ಪುತ್ರಾನ್ವಿಂದಸ್ವ ಸಾ ಪ್ರಸೂರ್ಧೇನುಕಾ ಭವ ॥ ಕಾಮಃ ಸಮೃದ್ಧ್ಯತಾಂ ಮಹ್ಯಮಪರಾಜಿತಮೇವ ಮೇ ॥ ಯಂ ಕಾಮಂ ಕಾಮಯೇ ದೇವ ತಂ ಮೇ ವಾಯೋ ಸಮರ್ಧಯ ॥ ಅಥ ಜೀವಪುತ್ರಕಾಖ್ಯಂ ಸೂಕ್ತಂ ॥ ಅಗ್ನಿರೈತು ಪ್ರಥಮೋ ದೇವತಾನಾಂ ಸೋಽಸ್ಯೈ ಪ್ರಜಾಂ ಮುಂಚತು ಮೃತ್ಯುಪಾಶಾತ್ ॥ ತದಯಂ ರಾಜಾ ವರುಣೋಽನುಮನ್ಯತಾಂ ಯಥೇಯಂ ಸ್ತ್ರೀ-ಪೌತ್ರಮಘಂ ನ ರೋದಾತ್ ॥ ಇಮಾಮಗ್ನಿಸ್ತ್ರಾಯತಾಂ ಗಾರ್ಹಪತ್ಯಃ ಪ್ರಜಾಮಸ್ಯೈ ನಯತು ದೀರ್ಘಮಾಯುಃ ॥ ಅಶೂನ್ಯೋಪಸ್ಥಾ ಜೀವತು ಮಾತಾ ಪೌತ್ರಮಾನಂದಮಭಿಪ್ರಬುಧ್ಯತಾಮಿಯಂ ॥ ಮಾ ತೇ ಗೃಹೇ ನಿಶಿ-ಘೋಷ ಉತ್ಥಾದನ್ಯತ್ರತ್ವದ್ರುದತ್ಯಃ ಸಂವಿಶಂತು ॥ ಮಾ ತ್ವಂ ವಿಕೇಶ್ಯುರವ ಆವಧಿಷ್ಠಾ ಜೀವಪತ್ನೀ ಪತಿಲೋಕೇ ವಿರಾಜಪಶ್ಯಂತೀ ಪ್ರಜಾಂ ಸುಮನಸ್ಯ-ಮಾನಾ ॥ ಅಪ್ರಜಾಸ್ತ್ವಂ ಪುತ್ರಂ ಮೃತ್ಯುಂ ಪಾಪ್ಮಾನಮುತವಾಘಂ ॥ ಶೀರ್ಷ್ಣಃ ಸ್ರಜಮಿವೋನ್ಮುಚ್ಯದ್ವಿಷದ್ಭ್ಯಃ ಪ್ರತಿಮುಂಚಾಮಿ ಪಾಶಂ ॥ ದೇವಕೃತಂ ಬ್ರಾಹ್ಮಣಂ ಕಲ್ಪಮಾನಂ ತೇನ ಹನ್ಮಿಯೋನಿಷದಃ ಪಿಶಾಚಾನ್ ॥ ಕ್ರವ್ಯಾ-ದೋಮೃತ್ಯೂನಧರಾನ್ಪಾತಯಾಮಿ ದೀರ್ಘಮಾಯುಸ್ತವ ಜೀವಂತು ಪುತ್ರಾಃ ॥ ಏತೈರ್ದಶಭಿರ್ಮಂತ್ರೈಃ ನಸ್ಯೇ ದತ್ತೇ ಆಚಾಂತಜಲಯಾ ಪತ್ನ್ಯಾ ಸ್ಪೃಷ್ಟಃ ಪ್ರಜಾಪತ್ಯಚರುಮವದಾನಧರ್ಮೇಣಾವದಾಯ ॥ ಓಂ ಪ್ರಜಾಪತಯೇ

ಸ್ವಾಹೇತಿ ಏಕಾಮಾಹುತಿಂ ಹುತ್ವಾ ॥ ಪ್ರಜಾಪತಯ ... ॥ ಯತ್ತೇ ಸುಶೀಮ ಇತಿ ಮಂತ್ರಸ್ಯ ಹಿರಣ್ಯಗರ್ಭಃ ಪ್ರಜಾಪತಿರನುಷ್ಟುಪ್ ॥ ಭಾರ್ಯಾಯಾ ಹೃದಯಾಲಂಭನೇ ವಿನಿಯೋಗಃ ॥ ಯತ್ತೇ ಸುಶೀಮೇ ಹೃದಯೇಹಿತಮಂತಃ ಪ್ರಜಾಪತೌ । ಮನ್ಯೇಹಂಮಾಂತದ್ವಿದ್ವಾಂಸಂ ಮಾಹಂ ಪೌತ್ರಮಘನ್ನಿಯ್ಯಾಂ ॥ ಇತಿ ಭಾರ್ಯಾಹೃದಯಂ ಪಾಣಿತಲೇನ ಸ್ಪೃಶೇತ್ ॥

॥ ಇತಿ ಅನವಲೋಭನಂ ॥

ಅನವಲೋಭನಂ:- ಒಬ್ಬ ಕನ್ನಿಕೆಯ ಕೈಯಿಂದ ಒಂದಿಷ್ಟು ದೂರ್ವೆಯನ್ನು ಸಾಣೆಕಲ್ಲಿನ ಮೇಲೆ ಮತ್ತೊಂದು ಕಲ್ಲಿನಿಂದ ಜಜ್ಜಿ ಉಂಡೆ ಮಾಡಿಸಿ, ಅದನ್ನು ಶುಭ್ರವಸ್ತ್ರದ ಒಳಗಿಟ್ಟು ಪತ್ನಿಯನ್ನು ಪೂರ್ವಕ್ಕೆ ಮುಖಮಾಡಿ ನೆರಳಿನಲ್ಲಿ ಕುಳ್ಳಿರಿಸಿ, ಪತಿಯು ಅವಳ ಹಿಂಬದಿಯಲ್ಲಿ ನಿಂತು ತನ್ನ ಎಡಗೈಯಿಂದ ಅವಳ ಮುಖವನ್ನು ಮೇಲೆತ್ತಿ ಬಲಮೂಗಿನ ರಂಧ್ರದಲ್ಲಿ **"ಪ್ರಜಾವದಾಖ್ಯ"** ಜೀವಪುತ್ರಸಂಜ್ಞಕ ಸೂಕ್ತಗಳನ್ನು ಹೇಳುತ್ತ ತನ್ನ ಬಲ ಉಂಗುಷ್ಠದ ತುದಿಯಿಂದ ದೂರ್ವಾರಸವು ಹೊಟ್ಟೆಯ ತನಕ ಹೋಗುವಂತೆ ಹಿಂಡಬೇಕು. ಈ ಹತ್ತು ಮಂತ್ರಗಳನ್ನು ಉಚ್ಚರಿಸುತ್ತ ಪತ್ನಿಯ ಮೂಗಿನಲ್ಲಿ ದೂರ್ವಾರಸವನ್ನು ಸುರಿಯಬೇಕು. ಅವಳು ಆಚಮನ ಮಾಡಿದ ಮೇಲೆ ಅವದಾನಕ್ರಮದಿಂದ ಚರುವನ್ನು ತೆಗೆದು ಪ್ರಜಾಪತಿಗೆ ಒಂದು ಆಹುತಿಕೊಟ್ಟು **"ಯತ್ತೇ ಸುಶೀಮೇ"** ಎಂಬ ಮಂತ್ರವನ್ನು ಹೇಳಿ ಪತ್ನಿಯ ಹೃದಯವನ್ನು ಮುಟ್ಟಬೇಕು.

॥ ಅನವಲೋಭನ ಸಮಾಪ್ತ ॥

Scanned by CamScanner

॥ ಸೀಮಂತೋನ್ನಯನಂ ॥

॥ ಶ್ರೀಃ ॥ ಅಥ ಪ್ರಾಗ್ಗ್ರೀವೇ ಉಪವಿಷ್ಟಯಾ ಪತ್ನ್ಯಾನ್ವಾರಬ್ಧಃ ಸ್ರುವೇಣಾಜ್ಯಾಹುತೀರ್ಜುಹುಯಾತ್ ॥ ಯಥಾ ॥ ಧಾತಾದದಾತುದಾಶುಷ ಇತಿ ಮಂತ್ರದ್ವಯಸ್ಯ ಹಿರಣ್ಯಗರ್ಭೋರ್ಧಾತಾನುಷ್ಟುಪ್ । ದ್ವಿತೀಯಾತ್ರಿಷ್ಟುಪ್ ॥ ಸೀಮಂತೋನ್ನಯನಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ಧಾತಾದದಾ-ತುದಾಶುಷೇಪ್ರಾಚೀಂಜೀವಾತುಮಕ್ಷಿತಾಂ ॥ ವಯಂ ದೇವಸ್ಯಧೀಮಹಿಸುಮತಿಂ-ವಾಜಿನೀವತಃ ಸ್ವಾಹಾ ॥ ಧಾತ್ರ ಇದಂ ನ ಮಮ ॥ ಓಂ ಧಾತಾಪ್ರಜಾನಾಮು-ತರಾಯಈಶೇಧಾತೇದಂ ವಿಶ್ವಂ ಭುವನಂ ಜಜಾನ ॥ ಧಾತಾಕೃಷ್ಟೀರನಿಮಿಷಾ-ಭಿಚಷ್ಟೇ ಧಾತ್ರ ಇದ್ಧವ್ಯಂ ಘೃತವಜ್ಜುಹೋತಸ್ವಾಹಾ ॥ ಧಾತ್ರ ಇದಂ ನ ಮಮ ॥ ರಾಕಾಮಹಮಿತಿದ್ವಯೋರ್ಗ್ರ್ಯತ್ಸಮದೋ ರಾಕಾ ಜಗತೀ ॥ ಸೀಮಂ-ತೋನ್ನಯನ ಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ರಾಕಾಮಹಂಸು-ಹವಾಂ ಸುಷ್ಟುತೀಹುವೇಶ್ರೃಣೋತುನಃ ಸುಭಗಾಬೋಧತುತ್ಮನಾ ॥ ಸೀವ್ಯತ್ವಪಃ ಸೂಚ್ಯಾಚ್ಛಿದ್ಯ ಮಾನಯಾದದಾತುವೀರಂಶತದಾಯಮುಕ್ಥ್ಯಂ ೧ ಸ್ವಾಹಾ ॥ ರಾಕಾಯಾ ಇದಂ ನಮಮ ॥ ಓಂ ಯಾಸ್ತೇರಾಕೇಸುಮತಯಃ ಸುಪೇಶಸೋ-ಯಾಭಿರ್ದದಾಸಿದಾಶುಷೇವಸೂನಿ ॥ ತಾಭಿರ್ನೋ ಅದ್ಯಸುಮನಾಉಪಾಗಹಿ-ಸಹಸ್ರಪೋಷಂ ಸುಭಗೇರರಾಣಾ ಸ್ವಾಹಾ ॥ ರಾಕಾಯಾ ಇದಂ ನಮಮ ॥ ನೇಜಮೇಷೇತಿ ತಿಸೃಣಾಂ ತ್ವಷ್ಟಾವಿಷ್ಣುರನುಷ್ಟುಪ್ ॥ ಸೀಮಂತೋ ... ॥

ಸೀಮಂತೋನ್ನಯನ ಸಂಸ್ಕಾರಃ- ಪೂರ್ವಕ್ಕೆ ಮುಖಮಾಡಿ ಕುಳಿತ ಪತ್ನಿಯ ಕೈಯನ್ನು ಸ್ಪರ್ಶಮಾಡಿ ಪತಿಯು: (೧) ಧಾತಾದದಾತು, (೨) ಧಾತಾ ಪ್ರಜಾನಾಂ... (೩) ರಾಕಾಮಹಂ ... (೪) ಯಾಸ್ತೇರಾಕೇ... (೫) ನೇಜಮೇಷ ... (೬) ಯಥೇಯಂ ಪೃಥಿವೀ... (೭) ವಿಷ್ಣೋಃ ಶ್ರೇಷ್ಠೇನ (೮) ಪ್ರಜಾಪತೇ... ಈ ಎಂಟು ಮಂತ್ರಗಳನ್ನು ಹೇಳಿ ಎಂಟು ಆಜ್ಯಾಹುತಿಗಳನ್ನು ಕೊಡಬೇಕು.

Scanned by CamScanner

Scanned with CamScanner

ಓಂ ನೇಜಮೇಷಪರಾಪತ ..... ॥ ವಿಷ್ಣವ ಇದಂ ನಮಮ ॥ ಓಂ ಯಥೇಯಂ ಪೃಥಿವೀ ..... ॥ ವಿಷ್ಣವ ಇದಂ ನಮಮ ॥ ಓಂ ವಿಷ್ಣೋಃ ಶ್ರೇಷ್ಠೇನ ..... ॥ ವಿಷ್ಣವ ಇದಂ ನಮಮ ॥ ಪ್ರಜಾಪತೇ ಹಿರಣ್ಯಗರ್ಭಃ ಪ್ರಜಾಪತಿಸ್ತ್ರಿಷ್ಟುಪ್ ॥ ಸೀಮಂತೋ ...... ॥ ಓಂ ಪ್ರಜಾಪತೇನತ್ವದೇತಾ .... ಸ್ವಾಹಾ ॥ ಪ್ರಜಾಪತಯ ಇದಂ ನಮಮ ॥ ಏವಮಷ್ಟಾಜ್ಯಾಹುತೀಃ ಸ್ರುವೇಣ ಹುತ್ವಾ ॥ ಪತ್ನ್ಯಾಃ ಪಶ್ಚಿಮತಃ ಪ್ರಾಙ್ಮುಖಸ್ತಿಷ್ಠನ್ನಪಕ್ವಫಲಯುಗ್ಮಾ-ನ್ವಿತಮೌದುಂಬರಸ್ತಬಕದ್ವಯಂ ತ್ರಿಶುಕ್ಲಾಂ ಶಲಲೀಂ ಕುಶಾಂಕುರತ್ರಯಂ ಚೈಕೀ-ಕೃತಂ ಪಾಣಿನಾ ಗೃಹೀತ್ವಾ ತನ್ಮೂಲೇನ ಪತ್ನ್ಯಾಃ ಕೇಶಲಲಾಟಯೋಃ ಸಂಧಿ-ಮಾರಭ್ಯಾಮೂರ್ಧ ಪ್ರದೇಶಾತ್ ॥ ಓಂ ಭೂರ್ಭುವಃ ಸ್ವರೋಂ ಇತಿ ಮಂತ್ರೇಣ ತ್ರಿಶ್ಚತುರ್ವಾ ಪ್ರತ್ಯುನ್ನಯನಂ ಮಂತ್ರಮಾವರ್ತಯನ್ ಸೀಮಂತಮುನ್ನಯೇತ್ ॥ ಓಂ ಭೂರ್ಭುವಃ ಸ್ವರಿತಿ ಮಂತ್ರತ್ರಯಸ್ಯ ಪ್ರಜಾಪತಿರ್ಬೃಹತೀ ಸೀಮಂತ ವ್ಯೂಹನೇ ವಿನಿಯೋಗಃ ॥ ತತೋ ಯಥಾಚಾರಂ ಸಗೋಧೂಮಾಮೌದುಂಬರ ಫಲ-ಮಾಲಾಂ ತತ್ಕಂಠೇ ನಿಧಾಯ ವೀಣಾಗಾಥಿನೌ ದ್ವಿಜೌ ಸೋಮಂ ರಾಜಾನಂ ಸಂಗಾಯೇತಾಮಿತಿ ಪ್ರೇಷಯೇತ್ ॥ ತೌಚ ॥ ಓಂ ಸೋಮೋನೋರಾಜಾ-ಪತುಮಾನುಷಿಃ ಪ್ರಜಾನಿವಿಷ್ಟಚಕ್ರಾಸಾವಿತಿಮಂತ್ರಂ ಅಸಾವಿತಿ ಸ್ಥಾನೇ ಗಂಗೇ ಇತ್ಯಾದಿ ಸಮೀಪಸ್ಥನದ್ಯಾಃ ಸಂಬುದ್ಧ್ಯಂತಂ ನಾಮ ನಿರ್ದಿಶಂತೌ ವೀಣಯಾ ಗಾಯೇತಾಂ ॥ ಸಾಮಗಾನಾಪರಿಜ್ಞಾನೇ ಮಂತ್ರಮಾತ್ರಂ ತ್ರಿಃ ಪಠೇತಾಂ ॥ ತತಃ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯ ಬ್ರಹ್ಮಣೇ ಋಷಭಂ ದಕ್ಷಿಣಾಂ ತದಭಾವೇ ಅನ್ಯಸ್ಮೈ ವಿದುಷೇ ಬ್ರಾಹ್ಮಣಾಯ ದತ್ವಾ ಪತಿಪುತ್ರವತೀಭಿರ್ವೃ-ದ್ಧಾಭಿರುಪದಿಷ್ಟಂ ಮಂಗಲಾಚಾರಂ ಕಾರಯೇತ್ ॥ ಪ್ರತಿಸಂಸ್ಕಾರಂ ದಶದಶ ತ್ರೀಂಸ್ತ್ರೀನ್ ವಾ ಬ್ರಾಹ್ಮಣಾನ್ ಭೋಜಯೇತ್ ॥ ಶಕ್ತ್ಯಾ ಶತಂ ॥

॥ ಇತಿ ಪುಂಸವನಾನವಲೋಭನಸೀಮಂತೋನ್ನಯನ ಸಂಸ್ಕಾರಾಃ ॥

ಬಳಿಕ ಪತ್ನಿಯ ಪಶ್ಚಿಮದಲ್ಲಿ ಪೂರ್ವಕ್ಕೆ ಮುಖಮಾಡಿ ನಿಂತು ಕಾಯಿಗಳಿಂದ ಕೂಡಿದ ಎರಡು ಉದುಂಬರದ ಗೊಂಚಲುಗಳು, ಬಿಳಿಬಣ್ಣದ ಸೀಯಾಳದ ಮೂರು ಮುಳ್ಳುಗಳು, ಹೆರಳಿನಂತೆ ಮುರಿಗೆ ಹಾಕಿದ ಮೂರು ದರ್ಭೆಗಳು ಇವುಗಳನ್ನು ಕೈಯಲ್ಲಿ ಹಿಡಿದು ಅವಳ ನೈತಲೆಯಿಂದ ಹಿಂಭಾಗ ವರೆಗೆ **"ಓಂ ಭೂರ್ಭುವಃ ಸ್ವಃ"** ಎಂಬ ಮಂತ್ರವನ್ನು ಹೇಳುತ್ತ ಮೂರು-ನಾಲ್ಕು ಸಲ ಕೂದಲನ್ನು ಸ್ವಚ್ಛಮಾಡಬೇಕು. ಆಮೇಲೆ ದೇಶಾಚಾರದಂತೆ ಅವಳ ಕೊರಳಲ್ಲಿ ವನಸ್ಪತಿ, ಔದುಂಬರಫಲಗಳ ಮಾಲೆಯನ್ನು ಹಾಕಿ ವೀಣೆ ನುಡಿಸಬಲ್ಲ ಬ್ರಾಹ್ಮಣರು **"ಸೋಮೋರಾಜಾನಂ"** ಎಂಬ ಮಂತ್ರವನ್ನು ಹಾಡಬೇಕು. ಆ ಮಂತ್ರದಲ್ಲಿ **"ಅಸೌ"** ಎಂಬಲ್ಲಿ **'ಗಂಗಾ'** ಅಥವಾ ಸಮೀಪದಲ್ಲಿರುವ ನದಿಯ ಹೆಸರನ್ನು ಸೇರಿಸಬೇಕು. ಮುಂದೆ ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಮುಗಿಸಿ ಬ್ರಾಹ್ಮಣನಿಗೆ ಎತ್ತು ದಕ್ಷಿಣೆ ಇತ್ಯಾದಿಗಳನ್ನಿತ್ತು ಸತ್ಕರಿಸಬೇಕು. ಪ್ರತಿಸಂಸ್ಕಾರಕ್ಕೆ ಸಾಧ್ಯವಿದ್ದರೆ ನೂರು, ಹತ್ತು ಅಥವಾ ಮೂರು ಮಂದಿ ಬ್ರಾಹ್ಮಣರ ಸಂತರ್ಪಣೆ ಮಾಡಬೇಕು.

॥ ಸೀಮಂತೋನ್ನಯನಸಂಸ್ಕಾರ ಸಮಾಪ್ತ ॥

Scanned by CamScanner

Scanned with CamScanner

॥ ಜಾತಕರ್ಮಸಂಸ್ಕಾರಃ ॥

॥ ಶ್ರೀಃ ॥ ಜಾತಮಾತ್ರೇ ಪುತ್ರೇ ಪಿತಾ ತಸ್ಯ ಮುಖಂ ನಿರೀಕ್ಷ್ಯ ನದ್ಯಾದಾವುದಙ್ಮುಖಃ ಸ್ನಾತ್ವಾಚಮ್ಯ ಸಿತಚಂದನಮಾಲ್ಯಾದಿಭಿರಲಂಕೃತೋ ನಾಲ-ಚ್ಛೇದನಾತ್ಪೂರ್ವಂ ಸೂತಿಕಾದಿವ್ಯತಿರಿಕ್ತೈರಸ್ಪೃಷ್ಟಮಕೃತಸ್ತನಪಾನಂ ಪ್ರಕ್ಷಾಲಿತಮಲಂ ಕುಮಾರಂ ಮಾತುರುತ್ಸಂಗೇ ಪ್ರಾಙ್ಮುಖಮವಸ್ಥಾಪ್ಯ ದೇಶಕಾಲೌ ಸ್ಮೃತ್ವಾ ಮಮಾಸ್ಯ ಕುಮಾರಸ್ಯ ಗರ್ಭಾಂಬುಪಾನಜನಿತ ಸಕಲದೋಷನಿಬರ್ಹಣಾಯುರ್ಮೇಧಾಭಿ-ವೃದ್ಧಿಬೀಜಗರ್ಭಸಮುದ್ಭವೈನೋನಿಬರ್ಹಣದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಜಾತಕರ್ಮಸಂಸ್ಕಾರಂ ಕರಿಷ್ಯೇ ॥ ತದಂಗಂ ಗಣಪತಿಪೂಜನಪೂರ್ವಕಂ ಸ್ವಸ್ತಿ-ಪುಣ್ಯಾಹವಾಚನಂ ಮಾತೃಕಾಪೂಜನಂ ನಾಂದೀಶ್ರಾದ್ಧಂ ಚ ಕರಿಷ್ಯೇ ಇತಿ ಸಂಕಲ್ಪ್ಯ ತಾನಿ ಕೃತ್ವಾ ॥ ತತೋ ವಿಷಮಮಾನೇನ ಮಧುಸರ್ಪಿಷೀ ಮಿಶ್ರೀಕೃತ್ಯ ಶಿಲಾತಲೇ ನಿಕ್ಷಿಪ್ಯ ತತ್ರ ಸುವರ್ಣಂ ರಜೋವಿಮೋಕಂ ಯಾವದವಘೃಷ್ಯ ರಜತಕಾಂಸ್ಯಾದಿಭಾಜನೇ ನಿಧಾಯ ॥ ಪ್ರತೇ ದದಾಮೀತಿ ಹಿರಣ್ಯಗರ್ಭಃ ಸವಿತಾತ್ರಿಷ್ಟುಪ್ ॥ ಕುಮಾರೇಣ ಮಧುಸರ್ಪಿಃ ಪ್ರಾಶನೇ ವಿನಿಯೋಗಃ ॥ ಓಂ ಪ್ರತೇದದಾಮಿ ಮಧುನೋಘೃತಸ್ಯ ವೇದಂ ಸವಿತ್ರಾ-

---

ಕನ್ಯಾಸಂಸ್ಕಾರ:- ಕನ್ಯೆಗೂ ಜಾತಕರ್ಮದಿಂದ ಚೌಲದ ವರೆಗೆ ಎಲ್ಲ ಸಂಸ್ಕಾರಗಳನ್ನೂ ಮಂತ್ರರಹಿತವಾಗಿ ಮಾಡಬೇಕು. ವಿವಾಹಸಂಸ್ಕಾರವನ್ನು ಮಾತ್ರ ಸಮಂತ್ರಕವಾಗಿ ಮಾಡಬೇಕು. ಹಿಂದಿನ ಯಾವುದೇ ಸಂಸ್ಕಾರವನ್ನು ಮಾಡದೆ ಬಿಟ್ಟಿದ್ದರೆ ಮುಂದಿನ ಸಂಸ್ಕಾರವನ್ನು ಮಾಡುವಾಗ ಅಥವಾ ವಿವಾಹಕಾಲದಲ್ಲಿ ಅವುಗಳಿಗೆ ಪ್ರಾಯಶ್ಚಿತ್ತ ಮಾಡಬೇಕು.

ಪುತ್ರಜನನವಾದ ಒಡನೆಯೇ ತಂದೆಯು ಅವನ ಮುಖ ನೋಡಿ ಹೊಳೆಯ ಬದಿಗೆ ಹೋಗಿ ಅಥವಾ ಇತರ ಕಡೆಗಳಲ್ಲಿ ಉತ್ತರಕ್ಕೆ ಮುಖಮಾಡಿ ಮಿಂದು ಆಚಮನಮಾಡಿ, ಚಂದನಾದಿಗಳಿಂದ ಅಲಂಕರಿಸಿಕೊಂಡು, ನಾಲಛೇದನದ ಮೊದಲು ಸೂಲಗಿತ್ತಿಯನ್ನು ಬಿಟ್ಟು ಇತರರು ಯಾರೂ ಮುಟ್ಟದಿರುವ, ಮೊಲೆಹಾಲು ಕುಡಿಯದಿರುವ, ಸ್ನಾನಮಾಡಿಸಿದ ಕುಮಾರನನ್ನು ತಾಯಿಯ ಮಡಿಲಲ್ಲಿ ಪೂರ್ವಮುಖವಾಗಿ ಇಟ್ಟು ದೇಶಕಾಲಗಳನ್ನು ಸ್ಮರಿಸಿ **"ಮಮ ಅಸ್ಯ ... ಕರಿಷ್ಯೇ ॥ ತದಂಗಂ ... ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಅವುಗಳನ್ನು

Scanned by CamScanner

ಪ್ರಸೂತಂಮಘೋನಾಂ ॥ ಆಯುಷ್ಮಾನ್ ಗುಪ್ತೋ ದೇವತಾಭಿಃ ಶತಂ ಜೀವಶರದೋಲೋಕೇ ಅಸ್ಮಿನ್ ॥ ಇತಿ ಮಂತ್ರೇಣ ತೇನೈವ ಹಿರಣ್ಯೇನ ಕುಮಾರಂ ಪಾಯಯಿತ್ವಾ ತದ್ಧಿರಣ್ಯಂ ಪ್ರಕ್ಷಾಲ್ಯ ಕುಮಾರಸ್ಯ ದಕ್ಷಿಣಕರ್ಣೇ ನಿಧಾಯ ತನ್ಮುಖಸಮೀಪೇ ಸ್ವಮುಖಮಾನೀಯ ॥ ಮೇಧಾಂತ ಇತಿ ಮಂತ್ರಸ್ಯ ಹಿರಣ್ಯಗರ್ಭಃ ಸವಿತಾ ಸರಸ್ವತ್ಯಶ್ವಿನಾವನುಷ್ಟುಪ್ ॥ ಕುಮಾರದಕ್ಷಿಣಕರ್ಣೇ ಜಪೇ ವಿನಿಯೋಗಃ ॥ ಓಂ ಮೇಧಾಂತೇ ದೇವಃ ಸವಿತಾ ಮೇಧಾಂ ದೇವೀ ಸರಸ್ವತೀ ॥ ಮೇಧಾಂತೇ ಅಶ್ವಿನೌ ದೇವಾ ವಾಧತ್ತಾಂ ಪುಷ್ಕರಸ್ರಜಾ ॥ ಇತ್ಯೃಚಂ ಜಪಿತ್ವಾ ॥ ಪುನಸ್ತದ್ಧಿರಣ್ಯಂ ಸವ್ಯೇ ಕರ್ಣೇ ನಿಧಾಯ ಏತಾಮೇವ ಋಚಂ ಜಪೇತ್ ॥ ತತಃ ॥ ಓಂ ಅಶ್ಮಾಭವ ಪರಶುರ್ಭವಹಿರಣ್ಯಮಸ್ತೃತಂ ಭವ ॥ ವೇದೋವೈಪುತ್ರನಾಮಾಸಿ ಸ ಜೀವ ಶರದಃ ಶತಂ ॥ ಇತಿ ಮಂತ್ರೇಣ ಶಿರೋರಂಸೌ ಯುಗಪದಭಿಮೃಶೇತ್ ॥ ಇಂದ್ರಶ್ರೇಷ್ಠಾನಿ ಗೃತ್ಸಮದ ಇಂದ್ರ-

---

ವಿಧಿಪ್ರಕಾರ ಮಾಡಿಮುಗಿಸಬೇಕು. ಆಮೇಲೆ ಸಮಭಾಗವಾಗಿರದಂತೆ ಜೇನುತುಪ್ಪಗಳನ್ನು ಮಿಶ್ರಮಾಡಿ ಒಂದು ಕಲ್ಲಿನ ಮೇಲೆ ಇಟ್ಟು ಅದರ ಮೇಲೆ ಸ್ವಲ್ಪ ಅಂಶವು ಅವುಗಳೊಂದಿಗೆ ಸೇರುವಂತೆ ಬಂಗಾರವನ್ನು ತಿಕ್ಕಬೇಕು. ಅದನ್ನು ಬೆಳ್ಳಿ ಅಥವಾ ಕಂಚಿನ ಪಾತ್ರೆಯಲ್ಲಿ ಹಾಕಿ **"ಪ್ರತೇ ದದಾಮಿ"** ಎಂಬ ಮಂತ್ರದಿಂದ ಅದೇ ಬಂಗಾರದಿಂದ ಮಗುವಿಗೆ ತುಪ್ಪ ಮತ್ತು ಜೇನಿನ ಮಿಶ್ರಣವನ್ನು ಕುಡಿಸಬೇಕು. ಆಮೇಲೆ ಆ ಚಿನ್ನವನ್ನು ತೊಳೆದು ಅದನ್ನು ಮಗುವಿನ ಬಲಕಿವಿಯ ಮೇಲಿಟ್ಟು ಮಗುವಿನ ಮುಖದ ಬಳಿಗೆ ತನ್ನ ಬಾಯಿಯನ್ನು ಸರಿಸಿ, **"ಮೇಧಾಂತೇ ದೇವಃ"** ಎಂಬ ಮಂತ್ರವನ್ನು ಜಪಿಸಬೇಕು. ಪುನಃ ಆ ಚಿನ್ನವನ್ನು ಎಡಗಿವಿಯಲ್ಲಿಟ್ಟು ಇದೇ ಮಂತ್ರವನ್ನು ಜಪಿಸಬೇಕು. ಮುಂದೆ (೧) **"ಅಶ್ಮಾಭವ..."** ಎಂಬ ಮಂತ್ರಹೇಳಿ ಮಗುವಿನ ಎರಡು ಹೆಗಲುಗಳನ್ನು ಒಂದೇ ಸಲ ಮುಟ್ಟಬೇಕು. (೨) **"ಇಂದ್ರಶ್ರೇಷ್ಠಾನಿ..."** (೩) **"ಅಸ್ಮೇಪ್ರಯಂಧಿ..."** ಈ ಮಂತ್ರಗಳಿಂದಲೂ ಹೆಗಲು ಮುಟ್ಟಬೇಕು. ಆ ಮೇಲೆ ಮಗುವಿಗೆ ರಕ್ಷಣೆ ಮತ್ತು ಆಯುಸ್ಸು ಅಭಿವೃದ್ಧಿಯಾಗಲು **"ಅಂಗಾದಂಗಾ ..."** ಎಂಬ ಮಂತ್ರವನ್ನು ಹೇಳಿ ಮೂರು ಬಾರಿ ತಲೆಯನ್ನು ಆಘ್ರಾಣಿಸಬೇಕು. ಮಗುವಿಗೆ ಮುಂದೆ ಇಡುವ ಹೆಸರನ್ನು ಸ್ಮರಿಸಿಕೊಳ್ಳಬೇಕು. ತಾಯಿಯ ಬಲ ಮೊಲೆಯನ್ನು ತೊಳೆದು **"ಇಮಾಂ ಕುಮಾರೋ...."** ಎಂಬ ಮಂತ್ರವನ್ನು ಹೇಳಿ ಮೊಲೆಹಾಲನ್ನು ಕುಡಿಸಬೇಕು. ಬಳಿಕ ಬ್ರಾಹ್ಮಣರಿಗೆ ದಕ್ಷಿಣೆಯನ್ನಿತ್ತು ಆಶೀರ್ವಾದ ಪಡೆಯಬೇಕು.

Scanned by CamScanner

Scanned with CamScanner

ಸ್ತ್ರಿಷ್ಟುಪ್ ॥ ಶಿಶೋರಂಸಾಭಿಮರ್ಶನೇ ವಿನಿಯೋಗಃ ॥ ಓಂ ಇಂದ್ರಶ್ರೇಷ್ಠಾನಿ-ದ್ರವಿಣಾನಿಧೇಹಿಚಿತ್ತಿಂದಕ್ಷಸ್ಯಸುಭಗತ್ವಮಸ್ಮೇ । ಪೋಷಂರಯೀಣಾಮರಿಷ್ಟಿಂ ತನೂನಾಂ ಸ್ವಾದ್ಮಾನಂ ವಾಚಃ ಸುದಿನತ್ವಮಹ್ನಾಂ ॥ ಅಸ್ಮೇಪ್ರಯಂಧಿವಿಶ್ವಾಮಿತ್ರ ಇಂದ್ರಸ್ತ್ರಿಷ್ಟುಪ್ ॥ ಶಿಶೋರಂಸಾಭಿಮರ್ಶನೇ ವಿನಿಯೋಗಃ ॥ ಓಂ ಅಸ್ಮೇಪ್ರಯಂಧಿ-ಮಘವನ್ನೃಜೀಷಿನ್ನಿಂದ್ರರಾಯೋವಿಶ್ವವಾರಸ್ಯಭೂರೇಃ ॥ ಅಸ್ಮೇಶತಂಶರದೋ ಜೀವ-ಸೇಧಾ ಅಸ್ಮೇವೀರಾಞ್ಛಶ್ವತಇಂದ್ರಶಿಪ್ರಿನ್ ॥ ಇತಿ ಮಂತ್ರತ್ರಯಾಂತೇ ಅಭಿ-ಮರ್ಶಃ ॥ ತತೋ ರಕ್ಷಾಯುಷೋರಭಿವೃದ್ಧ್ಯರ್ಥಂ ॥ ಓಂ ಅಂಗಾದಂಗಾತ್ಸಂಭವಸಿ-ಹೃದಯಾದಧಿಜಾಯಸೇ ॥ ಆತ್ಮಾವೈಪುತ್ರನಾಮಾಸಿ ಸಜೀವ ಶರದಃ ಶತಂ ॥ ಇತಿ ಮಂತ್ರಮುಚ್ಚಾರ್ಯ ಮೂರ್ಧಾನಂ ತ್ರಿರಾಜಿಘ್ರೇತ್ ॥

ತತಃ ಶಿಶೋಃ ಕರಿಷ್ಯಮಾಣಂ ನಾಮ ತದೈವ ಸ್ಮರೇತ್ ॥ ಮಾತು-ರ್ದಕ್ಷಿಣಸ್ತನಂ ಪ್ರಕ್ಷಾಲ್ಯ ॥ ಓಂ ಇಮಾಂ ಕುಮಾರೋ ಜರಾಂಧಯತು ದೀರ್ಘ-ಮಾಯುಃ ಪ್ರಜೀವಸೇ ॥ ಅಸ್ಯೈಸ್ತನೌ ಪ್ರಯುಂಜಾನಾ ಆಯುರ್ವರ್ಚೋರ್ಯ-ಶೋಬಲಂ ॥ ಇತಿ ಮಂತ್ರೇಣ ಮಾತ್ರಾ ಕುಮಾರಂ ಪಾಯಯಿತ್ವಾ ಬ್ರಾಹ್ಮಣೇಭ್ಯೋ ದಕ್ಷಿಣಾಂ ದತ್ವಾ ಆಶಿಷೋ ಗೃಹ್ಣೀಯಾತ್ ॥

ಹೋಮಕರಣಪಕ್ಷೇ ಪ್ರಬಲನಾಮಾನಮಗ್ನಿಂ ಪ್ರತಿಷ್ಠಾಪ್ಯ ಜಾತಕರ್ಮ ಹೋಮೇ ದೇವತಾಪರಿಗ್ರಹಾರ್ಥಮಿತ್ಯಾದಿ ಚಕ್ಷುಷೀ ಅಜ್ಯೇನೇತ್ಯಂತಮುಕ್ತ್ವಾ ಅಗ್ನಿಮಿಂದ್ರಂ ಪ್ರಜಾಪತಿಂ ವಿಶ್ವಾನ್ ದೇವಾನ್ ಬ್ರಹ್ಮಾಣಮಾಜ್ಯೇನ ಶೇಷೇಣ ಸ್ವಿಷ್ಟಕೃತಮಿತ್ಯಾದಿ ಸದ್ಯೋ ಯಕ್ಷ್ಯ ಇತ್ಯಂತಮುಕ್ತ್ವಾ ಆಜ್ಯಂ ಹುತ್ವಾ ಮಧುಸರ್ಪಿಃ ಪಾಯನಾದಿ ಶಿಶುನಾಮಸ್ಮರಣಾಂತಂ ಕೃತ್ವಾ ಹೋಮಶೇಷಂ ಸಮಾಪ್ಯ ಸ್ತನ್ಯಂ ದದ್ಯಾತ್ ॥ ತಮರ್ವಂತಮಿತಿ ಪಂಚಭಿರಾಶೀರ್ವಾದಃ ॥ ತಮರ್ವಂತಮಿತಿ ಪಂಚಾನಾಂ ವಾಮದೇವೋಽಗ್ನಿರ್ಗಾಯತ್ರೀ ॥ ಓಂ ತಮರ್ವಂತಂ ನ ಸಾನಸಿ ಮರುಷಂ ನ ದಿವಃ ಶಿಶುಂ ॥ ಮರ್ಮೃಜ್ಯಂತೇ ದಿವೇ ದಿವೇ ॥

Scanned by CamScanner
Scanned with CamScanner

ಬೋಧದ್ಯನ್ನಾಮಹರಿಭ್ಯಾಂ ಕುಮಾರಃ ಸಾಹದೇವ್ಯಃ ॥ ಅಚ್ಛಾ ನ ಹೂತ ಉದರೀಃ ॥ ಉತತ್ಯಾಯಜತಾಹರೀಕುಮಾರಾತ್ಸಾಹದೇವ್ಯಾತ್ ॥ ಪ್ರಯತಾಸದ್ಯ ಆದದೇ ॥ ಏತಿವಾಂದೇವಾವಶ್ವಿನಾಕುಮಾರಃ ಸಾಹದೇವ್ಯಃ ॥ ದೀರ್ಘಾಯುರಸ್ತುಸೋಮಕಃ ॥ ತಂ ಯುವಂ ದೇವಾವಶ್ವಿನಾಕುಮಾರಂ ಸಾಹದೇವ್ಯಂ ॥ ದೀರ್ಘಾಯುಷಂ ಕೃಣೋತನ ॥

॥ ಇತಿ ಜಾತಕರ್ಮಸಂಸ್ಕಾರಃ ॥

ಹೋಮ ಮಾಡುವ ಸಂದರ್ಭದಲ್ಲಿ 'ಪ್ರಬಲ' ಎಂಬ ಹೆಸರಿನ ಅಗ್ನಿಯನ್ನು ಪ್ರತಿಷ್ಠಾಪಿಸಿ **"ಜಾತಕರ್ಮ ಹೋಮೇ.... ಸದ್ಯೋ ಯಕ್ಷ್ಯೇ"** ಎಂದು ಹೇಳಿ ಅನ್ವಾಧಾನ ಮಾಡಬೇಕು. ಬಳಿಕ ಹೋಮಮಾಡಿ ಜೇನುತುಪ್ಪದ ಮಿಶ್ರಣವನ್ನು ಕುಡಿಸಿ, ಮಗುವಿನ ಹೆಸರನ್ನು ಸ್ಮರಿಸಿ, ಹೋಮಶೇಷವನ್ನು ಮುಗಿಸಿ ಮೊಲೆಹಾಲು ಕುಡಿಸಬೇಕು. **"ತಮರ್ವಂತಂ..."** ಎಂಬ ಮಂತ್ರಗಳಿಂದ ಆಶೀರ್ವಾದ ಮಾಡಬೇಕು.

॥ ಜಾತಕರ್ಮಸಂಸ್ಕಾರ ಸಮಾಪ್ತ ॥

Scanned by CamScanner

॥ ಷಷ್ಠೀದೇವೀಪೂಜಾ ॥

॥ ಶ್ರೀಃ ॥ ಪಂಚಮೇ ಷಷ್ಠೇ ಚ ದಿನೇ ಷಷ್ಠ ಏವ ವಾ ಪೂರ್ವರಾತ್ರೇ ಪಿತ್ರಾದಿರಾಚಮ್ಯ ದೇಶಕಾಲೌ ಸ್ಮೃತ್ವಾ ಅಸ್ಯ ಶಿಶೋಃ ಸಮಾತೃಕಸ್ಯ ಆಯುರಾರೋಗ್ಯಾವಾಪ್ತಿದ್ವಾರಾ ಸಕಲಾರಿಷ್ಟಶಾಂತಯೇ ಶ್ರೀಪರಮೇಶ್ವರಪ್ರೀತ್ಯರ್ಥಂ ವಿಘ್ನೇಶಸ್ಯಜನ್ಮದಾನಾಂ ಷಷ್ಠೀದೇವ್ಯಾ ಜೀವಂತಿಕಾಯಾಃ ಶಸ್ತ್ರಗರ್ಭಾಯಾಶ್ಚ ಯಥಾಮಿಲಿತೋಪಚಾರೈಃ ಪೂಜನಮಹಂ ಕರಿಷ್ಯೇ ॥ ತಥಾ ಚ ಶಾಂತಿಸೂಕ್ತಜಪಾಖ್ಯೇ ಕರ್ಮಣಿ ಆಚಾರ್ಯವರಣಂ ನಿರ್ವಿಘ್ನತಾಸಿದ್ಧ್ಯರ್ಥಂ ಗಣಪತಿಪೂಜನಂ ಚ ಕರಿಷ್ಯೇ ॥ ತಾನಿ ಕೃತ್ವಾ ॥

ಅಕ್ಷತಪುಂಜೇಷು ವಿಘ್ನೇಶಂ ಜನ್ಮದಾಃ ಷಷ್ಠೀದೇವೀಂ ಜೀವಂತಿಕಾಂ ಚಾವಾಹ್ಯ ಷೋಡಶೋಪಚಾರೈಃ ಪೃಥಕ್ ತಂತ್ರೇಣ ವಾ ಪೂಜಯೇತ್ ॥ ಷಷ್ಠ್ಯಾವಾಹನಂ ॥ ಆಯಾಹಿ ವರದೇ ದೇವಿ ಮಹಾಷಷ್ಠೀತಿ ವಿಶ್ರುತೇ ॥ ಶಕ್ತಿಭಿಃ ಸಹ ಬಾಲಂ ಮೇ ರಕ್ಷ ಜಾಗರವಾಸರೇ ॥ ಇತಿ ॥ ಶಕ್ತಿಸ್ತ್ವಂ ಸರ್ವದೇವಾನಾಂ ಲೋಕಾನಾಂ ಹಿತಕಾರಿಣೀ ॥ ಮಾತರ್ಬಾಲಮಿಮಂ ರಕ್ಷ ಮಹಾಷಷ್ಠಿ ನಮೋಸ್ತುತೇ ॥ ಇತ್ಯುಪಚಾರಾರ್ಪಣಂ ॥ [ಕೇಚಿದತ್ರ ಶಿವಾಂ ಸಂಭೂತಿಂ ಪ್ರೀತಿಂ ಸಂತತಿಂ ಅನುಸೂಯಾಂ ಕ್ಷಮಾಂ ಚ ಪೂಜಯೇದಿತ್ಯಾಹುಃ] ಆಚಾರ್ಯೋಽನ್ಯೇಚ ಶಾಂತಿ ಸೂಕ್ತಾನಿ ಪಠೇಯುಃ ॥

ಷಷ್ಠೀದೇವೀಪೂಜೆ:- ಪ್ರಸವವಾದ ಮೇಲೆ ಐದನೆಯ, ಆರನೆಯ ಅಥವಾ ಆರನೆಯ ದಿನವೇ ರಾತ್ರಿ ತಂದೆ ಮೊದಲಾದವರು ಆಚಮನ ಮಾಡಿ ದೇಶಕಾಲಗಳನ್ನು ಸ್ಮರಿಸಿ, **"ಅಸ್ಯ ಶಿಶೋಃ...ಗಣಪತಿ ಪೂಜನಂ ಚ ಕರಿಷ್ಯೇ"** ಎಂದು ಸಂಕಲ್ಪಮಾಡಿ ಶಾಂತಿಸೂಕ್ತವನ್ನು ಜಪಿಸಲು ಆಚಾರ್ಯವರಣವನ್ನು ಮಾಡಬೇಕು. ನಿರ್ವಿಘ್ನತಾ ಸಿದ್ಧಿಗೆ ಗಣಪತಿ ಪೂಜೆಯನ್ನೂ ಮಾಡಬೇಕು. ಅಕ್ಕಿಯ ರಾಶಿಯ ಮೇಲೆ ವಿಘ್ನೇಶ, ಜನ್ಮದಾದೇವಿ, ಷಷ್ಠೀ ದೇವಿ, ಜೀವಂತಿಕಾ ಇವರನ್ನು ಆವಾಹಿಸಿ; **ವಿಘ್ನೇಶಾಯ ನಮಃ, ಜನ್ಮದಾಭ್ಯೋ ನಮಃ, ಷಷ್ಠಿ ದೇವ್ಯೈ ನಮಃ, ಜೀವಂತಿಕಾಯೈ ನಮಃ** ಎಂಬ ನಾಮಮಂತ್ರಗಳಿಂದ ಷೋಡಶೋಪಚಾರ ಪೂಜೆ ಅಥವಾ ತಾಂತ್ರಿಕ ಪೂಜೆಯನ್ನು ಮಾಡಬೇಕು: **"ಆಯಾಹಿ ವರದೇ ದೇವಿ" .... "ಶಕ್ತಿಸ್ತ್ವಂ ಸರ್ವದೇವಾನಾಂ...."** ಹೇಳಿ ಆವಾಹನೆ ಮತ್ತು ಉಪಚಾರಗಳನ್ನು ಅರ್ಪಿಸಬೇಕು. ಇಲ್ಲಿ ಕೆಲವರು ಶಿವಾ, ಸಂಭೂತಿ, ಪ್ರೀತಿ, ಸಂತತಿ, ಅನುಸೂಯಾ, ಕ್ಷಮಾ ಇವರನ್ನು ಪೂಜಿಸಬೇಕೆಂದು ಅಭಿಪ್ರಾಯಪಡುತ್ತಾರೆ. ಆಚಾರ್ಯನೂ ಇತರರೂ ಒಂದುಗೂಡಿ ಶಾಂತಿಪಾಠಗಳನ್ನು ಹೇಳಬೇಕು.

Scanned by CamScanner

॥ ಪ್ರಾರ್ಥನಾ ॥ ಲಂಬೋದರ ಮಹಾಭಾಗ ಸರ್ವೋಪದ್ರವನಾಶನ ॥ ತ್ವತ್ಪ್ರಸಾದಾದವಿಘ್ನೇಶ ಚಿರಂ ಜೀವತು ಬಾಲಕಃ ॥ ಜನನೀ ಸರ್ವಭೂತಾನಾಂ ಬಾಲಾನಾಂ ಚ ವಿಶೇಷತಃ ॥ ನಾರಾಯಣೀ ಸ್ವರೂಪೇಣ ಬಾಲಂ ಮೇ ರಕ್ಷ ಸರ್ವದಾ ॥ ಭೂತಪ್ರೇತಪಿಶಾಚೇಭ್ಯೋ ಡಾಕಿನೀ ಯೋಗಿನೀಷು ಚ ॥ ಮಾತೇವ ರಕ್ಷ ಬಾಲಂ ಮೇ ಶ್ವಾಪದೇ ಪನ್ನಗೇಷು ಚ ॥ ಗೌರೀಪುತ್ರೋ ಯಥಾ ಸ್ಕಂದಃ ಶಿಶುತ್ವೇ ರಕ್ಷಿತಃ ಪುರಾ ॥ ತಥಾ ಮಮಾಪ್ಯಯಂ ಬಾಲಃ ಷಷ್ಠಿಕೇ ರಕ್ಷ ತೇ ನಮಃ ॥ ತತೋ ವಿಪ್ರೇಭ್ಯಶ್ಚ ತಾಂಬೂಲಖಾದ್ಯದಕ್ಷಿಣಾದಿ ದದ್ಯಾತ್ ॥ ಜನನಾಶೌಚಮಧ್ಯೇ ಪ್ರಥಮಪಂಚಮಷಷ್ಠದಶಮದಿನೇಷು ದಾನೇ ಪ್ರತಿಗ್ರಹೇ ಚ ನ ದೋಷಃ ॥ ಅನ್ನಂ ತು ನಿಷಿದ್ಧಂ ॥ ಅಸ್ಯಾಂ ರಾತ್ರೌ ಜಾಗರಣಂ ಕುರ್ಯುಃ ॥

॥ ಇತಿ ಷಷ್ಠೀಪೂಜಾ ॥

"**ಲಂಬೋದರ ಮಹಾಭಾಗ**" ಎಂಬಲ್ಲಿಂದ "**ಷಷ್ಠಿಕೇ ರಕ್ಷ ತೇ ನಮಃ**" ಎಂಬಲ್ಲಿ ವರೆಗೆ ಹೇಳಿ ಪ್ರಾರ್ಥನೆಯನ್ನು ಮಾಡಬೇಕು. ಆ ಬಳಿಕ ಬ್ರಾಹ್ಮಣರಿಗೆ ತಾಂಬೂಲ, ಖಾದ್ಯಪದಾರ್ಥ ದಕ್ಷಿಣೆ ಇತ್ಯಾದಿಗಳನ್ನು ಕೊಟ್ಟು ಸತ್ಕರಿಸಬೇಕು. ಜನನಾಶೌಚವಿದ್ದರೂ ಮೊದಲನೆಯ, ಐದನೆಯ, ಆರನೆಯ ಹಾಗೂ ಹತ್ತನೆಯ ದಿನಗಳಲ್ಲಿ ದಾನಮಾಡುವುದೂ, ದಾನವನ್ನು ಸ್ವೀಕರಿಸುವುದೂ ನಿಷಿದ್ಧವಲ್ಲ. ಆದರೆ, ಅನ್ನವನ್ನು ಸ್ವೀಕರಿಸುವುದು ನಿಷೇಧಿಸಲ್ಪಟ್ಟಿವೆ. ಆ ರಾತ್ರಿ ಎಲ್ಲರೂ ಜಾಗರಣೆ ಮಾಡಬೇಕು.

॥ ಷಷ್ಠೀ ಪೂಜೆಯು ಸಮಾಪ್ತ ॥

Scanned by CamScanner

॥ ನಾಮಕರಣ ಸಂಸ್ಕಾರಃ ॥

॥ ಶ್ರೀಃ ॥ ಯಜಮಾನಃ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ॥ ಮಮಾಸ್ಯ ಶಿಶೋಃ ಬೀಜಗರ್ಭಸಮುದ್ಭವೈನೋನಿಬರ್ಹಣಾ-ಯುರಭಿವೃದ್ಧಿವ್ಯವಹಾರಸಿದ್ಧಿದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ನಾಮಕರಣಂ ಕರಿಷ್ಯೇ ॥ ತದಂಗತಯಾ ಗಣಪತಿಪೂಜನಪೂರ್ವಕಂ ಸ್ವಸ್ತಿಪುಣ್ಯಾಹವಾಚನಂ ಮಾತೃಕಾಪೂಜನಂ ನಾಂದೀಶ್ರಾದ್ಧಂ ಚ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ಸ್ವಸ್ತಿ-ವಾಚನೇ ಪುಣ್ಯಾಹತ್ರಯಮುಕ್ತ್ವಾ ಕರಿಷ್ಯಮಾಣಂ ನಾಮ ಚತುರ್ಥ್ಯಂತಮುಕ್ತ್ವಾ ತ್ರಿರೇತನ್ನಾಮ್ನೇ ಸ್ವಸ್ತಿ ಭವತ್ವಿತ್ಯುಕ್ತೇ ವಿಪ್ರೈರೇತನ್ನಾಮ್ನೇ ಸ್ವಸ್ತಿ ಇತಿ ತ್ರಿಃ ಪ್ರತ್ಯುಕ್ತೇ ಶೇಷಂ ಸ್ವಸ್ತಿವಾಚನಂ ಸಮಾಪ್ಯ ॥

ಇದಮಾರ್ಯಾಃ ಕುಮಾರಸ್ಯ ನಾಮಾಹಂ ವಿದಧಾಮೀತಿ ವಿಪ್ರಾನನು-ಜ್ಞಾಪ್ಯ ತೈರ್ವಿಧೀಯತಾಮಿತ್ಯನುಮೋದಿತಃ ಸನ್ ತಂಡುಲಾನ್ ಕಾಂಸ್ಯಪಾತ್ರೇ ಪ್ರಸಾರ್ಯ ತದುಪರಿ ಸುವರ್ಣಶಲಾಕಯಾ ಅಮುಕಕುಲದೇವತಾಭಕ್ತ ಇತಿ ನಾಮ ಲೇಖ್ಯಂ ॥ ತತೋ ಜನ್ಮಕಾಲೀನ ಮಾಸನಾಮ ॥ ಕೃಷ್ಣೋನಂತೋ-ಚ್ಯುತಶ್ಚಕ್ರೀವೈಕುಂಠೋಥ ಜನಾರ್ದನಃ । ಉಪೇಂದ್ರೋ ಯಜ್ಞಪುರುಷೋ ವಾಸುದೇವಸ್ತಥಾ ಹರಿಃ ॥ ಯೋಗೀಶಃ ಪುಂಡರೀಕಾಕ್ಷೋ ಮಾಸನಾಮಾನ್ಯ-

---

ನಾಮಕರಣ ಸಂಸ್ಕಾರಃ- ಯಜಮಾನನು ಆಚಮನಪ್ರಾಣಾಯಾಮಗಳನ್ನು ಮಾಡಿ ದೇಶಕಾಲಗಳನ್ನು ಸ್ಮರಿಸಿ, **"ಮಮಾಸ್ಯ ಶಿಶೋಃ....ನಾಂದೀಶ್ರಾದ್ಧಂ ಚ ಕರಿಷ್ಯೇ"** ಎಂದು ಸಂಕಲ್ಪಮಾಡಬೇಕು. ಸ್ವಸ್ತಿವಾಚನದಲ್ಲಿ ಮುಂದೆ ಇಡುವ ಹೆಸರಿಗೆ **"ನಾಮ್ನೇ"** ಎಂದು ಸೇರಿಸಿ **"ಸ್ವಸ್ತಿ ಭವತು"** ಎಂದು ಬ್ರಾಹ್ಮಣರನ್ನು ಕೇಳಿಕೊಳ್ಳಬೇಕು. ಬ್ರಾಹ್ಮಣರು "ಏತನ್ನಾಮ್ನೇ ಸ್ವಸ್ತಿಭವತು" ಎಂದು ಮೂರು ಬಾರಿಯೂ ಪ್ರತ್ಯುತ್ತರ ಹೇಳಿದ ನಂತರ ಉಳಿದ ಸ್ವಸ್ತಿವಾಚನ ಕಾರ್ಯವನ್ನು ಪೂರ್ಣಗೊಳಿಸಬೇಕು. ಆಮೇಲೆ **"ಇದಮಾರ್ಯಾಃ...ವಿದಧಾಮಿ"** ಎಂದು ಬ್ರಾಹ್ಮಣರನ್ನು ಕೇಳಿಕೊಂಡಾಗ ಅವರು **"ವಿಧೀಯತಾಂ"** ಎಂದು ಅನುಮತಿ ಕೊಟ್ಟ ಬಳಿಕ ಕಂಚಿನ ಪಾತ್ರೆಯಲ್ಲಿ ಅಕ್ಕಿಯನ್ನು ಹರವಿ ಅದರ ಮೇಲೆ ಚಿನ್ನದ ಕಡ್ಡಿಯಿಂದ **"...ಅಮುಕ ಕುಲದೇವತಾ ಭಕ್ತ"** ಎಂಬ ಹೆಸರನ್ನು ಬರೆಯಬೇಕು. ಆಮೇಲೆ ಹುಟ್ಟಿದ ತಿಂಗಳಿಗೆ ಸಂಬಂಧಿಸಿದ ಹೆಸರನ್ನು ಬರೆಯಬೇಕು. ಚೈತ್ರಾದಿಯಾಗಿ ಆ ಹೆಸರುಗಳು ಹೀಗಿವೆ: ೧. ಕೃಷ್ಣ, ೨. ಅನಂತ, ೩. ಅಚ್ಯುತ, ೪. ಚಕ್ರೀ, ೫. ವೈಕುಂಠ, ೬. ಜನಾರ್ದನ, ೭. ಉಪೇಂದ್ರ, ೮. ಯಜ್ಞಪುರುಷ, ೯. ವಾಸುದೇವ, ೧೦. ಹರಿ, ೧೧. ಯೋಗೀಶ, ೧೨. ಪುಂಡರೀಕಾಕ್ಷ.

Scanned by CamScanner
Scanned with CamScanner

ನುಕ್ರಮಾತ್ ॥ ಅತ್ರ ಚೈತ್ರಾದಿರ್ಮಾರ್ಗಶೀರ್ಷಾದಿರ್ವಾ ಕ್ರಮಃ ॥ ತತೋಭಿವಾದನೀಯಂ ನಾಮ ಉಪಾಂಶು ಕುರ್ಯಾತ್ ॥ ತಚ್ಚಾಮೌಂಜೀಬಂಧನಾನ್ಮಾತಾಪಿತರಾವೇವ ಜಾನೀಯಾತಾಂ ॥ ಉಪನಯನಕಾಲೇಚಾನೇನ ನಾಮ್ನಾ ಅಭಿವಾದಯೇತಿ ಕುಮಾರಂ ಪ್ರತಿ ವಾಚ್ಯಂ ॥ ತತಸ್ತ್ರಿಪುರುಷವಾಚಿ ದೇವತಾವಾಚಿ ವಾ ನಾಮ ಸ್ವೇಷ್ಟಂ ವಾ ಯುಗಾಕ್ಷರಂ ದ್ವ್ಯಕ್ಷರಂ ಪ್ರತಿಷ್ಠಾಕಾಮಶ್ಚತುರಕ್ಷರಂ ಬ್ರಹ್ಮವರ್ಚಸಕಾಮೋ ವಿಪ್ರಾದಿವರ್ಣ ಕ್ರಮೇಣ ಶರ್ಮವರ್ಮಗುಪ್ತದಾಸಾನ್ಯತಮಪದಾಂತಂ ಕುರ್ಯಾತ್ ॥ ತತೋಽವಕಹಡಾಚಕ್ರಾಖ್ಯಜ್ಯೋತಿಃ ಶಾಸ್ತ್ರೋಕ್ತ ಚಕ್ರಾನುಸಾರೇಣ ಜನ್ಮನಕ್ಷತ್ರಪಾದಪ್ರಯುಕ್ತಾಕ್ಷರಾದಿ ನಾಮ ॥ ತತೋ ವ್ಯಾವಹಾರಿಕಂ ಸ್ವೇಷ್ಟಂ ನಾಮೇತಿ ನಾಮಚತುಷ್ಟಯಂ ಲಿಖಿತ್ವಾ ॥ ನಾಮದೇವತಾಭ್ಯೋ ನಮ ಇತಿ ಸಂಪೂಜ್ಯ ॥ ಅಮುಕನಾಮ್ನಾತ್ವಮಮುಕೋಽಸಿ ಇತಿ ಸ್ವದಕ್ಷಿಣಸ್ಥಮಾತುರುತ್ಸಂಗಸ್ಥಸ್ಯ ಶಿಶೋರ್ದಕ್ಷಿಣ ಕರ್ಣೇ ಕಥಯಿತ್ವಾ । ತದಸ್ತು ಮಿತ್ರಾವರುಣಾ ... ಗೃಹಾವೈಪ್ರತಿಷ್ಠಾ .... ಇತ್ಯಾದಿ ಮಂತ್ರಪಾಠಾಂತೇ ವಿಪ್ರೈರ್ನಾಮ ಸುಪ್ರತಿಷ್ಠಿತಮಸ್ತ್ವಿತ್ಯುಕ್ತೇ ಅಮುಕನಾಮ್ನಾ ಅಮುಕನಾಮಾಯಂ ಭವತೋ ಅಭಿವಾದಯತೇ ಇತ್ಯುಕ್ತ್ವಾ ವಿಪ್ರಾನಭಿವಾದಯೇತ್ ॥ ತೇಚ ಆಯುಷ್ಮಾನ್ ಭವತ್ವಮುಕಶರ್ಮಾ ೩ ಇತಿ ವದೇಯುಃ ॥

ಚೈತ್ರ ಅಥವಾ ಮಾರ್ಗಶೀರ್ಷಮಾಸವನ್ನು ಮೊದಲನೆಯ ತಿಂಗಳೆಂದು ಪರಿಗಣಿಸಿ ಅನುಕ್ರಮವಾಗಿ ಈ ಹೆಸರುಗಳನ್ನು ನಿರ್ಣಯಿಸಿಕೊಳ್ಳಬೇಕು. ಆಮೇಲೆ ಅಭಿವಾದನ ಕಾಲದಲ್ಲಿ ಉಪಯೋಗಿಸುವ ಹೆಸರನ್ನು ಮೌನವಾಗಿ ಮನಸ್ಸಿನಲ್ಲೇ ನಿರ್ಣಯಿಸಿಕೊಳ್ಳಬೇಕು. ಉಪನಯನ ಕಾಲದ ವರೆಗೆ ಈ ಹೆಸರು ತಂದೆ-ತಾಯಿಗಳಿಗೆ ಮಾತ್ರ ಗೊತ್ತಿರಬೇಕು. ಉಪನಯನಕಾಲದಲ್ಲಿ ಈ ಹೆಸರಿನಿಂದ ಅಭಿವಾದನ ಮಾಡೆಂದು ಕುಮಾರನಿಗೆ ತಿಳಿಸಬೇಕು. ಬಳಿಕ ಮೂರು ಪುರುಷವಾಚಕ ಅಥವಾ ದೇವತಾವಾಚಕ ಹೆಸರುಗಳನ್ನು ಪ್ರತಿಷ್ಠೆಯ ಇಚ್ಛೆ ಇದ್ದರೆ ಎರಡು ಅಕ್ಷರ, ಬ್ರಹ್ಮವರ್ಚಸ್ಸು ಬೇಕಿದ್ದರೆ ನಾಲ್ಕು ಅಕ್ಷರಗಳುಳ್ಳ ಹೆಸರುಗಳನ್ನು ಬರೆಯಬೇಕು. ಅವುಗಳ ಕೊನೆಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಣಗಳಿಗೆ ಕ್ರಮವಾಗಿ ಶರ್ಮ, ವರ್ಮ, ಗುಪ್ತ, ದಾಸ ಎಂದು ಸೇರಿಸಿಕೊಳ್ಳಬೇಕು. ಜ್ಯೋತಿಃಶ್ಶಾಸ್ತ್ರದ ಅವಕಹಡ ಚಕ್ರದ ಅನುಸಾರವಾಗಿ ಜನ್ಮನಕ್ಷತ್ರದ ಪಾದದ ಮೇಲಿನಿಂದ ಹೆಸರು ಇಡಬೇಕು. ಆಮೇಲೆ ನಿತ್ಯವ್ಯವಹಾರಕ್ಕೆ ತಮಗೆ ಇಷ್ಟ ಬಂದ ಒಂದು ಹೆಸರನ್ನು ಇಡಬೇಕು.

Scanned by CamScanner

Scanned with CamScanner

ತತಃ ದೇವತಾ ಬ್ರಾಹ್ಮಣಾನ್ ಪಿತ್ರಾದೀಂಶ್ಚ ನತ್ವಾ ಯಥಾವಿಭವಂ ವಿಪ್ರಾನ್ ಭೋಜಯೇದ್ದಕ್ಷಿಣಾಂ ಚ ದದ್ಯಾತ್ ॥

ಕುಮಾರ್ಯಾ ಅಪಿ ನಾಮಕರಣಮಮಂತ್ರಕಂ ಕಾರ್ಯಂ । ವಿಷಮಾಕ್ಷರಂ ತು ತನ್ನಾಮ ॥

ಹೋಮಕರಣಪಕ್ಷೇ ತು ಪಾರ್ಥಿವಾಗ್ನೌ ಜಾತಕರ್ಮವದೇವ ಪ್ರಧಾನಾಹುತೀರ್ಹುತ್ವಾ ನಾಮ ಯಥೋಕ್ತಂ ಕೃತ್ವಾ ಸ್ವಿಷ್ಟಕೃದಾದಿ ಹೋಮಶೇಷ ತಂತ್ರಂ ಕುರ್ಯಾತ್ ॥

॥ ಇತಿ ನಾಮಕರಣ ಸಂಸ್ಕಾರಃ ॥

ಆಮೇಲೆ **"ನಾಮದೇವತಾಭ್ಯೋ ನಮಃ"** ಎಂಬ ಮಂತ್ರದಿಂದ ಪೂಜೆಮಾಡಿ, ತನ್ನ ಬಲಭಾಗದಲ್ಲಿ ಕುಳಿತಿರುವ ಪತ್ನಿಯ ಮಡಿಲಲ್ಲಿರುವ ಮಗುವಿನ ಬಲಕಿವಿಯಲ್ಲಿ ಹೆಸರನ್ನು ಉಚ್ಚರಿಸಿ **"ತದಸ್ತು ಮಿತ್ರಾವರುಣಾ..."** **"ಗೃಹಾವೈ....."** ಇತ್ಯಾದಿ ಮಂತ್ರಗಳನ್ನು ಹೇಳಿ ಬ್ರಾಹ್ಮಣರು **"ನಾಮ ಸುಪ್ರತಿಷ್ಠಿತಮಸ್ತು"** ಎಂದು ಹೇಳಿದ ಮೇಲೆ, ಅಮುಕ ಹೆಸರಿನಿಂದ ಅಮುಕ ಹೆಸರಿನ ಈತನು ತಮ್ಮನ್ನು ಅಭಿವಾದಿಸುತ್ತಾನೆ ಎಂದು ಹೇಳಿ ಬ್ರಾಹ್ಮಣರಿಗೆ ನಮಸ್ಕಾರ ಮಾಡಿಸಬೇಕು. ಬ್ರಾಹ್ಮಣರು **"ಆಯುಷ್ಮಾನ್ ಭವತು .... ಅಮುಕಶರ್ಮಾsss"** ಎಂದು ಆಶೀರ್ವದಿಸಬೇಕು. ಬಳಿಕ ಯಜಮಾನನು ಗುರುಹಿರಿಯರಿಗೆ, ಬ್ರಾಹ್ಮಣರಿಗೆ ನಮಸ್ಕಾರ ಮಾಡಿ ಯಥಾಶಕ್ತಿ ಬ್ರಾಹ್ಮಣ ಸಂತರ್ಪಣೆ ಮಾಡಿ ದಕ್ಷಿಣಾದಿಗಳನ್ನು ಕೊಡಬೇಕು.

ಹೆಣ್ಣುಮಗುವಿಗೂ ವೈದಿಕಮಂತ್ರಗಳಿಲ್ಲದೆ ನಾಮಕರಣಸಂಸ್ಕಾರವನ್ನು ಮಾಡಬೇಕು. ವಿಷಮಾಕ್ಷರಗಳುಳ್ಳ ಅಂದರೆ ೩, ೫, ೭ ಅಕ್ಷರಗಳುಳ್ಳ ಹೆಸರನ್ನಿಡಬೇಕು.

ಹೋಮಸಹಿತ ನಾಮಕರಣಸಂಸ್ಕಾರವನ್ನು ಮಾಡುವುದಾದರೆ **"ಪಾರ್ಥಿವ"** ಎಂಬ ಹೆಸರಿನ ಅಗ್ನಿಯನ್ನು ಪ್ರತಿಷ್ಠಾಪಿಸಬೇಕು. ಜಾತಕರ್ಮಸಂಸ್ಕಾರದಲ್ಲಿ ವಿಧಿಸಿದ ಪ್ರಕಾರ ಅನ್ವಾಧಾನಾದಿ ಸಕಲಕರ್ಮಗಳನ್ನೂ ಮಾಡಿ, ಅಂತೆಯೇ ಪ್ರಧಾನ ಆಜ್ಯಾಹುತಿಗಳನ್ನು ಕೊಟ್ಟು, ಈ ಹಿಂದೆ ಹೇಳಿದಂತೆ ನಾಮಕರಣ ಮಾಡಿ ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಮುಗಿಸಬೇಕು.

॥ ನಾಮಕರಣಸಂಸ್ಕಾರ ಸಮಾಪ್ತ ॥

Scanned by CamScanner

Scanned with CamScanner

೩೦

॥ ಸೂರ್ಯಾವಲೋಕನನಿಷ್ಕ್ರಮಣ ಸಂಸ್ಕಾರೌ ॥

॥ ಶ್ರೀಃ ॥ ಜನನಾತ್ತೃತೀಯೇ ಮಾಸಿ ಜನ್ಮದಿನೇ ಜನ್ಮನಕ್ಷತ್ರೇ ವಾ ಇಷ್ಟದೇವತಾಪೂಜನಪೂರ್ವಕಮಲಂಕೃತೇನ ಶಿಶುನಾ ಸೋತ್ಸವಂ ಸೂರ್ಯದರ್ಶನಂ ಕಾರಯಿತ್ವಾ ಚತುರ್ಥಮಾಸೇ ಶುಭಕಾಲೇ ಅಗ್ನಿಂ ಚಂದ್ರಂ ಧೇನುಂ ಚ ದರ್ಶಯೇತ್ ॥

ಸ್ವಸ್ತಿ ನ ಆತ್ರೇಯೋ ವಿಶ್ವೇದೇವಾಸ್ತ್ರಿಷ್ಟುಪ್ ॥ ಶಿಶೋರಂಕಾರೋಪಣೇ ವಿನಿಯೋಗಃ ॥ ಓಂ ಸ್ವಸ್ತಿ ನೋ ಮಿಮೀತಾಮಶ್ವಿನಾಭಗಃ ॥ ಸ್ವಸ್ತಿದೇವ್ಯದಿತಿರನರ್ವಣಃ ॥ ಸ್ವಸ್ತಿಪೂಷಾಅಸುರೋದಧಾತು ನಃ ॥ ಸ್ವಸ್ತಿದ್ಯಾವಾಪೃಥಿವೀಸುಚೇತುನಾ ॥ ಅನೇನ ಪಿತ್ರಾದಿಃ ಶಿಶುಮಂಕಮಾರೋಪ್ಯ ॥ ಆಶುಃ ಶಿಶಾನ ಇತಿ ತ್ರಯೋದಶರ್ಚಸ್ಯಾಪ್ರತಿರಥಸ್ಯ ಸೂಕ್ತಸ್ಯ ಐಂದ್ರೋಽಪ್ರತಿರಥ ಇಂದ್ರಸ್ತ್ರಿಷ್ಟುಪ್ ॥ ಚತುರ್ಥೀ ಬೃಹಸ್ಪತಿರ್ದೇವತ್ಯಾ ॥ ತ್ರಯೋದಶ್ಯನುಷ್ಟುಪ್ ॥ ಶಿಶೋರಾಯುಷ್ಯಾಭಿವೃದ್ಧ್ಯರ್ಥಂ ಜಪೇ ವಿನಿಯೋಗಃ ॥ ಓಂ ಆಶುಃ ಶಿಶಾನೋ

ಸೂರ್ಯಾವಲೋಕನ:- ಶಿಶುಜನನವಾದ ಮೇಲೆ ಮೂರನೆಯ ತಿಂಗಳಲ್ಲಿ ಜನ್ಮದಿನ ಅಥವಾ ಜನ್ಮನಕ್ಷತ್ರದ ದಿನ ಇಷ್ಟದೇವತಾಪೂಜೆಯನ್ನು ಮಾಡಿ ಮಗುವನ್ನು ಅಲಂಕರಿಸಿ, ಉತ್ಸವದೊಂದಿಗೆ ಅದಕ್ಕೆ ಸೂರ್ಯದರ್ಶನ ಮಾಡಿಸಬೇಕು. ನಾಲ್ಕನೆಯ ತಿಂಗಳಲ್ಲಿ ಶುಭಕಾಲದಲ್ಲಿ ಅಗ್ನಿ, ಚಂದ್ರ ಮತ್ತು ಗೋವಿನ ದರ್ಶನಮಾಡಿಸಬೇಕು. ತಂದೆ ಮೊದಲಾದವರು ಮಗುವನ್ನು ತೊಡೆಯ ಮೇಲೆ ಮಲಗಿಸಿ **"ಸ್ವಸ್ತಿ ನೋ ಮಿಮೀತಾ"** ಎಂಬ ಮಂತ್ರವನ್ನು ಹೇಳಬೇಕು. ಆಮೇಲೆ **"ಆಶುಃ ಶಿಶಾನೋ...."** ಎಂಬ ೧೩ ಋಕ್ಕುಗಳುಳ್ಳ ಸೂಕ್ತವನ್ನೂ **"ಅಸೌ ಯಾ ಸೇನಾ"** ಎಂಬ ೨ ಋಕ್ಕುಗಳ ಸೂಕ್ತವನ್ನೂ ಶಿಶುವಿನ ಆಯುಷ್ಯಾಭಿವೃದ್ಧಿಗೋಸ್ಕರ ಜಪಿಸಬೇಕು. ಆ ಬಳಿಕ **"ತಚ್ಚಕ್ಷುರ್ದೇವ"** ಎಂಬ ಸೂಕ್ತವನ್ನು ಹೇಳಿ ಮಗುವಿಗೆ ಸೂರ್ಯನನ್ನು ತೋರಿಸಬೇಕು.

॥ ಸೂರ್ಯಾವಲೋಕನ ಸಂಸ್ಕಾರ ಸಮಾಪ್ತ ॥

ಮುಂದೆ ಹೇಳುವ ನಿಷ್ಕ್ರಮಣ ಸಂಸ್ಕಾರವನ್ನೂ ಸೂರ್ಯಾವಲೋಕನ ಸಂಸ್ಕಾರದ ಜತೆಗೇ ತಂತ್ರದಿಂದ ಮಾಡುತ್ತಾರೆ.

Scanned by CamScanner
Scanned with CamScanner

... ಋಕ್ ೧೩ ॥ ಓಂ ಅಸೌಯಾಸೇನಾ ... ಋಕ್ ೨ ॥ ತಚ್ಚಕ್ಷುರ್ವಸಿಷ್ಠಃ ಸೂರ್ಯಃಪುರ ಉಷ್ಣಿಕ್ ॥ ಕುಮಾರಸ್ಯಾದಿತ್ಯಾವೇಕ್ಷಣೇ ವಿನಿಯೋಗಃ ॥ ಓಂ ತಚ್ಚಕ್ಷುರ್ದೇವ... ॥ ಇತಿ ಸೂರ್ಯಂ ನಿರೀಕ್ಷಯೇತ್ ॥ ಇತಿ ಸೂರ್ಯಾವಲೋಕನಸಂಸ್ಕಾರಃ ॥ ಇದಂ ಅಗ್ರೇತನಂ ನಿಷ್ಕ್ರಮಣಂ ಚ ಸಹ ತಂತ್ರೇಣೈವ ಕುರ್ವಂತಿ ॥

॥ ಸೂರ್ಯಾವಲೋಕನ ಸಂಸ್ಕಾರ ಸಮಾಪ್ತ ॥

Scanned by CamScanner

Scanned with CamScanner

೨೧

॥ ನಿಷ್ಕ್ರಮಣ ಸಂಸ್ಕಾರಃ ॥

॥ ಶ್ರೀಃ ॥ (ಸೂರ್ಯಾವಲೋಕನ ತಂತ್ರೇಣ) ತತಶ್ಚತುರ್ಥೇ ಮಾಸಿ ಷಷ್ಠೇ ವಾ ಶುಕ್ಲಪಕ್ಷೇ ಶುಭತಿಥ್ಯಾದೌ ಪಿತಾ ಸಭಾರ್ಯಃ ಸಶಿಶುರಭ್ಯಂಗ-ಸ್ನಾತಃ ॥ ಮಮ ಶಿಶೋಃ ಆಯುಃ ಶ್ರೀವೃದ್ಧಿ ಬೀಜಗರ್ಭಸಮುದ್ಭವೈನೋನಿ-ಬರ್ಹಣದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ನಿಷ್ಕ್ರಮಣಾಖ್ಯಂ ಕರ್ಮ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ತದಂಗತಯಾ ಸ್ವಸ್ತಿವಾಚನಾಭ್ಯುದಯಿಕಗ್ರಹ-ಯಜ್ಞಾನ್ ಕೃತ್ವಾ ॥ ಇಂದ್ರಾಗ್ನಿಯಮನಿರ್ಋತಿವರುಣವಾಯುಕುಬೇರೇಶಾನಾನಾಂ ಪ್ರಾಚ್ಯಾದಿದಿಶಾಂ ಚಂದ್ರಾರ್ಕವಾಸುದೇವ ಗಗನಾನಾಂ ಚ ಯಥಾ ಕ್ರಮಂ ತಂಡುಲಪುಂಜೇಷು ಪೂಜಾಂ ಕೃತ್ವಾ ಬ್ರಾಹ್ಮಣಾನ್ ಭೋಜಯಿತ್ವಾ ತೈಃ ಸ್ವಸ್ತ್ಯಯನಂ ವಾಚಯಿತ್ವಾ ॥ ಸಾಯಂ ಸಂಧ್ಯಾದಿಕಂ ಕೃತ್ವಾ ॥ ಶಿಶುಂ ಸೌವರ್ಣೈಃ ಕೃತ್ರಿಮೈರ್ವಾಭರಣೈಃ ಯಥಾಶಕ್ತ್ಯಲಂಕೃತ್ಯ ಪೂರ್ವಂ ನ ಕೃತಂ ಚೇತ್ ಇದಾನೀಂ ಶಿಶುನಾಗ್ನಿಚಂದ್ರಧೇನೂನಾಂ ದರ್ಶನಂ ಕಾರಯಿತ್ವಾ ಅಶ್ವಾದಿ ವಾಹನಸ್ಥಂ ಶಿಶುಂ ಮಾತುಲೇನ ಧಾತ್ರ್ಯಾ ವಾ ವಾಹಯಿತ್ವಾ ಭಾರ್ಯಾಪುತ್ರ ವಿದ್ವ ದ್ಬ್ರಾಹ್ಮಣ ಜ್ಞಾತಿಬಾಂಧವಪುರಂಧ್ರೀಗಣದರ್ಪಣಪೂರ್ಣಕಲಶಯುಕ್ತಕನ್ಯಾಗಣ ಪುಷ್ಪಹರಿದ್ರಾಕ್ಷತಾದೀಪಮಾಲಾಧ್ವಜಲಾಜಮಂಗಲವಾದ್ಯಘೋಷಯುಕ್ತಃ ॥

ನಿಷ್ಕ್ರಮಣ ಸಂಸ್ಕಾರಃ- ನಾಲ್ಕನೆಯ ತಿಂಗಳಲ್ಲಿ ಅಥವಾ ಆರನೆಯ ತಿಂಗಳಲ್ಲಿ ಶುಕ್ಲ ಪಕ್ಷದಲ್ಲಿ ಶುಭತಿಥಿಯನ್ನು ನೋಡಿ ತಂದೆಯು ತನ್ನ ಪತ್ನಿ ಮತ್ತು ಬಾಲಕನೊಡನೆ ಅಭ್ಯಂಗಸ್ನಾನ ಮಾಡಬೇಕು. ಆಮೇಲೆ **"ಮಮ ಶಿಶೋಃ ... ಕರ್ಮ ಕರಿಷ್ಯೇ"** ಎಂದು ಸಂಕಲ್ಪಮಾಡಿ ಇದರ ಅಂಗವಾಗಿ ಸ್ವಸ್ತಿವಾಚನ ಆಭ್ಯುದಯಿಕ ಗ್ರಹಯಜ್ಞಾದಿಗಳನ್ನೂ ಮಾಡಿ, ಅಕ್ಕಿಯ ರಾಶಿಯ ಮೇಲೆ ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನ, ಪೂರ್ವ ಮೊದಲಾದ ದಿಕ್ಕುಗಳಲ್ಲಿ, ಅಂತೆಯೇ ಚಂದ್ರ, ಸೂರ್ಯ, ವಾಸುದೇವ, ಗಗನ ಇವುಗಳನ್ನು ಪೂಜಿಸಿ, ಬ್ರಾಹ್ಮಣಸಂತರ್ಪಣೆ ಮಾಡಿ, ಅವರಿಂದ ಆಶೀರ್ವಾದ ಪಡೆದು, ಸಾಯಂ ಸಂಧ್ಯಾವಂದನೆ ಮಾಡಿ, ಮಗುವನ್ನು ಆಭರಣಗಳಿಂದ ಅಲಂಕರಿಸಿ, ಮೊದಲು ಮಾಡಿರದಿದ್ದರೆ ಈಗ ಶಿಶುವಿಗೆ ಅಗ್ನಿ, ಚಂದ್ರ ಮತ್ತು ಗೋವುಗಳ ದರ್ಶನ ಮಾಡಿಸಿ, ಕುದುರೆ ಅಥವಾ ಬೇರೆ ವಾಹನದ ಮೇಲಿರುವ ಶಿಶುವನ್ನು ಮಾವ ಅಥವಾ ದಾಯಿಯು ತಿರುಗಾಡಿಸಬೇಕು. ಹೆಂಡತಿ, ಮಗ, ಬ್ರಾಹ್ಮಣರು, ಬಂಧುಗಳು ಮುಂತಾದವರೊಡನೆ ವಾದ್ಯಘೋಷದಿಂದ ಕೂಡಿ **"ಕನಿಕ್ರದ..."** ಮುಂತಾದ ಮಂತ್ರಗಳನ್ನು ಹೇಳುತ್ತ ಮನೆಯಿಂದ ಹೊರಬಂದು ಮುಂದೆ ಹೇಳುವ ಮಂತ್ರವನ್ನು ಪಠಿಸಬೇಕು.

Scanned by CamScanner

Scanned with CamScanner

ಓಂ ಕನಿಕ್ರದಜ್ಜನುಷಂ .... ಋಕ್ ೩ ಓಂ ಪ್ರದಕ್ಷಿಣಿದಭಿ .... ಋಕ್ ೨ ॥ ಓಂ ಆವದಂಸ್ತ್ವ .... ಋಕ್ ೧ ॥ ಇತ್ಯಾದಿ ಶಕುಂತಾದಿ ಸುಮಂಗಲಸೂಕ್ತಂ ಪಠನ್ ಗೃಹಾದ್ಬಹಿರ್ಗತ್ವಾ ಮಂತ್ರಮೇತಮುದೀರಯೇತ್ ॥

ಚಂದ್ರಾರ್ಕಯೋರ್ದಿಶೀಶಾನಾಂ ದಿಶಾಂ ಚ ಗಗನಸ್ಯ ಚ ॥ ನಿಕ್ಷೇಪಾರ್ಥಮಿಮಂ ದದ್ಮಿತೇ (ಽಮುಂ) ತ್ವಾಂ ರಕ್ಷಂತು ಸರ್ವದಾ ॥ ಅಪ್ರಮತ್ತಂ ಪ್ರಮತ್ತಂ ವಾ ದಿವಾರಾತ್ರಾವಥಾಪಿ ವಾ ॥ ರಕ್ಷಂತು ಸತತಂ ಸರ್ವೇ ದೇವಾಃ ಶಕ್ರಪುರೋಗಮಾಃ ॥ ಏವಂ ಶಿಶುರಕ್ಷಣಾರ್ಥಂ ದೇವಾನ್ ಸಂಪ್ರಾರ್ಥ್ಯ ವಿಷ್ಣು-ಶಿವಾಲಯಯೋರನ್ಯತರದ್ಬಂಧುಗೃಹಂ ವಾ ಗತ್ವಾ ತತ್ರ ದೇವಂ ಸುಮಂಗಲ-ವಾದ್ಯಘೋಷ ಪುಷ್ಪೋಪಹಾರಾದಿಭಿಃ ಪ್ರಪೂಜ್ಯ ॥ ಗೋಮಯಾದ್ಯನುಲಿಪ್ತ ಚತುರಪ್ರದೇಶೇ ಧಾನ್ಯಾದಿ ನಿಧಾಯ ತತ್ರ ಶಿಶುಮಾಸಯಿತ್ವಾ ಮಂತ್ರೇಣ ರಕ್ಷಾಂ ಕುರ್ಯಾತ್ ॥ ಮಂತ್ರಶ್ಚ ॥ ತ್ರ್ಯಂತಕಮಿತ್ಯಸ್ಯ ವಸಿಷ್ಠೋ ಮೃತ್ಯುಂಜಯಸ್ತ್ರ್ಯಂಬಕೋನುಷ್ಟುಪ್ ॥ ಶಿಶೋಃ ರಕ್ಷಾಯಾಂ ವಿನಿಯೋಗಃ ॥ ಓಂ ಹೌಂಜೂಂಸಃ ಓಂ ಭೂರ್ಭುವಃ ಸ್ವಃ ಓಂ ತ್ರ್ಯಂಬಕಂ ಯಜಾಮಹೇ ಸುಗಂಧಿಂ ....॥ ಓಂ ಸ್ವಃ ಭುಃ ಓಂ ಸಃ ಜೂಂ ಓಂ ಇತ್ಯೇವಂ ರೂಪಂ ಮೃತಸಂಜೀವಿನೀಮಂತ್ರಂ ಜಪನ್ ವಿಭೂತ್ಯಾಕ್ಷತೈರ್ವಾಮೂರ್ಧ್ನಿ ಲಲಾಟೇ ಚ ರಕ್ಷಾಂ ಕೃತ್ವಾ ॥

"**ಚಂದ್ರಾರ್ಕಯೋರ್ದಿಶೀಶಾನಾಂ ....**" ಎಂಬ ಮಂತ್ರವನ್ನು ಹೇಳಿ ಮಗುವಿನ ರಕ್ಷಣೆ ಮಾಡಬೇಕೆಂದು ದೇವತಾಪ್ರಾರ್ಥನೆ ಮಾಡಬೇಕು. ಆಮೇಲೆ ಊರಿನ ವಿಷ್ಣು ಅಥವಾ ಶಿವದೇವಾಲಯದ ಇಲ್ಲವೇ ಯಾವನಾದರೊಬ್ಬ ಬಂಧುವಿನ ಮನೆಗೆ ಹೋಗಿ ಅಲ್ಲಿ ದೇವರನ್ನು ಮಂಗಲವಾದ್ಯಘೋಷ, ಪುಷ್ಪ ನೈವೇದ್ಯಾದಿಗಳಿಂದ ಪೂಜಿಸಬೇಕು.

ಆ ಬಳಿಕ ಗೋಮಯವನ್ನು ಲೇಪಿಸಿದ ಚೌಕಾಕಾರದ ಸ್ಥಳದಲ್ಲಿ ಧಾನ್ಯರಾಶಿಯನ್ನು ಹಾಕಿ ಅದರ ಮೇಲೆ ಮಗುವನ್ನು ಕುಳ್ಳಿರಿಸಿ, "**ಓಂ ಹೌಂಜೂಂಸಃ .... ತ್ರ್ಯಬಕಂ**" ಎಂಬ ಮೃತಸಂಜೀವಿನೀ ಮಂತ್ರವನ್ನು ಪಠಿಸಿ ವಿಭೂತಿ ಅಥವಾ ಅಕ್ಷತೆಗಳನ್ನು ಶಿಶುವಿನ ಲಲಾಟ ಇಲ್ಲವೇ ತಲೆಯ ಮೇಲೆ ಹಾಕಿ ರಕ್ಷೆಯನ್ನು ಕೊಡಬೇಕು.

Scanned by CamScanner

Scanned with CamScanner

ಅಪೂಪಾದಿಭಿರ್ಭೂತೇಶಾನಂ ಗಣೇಶಮಭ್ಯರ್ಚ್ಯ ಶಿಶುಂ ಭಕ್ಷ್ಯಾದಿಭಿ-ಸ್ತೋಷಯಿತ್ವಾ ಆಶಿಷೋ ವಾಚಯಿತ್ವಾ ದೇವತಾಪ್ರಣಾಮಂ ಪ್ರದಕ್ಷಿಣತ್ರಯಂ ಚ ಶಿಶುನಾ ಕಾರಯಿತ್ವಾ ಮಾತುಲಾದ್ಯಾಸನ್ನ ಬಂಧುಗೃಹೇ ಪೂರ್ವವನ್ನೀತ್ವಾ ತತ್ರ ದಾನೋಪಹಾರಾದಿಭಿಃ ಶಿಶುಂ ತೋಷಯಿತ್ವಾ ಸ್ವಗೃಹಂ ಗತ್ವಾ ಬ್ರಾಹ್ಮಣೈ ರಾಶಿಷೋ ವಾಚಯಿತ್ವಾ ತೇಭ್ಯಃ ಸುವಾಸಿನೀಭ್ಯಶ್ಚ ಯಥಾಶಕ್ತಿ ದಕ್ಷಿಣಾಂ ದತ್ವಾ ಬಂಧುಭಿಃ ಸಹ ಭುಂಜೀತ ॥

ಕುಮಾರ್ಯಾ ಅಪಿ ಏತತ್ಸಮಾನಂ ॥ ಹೋಮೋಽತ್ರಕೃತಾಕೃತಃ ॥ ಹೋಮಪಕ್ಷೇ ಶಿಶೋರಲಂಕರಣಾನಂತರಂ ಲೌಕಿಕಾಗ್ನಿಂ ಪ್ರತಿಷ್ಠಾಪ್ಯ ಜಾತಕರ್ಮ-ವದನಾದೇಶದೇವತಾಭ್ಯೋ ಹುತ್ವಾ ಅಗ್ನಿಚಂದ್ರದರ್ಶನಾದಿಸ್ವಗೃಹಗಮನಾಂತಂ ಕೃತ್ವಾ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯ ಬ್ರಾಹ್ಮಣಾಶೀರ್ವಾದಾದಿ ಕಾರಯೇ-ದಿತಿ ಕ್ರಮಃ ॥

॥ ಇತಿ ನಿಷ್ಕ್ರಮಣ ಪ್ರಯೋಗಃ ॥

ಅಪ್ಪಕಜ್ಜಾಯ ಮೊದಲಾದವುಗಳಿಂದ ಭೂತೇಶ ಗಣೇಶ ಇವರ ಪೂಜೆಯನ್ನು ಮಾಡಿ, ಒಳ್ಳೆಯ ತಿಂಡಿಗಳನ್ನಿತ್ತು ಮಗುವನ್ನು ಸಂತೋಷಪಡಿಸಿ, ಆಶೀರ್ವಾದಗಳನ್ನು ಹೇಳಿಸಿ, ಮಗುವಿನಿಂದ ದೇವರಿಗೆ ನಮಸ್ಕಾರ ಹಾಗೂ ಮೂರು ಪ್ರದಕ್ಷಿಣೆಗಳನ್ನು ಮಾಡಿಸಿ, ಮಾವ ಮೊದಲಾದ ಸಮೀಪದ ಬಂಧುಗಳ ಮನೆಗೆ ಶಿಶುವನ್ನು ಕೊಂಡೊಯ್ದು ಅಲ್ಲಿ ಮೊದಲಿನಂತೆ ದಾನ ಉಪಹಾರಾದಿಗಳಿಂದ ಅದನ್ನು ಸಂತೋಷಪಡಿಸಿ ತನ್ನ ಮನೆಗೆ ಕರೆತಂದು, ಬ್ರಾಹ್ಮಣರಿಂದ ಆಶೀರ್ವಾದ ಮಾಡಿಸಿ ಆ ಬ್ರಾಹ್ಮಣರಿಗೂ, ಸುವಾಸಿನಿಯರಿಗೂ ಯಥಾಶಕ್ತಿ ದಕ್ಷಿಣೆಯನ್ನು ಕೊಟ್ಟು ಬಂಧುಗಳೊಡನೆ ಊಟಮಾಡಬೇಕು.

ಹೆಣ್ಣುಮಗುವಿಗೂ ಇದೇ ಕ್ರಮವನ್ನು ಅನುಸರಿಸಬೇಕು. ಈ ಸಂಸ್ಕಾರದಲ್ಲಿ ಹೋಮವನ್ನು ಮಾಡಲೂಬಹುದು, ಮಾಡದಿರಲೂಬಹುದು. ಹೋಮ ಮಾಡುವುದಾದರೆ ಶಿಶುವಿಗೆ ಅಲಂಕಾರ ಮಾಡಿದ ನಂತರ **"ಲೌಕಿಕ"** ಅಗ್ನಿಯನ್ನು ಪ್ರತಿಷ್ಠಾಪಿಸಿ, ಜಾತಕರ್ಮದಲ್ಲಿ ಹೇಳಿದಂತೆ ಹೋಮಕಾರ್ಯವನ್ನು ಮಾಡಿ ಅಗ್ನಿ, ಚಂದ್ರ ಮೊದಲಾದವರ ದರ್ಶನ ಮಾಡಿಸಿ, ಮನೆಗೆ ಬಂದು ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಮುಗಿಸಬೇಕು.

॥ ನಿಷ್ಕ್ರಮಣ ಸಂಸ್ಕಾರ ಸಮಾಪ್ತ ॥

Scanned by CamScanner

Scanned with CamScanner

೩೨

॥ ಉಪವೇಶನವಿಧಿಃ ॥

॥ ಶ್ರೀಃ ॥ ಪಂಚಮೇ ಮಾಸಿ ಶುಕ್ಲಪಕ್ಷೇ ಜ್ಯೋತಿಃಶಾಸ್ತ್ರೋಕ್ತಶುಭ-ತಿಥ್ಯಾದೌ ಪೂರ್ವಾಹ್ಣೇ ಸ್ವಸ್ತಿವಾಚನಂ ಕೃತ್ವಾ ವರಾಹಪೃಥಿವೀಗುರುದೇವ-ದ್ವಿಜಾನ್ ಪೂಜಯಿತ್ವಾ ಭೂಭಾಗಮುಪಲಿಪ್ಯ ತತ್ರ ಮಂಡಲಂ ಕೃತ್ವಾ ಶಂಖ-ತೂರ್ಯಾದಿ ಮಾಂಗಲಿಕಧ್ವನೌ ಕ್ರಿಯಮಾಣೇ ಭೂಮೌ ಶಿಶುಮುಪವೇಶ-ಯೇದೇಭಿರ್ಮಂತ್ರೈಃ ॥ ರಕ್ಷೈನಂ ವಸುಧೇ ದೇವಿ ಸದಾ ಸರ್ವಗತಂ ಶುಭೇ ॥ ಆಯುಃ ಪ್ರಮಾಣಂ ನಿಖಿಲಂ ನಿಕ್ಷಿಪಸ್ವ ಹರಿಪ್ರಿಯೇ ॥ ಅಚಿರಾದಾಯುಷಸ್ತ್ವಸ್ಯ ಯೇ ಕೇಚಿತ್ಪರಿಪಂಥಿನಃ । ಜೀವಿತಾರೋಗ್ಯವಿತ್ತೇಷು ನಿರ್ದಹಸ್ವಾಚಿರೇಣ ತಾನ್ ॥ ಧಾರಿಣ್ಯಶೇಷಭೂತಾನಾಂ ಮಾತಸ್ತ್ವಮಧಿಕಾಹ್ಯಸಿ ॥ ಕುಮಾರಂ ಪಾಹಿ ಮಾತಸ್ತ್ವಂ ಬ್ರಹ್ಮಾ ತದನುಮನ್ಯತಾಂ ॥ ಇತಿ ॥ ತತೋ ಬ್ರಾಹ್ಮಣಾನ್ಪೂಜಯಿತ್ವಾ ಆಶಿಷೋ ವಾಚಯಿತ್ವಾ ನೀರಾಜನಾದ್ಯುತ್ಸವಂ ಕುರ್ಯಾತ್ ॥ ಏವಂ ಕುಮಾರ್ಯಾ ಅಪಿ ॥ ಇತ್ಯುಪವೇಶನಂ ॥

॥ ಇತಿ ಉಪವೇಶನವಿಧಿಃ ॥

ಉಪವೇಶನವಿಧಿಃ:- ಶಿಶುವನ್ನು ಮೊದಲ ಬಾರಿ ನೆಲದ ಮೇಲೆ ಕುಳ್ಳಿರಿಸುವುದು. ಐದನೆಯ ತಿಂಗಳ ಶುಕ್ಲಪಕ್ಷದಲ್ಲಿ ಒಳ್ಳೆಯ ಮುಹೂರ್ತ ನೋಡಿ ಪೂರ್ವಾಹ್ಣ ಸ್ವಸ್ತಿವಾಚನ ಮಾಡಿಸಿ ವರಾಹ, ಭೂಮಿ, ಗುರುದೇವ, ಬ್ರಾಹ್ಮಣರನ್ನು ಪೂಜಿಸಿ, ಗೋಮಯದಿಂದ ಭೂಮಿಯನ್ನು ಲೇಪಿಸಿ ಅಲ್ಲಿ ಮಂಡಲಮಾಡಿ ಮಂಗಲವಾದ್ಯದೊಂದಿಗೆ **"ರಕ್ಷೈನಂ ವಸುಧೇ...."** ಮಂತ್ರವನ್ನು ಹೇಳಿ ಶಿಶುವನ್ನು ಕುಳ್ಳಿರಿಸಬೇಕು. ಆಮೇಲೆ ಬ್ರಾಹ್ಮಣ ಪೂಜೆಮಾಡಿ ನೀರಾಜನ ಎತ್ತಬೇಕು. ಹೆಣ್ಣುಮಕ್ಕಳಿಗೂ ಇದೇ ಕ್ರಮ.

Scanned by CamScanner

Scanned with CamScanner

೩೩

॥ ಅನ್ನಪ್ರಾಶನಪ್ರಯೋಗಃ ॥

॥ ಶ್ರೀಃ ॥ ಯಜಮಾನಃ ಆಚಮ್ಯ ಪ್ರಾಣಾನಾಯಮ್ಯ ದೇಶ ಕಾಲೌ ಸ್ಮೃತ್ವಾ ॥ ಮಮಾಸ್ಯ ಶಿಶೋರ್ಮಾತೃಗರ್ಭಮಲಪ್ರಾಶುದ್ಧ್ಯನ್ನಾದ್ಯಬ್ರಹ್ಮ-ವರ್ಚಸ ಇಂದ್ರಿಯಾಯುರ್ಲಕ್ಷಣ ಫಲಸಿದ್ಧಿ ಬೀಜಗರ್ಭಸಮುದ್ಭವೈನೋ ನಿಬರ್ಹಣದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಅನ್ನಪ್ರಾಶನಾಖ್ಯಂ ಕರ್ಮ ಕರಿಷ್ಯೇ ಇತಿ ಸಂಕಲ್ಪ್ಯ ॥ ತದಂಗಗಣಪತಿಪೂಜನ ಸ್ವಸ್ತಿವಾಚನಾಭ್ಯುದಯಿಕೇ ಕೃತ್ವಾ ಶಿಶುಮಲಂಕೃತ್ಯ ಪೂಜೋಪಹಾರಾದಿಭಿರಿಷ್ಟದೇವತಾಮಭ್ಯರ್ಚ್ಯ ॥ ತತ್ಪುರತಃ ಸ್ವದಕ್ಷಿಣೇ ಶುಭ್ರವಸ್ತ್ರೋಪರಿ ಮಾತುರುತ್ಸಂಗೇ ಪ್ರಾಙ್ಮುಖೋಪವಿಷ್ಟಸ್ಯ ಶಿಶೋಃ ಪ್ರಥಮಾನ್ನಪ್ರಾಶನಂ ಕಾರಯೇತ್ ॥

ದಧಿಮಧುಘೃತಮಿಶ್ರಮನ್ನಂ ಕಾಂಚನೇ ಕಾಂಸ್ಯೇ ವಾ ಭಾಜನೇ ನಿಕ್ಷಿಪ್ಯ ॥ ಅನ್ನಪತಯ ಇತ್ಯಸ್ಯ ನಲಕೂಬರೋಽನ್ನಪತಿರುಪರಿಷ್ಟಾದ್ಬೃಹತೀ ॥ ಶಿಶೋರನ್ನಪ್ರಾಶನೇ ವಿನಿಯೋಗಃ ॥ ಓಂ ಅನ್ನಪತೇಽನ್ನಸ್ಯನೋ ಧೇಹ್ಯನಮೀ-ವಸ್ಯಶುಷ್ಮಿಣಃ ॥ ಪ್ರಪ್ರದಾತಾರಂ ತಾರಿಷ ಊರ್ಜಂ ನೋಧೇಹಿ ದ್ವಿಪದೇ

ಅನ್ನಪ್ರಾಶನಪ್ರಯೋಗಃ:- ಯಜಮಾನನು ಆಚಮನ ಪ್ರಾಣಾಯಾಮಗಳನ್ನು ಮಾಡಿ ದೇಶಕಾಲಗಳನ್ನು ಸ್ಮರಿಸಿ **"ಮಮಾಸ್ಯ ಶಿಶೋಃ .... ಕರಿಷ್ಯೇ"** ಎಂದು ಸಂಕಲ್ಪಮಾಡಿ ಇದರ ಅಂಗವಾಗಿ ಗಣಪತಿಪೂಜೆ, ಸ್ವಸ್ತಿವಾಚನಾದಿ ಕರ್ಮಗಳನ್ನು ಮಾಡಿ ಮಗುವನ್ನು ಅಲಂಕರಿಸಿ, ಇಷ್ಟದೇವತೆಯನ್ನು ಪೂಜಿಸಿ ಅದರ ಮುಂದೆ ತನ್ನ ಬಲಭಾಗದಲ್ಲಿ ಕುಳಿತ ಪತ್ನಿಯ ಮಡಿಲಲ್ಲಿ ಪೂರ್ವಾಭಿಮುಖವಾಗಿ ಮಗುವನ್ನು ಕುಳ್ಳಿರಿಸಿ ಮೊದಲ ಅನ್ನಪ್ರಾಶನ ಮಾಡಿಸಬೇಕು. ಮೊಸರು, ಜೇನು ಮತ್ತು ತುಪ್ಪವನ್ನು ಬೆರೆಸಿದ ಅನ್ನವನ್ನು ಚಿನ್ನದ ಅಥವಾ ಕಂಚಿನ ಪಾತ್ರೆಯಲ್ಲಿಟ್ಟು **"ಅನ್ನಪತಯೇ...."** ಎಂಬ ಮಂತ್ರವನ್ನು ಹೇಳಿ ಸುವರ್ಣವನ್ನು ಹಿಡಿದಿರುವ ಕೈಯಿಂದ ಮೊದಲನೆಯ ತುತ್ತನ್ನು ಉಣ್ಣಿಸಿ, ಆಮೇಲೆ ಹೊಟ್ಟೆತುಂಬ ಊಟಮಾಡಿಸಬೇಕು. ಬಳಿಕ ಮುಖ ತೊಳೆದು ಮಗುವನ್ನು ನೆಲದ ಮೇಲೆ ಕುಳ್ಳಿರಿಸಿ ಅದರ ಮುಂದೆ ವಸ್ತ್ರ, ಶಸ್ತ್ರ, ಪುಸ್ತಕ, ಲೇಖನೀ, ಚಿನ್ನ, ಬೆಳ್ಳಿ, ಕರಕೌಶಲದ ಇತರ ವಸ್ತು ಮುಂತಾದುವುಗಳನ್ನಿಟ್ಟು ಜೀವಿಕಾ

Scanned by CamScanner
Scanned with CamScanner

ಚತುಷ್ಪದೇ ॥ ಇತಿ ಮಂತ್ರೇಣ ಸಸುವರ್ಣಹಸ್ತೋನ್ನಮಾದಾಯ ಪ್ರಥಮ-ಕವಲಂ ಪ್ರಾಶಯಿತ್ವಾ ಯಥೇಷ್ಟಂ ಭೋಜಯಿತ್ವಾ ಮುಖಂ ಪ್ರಕ್ಷಾಲ್ಯ ಬಾಲಂ ಭೂಮಾವುಪವೇಶ್ಯ ತದಗ್ರೇ ಪುಸ್ತಕಶಸ್ತ್ರವಸ್ತ್ರಾದಿಶಿಲ್ಪಾನಿ ವಿನ್ಯಸ್ಯ ಜೀವಿಕಾಪರೀಕ್ಷಾಂ ಕುರ್ಯಾತ್ ॥ ಶಿಶುಃ ಸ್ವೇಚ್ಛಯಾ ಯತ್ಪ್ರಥಮಂ ಸ್ಪೃಶೇತ್ ಸಾಸ್ಯ ಜೀವಿಕೇತಿ ವಿದ್ಯಾತ್ ॥ ಹೋಮಕರಣಪಕ್ಷೇ ಜಾತಕರ್ಮವತ್ ಶುಚಿನಾಮಾನಮಗ್ನಿಂ ಪ್ರತಿಷ್ಠಾಪ್ಯ ಪ್ರಧಾನಹೋಮಾಂತೇ ಅನ್ನಪ್ರಾಶನಜೀವಿಕಾಪರೀಕ್ಷೇ ॥ ತತಃ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯಯಥಾಶಕ್ತಿ ಬ್ರಾಹ್ಮಣಾನ್ ಭೋಜಯಿತ್ವಾ ದಕ್ಷಿಣಾಂ ದತ್ವಾ ಆಶಿಷೋ ವಾಚಯಿತ್ವಾ ಬಂಧುಭಿಃ ಸಹ ಭುಂಜೀತ ॥

॥ ಇತಿ ಅನ್ನಪ್ರಾಶನ ಸಂಸ್ಕಾರಃ ॥

ಪರೀಕ್ಷೆಯನ್ನು ಮಾಡಬೇಕು. ಮಗುವು ಯಾವ ವಸ್ತುವನ್ನು ಮೊದಲಿಗೆ ಮುಟ್ಟುತ್ತದೋ ಅದನ್ನು ಹೊಂದಿಕೊಂಡು ಅದರ ಮುಂದಿನ ಜೀವನ ರೂಪಿತವಾಗುತ್ತದೆಂದು ತಿಳಿಯಬೇಕು.

ಹೋಮಸಹಿತ ಅನ್ನಪ್ರಾಶನ ಮಾಡುವುದಾದರೆ **"ಶುಚಿ"** ಎಂಬ ಹೆಸರಿನ ಅಗ್ನಿಯನ್ನು ಪ್ರತಿಷ್ಠಾಪಿಸಿ ಇತರ ಎಲ್ಲ ಕ್ರಿಯಾಭಾಗಗಳನ್ನು ಜಾತಕರ್ಮದಲ್ಲಿ ಹೇಳಿದಂತೆ ಮಾಡಿ ಪ್ರಧಾನ ಹೋಮವಾದ ಮೇಲೆ ಅನ್ನಪ್ರಾಶನವನ್ನೂ ಜೀವಿಕಾ ಪರೀಕ್ಷೆಯನ್ನೂ ಮಾಡಬೇಕು. ಆಮೇಲೆ ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಬ್ರಾಹ್ಮಣರಿಗೆ ಭೋಜನ ದಕ್ಷಿಣಾದಿಗಳನ್ನು ಕೊಟ್ಟು ಆಶೀರ್ವಾದ ಪಡೆದು ಬಂಧುಗಳೊಡನೆ ಊಟಮಾಡಬೇಕು.

॥ ಅನ್ನಪ್ರಾಶನಪ್ರಯೋಗ ಸಮಾಪ್ತ ॥

Scanned by CamScanner

Scanned with CamScanner

॥ ವರ್ಧಾಪನ ಸಂಸ್ಕಾರಃ ॥

॥ ಶ್ರೀಃ ॥ ಯಜಮಾನಃ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ ಮಮ (ಸೂನೋರ್ವಾ) ಅಬ್ದಪೂರ್ತಿಜನ್ಮದಿವಸೇ ಆಯುರಭಿವೃದ್ಧಿ-ದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ದೂರ್ವಾಹೋಮಂ ಕರಿಷ್ಯೇ ಇತಿ ಸಂಕಲ್ಪ್ಯ ವಿಧಿವದಗ್ನಿಂ (ಬಲವರ್ಧನನಾಮಕಂ) ಪ್ರತಿಷ್ಠಾಪ್ಯ ಪುನರ್ದೇಶಕಾಲೌ ಸಂಕೀರ್ತ್ಯ ಸಮಿಧಾವಾದಾಯ ಅಸ್ಮಿನ್ ದೂರ್ವಾಹೋಮೇ ದೇವತಾಪರಿಗ್ರಹೇತ್ಯಾದಿ ಚಕ್ಷುಷೀ ಆಜ್ಯೇನೇತ್ಯಂತಮುಕ್ತ್ವಾ ಪ್ರಧಾನದೇವತಾಂ ಮೃತ್ಯುಂಜಯಮ-ಷ್ಟೋತ್ತರಶತಂ ದೂರ್ವಾದ್ರವ್ಯೇಣ ಶೇಷೇಣ ಸ್ವಿಷ್ಟಕೃತಮಿತ್ಯಾದ್ಯಾಜ್ಯ ಭಾಗಾಂತಂ ಕೃತ್ವಾ ದಧಿಮಧುಘೃತಾಕ್ತಂ ವಾ ದೂರ್ವಾತ್ರಯಂ ಗೃಹೀತ್ವಾ ॥ ತ್ರ್ಯಂಬಕ ಮಿತ್ಯಸ್ಯ ವಸಿಷ್ಠೋ ಮೃತ್ಯುಂಜಯಸ್ತ್ರ್ಯಂಬಕೋನುಷ್ಟುಪ್ ॥ ದೂರ್ವಾ ಹೋಮೇ ವಿನಿಯೋಗಃ ॥ ಓಂ ಹೌಂಜೂಂಸಃ । ಓಂ ಭೂರ್ಭುವಃ ಸ್ವಃ ॥ ಓಂ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ ॥ ಉರ್ವಾರು-ಕಮಿವ ಬಂಧನಾನ್ ಮೃತ್ಯೋರ್ಮುಕ್ಷೀಯಮಾಮೃತಾತ್ ॥ ಓಂ ಸ್ವಃ ಭುವಃ ಭೂಃ ॥ ಓಂ ಸಃ ಜೂಂ ಹೌ ಓಂ ॥ ಇತ್ಯನೇನ ಮಂತ್ರೇಣ ಅಷ್ಟೋ-

---

ವರ್ಧಾಪನವಿಧಿಃ:- ಯಜಮಾನನು ಆಚಮನ ಪ್ರಾಣಾಯಾಮ ದೇಶಕಾಲ ಸ್ಮರಣೆಗಳನ್ನು ಮಾಡಿ **"ಮಮ .... ಕರಿಷ್ಯೇ"** ಎಂದು ಸಂಕಲ್ಪಮಾಡಿ **"ಬಲವರ್ಧನ"** ಅಗ್ನಿಯನ್ನು ಪ್ರತಿಷ್ಠಾಪಿಸಿ ಅನ್ವಾಧಾನಾದಿ ಕರ್ಮಗಳನ್ನು ಸ್ಥಾಲೀಪಾಕದಲ್ಲಿ ಹೇಳಿದಂತೆ ಮಾಡಬೇಕು. ಮೊಸರು ಜೇನುತುಪ್ಪ ಸವರಿದ ಮೂರು ಮೂರು ದೂರ್ವೆಗಳ ಒಂದೊಂದು ಕಟ್ಟನ್ನು ತಯಾರಿಸಿ **"ಓಂ ಹೌಂಜೂಂಸಃ...."** **"ತ್ರ್ಯಂಬಕಂ"** ಎಂಬ ಮಂತ್ರದಿಂದ ನೂರಎಂಟು ಆಹುತಿಗಳನ್ನು ಕೊಡಬೇಕು. ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ವಿಧಿವತ್ತಾಗಿ ಗ್ರಹಯಜ್ಞವನ್ನು ಮಾಡಿ ಆಯುಷ್ಯ ಚರುಹೋಮವನ್ನು ಮಾಡಬೇಕು. **"ಆಯುರಭಿವೃದ್ಧಿ ..."** ಎಂದು ಸಂಕಲ್ಪಿಸಿ ಅನ್ವಾಧಾನಾದಿ ಆಜ್ಯಭಾಗಾಂತ ಕರ್ಮಗಳನ್ನು ಮಾಡಿ ಪ್ರಧಾನಹೋಮವನ್ನು ಈ ಮುಂದಿನ ಮಂತ್ರಗಳಿಂದ ಮಾಡುವುದು.

Scanned by CamScanner

ತ್ತರಶತಂ ಹುತ್ವಾ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪಯೇತ್ ॥ ತತೋ ವಿಧಿವದ್ಗೃಹಯಜ್ಞಂ ಕೃತ್ವಾ ಆಯುಷ್ಯಚರುಹೋಮಂ ಸಂಕಲ್ಪಪೂರ್ವಕಂ ಕುರ್ಯಾತ್ ॥ ತತ್ರಾಯಂ ಕ್ರಮಃ ॥ ದೇಶಕಾಲೌ ಸಂಕೀರ್ತ್ಯ ಆಯುರಭಿ-ವೃದ್ಧಿದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಆಯುಷ್ಯಚರುಹೋಮಂ ಕರಿಷ್ಯೇ ॥ ಇತಿ ಸಂಕಲ್ಪ್ಯ ಸ್ಥಂಡಿಲೇ ಬಲವರ್ಧನನಾಮಾನಮಗ್ನಿಂ ಪ್ರತಿಷ್ಠಾಪ್ಯ ಆಯು-ಷ್ಯಚರುಹೋಮೇ ದೇವತಾಪರಿಗ್ರಹಾರ್ಥಮಿತ್ಯಾದಿ ಚಕ್ಷುಷೀ ಆಜ್ಯೇನೇತ್ಯಂತ-ಮುಕ್ತ್ವಾ ವಿಶ್ವಾನ್ ದೇವಾನ್ ದಶವಾರಂ ಅಗ್ನಿಂ ಷೋಡಶವಾರಂ ಜಾತವೇದ-ಸಮಗ್ನಿಮೇಕವಾರಂ ಚರುದ್ರವ್ಯೇಣ ಶೇಷೇಣೇತ್ಯಾದ್ಯಾಜ್ಯ ಭಾಗಾಂತಂ ಕೃತ್ವಾ ॥

ಆ ನೋಭದ್ರಾ ಇತಿ ದಶರ್ಚಸ್ಯ ಸೂಕ್ತಸ್ಯ ಗೌತಮೋ ವಿಶ್ವೇದೇವಾ ಆದ್ಯಾಃ ಪಂಚ ಸಪ್ತಮೀ ಚ ಜಗತ್ಯಃ ಷಷ್ಠೀ ವಿರಾಟ್‌ಸ್ಥಾನಾ ಅಷ್ಟಮ್ಯಾದ್ಯಾ-ಸ್ತಿಸ್ರಃ ತ್ರಿಷ್ಟುಭಃ ॥ ಇಮಂಸ್ತೋಮಮಿತ್ಯಸ್ಯ ಷೋಡಶರ್ಚಸ್ಯಾಂಗಿರಸಃ ಕುತ್ಸೋಗ್ನಿರಾದಿತಶ್ಚತುರ್ದಶ ಜಗತ್ಯಃ ಅಂತ್ಯೇ ದ್ವೇ ತ್ರಿಷ್ಟುಭೌ ॥ ಪೂರ್ವೋ-ದೇವಾ ಭವತ್ವಿತ್ಯಾದಿತ್ರಯಃ ಪಾದಾ ದೇವದೇವತ್ಯಾಃ ॥ ತನ್ನೋ ಮಿತ್ರೋರ್ಧ-ರ್ಚೋಲಿಂಗೋಕ್ತದೇವತೋಗ್ನಿದೇವತಶ್ಚ ॥ ಜಾತವೇದಸ ಇತ್ಯಸ್ಯ ಮಾರೀಚಃ ಕಶ್ಯಪೋ ಜಾತವೇದಾ ಅಗ್ನಿಸ್ತ್ರಿಷ್ಟುಪ್ ॥ ಸರ್ವೇಷಾಂ ಚರುಹೋಮೇ ವಿನಿಯೋಗಃ ॥

ಓಂ ಆನೋಭದ್ರಾಃ ಕ್ರತವೋ ಯಂತು ವಿಶ್ವತೋದಬ್ಧಾಸೋ ಅಪರೀತಾಸಉದ್ಭಿದಃ ॥ ದೇವಾನೋಯಥಾಸದಮಿದ್ವೃಧೇ ಅಸನ್ನಪ್ರಾಯುವೋ ರಕ್ಷಿತಾರೋ ದಿವೇ ದಿವೇ ಸ್ವಾಹಾ ॥ ದೇವಾನಾಂ ಭದ್ರಾಸುಮತಿರ್ಋಜೂಯತಾಂ ದೇವಾನಾಂ ರಾತಿರಭಿನೋ ನಿವರ್ತತಾಂ ॥ ದೇವಾನಾಂ ಸಖ್ಯಮುಪ-ಸೇದಿಮಾವಯಂ ದೇವಾನ ಆಯುಃ ಪ್ರತಿರಂತು ಜೀವಸೇ ಸ್ವಾಹಾ ॥ ೨ ॥ ತಾನ್ ಪೂರ್ವಯಾನಿವಿದಾಹೂಮಹೇವಯಂಭಗಂಮಿತ್ರಮದಿತಿಂ ದಕ್ಷಮ-

Scanned by CamScanner

ಸ್ರಿಧಂ ॥ ಅರ್ಯಮಣಂ ವರುಣಂ ಸೋಮಮಶ್ವಿನಾಸರಸ್ವತೀನಃಸುಭಗಾಮ-
ಯಸ್ಕರತ್ ಸ್ವಾಹಾ ॥ ೩ ॥ ತನ್ನೋ ವಾತೋಮಯೋಭುವಾತುಭೇಷಜಂ
ತನ್ಮಾತಾ ಪೃಥಿವೀ ತತ್ಪಿತಾ ದ್ಯೌಃ ॥ ತದ್ಗ್ರಾವಾಣಃ ಸೋಮಸುತೋಮ.
ಯೋಭುವಸ್ತದಶ್ವಿನಾಶೃಣುತಂಧಿಷ್ಣ್ಯಾಯುವಂ ಸ್ವಾಹಾ ॥ ೪ ॥ ತಮೀಶಾನಂ
ಜಗರಸ್ತಸ್ಥುಷಸ್ಪತಿಂ ಧಿಯಂಜಿನ್ವಮವಸೇಹೂಮಹೇವಯಂ ॥ ಪೂಷಾನೋಯ-
ಥಾವೇದಸಾಮಸದ್ವೃಧೇರಕ್ಷಿತಾಪಾಯುರದಬ್ಧಃ ಸ್ವಸ್ತಯೇ ಸ್ವಾಹಾ ॥ ೫ ॥
ಸ್ವಸ್ತಿನ ಇಂದ್ರೋವೃದ್ಧಶ್ರವಾಃ ಸ್ವಸ್ತಿನಃ ಪೂಷಾ ವಿಶ್ವವೇದಾಃ ॥ ಸ್ವಸ್ತಿನ-
ಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿನೋಬೃಹಸ್ಪತಿರ್ದಧಾತು ಸ್ವಾಹಾ ॥ ೬ ॥
ಪೃಷದಶ್ವಾಮರುತಃ ಪೃಶ್ನಿಮಾತರಃ ಶುಭಂ ಯಾವಾನೋವಿದಥೇಷುಜಗ್ಮಯಃ ॥
ಅಗ್ನಿಜಿಹ್ವಾಮನವಃ ಸೂರಚಕ್ಷಸೋ ವಿಶ್ವೇನೋ ದೇವಾ ಅವಸಾಗಣನ್ನಿಹ
ಸ್ವಾಹಾ ॥ ೭ ॥ ಭದ್ರಂ ಕರ್ಣೇಭಿಃ ಶೃಣುಯಾಮದೇವಾ ಭದ್ರಂಪಶ್ಯೇಮಾಕ್ಷ-
ಭಿರ್ಯಜತ್ರಾಃ ॥ ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿರ್ವ್ಯಶೇಮದೇವಹಿತಂ
ಯದಾಯುಃ ಸ್ವಾಹಾ ॥ ೮ ॥ ಶತಮಿನ್ನುಶರದೋ ಅಂತಿದೇವಾಯತ್ರಾನಶ್ಚ-
ಕ್ರಾಜರಸಂತನೂನಾಂ ॥ ಪುತ್ರಾಸೋಯತ್ರಪಿತರೋ ಭವಂತಿಮಾನೋಮಧ್ಯಾ-
ರೀರಿಷತಾಯುರ್ಗಂತೋಃ ಸ್ವಾಹಾ ॥ ೯ ॥ ಅದಿತಿರ್ದ್ಯೌರದಿತಿರಂತರಿಕ್ಷಮದಿತಿ-
ರ್ಮಾತಾಸಪಿತಾಸಪುತ್ರಃ ವಿಶ್ವೇದೇವಾ ಅದಿತಿಃ ಪಂಚಜನಾಅದಿತಿರ್ಜಾತಮ
ದಿತಿರ್ಜನಿತ್ವಂ ಸ್ವಾಹಾ ॥ ೧೦ ॥ ವಿಶ್ವೇಭ್ಯೋ ದೇವೇಭ್ಯ ಇದಂ ನಮಮ ॥

ಓಂ ಇಮಂಸ್ತೋಮಮರ್ಹತೇಜಾತವೇದಸೇರಥಮಿವಸಂಮಹೇಮಾ-
ಮನೀಷಯಾ ॥ ಭದ್ರಾಹಿನಃ ಪ್ರಮತಿರಸ್ಯಸಂಸದ್ಯಗ್ನೇಸಖ್ಯೇಮಾರಿಷಾ-
ಮಾವಯಂ ತವ ಸ್ವಾಹಾ ॥ ೧ ॥ ಓಂ ಯಸ್ಮೈತ್ವಮಾಯಜಸೇಸಸಾಧತ್ಯನ-

ಈ ಹತ್ತು ಮಂತ್ರಗಳಿಂದ ಹತ್ತು ಆಹುತಿಗಳನ್ನು (ಚರುವಿನ) ಕೊಟ್ಟು "ವಿಶ್ವೇಭ್ಯೋದೇವೇಭ್ಯ ಇದಂ ನಮಮ" ಎಂದು ಹೇಳಬೇಕು.

Scanned by CamScanner

Scanned with CamScanner

ವಾರ್ಕ್ಷೇತಿದಧತೇಸುವೀರ್ಯಂ ॥ ಸತೂತಾವನ್ನೈನಮಶ್ನೋತ್ಯಂಹತಿರಗ್ನೇಸಖ್ಯೇ-ಮಾರಿಷಾಮಾವಯಂ ತವ ಸ್ವಾಹಾ ॥ ೨ ॥ ಓಂ ಶಕೇಮತವಸಮಿಧಂ ಸಾಧಯಾಧಿಯಸ್ತ್ವೇದೇವಾಹವಿರದಂತ್ಯಾಹುತಂ ॥ ತ್ವಮಾದಿತ್ಯಾಂ ಆವಹತಾನ್ ಹ್ಯು ೧ ಹಮಸ್ಯಗ್ನೇಸಖ್ಯೇಮಾರಿಷಾಮಾವಯಂ ತವ ಸ್ವಾಹಾ ॥ ೩ ॥ ಓಂ ಭರಾಮೇಧ್ಮಂಕೃಣವಾಮಾಹವೀಂಷಿತೇಚಿತಯಂತಃ ಪರ್ವಣಾ ಪರ್ವಣಾ ವಯಂ ॥ ಜೀವಾತವೇಪ್ರತರಂ ಸಾಧಯಾಧಿಯೋಗ್ನೇಸಖ್ಯೇಮಾರಿಷಾಮಾ-ವಯಂ ತವ ಸ್ವಾಹಾ ॥ ೪ ॥ ಓಂ ವಿಶಾಂ ಗೋಪಾ ಅಸ್ಯಚರಂತಿ ಜಂತವೋ-ಧಿಪಚ್ಚಯದುತ ಚತುಷ್ಪದಕ್ತುಭಿಃ ॥ ಚಿತ್ರಃಪ್ರಕೇತಉಷಸೋಮಹಾಂಅಸ್ಯ-ಗ್ನೇಸಖ್ಯೇಮಾರಿಷಾಮಾವಯಂ ತವ ಸ್ವಾಹಾ ॥ ೫ ॥ ಓಂ ತ್ವಮಧ್ವರ್ಯು-ರುತಹೋತಾಸಿ ಪೂರ್ವ್ಯಃ ಪ್ರಶಾಸ್ತಾಪೋತಾಜನುಷಾ ಪುರೋಹಿತಃ ॥ ವಿಶ್ವಾ-ವಿದ್ವಾಂ ಆರ್ತ್ವಿಜ್ಯಾಧೀರ ಪುಷ್ಯಸ್ಯಗ್ನೇಸಖ್ಯೇಮಾರಿಷಾಮಾವಯಂ ತವ ಸ್ವಾಹಾ ॥ ೬ ॥ ಓಂ ವಿಶ್ವತಃ ಸುಪ್ರತೀಕಃ ಸದೃಙ್ಙಸಿದೂರೇಚಿತ್ಸಂತಳಿದಿವಾತಿರೋಚಸೇ ॥ ರಾತ್ರ್ಯಾಶ್ಚಿದಂಧೋಽ ಅತಿದೇವಪಶ್ಯಸ್ಯಗ್ನೇಸಖ್ಯೇಮಾರಿಷಾಮಾವಯಂ ತವ ಸ್ವಾಹಾ ॥ ೭ ॥ ಓಂ ಪೂರ್ವೋದೇವಾಭವತು ಸುನ್ವತೋ ರಥೋಽಸ್ಮಾಕಂ-ಶಂಸೋಽ ಅಭ್ಯಸ್ತುದೂಢ್ಯಃ ॥ ತದಾ ಜಾನೀತೋತಪುಷ್ಯತಾವಚೋಗ್ನೇಸಖ್ಯೇ-ಮಾರಿಷಾಮಾವಯಂ ತವ ಸ್ವಾಹಾ ॥ ೮ ॥ ಓಂ ವಧೈರ್ದುಃ ಶಂಸಾಽ ಅಪ-ದೂಢ್ಯೋಜಹಿದೂರೇವಾಯೇಽ ಅಂತಿವಾಕೇಚಿದತ್ರಿಣಃ ॥ ಅಥಾಯಜ್ಞಾಯ- ಗೃಣ-ತೇಸುಗಂಕೃಧ್ಯಗ್ನೇಸಖ್ಯೇಮಾರಿಷಾಮಾವಯಂ ತವ ಸ್ವಾಹಾ ॥ ೯ ॥ ಓಂ ಯದಯುಕ್ತಾಽ ಅರುಷಾ ರೋಹಿತಾರಥೇವಾತಜೂತಾವೃಷಭಸ್ಯೇವತೇರೇವಃ ॥ ಆದಿನ್ವಸಿವನಿನೋಧೂಮಕೇತುನಾಗ್ನೇಸಖ್ಯೇಮಾರಿಷಾಮಾವಯಂ ತವ ಸ್ವಾಹಾ ॥ ೧೦ ॥ ಓಂ ಅಧಸ್ವನಾದುತಬಿಭ್ಯುಃ ಪತತ್ರಿಣೋದ್ರಪ್ಸಾಯತ್ತೇಯ ವಸಾದೋವ್ಯಸ್ಥಿರನ್ ॥ ಸುಗಂತತ್ತೇತಾವಕೇಭ್ಯೋರಥೇಭ್ಯೋಗ್ನೇಸಖ್ಯೇಮಾರಿ-

Scanned by CamScanner

ಷಾಮಾವಯಂ ತವ ಸ್ವಾಹಾ ॥ ೧೧ ॥ ಓಂ ಅಯಂಮಿತ್ರಸ್ಯವರುಣಸ್ಯಧಾಯ-ಸೇವಯಾತಾಂ ಮರುತಾಂ ಹೇಳೋ ಅದ್ಭುತಃ ಮೃಳಾಸುನೋಭೂತ್ವೇಷಾಂ ಮನಃ ಪುನರಗ್ನೇಸಖ್ಯೇಮಾರಿಷಾಮಾವಯಂ ತವ ಸ್ವಾಹಾ ॥ ೧೨ ॥ ಓಂ ದೇವೋದೇವಾನಾಮಸಿಮಿತ್ರೋ ಅದ್ಭುತೋವಸುರ್ವಸೂನಾಮಸಿಚಾರುರಧ್ವರೇ ॥ ಶರ್ಮನ್ ತ್ಸ್ಯಾಮತವಸಪ್ರಥಸ್ತಮೇಗ್ನೇಸಖ್ಯೇಮಾರಿಷಾಮಾವಯಂ ತವ ಸ್ವಾಹಾ ॥ ೧೩ ॥ ಓಂ ತತ್ತೇ ಭದ್ರಂ ಯತ್ಸಮಿದ್ಧಃ ಸ್ವೇದಮೇಸೋಮಾ-ಹುತೋಜರಸೇಮೃಳಯತ್ತಮಃ ॥ ದಧಾಸಿರತ್ನಂ ದ್ರವಿಣಂ ಚ ದಾಶುಷೇಗ್ನೇ-ಸಖ್ಯೇಮಾರಿಷಾಮಾವಯಂ ತವ ಸ್ವಾಹಾ ॥ ೧೪ ॥ ಓಂ ಯಸ್ಮೈತ್ವಂಸುದ್ರವಿ-ಣೋದದಾಶೋನಾಗಾಸ್ತ್ವಮದಿತೇ ಸರ್ವತಾತಾ ॥ ಯಂ ಭದ್ರೇಣಶವಸಾ-ಚೋದಯಾಸಿಪ್ರಜಾವತಾರಾಧಸಾತೇಸ್ಯಾಮ ಸ್ವಾಹಾ ॥ ೧೫ ॥ ಓಂ ಸತ್ವ-ಮಗ್ನೇಸೌಭಗತ್ವಸ್ಯವಿದ್ವಾನ ಸ್ಮಾಕಮಾಯುಃಪ್ರತಿರೇಹದೇವ ॥ ತನ್ನೋಮಿತ್ರೋ-ವರುಣೋಮಾಮಹಂ ತಾಮದಿತಿಃ ಸಿಂಧುಃ ಪೃಥಿವೀ ಉತದ್ಯೌಃ ಸ್ವಾಹಾ-॥೧೬॥ ಅಗ್ನಯ ಇದಂ ನಮಮ ॥ ಇತಿ ಷೋಡಶ ಋಗ್ಭಿಃ .... ಹುತ್ವಾ ॥ ಓಂ ಜಾತವೇದಸೇಸುನವಾಮ ... ತ್ರ್ಯಗ್ನಿಃ ಸ್ವಾಹಾ ॥ ಜಾತವೇದಸೇಗ್ನಯ ಇದಂ ನಮಮ ॥ ಏತೈಃ ಸಪ್ತವಿಂಶತಿ ಮಂತ್ರೈರವದಾನಧರ್ಮೇಣ ಹುತ್ವಾ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯ ॥

ವಾಸುದೇವಂ ನಕ್ಷತ್ರದೇವತಾಂ ಚಂದ್ರಂ ಸ್ವನಕ್ಷತ್ರಂ ವರುಣಂ ಚ ಷೋಡಶೋಪಚಾರೈರಭ್ಯರ್ಚ್ಯ ತತ್ಪ್ರಕಾಶಕಮಂತ್ರೈಃ ಘೃತೇನ ತೇಭ್ಯೋ ಯಥಾ-ಶಕ್ತಿ ಹೋಮಂ ಕೃತ್ವಾ ಗೃಹಯಜ್ಞೋಕ್ತವಿಧಿನಾಭಿಷಿಕ್ತೋ ಯಥಾಶಕ್ತಿ ಗೋಭೂ-ಹಿರಣ್ಯಾದಿ ದತ್ವಾ ದೇವಗುರುಬ್ರಾಹ್ಮಣಸುಹೃದ್ಬಂಧುಜನಪೂಜಾಂಸ್ವವಾಹನಾ-ಯುಧಪೀಠಛತ್ರಪೂಜಾಂ ಕೃತ್ವಾ ವಿಧಿವನ್ನಾಂದೀಶ್ರಾದ್ಧಂ ಚ ಕೃತ್ವಾ ಬ್ರಾಹ್ಮಣಾನ್ ಭೋಜಯಿತ್ವಾ ಶುಭಮುಹೂರ್ತೇ ಗಂಧಾದಿಭಿರಲಂಕೃತ್ಯ ಸ್ರಗ್ಭೂಷಣಧಾರಣ-

Scanned by CamScanner

ಪೂರ್ವಕಂ ಸುವರ್ಣಮಯಕಟಿಸೂತ್ರಂ ನೂತನವಸ್ತ್ರಂ ಚ ಧೃತ್ವಾ ಪತಿಪುತ್ರವತೀಭಿಃ ಸ್ತ್ರೀಭಿರ್ನೀರಾಜಿತೋ ಬ್ರಾಹ್ಮಣಾಶಿಷೋ ಗೃಹೀತ್ವಾ ಸ್ವಯಂ ಹವಿಷ್ಯಾಶೀ ಜಿತೇಂದ್ರಿಯೋ ವರ್ತೇತೇತಿ ॥ ಇದಂ ಸರ್ವಂ ಯಾವದ್ಬಾಲ್ಯಂ ಪಿತ್ರಾದಿಭಿಃ ಕಾರ್ಯಂ ॥ ಪಶ್ಚಾತ್ತು ಪ್ರತಿವರ್ಷಂ ಸ್ವಯಮೇವೇತಿ ॥

॥ ಇತ್ಯಬ್ದಪೂರ್ತಿವಿಧಿಃ ॥

ಈ ಇಪ್ಪತ್ತೇಳು ಮಂತ್ರಗಳನ್ನು ಹೇಳಿ ಅವದಾನಧರ್ಮದಿಂದ ಆಹುತಿಗಳನ್ನು ಕೊಟ್ಟು ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಮುಗಿಸಬೇಕು. ಆಮೇಲೆ ವಾಸುದೇವ, ನಕ್ಷತ್ರದೇವತೆ, ಚಂದ್ರ, ತನ್ನ ನಕ್ಷತ್ರ ಮತ್ತು ವರುಣನನ್ನು ಷೋಡಶೋಪಚಾರಗಳಿಂದ ಪೂಜಿಸಿ ಆಯಾ ದೇವತೆಯ ಮಂತ್ರದಿಂದ ಯಥಾಶಕ್ತಿ ತುಪ್ಪದ ಆಹುತಿಗಳನ್ನು ಕೊಡಬೇಕು. "**ಗೃಹಯಜ್ಞ**"ದಲ್ಲಿ ಹೇಳಿದ ಕ್ರಮದಂತೆ ಅಭಿಷೇಕಮಾಡಿಸಿ, ಯಥಾಶಕ್ತಿ ಗೋ, ಭೂ, ಹಿರಣ್ಯದಾನಗಳನ್ನು ಕೊಟ್ಟು, ದೇವರು, ಗುರುಗಳು, ಬ್ರಾಹ್ಮಣರು, ಸ್ನೇಹಿತರು ಬಂಧುಗಳು ಹಾಗೂ ತನ್ನ ವಾಹನ, ಆಯುಧ, ಪೀಠ, ಛತ್ರಗಳ ಪೂಜೆಮಾಡಿ; ಕ್ರಮದಂತೆ ನಾಂದೀಶ್ರಾದ್ಧವನ್ನೂ ಮಾಡಿ, ಬ್ರಾಹ್ಮಣಸಂತರ್ಪಣೆ ಮಾಡಿಸಿ, ಶುಭಮುಹೂರ್ತದಲ್ಲಿ ಗಂಧಾದಿಗಳಿಂದ ಅಲಂಕರಿಸಿಕೊಂಡು ಹಾರಾದಿ ಆಭರಣಗಳನ್ನು ತೊಟ್ಟು ಚಿನ್ನದ ಉಡುದಾರವನ್ನೂ, ಹೊಸಬಟ್ಟೆಯನ್ನೂ ಧರಿಸಿ, ಸುಮಂಗಲಿಯರಿಂದ ನೀರಾಜನ ಮಾಡಿಸಿ ಆಶೀರ್ವಾದ ಪಡೆದು ಹವಿಷ್ಯಾನ್ನವನ್ನೂ ಸ್ವೀಕರಿಸಿ ಇರಬೇಕು. ಬಾಲ್ಯದಲ್ಲಿ ಈ ಕ್ರಿಯೆಗಳನ್ನು ತಂದೆ ಮೊದಲಾದ ಹಿರಿಯರು ಮಾಡಬೇಕು. ಬಳಿಕ ತಾನೇ ಮಾಡಿಕೊಳ್ಳಬೇಕು.

॥ ಅಬ್ದಪೂರ್ತಿ ಸಮಾಪ್ತ ॥

Scanned by CamScanner

Scanned with CamScanner

॥ ಅನ್ಯತ್ರ ತು ॥ ವರ್ಷಪರ್ಯಂತಂ ಪ್ರತಿಮಾಸಂ ತತಃ ಪ್ರತಿವರ್ಷಂ ಮಾಂಗಲ್ಯಸ್ನಾನಂ ಕೃತ್ವಾ ಕುಮುದಾದಿದೇವತಾ ಸಂಪೂಜ್ಯ ಯಥಾಶಕ್ತಿ ಬ್ರಾಹ್ಮಣಭೋಜನಂ ದಕ್ಷಿಣಾಂ ಚ ದತ್ವಾ ಸುವಾಸಿನೀಭಿರ್ನೀರಾಜಿತೋ ಧೃತ ನೂತನವಸ್ತ್ರೋ ಬ್ರಾಹ್ಮಣೇಭ್ಯಃ ಶಿಶುಭ್ಯಶ್ಚ ಅಪೂಪಪೂರಿತಾಃ ಸಾಜ್ಯಾಃ ಕುಮುದಾದಿಪ್ರೀತಯೇ ಆಯುರ್ವೃದ್ಧಯೇ ಚ ವಾಯನದಾನಾನಿ ದದ್ಯಾತ್ ॥ ಜನ್ಮರ್ಕ್ಷದೇವತಾಪ್ರೀತ್ಯೈಚ ದದ್ಯಾತ್ ॥ ವರ್ಷಾಂತೇ ಚ ಸುದೃಢದ್ವಾದಶವಂಶ-ಪೇಟಿಕಾಸು ಮೋದಕಾದಿ ಖಾದ್ಯಂ ನಿಧಾಯ ನೂತನವಸ್ತ್ರಾಚ್ಛಾದಿತಾಃ ಪೇಟಿ-ಕಾಽಜೀವತ್ಪತಿಪುತ್ರಾಭ್ಯೋ ದತ್ವಾ ತದಾಶಿಷೋ ಗೃಹ್ಣೀಯಾತ್ ॥ ಇದಂ ಸರ್ವಂ ಜೀವಂತೀಮಾತೈವಾಪತ್ಯಾಯುಷೇ ಕುರ್ಯಾತ್ ॥ ಗ್ರಂಥಾಂತರೇ ತು ॥ ಗಣೇಶಂ ಗ್ರಹಾನಿಷ್ಟದೇವತಾಂ ಮಾರ್ಕಂಡೇಯಂ ಚ ಪ್ರಪೂಜ್ಯ ಪ್ರಾರ್ಥ-ಯೇತ್ ॥ ಚಿರಂಜೀವೀ ಯಥಾ ತ್ವಂ ಭೋ ಭವಿಷ್ಯಾಮಿ ತಥಾ ಮುನೇ ॥ ರೂಪವಾನ್ ವಿತ್ತವಾಂಶ್ಚೈವ ಶ್ರಿಯಾಯುಕ್ತಶ್ಚ ಸರ್ವದಾ ॥ ಮಾರ್ಕಂಡೇಯ ನಮಸ್ತೇಽಸ್ತು ಸಪ್ತಕಲ್ಪಾಂತಜೀವನ ॥ ಆಯುರಾರೋಗ್ಯಸಿದ್ಧ್ಯರ್ಥಂ ಪ್ರಸೀದ-ಭಗವನ್ಮುನೇ ॥ ಚಿರಂಜೀವೀ ಯಥಾ ತ್ವಂ ತು ಮುನೀನಾಂ ಪ್ರವರ ದ್ವಿಜ ॥ ಕುರು ತ್ವಂ ಮುನಿಶಾರ್ದೂಲ ತಥಾ ಮಾಂ ಚಿರಜೀವಿನಂ ॥ ಮಾರ್ಕಂಡೇಯ ಮಹಾಭಾಗ ಸಪ್ತಕಲ್ಪಾಂತ ಜೀವಿನಃ ॥ ಆಯುರಾರೋಗ್ಯಸಿದ್ಧ್ಯರ್ಥಮಸ್ಮಾಕಂ ವರದೋ ಭವ ॥ ತತಃ ಸತಿಲಂ ಗುಡಸಮ್ಮಿಶ್ರಮಂಜಲ್ಯರ್ಧಮಿತಂ ಪಯಃ ॥ ಮಾರ್ಕಂಡೇಯಾದ್ವರಂ ಲಬ್ಧ್ವಾ ಪಿಬಾಮ್ಯಾಯುರ್ವಿವರ್ಧಯೇ ॥ ಇತಿ ಸತಿಲ-ಗುಡಮಂಜಲ್ಯರ್ಧಮಿತಂ ಪಯಃ ಪಿಬೇತ್ ॥ ಅಶ್ವತ್ಥಾಮಾ ಬಲಿರ್ವ್ಯಾಸೋ ಹನೂಮಾಂಶ್ಚ ವಿಭೀಷಣಃ ॥ ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಜೀವಿನಃ ॥ ಸಪ್ತೈತಾನ್ಯಃ ಸ್ಮರೇನ್ನಿತ್ಯಂ ಮಾರ್ಕಂಡೇಯಮಥಾಷ್ಟಮಂ ॥ ಜೀವೇದ್ವರ್ಷಶತಂ ಸಾಗ್ರಂ ಸರ್ವವ್ಯಾಧಿವಿವರ್ಜಿತಃ ಇತಿ ವಚನಾದಶ್ವತ್ಥಾಮಾದೀನ್ ಮಾರ್ಕಂ-

---

ಇತರ ಕಡೆಗಳಲ್ಲಿ ಈ ವಿಧಿಯನ್ನು ಈ ಪ್ರಕಾರ ಹೇಳಲಾಗಿದೆ. ಮೊದಲನೆಯ ವರ್ಷ ಪ್ರತಿ ತಿಂಗಳಲ್ಲಿಯೂ ನಂತರ ವರ್ಷಕ್ಕೊಮ್ಮೆ ಸ್ನಾನಮಾಡಿ ಕುಮುದಾದಿ ದೇವತೆಗಳನ್ನು ಪೂಜಿಸಿ ಬ್ರಾಹ್ಮಣರಿಗೆ ಭೋಜನ ದಕ್ಷಿಣೆಗಳನ್ನಿತ್ತು ಸುವಾಸಿನಿಯರಿಂದ ನೀರಾಜನ ಮಾಡಿಸಿ ಹೊಸಬಟ್ಟೆ ಉಟ್ಟು ಬ್ರಾಹ್ಮಣರಿಗೂ ಮಕ್ಕಳಿಗೂ ಸಿಹಿತಿಂಡಿಗಳನ್ನು ಆಯುಷ್ಯಾಭಿವೃದ್ಧಿಗೆ ವಾಯನದಾನಗಳನ್ನೂ ಕೊಡಬೇಕು. ವರ್ಷದ ಕೊನೆಗೆ ಬಿದಿರಿನಿಂದ ತಯಾರಿಸಿದ ಹನ್ನೆರಡು ಪೆಟ್ಟಿಗೆಗಳಲ್ಲಿ ತಿಂಡಿಗಳನ್ನಿಟ್ಟು ಹೊಸಬಟ್ಟೆಗಳಿಂದ ಮುಚ್ಚಿ, ಗಂಡನೂ ಮಕ್ಕಳೂ ಬದುಕಿರುವ ಸುವಾಸಿನಿಯರಿಗೆ ದಾನಮಾಡಿಕೊಡಬೇಕು. ಇನ್ನೂ ಒಂದು ಕ್ರಮ ಹೀಗಿದೆ: ಗಣೇಶ, ಗ್ರಹಗಳು, ಇಷ್ಟದೇವತೆ

Scanned by CamScanner

Scanned with CamScanner

ಡೇಯಾಂತಾನಷ್ಟೌ ಸ್ಮರೇದಿತಿ ॥ ಇದಂ ಚ ವರ್ಧಾಪನಂ ಯದಿ ಜನ್ಮಮಾಸೋಽ- ಸಂಕ್ರಾಂತಃ ತದಾ ಶುದ್ಧಮಾಸ ಏವ ಕಾರ್ಯಂ ॥ ನತ್ವಧಿಕೇ ॥ ವಿಶೇಷಃ ಶಾಸ್ತ್ರಾರ್ಥ ಕೌಸ್ತುಭಾದ್ಯಾಕರೇಭ್ಯೋಽವಗಂತವ್ಯಃ ॥

॥ ಇತಿ ವರ್ಧಾಪನ ವಿಧಿಃ ॥

ಮತ್ತು ಮಾರ್ಕಂಡೇಯನನ್ನು ಪೂಜಿಸಿ, "**ಚಿರಂಜೀವಿ.... ವರದೋ ಭವ**" ಎಂದು ಪ್ರಾರ್ಥಿಸಬೇಕು. ಎಳ್ಳು, ಬೆಲ್ಲಗಳಿಂದ ಕೂಡಿದ ಹಾಲನ್ನು ಅರ್ಧಬೊಗಸೆಯಷ್ಟು ಕುಡಿಸಬೇಕು. ಈ ವರ್ಧಾಪನವಿಧಿಯನ್ನು ಶುದ್ಧಮಾಸದಲ್ಲಿಯೇ ಮಾಡಬೇಕು.

॥ ವರ್ಧಾಪನವಿಧಿ ಸಮಾಪ್ತ ॥

Scanned by CamScanner

Scanned with CamScanner

॥ ಅಕ್ಷರಾರಂಭಸಂಸ್ಕಾರಃ ॥

ಶ್ರೀ ಗಣೇಶಾಯ ನಮಃ ॥ ಕೃತಮಂಗಲಸ್ನಾನಃ ಕೃತನಿತ್ಯಕ್ರಿಯಃ ವಸ್ತ್ರಾಚ್ಛಾದಿತೇ ಪೀಠೇ ಸಪತ್ನೀಕಃ ಪ್ರಾಙ್ಮುಖ ಉಪವಿಶ್ಯ ಕುಮಾರಂ ದಕ್ಷಿಣತ ಉಪವೇಶ್ಯ ॥ ಆಚಮ್ಯ ಪವಿತ್ರಪಾಣಿಃ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಮಮಾಸ್ಯ ಶಿಶೋಃ ಸನ್ನಿಧೌ ಕರಿಷ್ಯಮಾಣ ಸ್ವವಿದ್ಯಾಸೂತ್ರಾಧ್ಯಯನಾಧಿಕಾರಾರ್ಥಂ ಆದ್ಯ ಅಕ್ಷರಸ್ವೀಕಾರಸಂಸ್ಕಾರಂ ಕರಿಷ್ಯೇ ॥ ತತ್ರಾದೌ ನಿರ್ವಿಘ್ನತಾಸಿದ್ಧ್ಯರ್ಥಂ ಗಣಪತಿಪೂಜನಂ ಚ ಕರಿಷ್ಯೇ ॥ ಗಣಪತಿಪೂಜನಂ ಸ್ವಸ್ತಿವಾಚನಂ ಚ ಕೃತ್ವಾ ॥

ಗೋಮಯೋಪಲಿಪ್ತೇ ಗೋಚರ್ಮಮಾತ್ರೇ ಶುಚೌ ಸಮೇ ದೇಶೇ ಸೈಕತಂ ಸ್ಥಲಂ ಕೃತ್ವಾ ಪಲಾಶಶಾಖಯಾ ಮೃದಂ ಖನಿತ್ವಾ ತಸ್ಯಾಂ ವೇದ್ಯಾಂ ಅಕ್ಷತಪುಂಜೇಷು ಸುವರ್ಣಪ್ರತಿಮಾಸು ಉದಕ್ಸಂಸ್ಥಾಃ ಕ್ರಮೇಣ ಸರಸ್ವತೀಂ ಲಕ್ಷ್ಮೀಂ ದೇವೀಂ ಗಣಪತಿಂ ವಿಷ್ಣುಂ ಸವಿದ್ಯಾಸೂತ್ರಕಾರಾಂಶ್ಚ ಅಗ್ನ್ಯುತ್ತಾರಣಪ್ರಾಣ-

---

ಅಕ್ಷರಾರಂಭಸಂಸ್ಕಾರಃ:- ಐದನೆಯ ವರ್ಷದಲ್ಲಿ ಉತ್ತರಾಯಣದಲ್ಲಿ ಅಕ್ಷರಾರಂಭ ಮಾಡಬೇಕು. ಕುಂಭರಾಶಿಯಲ್ಲಿರುವ ಸೂರ್ಯನನ್ನು ವರ್ಜಿಸಬೇಕು. ಶುಕ್ಲಪಕ್ಷದ ದ್ವಿತೀಯಾ, ತೃತೀಯಾ, ಪಂಚಮೀ, ದಶಮೀ, ಏಕಾದಶೀ, ದ್ವಾದಶೀ ಮತ್ತು ತ್ರಯೋದಶೀ, ತಿಥಿಗಳು, ಅಶ್ವಿನೀ, ಮೃಗಶಿರಾ, ಆರ್ದ್ರಾ, ಪುನರ್ವಸು, ಹಸ್ತಾ, ಪುಷ್ಯ, ಚಿತ್ರಾ, ಸ್ವಾತಿ, ಅನುರಾಧಾ, ಶ್ರವಣ, ಧನಿಷ್ಠಾ, ಶತಭಿಷಾ, ರೇವತೀ ನಕ್ಷತ್ರಗಳೂ ಶುಭ, ಮಂಗಳ ಮತ್ತು ಶನಿವಾರಗಳನ್ನು ವರ್ಜಿಸಬೇಕು.

ಸ್ನಾನ ನಿತ್ಯಕರ್ಮಾದಿಗಳನ್ನು ಮಾಡಿ ಯಜಮಾನನು ಬಟ್ಟೆ ಹಾಸಿದ ಪೀಠದ ಮೇಲೆ ಹೆಂಡತಿಯೊಡನೆ ಕುಳಿತು ಕುಮಾರನನ್ನು ದಕ್ಷಿಣಭಾಗದಲ್ಲಿ ಕುಳ್ಳಿರಿಸಬೇಕು. ಆಚಮನ ಮಾಡಿ, ಪವಿತ್ರ ಧರಿಸಿ, ಪ್ರಾಣಾಯಾಮ ಮಾಡಿ, ದೇಶಕಾಲಗಳನ್ನು ಸ್ಮರಿಸಿ, "**ಮಮಾಸ್ಯ .... ಗಣಪತಿಪೂಜನಂ ಚ ಕರಿಷ್ಯೇ**" ಎಂದು ಸಂಕಲ್ಪ ಮಾಡಬೇಕು.

ಗೋಮಯದಿಂದ ಶುದ್ಧಗೊಳಿಸಿದ, ಗೋಚರ್ಮದಷ್ಟು ವ್ಯಾಪಿಸುವ ಸ್ಥಳದಲ್ಲಿ ಹೊಗೆಯನ್ನು ಹಾಕಬೇಕು. ಪಲಾಶದಂಡದಿಂದ ಮಣ್ಣನ್ನು ಅಗೆದು ವೇದಿಯ ನಿರ್ಮಾಣ ಮಾಡಿ ಅದರ ಮೇಲೆ ಅಕ್ಕಿಯ ರಾಶಿಯಲ್ಲಿ ಸುವರ್ಣ ಪ್ರತಿಮೆಗಳನ್ನಿಟ್ಟು ಅವುಗಳನ್ನು ದಕ್ಷಿಣದಿಂದ ಉತ್ತರಕ್ಕೆ ಕ್ರಮವಾಗಿ ಸರಸ್ವತೀ, ಲಕ್ಷ್ಮೀ, ದೇವಿ, ಗಣಪತಿ, ವಿಷ್ಣು ಮತ್ತು ತನ್ನ ವಿದ್ಯೆಯ ಸೂತ್ರಕಾರರನ್ನು ಆವಾಹಿಸಬೇಕು. ಅಥವಾ ಮಧ್ಯದಲ್ಲಿ ಸರಸ್ವತಿ, ದಕ್ಷಿಣದಲ್ಲಿ ವಿಷ್ಣು, ಉತ್ತರದಲ್ಲಿ ಲಕ್ಷ್ಮೀ, ಪಶ್ಚಿಮದಲ್ಲಿ ಗಣಪತಿ, ಪೂರ್ವದಲ್ಲಿ ಸೂತ್ರಕಾರರನ್ನು ಆವಾಹಿಸಬೇಕು.

Scanned by CamScanner

Scanned with CamScanner

ಪ್ರತಿಷ್ಠಾಪೂರ್ವಕಂ ಆವಾಹಯೇತ್ ॥ ಅಥವಾ ಮಧ್ಯೇ ಸರಸ್ವತೀಂ ದಕ್ಷಿಣೇ ವಿಷ್ಣುಂ ಉತ್ತರೇ ಲಕ್ಷ್ಮೀಂ ಚ ಪಶ್ಚಿಮೇ ಗಣಪತಿಂ ಪೂರ್ವೇ ಉದಕ್ಸಂಸ್ಥಾಃ ಸ್ವವಿದ್ಯಾಸೂತ್ರಕಾರಾನ್ ಸ್ವವಿದ್ಯಾನಾಮದೇವತಾಶ್ಚ ಆವಾಹಯೇತ್ ॥

ತತ್ರಾದೌ ಸರಸ್ವತ್ಯಾವಾಹನಂ ॥ ಪಾವಕಾನಃ ಸರಸ್ವತೀತಿ ಮಂತ್ರಸ್ಯ ಮಧುಚ್ಛಂದ ಋಷಿಃ ಸರಸ್ವತೀರ್ದೇವತಾ ಗಾಯತ್ರೀಛಂದಃ ॥ ಸರಸ್ವತ್ಯಾವಾಹನೇ ವಿನಿಯೋಗಃ ॥ ಓಂ ಪಾವಕಾನಃ ಸರಸ್ವತೀವಾಜೇಭಿರ್ವಾಜಿನೀವತೀ ॥ ಯಜ್ಞಂವಷ್ಟುಧಿಯಾವಸುಃ ॥ ಓಂ ಭೂರ್ಭುವಃಸ್ವಃ ಭುವನಮಾತಃ ಸರಸ್ವತಿ ಸರ್ವವಾಙ್ಮಯರೂಪೇಣಾಗಚ್ಛ ಪೂಜಾಂ ಗೃಹಾಣ ಸುಪ್ರಸನ್ನಾ ವರದಾ ಭವ ॥ ಇದಂ ವಿಷ್ಣುರ್ಮೇಧಾತಿರ್ವಿಷ್ಣುರ್ಗಾಯತ್ರೀ ॥ ವಿಷ್ಣ್ವಾವಾಹನೇ ವಿನಿಯೋಗಃ ॥ ಓಂ ಇದಂ ವಿಷ್ಣುರ್ವಿಷ್ಣು ... ॥ ಓಂ ಭೂರ್ಭುವಃ ಸ್ವಃ ವಿಷ್ಣವೇ ನಮಃ ವಿಷ್ಣುಂ ಆವಾಹಯಾಮಿ ॥ ಸಕ್ತುಮಿವೇತ್ಯಸ್ಯ ಬೃಹಸ್ಪತಿರ್ಲಕ್ಷ್ಮೀರ್ದೇವತಾ ತ್ರಿಷ್ಟುಪ್ ಛಂದಃ ॥ ಲಕ್ಷ್ಮ್ಯಾವಾಹನೇ ವಿನಿಯೋಗಃ । ಓಂ ಸುಕ್ತುಮಿವತಿತಉನಾಪುನಂತೋಯತ್ರಧೀರಾಮನಸಾವಾಚಮಕ್ರತ ॥ ಅತ್ರಾಸಖಾಯಃ ಸಖ್ಯಾನಿ ಜಾನತೇ ಭದ್ರೈಷಾಂ ಲಕ್ಷ್ಮೀರ್ನಿಹಿತಾಧಿವಾಚಿ ॥ ಓಂ ಭೂರ್ಭುವಃ ಸ್ವಃ ಲಕ್ಷ್ಮ್ಯೈ ನಮಃ ಲಕ್ಷ್ಮೀಂ ಆವಾಹಯಾಮಿ ॥ ದೇವೀಂ ವಾಚಮಿತಿ ಮಂತ್ರಸ್ಯ ನೇಮಾಭಾರ್ಗವಋಷಿಃವಾಕ್‌ದೇವೀದೇವತಾ ತ್ರಿಷ್ಟುಪ್ ಛಂದಃ ॥ ದೇವ್ಯಾವಾಹನೇ ವಿನಿಯೋಗಃ ॥ ಓಂ ದೇವೀಂ ವಾಚಮಜನಯಂತ ದೇವಾಸ್ತಾಂ ವಿಶ್ವರೂಪಾಃ ಪಶವೋ ವದಂತಿ ॥ ಸಾನೋಮಂದ್ರೇಷಮೂರ್ಜಂ ದುಹಾನಾಧೇನುರ್ವಾಗಸ್ಮಾನುಪಸುಷ್ಟುತೈತು ॥ ಓಂ ಭೂರ್ಭುವಃ ಸ್ವಃ ॥ ದೇವ್ಯೈ ನಮಃ ದೇವೀಂ ಆವಾಹಯಾಮಿ ॥ ಗಣಾನಾಂ ತ್ವಾ ಶೌನಕೋ ಗೃತ್ಸಮದೋ ಗಣಪತಿರ್ಜಗತೀ ॥ ಗಣಪತ್ಯಾವಾಹನೇ ವಿನಿಯೋಗಃ ॥ ಓಂ ಗಣಾನಾಂ ತ್ವಾ....... ॥ ಓಂ ಭೂರ್ಭುವಃ ಸ್ವಃ ॥ ಗಣಪತಯೇ ನಮಃ

Scanned by CamScanner

Scanned with CamScanner

ಗಣಪತಿಂ ಆವಾಸಯಾಮಿ ॥ ಯ ಇಮಾ ಇತ್ಯಸ್ಯ ಭೌವನೋ ವಿಶ್ವಕರ್ಮಾ ಋಷಿಃ । ವಿಶ್ವಕರ್ಮಾ ದೇವತಾ ತ್ರಿಷ್ಟುಪ್ ಛಂದಃ ॥ ವಿಶ್ವಕರ್ಮಾವಾಹನೇ ವಿನಿಯೋಗಃ ॥ ಓಂ ಯ ಇಮಾ ವಿಶ್ವಾಭುವನಾನಿಜುಹ್ವದೃಷಿರ್ಹೋತಾನ್ಯಸೀದತ್ಪಿತಾನಃ ॥ ಸ ಆಶಿಷಾದ್ರವಿಣಮಿಚ್ಛಮಾನಃಪ್ರಥಮಚ್ಛದವರಾಂ ಆವಿವೇಶ ॥ ಓಂ ಭೂರ್ಭುವಃ ಸ್ವಃ ವಿಶ್ವಕರ್ಮಾಣಂ ಆವಾಹಯಾಮಿ ॥ ಮಯೋಭೂರ್ವಾತ ಇತಿ ಮಂತ್ರಸ್ಯ ಶಬರಋಷಿಃ ಮಯೋ ದೇವತಾ ತ್ರಿಷ್ಟುಪ್ ಛಂದಃ ॥ ಮಯಾವಾಹನೇ ವಿನಿಯೋಗಃ ॥ ಓಂ ಮಯೋಭೂರ್ವಾತೋ ಅಭಿವಾತೂಸ್ರಾಊರ್ಜಸ್ವತೀರೋಷಧೀರಾರಿಶಂತಾಂ ॥ ಪೀವಸ್ವತೀರ್ಜೀವಧನ್ಯಾಃ ಪಿಬಂತ್ವವಸಾಯಪದ್ವತೇರುದ್ರಮೃಳ ॥ ಓಂ ಭೂರ್ಭುಃವ ಸ್ವಃ ॥ ಮಯಮುನಯೇ ನಮಃ ॥ ಮಯಮುನಿಂ ಆವಾಹಯಾಮಿ ॥ ಓಂ ಋಗ್ವೇದಾಯ ನಮಃ ಋಗ್ವೇದಂ ಆವಾಹಯಾಮಿ ॥ ಓಂ ಆಶ್ವಲಾಯನಾಯ ನಮಃ ಆಶ್ವಲಾಯನಂ ಆವಾಹಯಾಮಿ ॥ ಶಿಲ್ಪಶಾಸ್ತ್ರಾಯ ನಮಃ ಶಿಲ್ಪಶಾಸ್ತ್ರಂ ಆವಾಹ ಯಾಮಿ ॥ ಇತ್ಯಾದಿನಾ ಆವಾಹ್ಯ ॥

ಓಂ ತದಸ್ತುಮಿ.... ಗೃಹಾವೈ ಪ್ರತಿಷ್ಠಾಸೂಕ್ತಂ ತತ್ಪ್ರತಿಷ್ಠಿತತಮಯಾ ವಾಚಾ ಶಂಸ್ತವ್ಯಂ ತಸ್ಮಾದ್ಯದ್ಯಪಿ ದೂರ ಇವ ಪಶೂಂಲ್ಲಭತೇ ಗೃಹಾನೇವೈನಾನಾಜಿಗಮಿಷತಿಗೃಹಾಹಿ ಪಶೂನಾಂ ಪ್ರತಿಷ್ಠಾಪ್ರತಿಷ್ಠಾ ॥ ಸುಪ್ರತಿಷ್ಠಿತಮಸ್ತು ॥ ಸರಸ್ವತ್ಯಾದ್ಯಾವಾಹಿತದೇವತಾಭ್ಯೋ ನಮಃ ॥ ಇತಿ ಪ್ರಣವಪೂರ್ವಕೇನ ಅರ್ಘ್ಯಪಾದ್ಯಾಚಮನೀಯಗಂಧಪುಷ್ಪಾಕ್ಷತಧೂಪದೀಪಪಾಯಸಗುಡೌದನನೈವೇದ್ಯಸಮರ್ಪಣ ನಮಸ್ಕಾರಾನ್ ಕೃತ್ವಾ ॥

ಹೋಮಂ ಕುರ್ಯಾತ್ ॥ ಅದ್ಯೇತ್ಯಾದಿ ... ಅಸ್ಯ ಶಿಶೋಃ ಅಕ್ಷರ ಸ್ವೀಕಾರಸಂಸ್ಕಾರೇ ಹೋಮಂ ಕರ್ತುಂ ಸ್ಥಂಡಿಲಾದಿ ಕರ್ಮ ಕರಿಷ್ಯೇ ॥ ಶುದ್ಧಮೃದಾ ಈಶಾನ್ಯಾ ... ಇತ್ಯಾದಿ ಅಗ್ನಿಪ್ರತಿಷ್ಠಾಪನಾಂತಂ ಕೃತ್ವಾ ॥ ಶೋಭನನಾಮಾನಮಗ್ನಿಂ ಪ್ರತಿಷ್ಠಾಪ್ಯ ॥ ಸಮಿದ್ವಯಮಾದಾಯ ಅಸ್ಮಿನ್ನನ್ವಾಹಿತೇಗ್ನೌ

Scanned by CamScanner
Scanned with CamScanner

ಇತ್ಯಾದ್ಯಾಘಾರದೇವತೇ ಆಜ್ಯೇನೇತ್ಯಂತಮುಕ್ತ್ವಾ ಅತ್ರ ಪ್ರಧಾನಂ ಸರಸ್ವತೀಂ ವಿಷ್ಣುಂ ಲಕ್ಷ್ಮೀಂ ದೇವೀಂ ಗಣಪತಿಂ ವಿಶ್ವಕರ್ಮಾಣಂ ಮಯಂ ಋಗ್ವೇದಂ ಆಶ್ವಲಾಯನಂ ಶಿಲ್ಪಶಾಸ್ತ್ರಂ ಚ ಏತಾಃ ಪ್ರಧಾನದೇವತಾ ಆಜ್ಯೇನ ಶೇಷೇಣ ಸ್ವಿಷ್ಟಕೃತಮಿತ್ಯಾದಿ ಸದ್ಯೋ ಯಕ್ಷ್ಯೇ ಇತ್ಯಂತಮುಕ್ತ್ವಾ ॥ ವ್ಯಾಹೃತಿಭಿರಗ್ನಾವಾ-ಧಾಯ ॥ ಪರಿಸಮೂಹನಾದ್ಯಾಜ್ಯಭಾಗಾಂತಂ ಕೃತ್ವಾ ॥ ಪೂರ್ವೋಕ್ತ ಆವಾಹನ ಮಂತ್ರೈಃ ಪ್ರಧಾನಹೋಮಂ ಕೃತ್ವಾ ॥ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯ ॥ ಮಾರ್ಜನಾಂತೇ ಭಸ್ಮ ಆದಾಯ ॥ ಗುರುಪೂಜನಂ ಕುರ್ಯಾತ್ ॥

ಅಗ್ನೇರುತ್ತರತಃ ಆಚಾರ್ಯೋ ಪ್ರಾಙ್ಮುಖ ಆಸೀತ ॥ ಗಂಧಾದಿನಾ ಸಂಪೂಜ್ಯ ॥ ಯಥಾಶಕ್ತಿ ವಸ್ತ್ರಾಲಂಕಾರಾದಿಭಿಃ ಪೂಜಯಿತ್ವಾ ॥ ದೇವತಾಂ ಧಾತ್ರೀಂ ರಾಮಂ ಗುರುಂ ಬ್ರಾಹ್ಮಣಾನ್ ಮಾತಾಪಿತರೌ ನಮಸ್ಕೃತ್ಯ ಸರಸ್ವತೀಂ ವಿಘ್ನೇಶಾಚಾರ್ಯಾನ್ ತ್ರಿಃ ಪ್ರದಕ್ಷಿಣೀಕೃತ್ಯ ॥

ಪ್ರತ್ಯಙ್ಮುಖಂ ಆಚಾರ್ಯಾಭಿಮುಖಂ ಶಿಶುಮುಪವೇಶ್ಯ ಮುಹೂರ್ತೇ ಪ್ರಣವಪೂರ್ವಕಮಕ್ಷರಂ ಆರಭೇತ ॥ ತತ ಆಚಾರ್ಯಾಭಿವಂದನಂ ಕೃತ್ವಾ

"ಓಂ ತದಸ್ತು ...... ಸುಪ್ರತಿಷ್ಠಿತಮಸ್ತು" ಎಂದು ಅಕ್ಷತೆಗಳನ್ನು ಹಾಕಬೇಕು. **"ಓಂ ಸರಸ್ವತ್ಯಾದ್ಯಾವಾಹಿತ ... ನಮಃ"** ಎಂದು ಹೇಳುತ್ತ ಷೋಡಶೋಪಚಾರ ಪೂಜೆ ಮಾಡಬೇಕು.

ಹೋಮಕ್ಕೆ ಸ್ಥಾಲೀಪಾಕತಂತ್ರದಲ್ಲಿ ಹೇಳಿದ ಎಲ್ಲ ಕರ್ಮಗಳನ್ನೂ ಮಾಡಿ **"ಅಸ್ಮಿನ್ನನ್ವಾಹಿತೇಗ್ನೌ ... ಸದ್ಯೋ ಯಕ್ಷ್ಯೇ"** ಎಂದು ಹೇಳಿ ವ್ಯಾಹೃತಿಗಳಿಂದ ಸಮಿತ್ತುಗಳನ್ನು ಹೋಮಿಸಬೇಕು. ಆವಾಹನೆ ಮಾಡಿದ ಮಂತ್ರಗಳಿಂದ ಪ್ರಧಾನ ಆಜ್ಯಾಹುತಿಗಳನ್ನು ಕೊಟ್ಟು ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿಮುಗಿಸಿ ಭಸ್ಮಧಾರಣ ಮಾಡಿದ ಮೇಲೆ ಆಚಾರ್ಯ ಪೂಜೆಯನ್ನು ಮಾಡಬೇಕು. ಅಗ್ನಿಯ ಉತ್ತರಭಾಗದಲ್ಲಿ ಪೂರ್ವಕ್ಕೆ ಮುಖಮಾಡಿ ಆಚಾರ್ಯನನ್ನು ಕುಳಿತುಕೊಳ್ಳಿಸಿ ಗಂಧಪುಷ್ಪವಸ್ತ್ರಾದಿಗಳಿಂದ ಅವನನ್ನು ಅರ್ಚಿಸಬೇಕು. ದೇವತೆಗಳಿಗೆ ನಮಸ್ಕರಿಸಿ ಮೂರು ಪ್ರದಕ್ಷಿಣೆ ಬಂದು ಆಚಾರ್ಯನಿಗೆ ಇದಿರಾಗಿ ಪಶ್ಚಿಮಮುಖವಾಗಿ ಮಗುವನ್ನು ಕೂತುಕೊಳ್ಳಿಸಿ, ಮುಹೂರ್ತಕ್ಕೆ ಸರಿಯಾಗಿ 'ಓಂ'ಕಾರದಿಂದ ಆರಂಭಿಸಿ ಅಕ್ಷರಾಭ್ಯಾಸವನ್ನು ಮಾಡಿಸಬೇಕು. ಆಮೇಲೆ ಆಚಾರ್ಯನಿಗೆ ಅಭಿವಾದನ ಮಾಡಿ ಆವಾಹನ ಮಾಡಿದ ಕ್ರಮದಿಂದ

Scanned by CamScanner

ಸರಸ್ವತ್ಯಾದೀನಾವಾಹನಕ್ರಮೇಣೋದ್ವಾಸಯೇತ್ ॥ ಬ್ರಾಹ್ಮಣಾನ್ ಸಂಪೂಜ್ಯ ತೈಃ ವಿದ್ಯಾವೃದ್ಧಿರ್ವಾಚಯೇತ್ ॥ ಪಿತಾ ಅಸ್ಯ ಶಿಶೋರ್ವಿದ್ಯಾಭಿವೃದ್ಧಿರ್ಭವತು ॥ ಬ್ರಾಹ್ಮಣೇಭ್ಯೋ ಭೂಯಸೀಂ ದಕ್ಷಿಣಾಂ ದತ್ವಾ ಆಶಿಷೋ ಗೃಹ್ಣೀಯಾತ್

॥ ಇತಿ ಅಕ್ಷರಾರಂಭ ಸಂಸ್ಕಾರಃ ॥

ಸರಸ್ವತ್ಯಾದಿ ದೇವತೆಗಳನ್ನು ಉದ್ವಾಸನೆ ಮಾಡಬೇಕು. ಬಳಿಕ ತಂದೆಯು **"ಅಸ್ಯ ಶಿಶೋಃ ... ಬ್ರುವಂತು"** ಎಂದು ಹೇಳಬೇಕು. ಬ್ರಾಹ್ಮಣರು **"ವಿದ್ಯಾಭಿ .... ಭವತು"** ಎಂದು ಹೇಳಬೇಕು. ಆಮೇಲೆ ಬ್ರಾಹ್ಮಣರಿಗೆ ದಕ್ಷಿಣೆ ಕೊಟ್ಟು ಅವರಿಂದ ಆಶೀರ್ವಾದ ಪಡೆಯಬೇಕು.

॥ ಅಕ್ಷರಾರಂಭಸಂಸ್ಕಾರ ಸಮಾಪ್ತ ॥

Scanned by CamScanner

Scanned with CamScanner

॥ ಚೂಡಾಕರ್ಮಪ್ರಯೋಗಃ ॥

॥ ಶ್ರೀಃ ॥ ಯಜಮಾನಃ ಕೃತಮಂಗಲಸ್ನಾನಂ ಕುಮಾರಮಲಂಕೃತ್ಯ ಸ್ವದಕ್ಷಿಣಸ್ಥಮಾತ್ರಂಕೇ ಉಪವೇಶ್ಯ ದೇಶಕಾಲೌ ಸ್ಮೃತ್ವಾ ಅಸ್ಯ ಕುಮಾರಸ್ಯ ಬೀಜಗರ್ಭಸಮುದ್ಭವೈನೋನಿಬರ್ಹಣೇನ ಬಲಾಯುರ್ವರ್ಚೋಽಭಿವೃದ್ಧಿದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಚೌಲಾಖ್ಯಂ ಕರ್ಮ ಕರಿಷ್ಯೇ ॥ ತದಂಗತಯಾ ಗಣಪತಿಪೂಜನ ಪುಣ್ಯಾಹವಾಚನ ಮಾತೃಕಾಪೂಜನನಾಂದೀಶ್ರಾದ್ಧಾನಿ ಕರಿಷ್ಯೇ ಇತಿ ಸಂಕಲ್ಪ್ಯ ತಾನಿ ಕೃತ್ವಾ ॥ ಚೌಲಕರ್ಮಕರ್ತುಂ ಸ್ಥಂಡಿಲಾದಿಕರ್ಮ ಕರಿಷ್ಯೇ ಇತ್ಯಾದಿ ಸಭ್ಯನಾಮಾಗ್ನಿಪ್ರತಿಷ್ಠಾಂತಂ ಕೃತ್ವಾ ॥ ಪುನರ್ದೇಶಕಾಲೌ ನಿರ್ದಿಶ್ಯ ಕ್ರಿಯಮಾಣೇ ಚೌಲಕರ್ಮಹೋಮೇ ದೇವತಾಪರಿಗ್ರಹಾರ್ಥಮನ್ವಾಧಾನಂ ಕರಿಷ್ಯೇ ॥ ಅಸ್ಮಿನ್ನನ್ವಾಹಿತೇಽಗ್ನಾವಿತ್ಯಾದಿ ಆಘಾರಾವಾಜ್ಯೇನೇತ್ಯಂತಮುಕ್ತ್ವಾ ॥ ತ್ರಿರಗ್ನಿಂ ಪವಮಾನಂ ಪ್ರಜಾಪತಿಂ ಚೈತಾಃ ಪ್ರಧಾನದೇವತಾ ಆಜ್ಯೇನ ಶೇಷೇಣ ಸ್ವಿಷ್ಟಕೃತಮಿತ್ಯಾದ್ಯುಕ್ತ್ವಾ ಸಮಿದ್ವಯಮಾದಾಯ ಅಗ್ನಾವಾಧಾಯ ಪೂರ್ಣಪಾತ್ರ-ನಿಧಾನಾಂತಂ ಷಟ್‌ಪಾತ್ರಪ್ರಯೋಗಾದಿ ತಂತ್ರಂ ಕೃತ್ವಾ ॥

ಅಗ್ನೇರುದಗಾಸ್ತೀರ್ಣೇಷು ದರ್ಭೇಷು ವ್ರೀಹಿಯವಮಾಷತಿಲೈಃ ಪೃಥಕ್ ಪೃಥಕ್ ಪೂರಿತಾನಿ ನವ ಶರಾವಾಣಿ ಚತ್ವಾರಿ ಕ್ರಮೇಣೈಕೈಕಶಃ ಪ್ರಾಕ್ಸಂಸ್ಥಾನ್ಯಾಸಾದಯೇತ್ ॥ ಮಾತಾ ಪ್ರತ್ಯಗಗ್ನೇರಾಸೀನಸ್ಯ ಕರ್ತುರ್ದಕ್ಷಿ-ಣತಃ ಕೃತ್ವಾಸೀತ ॥ ತತಃ ಕರ್ತಾ ಮಾತುಃ ಪುರಸ್ತಾತ್ ಪಶ್ಚಾಚ್ಚಾಗ್ನೇ-

---

ಚೂಡಾಕರ್ಮಪ್ರಯೋಗಃ- ಯಜಮಾನನು ಸ್ನಾನಮಾಡಿದ ಕುಮಾರನನ್ನು ತನ್ನ ಬಲಬದಿಯಲ್ಲಿ ಕುಳಿತ ಪತ್ನಿಯ ಮಡಿಲಲ್ಲಿ ಕುಳ್ಳಿರಿಸಿ ದೇಶಕಾಲಗಳನ್ನು ಸ್ಮರಿಸಿ **"ಅಸ್ಯ ಕುಮಾರಸ್ಯ ... ನಾಂದೀಶ್ರಾದ್ಧಾನಿ ಕರಿಷ್ಯೇ"** ಎಂದು ಸಂಕಲ್ಪಮಾಡಿ ಅವುಗಳನ್ನು ಮಾಡಿದ ಮೇಲೆ, ಸ್ಥಂಡಿಲವನ್ನು ಮಾಡಿ **"ಸಭ್ಯ"** ಎಂಬ ಅಗ್ನಿಯನ್ನು ಪ್ರತಿಷ್ಠಾಪಿಸಿ ಮೇಲೆ ಹೇಳಿದಂತೆ ಅನ್ವಾಧಾನವನ್ನು ಮಾಡಿ ಆರು ಪಾತ್ರೆಗಳ ಪೂರ್ಣಪಾತ್ರ ಸ್ಥಾಪನೆಯ ಕರ್ಮವನ್ನು ಮಾಡಬೇಕು. ಬಳಿಕ ಅಗ್ನಿಯ ಉತ್ತರಕ್ಕೆ ಹರಡಿದ ದರ್ಭೆಗಳ ಮೇಲೆ ವ್ರೀಹಿ, ಯವ, ಉದ್ದು ಮತ್ತು ಎಳ್ಳುಗಳಿರುವ ನಾಲ್ಕು ಮಣ್ಣಿನ ಪಾತ್ರೆಗಳನ್ನು ಪೂರ್ವಮುಖವಾಗಿ ಇಡಬೇಕು. ಗಂಡನ ಬಲಬದಿಯಲ್ಲಿರುವ ತಾಯಿಯ ಮಡಿಲಲ್ಲಿ ಕುಮಾರನು ಕೂತಿರಬೇಕು. ಅವಳ ಮುಂಭಾಗದಲ್ಲಿ ಎತ್ತಿನ ಸೆಗಣಿ ಮತ್ತು ಶಮೀಪತ್ರಗಳಿರುವ ಒಂದು ಪಾತ್ರೆ ಇರಬೇಕು. ಬ್ರಹ್ಮನು ಇಪ್ಪತ್ತೊಂದು ದರ್ಭೆಗಳ ಒಂದು ಕಟ್ಟನ್ನು ಹಿಡಿದು ಅವಳ ಬಲಬದಿಯಲ್ಲಿ ನಿಲ್ಲಬೇಕು. ತಂದೆಯೇ ನಿಂತರೂ ಆಗಬಹುದು. ಆ ಪಕ್ಷದಲ್ಲಿ ಚೌಲಕರ್ಮವನ್ನು ಬೇರೆ ಯಾರಾದರೊಬ್ಬನು ಮಾಡಬೇಕು.

Scanned by CamScanner

ರಾನಡುಹಗೋಮಯಯುತಂ ಶರಾವಂ ಶಮೀಪರ್ಣಯುತಂ ಶರಾವಂ ಚ ನಿದಧ್ಯಾತ್ ॥ ತತೋ ಬ್ರಹ್ಮಾ ಏಕವಿಂಶತಿ ಕುಶಪಿಂಜೂಲಾನ್ಯಾದಾಯ ಮಾತು-ರ್ದಕ್ಷಿಣತಸ್ತಿಷ್ಠೇತ್ ಪಿತಾ ವಾ ತಥಾ ತಿಷ್ಠೇತ್ ॥ ಅಸ್ಮಿನ್ ಪಕ್ಷೇ ಅನ್ಯ ಏವ ಚೌಲಕರ್ತಾ ॥

ತತಃ ಕುಮಾರೇಣಾನ್ವಾರಬ್ಧಃ ಕರ್ತಾ ಪುರಸ್ತನಾಘಾರಾಂತಂ ಕರ್ಮ ಕೃತ್ವಾ ॥ ಅಗ್ನ ಆಯೂಂಷೀತಿ ತಿಸೃಣಾಂ ಶತಂ ವೈಖಾನಸಾ ಋಷಯಃ ॥ ಅಗ್ನಿಃ ಪವಮಾನೋ ದೇವತಾ ॥ ಗಾಯತ್ರೀ ಛಂದಃ ॥ ಚೂಡಾಕರ್ಮ ಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ಅಗ್ನ ಆಯೂಂಷಿ ಪವಸ ಆಸು-ವೋರ್ಜಮಿಷಂಚನಃ ॥ ಆರೇಬಾಧಸ್ವದುಚ್ಛುನಾಂಸ್ವಾಹಾ ॥ ೧ ॥ ಅಗ್ನಯೇ ಪವಮಾನಾಯೇದಂ ನಮಮ ॥ ಏವಮಗ್ರೇಪಿ ॥ ಓಂ ಅಗ್ನಿರ್ಋಷಿಃ ಪವಮಾನಃ ಪಾಂಚಜನ್ಯಃ ಪುರೋಹಿತಃ । ತಮೀಮಹೇಮಹಾಗಯಂ ಸ್ವಾಹಾ ॥ ೨ ॥ ಅಗ್ನಯೇ ಪವಮಾನಾಯೇದಂ ನಮಮ ॥ ಓಂ ಅಗ್ನೇಪವಸ್ವಸ್ವಪಾ-ಅಸ್ಮೇವರ್ಚಃ ಸುವೀರ್ಯಂ ॥ ದಧದ್ರಯಿಂ ಮಯಿಪೋಷಂ ಸ್ವಾಹಾ ॥ ೩ ॥ ಅಗ್ನಯೇ ... ನಮಮ ॥ ಪ್ರಜಾಪತೇ ಹಿರಣ್ಯಗರ್ಭಃ ಪ್ರಜಾಪತಿಸ್ತ್ರಿಷ್ಟುಪ್ ॥

ಬಳಿಕ ಕುಮಾರನ ಕೈಮುಟ್ಟಿ ಆಘಾರಹೋಮದ ವರೆಗಿನ ಕರ್ಮವನ್ನು ಮಾಡಿ **"ಅಗ್ನ ಆಯೂಂಷಿ"** ಇತ್ಯಾದಿ ಮೂರು ಮಂತ್ರಗಳು ಮತ್ತು **"ಪ್ರಜಾಪತೇ"** ಎಂಬ ಮಂತ್ರಗಳಿಂದ ಆಜ್ಯಾಹುತಿಗಳನ್ನು ಕೊಡಬೇಕು. ಆಮೇಲೆ ಕ್ರಮವಾಗಿ ಬಲ ಮತ್ತು ಎಡಗೈಗಳಲ್ಲಿ ತಣ್ಣೀರು ಮತ್ತು ಬಿಸಿನೀರಿನ ಪಾತ್ರೆಗಳನ್ನು ಹಿಡಿದು ಕುಮಾರನ ಪಶ್ಚಿಮಭಾಗದಲ್ಲಿ ನಿಂತು **"ಓಂ ಉಷ್ಣೇನ .... ನೇಹಿ"** ಈ ಮಂತ್ರವನ್ನು ಹೇಳುತ್ತ ಆ ಎರಡನ್ನೂ ಮತ್ತೊಂದು ಪಾತ್ರೆಯಲ್ಲಿ ಒಟ್ಟಿಗೆ ಹಾಕಬೇಕು. ಅದರಿಂದ ಸ್ವಲ್ಪ ನೀರನ್ನು ತೆಗೆದುಕೊಂಡು ಬೆಣ್ಣೆ ಅಥವಾ ಕೆನೆಮೊಸರನ್ನು ಬೆರೆಸಿ ಕುಮಾರನ ಎಡಕಿವಿಯಿಂದ ಆರಂಭಿಸಿ ಪ್ರದಕ್ಷಿಣಾಕಾರವಾಗಿ **"ಓಂ ಅದಿತಿಃ ...ವರ್ಚಸೇ"** ಎಂಬ ಮಂತ್ರವನ್ನು ಹೇಳುತ್ತ ತಲೆಯನ್ನು ಮೂರು ಬಾರಿ ಒದ್ದೆ ಮಾಡಬೇಕು. ಆಮೇಲೆ ಬ್ರಹ್ಮನು ಕೈಯಲ್ಲಿರುವ ಇಪ್ಪತ್ತೊಂದು ದರ್ಭೆಗಳಿಂದ ಮೂರನ್ನು ತೆಗೆದುಕೊಂಡು **"ಓಂ ಓಷಧೇ ..."** ಎಂಬ ಮಂತ್ರವನ್ನು ಹೇಳುತ್ತ ಪಶ್ಚಿಮಕ್ಕೆ ತುದಿ ಇರುವಂತೆ ಕುಮಾರನ ಬಲಕಿವಿಯ ಭಾಗದಲ್ಲಿಟ್ಟು **"ಓಂ ಸ್ವಧಿತೇ ...."** ಎಂಬ ಮಂತ್ರ ಹೇಳಿ ಅದರ ಮೇಲೆ ತಾಮ್ರದ ಕತ್ತಿಯನ್ನು ಇಡಬೇಕು.

Scanned by CamScanner
Scanned with CamScanner

ಚೂಡಾಕರ್ಮಪ್ರಧಾನಾಜ್ಯ ಹೋಮೇ ವಿನಿಯೋಗಃ ॥ ಓಂ ಪ್ರಜಾಪತೇನತ್ವ ... ೨೨ ಸ್ವಾಹಾ ॥ ಪ್ರಜಾಪತಯ ಇದಂ ನಮಮ ॥

ತತಃ ಶೀತಮುಷ್ಣಂಚೋಭೇ ಜಲೇ ದಕ್ಷಿಣವಾಮಕರಾಭ್ಯಾಂ ಕ್ರಮೇಣ ಪಾತ್ರಯೋಃ ಪೃಥಕ್ ಗೃಹೀತ್ವಾ ಶಿಶೋಃ ಪಶ್ಚಿಮದೇಶೇ ಸ್ಥಿತ್ವಾ ತದುದಕದ್ವಯಮನ್ಯಸ್ಮಿನ್ ಪಾತ್ರೇ ಪಾಣಿಭ್ಯಾಂ ಓಂ ಉಷ್ಣೇನ ವಾಯ ಉದಕೇನೇಹಿ ಇತಿ ಮಂತ್ರೇಣ ಯುಗಪನ್ನಿನೀಯ ತದೇಕದೇಶಂ ಗೃಹೀತ್ವಾ ನವನೀತೇನ ದಧಿದ್ರಪ್ಸೇನ ವಾ ಮಿಶ್ರಯಿತ್ವಾ ಕುಮಾರಸ್ಯ ವಾಮಕರ್ಣಮಾರಭ್ಯ ಪ್ರದಕ್ಷಿಣಂ ಓಂ ಅದಿತಿಃ ಕೇಶಾನ್‌ವಪತ್ವಾಪಉಂದಂತು ವರ್ಚಸೇ ಇತಿ ಮಂತ್ರಾವೃತ್ತ್ಯಾ ಶಿರಃ ತ್ರಿವಾರಂ ಕ್ಲೇದಯೇತ್ ॥ ತತೋ ಬ್ರಹ್ಮಾ ಹಸ್ತಸ್ಥಿತೈಕವಿಂಶತಿ ಕುಶ ಪಿಂಜೂಲಮಧ್ಯೇ ತ್ರೀಣಿ ಕುಶಪಿಂಜೂಲಾನ್ಯಾದಾಯ ॥ ಓಂ ಓಷಧೇ ತ್ರಾಯಸ್ವೈನಂ ಇತಿ ಕುಮಾರಾಭಿಮುಖಂ ಪಶ್ಚಿಮಾಗ್ರಾಣಿ ತಸ್ಯ ದಕ್ಷಿಣೇ ಕೇಶಭಾಗೇ ನಿಧಾಯ ॥ ಓಂ ಸ್ವಧಿತೇ ಮೈನಂ ಹಿಂಸೀಃ ಇತಿ ತೇಷು ತಾಮ್ರಮಯಂ ಕ್ಷುರಂ ನಿಧಾಯ ॥ ಓಂ ಯೇನಾವಪತ್ಸವಿತಾಕ್ಷುರೇಣಸೋಮಸ್ಯರಾಜ್ಞೋವರುಣ-

---

"ಓಂ ಯೇನಾವಪತ್ಸವಿತಾ..." ಈ ಮಂತ್ರವನ್ನು ಹೇಳಿ ಕೂದಲು ಸಹಿತ ದರ್ಭೆಗಳನ್ನು ಕತ್ತರಿಸಿ ಪೂರ್ವಕ್ಕೆ ತುದಿ ಇರುವಂತೆ ಶಮೀಪತ್ರಗಳೊಡನೆ ಸೇರಿಸಿ ತಾಯಿಯ ಕೈಗೆ ಕೊಡಬೇಕು. ಅವಳು ಅವುಗಳನ್ನು ಪೂರ್ವಕ್ಕೆ ತುದಿಗಳಿರುವಂತೆ ಎತ್ತಿನ ಸೆಗಣಿಯಲ್ಲಿಡಬೇಕು. ಹೀಗೆ ಎರಡನೆಯ ಮೂರನೆಯ ಇತ್ಯಾದಿ ಛೇದಾದಿಗಳನ್ನು ಮಂತ್ರಗಳನ್ನು ಉಚ್ಚರಿಸುತ್ತ ಮಾಡಬೇಕು. ಛೇದನಮಂತ್ರ ಮಾತ್ರ ಬೇರೆಯಾಗಿದೆ. (2) **ಯೇನಧಾತಾ** ..... (3) **ಯೇನಭೂಯಃ** ..... (4) ಮೇಲಿನ ಮೂರೂ ಮಂತ್ರಗಳು. ಹೀಗೆ ಉತ್ತರಭಾಗದ ಕೂದಲುಗಳನ್ನು ಮೂರುಬಾರಿ ಕತ್ತರಿಸಬೇಕು. ನಾಲ್ಕನೆಯ ಬಾರಿ ಕೂಡದು. ಆಮೇಲೆ **"ಯತ್‌ಕ್ಷುರೇಣ"** ಎಂಬ ಮಂತ್ರವನ್ನು ಹೇಳಿ ಬುಡದಿಂದ ತುದಿಯ ವರೆಗೆ ಕ್ಷೌರದ ಕತ್ತಿಯನ್ನು ಉಜ್ಜಬೇಕು. ಬಳಿಕ ಕ್ಷೌರಿಕನನ್ನು ಕರೆದು, ಮೊದಲು ಮಿಶ್ರಮಾಡಿದ ತಣ್ಣೀರು, ಬಿಸಿನೀರನ್ನು ಅವನ ಕೈಗೆ ಕೊಟ್ಟು ಸರಿಯಾಗಿ ಕ್ಷೌರಕರ್ಮ ಮಾಡಿಸಬೇಕು. ಕುಲಾಚಾರಕ್ಕೆ ತಕ್ಕಂತೆ ಶಿಖೆಯನ್ನಿಟ್ಟು ಮಾಡಬೇಕು.

ಆಮೇಲೆ ಸ್ನಾನಮಾಡಿಸಿ ಅಲಂಕರಿಸಿ ಕುಮಾರನನ್ನು, ತಾಯಿಯ ಮಡಿಲಲ್ಲಿ ಕೂತುಕೊಳ್ಳಿಸಬೇಕು.

Scanned by CamScanner

Scanned with CamScanner

ಸ್ಯವಿದ್ವಾನ್ ॥ ತೇನಬ್ರಹ್ಮಾಣೋವಪತೇದಮಸ್ಯಾಯುಷ್ಮಾನ್ಜರದಷ್ಟಿರ್ಯ-ಥಾಸತ್ ॥ ಇತಿ ಮಂತ್ರೇಣ ಸಕೇಶಾನಿ ಕುಶಪಿಂಜೂಲಾನಿ ಛಿತ್ವಾ ಪ್ರಾಗಗ್ರಾಣಿ ಕೃತ್ವಾ ಶರಾವಸ್ಥಶಮೀಪರ್ಣೈರೇಕೀಕೃತ್ಯ ಮಾತುಃ ಕರೇ ದದ್ಯಾತ್ ॥ ಸಾ ಚ ತಾನಿ ಸಕೇಶಾನ್ಯಾನಡುಹೇ ಗೋಮಯೇ ಪ್ರಾಗಗ್ರಾಣಿ ನಿದಧ್ಯಾತ್ ॥ ಏವಂ ದ್ವಿತೀಯಾದಿಛೇದನೇಷು ಕುಶಪಿಂಜೂಲನಿಧಾನಾದಿ ಸಮಂತ್ರಕಂ ಕಾರ್ಯಂ ॥ ಛೇದನಮಂತ್ರೇತು ವಿಶೇಷಃ ॥ ಓಂ ಯೇನ ಧಾತಾ ಬೃಹಸ್ಪತೇರಗ್ನೇರಿಂದ್ರಸ್ಯಚಾ-ಯುಷೇವಪತ್ ॥ ತೇನತ ಆಯುಷೇವಪಾಮಿಸುಶ್ಲೋಕ್ಯಾಯ ಸ್ವಸ್ತಯೇ ॥ ಇತಿ ದ್ವಿತೀಯೇ ॥ ಓಂ ಯೇನ ಭೂಯಶ್ಚರಾತ್ರ್ಯಾಂಜ್ಯೋಕ್ಚಪಶ್ಯಾತಿಸೂರ್ಯಂ ॥ ತೇನತಆಯುಷೇ ...... ॥ ಇತಿ ತೃತೀಯೇ ॥ ಚತುರ್ಥೇ ತು ॥ ಯೇನಾವಪತ್ ..... ॥ ಯೇನ ಧಾತಾ ..... ॥ ಯೇನ ಭೂಯಶ್ಚೇತಿ ತ್ರಯೋಪಿ ಮಂತ್ರಾಃ ॥ ಏವಮೇವೋತ್ತರೇ ಭಾಗೇಪಿ ಆದ್ಯಾನಿ ತ್ರೀಣಿ ಛೇದನಾನಿ ಕುರ್ಯಾತ್ ॥ ನ ತು ಸರ್ವಮಂತ್ರೈಶ್ಚತುರ್ಥಂ ॥

ತತಃ ॥ ಓಂ ಯತ್ಕ್ಷುರೇಣಮರ್ಚಯತಾಸುಪೇಶಸಾವಪ್ತಾವಪಸಿಕೇಶಾನ್ ॥ ಶುಂಧಿ ಶಿರೋಮಾಸ್ಯಾಯುಃಪ್ರಮೋಷೀಃ ॥ ಇತಿ ಮಂತ್ರೇಣಾಗ್ರತ ಆರಭ್ಯ ಆಮೂಲಂ ಕ್ಷುರಧಾರಾಂ ನಿಮೃಜ್ಯ ನಾಪಿತಮಾಹೂಯ ಶೀತೋಷ್ಣಾಭಿ-ರದ್ಭಿರಬರ್ಥಂ ಕುರ್ವಾಣೋಽಕ್ಷಿಣ್ವನ್ ಕುಶಲೀಕುರು ಇತಿ ಪ್ರೈಷಣಾನುಶಾಸ್ಯ ತಂ ಪ್ರೈಷಾರ್ಥಂ ಚಾವಬೋಧ್ಯ ನಾಪಿತೇನ ಪೂರ್ವವಶೇಷಿತ ಶೀತೋಷ್ಣಾಂಬು-ಭಿರಾರ್ದ್ರೀಕೃತಂ ಕುಮಾರಶಿರೋ ಯಥಾ ಕುಲಾಚಾರಂ ಕಲ್ಪಿತಶಿಖಂ ವಾಪಯಿತ್ವಾ ಕುಮಾರಂ ಸ್ನಾಪಯಿತ್ವಾ ಭೂಷಯಿತ್ವಾ ಪೂರ್ವವತ್ ಮಾತುರು-ತ್ಸಂಗೇ ಅವಸ್ಥಾಪ್ಯ ॥

ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯ ವ್ರೀಹ್ಯಾದಿಪೂರ್ಣಶರಾವಚ-ತುಷ್ಟಯಂ ನಾಪಿತಾಯ ದದ್ಯಾತ್ ॥ ಭೂಯಸೀಂ ದಕ್ಷಿಣಾಂ ದತ್ವಾ ಬ್ರಾಹ್ಮಣೇಭ್ಯೋ ದಶಸಂಖ್ಯಾತೇಭ್ಯೋ ಭೋಜನಂ ಚ ಸಂಕಲ್ಪ್ಯ ಕರ್ಮ-

Scanned by CamScanner

Scanned with CamScanner

ಸಂಪೂರ್ಣತಾಂ ವಾಚಯಿತ್ವಾ ॥ ಯಸ್ಯಸ್ಮೃತ್ಯೇತ್ಯುಕ್ತ್ವಾ ವಿಷ್ಣುಂ ನಮಸ್ಕೃತ್ಯ ಆಶಿಷೋ ಬ್ರಾಹ್ಮಣೋಕ್ತಾಃ ಸ್ವಯಂ ಕುಮಾರಶ್ಚ ಗೃಹ್ಣೀಯಾತ್ ॥ ಏತತ್ಸರ್ವಂ ಕುಮಾರ್ಯಾ ಅಪಿ ಅಮಂತ್ರಕಂ ॥ ಹೋಮಸ್ತು ಸಮಂತ್ರಕಃ ॥

॥ ಇತಿ ಚೂಡಾಕರ್ಮಸಂಸ್ಕಾರಪ್ರಯೋಗಃ ॥

ಸ್ವಿಷ್ಟಕೃದಾದಿ ಹೋಮಶೇಷವನ್ನು ಮುಗಿಸಿ ಅಕ್ಕಿ ಮೊದಲಾದ ಧಾನ್ಯತುಂಬಿದ ನಾಲ್ಕು ಪಾತ್ರೆಗಳನ್ನು ಕ್ಷೌರಿಕನಿಗೆ ಕೊಡಬೇಕು. ಹತ್ತುಮಂದಿ ಬ್ರಾಹ್ಮಣರಿಗೆ ಭೋಜನ ಭೂರಿದಕ್ಷಿಣೆ ಇತ್ಯಾದಿಗಳನ್ನಿತ್ತು ಅವರಿಂದ ಆಶೀರ್ವಾದ ಪಡೆಯಬೇಕು. ಹೆಣ್ಣುಮಗುವಿಗೂ ಅಮಂತ್ರಕವಾಗಿಯೇ ಈ ಎಲ್ಲ ವಿಧಿಗಳನ್ನೂ ಮಾಡಬೇಕು. ಹೋಮವನ್ನು ಮಾತ್ರ ಮಂತ್ರಪೂರ್ವಕ ಮಾಡಬೇಕು.

॥ ಚೂಡಾಕರ್ಮಪ್ರಯೋಗ ಸಮಾಪ್ತ ॥

Scanned by CamScanner

Scanned with CamScanner

॥ ಉಪನಯನಪೂರ್ವಾಂಗಕೃತ್ಯಂ ॥

॥ ಶ್ರೀಃ ॥ ಉಪನಯನಕರ್ತಾ ಸಪತ್ನೀಕಃ ಕೃತನಿತ್ಯಕ್ರಿಯಃ ಕೃತ-ಮಾಂಗಲಿಕಸ್ನಾನಃ ಸ್ವಲಂಕೃತೋ ಬದ್ಧಶಿಖಃ ದ್ವಿರಾಚಮ್ಯ ಪ್ರಾಣಾನಾಯಮ್ಯ ಇಷ್ಟದೇವತಾಂ ಗುರ್ವಾದೀಂಶ್ಚ ನಮಸ್ಕೃತ್ಯ ದೇಶಕಾಲೌ ಸಂಕೀರ್ತ್ಯ ಮಮೋಪನೇತೃತ್ವಾಧಿಕಾರಸಿದ್ಧಯೇ ಕೃಚ್ಛ್ರತ್ರಯಪ್ರಾಯಶ್ಚಿತ್ತಂ ದ್ವಾದಶಸಹಸ್ರ ಗಾಯತ್ರೀಜಪಂ ಚ ಕರಿಷ್ಯೇ ॥ ಕುಮಾರಃ ಮಮ ಕಾಮಚಾರಕಾಮವಾದ-ಕಾಮಭಕ್ಷಣಾದಿ ದೋಷಾಪನೋದಾರ್ಥಂ ಕೃಚ್ಛ್ರತ್ರಯಪ್ರಾಯಶ್ಚಿತ್ತಂ ಪ್ರತಿಕೃಚ್ಛ್ರಂ ತತ್ಪ್ರತ್ಯಾಮ್ನಾಯಗೋನಿಷ್ಕ್ರಯೀಭೂತ ನಿಷ್ಕಾರ್ಧಪರಿಮಿತರಜತದ್ರವ್ಯದಾನೇನ ಅಥವಾ ಪ್ರತಿಕೃಚ್ಛ್ರಂ ತತ್ಪ್ರತ್ಯಾಮ್ನಾಯಗೋನಿಷ್ಕ್ರಯೀಭೂತಕಾರ್ಷಾಪಣಪರಿ

ಉಪನಯನದ ಪೂರ್ವಭಾವಿಯಾಗಿ ಮಾಡಬೇಕಾದ ಕೃತ್ಯಗಳು:- ಉಪನಯನ ಮಾಡುವ ಕರ್ತನು ಪತ್ನಿಯೊಡನೆ ಸ್ನಾನ ನಿತ್ಯಕರ್ಮಾದಿಗಳನ್ನು ಮಾಡಿ ತನ್ನನ್ನು ಅಲಂಕರಿಸಿ ಶಿಖೆಯನ್ನು ಕಟ್ಟಿ ಎರಡು ಸಲ ಆಚಮನ ಮಾಡಿ, ಪ್ರಾಣಾಯಾಮ ಮಾಡಿ, ಇಷ್ಟದೇವತೆಯನ್ನೂ, ಗುರುಹಿರಿಯರನ್ನೂ ನಮಸ್ಕರಿಸಿ ದೇಶಕಾಲಗಳನ್ನು ಸ್ಮರಿಸಿ **"ಮಮ .... ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ಪುನಃ **"ಕುಮಾರಃ ಮಮ .... ಅಹಮಾಚರಿಷ್ಯೇ" "ಪೂರ್ವತನ ಸಂಸ್ಕಾರಲೋಪೇ .... ಅಹಮಾಚರಿಷ್ಯೇ"** ಎಂದೂ ಸಂಕಲ್ಪ ಮಾಡಬೇಕು. ಉಪನಯನ ಅಧಿಕಾರ ಸಿದ್ಧಿಗೆ ಮೂರು ಕೃಚ್ಛ್ರಗಳನ್ನು ಕೊಡಬೇಕು ಮತ್ತು ಹನ್ನೆರಡುಸಾವಿರ ಗಾಯತ್ರೀಜಪ ಮಾಡಬೇಕು. ಕುಮಾರನಿಗೂ ತನಗೂ ಕಾಮಚಾರ ಕಾಮವಾದ ಇತ್ಯಾದಿ ದೋಷ ಪರಿಹಾರಕ್ಕೆ ಮೂರು ಕೃಚ್ಛ್ರ ಪ್ರಾಯಶ್ಚಿತ್ತ. ಕೃಚ್ಛ್ರವೆಂದರೆ ಸುಮಾರು ಒಂದು ದನದ ಕ್ರಯದ ಕಾಲುಭಾಗ ಇಲ್ಲವೆ ವ್ಯವಹಾರದಲ್ಲಿ ಚಲಾವಣೆಯಲ್ಲಿರುವ ಸಾಕಷ್ಟು ದ್ರವ್ಯ. ಗರ್ಭಾಧಾನಾದಿ ಒಂಭತ್ತು ಸಂಸ್ಕಾರಗಳು ಆಗದಿದ್ದಲ್ಲಿ ಅವುಗಳ ಪ್ರಾಯಶ್ಚಿತ್ತಕ್ಕೆ ಒಂದೊಂದು ಸಂಸ್ಕಾರಕ್ಕೆ ಒಂದೊಂದರಂತೆ **"ಓಂ ಭೂರ್ಭುವ ..."** ಮಂತ್ರದಿಂದ ಆಜ್ಯಾಹುತಿ ಮತ್ತು ಪ್ರತಿಯೊಂದು ಸಂಸ್ಕಾರಕ್ಕೆ ಕಾಲು ಕೃಚ್ಛ್ರ, ಚೌಲಕ್ಕೆ ಅರ್ಧ ಕೃಚ್ಛ್ರದಂತೆ ದ್ರವ್ಯವನ್ನು ಕೊಡಬೇಕು.

ಉಪನಯನದೊಂದಿಗೆ ಚೌಲವನ್ನೂ ಮಾಡುವುದಾದರೆ ಆ ಸಂಕಲ್ಪವನ್ನೂ ಹೇಳಿಕೊಳ್ಳಬೇಕು. ಇಲ್ಲಿ ಆಚಾರವಿದ್ದಂತೆ ಎಣ್ಣೆ ಅರಸಿನಗಳ ಮೇಲಿರುವ ಮಹಾಲಕ್ಷ್ಮಿಯನ್ನು **"ಸಕ್ತುಮಿವ ...."** ಎಂಬ ಮಂತ್ರದಿಂದ ಪೂಜಿಸಬೇಕು. ಆಮೇಲೆ ಗಣಪತಿಪೂಜೆಯಿಂದ ಮಂಡಪದೇವತಾ ಪ್ರತಿಷ್ಠೆಯ ವರೆಗಿನ ಎಲ್ಲ ಕರ್ಮಗಳನ್ನೂ ಮಾಡಬೇಕು. ಗ್ರಹಯಜ್ಞವನ್ನು ಆಮೇಲೆಯೂ ಮಾಡಬಹುದು.

Scanned by CamScanner

Scanned with CamScanner

ಮಿತ ತಾಮ್ರಮೂಲ್ಯವ್ಯಾವಹಾರಿಕದ್ರವ್ಯದಾನೇನ ಅಹಮಾಚರಿಷ್ಯೇ ॥ ಪೂರ್ವತನ-ಸಂಸ್ಕಾರಲೋಪೇಽಸ್ಯ ಗರ್ಭಾಧಾನ ಪುಂಸವನಸೀಮಂತವಿಷ್ಣುಬಲಿ ಜಾತಕರ್ಮ-ನಾಮಕರಣನಿಷ್ಕ್ರಮಣಾನ್ನಪ್ರಾಶನಚೌಲಾಂತಾನಾಂ ನವ ಸಂಸ್ಕಾರಣಾಂ ಕಾಲಾತಿ-ಪಾತಪ್ರತ್ಯಯಪರಿಹಾರದ್ವಾರಾ ಶ್ರೀಪರಮೇಶ್ವರಪ್ರೀತ್ಯಥಂ ಪ್ರತಿಸಂಸ್ಕಾರಂ ಓಂ ಭೂರ್ಭುವಃ ಸ್ವಃ ಸ್ವಾಹೇತ್ಯೇಕೈಕಾಮಾಜ್ಯಾಹುತಿಂ ತಥಾ ಉಕ್ತಸಂಸ್ಕಾರಾಣಾಂ ಲೋಪಜನಿತಪ್ರತ್ಯವಾಯಪರಿಹಾರದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಪ್ರತಿಸಂಸ್ಕಾರಂ ಪಾದಕೃಚ್ಛ್ರಂ ಚೌಲಸ್ಯಾರ್ಧಕೃಚ್ಛ್ರಂ ಪ್ರತಿಪಾದಕೃಚ್ಛ್ರಮರ್ಧಕೃಚ್ಛ್ರಂಚ ತತ್ಪ್ರತ್ಯಾಮ್ನಾಯ-ದ್ರವ್ಯದಾನೇನ ಅಹಮಾಚರಿಷ್ಯೇ ॥ ತಾನಿ ಕೃತ್ವಾ ॥

ಅಸ್ಯ ಕುಮಾರಸ್ಯ ದ್ವಿಜತ್ವಸಿದ್ಧ್ಯಾ ವೇದಾಧ್ಯಯನಾಧಿಕಾರಸಿದ್ಧ್ಯರ್ಥಂ ಶ್ವಃ ಸದ್ಯೋ ವಾ ಉಪನಯನಂ ಕರಿಷ್ಯೇ ॥ ತದಂಗಭೂತಂ ಗಣಪತಿಪೂಜನ-ಪೂರ್ವಕಂ ಸ್ವಸ್ತಿವಾಚನಂ ಮಾತೃಕಾಪೂಜನಂ ನಾಂದೀಶ್ರಾದ್ಧಂ ಮಂಡಪ-ಪ್ರತಿಷ್ಠಾಂ (ಕುಲದೇವತಾಸ್ಥಾಪನಂ) ಪೂಜನಂ ಚ ಕರಿಷ್ಯೇ ॥ ಉಪನಯನೇನ ಸಹ ಚೌಲಕರಣಪಕ್ಷೇ ತದಪಿ ಸಂಕಲ್ಪೇ ಕೀರ್ತಯೇತ್ ॥ ಅತ್ರಾಚಾರಾತ್ತೈಲ ಹರಿದ್ರಾಧಿಷ್ಠಾತ್ರೀಂ ಮಹಾಲಕ್ಷ್ಮೀಂ ಸುಕ್ತುಮಿವೇತಿ ಸಂಪೂಜ್ಯ ತಂತ್ರೇಣ ಚ ಗಣಪತಿಪೂಜನ ಸ್ವಸ್ತಿವಾಚನ ಮಾತೃಕಾಪೂಜನ ನಾಂದೀಶ್ರಾದ್ಧಗೃಹಯಜ್ಞಾ-ದೀನಿ ಕೃತ್ವಾ ಮಂಡಪದೇವತಾಪ್ರತಿಷ್ಠಾ ಕಾರ್ಯಾ ॥ ಅನಂತರಂ ವಾ ಗೃಹಯಜ್ಞಃ ಕಾರ್ಯಃ ॥

Scanned by CamScanner

॥ ಉಪನಯನಸಂಸ್ಕಾರಃ ॥

॥ ಅಥಾಪರೇದ್ಯುಃ ಕೃತನಿತ್ಯಕ್ರಿಯಃ ಕೃತಮಂಗಲಸ್ನಾನಮಲಂಕೃತಂ ಕುಮಾರಂ ಮಾತುರುತ್ಸಂಗೇ ಭೋಜಯಿತ್ವಾ ಕರ್ತಾ ದೇಶಕಾಲೌ ಸಂಕೀರ್ತ್ಯ ಅಸ್ಯ ಕುಮಾರಸ್ಯ ಉಪನಯನಂ ಕರ್ತುಂ ತತ್ಪ್ರಾಚ್ಯಾಂಗಭೂತಂ ವಾಪನಾದಿ ಕರಿಷ್ಯೇ ಇತಿ ಸಂಕಲ್ಪ್ಯ ಕೃತವಾಪನಂ ಸ್ನಾಪಿತಂ ಬದ್ಧಶಿಖಂ ಕುಮಾರಂ ಮಂಗಲತಿಲಕಂ ಕುರ್ಯುಃ ॥ ಅತ್ರ ಮೌಹೂರ್ತಿಕಂ ಸಂಪೂಜ್ಯ ತದುಕ್ತೇ ಶುಭಮುಹೂರ್ತೇ ಆಚಾರ್ಯೋ ವೇದ್ಯಾಂ ಪ್ರಾಙ್ಮುಖ ಉಪವಿಶ್ಯ ವಟುಂ ಪ್ರತ್ಯಙ್ಮುಖಂ ಸ್ಥಾಪಯೇತ್ ॥ ಅಂತಃಪಟಂ ಧೃತ್ವಾ (ಮಂಗಲಾಷ್ಟಕಪದ್ಯ-ಪಾಠಪುರಸ್ಸರಂ) ತಂ ಸ್ವಸಮೀಪಮಾನೀಯ ತನ್ಮುಖಂ ಸಮ್ಯಗೀಕ್ಷೇತ ॥ ಕೃತನಮಸ್ಕಾರಂ ಚ ತಂ ಸ್ವಾಂಕೇ ಕುರ್ವೀತ ॥ ಅಥಾಚಾರತಃ ಯೇ ಯಜ್ಞೇನೇತಿ ಸೂಕ್ತೇನ ಬೃಹಸ್ಪತೇ ಪ್ರಥಮಮಿತ್ಯನೇನ ತದಸ್ತು ಗೃಹಾವ್ಣೈ ಇತಿ ಮಂತ್ರೈ ರ್ಬ್ರಾಹ್ಮಣಾ ಉಭಯೋಃ ಶಿರಸಿ ಹರಿದ್ರಾದಿಯುಕ್ತಾಕ್ಷತಾನ್ ಕ್ಷಿಪೇಯುಃ ॥

ತತಸ್ತಂ ಸ್ವದಕ್ಷಿಣತ ಉಪವೇಶ್ಯ ಸ್ಥಂಡಿಲೋಪಲೇಪನಾದಿ ಸಮುದ್ಭವ-ನಾಮಾಗ್ನಿಪ್ರತಿಷ್ಠಾಂತಂ ಕೃತ್ವಾ ॥ ಸಮಿದ್ದ್ವಯದಾಯ ಕ್ರಿಯಮಾಣೇ ಉಪನಯನಹೋಮೇ ದೇವತಾಪರಿಗ್ರಹಾರ್ಥಮನ್ವಾಧಾನಂ ಕರಿಷ್ಯೇ ॥

ಉಪನಯನ ಸಂಸ್ಕಾರ:– ಅದೇ ದಿನ ಅಥವಾ ಮರುದಿನ ನಿತ್ಯ ಕರ್ಮಾದಿಗಳನ್ನು ಮುಗಿಸಿ ಸ್ನಾನಮಾಡಿ ಅಲಂಕೃತನಾದ ಕುಮಾರನನ್ನು ತಾಯಿಯ ಮಡಿಲಲ್ಲಿ ಕುಳ್ಳಿರಿಸಿ ಊಟಮಾಡಿಸಬೇಕು. ಆಮೇಲೆ ದೇಶಕಾಲ ಸ್ಮರಣೆಮಾಡಿ **"ಅಸ್ಯ ಕುಮಾರಸ್ಯ ... ಕರಿಷ್ಯೇ"** ಎಂದು ಸಂಕಲ್ಪಿಸಿ, ಅವನಿಗೆ ಕ್ಷೌರ ಮಾಡಿಸಿ, ಸ್ನಾನವಾದ ಮೇಲೆ ತಿಲಕವನ್ನಿಡಬೇಕು. ಆಮೇಲೆ ಜ್ಯೋತಿಷ್ಕರನ್ನು ಅರ್ಚಿಸಿ ಅವರು ಹೇಳಿದ ಶುಭ ಮುಹೂರ್ತದಲ್ಲಿ ಯಜಮಾನನು ಪೂರ್ವಮುಖವಾಗಿ ಕುಳಿತು ವಟುವನ್ನು ಪಶ್ಚಿಮಮುಖವಾಗಿ ನಿಲ್ಲಿಸಬೇಕು. ಇಬ್ಬರ ಮಧ್ಯದಲ್ಲಿ ಅಂತಃಪಟವನ್ನು ಹಿಡಿದು ಮಂಗಲಾಷ್ಟಕವನ್ನು ಹೇಳಿದ ನಂತರ ಅವನನ್ನು ಸಮೀಪಕ್ಕೆ ಬರಮಾಡಿ ಅವನ ಮುಖವನ್ನು ಸರಿಯಾಗಿ ನೋಡಬೇಕು. ನಮಸ್ಕಾರ ಮಾಡಿದ ಅವನನ್ನು ತನ್ನ ಮಡಿಲಲ್ಲಿ ಕುಳ್ಳಿರಿಸಬೇಕು. ಆಗ ಬ್ರಾಹ್ಮಣರು **"ಯೇ ಯಜ್ಞೇನ" "ಬೃಹಸ್ಪತೇ ಪ್ರಥಮಂ" "ತದಸ್ತು ಮಿತ್ರಾ" "ಗೃಹಾವ್ಣೈ"** ಇತ್ಯಾದಿ ಮಂತ್ರಗಳನ್ನು ಹೇಳಿ ಅವರ ತಲೆಯ ಮೇಲೆ ಕುಂಕುಮಾಕ್ಷತೆಗಳನ್ನು ಹಾಕಬೇಕು.

ಆ ಮೇಲೆ ಕುಮಾರನನ್ನು ತನ್ನ ಬಲಭಾಗದಲ್ಲಿ ಕುಳ್ಳಿರಿಸಿ ಸ್ಥಂಡಿಲಸಂಸ್ಕಾರಗಳನ್ನು ಮಾಡಿ **"ಸಮುದ್ಭವ"** ಎಂಬ ಹೆಸರಿನ ಅಗ್ನಿಯನ್ನು ಪ್ರತಿಷ್ಠಾಪಿಸಿ ಅನ್ವಾಧಾನ ಮಾಡಬೇಕು. ಆಜ್ಯಸಂಸ್ಕಾರದ ವರೆಗಿನ ಎಲ್ಲ ಕರ್ಮಗಳನ್ನು ಮಾಡಿದ ಬಳಿಕ ಆಚಾರ್ಯನು ಅಗ್ನಿಯ

(ತಂಡಿ)

Scanned by CamScanner

Scanned with CamScanner

ಅಸ್ಮಿನ್ನನ್ವಾಹಿತೇಗ್ನಾವಿತ್ಯಾಘಾರಾವಾಜ್ಯೇನೇತ್ಯಂತಮುಕ್ತ್ವಾ ॥ ಅತ್ರ ಪ್ರಧಾನಂ ತ್ರಿರಗ್ನಿಂ ಪವಮಾನಂ ಪ್ರಜಾಪತಿಂ ಚಾಜ್ಯೇನ ಶೇಷೇಣ ಸ್ವಿಷ್ಟಕೃತಮಿತ್ಯಾದ್ಯಾಜ್ಯ-ಸಂಸ್ಕಾರಾಂತಂ ಕೃತ್ವಾ ॥

(ತಂದೆ) ಆಚಾರ್ಯೋ ಅಗ್ನೇಃ ಪಶ್ಚಾದವಸ್ಥಾಪ್ಯ ಕುಮಾರಂ ಪ್ರಾಙ್ಮುಖಮವ-ಸ್ಥಾಪ್ಯ ಕೌಪೀನಾರ್ಥಂ ತ್ರಿವೃತ್ತಂ ಕಾರ್ಪಾಸಸೂತ್ರಂ ಕಟಾವಾಬಧ್ಯ ಕೌಪೀನಂ ಪರಿಧಾಪ್ಯ ॥ ಯುವಂ ವಸ್ತ್ರಾಣೀತ್ಯಸ್ಯಾಚಥ್ಯೋದೀರ್ಘತಮಾಮಿತ್ರಾವರುಣೌ ತ್ರಿಷ್ಟುಪ್ ॥ ವಾಸೋಧಾರಣೇ ವಿನಿಯೋಗಃ ॥ ಓಂ ಯುವಂ ವಸ್ತ್ರಾಣಿಪೀವ-ಸಾವಸಾಥೇಯುವೋರಚ್ಛಿದ್ರಾಮಂತವೋಹಸರ್ಗಾಃ ॥ ಅವಾತಿರತಮನೃತಾನಿ-ವಿಶ್ವಋತೇನಮಿತ್ರಾವರುಣಾಸಚೇಥೇ । ಇತಿ ಮಂತ್ರೇಣ ಶುಕ್ಲಂ ವಾಸಃ ಪರಿ-ಧಾಪ್ಯ ಅನ್ಯೇನ ಕಾಷಾಯವಾಸಸಾ ತೇನೈವ ಮಂತ್ರೇಣ ತಥೈವ ಪ್ರಾವಾರ-ಯೇತ್ ॥ ಮಿತ್ರಸ್ಯ ಚಕ್ಷುರಿತ್ಯಸ್ಯ ವಾಮದೇವೋಽಜಿನಂ ತ್ರಿಷ್ಟುಪ್ ॥ ಅಜಿನಧಾರಣೇ ವಿನಿಯೋಗಃ ॥ ಓಂ ಮಿತ್ರಸ್ಯಚಕ್ಷುರ್ಧರುಣಂ ಬಲೀಯಸ್ತೇಜೋ-ಯಶಸ್ವೀ ಸ್ಥವಿರಂ ಸಮಿದ್ಧಂ ॥ ಅನಾಹನಸ್ಯಂ ವಸನಂ ಜರಿಷ್ಣು ಪರೀದಂ ವಾಜ್ಯಜಿನಂ ದಧಸ್ವ ॥ ಇತ್ಯಜಿನಂಧಾರಾಯಿತ್ವಾ ॥

ಯಜ್ಞೋಪವೀತಧಾರಣಂ:- ತತೋ ಗಾಯತ್ರ್ಯಾ ದಶಕೃತ್ವೋಪಮಂತ್ರಿ-ತಾದ್ಭಿರುಪವೀತಂ ಪ್ರೋಕ್ಷ್ಯ ಧಾರಯೇತ್ ॥ ಯಜ್ಞೋಪವೀತಮಿತಿ ಮಂತ್ರಸ್ಯ

ಪಶ್ಚಿಮಭಾಗದಲ್ಲಿ ಕುಳಿತುಕೊಂಡು ವಟುವನ್ನು ಪೂರ್ವಕ್ಕೆ ಮುಖಮಾಡಿ ನಿಲ್ಲಿಸಿ, ಕೌಪೀನ ಧಾರಣೆ ಮಾಡುವುದಕ್ಕೆ ಹತ್ತಿಯ ದಾರವನ್ನು ಮೂರು ಸುತ್ತು ಸೊಂಟಕ್ಕೆ ತೊಡಿಸಬೇಕು. ಆಮೇಲೆ ಕೌಪೀನವನ್ನು ಉಡಿಸಬೇಕು. **"ಯುವಂ ವಸ್ತ್ರಾಣಿ"** ಎಂಬ ಮಂತ್ರವನ್ನು ಹೇಳಿ ಶುಭ್ರವಾದ ಬಿಳಿಬಟ್ಟೆಯನ್ನು ಉಡಿಸಬೇಕು. ಅದೇ ಮಂತ್ರದಿಂದ ಮತ್ತೊಂದು ಕಾಷಾಯವಸ್ತ್ರವನ್ನು ಉತ್ತರೀಯದಂತೆ ಹೊದಿಸಬೇಕು. **"ಮಿತ್ರಸ್ಯಚಕ್ಷು"** ಎಂಬ ಮಂತ್ರವನ್ನು ಹೇಳಿ ಕೃಷ್ಣಾಜಿನವನ್ನು ತೊಡಿಸಬೇಕು.

ಯಜ್ಞೋಪವೀತವನ್ನು ಧರಿಸುವುದು:- ಹತ್ತು ಗಾಯತ್ರಿಗಳನ್ನು ಹೇಳಿ, ಅಭಿಮಂತ್ರಿಸಿದ ನಂತರ ನೀರಿನಿಂದ ಪ್ರೋಕ್ಷಿಸಿ, **"ಯಜ್ಞೋಪವೀತಂ ಪರಮಂ ಪವಿತ್ರಂ..."** ಎಂಬ ಮಂತ್ರವನ್ನು ಹೇಳಿಸಿ, ಬಲತೋಳನ್ನು ಮೇಲೆತ್ತಿ ಯಜ್ಞೋಪವೀತವನ್ನು ತೊಡಿಸಬೇಕು. ಆಮೇಲೆ

Scanned by CamScanner

ಪರಬ್ರಹ್ಮಪರಮಾತ್ಮಾ ತ್ರಿಷ್ಟುಪ್ ॥ ಶ್ರೌತಸ್ಮಾರ್ತಕರ್ಮಾನುಷ್ಠಾನಸಿದ್ಧ್ಯರ್ಥಂ ಯಜ್ಞೋಪವೀತಧಾರಣೇ ವಿನಿಯೋಗಃ ॥ ಓಂ ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ ॥ ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ॥ ಇತಿ ಮಂತ್ರಂ ವಾಚಯಿತ್ವಾ ದಕ್ಷಿಣಬಾಹುಮುದ್ಧಾರ್ಯ ಉಪವೀತಂ ಧಾರಯಿತ್ವಾ ಕುಮಾರ ಮಾತ್ಮನೋಽಗ್ನೇಶ್ಚ ಮಧ್ಯೇನ ಯಜ್ಞಪಾತ್ರೋತ್ತರಭಾಗಂ ಗಮಯಿತ್ವಾ ತತ್ರ ವಿಧಿವದಾಚಮ್ಯ ॥

ಕುಮಾರನನ್ನು ತನ್ನ ಮತ್ತು ಅಗ್ನಿಯ ಮಧ್ಯಭಾಗದಿಂದ ಉತ್ತರಕ್ಕೆ ಕೊಂಡೊಯ್ದು ಅಲ್ಲಿ ಕುಳ್ಳಿರಿಸಿ ವಿಧಿಪ್ರಕಾರ ಆಚಮನ ಮಾಡಿಸಬೇಕು.

ಆಚಮನ ವಿಧಿ:- 1. ಕೇಶವಾಯ ಸ್ವಾಹಾ. 2. ನಾರಾಯಣಾಯ ಸ್ವಾಹಾ 3. ಮಾಧವಾಯ ಸ್ವಾಹಾ. ಈ ಮೂರು ನಾಮಗಳನ್ನು ಹೇಳಿ ನೀರು ಕುಡಿಸಬೇಕು. 4. ಗೋವಿಂದಾಯ ನಮಃ, ಬಲಗೈಯನ್ನು ತೊಳೆಯುವುದು. 5. ವಿಷ್ಣವೇ ನಮಃ, ಕೆಳತುಟಿಯನ್ನು ಉಜ್ಜುವುದು. 6. ಮಧುಸೂದನಾಯ ನಮಃ, ಮೇಲಿನ ತುಟಿಯನ್ನು ಉಜ್ಜುವುದು 7. ತ್ರಿವಿಕ್ರಮಾಯ ನಮಃ, ಎರಡೂ ತುಟಿಗಳನ್ನು ಒಟ್ಟಾಗಿ ಉಜ್ಜುವುದು. 8. ವಾಮನಾಯ ನಮಃ, ಕೈಯಲ್ಲಿ ನೀರನ್ನು ತೆಕ್ಕೊಂಡು ಅಭಿಮಂತ್ರಿಸುವುದು. 9. ಶ್ರೀಧರಾಯ ನಮಃ, ಎಡಗೈಯನ್ನು ತೊಳೆಯುವುದು. 10. ಹೃಷೀಕೇಶಾಯ ನಮಃ, ಬಲ ಕಾಲನ್ನು ಮುಟ್ಟು ವುದು 11. ಪದ್ಮನಾಭಾಯ ನಮಃ, ಎಡ ಕಾಲನ್ನು ಮುಟ್ಟುವುದು. 12. ದಾಮೋದರಾಯ ನಮಃ, ತಲೆಯ ಮೇಲೆ ನೀರನ್ನು ಪ್ರೋಕ್ಷಿಸುವುದು. 13. ಸಂಕರ್ಷಣಾಯ ನಮಃ, ಬೆರಳುಗಳ ತುದಿಯಿಂದ ಮೇಲಿನ ತುಟಿಯನ್ನು ಮುಟ್ಟುವುದು. 14. ವಾಸುದೇವಾಯ ನಮಃ, ಹೆಬ್ಬೆರಳು ಮತ್ತು ತರ್ಜನಿಗಳಿಂದ ಬಲಮೂಗನ್ನು ಮುಟ್ಟುವುದು. 15. ಪ್ರದ್ಯುಮ್ನಾಯ ನಮಃ, ಅಂಗುಷ್ಠ ತರ್ಜನಿಗಳಿಂದ ಎಡಮೂಗನ್ನು ಮುಟ್ಟುವುದು. 16. ಅನಿರುದ್ಧಾಯ ನಮಃ, ಅಂಗುಷ್ಠ ಅನಾಮಿಕೆಗಳಿಂದ ಬಲಗಣ್ಣನ್ನು ಮುಟ್ಟುವುದು. 17. ಪುರುಷೋತ್ತಮಾಯ ನಮಃ, ಅಂಗುಷ್ಠ ಅನಾಮಿಕೆಗಳಿಂದ ಎಡ ಕಣ್ಣನ್ನು ಮುಟ್ಟುವುದು. 18. ಅಧೋಕ್ಷಜಾಯ ನಮಃ, ಅಂಗುಷ್ಠ ಕನಿಷ್ಠಿಕೆಗಳಿಂದ ಬಲ ಕಿವಿ ಮುಟ್ಟುವುದು. 19. ನಾರಸಿಂಹಾಯ ನಮಃ, ಅಂಗುಷ್ಠ ಕನಿಷ್ಠಿಕೆಗಳಿಂದ ಎಡ ಕಿವಿ ಮುಟ್ಟುವುದು. 20. ಅಚ್ಯುತಾಯ ನಮಃ, ಅಂಗುಷ್ಠ ಕನಿಷ್ಠಿಕೆಗಳಿಂದ ನಾಭಿಸ್ಪರ್ಶ, 21. ಜನಾರ್ದನಾಯ ನಮಃ, ಕೈಯ ತಳದಿಂದ ಹೃದಯಸ್ಪರ್ಶ. 22. ಉಪೇಂದ್ರಾಯ ನಮಃ, ಕೈಯಿಂದ ಹಣೆಯನ್ನು ಮುಟ್ಟುವುದು. 23. ಹರಯೇ ನಮಃ, ಬೆರಳ ತುದಿಗಳಿಂದ ದಕ್ಷಿಣ ಭುಜಸ್ಪರ್ಶ. 24. ಶ್ರೀಕೃಷ್ಣಾಯ ನಮಃ, ಬೆರಳ ತುದಿಗಳಿಂದ ಎಡಭುಜಸ್ಪರ್ಶ.

Scanned by CamScanner

Scanned with CamScanner

ಪ್ರಧಾನ ಹೋಮ:- ಪುನಸ್ತಥೈವಾನೀಯ ಸ್ವದಕ್ಷಿಣತ ಉಪವೇಶ್ಯ ॥ ಬರ್ಹಿರಾಸ್ತರಣಾದ್ಯಾಘಾರಹೋಮಾಂತಂ ಕೃತ್ವಾ ॥ ಅಗ್ನ ಆಯೂಂಷೀತಿ ತಿಸೃಣಾಂ ಶತಂ ವೈಖಾನಸಾ ಋಷಯಃ ಅಗ್ನಿಃ ಪವಮಾನೋ ದೇವತಾ ॥ ಗಾಯತ್ರೀಛಂದಃ ॥ ಉಪನಯನಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ಅಗ್ನ ಆಯೂಂಷಿ ಪವಸ ಆಸುವೋರ್ಜಮಿಷಂಚನಃ ॥ ಆರೇಬಾಧಸ್ವದುಚ್ಛುನಾಂ ಸ್ವಾಹಾ ॥ ಅಗ್ನಯೇ ಪವಮಾನಾಯೇದಂ ನಮಮ ॥ ಓಂ ಅಗ್ನಿರ್ಋಷಿಃ ಪವಮಾನಃ ಪಾಂಚಜನ್ಯಃ ಪುರೋಹಿತಃ ॥ ತಮೀಮಹೇಮಹಾಗಯಂ ಸ್ವಾಹಾ ॥ ಅಗ್ನಯೇ ಪವಮಾನಾಯೇದಂ... ॥ ಓಂ ಅಗ್ನೇಪವಸ್ವಸ್ವಪಾ ಅಸ್ಮೇವರ್ಚಃ ಸುವೀರ್ಯಂ ॥ ದಧದ್ರಯಿಂ ಮಯಿಪೋಷಂ ಸ್ವಾಹಾ ॥ ಅಗ್ನಯೇಪವಮಾನಾಯೇದಂ ... ॥ ಪ್ರಜಾಪತೇ ಹಿರಣ್ಯಗರ್ಭಃ ಪ್ರಜಾಪತಿಸ್ತ್ರಿಷ್ಟುಪ್ ॥ ಉಪನಯನಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ಪ್ರಜಾಪತೇನತ್ವದೇತಾನ್ಯನ್ಯೋವಿಶ್ವಾಜಾತಾನಿಪರಿತಾಬಭೂವ ॥ ಯತ್ಕಾಮಾಸ್ತೇಜುಹುಮಸ್ತನ್ನೋ ಅಸ್ತು ವಯಂ ಸ್ಯಾಮ ಪತಯೋರಯೀಣಾಂ ಸ್ವಾಹಾ ॥ ಪ್ರಜಾಪತಯ ಇದಂ ನಮಮ ॥

ಸೂರ್ಯಾವೇಕ್ಷಣಾದಿಕ್ರಿಯಾ:- ಅಥಾಚಾರ್ಯ ಉತ್ತರತೋಽಗ್ನೇಃ ಪ್ರಾಙ್ಮುಖಸ್ತಿಷ್ಠೇತ್ । ಕುಮಾರೋಽಪ್ಯಗ್ನ್ಯಾಚಾರ್ಯಯೋರ್ಮಧ್ಯೇನ ಗತ್ವಾಚಾರ್ಯಾಭಿಮುಖಸ್ತಿಷ್ಠೇತ್ ॥ ಅಥಾಚಾರ್ಯಃ ಕುಮಾರಸ್ಯ ಶುಚಿತ್ವಸಿದ್ಧಯೇ

ಪ್ರಧಾನಹೋಮ:- ಕುಮಾರನನ್ನು ಅದೇ ಮೊದಲಿನ ಕ್ರಮದಿಂದ ಹಿಂದಕ್ಕೆ ಕರೆದು ತನ್ನ ಬಲಭಾಗದಲ್ಲಿ ಕುಳ್ಳಿರಿಸಿ (1) **"ಅಗ್ನ ಆಯೂಂಷಿ......"** (2) **"ಅಗ್ನಿರ್ಋಷಿ..."** (3) **"ಅಗ್ನೇಪವಸ್ವ..."** (4) **"ಪ್ರಜಾಪತೇ"** ಈ ನಾಲ್ಕು ಮಂತ್ರಗಳಿಂದ ನಾಲ್ಕು ಆಜ್ಯಾಹುತಿಗಳನ್ನು ಕೊಡಬೇಕು.

ಸೂರ್ಯಾವೇಕ್ಷಣ ಮೊದಲಾದ ಕ್ರಿಯೆಗಳು:- ಆಚಾರ್ಯನು ಅಗ್ನಿಯ ಉತ್ತರದಲ್ಲಿ ಪೂರ್ವಕ್ಕೆ ಮುಖಮಾಡಿ ನಿಲ್ಲಬೇಕು. ಕುಮಾರನೂ ಅಗ್ನಿ ಮತ್ತು ಆಚಾರ್ಯನ ಮಧ್ಯದ ದಾರಿಯಿಂದ ಹೋಗಿ ಅವನಿಗೆ ಇದಿರಾಗಿ ನಿಲ್ಲಬೇಕು. ಆಗ ಆಚಾರ್ಯನು,

Scanned by CamScanner

ಸವಿತೃದೇವತಾತೃಪ್ತಯೇಚಾಂಜಲಿಕ್ಷಾರಣಂ ಕರಿಷ್ಯೇ ॥ ಶುದ್ಧೋದಕೇನ ಶಿಷ್ಯಾಂಜಲಿಮಾಪೂರ್ಯ ಸ್ವಸ್ಯಾಂಜಲಿಮನ್ಯೇನ ಪೂರಯಿತ್ವಾ ॥ ತತ್ಸವಿತುರಿತ್ಯಸ್ಯ ಶ್ಯಾವಾಶ್ವಃ ಸವಿತಾನುಷ್ಟುಪ್ ॥ ಅವಕ್ಷಾರಣೇ ವಿನಿಯೋಗಃ ॥ ಓಂ ತತ್ಸವಿ-ತುರ್ವೃಣೀಮಹೇವಯಂ ದೇವಸ್ಯ ಭೋಜನಂ ॥ ಶ್ರೇಷ್ಠಂ ಸರ್ವಧಾತಮಂತುರಂ ಭಗಸ್ಯಧೀಮಹಿ ॥ ಅನೇನ ಸ್ವಾಂಜಲ್ಯುದಕಂ ಶಿಷ್ಯಾಂಜಲಾವವಕ್ಷಾರ್ಯ ತಜ್ಜಲಂ ಕುಮಾರಾಂಜಲಿನೈವ ಕ್ಷಾರಯೇತ್ ॥

ತತಃ ಶಿಷ್ಯತ್ವಸಿದ್ಧ್ಯರ್ಥಂ ದಕ್ಷಿಣೇನ ಪಾಣಿನಾ ವಟೋರ್ದಕ್ಷಿಣಹಸ್ತಂ ಸಾಂಗುಷ್ಠಂ ಗೃಹ್ಣೀಯಾತ್ ॥ ತತ್ರ ಮಂತ್ರಃ ॥ ಓಂ ದೇವಸ್ಯತ್ವಾ ಸವಿತುಃ ಪ್ರಸ್ವೇಶ್ವಿನೋರ್ಬಾಹುಭ್ಯಾಂ ಪೂಷ್ಣೋಹಸ್ತಾಭ್ಯಾಂ ಹಸ್ತಂ ಗೃಹ್ಣಾಮಿ ॥ ಅಮುಕ ಶರ್ಮನ್ ॥ ಪುನಃ ಪೂರ್ವವದುದಕಪೂರಣಾದ್ಯವಕ್ಷಾರಯೇತ್ ॥ ದ್ವಿತೀಯೇ ಹಸ್ತಗ್ರಹಣೇ ಮಂತ್ರವಿಶೇಷಃ ॥ ಓಂ ಸವಿತಾತೇ ಹಸ್ತಮಗ್ರಭೀತ್ ॥ ಅಮುಕಶರ್ಮನ್ ॥ ಪುನರಪಿ ಪೂರ್ವವತ್ ಪೂರಯಿತ್ವಾವಕ್ಷಾರ್ಯ ॥ ಓಂ ಅಗ್ನಿರಾಚಾರ್ಯಸ್ತವ ॥ ಅಮುಕಶರ್ಮನ್ ॥ ಇತಿ ತೃತೀಯೇ ॥ ಅಥಾಚಾರ್ಯೋ ಬ್ರಹ್ಮಚಾರಿಣಾ ಸಹ ನಿಷ್ಕ್ರಮ್ಯ ॥ ಓಂ ದೇವ ಸವಿತರೇಷ ತೇ ಬ್ರಹ್ಮಚಾರೀ ತಂ

"ಕುಮಾರಸ್ಯ ... ಕ್ಷಾರಣಂ ಕರಿಷ್ಯೇ" ಎಂದು ಸಂಕಲ್ಪ ಮಾಡಿ ಶುದ್ಧವಾದ ನೀರಿನಿಂದ ವಟುವಿನ ಬೊಗಸೆಯನ್ನು ತುಂಬಿ ತನ್ನ ಬೊಗಸೆಯನ್ನೂ ನೀರಿನಿಂದ ತುಂಬಿಸಿಕೊಂಡು **"ಓಂ ತತ್ಸವಿತುರ್ವೃಣೀಮಹೇ ..."** ಎಂಬ ಮಂತ್ರದಿಂದ ಆ ನೀರನ್ನು ವಟುವಿನ ಬೊಗಸೆಗೆ ಹಾಕಿ ಅವನ ಕೈಗಳನ್ನು ಸರಿಯಾಗಿ ಶುಚಿಮಾಡಬೇಕು. ಆಮೇಲೆ ಶಿಷ್ಯತ್ವ ಸಿದ್ಧಿಗೆ ವಟುವಿನ ಬಲಗೈಯನ್ನು ಅಂಗುಷ್ಠಸಹಿತ ತನ್ನ ಬಲಗೈಯಿಂದ **"ಓಂ ದೇವಸ್ಯತ್ವಾ ..."** ಎಂಬ ಮಂತ್ರವನ್ನು ಹೇಳುತ್ತ ಹಿಡಿದು **"ಅಮುಕಶರ್ಮನ್"** ಎಂದು ಕರೆಯಬೇಕು. ಹಾಗೇ ಇನ್ನೆರಡು ಸಲ ಮಾಡಬೇಕು. ಎರಡನೆಯ ಸಲ **"ಓಂ ಸವಿತಾತೇ ..."** ಹಾಗೂ ಮೂರನೆಯ ಸಲ **"ಅಗ್ನಿರಾಚಾರ್ಯ ..."** ಎಂಬ ಮಂತ್ರವನ್ನು ಹೇಳಬೇಕು. ಆಚಾರ್ಯನು ಬ್ರಹ್ಮಚಾರಿಯನ್ನು ಕರಕೊಂಡು ಹೊರಗೆ ಹೋಗಿ **"ಓಂ ದೇವಸವಿತ..."** ಎಂಬ ಮಂತ್ರ ಹೇಳಿ, 'ಆದಿತ್ಯನಿಗೆ ವಟುವನ್ನು ರಕ್ಷಣೆಗೆ ಅರ್ಪಿಸುತ್ತೇನೆ' ಎಂದು ಮನಸ್ಸಿನಲ್ಲಿ ಭಾವಿಸಿ ವಟುವಿಗೆ ಆದಿತ್ಯದರ್ಶನ ಮಾಡಿಸಬೇಕು. ಆಮೇಲೆ ಇಬ್ಬರೂ ಅಗ್ನಿಯ ಉತ್ತರಭಾಗದಲ್ಲಿ ಇದಿರುಬದಿರಾಗಿ ನಿಂತು,

Scanned by CamScanner

ಗೋಪಾಯ ಸಮಾಮೃತೇ ಇತ್ಯುಕ್ತ್ವಾ ॥ ಸಂರಕ್ಷಣಾರ್ಥಂ ವ್ರತಪತಯೇ ಆದಿತ್ಯಾಯ ವಟುಂ ದದಾಮೀತಿ ಮನಸಾ ಸ್ಮರನ್ ಬ್ರಹ್ಮಚಾರಿಣ ಮಾದಿತ್ಯಮೀಕ್ಷಯೇತ್ ॥ ತತೋ ಉಭಾವಪಿ ಪೂರ್ವವದುತ್ತರತೋಽಗ್ನೇರ-ನ್ಯೋನ್ಯಾಭಿಮುಖೌ ತಿಷ್ಠೇತಾಂ ॥ ಅಥಾಚಾರ್ಯಃ ಕಸ್ಯ ಬ್ರಹ್ಮಚಾರ್ಯಸಿ ಪ್ರಾಣಸ್ಯ ಬ್ರಹ್ಮಚಾರ್ಯಸಿ ಕಸ್ತ್ವಾಕಮುಪನಯತೇ ಕಾಯತ್ವಾಪರಿದದಾಮಿ ಇತಿ ಮಂತ್ರಂ ಜಪನ್ ಕುಮಾರಂ ಪ್ರಜಾಪತಯೇ ಮನಸಾ ಸಮರ್ಪ್ಯ ॥ ಯುವಾ ಸುವಾಸಾ ಇತ್ಯಸ್ಯ ಕೌಶಿಕೋ ವಿಶ್ವಾಮಿತ್ರೋ ಯೂಪಸ್ತ್ರಿಷ್ಟುಪ್ ॥ ಪೂರ್ವಾರ್ಧರ್ಚಸ್ಯ ಪ್ರದಕ್ಷಿಣಾವರ್ತನೇನ ಉತ್ತರಾರ್ಧರ್ಚಸ್ಯ ಪಾಣಿಭ್ಯಾಂ ವಟೋ-ರ್ಹೃದಯಾಲಂಭನೇ ವಿನಿಯೋಗಃ ॥ ಓಂ ಯುವಾಸುವಾಸಾಃ ಪರಿವೀತ ಆಗಾತ್ಸಉಶ್ರೇಯಾನ್ ಭವತಿ ಜಾಯಮಾನಃ ॥ ಇತಿ ಪ್ರದಕ್ಷಿಣಮಾವರ್ತ-ನೇನ ಪ್ರಾಙ್ಮುಖಮವಸ್ಥಾಪ್ಯ ॥ ತದಂಸಯೋರುಪರಿ ಸ್ವಪಾಣೀ ನೀತ್ವಾ ॥ ಓಂ ತಂ ಧೀರಾಸಃ ಕವಯ ಉನ್ನಯಂತಿ ಸ್ವಾಧ್ಯೋ ೩ ಮನಸಾ ದೇವ-ಯಂತಃ ॥ ಇತಿ ಪಾಣಿಭ್ಯಾಂ ವಟುಹೃದಯಂ ಸ್ಪೃಶೇತ್ ॥ ತತ ಆತ್ಮಾನಮಗ್ನಿಂಚಾತರಾ ವಟುಂ ನೀತ್ವಾ ಪ್ರತ್ಯಗಗ್ನೇಃ ಸ್ವಯಮುಪವಿಶ್ಯ ಸ್ವಸ್ಯ ದಕ್ಷಿಣತಃ ಪ್ರಾಙ್ಮುಖಂ ತಮುಪವೇಶಯೇತ್ ॥

ಬ್ರಹ್ಮಚಾರಿಣಃ ಅಗ್ನಿಕಾರ್ಯಂ:- ತತೋ ವಟುರಗ್ನೇಃ ಪರಿಸಮೂಹನ-ಪರ್ಯುಕ್ಷಣೇ ಕೃತ್ವಾ ॥ ಅಗ್ನಯೇ ಸಮಿಧಮಿತ್ಯಸ್ಯ ಹಿರಣ್ಯಗರ್ಭೋಽಗ್ನಿರ್ಬ್ರ-

---

ಆಚಾರ್ಯನು "ಕಸ್ಯ ಬ್ರಹ್ಮಚಾರ್ಯಸಿ ... ಪರಿದದಾಮಿ" ಎಂದು ಹೇಳಿ ಕುಮಾರನನ್ನು ಮಾನಸಿಕವಾಗಿ ಪ್ರಜಾಪತಿಗೆ ಸಮರ್ಪಿಸಬೇಕು. ಬಳಿಕ "ಓಂ ಯುವಾಸುವಾಸಾ ..." ಎಂದು ಅರ್ಧ ಮಂತ್ರವನ್ನು ಹೇಳಿ ಪ್ರದಕ್ಷಿಣಾಕಾರವಾಗಿ ವಟುವನ್ನು ತಿರುಗಿಸಿ ಪೂರ್ವಮುಖವಾಗಿ ನಿಲ್ಲಿಸಿ ತನ್ನ ಎರಡು ಕೈಗಳನ್ನು ಅವನ ಹೆಗಲಮೇಲೆ ಇಟ್ಟು, "ತಂಧೀರಾಸಃ ...." ಎಂಬ ಉಳಿದ ಅರ್ಧ ಮಂತ್ರವನ್ನು ಹೇಳಿ ಕೈಗಳಿಂದ ವಟುವಿನ ಹೃದಯವನ್ನು ಸ್ಪರ್ಶಿಸಬೇಕು. ಆಮೇಲೆ ತಾನು ಅಗ್ನಿಯ ಪಶ್ಚಿಮಭಾಗದಲ್ಲಿ ಕುಳಿತು, ತನ್ನ ಬಲಬದಿಯಲ್ಲಿ ವಟುವನ್ನು ಕೂತುಕೊಳ್ಳಿಸ ಬೇಕು. ನಂತರ ಬ್ರಹ್ಮಚಾರಿಯು ಅಗ್ನಿಕಾರ್ಯವನ್ನು ಮಾಡಬೇಕು. ಪ್ರಾತಃ, ಸಾಯಂ ಅಗ್ನಿಕಾರ್ಯದ ಕ್ರಮ ಮತ್ತು ವಿವರಗಳನ್ನು ಪ್ರತ್ಯೇಕವಾಗಿ ಆರಂಭದಲ್ಲಿ ಹೇಳಲಾಗಿದೆ. ಅದರಂತೆ ಮಾಡುವುದು.

Scanned by CamScanner

Scanned with CamScanner

ಹತೀ ಸಮಿಧಾದಾನೇ ವಿನಿಯೋಗಃ ॥ ಓಂ ಅಗ್ನಯೇ ಸಮಿಧಮಾಹಾರ್ಷಂ-ಬೃಹತೇಜಾತವೇದಸೇ ॥ ತಯಾತ್ವಮಗ್ನೇವರ್ಧಸ್ವಸಮಿಧಾ ಬ್ರಹ್ಮಣಾವಯಂ-ಸ್ವಾಹಾ ॥ ಅಗ್ನಯ ಇದಂ ನಮಮ ॥ ದಕ್ಷಿಣಂ ಪಾಣಿಂ ಪ್ರಕ್ಷಾಲ್ಯ ಅಗ್ನೌ ಪ್ರತಾಪ್ಯ ಓಂ ತೇಜಸಾಮಾಸಮನಜ್ಮಿ ॥ ಇತಿ ಮುಖಮವಾಙ್ ನಿಮೃಜ್ಯ ॥ ಪಾಣಿಂ ಪ್ರಕ್ಷಾಲ್ಯ ಏವಂ ಪುನರ್ದ್ವಿಃ ॥ ತತಸ್ತಿಷ್ಠನ್ ಪ್ರಣತಿಮುದ್ರಾಂ ಕೃತ್ವಾ ॥ ಮಯಿಮೇಧಾಮಿತಿ ಷಣ್ಣಾಂ ಹಿರಣ್ಯಗರ್ಭಋಷಿಃ ಪೂರ್ವೇಷಾಂ ತ್ರಯಾಣಾಂ ಅಗ್ನೀಂದ್ರಸೂರ್ಯಾ ದೇವತಾಃ ಉತ್ತರತ್ರಯಾಣಾಮಗ್ನಿರ್ದೇವತಾ ॥ ಗಾಯತ್ರೀಛಂದಃ ॥ ಅಗ್ನ್ಯುಪಸ್ಥಾನೇ ವಿನಿಯೋಗಃ ॥ ಓಂ ಮಯಿಮೇಧಾಂ ಮಯಿ ಪ್ರಜಾಂ ಮಯ್ಯಗ್ನಿಸ್ತೇಜೋದಧಾತು ॥ ಮಯಿಮೇಧಾಂ ಮಯಿಪ್ರಜಾಂ ಮಯೀಂದ್ರ ಇಂದ್ರಿಯಂ ದಧಾತು ॥ ಮಯಿ ಮೇಧಾಂ ಮಯಿಪ್ರಜಾಂ ಮಯಿ ಸೂರ್ಯೋ ಭ್ರಾಜೋ ದಧಾತು ॥ ಯತ್ತೇ ಅಗ್ನೇ ತೇಜಸ್ತೇನಾಹಂ ತೇಜಸ್ವೀ ಭೂಯಾಸಂ ॥ ಯತ್ತೇ ಅಗ್ನೇ ವರ್ಚಸ್ತೇನಾಹಂ ವರ್ಚಸ್ವೀ ಭೂಯಾಸಂ ॥ ಯತ್ತೇ ಅಗ್ನೇ ಹರಸ್ತೇನಾಹಂ ಹರಸ್ವೀ ಭೂಯಾಸಂ ॥ ಇತಿ ಷಣ್ಮಂತ್ರೈ-ರಗ್ನಿಮುಪಸ್ಥಾಯ ॥ ಮಾನಸ್ತೋಕ ಇತಿ ಕುತ್ಸೋ ರುದ್ರೋ ಜಗತೀ ವಿಭೂತಿಗ್ರಹಣೇ ವಿನಿಯೋಗಃ ॥ ಓಂ ಮಾನಸ್ತೋಕೇತನಯೇ ಮಾನ ಆಯೌ ಮಾನೋಗೋಷು ಮಾನೋ ಅಶ್ವೇಷು ರೀರಿಷಃ ॥ ವೀರಾನ್ಮಾನೋ ರುದ್ರ ಭಾಮಿತೋವಧೀರ್ಹವಿಷ್ಮಂತಃ ಸದಮಿತ್ವಾಹವಾಮಹೇ ॥ ಇತ್ಯನೇನ ಭಸ್ಮ ಆದಾಯ ಯಥಾಚಾರಂ ॥ ತ್ರ್ಯಾಯುಷಂ ಜಮದಗ್ನೇರಿತಿ ಲಲಾಟೇ ॥ ಕಶ್ಯಪಸ್ಯ ತ್ರ್ಯಾಯುಷಮಿತಿ ಕಂಠೇ ॥ ಅಗಸ್ತ್ಯಸ್ಯ ತ್ರ್ಯಾಯುಷಮಿತಿ ನಾಭೌ ॥ ಯದ್ದೇವಾನಾಂ ತ್ರ್ಯಾಯುಷಮಿತಿ ದಕ್ಷಿಣಸ್ಕಂಧೇ ॥ ತನ್ಮೇ ಅಸ್ತುತ್ರ್ಯಾಯುಷಮಿತಿ ವಾಮಸ್ಕಂಧೇ ॥ ಸರ್ವಮಸ್ತು ಶತಾಯುಷಮಿತಿ ಶಿರಸಿ ಧೃತ್ವಾ ॥ ಪುನಃ ಪರಿಸಮೂಹನಪರ್ಯು-ಕ್ಷಣೇ ಕೃತ್ವಾ ಕೃತಾಂಜಲಿಸ್ತಿಷ್ಠನ್ ॥ ಓಂ ಚಮೇಸ್ವರಶ್ಚಮೇ ಯಜ್ಞೋಪಚತ್ತೇ

Scanned by CamScanner

ನಮಶ್ಚ ॥ ಯತ್ತೇ ನ್ಯೂನಂ ತಸ್ಮೈತ ಉಪಯತ್ತೇತಿರಿಕ್ತಂ ತಸ್ಮೈತೇ ನಮಃ ॥ ಆಗ್ನಯೇ ನಮಃ ॥ ಓಂ ಸ್ವಸ್ತಿ ॥ ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಂ ॥ ಆಯುಷ್ಯಂ ತೇಜ ಆರೋಗ್ಯಂ ದೇಹಿ ಮೇ ಹವ್ಯವಾಹನ ॥ ಇತ್ಯಗ್ನಿಮುಪಸ್ಥಾಯ ॥

ಸಾವಿತ್ರ್ಯುಪದೇಶಃ:- ಅಗ್ನೇರುತ್ತರತೋ ಗತ್ವಾ ಪ್ರತ್ಯಙ್ಮುಖೀಭೂಯ ಆಚಾರ್ಯಾಭಿಮುಖೋ ಭೂತ್ವಾ ದಕ್ಷಿಣಂ ಜಾನುಃ ಭೂತಲೇ ನಿಧಾಯ ಪಾಣಿಭ್ಯಾಂ ಯಥಾ ಸವ್ಯದಕ್ಷಿಣಂ ಶ್ರೋತ್ರೇ ಸಂಸ್ಪೃಶ್ಯ ವ್ಯಸ್ತಪಾಣಿರಾಚಾರ್ಯಸ್ಯ ದಕ್ಷಿಣಪಾದಂ ಸ್ವದಕ್ಷಿಣಹಸ್ತೇನ ಸವ್ಯಂ ಚ ಸವ್ಯಹಸ್ತೇನ ಜಾನುಪ್ರಭೃತಿ ಪಾದಪರ್ಯಂತಂ ಸ್ಪೃಷ್ಟ್ವಾ ॥ ಅಮುಕಗೋತ್ರೋ ಅಮುಕಶರ್ಮಾ ಅಹಂ ಭೋ ಅಭಿವಾದಯೇ ॥ ಇತ್ಯಭಿವಾದಯೇತ್ ॥ ಆಚಾರ್ಯೇಣ ಆಯುಷ್ಮಾನ್

ಸಾವಿತ್ರೀ ಉಪದೇಶ:- ವಟುವು ಅಗ್ನಿಯ ಉತ್ತರಕ್ಕೆ ಹೋಗಿ ಆಚಾರ್ಯನಿಗೆ ಇದಿರಾಗಿ ನಿಂತು ಬಲ ಮೊಣಕಾಲನ್ನು ನೆಲದ ಮೇಲಿಟ್ಟು ತನ್ನ ಎಡ-ಬಲ ಕೈಗಳಿಂದ ಎಡ-ಬಲ ಕಿವಿಗಳನ್ನು ಮುಟ್ಟಿ ಆಚಾರ್ಯನ ಬಲಕಾಲನ್ನು ತನ್ನ ಬಲಗೈಯಿಂದಲೂ ಎಡ ಕಾಲನ್ನು ಎಡಕೈಯಿಂದಲೂ ಮೊಣಕಾಲಿನಿಂದ ಪಾದದ ವರೇಗೆ ಮುಟ್ಟಿ ನಮಸ್ಕಾರ ಮಾಡಬೇಕು. "**.... ಗೋತ್ರೋ ... ಶರ್ಮಾ ಅಹಂ ಭೋ ಅಭಿವಾದಯೇ**" ಎಂದು ಹೇಳಬೇಕು. ಆಚಾರ್ಯನು "**ಆಯುಷ್ಮಾನ್ ...... ದೇವದತ್ತಾsss**"ಎಂದು ಆಶೀರ್ವದಿಸಬೇಕು. ಆಮೇಲೆ ಗಾಯತ್ರ್ಯುಪದೇಶವನ್ನು ಬಯಸುವ ಶಿಷ್ಯನು ಸಾವಿತ್ರೀಪೂಜೆಯನ್ನೂ ಗೋದಾನವನ್ನೂ ಮಾಡಿ, "**ಅಧೀಹಿ ಭೋಃ ... ಬ್ರೂಹಿ**" ಎಂದು ಆಚಾರ್ಯನನ್ನು ಪ್ರಾರ್ಥಿಸಿ, ತನ್ನ ಎಡಗೈಯ ಮೇಲೆ ಬಲಗೈಯನ್ನಿಟ್ಟು ಹೆಬ್ಬೆರಳುಗಳನ್ನು ಒತ್ತಿಹಿಡಿದು ಬ್ರಹ್ಮಾಂಜಲಿಮುದ್ರೆಯನ್ನು ಮಾಡಿ ಅದನ್ನು ತನ್ನ ಬಲತೊಡೆಯ ಮೇಲಿಟ್ಟು ಆಚಾರ್ಯನ ಹತ್ತಿರ ಕುಳಿತುಕೊಳ್ಳಬೇಕು. ಆಚಾರ್ಯನು ಶಿಷ್ಯನ ಅಂಜಲಿಯನ್ನು ಅವನ ಉತ್ತರೀಯದಿಂದ ಮುಚ್ಚಿ ತನ್ನ ಕೈಗಳಿಂದ ಆ ಅಂಜಲಿಯನ್ನು ಹಿಡಿದುಕೊಂಡು "**ಪ್ರಣವಸ್ಯ .... ವಿನಿಯೋಗಃ**" ಎಂದಿಷ್ಟು ಹೇಳಿ ಓಂಕಾರ ಹಾಗೂ ವ್ಯಾಹೃತಿ ಮೊದಲ್ಗೊಂಡು ಗಾಯತ್ರೀ ಮಂತ್ರವನ್ನು ಒಂದೊಂದೇ ಪದ ಅಥವಾ ಅರ್ಧಋಕ್ಕಿನಂತೆ ಇಲ್ಲವೆ ವಟುವಿಗೆ ಉಚ್ಚರಿಸಲು ಅನುಕೂಲವಾಗುವಂತೆ ಮೂರು ಸಲ ಉಪದೇಶಿಸಬೇಕು.

Scanned by CamScanner

Scanned with CamScanner

ಭವ ಸೌಮ್ಯ ದೇವದತ್ತ ೩ ಇತಿ ಪ್ರಯುಕ್ತಾಶೀರ್ವಾದಃ ಸಾವಿತ್ರ್ಯುಪದೇಶಂ ವಾಂಛನ್ ಶಿಷ್ಟಾಚಾರಪ್ರಾಪ್ತಂ ಸಾವಿತ್ರೀಪೂಜನಂ ಗೋಪ್ರದಾನಂ ಚ ಕೃತ್ವಾ ಅಧೀಹಿ ಭೋಃ ಸಾವಿತ್ರೀಂ ಭೋ ಅನುಬ್ರೂ ೩ ಹಿ ಇತ್ಯಾಚಾರ್ಯಮುಕ್ತ್ವಾ ಸ್ವವಾಮಪಾಣಿ-ಮುತ್ತಾನೀಕೃತ್ಯ ದಕ್ಷಿಣಪಾಣಿಂ ನ್ಯಙ್ಮುಖೀಕೃತ್ಯ ಸಂಧಾಯ ಪಾಣಿಪೃಷ್ಠಮಂಗುಲಿಂ ಚಾಂಗುಷ್ಠೌ ಚ ದೃಢೀಕೃತ್ಯ ಕೃತಂ ಬ್ರಹ್ಮಾಂಜಲಿಂ ದಕ್ಷಿಣಾಂಕೇ ನಿಧಾಯ ಆಚಾರ್ಯಾಂತಿಕಮಾಸೀತ ॥ ಅಥಾಚಾರ್ಯಸ್ತದಂಜಲಿಂ ತತ್ಪರಿಧಾನೀಯವಾಸಸಾ-ಚ್ಛಾದ್ಯ ಸ್ವಪಾಣಿಭ್ಯಾಂ ತದಂಜಲಿಂ ಪರಿಗೃಹ್ಯ ॥ ಪ್ರಣವಸ್ಯ ಪರಬ್ರಹ್ಮಋಷಿಃ ಪರಮಾತ್ಮಾ ದೇವತಾ ದೈವೀ ಗಾಯತ್ರೀ ಛಂದಃ ॥ ವ್ಯಾಹೃತೀನಾಂ ಪರಮೇಷ್ಠೀ ಪ್ರಜಾಪತಿಃ ಪ್ರಜಾಪತಿರ್ಬೃಹತೀ ॥ ಗಾಯತ್ರ್ಯಾ ವಿಶ್ವಾಮಿತ್ರಃ ಸವಿತಾ ಗಾಯತ್ರೀ ॥ ಉಪನಯನೋಪದೇಶೇ ವಿನಿಯೋಗಃ ॥ ಪ್ರಣವವ್ಯಾಹೃತಿ-ಪೂರ್ವಿಕಾಂ ಗಾಯತ್ರೀಂ ಪಚ್ಛೋಽರ್ಧರ್ಚಶಃ ಸರ್ವಾಂ ಅಶಕ್ತೌ ಯಥಾಶಕ್ತಿ ತ್ರಿವಾರಂ ಸ್ವಯಮುಕ್ತ್ವಾ ವಾಚಯೇತ್ ॥ ಓಂ ಭೂರ್ಭುವಃ ಸ್ವಃ ॥ ಓಂ ತತ್ಸವಿತುರ್ವ-ರೇಣ್ಯಂ ಭರ್ಗೋದೇವಸ್ಯ ಧೀಮಹಿ ॥ ಧಿಯೋಯೋನಃ ಪ್ರಚೋದಯಾತ್ ॥

ತತಃ ಮಮ ವ್ರತ ಇತ್ಯಸ್ಯ ಪ್ರಜಾಪತಿಸ್ತ್ರಿಷ್ಟುಪ್ ॥ ವಟೋರ್ಹೃದಯೇ ಊರ್ಧ್ವಾಂಗುಲಿಪಾಣಿನಿಧಾನೇ ವಿನಿಯೋಗಃ ॥ ಓಂ ಮಮವ್ರತೇ ಹೃದಯಂ ತೇ ದಧಾಮಿ ಮಮಚಿತ್ತಮನುಚಿತ್ತಂ ತೇ ಅಸ್ತು ॥ ಮಮವಾಚಮೇಕವ್ರತೋ-

---

ಆಮೇಲೆ **"ಮಮವ್ರತೇ ಹೃದಯಂ ...."** ಎಂಬ ಮಂತ್ರವನ್ನು ಹೇಳಿ ವಟುವಿನ ಹೃದಯವನ್ನು ಬೆರಳುಗಳ ತುದಿಯನ್ನು ಮೇಲಕ್ಕೆ ಮಾಡಿದ ತನ್ನ ಕೈಯಿಂದ ಮುಟ್ಟಬೇಕು. ಬಳಿಕ ವಟುವಿನ ರಕ್ಷಣೆ ಹಾಗೂ ಶುದ್ಧಿಗೋಸ್ಕರ ಮೇಖಲೆ (ಮೌಂಜೀ)ಯನ್ನು ಸೊಂಟಕ್ಕೆ ಕಟ್ಟಬೇಕು. **"ಇಯಂ ದುರುಕ್ತಾ ....."** ಮತ್ತು **"ಋತಸ್ಯಗೋಪ್ತ್ರೀ ..."** ಈ ಎರಡು ಮಂತ್ರಗಳನ್ನು ಹೇಳಿ ಮೇಖಲೆಯನ್ನು ಸೊಂಟಕ್ಕೆ ಮೂರು ಸುತ್ತು ಇರುವಂತೆ ಸುತ್ತಿ ನಾಭಿ ಪ್ರದೇಶದಲ್ಲಿ ಮೂರು ಗಂಟುಗಳನ್ನು ಹಾಕಬೇಕು. ಆಗ ವಟುವು ತಾನು ರಹಸ್ಯಾಂಗಗಳೊಡಗೂಡಿದ ಮೂರು ವೇದಗಳಿಂದ ಆವೃತನಾದೆನೆಂದು ತಿಳಿಯಬೇಕು. ಆಮೇಲೆ ಆಚಾರ್ಯನು ವಟುವಿನ ಧರ್ಮದ ಯೋಗಕ್ಷೇಮಕ್ಕೂ, ಅಧರ್ಮನಿವೃತ್ತಿಗೂ ಉಪಯುಕ್ತವಾದ, ವಟುವಿನ ಕೇಶಗಳನ್ನು ಮುಟ್ಟಬಹುದಾದ (ಅಷ್ಟು ಎತ್ತರವಿರುವ) ಪಲಾಶದಂಡವನ್ನು

Scanned by CamScanner

ಜುಷಸ್ವಬೃಹಸ್ಪತಿಷ್ವಾನ್ನಿಯುನಕ್ತುಮಹ್ಯಂ ॥ ಇತಿ ಸ್ವಪಾಣಿಮೂರ್ಧ್ವಾಂಗುಲಿಂ ವಟುಹೃದಯೇ ನಿಧಾಯ ॥ ತಸ್ಯ ರಕ್ಷಾರ್ಥಂ ಶುದ್ಧ್ಯರ್ಥಂ ಚ ಮೇಖಲಾಮಾ-ಬಧ್ನೀಯಾತ್ ॥ ಇಯಂ ದುರುಕ್ತಾದಿತಿ ದ್ವಯೋರ್ವಾಮದೇವೋ ಮೇಖಲಾ ತ್ರಿಷ್ಟುಪ್ ॥ ಮೇಖಲಾಬಂಧನೇ ವಿನಿಯೋಗಃ ॥ ಓಂ ಇಯಂ ದುರುಕ್ತಾತ್ ಪರಿಬಾಧಮಾನಾಚ್ಛರ್ಮವರೂಥಂಪುನತೀನಆಗಾತ್ ॥ ಪ್ರಾಣಾಪಾನಾಭ್ಯಾಂ ಬಲ-ಮಾಭರಂತೀಪ್ರಿಯಾದೇವಾನಾಂ ಸುಭಗಾಮೇಖಲೇಯಂ ॥ ಋತಸ್ಯಗೋಪ್ತ್ರೀತಪಸಃ ಪರಸ್ವೀಘ್ನತೀರಕ್ಷಃ ಸಹಮಾನಾ ಅರಾತೀಃ ॥ ಸಾನಃ ಸಮಂತಮನುಪರೀಹಿಭದ್ರಯಾ ಭರ್ತಾರಸ್ತೇ ಮೇಖಲೇಮಾರಿಷಾಮ ॥ ಇತಿ ಮಂತ್ರಂ ವಾಚಯಿತ್ವಾ ಮೇಖಲಾಂ ತ್ರಿರಾವರ್ತ್ಯ ನಾಭಿಪ್ರದೇಶೇ ಗ್ರಂಥಿತ್ರಯಂ ಕುರ್ಯಾತ್ ॥ ತದಾ ವಟುಃ ಸರಹಸ್ಯಾಂಗಸಹಿತ ವೇದತ್ರಯೇಣಾವೃತೋಽಹಮಿತಿ ಮನ್ಯೇತ ॥ ತತ ಆಚಾರ್ಯಃ ॥ ತದ್ಧರ್ಮಸ್ಯಯೋಗಕ್ಷೇಮಾರ್ಥಮಧರ್ಮನಿವೃತ್ತಯೇ ಚ ಕೇಶಸ ಮ್ಮಿತಂ ಪಾಲಾಶದಂಡಂ ದದ್ಯಾತ್ ॥ ಸ್ವಸ್ತಿ ನ ಇತ್ಯಸ್ಯ ಸ್ವಸ್ತ್ಯಾತ್ರೇಯೋ ವಿಶ್ವೇದೇವಾಸ್ತ್ರಿಷ್ಟುಪ್ । ದಂಡದಾನೇ ವಿನಿಯೋಗಃ ॥ ಓಂ ಸ್ವಸ್ತಿನೋಮಿಮೀತಾಮ-ಶ್ವಿನಾಭಗಃ ಸ್ವಸ್ತಿದ್ದೇವ್ಯದಿತಿರನರ್ವಣಃ ॥ ಸ್ವಸ್ತಿಪೂಷಾ ಅಸುರೋದಧಾತು ನಃ ಸ್ವಸ್ತಿದ್ಯಾವಾ ಪೃಥಿವೀಸುಚೇತುನಾ । ಇತಿ ಮಂತ್ರೇಣ ದಂಡಂ ದದ್ಯಾತ್ ॥ ತತೋ ವಟೋಸ್ತದ್ಗ್ರಹಣೇ ಮಂತ್ರಃ ॥ ಅದಾಂತಂ ದಮಯಿತ್ವಾ ಮಾಂ ಮಾರ್ಗೇ ಸಂಸ್ಥಾಪಯನ್ ಸ್ವಯಂ ॥ ದಂಡಃ ಕರೇ ಸ್ಥಿತೋ ಯಸ್ಮಾತ್ತಸ್ಮಾದ್ರಕ್ಷ ಯತೋ-ಭಯಂ ॥ ಇತಿ ವಾಚಯೇತ್ ॥

ಬ್ರಹ್ಮಚರ್ಯವ್ರತೋಪದೇಶ:- ತತಃ ಕುಮಾರಸ್ಯ ಆಚಾರಮಾದಿಶೇತ್ ॥ 1. ಬ್ರಹ್ಮಚಾರ್ಯಸಿ ॥ 2. ಅಪೋಽಶಾನ ॥ ಆಚಮನಂ ಕುರು ॥ ಮೂತ್ರಪುರೀಷಾದೌ ಶುದ್ಧ್ಯರ್ಥಮಿತ್ಯರ್ಥಃ ॥ 3. ಕರ್ಮ ಕುರು ॥ ಸಂಧ್ಯೋಪಾ-ಸನಾದೀತ್ಯರ್ಥಃ ॥ 4. ದಿವಾ ಮಾಸ್ವಾಪ್ಸೀಃ ॥ 5. ಆಚಾರ್ಯಾಧೀನೋವೇದಮ-ಧೀಷ್ವ ॥ ಸಾಯಂ ಪ್ರಾತರ್ಭಿಕ್ಷೇಥಾಃ ॥ ಪ್ರಾತಃ ಸುಮಿಧ ಮಾಧೇಹಿ ॥

Scanned by CamScanner

6. ದ್ವಾದಶವರ್ಷಾಣಿ ವೇದಗ್ರಹಣಾಂತಂ ವಾ ಬ್ರಹ್ಮಚರ್ಯಂ ಚರ ॥ ಪೈಷಾರ್ಥಾನ್‌ಬೋಧಯೇತ್ ॥ 7. ಆಚಾರ್ಯಾಧೀನೋ ಭವಾನ್ಯತ್ರಾಧರ್ಮಚರಣಾತ್ ॥ 8. ಕ್ರೊಧಾನೃತೇ ವರ್ಜಯ ॥ 9. ಮೈಥುನಂ ವರ್ಜಯ ॥ 10. ಉಪರಿಶಯ್ಯಾಂ ವರ್ಜಯ ॥ 11. ಕೌಶೀಲವ ಗಂಧಾಂಜನಾನಿ ವರ್ಜಯ ॥ 12. ಅತ್ಯಂತಂ ಸ್ನಾನಂ ಭೋಜನಂ ನಿದ್ರಾಂ ಜಾಗರಣಂ ನಿಂದಾ ಲೋಭ ಮೋಹ ಭಯ ಶೋಕಾನ್ ವರ್ಜಯ ॥ 13. ಪ್ರತಿದಿನಂ ರಾತ್ರೇಃ ಪಶ್ಚಿಮಯಾಮೇ ಚೋತ್ಥಾಯಾವಶ್ಯಕಂ ಕೃತ್ವಾ ದಂತಧಾವನಸ್ನಾನಸಂಧ್ಯೋಪಾಸನೇಶ್ವರಸ್ತುತಿ ಪ್ರಾರ್ಥನೋಪಾಸನಾಯೋಗಾಭ್ಯಾಸಾನ್ನಿತ್ಯಮಾಚರ ॥ 14. ಕ್ಷುರಕೃತ್ಯಂ ವರ್ಜಯ ॥ 15. ಮಧುಮಾಂಸಂ ವರ್ಜಯ ॥ 16. ಗವಾಶ್ವಹಸ್ತ್ಯುಷ್ಟ್ರಾದಿ ಯಾನಂ ವರ್ಜಯ ॥ 17. ಅಂತಃಗ್ರಾಮನಿವಾಸೋಪಾನಹಛತ್ರಧಾರಣಂ ವರ್ಜಯ ॥ 18. ತೈಲಾಭ್ಯಂಗಮರ್ದನಾತ್ಯಮ್ಲಾನಿತಿಕ್ತಕಷಾಯಕ್ಷಾರರೇಚನದ್ರವ್ಯಾಣಿ ಮಾ ಸೇವಸ್ವ ॥ 19. ನಿತ್ಯಂ ಯುಕ್ತಾಹಾರವಿಹಾರವಾನ್ ವಿದ್ಯೋಪಾರ್ಜನೇ ಚ ಯತ್ನವಾನ್ ಭವ ॥ 20. ಸುಶೀಲೋ ಮಿತಭಾಷೀ ಸಭ್ಯೋ ಭವ ॥ 21. ಮೇಖಲಾದಂಡಧಾರಣಭೈಕ್ಷ್ಯಚರ್ಯಸಮಿಧಾದಾನೋದಕೋಪಸ್ಪರ್ಶಾಃ ಅಭಿವಾದಾ ಇತ್ಥಂ ತೇ ನಿತ್ಯಧರ್ಮಾಃ ॥

"ಸ್ವಸ್ತಿನೋಮಿಮೀತಾ..." ಎಂಬ ಮಂತ್ರವನ್ನು ಹೇಳಿ "**ಅದಾಂತಂ ದಮಯಿತ್ವಾ...**" ಎಂಬ ಮಂತ್ರವನ್ನು ವಟುವಿನ ಬಾಯಿಯಿಂದ ಹೇಳಿಸಿ ಕೊಡಬೇಕು.

ಇಷ್ಟಾದ ಮೇಲೆ ವಟುವಿಗೆ ಬ್ರಹ್ಮಚರ್ಯವ್ರತೋಪದೇಶವನ್ನು ಮಾಡಬೇಕು:- 1. ನೀನು ಇಂದಿನಿಂದ ಬ್ರಹ್ಮಚಾರಿಯಾಗಿದ್ದಿ, 2. ಮೂತ್ರ ಮಲವಿಸರ್ಜನೆ ಮಾಡಿದ ಮೇಲೆ ತಪ್ಪದೆ ಆಚಮನ ಮಾಡು. 3. ಸಂಧ್ಯಾವಂದನೆ ಅಗ್ನಿಕಾರ್ಯ ಮುಂತಾದ ಕರ್ಮಗಳನ್ನು ತಪ್ಪದೆ ಮಾಡು. 4. ಹಗಲು ನಿದ್ದೆ ಮಾಡಬಾರದು. 5. ಗುರುವಿನ ಅಧೀನವಲ್ಲಿದ್ದು ವೇದಾಭ್ಯಾಸ ಮಾಡು, ಬೆಳಿಗ್ಗೆ ಸಂಜೆ ಭಿಕ್ಷಾಟನೆ ಮಾಡು, ಅಗ್ನಿಕಾರ್ಯ ಮಾಡು. 6. ಹನ್ನೆರಡು ವರ್ಷಗಳ ಕಾಲ ಅಥವಾ ವೇದಾಧ್ಯಯನ ಮಾಡುವಷ್ಟು ಕಾಲ ಬ್ರಹ್ಮಚಾರಿಯಾಗಿರು. 7. ಅಧರ್ಮ ಕಾರ್ಯಗಳನ್ನುಳಿದು ಇತರ ಎಲ್ಲ ಕಾರ್ಯಗಳಲ್ಲಿಯೂ ಗುರುವಿಗೆ ಅಧೀನವಾಗಿರು. 8. ಸಿಟ್ಟು ಮತ್ತು ಅನೃತಗಳನ್ನು ವರ್ಜಿಸು. 9. ಸ್ತ್ರೀಸಂಗವನ್ನು ವರ್ಜಿಸು. 10. ಗುರುಹಿರಿಯರಿಗಿಂತ ಎತ್ತರದ ಆಸನವನ್ನೂ, ಶಯ್ಯೆಯನ್ನೂ ವರ್ಜಿಸು. 11. ಕಲಾವಿಲಾಸಗಳನ್ನೂ ಸುಗಂಧಾದಿ ವಿಲಾಸೀವಸ್ತುಗಳನ್ನೂ ತ್ಯಜಿಸು. 12. ಸ್ನಾನ, ಊಟ, ನಿದ್ದೆ, ಜಾಗರಣೆ, ನಿಂದೆ, ಲೋಭ, ಮೋಹ, ಭಯ, ದುಃಖ ಇತ್ಯಾದಿಗಳಲ್ಲಿ ಅತಿಯನ್ನು ವರ್ಜಿಸು. 13. ರಾತ್ರಿಯ ಕೊನೆಯ ಜಾವದಲ್ಲಿ ಎದ್ದು ಪ್ರತಿದಿನವೂ ದಂತಧಾವನದಿಂದ ಮೊದಲ್ಗೊಂಡು ಎಲ್ಲ ಕರ್ಮಗಳನ್ನೂ

Scanned by CamScanner

Scanned with CamScanner

ತತಃ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯ ಅಗ್ನಿಂ ಮೇಧಾಜನನಾಂತಂ ರಕ್ಷೇತ್ ॥ ತತ್ರೈವ ಸಾಯಂ ಪ್ರಾತರಗ್ನಿಕಾರ್ಯಂ ಕುರ್ಯಾತ್ ॥ ತತೋಽನುಪ್ರವಚನೀಯಹೋಮಬ್ರಾಹ್ಮಣಭೋಜನಪರ್ಯಾಪ್ತಾಂ ತುಂಡುಲರೂಪಾಂ ಭಿಕ್ಷಾಂ ಯಾಚಯೇತ್ ॥ ತತ್ರ ಕ್ರಮಃ ॥ ಭಿಕ್ಷಾಪಾತ್ರಮಾದಾಯ ಆದೌ ಮಾತರಂ ಭವತಿ ಭಿಕ್ಷಾಂ ದದಾತ್ವಿತಿ, ಭಿಕ್ಷಾಂ ಭವಾನ್ ದದಾತ್ವಿತಿ ವಾ ॥ ಪಿತರಂ ಮಾತುಸ್ವಸಾರಂ ಸ್ವಭಗಿನೀಂ ಅನ್ಯಾನಪಿ ಬಾಂಧವಾನಪ್ರತ್ಯಾಖ್ಯಾಯಿನೋಽಪ್ರತ್ಯಾಖ್ಯಾಯಿನೀಶ್ಚ ಯಾಚಿತ್ವಾ ಭೈಕ್ಷ್ಯಮಾಚಾರ್ಯಾಯ ನಿವೇದ್ಯ ॥ ಅಸ್ಮಿನ್ ಕರ್ಮಣಿ ಶತಂ ಬ್ರಾಹ್ಮಣಾ ಭೋಜ್ಯಾಃ ॥

॥ ಇತಿ ಉಪನಯನಸಂಸ್ಕಾರಃ ॥

ತಪ್ಪದೆ ಮಾಡು. 14. ಕ್ಷೌರವನ್ನು ವರ್ಜಿಸು. 15. ಮದ್ಯ - ಮಾಂಸಗಳನ್ನು ತ್ಯಜಿಸು. 16. ಎತ್ತು, ಕುದುರೆ, ಒಂಟೆ ಮುಂತಾದ ವಾಹನಯಾತ್ರೆಯನ್ನು ವರ್ಜಿಸು. 17. ಗ್ರಾಮದಲ್ಲಿ ಸಂಚರಿಸುವಾಗ ಪಾದರಕ್ಷೆ ಮತ್ತು ಛತ್ರಗಳನ್ನು ಉಪಯೋಗಿಸಬೇಡ. 18. ಎಣ್ಣೆಹಾಕಿ ಸ್ನಾನ, ಮರ್ದನ, ಹುಳಿ, ಖಾರ, ಉಪ್ಪು, ಇತ್ಯಾದಿಗಳನ್ನು ಅತಿಯಾಗಿ ಸೇವಿಸಬೇಡ 19. ಮಿತವಾದ ಆಹಾರವಿಹಾರಗಳಿದ್ದು ನಿತ್ಯವೂ ವಿದ್ಯೆಯಲ್ಲಿ ಆಸಕ್ತನಾಗಿರು. 20. ಉತ್ತಮ ಗುಣನಡತೆಯುಳ್ಳವನೂ, ಮಿತಭಾಷಿಯೂ ಸಭ್ಯನೂ ಆಗಿರು. 21. ಮೇಖಲೆ, ದಂಡ, ಭಿಕ್ಷೆ, ಅಗ್ನಿಕಾರ್ಯ, ಅಭಿವಾದನ ಇತ್ಯಾದಿಗಳನ್ನು ತಪ್ಪದೆ ಮಾಡು. ಆಮೇಲೆ ಸ್ವಿಷ್ಟಕೃದಾದಿ ಉಳಿದ ಹೋಮ ಕಾರ್ಯವನ್ನು ಮುಗಿಸಿ, ಆ ಅಗ್ನಿಯನ್ನು ಮೇಧಾಜನನದ ವರೆಗೆ ಉಳಿಸಬೇಕು. ಅದೇ ಅಗ್ನಿಯಲ್ಲಿ ಸಾಯಂ ಪ್ರಾತರಗ್ನಿಕಾರ್ಯ ಮಾಡಬೇಕು. ಆಮೇಲೆ ಅನುಪ್ರವಚನೀಯ ಹೋಮ ಹಾಗೂ ಬ್ರಾಹ್ಮಣಭೋಜನಕ್ಕೆ ಸಾಕಾಗುವಷ್ಟು ಅಕ್ಕಿಯನ್ನು ಭಿಕ್ಷೆಯಿಂದ ಪಡೆಯಬೇಕು. ಮೊದಲು ತಾಯಿಯಿಂದ "**ಭವತಿ... ದೇಹಿ**" ಅಥವಾ "**ಭಿಕ್ಷಾಂ ... ದದಾತು**" ಎಂದು ಹೇಳಿ, ಭಿಕ್ಷೆ ಪಡೆದ ಬಳಿಕ ಹಾಗೆಯೇ ತಂದೆಯಿಂದ "**ಭವಾನ್... ದದಾತು**" ಎಂದು ಹೇಳಿ, ಭಿಕ್ಷೆ ಪಡೆದ ಬಳಿಕ; ಚಿಕ್ಕಮ್ಮ, ಸಹೋದರಿ ಮುಂತಾದವರಿಂದಲೂ ಬಿಕ್ಷೆ ಪಡೆಯಬೇಕು. 'ಇಲ್ಲ' ಎಂದು ನಿರಾಕರಿಸುವವರನ್ನು ಕೇಳಕೂಡದು. ಭಿಕ್ಷೆ ಸಿಕ್ಕಿದ್ದನ್ನು ಆಚಾರ್ಯನಿಗೆ ಒಪ್ಪಿಸಬೇಕು. ನೂರು ಬ್ರಾಹ್ಮಣರಿಗೆ ಭೋಜನ ಕೊಡಬೇಕು.

Scanned by CamScanner

೩೯

॥ ಅನುಪ್ರವಚನೀಯ ಹೋಮಃ ॥

॥ ಶ್ರೀಃ ॥ ಆಚಾರ್ಯೋ ಸಾಯಂ ಸಂಧ್ಯೋತ್ತರಂ ಕೃತೋಪನಯನ ಹೋಮಾಗ್ನೇಃ ಪಶ್ಚಿಮತೋ ದಕ್ಷಿಣತಃ ಬ್ರಹ್ಮಚಾರಿಣಾ ಸಹೋಪವಿಶ್ಯ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಉಪನಯನಾಂಗಭೂತಮನು-ಪ್ರವಚನೀಯಹೋಮಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ಅಗ್ನಿಂ ಧ್ಯಾತ್ವಾ ॥ ಸಮಿದ್ದ್ವಯಮಾದಾಯ ಕ್ರಿಯಮಾಣೇ ಅನುಪ್ರವಚನೀಯ ಹೋಮೇ ದೇವತಾ-ಪರಿಗ್ರಹಾರ್ಥಮಿತ್ಯಾದ್ಯಾಘಾರಾವಾಜ್ಯೇತ್ಯಂತಮುಕ್ತ್ವಾ ॥ ಅತ್ರ ಪ್ರಧಾನಂ ॥ ಸದಸಸ್ಪತಿಂ ಸವಿತಾರಂ ಋಷೀಂಶ್ಚ ಚರುದ್ರವ್ಯೇಣ ॥ ಶೇಷೇಣ ಸ್ವಿಷ್ಟಕೃತ ಮಿತ್ಯಾದಿ ಪೂರ್ಣಪಾತ್ರನಿಧಾನಾಂತಂ ಕೃತ್ವಾ ಭಿಕ್ಷಾನ್ನಸ್ಯ ದೇವತಾತ್ರಯಾರ್ಥಂ ತೂಷ್ಣೀಂ ಚತುರಶ್ಚತುರೋ ಮುಷ್ಟೀನ್ನಿರುಪ್ಯ ॥ ತಥೈವ ಪ್ರೋಕ್ಷ್ಯ ಹವಿಃಶ್ರ-ಪಣಾದ್ಯಾಘಾರಹೋಮಾಂತಂ ಕೃತ್ವಾ ಅವದಾನಧರ್ಮೇಣ ಚರುಮವದಾಯ ॥

ಸದಸಸ್ಪತಿಮಿತ್ಯಸ್ಯ ಕಾಣ್ವೋ ಮೇಧಾತಿಥಿಃ ಸದಸಸ್ಪತಿರ್ಗಾಯತ್ರೀ ॥ ಅನು-ಪ್ರವಚನೀಯ ಪ್ರಧಾನಚರುಹೋಮೇ ವಿನಿಯೋಗಃ ॥ ಓಂ ಸದಸಸ್ಪತಿ-ಮದ್ಭುತಂ ಪ್ರಿಯಮಿಂದ್ರಸ್ಯ ಕಾಮ್ಯಂ ॥ ಸನಿಂಮೇಧಾಮಯಾಸಿಷಂ ಸ್ವಾಹಾ ॥

ಆಚಾರ್ಯನು ಸಾಯಂ ಸಂಧ್ಯಾವಂದನೆಯಾದ ಮೇಲೆ ಉಪನಯನ ಹೋಮ ಮಾಡಿದ ಅಗ್ನಿಯ ಪಶ್ಚಿಮಭಾಗದಲ್ಲಿ ತನ್ನ ಬಲಬದಿಗೆ ವಟುವಿರುವಂತೆ ಕುಳಿತು ಆಚಮನ ಪ್ರಾಣಾಯಾಮ ದೇಶಕಾಲ ಸ್ಮರಣೆಗಳನ್ನು ಮಾಡಿ **"ಉಪನಯನಾಂಗ ... ಕರಿಷ್ಯೇ"** ಎಂದು ಸಂಕಲ್ಪಿಸಿ ಅಗ್ನಿಯ ಧ್ಯಾನಮಾಡಿ ಕ್ರಮದಂತೆ ಅನ್ವಾಧಾನ ಮಾಡಬೇಕು. ಮುಂದೆ ಪೂರ್ಣಪಾತ್ರವಿಡುವಲ್ಲಿವರೆಗಿನ ಕರ್ಮಗಳನ್ನು ಮಾಡಿ ಭಿಕ್ಷೆಯ ಅಕ್ಕಿಯಿಂದ ಮೂರು ದೇವತೆಗಳಿಗೆ ನಾಲ್ಕು ನಾಲ್ಕು ಮುಷ್ಟಿ ಅಕ್ಕಿಯನ್ನು ತೆಗೆದಿಟ್ಟು ಆಘಾರಹೋಮದ ವರೆಗೆ ಮಾಡಿ, **"ಸದಸಸ್ಪತಿ..."** **"ತತ್ಸವಿತು...."** ಮತ್ತು **"ಋಷಿಭ್ಯಃ"** ಎಂದು ಮೂರು ಚರುವಿನ ಆಹುತಿಗಳನ್ನಿತ್ತು ಸ್ವಿಷ್ಟಕೃದಾದಿ ಉಳಿದ ಹೋಮಕಾರ್ಯವನ್ನು ಮುಗಿಸಿ ಹವಿಃಶೇಷಾನ್ನ ಅಥವಾ ಇತರ ಅನ್ನದಿಂದ ಬ್ರಾಹ್ಮಣರಿಗೆ ಭೋಜನ ಕೊಡಬೇಕು. ಆ ರಾತ್ರಿ ಬ್ರಹ್ಮಚಾರಿಯು ಉಪ್ಪು, ಖಾರ ಇಲ್ಲದೆ ಊಟಮಾಡಿ ನೆಲದಲ್ಲಿ ಮಲಗಿರಬೇಕು.

Scanned by CamScanner

Scanned with CamScanner

ಸದಸಸ್ಪತಯ ಇದಂ ನಮಮ ॥ ತತ್ಸವಿತುರಿತ್ಯಸ್ಯ ಗಾಥಿನೋ ವಿಶ್ವಾಮಿತ್ರಃ ಸವಿತಾ ಗಾಯತ್ರೀ ॥ ಅನುಪ್ರವಚನೀಯಪ್ರಧಾನ ಚರುಹೋಮೇ ವಿನಿ- ಯೋಗಃ ॥ ಓಂ ತತ್ಸವಿತು... ಸ್ವಾಹಾ ॥ ಸವಿತ್ರ ಇದಂ ನಮಮ ॥ ಋಷಿಭ್ಯಃ ಸ್ವಾಹಾ ॥ ಋಷಿಭ್ಯ ಇದಂ ನಮಮ ॥ ಇತಿ ಚರ್ವಾಹುತಿತ್ರಯಂ ಹುತ್ವಾ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯ ಹವಿಃ ಶೇಷೇಣಾನ್ಯೇನವಾನ್ನೇನ ತ್ರೀನ್ ತ್ರ್ಯವರಾನ್ ವಾ ಬ್ರಾಹ್ಮಣಾನ್ ಭೋಜಯೇತ್ ॥

॥ ಇತ್ಯನುಪ್ರವಚನೀಯ ಹೋಮಃ ॥

॥ ತತೋ ಬ್ರಹ್ಮಚಾರೀ ಅಕ್ಷಾರಾಲವಣಮನ್ನಂ ಭುಕ್ತ್ವಾ ಅಧಃಶಯಿೀತ ॥

Scanned by CamScanner

Scanned with CamScanner

॥ ಮೇಧಾಜನನಪ್ರಯೋಗಃ ॥

॥ ಶ್ರೀಃ ॥ ಚತುರ್ಥದಿವಸೇ ಆಚಾರ್ಯೋ ಗೃಹ ಐಶಾನ ದಿಗ್ಭಾಗೇ ಸವ್ರತೋ ದ್ವಾದಶಾಂಗುಲಾಂ ತ್ರಿಮೇಖಲಾಂ ವೇದಿಂ ಕೃತ್ವಾ ತಸ್ಯಾಂ ಪತ್ರಾಂಕುರ-ಸಮನ್ವಿತಾಮಾರ್ದ್ರಾಂ ಪಲಾಶಶಾಖಾಂ, ಸಮೂಲಂ ಕುಶಸ್ತಬಂ ವಾ ಪ್ರತಿಷ್ಠಾಪ್ಯ ॥ ಬ್ರಹ್ಮಚಾರಿಣಾನ್ವಾರಬ್ಧಃ ಸಂಕಲ್ಪಪೂರ್ವಕಂ ಪೂಜಾಂ ಕುರ್ಯಾತ್ ॥ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಮಮಾಸ್ಯ ಕುಮಾರಸ್ಯ ಉಪನಯನ ಸಮಾಪ್ತಿ ವೇದಗ್ರಹಣಸಾಮರ್ಥ್ಯಲಕ್ಷಣ ಮೇಧಾಸಿದ್ಧಿದ್ವಾರಾ ಶ್ರೀಪರಮೇಶ್ವರಪ್ರೀ-ತ್ಯರ್ಥಂ ಮೇಧಾಜನನಾಖ್ಯಂ ಕರ್ಮ ಕರಿಷ್ಯೇ ॥ ತತ್ರಾದೌ ಮೇಧಾಪರನಾಮಕ ಸಾವಿತ್ರೀ ಪೂಜಾಂ ಚ ಕರಿಷ್ಯೇ ॥

ವೇದ್ಯಾಂ ಪಲಾಶಶಾಖಾಯಾಂ ಮೇಧಾಯೈ ನಮಃ ಇತಿ ಮಂತ್ರೇಣಾ-ವಾಹನಾದ್ಯುಪಚಾರಾನ್ ಕೃತ್ವಾ ಯಾವಕಸಕ್ತುಮಿಶ್ರಮನ್ನಂ ಮೋದಕಾಂಶ್ಚ ನಿವೇದ್ಯ ಪುನಶ್ಚ ಪೂರ್ವವದಭ್ಯರ್ಚ್ಯ ಬ್ರಹ್ಮಚಾರಿಣಾ ಪ್ರಣಮಯ್ಯ ಶುದ್ಧಜಲ ಪಾತ್ರೋದಕೇನ ಸೇಚನಂ ಕುರ್ವತಾ ವಟುನಾ ತ್ರಿಃಪ್ರದಕ್ಷಿಣಂ ಕಾರಯನ್ ಮಂತ್ರಂ ವಾಚಯೇತ್ ॥ ಓಂ ಸುಶ್ರವಃ ಸುಶ್ರವಾ ಅಸಿ ಯಥಾ ತ್ವಂ ಸುಶ್ರವಃ ಸುಶ್ರವಾ ಅಸ್ಯೇವಂ ಮಾಂ ಸುಶ್ರವಃ ಸೌಶ್ರವಸಂ ಕುರು ॥ ಯಥಾ

ನಾಲ್ಕನೆಯ ದಿನ ಯಜಮಾನನು ಮನೆಯ ಈಶಾನ್ಯ ದಿಕ್ಕಿನಲ್ಲಿ ಅಥವಾ ಉಪನಯನ ಮಾಡಿದ ಸ್ಥಳದಲ್ಲಿ ೧೨ ಅಂಗುಲ ವಿಸ್ತೀರ್ಣವಾದ ಮೂರು ಮೆಟ್ಟಲುಗಳಿರುವ ಮಣ್ಣಿನ ವೇದಿಯನ್ನು ನಿರ್ಮಿಸಿ ಅದರ ಮಧ್ಯದಲ್ಲಿ ಚಿಗುರೆಲೆಗಳುಳ್ಳ ಪಲಾಶದ ಕೊಂಬೆಯನ್ನು ಬುಡಸಹಿತ ಕಿತ್ತು ತಂದು ದರ್ಭೆಯನ್ನು ನೆಡಬೇಕು. ಆಮೇಲೆ ಬ್ರಹ್ಮಚಾರಿಯೊಂದಿಗೆ ಕುಳಿತು ಆಚಮನ ಪ್ರಾಣಾಯಾಮ ದೇಶಕಾಲ ಕೀರ್ತನ ಮಾಡಿ, **"ಮಮಾಸ್ಯ ... ಪೂಜಾಂ ಚ ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು.

ವೇದಿಯಲ್ಲಿ ನೆಟ್ಟ ಪಲಾಶದ ಕೊಂಬೆಯಲ್ಲಿ **"ಮೇಧಾಯೈ ನಮಃ"** ಎಂಬ ಮಂತ್ರದಿಂದ ಆವಾಹನಾದಿ ಷೋಡಶೋಪಚಾರಪೂಜೆಯನ್ನು ಮಾಡಬೇಕು. ಹಿಟ್ಟು ಮೋದಕಗಳಿಂದ ಕೂಡಿದ

Scanned by CamScanner

Scanned with CamScanner

ತ್ವಂ ದೇವಾನಾಂ ಯಜ್ಞಸ್ಯ ನಿಧಿಪೋಸ್ಯೇವಮಹಂ ಮನುಷ್ಯಾಣಾಂ ವೇದಸ್ಯ ನಿಧಿಪೋ ಭೂಯ್ಯಾಸಂ ॥ ಪ್ರತಿಪ್ರದಕ್ಷಿಣಂ ಮಂತ್ರಾವೃತ್ತಿಂ ಪ್ರದಕ್ಷಿಣಂ ಚ ಕಾರಯೇತ್ ॥ ತತೋ ಬ್ರಹ್ಮಚಾರೀ ಸ್ನಾತ್ವಾ ನವಾನ್ಯಜ್ಞೋಪವೀತಾಜಿನ-ಮೇಖಲಾದಂಡಾನುಪನಯನವತ್ ಸಮಂತ್ರಕಂ ಧೃತ್ವಾ ಪುರಾಣಾನಿ ಪಲಾಶ-ಸನ್ನಿಧೌ ವಿಸೃಜ್ಯ ಪೂರ್ವಧೃತವಾಸಸೀ ಗುರವೇ ದತ್ವಾ ಮೇಧಾಮಹ್ಯಮಿತಿ ಸೂಕ್ತಂ ವಿಪ್ರೈಃ ಪಾಠಯಿತ್ವಾ ॥

ಅಥ ಮೇಧಾಮಹ್ಯಮಿತಿ ಸೂಕ್ತಂ ॥ ಓಂ ಮೇಧಾಮಹ್ಯಮಂಗಿ-ರಸೋ ಮೇಧಾಂಸಪ್ತರ್ಷಯೋ ದದುಃ ॥ ಮೇಧಾಮಿಂದ್ರಶ್ಚಾಗ್ನಿಶ್ಚಮೇಧಾಂ ಧಾತಾ ದದಾತು ಮೇ ॥ ಮೇಧಾಂ ಮೇ ವರುಣೋ ರಾಜಾ ಮೇಧಾಂ ದೇವೀ ಸರಸ್ವತೀ ॥ ಮೇಧಾಂ ಮೇ ಅಶ್ವಿನೌ ದೇವಾವಾಧತ್ತಾಂ ಪುಷ್ಕರಸ್ರಜಾ ॥ ಯಾ ಮೇಧಾ ಅಪ್ಸರಸ್ಸು ಗಂಧರ್ವೇಷು ಚ ಯನ್ಮನಃ ॥ ದೈವೀ ಯಾ ಮಾನುಷೀ ಮೇಧಾ ಸಾಮಾಮಾವಿಶತಾದಿಮಾಂ ॥ ಯನ್ಮೇನೋಕ್ತಂ ತದ್ರಮ-ತಾಂಶಕೇಯಮ್ಯದನುಬ್ರುವೇ ॥ ನಿಶಾಮತನ್ನಿಶಾಮಹ್ಯೆಮಯಿವ್ರತಂ ಸಹವ್ರ-ತೇಷುಭೂಯಾಸಂಬ್ರಹ್ಮಣಾಸಂಗಮೇಮಹಿ ॥ ಶರೀರಂ ಮೇ ವಿಚಕ್ಷಣಂ ವಾಙ್ ಮೇ ಮಧುಮದ್ದುಹಾ । ಅವೃದ್ಧಮಹಮಸೌ ಸೂರ್ಯೋ ಬ್ರಹ್ಮ-ಣಾನೀಸ್ಥಃ ಶ್ರುತಂ ಮೇ ಮಾ ಪ್ರಹಾಸೀಃ ॥ ಮೇಧಾಂದೇವೀಂ ಮನಸಾರೇ-

---

ಅನ್ನವನ್ನು ನೈವೇದ್ಯ ಮಾಡಿ ಮೊದಲಿನಂತೆ ಮತ್ತೊಮ್ಮೆ ಪೂಜಿಸಿ ಬ್ರಹ್ಮಚಾರಿಯಿಂದ ನಮಸ್ಕಾರ ಮಾಡಿಸಬೇಕು. ಆಮೇಲೆ ಪಾತ್ರೆಯಲ್ಲಿ ಶುದ್ಧವಾದ ನೀರನ್ನು ತುಂಬಿಕೊಂಡು **"ಓಂ ಸುಶ್ರವಃ..."** ಎಂಬ ಮಂತ್ರವನ್ನು ಒಂದೊಂದು ಪ್ರದಕ್ಷಿಣೆಗೆ ಒಂದೊಂದು ಸರ್ತಿಯಂತೆ ಬ್ರಹ್ಮಚಾರಿಯ ಬಾಯಿಯಿಂದ ಹೇಳಿಸಿ ನೀರೆರೆಯುತ್ತಾ ಮೂರು ಪ್ರದಕ್ಷಿಣೆ ಮಾಡಿಸಬೇಕು. ಆಮೇಲೆ ಬ್ರಹ್ಮಚಾರಿಯು ಸ್ನಾನಮಾಡಿ ಬಂದು ಉಪನಯನದಲ್ಲಿ ಮಾಡಿದಂತೆ ಮಂತ್ರಪೂರ್ವಕವಾಗಿ ಹೊಸ ಯಜ್ಞೋಪವೀತ, ಕೃಷ್ಣಾಜಿನ, ಮೇಖಲೆ, ದಂಡಗಳನ್ನು ಧರಿಸಬೇಕು. ಹಳತನ್ನು ಪಲಾಶದ ಬುಡದಲ್ಲಿ ವಿಸರ್ಜಿಸಬೇಕು. ಹೊಸಬಟ್ಟೆಗಳನ್ನು ತೊಟ್ಟು ಹಳತನ್ನು ಗುರುವಿಗೆ ಅರ್ಪಿಸಿ, ಬ್ರಾಹ್ಮಣರಿಂದ **"ಮೇಧಾಮಸ್ಯ..."** ಎಂಬ ಸೂಕ್ತವನ್ನು ಹೇಳಿಸಬೇಕು. **"ಮೇಧಾಮಹ್ಯಂ..."**

Scanned by CamScanner

ಜಮಾನಾಂಗಂರ್ಧವಜುಷ್ಟಾಂ ಪ್ರತಿನೋಜುಷಸ್ವ ॥ ಮಹ್ಯಂ ಮೇಧಾಂ ವದ ಮಹ್ಯಂ ಶ್ರಿಯಂ ವದಮೇಧಾವೀ ಭೂಯಾಸಮಜರಾಜರಿಷ್ಣು ॥ ಸದಸಸ್ಪತಿ-ಮದ್ಭುತಂ ಪ್ರಿಯಮಿಂದ್ರಸ್ಯ ಕಾಮ್ಯಂ ॥ ಸನಿಂ ಮೇಧಾಮಯಾಸಿಷಂ ॥ ಯಾಂ ಮೇಧಾಂ ದೇವಗಣಾಃ ಪಿತರಶ್ಚೋಪಾಸತೇ ॥ ತಯಾ ಮಾ ಮೇಧಯಾ ಮೇ ಮೇಧಾವಿನಂ ಕುರು ॥ ಮೇಧಾವ್ಯ ೧ ಹಂ ಸುಮನಾಃ ಸುಪ್ರತೀಕಃ ಶ್ರದ್ಧಾ-ಮನಾಃ ಸತ್ಯಮತಿಃ ಸುಶೇವಃ ॥ ಮಹಾಯಶಾಧಾರಯಿಷ್ಣುಃ ಪ್ರವಕ್ತಾಭೂ-ಯಾಸಮಸ್ಯೈಸ್ವಧಯಾಪ್ರಯೋಗೇ ॥

ವಿಧಿವತ್ಸ್ವಸ್ತಿವಾಚನಂ ಕೃತ್ವಾ ಬ್ರಾಹ್ಮಣೇಭ್ಯೋ ದಕ್ಷಿಣಾಂ ಯಥಾಶಕ್ತಿ ದತ್ವಾ ತಾನ್ ಭೋಜಯಿತ್ವಾ ನಮಸ್ಕೃತ್ಯಾಶಿಷೋ ಗೃಹ್ಣೀಯಾತ್ ॥ ಅಸ್ಯ ಕರ್ಮಣಃ ಪುಣ್ಯಾಹಂ ಭವಂತೋ ಬ್ರುವಂತು ಇತಿ ಸ್ವಸ್ತಿವಾಚನಂ ಕುರ್ಯಾತ್ ॥

॥ ಇತಿ ಮೇಧಾಜನನಾಂತ ಉಪನಯನ ಪ್ರಯೋಗಃ ॥

ಎಂಬ ಸೂಕ್ತವನ್ನು ಬ್ರಾಹ್ಮಣರು ಹೇಳಿದ ಬಳಿಕ ವಿಧಿಪ್ರಕಾರ ಸ್ವಸ್ತಿವಾಚನವನ್ನು ಮಾಡಿ ಬ್ರಾಹ್ಮಣರಿಗೆ ಭೋಜನ ದಕ್ಷಿಣೆಗಳನ್ನಿತ್ತು ಅವರಿಂದ ಅಶೀರ್ವಾದ ಪಡೆದುಕೊಳ್ಳಬೇಕು. "**ಅಸ್ಯಕರ್ಮಣಃ ಪುಣ್ಯಾಹಂ ಭವಂತೋ ಬ್ರುವಂತು**" ಎಂದು ಪುಣ್ಯಾಹವಾಚನ ಮಾಡಬೇಕು.

॥ ಮೇಧಾಜನನಪ್ರಯೋಗ ಸಮಾಪ್ತ ॥

Scanned by CamScanner

॥ ಬ್ರಹ್ಮಚಾರಿವ್ರತಲೋಪಪ್ರಾಯಶ್ಚಿತ್ತ ಪ್ರಯೋಗಃ ॥

॥ ಶ್ರೀಃ ॥ ಬ್ರಹ್ಮಚಾರೀ ದ್ವಿರಾಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಮಮ ಶೌಚಾಚಮನ ಸಂಧ್ಯಾವಂದನದರ್ಭಭಿಕ್ಷಾಗ್ನಿಕಾರ್ಯರಾಹಿ-ತ್ಯಶೂದ್ರಾದಿಸ್ಪರ್ಶನಕೌಪೀನಕಟಿಸೂತ್ರಯಜ್ಞೋಪವೀತಮೇಖಲಾದಂಡಾಜಿನತ್ಯಾಗದಿ-ವಾಸ್ವಾಪಛತ್ರಧಾರಣಪಾದುಕಾಧ್ಯಾರೋಹಣಮಾಲಾಧಾರಣೋದ್ವರ್ತನಾನುಲೇಪ-ನಾಂಜನಜಲಕ್ರೀಡಾ – ದ್ಯೂತನೃತ್ಯಗೀತವಾದ್ಯಾದ್ಯಭಿರತಿಪಾಖಂಡಾದಿಸಂಭಾಷಣಪ-ರ್ಯುಷಿತಭೋಜನಾದಿ ಬ್ರಹ್ಮಚಾರಿವ್ರತಲೋಪಜನಿತಸಕಲದೋಷ ಪರಿಹಾರಾರ್ಥಂ ಆಜ್ಯಹೋಮಪೂರ್ವಕಂ ಕೃಚ್ಛ್ರತ್ರಯಂ ಅಮುಕಪ್ರತ್ಯಾಮ್ನಾಯೇನಾಹಮಾ-ಚರಿಷ್ಯೇ ॥ ಅಥವಾ ಶೌಚಾಚಮನಾದಿ ಸರ್ವಬ್ರಹ್ಮಚರ್ಯನಿಯಮವ್ರತಲೋಪ-ಪ್ರಾಯಶ್ಚಿತ್ತದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಹೋಮಪೂರ್ವಕಂ ಕೃಚ್ಛ್ರತ್ರಯ ಮಾಚರಿಷ್ಯೇ ಇತಿ ವಾ ಸಂಕಲ್ಪ್ಯ ॥

ಸ್ಥಂಡಿಲಕರಣಾದಿ ಲೌಕಿಕಾಗ್ನಿ (ವಿಟ) ಪ್ರತಿಷ್ಠಾಂತಂ ಕೃತ್ವಾ ಅನ್ವಾಧಾನಂ ಕುರ್ಯಾತ್ ॥ ಕ್ರಿಯಮಾಣೇ ಬ್ರಹ್ಮಚರ್ಯವ್ರತಲೋಪಪ್ರಾಯಶ್ಚಿತ್ತ-ಹೋಮೇ ದೇವತಾಪರಿಗ್ರಹಾರ್ಥಮನ್ವಾಧಾನಂ ಕರಿಷ್ಯೇ ಇತ್ಯಾದಿ ಚಕ್ಷುಷೀ ಆಜ್ಯೇನೇತ್ಯಂತಮುಕ್ತ್ವಾ ಅತ್ರ ಪ್ರಧಾನಂ ಅಗ್ನಿಂ ವಾಯುಂ ಸೂರ್ಯಂ ಪ್ರಜಾಪತಿಂ ಅಗ್ನಿಂ ಪೃಥಿವೀಂ ಮಹಾಂತಂ ವಾಯುಮಂತರಿಕ್ಷಂ ಮಹಾಂತಂ ಆದಿತ್ಯಂ ದಿವಂ ಮಹಾಂತಂ ಚಂದ್ರಮಸಂ ನಕ್ಷತ್ರಾಣಿ ದಿಶೋಮಹಾಂತಂ ಅಗ್ನಿಂ ವಿಶ್ವವೇದಸಂ ವಿಭಾವಸುಂ ಶತಕ್ರತುಂ ದ್ವಿವಾರಮಗ್ನಿಂ ಅಗ್ನಿಂ ವಾಯುಂ

ಬ್ರಹ್ಮಚಾರಿಯು ಎರಡುಸಲ ಆಚಮನಮಾಡಿ, ಪ್ರಾಣಾಯಾಮ ದೇಶಕಾಲ ಕೀರ್ತನಗಳನ್ನು ಮಾಡಿದ ಮೇಲೆ, **"ಮಮ ... ನಾಹಮಾಚರಿಷ್ಯೇ"** ಎಂದು ಅಥವಾ **"ಮಮ ಶೌಚಾಚಮನಾದಿ ..... ಕೃಚ್ರ ತ್ರಯಮಾಚರಿಷ್ಯೇ"** ಎಂದಾಗಲಿ ಸಂಕಲ್ಪ ಮಾಡಬೇಕು.

ಸ್ಥಂಡಿಲ ಸಂಸ್ಕಾರವೇ ಮೊದಲಾಗಿ **"ವಿಟ"** ಎಂಬ ಅಗ್ನಿಯನ್ನು ಪ್ರತಿಷ್ಠಾಪಿಸಿ, **"ಕ್ರಿಯಮಾಣೇ...ಕರಿಷ್ಯೇ"** ಎಂದು **"ಚಕ್ಷುಷೀ ಆಜ್ಯೇನ"** ಎಂಬಲ್ಲಿ ವರೇಗೆ ಹೇಳಿ ಮುಂದೆ **"ಅತ್ರ ಪ್ರಧಾನಂ"** ಎಂಬಲ್ಲಿಂದ **"ಶೇಷೇಣ ಸ್ವಿಷ್ಟಕೃತಂ"** ಎಂಬಲ್ಲಿ ವರೇಗೆ ಹೇಳಿ "ಆಜ್ಯಭಾಗಾಂತಕರ್ಮಗಳನ್ನು ಸ್ಥಾಲೀಪಾಕದಲ್ಲಿ ಹೇಳಿದಂತೆ ಮಾಡಬೇಕು. ಆಮೇಲೆ ಹದಿನೈದು ಆಜ್ಯಾಹುತಿಗಳನ್ನು ಕೊಟ್ಟು ನಂತರ ಗೋದಾನ, ಸಹಸ್ರ ತಿಲಹೋಮ ಅಥವಾ ಹತ್ತುಸಾವಿರ ಗಾಯತ್ರೀಜಪ ಇವುಗಳಲ್ಲಿ ಒಂದನ್ನು ಮಾಡಬೇಕು. ಬಳಿಕ ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿಮುಗಿಸಬೇಕು.

Scanned by CamScanner

Scanned with CamScanner

ಸೂರ್ಯಂ ಪ್ರಜಾಪತಿಂ ಚೈಕೈಕಯಾ ಆಜ್ಯಾಹುತ್ಯಾ ಶೇಷೇಣ ಸ್ವಿಷ್ಟಕೃತಮಿ-ತ್ಯಾದ್ಯಾಜ್ಯಭಾಗಾಂತಂ ಕೃತ್ವಾ (ಸಂಸ್ಕಾರಲೋಪ ನಿಮಿತ್ತಕ ಪ್ರಾಯಶ್ಚಿತ್ತ-ಹೋಮಕ್ರಮೇಣ ಪ್ರಾಯಶ್ಚಿತ್ತಾಜ್ಯಾಹುತೀರ್ಹುತ್ವಾ) ಕೃಚ್ಛ್ರಪ್ರತ್ಯಾಮ್ನಾಯತ್ವೇನ ಕಲ್ಪಿತಗೋದಾನ ಸಹಸ್ರತಿಲಹೋಮ ಅಯುತಗಾಯತ್ರೀಜಪಾದಿಷ್ವನ್ಯ-ತಮಂ ಚರಿತ್ವಾ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪಯೇತ್ ॥

ಏಕಾನೇಕವ್ರತಲೋಪಸಾಧಾರಣಮೃಗ್ವಿಧಾನೇ:- ತಂವೋಧಿಯಾ ಜಪೇ-ನ್ಮಂತ್ರಂ ಲಕ್ಷಂ ಚೈತ್ರೇ ಶಿವಾಲಯೇ ॥ ಬ್ರಹ್ಮಚಾರೀ ಸ್ವಧರ್ಮಸ್ಯ ನೂನಂ ಚೇತ್ಪೂರ್ಣಮೇವ ತತ್ ॥ ಓಂ ತಂವೋಧಿಯಾ ಪರಮಯಾಪುರಾಜಾಮಜರ-ಮಿಂದ್ರಮಭ್ಯನೂಷ್ಯರ್ಕೈಃ ॥ ಬ್ರಹ್ಮಾಚಗಿರೋದಧಿರೇಸಮಸ್ಮಿನ್ ಮಹಾಂಶ್ಚ-ಸ್ತೋಮೋ ಅಧಿವರ್ಧದಿಂದ್ರೇ ॥ ಇತಿ ॥

ಮಹಾನಾಮ್ನ್ಯಾದಿ ವ್ರತಲೋಪಪಕ್ಷೇ ಪ್ರತ್ಯೇಕಂ ಗಾಯತ್ರ್ಯಾ ಶತಮ-ಷ್ಟಾವಿಂಶತಿಮಷ್ಟೌವಾಜ್ಯಾಹುತೀ ಹುತ್ವಾ ॥ ಏಕೈಕಂ ಕೃಚ್ಛ್ರಂ ಚರಿತ್ವಾ ಗುರವೇ ದಕ್ಷಿಣಾಂ ದತ್ವಾ ತದನುಜ್ಞಾತಃ ಸಮಾವರ್ತನಂ ಕುರ್ಯಾತ್ ॥

॥ ಇತಿ ಬ್ರಹ್ಮಚಾರಿವ್ರತಲೋಪಪ್ರಾಯಶ್ಚಿತ್ತಪ್ರಯೋಗಃ ॥

ಒಂದು ಅಥವಾ ಅನೇಕ ವ್ರತಗಳ ಲೋಪ ಉಂಟಾಗಿರುವ ಪಕ್ಷದಲ್ಲಿ, ಋಗ್ವಿಧಾನದಲ್ಲಿ **"ತಂವೋಧಿಯಾ..."** ಎಂಬ ಮಂತ್ರವನ್ನು ಬ್ರಹ್ಮಚಾರಿಯು ಶಿವಾಲಯದಲ್ಲಿ, ಚೈತ್ರಮಾಸದಲ್ಲಿ ಒಂದುಲಕ್ಷ ಆವೃತ್ತಿ ಜಪಮಾಡಬೇಕೆಂಬ ಪ್ರಾಯಶ್ಚಿತ್ತವಿಧಿಯನ್ನು ಹೇಳಲಾಗಿದೆ.

ಮಹಾನಾಮ್ನಿ ಮುಂತಾದ ವ್ರತಗಳ ಲೋಪವಾಗಿದ್ದಲ್ಲಿ ಒಂದೊಂದು ವ್ರತಲೋಪಕ್ಕೆ 108, 28 ಅಥವಾ 8 ಆಜ್ಯಾಹುತಿಗಳನ್ನಿತ್ತು (ಗಾಯತ್ರೀಮಂತ್ರದಿಂದ) ಒಂದೊಂದು ಕೃಚ್ಛ್ರ ಪ್ರಾಯಶ್ಚಿತ್ತವನ್ನಿತ್ತು ಗುರುವಿಗೆ ದಕ್ಷಿಣೆ ಕೊಟ್ಟು ಅವರ ಅನುಜ್ಞೆಯಂತೆ ಸಮಾವರ್ತನ ಸಂಸ್ಕಾರ ಮಾಡಬೇಕು.

॥ ಬ್ರಹ್ಮಚಾರಿವ್ರತಲೋಪಪ್ರಾಯಶ್ಚಿತ್ತ ಸಮಾಪ್ತ ॥

Scanned by CamScanner

Scanned with CamScanner

॥ ಸಮಾವರ್ತನಸಂಸ್ಕಾರಃ ॥

॥ ಶ್ರೀಃ ॥ ಬ್ರಹ್ಮಚಾರೀ ಕೃತನಿತ್ಯಕ್ರಿಯಃ ಕೃತಪ್ರಾತರಗ್ನಿಕಾರ್ಯಃ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಮಮ ಗೃಹಸ್ಥಾಶ್ರಮಾಂತರಪ್ರಾಪ್ತಿದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಸಮಾವರ್ತನಂ ಕರಿಷ್ಯೇ ॥ ತದಂಗಭೂತಂ ಗಣಪತಿಪೂಜನಂ ಪುಣ್ಯಾಹವಾಚನಂ ಮಾತೃಕಾಪೂಜನಂ ನಾಂದೀ ಶ್ರಾದ್ಧಂ ಚ ಕರಿಷ್ಯೇ ಇತಿ ಸಂಕಲ್ಪ್ಯ, ನಾಂದೀಶ್ರಾದ್ಧಾಂತಂ ಕೃತ್ವಾ ಸಮಿಧಮುಪರಿ ನಿಧಾಯ ಸ್ಥಂಡಿಲೋಲ್ಲೇಖನಾದಿ ಸೂರ್ಯನಾಮಾಗ್ನಿಪ್ರತಿಷ್ಠಾಪನಾಂತಂ ಕೃತ್ವಾ ಪುನರ್ದೇಶಕಾಲೌ ನಿರ್ದಿಶ್ಯ ಕ್ರಿಯಮಾಣೇ ಸಮಾವರ್ತನಹೋಮೇ ದೇವತಾಪರಿಗ್ರಹಾರ್ಥಮಿತ್ಯಾದ್ಯಾಘಾರಾವಾಜ್ಯೇನೇತ್ಯಂತಮುಕ್ತ್ವಾ ॥ ಅತ್ರಪ್ರಧಾನಂ ತ್ರಿರಗ್ನಿಂ ಪವಮಾನಂ ಪ್ರಜಾಪತಿಂ ಚೈತಾಃ ಪ್ರಧಾನದೇವತಾ ಆಜ್ಯೇನ ಅಗ್ನಿಮೂರ್ಧ್ವಸಮಿಧಾ ವಿಶ್ವಾನ್ ದೇವಾನ್ ದಶಸಮಿದ್ಭಿಃ ಶೇಷೇಣ ಸ್ವಿಷ್ಟಕೃತಮಿತ್ಯಾದಿ ಪೂರ್ಣಪಾತ್ರನಿಧಾನಾಂತಂ ಕೃತ್ವಾ ॥

ಉದಗಗ್ನೇರಾಸ್ತೀರ್ಣೇಷು ದರ್ಭೇಷು ವ್ರೀಹಿಯವಮಾಷತಿಲೈಃ ಪೃಥಕ್ಪೂರಿತಾನಿ ಚತ್ವಾರಿ ಶರಾವಾಣಿ ಕ್ರಮೇಣೈಕೈಕಶಃ ಪ್ರಾಕ್ಸಂಸ್ಥಾನ್ಯಾಸಾದಯೇತ್ ॥ ಕ್ಷುರಾದಿ ಸಂಭಾರಾಂಶ್ಚ ಅಗ್ನೇರುತ್ತರತ ಆಸಾದಯೇತ್ ॥ ತತಃ ಪ್ರತ್ಯಗಗ್ನೇರಾಸೀನಸ್ಯ ಕರ್ತುರ್ದಕ್ಷಿಣತೋ ಮಾತಾ ಪ್ರಾಙ್ಮುಖ್ಯಾಸೀತ ॥ ತಸ್ಯಾಃ ಪುರತೋಗ್ನೇಃ ಪಶ್ಚಾದೇಕಸ್ಮಿನ್ ಶರಾವೇ ಶಮೀಪರ್ಣಾನ್ಯಪರಸ್ಮಿನ್ ಆನಡುಹಂ ಗೋಮಯಂ ಚಾಸಾದಯೇತ್ ॥ ಬ್ರಹ್ಮಾ ಏಕವಿಂಶತಿ ಕುಶಪಿಂಜೂಲಾನಿ ದಧಾನೋ ಮಾತು-ರ್ದಕ್ಷಿಣತಸ್ತಿಷ್ಠೇತ್ ॥ ತತೋ ಬ್ರಹ್ಮಚಾರೀ ಆಘಾರಾಂತಂ ಕೃತ್ವಾ ॥

ಬ್ರಹ್ಮಚಾರಿಯು ನಿತ್ಯಕರ್ಮಗಳನ್ನೂ ಪ್ರಾತರಗ್ನಿಕಾರ್ಯವನ್ನೂ ಮಾಡಿ ಆಚಮನ ಪ್ರಾಣಾಯಾಮ ದೇಶಕಾಲಸಂಕೀರ್ತನಗಳನ್ನು ಮಾಡಿ **"ಮಮ ಗೃಹಸ್ಥಾ ... ನಾಂದೀಶ್ರಾದ್ಧಂ ಚ ಕರಿಷ್ಯೇ"** ಎಂದು ಸಂಕಲ್ಪಮಾಡಿ ನಾಂದೀಶ್ರಾದ್ಧದ ವರೆಗಿನ ಕರ್ಮಗಳನ್ನು ಮಾಡಬೇಕು. ಒಂದು ಸಮಿಧೆಯನ್ನು ತಂದು ನೆಲಕ್ಕೆ ಮುಟ್ಟಿಸದೆ ಅದನ್ನು ಮೇಲೆ ಇಡಬೇಕು. ಬಳಿಕ ಸ್ಥಂಡಿಲಾದಿಗಳನ್ನು ಮಾಡಿ ಅನ್ವಾಧಾನ ಮಾಡಬೇಕು. **"ಸೂರ್ಯ"** ನಾಮಾಗ್ನಿಯನ್ನು ಪ್ರತಿಷ್ಠಾಪಿಸಬೇಕು. ಶೇಷೇಣ ಸ್ವಿಷ್ಟಕೃತಮಿತ್ಯಾದಿ ಹೇಳಿ ಪೂರ್ಣಪಾತ್ರವನ್ನಿಡುವಲ್ಲಿ ವರೆಗಿನ ಕರ್ಮಗಳನ್ನು ಮುಗಿಸಬೇಕು.

ಅಗ್ನಿಯ ಉತ್ತರದಲ್ಲಿ ಹಾಸಿದ ದರ್ಭೆಗಳ ಮೇಲೆ ವ್ರೀಹಿ, ಯವ, ಉದ್ದು ಮತ್ತು ಎಳ್ಳು ತುಂಬಿಸಿದ ನಾಲ್ಕು ಪಾತ್ರೆಗಳನ್ನಿಡಬೇಕು. ಹಾಗೆಯೇ ಕ್ಷೌರದ ಕತ್ತಿ, ಬಿಸಿನೀರು, ತಣ್ಣೀರು,

Scanned by CamScanner

ಅಗ್ನ ಆಯೂಂಷೀತಿ ತಿಸೃಣಾಂ ಶತಂ ವೈಖಾನಸಾ ಋಷಯಃ ಅಗ್ನಿಃ ಪವಮಾನೋ ದೇವತಾ ಗಾಯತ್ರೀಛಂದಃ ।। ಸಮಾವರ್ತನಪ್ರಧಾನಾಜ್ಯ-ಹೋಮೇ ವಿನಿಯೋಗಃ ।। ಓಂ ಅಗ್ನ ಆಯೂಂಷಿ .... ಸ್ವಾಹಾ ।। ಅಗ್ನಯೇ ಪವಮಾನಾಯೇದಂ ನಮಮ ।। ಓಂ ಅಗ್ನಿರ್ಋಷಿಃ ... ಸ್ವಾಹಾ ।। ಅಗ್ನಯೇ ...... ।। ಓಂ ಅಗ್ನೇಪವಸ್ವ ...... ಸ್ವಾಹಾ ।। ಅಗ್ನಯೇ ...... ।। ಪ್ರಜಾಪತೇ ಹಿರಣ್ಯಗರ್ಭಃ ಪ್ರಜಾಪಸ್ತ್ರಿಷ್ಟುಪ್ ।। ಸಮಾವರ್ತನಪ್ರಧಾನಾ ...... ।। ಓಂ ಪ್ರಜಾಪತೇನ ... ಸ್ವಾಹಾ ।। ಪ್ರಜಾಪತಯ ಇದಂ ನಮಮ ।।

ಬೆಣ್ಣೆ, ಮೊಸರು ಇತ್ಯಾದಿಗಳನ್ನೂ ಉತ್ತರದಲ್ಲಿಡಬೇಕು. ಅಗ್ನಿಯ ಪಶ್ಚಿಮಕ್ಕೆ ಕುಳಿತ ಕರ್ತೃವಿನ ಬಲಭಾಗದಲ್ಲಿ ತಾಯಿಯು ಕುಳಿತು ಅವಳ ಮುಂಭಾಗದಲ್ಲಿ ಅಗ್ನಿಯ ಪಶ್ಚಿಮಕ್ಕೆ ಒಂದು ಪಾತ್ರೆಯಲ್ಲಿ ಎತ್ತಿನ ಸೆಗಣಿಯನ್ನೂ ಮತ್ತೊಂದರಲ್ಲಿ ಶಮೀ ಎಲೆಗಳನ್ನೂ ಇಡಬೇಕು. ಆಮೇಲೆ ಬ್ರಹ್ಮನು ಕೈಯಲ್ಲಿ ಇಪ್ಪತ್ತೊಂದು ದರ್ಭೆಗಳುಳ್ಳ ಸೂಡಿಯನ್ನು ಹಿಡಿದು ತಾಯಿಯ ದಕ್ಷಿಣಕ್ಕೆ ನಿಲ್ಲಬೇಕು. ಬಳಿಕ ಬ್ರಹ್ಮಚಾರಿಯು ಆಘಾರಾಂತ ಹೋಮ ಮುಗಿಸಿ, **"ಅಗ್ನ ಆಯೂಂಷಿ..."** ಮುಂತಾಗಿ ಮೂರು ಮಂತ್ರಗಳು ಮತ್ತು **"ಪ್ರಜಾಪತೇ..."** ಈ ಮಂತ್ರ ಸಹಿತ ಒಟ್ಟು ನಾಲ್ಕು ಆಜ್ಯಾಹುತಿಗಳನ್ನು ಕೊಟ್ಟ ಮೇಲೆ ಬ್ರಹ್ಮನು ತಣ್ಣೀರು ಬಿಸಿನೀರುಗಳನ್ನು ಮಿಶ್ರಮಾಡಿ ಬೆಣ್ಣೆ ಅಥವಾ ಕೆನೆಮೊಸರನ್ನು ಸೇರಿಸಿ **"ಓಂ ಅದಿತಿಃ ಶ್ಮಶ್ರೂಣಿ"** ಎಂಬ ಮಂತ್ರದಿಂದ ವಟುವಿನ ಎಡಮೀಸೆಯಿಂದ ಆರಂಭಿಸಿ ಪ್ರದಕ್ಷಿಣಾಕಾರವಾಗಿ ಮೂರು ಬಾರಿ ಮೀಸೆಗಳನ್ನು ಒದ್ದೆಮಾಡಬೇಕು. ಆಮೇಲೆ ಮೂರು ದರ್ಭೆಗಳನ್ನು ವಟುವಿನ ಬಲ ಮೀಸೆಯ ಬಳಿಯಲ್ಲಿ ಪಶ್ಚಿಮಕ್ಕೆ ತುದಿಗಳಿರುವಂತೆ ಹಿಡಿಯಬೇಕು. ಆಗ ವಟುವು **"ಓಂ ಓಷಧೇ ... ।।"** ಇದನ್ನು ಜಪಿಸಬೇಕು. ಬ್ರಹ್ಮನು ಆ ದರ್ಭೆಗಳನ್ನು ಕತ್ತರಿಸಬೇಕು. ಆಗ ವಟುವು **"ಓಂ ಸ್ವಧಿತೇ ... ಹಿಂಸೀಃ"** ಎಂದು ಜಪಿಸಬೇಕು. ಹಾಗೆಯೇ **"ಓಂ ಯೇನಾ ವಪ ..."** ಎಂಬ ಮಂತ್ರವನ್ನೂ ಜಪಿಸಬೇಕು. ಬ್ರಹ್ಮನು ಮೀಸೆ ಸಹಿತ ದರ್ಭೆಗಳನ್ನು ಕತ್ತರಿಸಿ ಪೂರ್ವಕ್ಕೆ ತುದಿ ಇರುವಂತೆ ಶಮೀ ಎಲೆಗಳೊಡನೆ ಸೇರಿಸಿ ತಾಯಿಯ ಕೈಗೆ ಕೊಡಬೇಕು. ಅವಳು ಅದನ್ನು ಎತ್ತಿನ ಸೆಗಣಿಯಲ್ಲಿಡಬೇಕು. ಹೀಗೆ ಪುನಃ ಮೂರು ಸಲ ಮಾಡಬೇಕು. ಎರಡನೆಯ ಮತ್ತು ಮೂರನೆಯ ಬಾರಿಗೆ **"ಯೇನಧಾತಾ"** ಮತ್ತು **"ಯೇನ ಭೂಯಃ"** ಎಂಬ ಮಂತ್ರಗಳನ್ನೂ ನಾಲ್ಕನೆಯ ಬಾರಿಗೆ ಈ ಮೂರೂ ಮಂತ್ರಗಳನ್ನೂ ಹೇಳಬೇಕು.

Scanned by CamScanner
Scanned with CamScanner

ತತೋ ಬ್ರಹ್ಮಾ ಚೌಲವತ್ ಶೀತೋಷ್ಣಾಂಬುನೀ ಏಕೀಕೃತ್ಯ ನವ-ನೀತೇನ ದಧಿದ್ರಪ್ಸೇನ ವಾ ಮಿಶ್ರಯಿತ್ವಾ ವಟೋರ್ವಾಮಶ್ಮಶ್ರುಪ್ರದೇಶಮಾ-ರಭ್ಯ ಪ್ರದಕ್ಷಿಣಂ ॥ ಓಂ ಅದಿತಿಃ ಶ್ಮಶ್ರೂಣಿ ವಪತ್ವಾಪ್ಷಉಂದಂತು ವರ್ಚಸೇ ॥ ಇತಿ ಮಂತ್ರಾವೃತ್ತ್ಯಾ ತ್ರಿವಾರಂ ಶ್ಮಶ್ರೂಣ್ಯೇವ ಕ್ಲೇದಯಿತ್ವಾ ಕುಶಪಿಂಜೂಲತ್ರಯ-ಮಾದಾಯ ವಟೋರ್ದಕ್ಷಿಣಶ್ಮಶ್ರುಭಾಗೇ ಪಶ್ಚಿಮಾಗ್ರಂ ನಿದಧ್ಯಾತ್ ॥ ತದಾ ಬ್ರಹ್ಮಾ ತೇಷು ಕುಶಾಂಕುರೇಷು ಕ್ಷುರಂ ನಿದಧ್ಯಾತ್ ॥ ತದಾ ಬ್ರಹ್ಮಚಾರೀ ॥ ಓಂ ಸ್ವಧಿತೇ ಮಾಮಾಹಿಂಸೀಃ ॥ ಓಂ ಯೇನಾವಪತ್ಸವಿತಾಕ್ಷುರೇಣಸೋಮಸ್ಯ-ರಾಜ್ಞೋವರುಣಸ್ಯವಿದ್ವಾನ್ ॥ ತೇನ ಬ್ರಹ್ಮಾಣೋವಪತೇ ದಮ್ ಆಯು-ಷ್ಮಾನ್ಜರದಷ್ಟಿರ್ಯಥಾಸಂ ॥ ಇತಿ ಜಪೇತ್ ॥ ತತೋ ಬ್ರಹ್ಮಾ ಸಶ್ಮಶ್ರು-ಕಾನ್ ತಾನ್ ಕುಶಾನ್ ಛಿತ್ವಾ ಪ್ರಾಗಗ್ರಾನ್ ಶಮೀಪರ್ಣೈಃ ಸಹ ಏಕೀಕೃತ್ಯ ಮಾತುಃ ಕರೇ ದದ್ಯಾತ್ ॥ ಸಾ ಚ ತಾನಾನಡುಹೇ ಗೋಮಯೇ ನಿದ-ಧ್ಯಾತ್ ॥ ಏವಂ ಪುನಸ್ತ್ರಿಃ ॥ ಛೇದನಮಂತ್ರೇವಿಶೇಷಃ ॥ ಓಂ ಯೇನಧಾತಾ-ಬೃಹಸ್ಪತೇರಗ್ನೇರಿಂದ್ರಸ್ಯಚಾಯುಷೇವಪತ್ ॥ ತೇ ನ್ನಮ ಆಯುಷೇ ವಪಾಮಿಸು-ಶ್ಲೋಕ್ಯಾಯ ಸ್ವಸ್ತಯೇ ॥ ಇತಿ ದ್ವಿತೀಯೇ ॥ ಓಂ ಯೇನ ಭೂಯಶ್ಚ ರಾತ್ರ್ಯಾಂ ಜ್ಯೋಕ್ಚಪಶ್ಯಾಮಿ ಸೂರ್ಯಂ ॥ ತೇನಮ ಆಯುಷೇ ..... ॥ ಇತಿ ತೃತೀಯೇ ॥ ಚತುರ್ಥೇತು ॥ ಯೇನಾವಪತ್ಸವಿತಾ ... ॥ ಯೇನ-ಧಾತಾ ... ॥ ಯೇನಭೂಯಃ ... ॥ ಇತಿ ತ್ರಯೋಽಪಿ ಮಂತ್ರಾಃ ॥

ಹಾಗೆಯೇ ಉತ್ತರಭಾಗದ ಮೀಸೆಗಳನ್ನೂ ಕತ್ತರಿಸಬೇಕು. ನಾಲ್ಕನೆಯ ಬಾರಿ ಬೇಡ. **"ಓಂ ಯತ್ ಕ್ಷುರೇಣ..."** ಮಂತ್ರವನ್ನು ಹೇಳಿ ಕ್ಷೌರದ ಕತ್ತಿಯನ್ನು ಬುಡದಿಂದ ತುದಿಯ ವರೆಗೆ ಉಜ್ಜಬೇಕು. ಬಳಿಕ ಕ್ಷೌರಿಕನನ್ನು ಕರೆದು ಅವನ ಕೈಗೆ ಮೊದಲಿನ ಬಿಸಿನೀರು ತಣ್ಣೀರುಗಳನ್ನಿತ್ತು ಉತ್ತರಕ್ಕೆ ಮುಖವಾಗಿರುವಂತೆ ಎಚ್ಚರಿಕೆಯಿಂದ ಕ್ಷೌರಮಾಡೆಂದು ಹೇಳಿ, ಉಳಿದ ಅಂಶವನ್ನು ಅವನಿಂದ ಕ್ಷೌರಮಾಡಿಸಿಕೊಳ್ಳಬೇಕು ನಂತರ ಕರಂಜಿಬೀಜದ ಹಿಟ್ಟಿನಿಂದ ತಿಕ್ಕಿ ಮೈತೊಳೆದು ಸ್ನಾನಮಾಡಬೇಕು.

Scanned by CamScanner
Scanned with CamScanner

ಏವಮೇವೋತ್ತರಶ್ಮಶ್ರುಭಾಗೇಪ್ಯಾದ್ಯಾನಿ ತ್ರೀಣಿ ಛೇದನಾನಿ ಕುರ್ಯಾತ್ ॥ ನ ತು ಸರ್ವೈರ್ಮಂತ್ರೈಶ್ಚತುರ್ಥಃ ॥ ತತಃ ಓಂ ಯತ್ ಕ್ಷುರೇಣಮರ್ಚ-ಯತ್ರಾಸುಪೇಶಸಾವಪ್ತಾವಪಸಿಶ್ಮಶ್ರೂಣಿ ॥ ಶುಂಧಿಶಿರೋಮುಖಂ ಮಾಮ ಆಯುಃ ಪ್ರಮೋಷೀಃ ॥ ಇತ್ಯಗ್ರತ ಆರಭ್ಯಾಮೂಲಂ ಕ್ಷುರಧಾರಾ ನಿಮೃಜ್ಯ ॥ ನಾಪಿತಮಾಹೂಯ ಶೀತೋಷ್ಣಾಭಿರದ್ಭಿರಬರ್ಥಂ ಕುರ್ವಾಣೋಕ್ಷಿಣ್ವನ್ ಕುಶಲೀ ಕೇಶಶ್ಮಶ್ರುಲೋಮನಖಾನ್ಯುದಕ್ಸಂಸ್ಥಾನಿ ಕುರ್ವಿತಿ ಪ್ರೈಷೇಣಾನುಶಾಸ್ಯ ತಂ ಪ್ರೈಷಾರ್ಥಂ ಚ್ಛಾವಬೋಧ್ಯ ನಾಪಿತೇನ ಪೂರ್ವಾವಶೇಷಿತ ಶೀತೋಷ್ಣಾಂಬುಭಿರಾ-ರ್ದ್ರೀಕೃತ್ಯ ಕೇಶಶ್ಮಶ್ರುಲೋಮನಖಾನ್ಯುದಕ್ಸಂಸ್ಥಾನಿ ವಾಪಯಿತ್ವಾ ಕರಂಜಬೀಜಪಿಷ್ಟೇನ ಸ್ವಶರೀರಮುದ್ವರ್ತ್ಯ ಶೀತೋಷ್ಣೈರುದಕೈಃ ಸ್ನಾತ್ವಾ ॥

ದ್ವಿರಾಚಮ್ಯ ಪುನರಗ್ನೇರಂತಿಕಂ ಗತ್ವಾ ವಸ್ತ್ರದ್ವಯಂ ಧಾರಯೇತ್ ॥ ತತ್ರಮಂತ್ರಃ ॥ ಯುವಂ ವಸ್ತ್ರಾಣೀತ್ಯಸ್ಯೌಚಥ್ಯೋದೀರ್ಘತಮಾ ಮಿತ್ರಾವರುಣೌತ್ರಿ-ಷ್ಟುಪ್ ॥ ವಾಸೋಧಾರಣೇ ವಿನಿಯೋಗಃ ॥ "ಓಂ ಯುವಂ ವಸ್ತ್ರಾಣಿ ..." ॥ ಇತಿ ಏಕಂ ವಸ್ತ್ರಂ ಸಮಂತ್ರಂ ಪರಿಧಾಯ ಮಂತ್ರಾವೃತ್ತ್ಯಾ ಅನ್ಯದ್ವಸ್ತ್ರಂ ಪ್ರಾವೃಣುಯಾತ್ ॥ ತತೋ ದ್ವಿರಾಚಮ್ಯ ಪಾಣಿನಾಂಜನಮಾದಾಯ ॥ ಓಂ ಅಶ್ಮನಸ್ತೇಜೋಸಿ ಚಕ್ಷುರ್ಮೇಪಾಹಿ ॥ ಇತಿ ಮಂತ್ರಾವೃತ್ತ್ಯಾ ಸವ್ಯದಕ್ಷಿಣೇ ಚಕ್ಷುಷೀ

ಆಮೇಲೆ ಎರಡು ಸಲ ಆಚಮನ ಮಾಡಿ ಅಗ್ನಿಯ ಸಮೀಪ ಬಂದು, **"ಯುವಂ ವಸ್ತ್ರಾಣಿ"** ಎಂಬ ಮಂತ್ರವನ್ನು ಎರಡುಸಲ ಪ್ರತ್ಯೇಕವಾಗಿ ಹೇಳಿ ಒಂದು ಬಟ್ಟೆಯನ್ನು ಉಟ್ಟು ಇನ್ನೊಂದನ್ನು ಉತ್ತರೀಯ ಹಾಕಬೇಕು. ಪುನಃ ಎರಡುಸಲ ಆಚಮನ ಮಾಡಿ ಕೈಯಲ್ಲಿ ಕಾಡಿಗೆ ತೆಕ್ಕೊಂಡು **"ಅಶ್ಮನಃ"** ಈ ಮಂತ್ರವನ್ನು ಎರಡು ಸಲ ಹೇಳಿ ಎರಡು ಕಣ್ಣುಗಳಿಗೆ ಕಾಡಿಗೆ ಹಚ್ಚಬೇಕು. ಹಾಗೇ **"ಅಶ್ಮನಃ ..." (ಶ್ರೋತ್ರಂ)** ಮಂತ್ರವನ್ನು ಎರಡು ಸಲ ಹೇಳಿ ಕುಂಡಲ ತೊಟ್ಟುಕೊಳ್ಳಬೇಕು. ಕುಂಕುಮಾದಿಗಳನ್ನು ಮೈಗೆ ಲೇಪಿಸಿ ಕೈತೊಳೆದು, **"ಓಂ ಅನಾರ್ತಾ"** ತಲೆಗೆ ಮಾಲೆ; **"ಓಂ ದೇವಾನಾಂ"** ಜೋಡು; **"ಓಂ ದಿವಃ"** ಛತ್ರ; **"ಓಂ ವೇಣು"** ದಂಡ **"ಆಯುಷ್ಯ"** ಸೂಕ್ತವನ್ನು ಹೇಳಿ ಕುತ್ತಿಗೆಯಲ್ಲಿ ಮಣಿಯನ್ನೂ ಧರಿಸಬೇಕು.

Scanned by CamScanner

ಕ್ರಮೇಣಾಂಕ್ತ್ವಾ ॥ ಓಂ ಅಶ್ಮನಸ್ತೇಜೋಸಿ ಶ್ರೋತ್ರಂ ಮೇ ಪಾಹಿ ॥ ಅತ್ರ ದಕ್ಷಿಣಂ ಪೂರ್ವಂ, ಪಶ್ಚಾತ್ಸವ್ಯಂ ಮಂತ್ರಾವೃತ್ತ್ಯೋಕ್ತ್ವಾ ಕುಂಡಲೇ ಧೃತ್ವಾ ಕುಂಕುಮಾದ್ಯನುಲಿಪ್ತಪಾಣಿಭ್ಯಾಂ ಮುಖಾದಿ ಸರ್ವಾಂಗಾನ್ಯನುಲಿಪ್ಯ ಕರೌ ಪ್ರಕ್ಷಾಲ್ಯ ॥ ಓಂ ಅನಾತ್ರ್ತಾಸ್ಯನಾತೋರ್ಹಂ ಭೂಯಾಸಂ ಇತ್ಯನೇನ ಶಿರಸಿ ಸ್ರಜಂ ಬದ್ಧ್ವಾ ॥ ಓಂ ದೇವಾನಾಂ ಪ್ರತಿಷ್ಠೇಸ್ಥಃ ಸರ್ವತೋ ಮಾ ಪಾತಂ ಇತ್ಯುಪಾನಹಾವಾರುಹ್ಯ ॥ ಓಂ ದಿವಶ್ಛದ್ಮಾಸಿ ಇತಿ ಮಂತ್ರೇಣ ಛತ್ರಂ ಧೃತ್ವಾ ॥ ಓಂ ವೇಣುರಸಿ ವಾನಸ್ಪತ್ಯೋಸಿ ಸರ್ವತೋ ಮಾ ಪಾಹಿ । ಇತಿ ವೈಣವಂ ದಂಡಂ ಗೃಹೀತ್ವಾ ॥ ಆಯುಷ್ಯಮಿತಿ ಸೂಕ್ತೇನ ಸುವರ್ಣಮಣಿಂ ಕಂಠೇ ಬಧ್ನೀಯಾತ್ ॥

ತತಃ ಪ್ರಾದಕ್ಷಿಣ್ಯೇನ ಉಷ್ಣೀಷೇಣ ಶಿರಃ ಸಂವೇಷ್ಟ್ಯ ಉಪಾನಹೌ ಸಂತ್ಯಜ್ಯ ಉಪರಿ ನಿಹಿತಾಂ ಪ್ರಾಗುಕ್ತಾಂ ಸಮಿಧಂ ಗೃಹೀತ್ವಾ ತಿಷ್ಠನ್ನೇವ ॥ ಸ್ಮೃತಂ ಚಮ ಇತ್ಯಾದಿ ಮಂತ್ರಾಣಾಂ ಪ್ರಜಾಪತಿರ್ಋಷಿಃ ಅಗ್ನಿರ್ದೇವತಾ ಅಷ್ಟೀಛಂದಃ ॥ ಸಮಿಧಾದಾನೇ ವಿನಿಯೋಗಃ ॥ ಓಂ ಸ್ಮೃತಂ ಚ ಮೇ ಅಸ್ಮೃತಂ ಚ ಮೇ ತನ್ಮ ಉಭಯವ್ರತಂ ॥ ನಿಂದಾ ಚ ಮೇ ಅನಿಂದಾ ಚ ಮೇ ತನ್ಮ ಉ ... ॥ ವಿದ್ಯಾ ಚ ಮೇ ಅವಿದ್ಯಾ ಚ ಮೇ ತನ್ಮಉ .... ॥ ಶ್ರದ್ಧಾಚ ಮೇ ಅಶ್ರದ್ಧಾ ಚ ಮೇ ತನ್ಮ ಉ .... ॥ ಪ್ರಜ್ಞಾ ಚ ಮೇ ಅಪ್ರಜ್ಞಾ ಚ ಮೇ ತನ್ಮ ಉ ... ॥ ಇಷ್ಟಂ ಚ ಮೇ ಅನಿಷ್ಟಂ ಚ ಮೇ ತನ್ಮ ಉ ... ॥ ದತ್ತಂ ಚ ಮೇ ಅದತ್ತಂ ಚ ಮೇ ತನ್ಮ ಉ .... ॥ ಅಧೀತಂ ಚ ಮೇ ಅನಧೀತಂ ಚ ಮೇ ತನ್ಮ ಉ .... ॥ ಕೃತಂ ಚ ಮೇ ಅಕೃತಂ ಚ ಮೇ ತನ್ಮ ಉ .... ॥ ಸತ್ಯಂ ಚ ಮೇ ಅಸತ್ಯಂ ಚ ಮೇ ತನ್ಮ ಉ ... ॥ ಶ್ರುತಂ ಚ ಮೇ ಅಶ್ರುತಂ ಚ ಮೇ ತನ್ಮ ... ॥ ವ್ರತಂ ಚ ಮೇ ಅವ್ರತಂ ಚ ಮೇ ತನ್ಮ ... ॥ ಯದಗ್ನೇಸೇಂದ್ರಸ್ಯ ಸಪ್ರಜಾಪತಿಕಸ್ಯ ಸಋಷಿಕಸ್ಯ ಸಋಷಿ ರಾಜನ್ಯಸ್ಯ ಸಪಿತೃಕಸ್ಯ ಸಪಿತೃರಾಜನ್ಯಸ್ಯ ಸಮನುಷ್ಯಸ್ಯ ಸಮನುಷ್ಯ ರಾಜನ್ಯಸ್ಯ ಸಾಕಾಶ್ಯಸ್ಯ ಸಾತೀಕಾಶಸ್ಯ ಸಾನೂಕಾಶಸ್ಯ ಸಪ್ರತೀಕಾಶಸ್ಯ ಸದೇವಮನುಷ್ಯಸ್ಯ ಸಗಂಧರ್ವಾಪ್ಸರಸ್ಕಸ್ಯ ಸಹಾರಣ್ಯೈಶ್ಚಪಶುಭಿರ್ಗ್ರಾಮ್ಯೈಶ್ಚ ಯನ್ಮ ಆತ್ಮನ ಆತ್ಮವ್ರತಂ ತನ್ಮೇ ಸರ್ವವ್ರತಮಿದಮಹಮಗ್ನೇ ಸರ್ವವ್ರತೋ ಭವಾಮಿ ಸ್ವಾಹಾ ಅಗ್ನಯ ಇದಂ ನಮಮ ॥

ಆಮೇಲೆ ಪ್ರದಕ್ಷಿಣಾಕಾರವಾಗಿ ತಲೆಗೆ ಮುಂಡಾಸು ಕಟ್ಟಿ, ಕಾಲಿಗೆ ಹಾಕಿದ ಪಾದರಕ್ಷೆಗಳನ್ನು ಕಳಚಿ ಮೊದಲು ಹೇಳಿದ, ಮೇಲೆ ಇಟ್ಟ ಸಮಿಧೆಯನ್ನು ತೆಕ್ಕೊಂಡು ನಿಂತುಕೊಂಡು **"ಓಂ ಸ್ಮೃತಂ ಚ ಮೇ..."** ಎಂಬ ಮಂತ್ರವನ್ನು ಪೂರ್ತಿ ಹೇಳಿ **"ಸ್ವಾಹಾ"** ಎಂದು ಹೋಮ ಮಾಡಬೇಕು. ಬಳಿಕ ಕುಳಿತುಕೊಂಡು ಹತ್ತು ಸಮಿಧೆಗಳನ್ನು **"ಮಮಾಗ್ನೇ ವರ್ಚಃ..."** ಎಂಬ ಹತ್ತು ಋಕ್ಕುಗಳನ್ನು ಹೇಳುತ್ತ ಋಕ್ಕಿಗೊಂದರಂತೆ ಅಗ್ನಿಯಲ್ಲಿ ಹಾಕಿ **"ಸ್ವಾಹಾ"** ಎಂದು ಹೇಳಬೇಕು.

Scanned by CamScanner

ಇತಿ ಹುತ್ವಾ ॥ ಉಪವಿಶ್ಯಾಗ್ನೌ ದಶಸಮಿಧೋ ಮಮಾಗ್ನೇ ಇತಿ ಸೂಕ್ತೇನ ಪ್ರತ್ಯೃಚಮೃಗಂತೇಗ್ನಾವಾದಧ್ಯಾತ್ ಪಶ್ಚಾತ್ ಸ್ವಾಹಾಕಾರಮುಚ್ಚಾರಯೇತ್ ॥ ಮಮಾಗ್ನೇ ಇತಿ ದಶರ್ಚಸ್ಯ ಸೂಕ್ತಸ್ಯ ವಿಹವ್ಯಋಷಿಃ ವಿಶ್ವೇದೇವಾ ದೇವತಾ ತ್ರಿಷ್ಟುಪ್ಛಂದಃ ಅಂತ್ಯಾ ಜಗತೀ ॥ ಸಮಿಧಾದಾನೇ ವಿನಿಯೋಗಃ ॥ ಓಂ ಮಮಾಗ್ನೇವರ್ಚೋವಿಹವೇಷ್ವಸ್ತುವಯಂತ್ವೇಂಧಾನಾಸ್ತನ್ವಂಪುಷೇಮ ॥ ಮಹ್ಯಂ ನಮಂತಾಂ ಪ್ರದಿಶಶ್ಚತಸ್ರಸ್ತ್ವಯಾಧ್ಯಕ್ಷೇಣಪೃತನಾಜಯೇಮ ಸ್ವಾಹಾ ॥ ವಿಶ್ವೇಭ್ಯೋ ದೇವೇಭ್ಯ ಇದಂ ನಮಮ ॥ ೧ ॥ ಏವಮಗ್ರೇಪಿ ಸರ್ವತ್ರ ॥ ಓಂ ಮಮದೇವಾವಿಹವೇ ಸಂತು ಸರ್ವ ಇಂದ್ರವಂತೋಮರುತೋ ವಿಷ್ಣುರಗ್ನಿಃ ॥ ಮಮಾಂತರಿಕ್ಷಮುರುಲೋಕಮಸ್ತುಮಹ್ಯಂವಾತಃ ಪವತಾಂಕಾಮೇ ಅಸ್ಮಿನ್ ಸ್ವಾಹಾ ॥ ೨ ॥ ಓಂ ಮಯಿ ದೇವಾದ್ರವಿಣಮಾಯಜಂತಾಂ ಮಯ್ಯಾಶೀರಸ್ತು ಮಯಿ ದೇವ ಹೂತಿಃ ॥ ದೈವ್ಯಾಹೋತಾರೋವನುಷಂತಪೂರ್ವೇರಿಷ್ಟಾಃಸ್ಯಾಮತನ್ವಾಸುವೀರಾಃ ಸ್ವಾಹಾ ॥ ೩ ॥ ಓಂ ಮಹ್ಯಂ ಯಜಂತುಮಮಯಾನಿಹವ್ಯಾಕೂತಿಃ ಸತ್ಯಾಮನಸೋ ಮೇ ಅಸ್ತು ॥ ಏನೋಮಾನಿಗಾಂಕತಮಚ್ಚನಾಹಂ ವಿಶ್ವೇದೇವಾಸೋ ಅಧಿವೋಚತಾನಃ ಸ್ವಾಹಾ ॥ ೪ ॥ ಓಂ ದೇವೀಃ ಷಳುರ್ವೀರುರುನಃ ಕೃಣೋತ ವಿಶ್ವೇದೇವಾಸ ಇಹ ವೀರಯಧ್ವಂ ॥ ಮಾಹಾಸ್ಮಹಿಪ್ರಜಯಾ ಮಾತನೂಭಿರ್ಮಾರಧಾಮದ್ವಿಷತೇ ಸೋಮರಾಜನ್ ಸ್ವಾಹಾ ॥ ೫ ॥ ಓಂ ಅಗ್ನೇ ಮನ್ಯುಂ ಪ್ರತಿನುದನ್ಪರೇಷಾಮದಬ್ಧೋಗೋಪಾಃ ಪರಿಪಾಹಿನಸ್ತ್ವಂ ॥ ಪ್ರತ್ಯಂಚೋಯಂತು ನಿಗುತಃ ಪುನಃಸ್ತೇ ೩ ಮೈಷಾಂ ಚಿತ್ತಂ ಪ್ರಬುಧಾಂ ವಿನೇಶತ್ ಸ್ವಾಹಾ ॥ ೬ ॥ ಓಂ ಧಾತಾಧಾತೃಣಾಂ ಭುವನಸ್ಯಯಸ್ಪತಿರ್ದೇವಂತ್ರಾತಾರಮಭಿಮಾತಿಷಾಹಂ ॥ ಇಮಂ ಯಜ್ಞಮಶ್ವಿನೋಭಾಬೃಹಸ್ಪತಿರ್ದೇವಾಃ ಪಾಂತು ಯಜಮಾನಂನ್ಯರ್ಥಾತ್ ಸ್ವಾಹಾ ॥ ೭ ॥ ಓಂ ಉರುವ್ಯಚಾನೋಮಹಿಷಃ ಶರ್ಮ-

Scanned by CamScanner

ಯಂಸದಸ್ಮಿನ್ ಹವೇಪುರುಹೂತಃ ಪುರುಕ್ಷುಃ ॥ ಸ ನಃ ಪ್ರಜಾಯೈ ಹರ್ಯಶ್ವ-
ಮೃಳಯೇಂದ್ರಮಾನೋರೀರಿಷೋಮಾಪರಾದಾಃ ಸ್ವಾಹಾ ॥ ೮ ॥ ಓಂ
ಯೇನಃ ಸಪತ್ನಾಅಪತೇಭವಂತ್ವಿಂದ್ರಾಗ್ನಿಭ್ಯಾಮವಬಾಧಾಮಹೇತಾನ್ ॥ ವಸ-
ವೋರುದ್ರಾ ಆದಿತ್ಯಾ ಉಪರಿಸ್ಪೃಶಂ ಮೋಗ್ರಂಚೇತ್ತಾರಮಧಿರಾಜಮಕ್ರನ್ ಸ್ವಾಹಾ
॥ ೯ ॥ ಓಂ ಅರ್ವಾಂಚಮಿಂದ್ರಮಮುತೋಹವಾಮಹೇಯೋಗೋ-
ಜಿದ್ಧನಜಿದಶ್ವಜಿದ್ಯಃ ॥ ಇಮಂನೋ ಯಜ್ಞಂವಿಹವೇಜುಷಸ್ವಾಸ್ಯಕುರ್ಮೋಹರಿ-
ವೋಮೇದಿನಂತ್ವಾ ಸ್ವಾಹಾ ॥ ೧೦ ॥

ತತಃ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪಯೇತ್ ॥ ತತಃ ಸ್ನಾತಕೋ ನೈಮಿತ್ತಿಕಂ ವಿನಾ ನಕ್ತಂ ನಗ್ನಶ್ಚ ನ ಸ್ನಾಸ್ಯಾಮಿ ನಗ್ನಾಂ ಸ್ತ್ರಿಯಂ ನೇಕ್ಷಿಷ್ಯೇ ಅನ್ಯತ್ರ ಮೈಥುನಾತ್ ವರ್ಷತಿ ನ ಧಾವಿಷ್ಯಾಮಿ ವೃಕ್ಷಂ ನಾರೋಕ್ಷ್ಯಾಮಿ ಕೂಪಂ ನಾವರೋಕ್ಷ್ಯಾಮಿ ನ ಬಾಹುಭ್ಯಾಂ ನದೀಂ ತರಿಷ್ಯಾಮಿ ಪ್ರಾಣಸಂಶಯಂ ನಾಭ್ಯಾಪತ್ಸ್ಯೇ ಇತ್ಯೇವ ಸಂಕಲ್ಪಯೇತ್ ॥ ತತಃ ಕೌಪೀನ ಮೇಖಲಾಂ ಚ ವಿಸೃಜೇತ್ ॥ (ಸಮಾವರ್ತನಾನಂತರಂ ಪೂರ್ವಮೃತಾನಾಂ ತ್ರಿರಾತ್ರಮಾಶೌಚಂ)

॥ ಇತಿ ಸಮಾವರ್ತನಸಂಸ್ಕಾರಃ ॥

ಬಳಿಕ ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಮುಗಿಸಿ ಈ ಕೆಳಗಿನಂತೆ ಪ್ರತಿಜ್ಞೆ ಮಾಡಬೇಕು:- 1. ನೈಮಿತ್ತಿಕ ಕರ್ಮ ಹೊರತು ಇತರ ಸಂದರ್ಭಗಳಲ್ಲಿ ರಾತ್ರಿಹೊತ್ತು ಸ್ನಾನಮಾಡುವುದಿಲ್ಲ. 2. ನಗ್ನನಾಗಿದ್ದು ಸ್ನಾನಮಾಡುವುದಿಲ್ಲ. 3. ಮೈಥುನ ಹೊರತು ಇತರ ಸಂದರ್ಭದಲ್ಲಿ ಸಗ್ನಳಾದ ಸ್ತ್ರೀಯನ್ನು ನೋಡುವುದಿಲ್ಲ. 4. ಮಳೆಯಲ್ಲಿ ಓಡುವುದಿಲ್ಲ. 5. ಮರ ಹತ್ತುವುದಿಲ್ಲ. 6. ಬಾವಿಗೆ ಇಳಿಯುವುದಿಲ್ಲ. 7. ಕೈಗಳಿಂದ ಹೊಳೆ ದಾಟುವುದಿಲ್ಲ. 8. ಪ್ರಾಣಾಪಾಯವಿರುವ ಯಾವ ಕೆಲಸವನ್ನೂ ಮಾಡುವುದಿಲ್ಲ. ಆಮೇಲೆ ಕೌಪೀನವನ್ನೂ ಮೇಖಲೆಯನ್ನೂ ತ್ಯಜಿಸಬೇಕು.

॥ ಸಮಾವರ್ತನಸಂಸ್ಕಾರ ಸಮಾಪ್ತ ॥

Scanned by CamScanner
Scanned with CamScanner

॥ ವಾಗ್ದಾನ ಪ್ರಯೋಗಃ ॥

॥ ಶ್ರೀಃ ॥ ಅಥ ಮುಖ್ಯಬ್ರಾಹ್ಮವಿವಾಹಾಂಗಭೂತವಾಗ್ದಾನವಿಧಿರ್ಗೃಹ್ಯಪರಿಶಿಷ್ಟಾಚಾರಸಂಮತ್ಯೋಚ್ಯತೇ ॥ ಜ್ಯೋತಿರ್ವಿದಾದಿಷ್ಟೇ ವಿವಾಹನಕ್ಷತ್ರಾದಿಯುತೇ ಶುಭಕಾಲೇ ವರೇಣ ತತ್ಪಿತಾದಿನಾ ಪ್ರಹಿತಾಶ್ಚತ್ವಾರೋ ಅಷ್ಟೌ ವಾ ಪ್ರಶಸ್ತವೇಷಾಃ ಪುರಂಧ್ರಿಭಿಃ ಮಂಗಲಗೀತತೂರ್ಯೈಶ್ಚ ಸಹ ಶಕುನದರ್ಶನಪೂರ್ವಂ ಕನ್ಯಾಗೃಹಮೇತ್ಯ ಶುಭೇ ಸವಸ್ತ್ರಪೀಠಾಸನೇ ಪ್ರಾಙ್ಮುಖೀಂ ಸಾಲಂಕಾರಾಂ ಸುವೇಷಾಂ ಕನ್ಯಾಮುಪವೇಶ್ಯ ತದ್ಧಸ್ತೇ ಫಲತಾಂಬೂಲಾದಿ ದತ್ವಾ ತತ್ಪಿತ್ರಾದಿಪುರತಃ ಶ್ರೀಗಣಪತ್ಯಾದಿಸ್ಮರಣಪೂರ್ವಕಂ ಪ್ರಾಙ್ಮುಖಾಃ ಪ್ರತ್ಯಙ್ಮುಖಾ ವಾ ಅಮುಕಪ್ರವರಾನ್ವಿತಾಯಾಮುಕಗೋತ್ರೋತ್ಪನ್ನಾಯಾಮುಕಪ್ರಪೌತ್ರಾಯಾಮುಕಪೌತ್ರಾಯಾಮುಕಪುತ್ರಾಯಾಮುಕನಾಮ್ನೇ ವರಾಯ ಅಮುಕಪ್ರವರೋಪೇತಾಂ ಅಮುಕಗೋತ್ರೋತ್ಪನ್ನಾಂ ಅಮುಕಪ್ರಪೌತ್ರೀಂ ಅಮುಕಪುತ್ರೀಂ ಅಮುಕನಾಮ್ನೀಂ ಕನ್ಯಾಂ ಭಾರ್ಯಾತ್ವಾಯ ವೃಣೀಮಹೇ ಇತಿ ಬ್ರೂಯುಃ ॥

ಎಂಟು ವಿಧದ ವಿವಾಹಗಳಲ್ಲಿ ಮುಖ್ಯವಾದ 'ಬ್ರಾಹ್ಮ' ವಿವಾಹದ ಅಂಗಭೂತವಾದ ವಾಗ್ದಾನ ಪ್ರಯೋಗವನ್ನು ಹೇಳಲಾಗುತ್ತದೆ. ಆಶ್ವಲಾಯನಗೃಹ್ಯಸೂತ್ರ ಅಥವಾ ಗೃಹ್ಯ ಪರಿಶಿಷ್ಟದಲ್ಲಿ ಹೇಳಿದ ವಿಧಿ ಇದು. ಶಿಷ್ಟಾಚಾರದಲ್ಲಿ ಸೇರಿರುವುದರಿಂದ ಇದನ್ನು ಅವಶ್ಯವಾಗಿ ಮಾಡಲೇಬೇಕು.

ಜ್ಯೋತಿಷ್ಯರು ಹೇಳಿದ ಶುಭಮುಹೂರ್ತದಲ್ಲಿ, ವರನಿಂದ ಅಥವಾ ವರನ ತಂದೆಯಿಂದ ಕಳುಹಿಸಲ್ಪಟ್ಟ ನಾಲ್ಕು ಅಥವಾ ಎಂಟು ಮಂದಿ ಪುರುಷರು ಉತ್ತಮವಾದ ಉಡುಪನ್ನು ಧರಿಸಿ ಮುತ್ತೈದೆಯರಿಂದಲೂ ಮಂಗಲವಾದ್ಯಘೋಷದಿಂದಲೂ ಒಡಗೂಡಿದವರಾಗಿ ಶುಭಶಕುನಗಳನ್ನು ನೋಡುತ್ತ ಕನ್ಯಾಗೃಹಕ್ಕೆ ಬರಬೇಕು. ಅಲ್ಲಿ ಬಟ್ಟೆ ಹಾಸಿದ ಆಸನದ ಮೇಲೆ ಅಲಂಕೃತಳಾಗಿ ಪೂರ್ವಕ್ಕೆ ಮುಖಮಾಡಿ ಕುಳಿತ ಕನ್ಯೆಯ ಕೈಗೆ ಫಲ ತಾಂಬೂಲಾದಿಗಳನ್ನಿತ್ತು ಅವಳ ತಂದೆ ಮೊದಲಾದವರ ಸಮ್ಮುಖದಲ್ಲಿ ಮೂಡು ಅಥವಾ ಪಡುಮುಖವಾಗಿ ಕುಳಿತು ಗಣಪತಿ ಸ್ಮರಣೆ ಇತ್ಯಾದಿಗಳನ್ನು ಮಾಡಿ. **"ಅಮುಕಪ್ರವರಾನ್ವಿತಾಂ... ವೃಣೀಮಹೇ"** ಎಂದು ಹೇಳಬೇಕು. ಆಗ ಕನ್ಯಾದಾತೃವು ತನ್ನ ಪತ್ನಿ ಮತ್ತು ಇತರ ಬಂಧುಗಳ ಅನುಮತಿಯನ್ನು ಪಡೆದು "ವೃಣೀಧ್ವಂ ಎಂದು ಹೇಳಬೇಕು. ಇನ್ನೆರಡುಸಲ ಹಾಗೆಯೇ ಎರಡು ಕಡೆಯವರೂ ಹೇಳಬೇಕು. ಕನ್ಯಾಪಿತೃವು **"ಪ್ರದಾಸ್ಯಾಮಿ"** ಎಂದು ಗಟ್ಟಿಯಾಗಿ ಮೂರು ಸಲ ಹೇಳಬೇಕು. ಆಮೇಲೆ ವರನ ತಂದೆಯೇ ಮೊದಲಾದವರು ಗಂಧಾಕ್ಷತೆ ವಸ್ತ್ರಾದಿಗಳಿಂದ ವಧುವನ್ನು ಪೂಜಿಸಬೇಕು.

Scanned by CamScanner

ಅಥ ದಾತಾ ಭಾರ್ಯಾಜ್ಞಾತಿಬಂಧ್ವನುಮತಿಂ ಕೃತ್ವಾ ವೃಣೀಧ್ವಮಿತಿ ವದೇತ್ ॥ ಏವಂ ಪುನರ್ದ್ವಿಃ ಪ್ರಯುಜ್ಯ ಪ್ರದಾಸ್ಯಾಮೀತಿ ಚೋಚ್ಚೈಸ್ತ್ರಿರ್ವ-ದೇತ್ ॥ ತತೋ ವರಪಿತ್ರಾದಿರ್ಗಂಧಾಕ್ಷತಶುಭವಸ್ತ್ರ ಯುಗ್ಮಭೂಷಣತಾಂಬೂಲ-ಪುಷ್ಪಾದಿಭಿಃ ಕನ್ಯಾಂ ಪೂಜಯೇತ್ ಸಂಪ್ರದಾಯಾಗತಮಂತ್ರೈಃ ॥

ತತಃ ಕನ್ಯಾದಾತಾ ಪ್ರಾಙ್ಮುಖಃ ಕನ್ಯಾವಾಮತ ಉಪವಿಶ್ಯ ಆಚಮ್ಯ ದೇಶಕಾಲೌ ಸ್ಮೃತ್ವಾ ಕರಿಷ್ಯಮಾಣ ವಿವಾಹಾಂಗಭೂತಂ ವಾಗ್ದಾನಮಹಂ ಕರಿಷ್ಯೇ ॥ ತದಂಗಂ ಗಣಪತಿಪೂಜನಂ ವರುಣಪೂಜನಂ ಚ ಕರಿಷ್ಯೇ ಇತಿ ಸಂಕಲ್ಪ್ಯ ಗಣಾನಾಂತ್ವೇತಿ ಗಣಪತಿಂ ಪೂಜಯಿತ್ವಾ ಮಹೀದ್ಯೌರಿತ್ಯಾದಿಮಂತ್ರೈಃ ಯಥಾಚಾರಕಲಶಪೂಜನಾದಿ ಚ ಕೃತ್ವಾ ಸ್ವಸ್ಥಾನೇ ಕನ್ಯಾಪೂಜಯಿತಾರಮುಪವೇಶ್ಯ ಸ್ವಯಂ ತತ್ಪ್ರಾಚ್ಯಾಂ ಪ್ರತ್ಯಙ್ಮುಖ ಉಪವಿಶ್ಯ ತಂ ಗಂಧತಾಂಬೂಲಾದಿನಾಪೂಜಯೇತ್ ಸ ಚ ದಾತಾರಂ ॥ ತತೋ ದಾತಾ ಆಚಾರತೋ ಹರಿದ್ರಾಖಂಡಂ ಪಂಚ ದೃಢಪೂಗಫಲಾನಿ ಚ ಗಂಧಾಕ್ಷತಾ-ಲಂಕೃತಾನಿ ಗೃಹೀತ್ವಾ ಅಮುಕಪ್ರವರಾನ್ವಿತಾಯಾಮುಕಗೋತ್ರೋತ್ಪನ್ನಾಯಾಮುಕ-ಪ್ರಪೌತ್ರಾಯಾಮುಕಪೌತ್ರಾಯಾಮುಕಪುತ್ರಾಯಾಮುಕನಾಮ್ನೇ ವರಾಯ ಅಮುಕ-ಪ್ರವರಾನ್ವಿತಾಮಮುಕಗೋತ್ರೋತ್ಪನ್ನಾಮಮುಕಪ್ರಪೌತ್ರೀಮಮುಕಪೌತ್ರೀಮಮುಕಸ್ಯ ಮಮ ಪುತ್ರೀಮಮುಕನಾಮ್ನೀಮಿಮಾಂ ಕನ್ಯಾಂ ಜ್ಯೋತಿರ್ವಿದಾದಿಷ್ಟೇ ಸುಮುಹೂರ್ತೇ ದಾಸ್ಯೇ ಇತಿ ವಾಚಾ ಸಂಪ್ರದದೇ ಇತಿ ಚೋಕ್ತ್ವಾ ॥ ಅವ್ಯಂಗೇಽ-ಪತಿತೇಽಕ್ಲೀಬೇ ದಶದೋಷವಿವರ್ಜಿತೇ ॥ ಇಮಾಂ ಕನ್ಯಾಂ ಪ್ರದಾಸ್ಯಾಮಿ-

---

ಬಳಿಕ ಕನ್ಯಾದಾನ ಮಾಡುವವನು ಕನ್ಯೆಯ ಎಡಬದಿಯಲ್ಲಿ ಪೂರ್ವಕ್ಕೆ ಮುಖ ಮಾಡಿ ಕುಳಿತು ಆಚಮನಮಾಡಿ ದೇಶಕಾಲಾದಿಗಳನ್ನು ಸ್ಮರಿಸಿ, **"ಕರಿಷ್ಯಮಾಣ... ಪೂಜನಂ ಚ ಕರಿಷ್ಯೇ"** ಎಂದು ಸಂಕಲ್ಪಿಸಿ ಗಣಪತಿಪೂಜೆ ಹಾಗೂ **"ಮಹೀದ್ಯೌಃ"** ಮುಂತಾದ ಮಂತ್ರಗಳಿಂದ ಕಲಶಪೂಜೆಯನ್ನೂ ಮಾಡಿ ವರನ ಪಕ್ಷದ ಮುಖ್ಯಸ್ಥನನ್ನು ತಾನು ಕುಳಿತ ಸ್ಥಳದಲ್ಲಿ ಕುಳ್ಳಿರಿಸಿ, ತಾನು ಅವನ ಮುಂದೆ ಪಡುಮುಖವಾಗಿ ಕುಳಿತು, ಅವನನ್ನು ಗಂಧಪುಷ್ಪಾದಿಗಳಿಂದ ಪೂಜಿಸಬೇಕು. ಅವನು ದಾತೃವನ್ನೂ ಪೂಜಿಸಬೇಕು. ಆಮೇಲೆ ಕನ್ಯಾದಾನ ಮಾಡುವವನು ಒಂದು ಅರಸಿನ ತುಂಡು ಮತ್ತು ಐದು ಇಡೀ ಅಡಿಕೆಗಳನ್ನೂ ಗಂಧಾಕ್ಷತಾದಿಗಳಿಂದ ಅಲಂಕರಿಸಿ ತೆಕ್ಕೊಂಡು **"ಅಮುಕಪ್ರವರಾ .... ವಾಚಾ ಸಂಪ್ರದದೇ"** ಎಂದು ಹೇಳಿ **"ಅವ್ಯಂಗೇ ... ಸನ್ನಿಧೌ"** ಎಂದು ಹೇಳಿ, ವರನ ತಂದೆಯ ವಸ್ತ್ರದಲ್ಲಿ ಅವುಗಳನ್ನು ಹಾಕಬೇಕು. ಬಳಿಕ **"ತದಸ್ತು"** ಎಂಬ ಮಂತ್ರದಿಂದ ಪ್ರತಿಷ್ಠಾಪಿಸಿ ಗಂಟು ಕಟ್ಟಿ ಆ ಗಂಟನ್ನು ಚಂದನದಿಂದ ಅಲಂಕರಿಸಬೇಕು. ನಂತರ ವರನ ತಂದೆಯು ಹಾಗೆಯೇ ಅರಸಿನ ತುಂಡು ಮತ್ತು ಅಡಿಕೆಗಳನ್ನು ತೆಕ್ಕೊಂಡು **"ಅಮುಕಗೋತ್ರಾ...ಭವಂತು"** ಎಂದು ಹೇಳಿ ದಾತೃವಿನ ಬಟ್ಟೆಯಲ್ಲಿ ಹಾಕಬೇಕು.

Scanned by CamScanner
Scanned with CamScanner

ದೇವಾಗ್ನಿದ್ವಿಜಸನ್ನಿಧೌ ॥ ಇತಿ ವರಪಿತ್ರಾದಿವಸ್ತ್ರಪ್ರಾಂತೇ ತಾನಿ ಪೂಗೀಫಲಾನಿ ಪ್ರಕ್ಷಿಪ್ಯ ಪ್ರತಿಷ್ಠಾಮಂತ್ರೇಣ ತದಸ್ತ್ವಿತ್ಯಾದಿನಾ ವಸ್ತ್ರೇ ಬಧ್ವಾ ಗ್ರಂಥಿಂ ಚಂದನೇನ ಚರ್ಚಯೇದಿತ್ಯಾಚಾರಪ್ರಾಪ್ತಂ ॥

ತತೋ ಹರಿದ್ರಾಖಂಡಪಂಚಪೂಗಫಲಾನಿ ತಥೈವ ವರಪಿತ್ರಾದಿರ್ಗೃಹೀತ್ವಾ ಅಮುಕಗೋತ್ರಾಮುಕವರವಿಷಯೇ ಭವಂತೋ ನಿಶ್ಚಿತಾ ಭವಂತು ಇತಿ ದಾತೃವಸ್ತ್ರಪ್ರಾಂತೇ ಪ್ರಕ್ಷೇಪಾದಿ ಕುರ್ಯಾತ್ ॥

ತತೋ ದಾತಾ ॥ ವಾಚಾ ದತ್ತಾ ಮಯಾ ಕನ್ಯಾ ಪುತ್ರಾರ್ಥಂ ಸ್ವೀಕೃತಾ ತ್ವಯಾ ॥ ಕನ್ಯಾವಲೋಕನವಿಧೌ ನಿಶ್ಚಿತಸ್ತ್ವಂ ಸುಖೀ ಭವ ॥ ಇತಿ ವರಪಿತರಂ ಪ್ರತಿ ಪಠೇತ್ ॥ ಸ ಚ ॥ ವಾಚಾ ದತ್ತಾ ತ್ವಯಾ ಕನ್ಯಾ ಪುತ್ರಾರ್ಥಂ ಸ್ವೀಕೃತಾ ಮಯಾ ॥ ವರಾವಲೋಕನವಿಧೌ ನಿಶ್ಚಿತಸ್ತ್ವಂ ಸುಖೀ ಭವ ॥ ಇತಿ ದಾತಾರಂ ಪ್ರತಿ ಪಠೇತ್ ॥ ಭ್ರಾತ್ರಾದೌ ಸ್ವೀಕರ್ತರಿ ಭ್ರಾತ್ರರ್ಥಂ ಮಿತ್ರಾರ್ಥಮಿತ್ಯಾದ್ಯೂಹಃ ಕಾರ್ಯಃ ॥ ತತೋ ಬ್ರಾಹ್ಮಣಾಃ ॥ ಶಿವಾ ಆಪಃ ಸಂತು ॥ ಸೌಮನಸ್ಯ-ಮಸ್ತು ॥ ಅಕ್ಷತಂ ಚಾರಿಷ್ಟಂ ಚಾಸ್ತು ॥ ದೀರ್ಘಮಾಯುಃಶ್ರೇಯಃ ಶಾಂತಿಃ

ಆಮೇಲೆ ಕನ್ಯಾದಾನ ಮಾಡುವವನು **"ವಾಚಾ ದತ್ತಾ ... ಸುಖೀ ಭವ"** ಎಂದು ವರನ ತಂದೆಯನ್ನು ಕುರಿತು ಹೇಳಬೇಕು. ವರನ ತಂದೆಯು **"ವಾಚಾ ದತ್ತಾ ತ್ವಯಾ ... ಸುಖೀ ಭವ"** ಎಂದು ಪ್ರತಿವಚನವನ್ನು ಹೇಳಬೇಕು. ಅಣ್ಣನೋ ಅಥವಾ ಬೇರೆ ಯಾರಾದರೂ ಕನ್ಯೆಯನ್ನು ಕೊಡುವ, ಸ್ವೀಕರಿಸುವ ಸಂದರ್ಭದಲ್ಲಿ **"ಭ್ರಾತ್ರರ್ಥಂ" "ಮಿತ್ರಾರ್ಥಂ"** ಎಂದು ಮೊದಲಾಗಿ ಬೇಕಾದಂತೆ ಅಳವಡಿಸಿಕೊಳ್ಳಬೇಕು. ಆಮೇಲೆ ಬ್ರಾಹ್ಮಣರು **"ಶಿವಾ ಆಪಃ ಸಂತು .... ಏತದ್ವಃ ಸತ್ಯಮಸ್ತು"** ಎಂಬಲ್ಲಿ ವರೆಗೆ ಹೇಳಬೇಕು. ಬಳಿಕ **"ಸಮಾನೀವ ಆಕೂತಿಃ ..." "ಪ್ರಸುಗ್ಮಂತಾ ..."** ಎಂಬ ಎರಡು ಮಂತ್ರಗಳನ್ನೂ ಹೇಳಬೇಕು.

ಬಳಿಕ ಕನ್ಯಾದಾತೃವು ಒಂದು ಪಾತ್ರೆಯಲ್ಲಿ ರಾಶಿ ಹಾಕಿ ಹರಡಿದ ಅಕ್ಕಿಯ ರಾಶಿಯ ಮೇಲೆ ಶಚಿಯನ್ನು ಆವಾಹಿಸಿ ಷೋಡಶೋಪಚಾರಗಳಿಂದ ಪೂಜಿಸಬೇಕು. ಕನ್ಯೆಯು **"ದೇವೇಂದ್ರಾಣಿ ... ದೇಹಿ ಮೇ"** ಎಂದು ಶಚೀದೇವಿಯನ್ನು ಪ್ರಾರ್ಥಿಸಬೇಕು. ಬಳಿಕ ಸ್ತ್ರೀಯರು ಮಂಗಳಾರತಿ ಮುಂತಾದ ಶುಭಕರ್ಮಗಳನ್ನು ಮಾಡಿದ ಮೇಲೆ ಗಂಧತಾಂಬೂಲಾದಿಗಳಿಂದ ಅರ್ಚಿಸಲ್ಪಟ್ಟ ಬ್ರಾಹ್ಮಣರು ಮುಂದಿನ ಆಶೀರ್ವಾದ ಮಂತ್ರಗಳನ್ನು ಪಠಿಸಬೇಕು.

Scanned by CamScanner

ಪುಷ್ಟಿಸ್ತುಷ್ಟಿಶ್ಚಾಸ್ತು ॥ ಏತದ್ವಃ ಸತ್ಯಮಸ್ತು ॥ ಇತ್ಯುಕ್ತ್ವಾ ॥ ಓಂ ಸಮಾನೀವ ಆಕೂತಿಃ ಸಮಾನಾ ಹೃದಯಾನಿ ವಃ ॥ ಸಮಾನಮಸ್ತುವೋಮನೋಯಥಾವಃ ಸುಸಹಾಸತಿ ॥ ಓಂ ಪ್ರಸುಗ್ಮಂತಾಧಿಯಸಾನಸ್ಯಸಕ್ಷಣಿರ್ವರೇಭಿರ್ವರಾಂ ಅಭಿಷು ಪ್ರಸೀದತಃ ॥ ಅಸ್ಮಾಕಮಿಂದ್ರಉಭಯಂಜುಜೋಷತಿಯತ್ಸೋಮ್ಯಸ್ಯಾಂಧ ಸೋಬು ಬೋಧತಿ ॥ ಇತಿ ಮಂತ್ರಂ ಪಠೇಯುಃ ॥

ತತೋ ದಾತಾ ಪಾತ್ರಸ್ಥಸಿತತಂದುಲಪುಂಜೇ ಶಚೀಮಾವಾಹ್ಯ ಷೋಡಶೋಪಚಾರೈಃ ಪೂಜಯೇತ್ತಾಂ ಚ ಕನ್ಯೈವಂ ಪ್ರಾರ್ಥಯೇತ್ ॥ ದೇವೇಂದ್ರಾಣಿ ನಮಸ್ತುಭ್ಯಂ ದೇವೇಂದ್ರಪ್ರಿಯಭಾಮಿನಿ ॥ ವಿವಾಹಂ ಭಾಗ್ಯಮಾರೋಗ್ಯಂ ಪುತ್ರಲಾಭಂ ಚ ದೇಹಿ ಮೇ ॥ ಇತಿ ॥ ತತಃ ಪುರಂಧ್ರೀಭಿಃ ನೀರಾಜನಾದಿ ಮಾಂಗಲಿಕಂ ಕಾರ್ಯಂ ॥ ವಿಪ್ರಾಶ್ಚ ಗಂಧತಾಂಬೂಲಾದಿನಾ ಪೂಜಿತಾಃ ಆಶೀರ್ಮಂತ್ರಾನ್ ಪಠೇಯುಃ ॥

ತೇ ಚ ॥ ಓಂ ಹಿಂಕೃಣ್ವತೀವಸುಪತ್ನೀವಸೂನಾಂ ವತ್ಸಮಿಚ್ಛಂತೀಮನಸಾಭ್ಯಾಗಾತ್ ॥ ದುಹಾಮಶ್ವಿಭ್ಯಾಂ ಪಯೋ ಅಘ್ನೇಯಂ ಸಾವರ್ಧತಾಂಮಹತೇ ಸೌಭಗಾಯ ॥ ಓಂ ಸಮಿದ್ಧಸ್ಯಶ್ರಯಮಾಣಃ ಪುರಸ್ತಾದ್ ಬ್ರಹ್ಮವನ್ವಾನೋ ಅಜರಂ ಸುವೀರಂ ॥ ಆರೇಅಸ್ಮದಮತಿಂಬಾಧಮಾನಉಚ್ಛ್ರಯಸ್ವ ಮಹತೇ ಸೌಭಗಾಯ ॥ ಓಂ ವನಸ್ಪತೇ ಶತವಲ್ ಶೋವಿರೋಹಸಹಸ್ರವಲ್ಶಾವಿವಯಂರುಹೇಮ ॥ ಯಂತ್ವಾಮಯಂಸ್ವಧಿತಿಸ್ತೇಜಮಾನಃಪ್ರಣಿನಾಯಮಹತೇ ಸೌಭಗಾಯ । ಓಂ ಇಂದುರ್ದೇವಾನಾಮುಪಸಖ್ಯಮಾಯನ್‌ತ್ಸಹಸ್ರಧಾರಃಪವತೇಮದಾಯ ॥ ನೃಭಿಸ್ತವಾನೋ ಅನುಧಾಮಪೂರ್ವಮಗನ್ನಿಂದ್ರಂಮಹತೇ ಸೌಭಗಾಯ ॥ ಓಂ ಅಸ್ಯಪಿಬಕ್ಷುಮತಃ ಪ್ರಸ್ಥಿತಸ್ಯೇಂದ್ರಸೋಮಸ್ಯವರಮಾಸುತಸ್ಯ ॥ ಸ್ವಸ್ತಿದಾಮನಸಾಮಾದಯಸ್ವಾರ್ವಾಚೀನೋರೇವತೇ ಸೌಭಗಾಯ ॥

ಈ ಮೇಲಿನ ಆಶೀರ್ವಾದ ಮಂತ್ರಗಳನ್ನು ಹೇಳಿ ಕನ್ಯೆಯ ತಲೆಯ ಮೇಲೆ ಅಕ್ಷತೆಗಳನ್ನು ಹಾಕಿ ಆಚಾರದಂತೆ ಇಬ್ಬರೂ ಮನೆಗಳಿಗೆ ಹೋಗುವುದು.

Scanned by CamScanner

Scanned with CamScanner

ಓಂ ಘೃತಾದುರ್ಲುಪ್ತಂ ಮಧುಮತ್ಸುವರ್ಣಂ ಧನಂಜಯಂಧರುಣಂಧಾರಯಿಷ್ಣು ॥ ಋಣಕ್ಸಪತ್ನಾದಧರಾಂಶ್ಚಕೃಣ್ವದಾರೋಹ ಮಾಂ ಮಹತೇ ಸೌಭಗಾಯ ॥ ಇತಿ ಸೌಭಗಾಯ ಪದಾಂತಾಃ ಷಟ್ ॥ ಓಂ ತದಸ್ತುಮಿತ್ರಾ ... ॥ ಇತಿ ಮಂತ್ರೈಃ ಕನ್ಯಾಶಿರಸ್ಯಾಕ್ಷತಪ್ರಕ್ಷೇಪಣಾಶೀರ್ದಾನಂ ಕುರ್ಯುಃ ಆಚಾರಾದುಭೌ ಸಂಮಿಲ್ಯ ಗೃಹಾನ್ ಗಚ್ಛೇಯುಃ ॥

॥ ಇತಿ ವಾಗ್ದಾನ ಪ್ರಯೋಗಃ ॥

Scanned by CamScanner

Scanned with CamScanner

॥ ವಿವಾಹಪೂರ್ವಕೃತ್ಯಂ ॥

॥ ಶ್ರೀಃ ॥ ವಧೂಪಿತಾ ವರಪಿತಾ ಚ ವಿವಾಹದಿನಾತ್ ಪೂರ್ವೇದ್ಯುಃ ವಿವಾಹದಿನ ಏವ ವಾ ಪೂರ್ವಾಹ್ಣೇ ಸಪತ್ನೀಕಃ ಸಂಸ್ಕಾರ್ಯೇಣ ಸಹ ಕೃತಾಭ್ಯಂಗಸ್ನಾನೋ ಧೃತಮಾಂಗಲಿಕವೇಷಃ ಕೃತೋಪಲೇಪನರಂಗಮಾಲಿಕೇ ಪ್ರಾಂಗಣೇ ವಸ್ತ್ರಾಚ್ಛಾದಿತೇ ಶುಭಾಸನೇ ಪ್ರಾಙ್ಮುಖ ಉಪವಿಶ್ಯ ಸ್ವದಕ್ಷಿಣೇ ಪತ್ನೀಂ ತದ್ದಕ್ಷಿಣೇ ಸಂಸ್ಕಾರ್ಯಮುಪವೇಶ್ಯ ಆಚಮ್ಯ ಪ್ರಾಣಾನಾಯಮ್ಯ ಇಷ್ಟದೇವತಾಂ ಗುರ್ವಾದೀಂಶ್ಚ ನಮಸ್ಕೃತ್ಯ ದೇಶಕಾಲೌ ಸಂಕೀರ್ತ್ಯ

ಕನ್ಯಾದಾತಾ:- (ಪೂರ್ವಸಂಸ್ಕಾರಲೋಪೇ ತು) ಅಮುಕನಾಮ್ನ್ಯಾಃ ಮಮಾಸ್ಯಾಃ ಕನ್ಯಕಾಯಾಃ ಜಾತಕರ್ಮನಾಮಕರಣಸೂರ್ಯಾವಲೋಕನನಿಷ್ಕ್ರಮಣೋಪವೇಶ-ನಾನ್ನಪ್ರಾಶನಚೌಲಸಂಸ್ಕಾರಾಣಾಂ ಲೋಪಜನ್ಯಪ್ರತ್ಯವಾಯಪರಿಹಾರಾರ್ಥಂ ಪ್ರತಿ-ಸಂಸ್ಕಾರಂ ಪಾದಕೃಚ್ಛ್ರಂ ಪ್ರಾಯಶ್ಚಿತ್ತಂ ಚೂಡಾಕರ್ಮಣಿ ಅರ್ಧಕೃಚ್ಛ್ರಂ ತತ್ಪ್ರತ್ಯಾಮ್ನಾಯ ಗೋನಿಷ್ಕ್ರಯೀಭೂತ ಯಥಾಶಕ್ತಿರಜತದಾನೇನಾಹಮಾಚರಿಷ್ಯೇ ॥ (ಗರ್ಭಾಧಾನಸೀಮಂತಯೋರ್ಲೋಪೇತಯೋರಪ್ಯೂಹಃ) ತಥಾ ಮಮಾಸ್ಯಾಃ ಕನ್ಯ-ಕಾಯಾಃ ಭರ್ತ್ರಾ ಸಹ ಧರ್ಮಪ್ರಜೋತ್ಪಾದನಗೃಹ್ಯ ಪರಿಗ್ರಹ ಧರ್ಮಾಚರಣೇಷ್ವಧಿಕಾರಸಿದ್ಧಿದ್ವಾರಾ

ವರಪಿತಾ:- ಮಮಾಸ್ಯ ಅಮುಕಶರ್ಮಣಃ ಪುತ್ರಸ್ಯ ದೈವಪಿತ್ರ್ಯಋಣಾಪಾಕ-ರಣಹೇತುಭೂತ ಧರ್ಮಪ್ರಜೋತ್ಪಾದನಸಿದ್ಧಿದ್ವಾರಾ

ವಿವಾಹಪೂರ್ವದಿನ ಅಥವಾ ವಿವಾಹಕ್ಕೆ ಮೊದಲು ಮಾಡಬೇಕಾದ ಕೆಲಸಗಳು:- ವಧುವಿನ ತಂದೆ ಮತ್ತು ವರನ ತಂದೆ ವಿವಾಹದ ಹಿಂದಿನ ದಿನ ಅಥವಾ ಅದೇದಿನ ಪೂರ್ವಾಹ್ಣ ಪತ್ನಿಯೊಡನೆ ಮತ್ತು ಸಂಸ್ಕಾರ್ಯನೊಡನೆ ಮಂಗಲಸ್ನಾನಮಾಡಿ ಮಂಗಲವೇಷವನ್ನು ಧರಿಸಿ ಬಟ್ಟೆಹಾಸಿದ ಆಸನದ ಮೇಲೆ ಪೂರ್ವಮುಖವಾಗಿ ಬಲಬದಿಯಲ್ಲಿ ಪತ್ನಿಯನ್ನೂ, ಅವಳ ಬಲಭಾಗದಲ್ಲಿ ಸಂಸ್ಕಾರ್ಯನನ್ನೂ ಕುಳ್ಳಿರಿಸಿ ಆಚಮನಾದಿಗಳನ್ನು ಮಾಡಿ, ಇಷ್ಟದೇವತೆ, ಗುರು, ಮೊದಲಾದವರನ್ನು ನಮಸ್ಕರಿಸಿ-

ವಧುವಿನ ತಂದೆಯು:- "ಅಮುಕನಾಮ್ನ್ಯಾಃ... ಸಿದ್ಧಿದ್ವಾರಾ" ಎಂದೂ,

ವರನ ತಂದೆಯು:- "ಮಮಾಸ್ಯ ... ಸಿದ್ಧಿದ್ವಾರಾ" ಎಂದೂ ಹೇಳಿ **"ಶ್ರೀಪರಮೇಶ್ವರ ... ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ಪೂರ್ವ ಸಂಸ್ಕಾರಗಳು ನಡೆಯದೆ ಲೋಪವಾಗಿದ್ದರೆ

Scanned by CamScanner

ಶ್ರೀಪರಮೇಶ್ವರಪ್ರೀತ್ಯರ್ಥಂ ವಿವಾಹಸಂಸ್ಕಾರಾಖ್ಯಂ ಕರ್ಮ ಕರಿಷ್ಯೇ ॥ ತದಂಗಭೂತಮದ್ಯ ಗಣಪತಿಪೂಜನಂ ಸ್ವಸ್ತಿಪುಣ್ಯಾಹವಾಚನಂ ಮಾತೃಕಾಪೂಜನಂ ನಾಂದೀಶ್ರಾದ್ಧಂ ಗ್ರಹಾನುಕೂಲ್ಯಾರ್ಥಂ ಗ್ರಹಯಜ್ಞಂ ಮಂಡಪಪ್ರತಿಷ್ಠಾ ಕುಲದೇವತಾಸ್ಥಾಪನಂ ಪೂಜನಂ ಚ ಕರಿಷ್ಯೇ ॥ ತೈಲಹರಿದ್ರಾಧಿಷ್ಠಾತ್ರೀಂ ಚ ಪೂಜಯಿಷ್ಯೇ ಇತಿ ಸಂಕಲ್ಪ್ಯ ಉಕ್ತರೀತ್ಯಾ ಕುರ್ಯಾತ್ ॥

॥ ಇತಿ ವಿವಾಹಪೂರ್ವಕೃತ್ಯಂ ॥

ಒಂದೊಂದು ಸಂಸ್ಕಾರಕ್ಕೆ ಕಾಲು ಕೃಚ್ಛ್ರ ಅಥವಾ ಗೋವಿನ ಕ್ರಯಕ್ಕೆ ಸಾಕಾಗುವಷ್ಟು ಬೆಳ್ಳಿಯ ನಾಣ್ಯಗಳನ್ನಿತ್ತು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಚೂಡಾಕರ್ಮಲೋಪಕ್ಕೆ ಅರ್ಧಕೃಚ್ಛ್ರ ಪ್ರಾಯಶ್ಚಿತ್ತ; ಗರ್ಭಾಧಾನ ಸೀಮಂತಗಳಾಗದಿದ್ದರೆ ಪ್ರಾಯಶ್ಚಿತ್ತ ಸಂಕಲ್ಪದಲ್ಲಿ ಅವುಗಳನ್ನೂ ಸೇರಿಸಿಕೊಳ್ಳಬೇಕು. **"ತದಂಗಭೂತಮದ್ಯ .... ಚ ಪೂಜಯಿಷ್ಯೇ"** ಎಂದು ಸಂಕಲ್ಪ ಮಾಡಿ ಉಪನಯನ ಮುಂತಾದ ಸಂಸ್ಕಾರಗಳ ಪೂರ್ವಭಾವಿಯಾಗಿ ಮಾಡಿದಂತೆ ಗಣಪತಿಪೂಜನ ಮುಂತಾದ ಎಲ್ಲ ಕರ್ಮಗಳನ್ನೂ ಮಾಡಬೇಕು.

Scanned by CamScanner

Scanned with CamScanner

॥ ಸೀಮಾಂತಪೂಜನಂ ॥

ಅಥ ಕನ್ಯಾದಾತಾ ವರಗೃಹಮಾಗತಃ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಕರಿಷ್ಯಮಾಣ ಕನ್ಯಾವಿವಾಹಾಂಗತ್ವೇನ ವರಸ್ಯ ಸೀಮಾಂತಪೂಜನಂ ಕರಿಷ್ಯೇ ಇತಿ ಸಂಕಲ್ಪ್ಯ ಗಣೇಶ ವರುಣ ಪೂಜನೇ ಕೃತ್ವಾ ಅಸ್ಮಿನ್ ರಾಷ್ಟ್ರೇ ಶ್ರಿಯಂ ... ಇತಿ ಪತ್ನೀ ಪ್ರಕ್ಷಿಪ್ತ ಜಲೇನ ತದೀಯ ದಕ್ಷಿಣವಾಮಪಾದೌ ಪ್ರಕ್ಷಾಲ್ಯ ಆಚಮಯ್ಯ ಗಂಧ ಪುಷ್ಪ ನೀರಾಜನವಸ್ತ್ರೈರ್ಯಥಾಸಂಭವಂ ಸಂಪೂಜ್ಯ ಯಥಾಚಾರಂ ದುಗ್ಧಾದಿಪ್ರಾಶನಂ ಕಾರಯೇತ್ ॥

॥ ಇತಿ ಸೀಮಾಂತಪೂಜಾ ॥

ಕನ್ಯಾದಾತೃವು ವರನ ಮನೆಗೆ ಹೋಗಿ ಆಚಮನ ಪ್ರಾಣಾಯಾಮ ಮುಂತಾದವುಗಳನ್ನು ಮಾಡಿ **"ಕರಿಷ್ಯಮಾಣ ... ಕರಿಷ್ಯೇ"** ಎಂದು ಸಂಕಲ್ಪಿಸಿ ಗಣೇಶ ಮತ್ತು ವರುಣನ ಪೂಜೆ ಮಾಡಿ **"ಅಸ್ಮಿನ್ ರಾಷ್ಟ್ರೇ ಶ್ರಿಯಂ ..."** ಎಂಬ ಮಂತ್ರವನ್ನು ಹೇಳುತ್ತ ಹೆಂಡತಿಯು ಎರೆದ ನೀರಿನಿಂದ ವರನ ಬಲ ಮತ್ತು ಎಡಕಾಲುಗಳನ್ನು ತೊಳೆದು ಆಚಮನಕ್ಕೆ ನೀರು ಕೊಟ್ಟು ಗಂಧ ಪುಷ್ಪ ನೀರಾಜನ ವಸ್ತ್ರ ಮೊದಲಾದವುಗಳಿಂದ ವರನನ್ನು ಪೂಜಿಸಿ ಕುಡಿಯಲು ಹಾಲು ಮುಂತಾದವನ್ನು ಕೊಡಬೇಕು.

[ಇದು ವಿವಾಹಾಂಗವಾದ ಅನಿವಾರ್ಯಕರ್ಮವೆಂದು ಪರಿಗಣಿಸಲ್ಪಡದಿರುವುದರಿಂದ ಅನೇಕರು ಇದನ್ನು ಮಾಡುವುದಿಲ್ಲ, ಮಾಡದಿದ್ದರೂ ದೋಷವಿಲ್ಲ.]

Scanned by CamScanner

Scanned with CamScanner

೪೭

॥ ವರಸ್ಯ ವಧೂಗೃಹಗಮನಂ ॥

ಶ್ರೀಃ ॥ ವರಃ ಕೃತನಿತ್ಯಕ್ರಿಯೋ ವಿಧಿವತ್ಕೃತಸ್ವಸ್ತಿವಾಚನಃ ಬ್ರಾಹ್ಮಣೈಃ ಸಹ ಸಾತ್ವಿಕಾಹಾರಂ ಭುಕ್ತ್ವಾ ಅಭುಕ್ತ್ವಾ ವಾ ಈಷದ್ಧೌತನವಂ ಶ್ವೇತಂ ಸದಶಂ ಪರೇಣಾಧೃತಂ ವಸ್ತ್ರಯುಗಲಂ ಧೃತ್ವಾ ಅಲಂಕೃತಃ ಸ್ರಗ್ವೀ ಇಷ್ಟದೇವತಾಂ ಪಿತ್ರಾದೀಂಶ್ಚ ನಮಸ್ಕೃತ್ಯ ತೈರನುಮೋದಿತೋ ಯಥಾ ವಿಭವಮಶ್ವಾದಿಯಾನಮಾರುಹ್ಯ ಧೃತಸಿತಚ್ಛತ್ರಃ ಸ್ವಬಂಧುಭಿರ್ಜ್ಞಾತಿಬಾಂಧವೈಃ ಕನಿಕ್ರದಜ್ಜನುಷಮಿತಿ ಸುಮಂಗಲ-ಸೂಕ್ತಪಠನಪರೈರ್ಬ್ರಾಹ್ಮಣೈಃ ಪುರಂಧ್ರೀಭಿಃ ಪೂರ್ಣ ಕಲಶದರ್ಪಣ ಕನ್ಯಾ ಪುಷ್ಪಾಕ್ಷತಾದೀಪಮಾಲಾಧ್ವಜಲಾಜೈರ್ಮಂಗಲಗೀತತೂರ್ಯೈಶ್ಚ ಸಹ ವಧೂಗೃಹಂ ಗತ್ವಾ ತದ್ದ್ವಾರದೇಶೇ ಪ್ರಾಙ್ಮುಖಃ ಸ್ಥಿತೋ ನೀರಾಜನಪೂರ್ಣಕುಂಭಯುತೈಃ ಪುರಂಧ್ರೀಜನೈಃ ಪ್ರತ್ಯುದ್ಯಾತೋ ನೀರಾಜಿತೋಂತರ್ಗೃಹಂ ಪ್ರವಿಶ್ಯ ತದಂಗಣೇ ಮಂಡಪಾಧಃ ಸೋತ್ತರಚ್ಛದೇ ಹರಿತದರ್ಭಾಸ್ತೀರ್ಣೇ ಚತುಷ್ಪಾದಭದ್ರಪೀಠೇ ಪ್ರಾಙ್ಮುಖ ಉಪವಿಶೇತ ॥

॥ ಇತಿ ವರಸ್ಯ ವಧೂಗೃಹಗಮನಂ ॥

ವರನು ತನ್ನ ನಿತ್ಯಕರ್ಮಗಳನ್ನೆಲ್ಲ ಮಾಡಿ, ಸ್ವಸ್ತಿವಾಚನಮಾಡಿಸಿಕೊಂಡು ಬ್ರಾಹ್ಮಣರೊಂದಿಗೆ ಸಾತ್ವಿಕವಾದ ಆಹಾರವನ್ನು ಸ್ವೀಕರಿಸಿ (ಆಹಾರ ಸ್ವೀಕಾರಮಾಡದಿದ್ದರೂ ಆಗಬಹುದು). ಹೊಸತಾದ, ಒಮ್ಮೆ ಒಗೆದ ಬಿಳಿಬಟ್ಟೆಯನ್ನುಟ್ಟು (ಅಂಚುಗಳಿರುವ ಬೇರೆಯವರು ಧರಿಸದಿರುವ) ಮತ್ತೊಂದನ್ನು ಉತ್ತರೀಯವಾಗಿ ಹಾಕಿ ತನ್ನನ್ನು ಚೆನ್ನಾಗಿ ಶೃಂಗರಿಸಿಕೊಂಡು, ಮಾಲೆಯನ್ನು ಹಾಕಿಕೊಂಡು ಇಷ್ಟದೇವತೆಯನ್ನೂ ತಂದೆ ಮೊದಲಾದ ಹಿರಿಯರನ್ನೂ ವಂದಿಸಿ ಅವರಿಂದ ಅನುಮತಿ ಪಡೆದು, ತನಗೆ ಅನುಕೂಲವಿದ್ದಂತೆ ಕುದುರೆ ಮುಂತಾಗಿ ಯಾವುದಾದರೂ ವಾಹನವನ್ನೇರಿ ಬಿಳಿಕೊಡೆಯನ್ನು ಹಿಡಿದುಕೊಂಡು, ಚೆನ್ನಾಗಿ ಸತ್ಕರಿಸಲ್ಪಟ್ಟ ತನ್ನ ಬಂಧುಬಾಂಧವರೊಡನೆ **"ಕನಿಕ್ರದಜ್ಜನುಷಂ"** ಮುಂತಾದ ಮುಂಗಲ ಸೂಕ್ತಗಳನ್ನು ಹೇಳುವ ಬ್ರಾಹ್ಮಣರೊಡನೆ, ಪೂರ್ಣಕುಂಭ, ಕನ್ನಡಿ, ಪುಷ್ಪ, ಅಕ್ಷತೆ, ದೀಪ, ಮಾಲೆ, ಧ್ವಜ, ಅರಳು ಮುಂತಾದ ಮಂಗಲದ್ರವ್ಯಗಳನ್ನು ಹಿಡಿದು ಮುತ್ತೈದೆಯರನ್ನೊಳಗೊಂಡು ಮಂಗಲವಾದ್ಯ ಘೋಷದಿಂದ ವಧುವಿನ ಮನೆಗೆ ಬಂದು ಹೊರದ್ವಾರದಲ್ಲಿ ಪೂರ್ವಾಭಿಮುಖವಾಗಿ ನಿಲ್ಲಬೇಕು. ಅಲ್ಲಿ ಪೂರ್ಣಕುಂಭ ಆರತಿ ಇತ್ಯಾದಿಗಳಿಂದ ಮುತ್ತೈದೆಯರು ಇದಿರ್ಗೊಂಡು ಅವನನ್ನು ಮನೆಯೊಳಗೆ ಕರೆದೊಯ್ದು ಮೇಲೆ ಅಂಗಳದಲ್ಲಿ ವಿವಾಹಮಂಟಪದ ಕೆಳಗೆ ಪ್ರಶಸ್ತವಾದ ಸ್ಥಳದಲ್ಲಿ ಹಸಿರು ದರ್ಭೆಗಳನ್ನು ಹಾಸಿದ ನಾಲ್ಕು ಕಾಲುಗಳುಳ್ಳ ಭದ್ರವಾದ ಆಸನದ ಮೇಲೆ ಪೂರ್ವಮುಖವಾಗಿ ಕುಳಿತುಕೊಳ್ಳಬೇಕು.

॥ ವಧೂಗೃಹಗಮನ ಸಮಾಪ್ತ ॥

Scanned by CamScanner

Scanned with CamScanner

వర: మధుపర్కేణ [illegible]

೪೭

॥ ಮಧುಪರ್ಕಃ ॥

ಶ್ರೀಃ ॥ ಪಾದ್ಯಾರ್ಥಂ ಅರ್ಘ್ಯಾರ್ಥಂ ಮಂತ್ರವತ್ತ್ರಿರಾಚಮನೀಯಾರ್ಥಂ ಶುದ್ಧಾಷ್ಟಾಚಮನೀಯಾರ್ಥಂ ಚ ಜಲಪಾತ್ರಚತುಷ್ಟಯಂ ಮಧುಪರ್ಕಂ ಕಾಂಸ್ಯಪಾತ್ರಗಂ ಪಂಚವಿಂಶತಿದರ್ಭೈರವಾಗಗ್ರಂ ವಾಮಾವರ್ತೇನ ಕೃತಂ ವಿಷ್ಟರಂ ಚ ಸಂಪಾದ್ಯ ಕರ್ತಾ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ ಕನ್ಯಾರ್ಥಿನೇ ಗೃಹಾಗತಾಯಾಸ್ಮೈ ಸ್ನಾತಕಾಯ ವರಾಯ ಕನ್ಯಾದಾನಾಂಗಭೂತಂ ಮಧುಪರ್ಕಂ ಕರಿಷ್ಯೇ ॥ ಪ್ರಾಗುಕ್ತಲಕ್ಷಣಂ ದರ್ಭಮಯಂ ಕೂರ್ಚಂ ವಿಷ್ಟರೋ ವಿಷ್ಟರೋ ವಿಷ್ಟರ ಇತಿ ವರಹಸ್ತೇ ದದ್ಯಾತ್ ॥ ವರಸ್ತು ॥ ಅಹಂ ವರ್ಷ್ಮ ತ್ಯಸ್ಯ ವಾಮದೇವೋ ವಿಷ್ಟರೋನುಷ್ಟುಪ್ ॥ ವಿಷ್ಟರೋಪವೇಶನೇ ವಿನಿಯೋಗಃ ॥

ಕನ್ಯಾಪಿತನು ವರನಿಗೆ ಮಧುಪರ್ಕ ಪೂಜೆ ಮಾಡಲು ಶುದ್ಧವಾದ ನೀರುತುಂಬಿದ ಪಾದ್ಯ, ಅರ್ಘ್ಯ, ಮಂತ್ರಯುಕ್ತವಾದ ಮೂರು ಆಚಮನ ಹಾಗೂ ಎಂಟು ಆಚಮನಗಳಿಗಾಗಿ ನಾಲ್ಕು ಪಾತ್ರೆಗಳನ್ನೂ, ಕಂಚಿನ ಪಾತ್ರೆಯಲ್ಲಿ ಮಧುಪರ್ಕವನ್ನೂ ಎಡಬದಿಗೆ ಹುರಿಮಾಡಿ ಹಣೆದ ಕೆಳಕ್ಕೆ ತುದಿಗಳಿರುವ ಇಪ್ಪತ್ತೈದು ದರ್ಭೆಗಳ ವಿಷ್ಟರ (ಆಸನ)ವನ್ನೂ ಸಂಗ್ರಹಿಸಿ ಕುಳಿತು ಆಚಮನ ಪ್ರಾಣಾಯಾಮಾದಿಗಳನ್ನು ಮಾಡಬೇಕು. ಮೊಸರು ಮತ್ತು ಜೇನನ್ನು ಒಂದುಗೂಡಿಸಿದರೆ ಮಧುಪರ್ಕವಾಗುತ್ತದೆ.

"ಸರ್ವತ್ರ ಪ್ರಾಙ್ಮುಖೋದಾತಾ ಪ್ರತಿಗ್ರಾಹೀಹ್ಯುದಙ್ಮುಖಃ । ಕನ್ಯಾದಾನೇ ವಿಪರ್ಯಾಸೋ ಮಧುಪರ್ಕಸ್ತು ಪಶ್ಚಿಮಃ" ॥ ಇತರ ಎಲ್ಲ ಕಡೆಗಳಲ್ಲಿಯೂ ಕೊಡುವವನು ಪೂರ್ವಕ್ಕೆ ಮುಖವುಳ್ಳವನೂ, ತೆಕ್ಕೊಳ್ಳುವವನು ಉತ್ತರಕ್ಕೆ ಮುಖವುಳ್ಳವನೂ ಆಗಿರುತ್ತಾನೆ. ಆದರೆ ಕನ್ಯಾದಾನದಲ್ಲಿ ಸ್ವೀಕರಿಸುವವನು ಪೂರ್ವಕ್ಕೆ ಮುಖವುಳ್ಳವನೂ, ಕೊಡುವವನು ಉತ್ತರಕ್ಕೆ ಮುಖಮಾಡಿದವನೂ ಆಗಿರಬೇಕು. ಮಧುಪರ್ಕದಲ್ಲಿ ಕೊಡುವವನು ಪಶ್ಚಿಮಕ್ಕೆ ಮುಖಮಾಡಿರಬೇಕು **"ಕನ್ಯಾರ್ಥಿನೇ ಗೃಹಾಗತಾಯ ... ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ವರನಿಗೆ ಎರಡನೆಯ ಮದುವೆ ಎಂದಾದರೆ **'ಸ್ನಾತಕಾಯ'** ಎಂಬುದನ್ನು ಬಿಡಬೇಕು. **"ವಿಷ್ಟರೋ ..."** ಎಂದು ಮೂರು ಬಾರಿ ಹೇಳಿ ಹಿಂದೆ ಹೇಳಿದ ಕೂರ್ಚವನ್ನು ವರನ ಕೈಗೆ ಕೊಡಬೇಕು. ವರನು **"ಅಹಂವರ್ಷ್ಮ ... "** ಎಂಬ ಮಂತ್ರಪೂರ್ವಕ ಉತ್ತರಕ್ಕೆ ತುದಿಗಳಿರುವ ಅದರ ಮೇಲೆ ಕುಳಿತುಕೊಳ್ಳಬೇಕು. ಬಳಿಕ ಅರ್ಚಕನು **"ಪಾದ್ಯಂ ..."** ಎಂದು ಮೂರು ಬಾರಿ ಹೇಳಿ ಹೆಂಡತಿಯು ಎರೆದ ನೀರಿನಿಂದ ವರನ ಬಲ-ಎಡ ಕಾಲುಗಳನ್ನು ತೊಳೆಯಬೇಕು.

Scanned by CamScanner

Scanned with CamScanner

ಓಂ ಅಹಂ ವರ್ಷ್ಮಸಜಾತಾನಾಂ ವಿದ್ಯುತಾಮಿವ ಸೂರ್ಯಃ ॥ ಇದಂ ತಮಧಿತಿಷ್ಠಾಮಿಯೋ ಮಾಕಶ್ಚಾಭಿದಾಸತಿ ॥ ಇತ್ಯುದಗಗ್ರೇ ವಿಷ್ಟರ ಉಪ- ವಿಶೇತ್ ॥ (ವಿಷ್ಟರಂ ಮಂತ್ರೇಣ ಪದ್ಭ್ಯಾಮಾಕ್ರಮ್ಯವಾಸೀತ್) ॥ ತತೋಽರ್ಚಕೇನ ಪಾದ್ಯಂ ಪಾದ್ಯಂ ಪಾದ್ಯಮಿತಿ ತ್ರಿರ್ನಿವೇದಿತಂ ಪಾದ್ಯಂ ವರೋ ಗೃಹ್ಣೀಯಾತ್ ॥ ತತೋಽರ್ಚಕಸ್ತೇನೋದಕೇನ ಪತ್ನೀಪ್ರಕ್ಷಿಪ್ತೇನ ವರಸ್ಯ ದಕ್ಷಿಣಸವ್ಯ ಪಾದೌ ಪ್ರಕ್ಷಾಲ- ಯೇತ್ ॥ ತತ್ರ ಮಂತ್ರಾಃ ॥

“ಅಸ್ಮಿನ್ ರಾಷ್ಟ್ರೇ ಶ್ರಿಯಮಾವೇಶಯಾಮ್ಯತೋ ದೇವೀಃ ಪ್ರತಿಪಶ್ಯಾ- ಮ್ಯಾಪಃ ದಕ್ಷಿಣಂಪಾದಮವನೇ ನಿಜೇಽಸ್ಮಿನ್ ರಾಷ್ಟ್ರ ಇಂದ್ರಿಯಂ ದಧಾಮಿ ॥ ಸವ್ಯಂಪಾದಮವನೇ ನಿಜೇಽಸ್ಮಿನ್ ರಾಷ್ಟ್ರ ಇಂದ್ರಿಯಂ ವರ್ಧಯಾಮಿ ॥ ಪೂರ್ವ- ಮನ್ಯಮಪರಮನ್ಯಂ ಪಾದಾವವನೇ ನಿಜೇ ॥ ದೇವಾ ರಾಷ್ಟ್ರಸ್ಯ ಗುಪ್ತಾ ಅಭವಸ್ಯಾವರುದ್ಧ್ಯೈ ” ॥ ಆಪಃ ಪಾದಾವವನೇಜನೀರ್ದ್ವಿಷಂತಂ ನಿರ್ದಹಂತು ಮೇ ॥ ತತೋ ವರೋ ಲೌಕಿಕೋದಕೇನಾಚಮ್ಯ ಅರ್ಘ್ಯಮರ್ಘ್ಯಮರ್ಘ್ಯ ಮಿತಿ ಪೂರ್ವವತ್ ತ್ರಿರ್ನಿವೇದಿತಂ ಗಂಧಮಾಲ್ಯಫಲಯುತಮರ್ಘ್ಯಮಂಜಲಿನಾ ಪ್ರತಿಗೃಹ್ಯ ಆಚಮನೀಯಮಾಚಮನೀಯಮಾಚಮನೀಯಮಿತಿ ತ್ರಿರ್ನಿವೇದಿತಂ ಪಾತ್ರಂ ಭೂಮೌ ನಿಧಾಯ ತಸ್ಯೈಕದೇಶಂ ಗೃಹೀತ್ವಾ ॥ ಓಂ ಅಮೃತೋಪಸ್ತ-

---

“ಅಸ್ಮಿನ್ ರಾಷ್ಟ್ರೇ ...” ಈ ಮಂತ್ರಗಳನ್ನು **“ನಿರ್ದಹಂತು ಮೇ”** ಎಂಬಲ್ಲಿ ವರೆಗೆ ಪಾದ್ಯಮಾಡುವಾಗ ಹೇಳಬೇಕು. ಪಾದ್ಯದ ಬಳಿಕ ವರನು ಸಾಮಾನ್ಯ ಜಲದಿಂದ ಆಚಮನ ಮಾಡಬೇಕು. ಕನ್ಯಾಪಿತನು **“ಅರ್ಘ್ಯಂ...”** ಎಂದು ಮೂರು ಬಾರಿ ಹೇಳಿ ಕೊಟ್ಟ ಗಂಧ ಮಾಲ್ಯ ಫಲ ಇತ್ಯಾದಿಗಳಿಂದ ಕೂಡಿದ ಅರ್ಘ್ಯವನ್ನು ಅಂಜಲಿಯಲ್ಲಿ ಸ್ವೀಕರಿಸಬೇಕು. ಬಳಿಕ **“ಆಚಮ ನೀಯಂ ...”** ಎಂದು ಮೂರು ಬಾರಿ ಹೇಳಿ ಕೊಟ್ಟ, ನೀರಿನ ಪಾತ್ರೆಯನ್ನು ನೆಲದ ಮೇಲಿಟ್ಟು, ಅದರಿಂದ ಸ್ವಲ್ಪ ನೀರನ್ನು ತೆಗೆದು, **“ಅಮೃತೋ.... ಸ್ವಾಹಾ”** ಎಂದು ಕುಡಿದು ಆಚಮನ ಮಾಡಿ ಕನ್ಯಾಪಿತನು ಮುಂದೆ ಹಿಡಿದ ಮಧುಪರ್ಕವನ್ನು **“ಓಂ ಮಿತ್ರಸ್ಯ ... ಪ್ರತೀಕ್ಷೇ”** ಎಂದು ನೋಡಬೇಕು. ಆಮೇಲೆ **“ಮಧುಪರ್ಕೋಽ...”** ಎಂದು ಮೂರು ಬಾರಿ ಹೇಳಿ ಕೈಗೆ ಕೊಟ್ಟ ಮಧುಪರ್ಕವನ್ನು **“ದೇವಸ್ಯತ್ವಾ...”** ಎಂದು ಮಂತ್ರ ಹೇಳಿ ಅಂಜಲಿಯಲ್ಲಿ ಹಿಡಿದು **“ಮಧುವಾತಾ... ಭವಂತು ನಃ”** ಎಂಬ ಮಂತ್ರವನ್ನು ಹೇಳಿ ಸರಿಯಾಗಿ ನೋಡಬೇಕು.

Scanned by CamScanner

ರಣಮಸಿ ಇತಿ ಪೀತ್ವಾ (ಲೌಕಿಕೋದಕೇನಾಚಮ್ಯ) ॥ ಆನೀಯಮಾನಂ ಮಧುಪರ್ಕಂ ವರಃ ॥ ಓಂ ಮಿತ್ರಸ್ಯ ತ್ವಾ ಚಕ್ಷುಷಾ ಪ್ರತೀಕ್ಷೇ ॥ ಇತ್ಯವೇಕ್ಷ್ಯ ॥ ದಾತ್ರಾ ಮಧುಪರ್ಕೋ ಮಧುಪರ್ಕೋ ಮಧುಪರ್ಕಃ ಇತಿ ತ್ರಿರ್ನಿವೇದಿತಂ ಮಧುಪರ್ಕಂ ॥ ಓಂ ದೇವಸ್ಯ ತ್ವಾ ಸವಿತುಃ ಪ್ರಸವೇಶ್ವಿನೋರ್ಬಾಹುಭ್ಯಾಂ ಪೂಷ್ಣೋಹಸ್ತಾಭ್ಯಾಂ ಪ್ರತಿಗೃಹ್ಣಾಮಿ ॥ ಇತ್ಯಂಜಲಿನಾ ಪ್ರತಿಗೃಹ್ಯ ಅಂಜಲಿಸ್ಥಮೇವ ॥ ಮಧುವಾತಾ ಇತಿ ತಿಸೃಣಾಂ ರಾಹೂಗಣೋ ಗೋತಮೋ ವಿಶ್ವೇದೇವಾ ಗಾಯತ್ರೀ ॥ ಮಧುಪರ್ಕಾವೇಕ್ಷಣೇ ವಿನಿಯೋಗಃ ॥ ಓಂ ಮಧುವಾತಾಋತಾಯತೇ ಮಧುಕ್ಷರಂತಿ ಸಿಂಧವಃ । ಮಾಧ್ವೀರ್ನಃ ಸಂತ್ವೋಷಧೀಃ ॥ ಮಧುನಕ್ತಮುತೋಷಸಿಮಧುಮತ್ಪಾರ್ಥಿವಂ ರಜಃ ॥ ಮಧುದ್ಯೌರಸ್ತುನಃ ಪಿತಾ ॥ ಮಧುಮಾನ್ನೋವನಸ್ಪತಿರ್ಮಧುಮಾँ ಅಸ್ತು ಸೂರ್ಯಃ ॥ ಮಾಧ್ವೀರ್ಗಾವೋ ಭವಂತು ನಃ ॥ ಇತ್ಯವೇಕ್ಷ್ಯ ॥

ತತ್ಪಾತ್ರಂ ಸವ್ಯಹಸ್ತೇ ಗೃಹೀತ್ವಾ ಅಂಗುಷ್ಠೋಪಕನಿಷ್ಠಿಕಾಭ್ಯಾಂ ಮಧುಪರ್ಕಂ ತ್ರಿಃ ಪ್ರದಕ್ಷಿಣಮಾಲೋಡ್ಯ ಅಂಗುಲಿಗತಂ ಮಧುಪರ್ಕಲೇಪಂ ॥ ಓಂ ವಸವಸ್ತ್ವಾ ಗಾಯತ್ರೇಣ ಛಂದಸಾ ಭಕ್ಷಯಂತು॥ ಇತಿ ಪುರಸ್ತಾನ್ನಿಮೃಜೇತ್ ॥ ಓಂ ರುದ್ರಾಸ್ತ್ವಾ ತ್ರೈಷ್ಟುಭೇನ ಛಂದಸಾ ಭಕ್ಷಯಂತು ॥ ಇತಿ ದಕ್ಷಿಣತಃ ॥ ಓಂ ಆದಿತ್ಯಾಸ್ತ್ವಾ ಜಾಗತೇನ ಛಂದಸಾ ಭಕ್ಷಯಂತು ॥ ಇತಿ ಪಶ್ಚಾತ್ ॥ ಓಂ ವಿಶ್ವೇತ್ವಾ ದೇವಾ ಅನುಷ್ಟುಭೇನ ಛಂದಸಾ ಭಕ್ಷಯಂತು ॥

ಮಧುಪರ್ಕದ ಪಾತ್ರೆಯನ್ನು ಎಡಗೈಯಲ್ಲಿ ಹಿಡಿದು ಅಂಗುಷ್ಠ ಮತ್ತು ಅನಾಮಿಕಾ ಬೆರಳುಗಳನ್ನು ಒಂದುಗೂಡಿಸಿ ಪಾತ್ರೆಯೊಳಗಿರುವ ಮಧುಪರ್ಕವನ್ನು ಪ್ರದಕ್ಷಿಣಾಕಾರವಾಗಿ ಮೂರು ಸಲ ತಿರುವಬೇಕು. ಬೆರಳುಗಳಿಗೆ ಅಂಟಿದ ಮಧುಪರ್ಕವನ್ನು ಕ್ರಮವಾಗಿ **1) "ವಸವಸ್ತ್ವಾ..." 2) "ರುದ್ರಾಸ್ತ್ವಾ ..." 3) "ಆದಿತ್ಯಾಸ್ತ್ವಾ ..." 4) "ವಿಶ್ವೇತ್ವಾ...."** ಈ ನಾಲ್ಕು ಮಂತ್ರಗಳನ್ನು ಉಚ್ಚರಿಸುತ್ತ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕುಗಳಿಗೆ ಸಿಂಪಡಿಸಬೇಕು. [ಒಂದು ಸಲ ಬೆರಳುಗಳಿಗೆ ಅಂಟಿದ್ದನ್ನು ಮಾತ್ರ ನಾಲ್ಕು ಬಾರಿ ಸಿಂಪಡಿಸಬೇಕೇ ಹೊರತು ಪುನಃ ಮಧುಪರ್ಕದಲ್ಲಿ ಕೈ ಮುಳುಗಿಸಬಾರದು. ಮುಂದೆ ಮೂರು ಬಾರಿ

Scanned by CamScanner
Scanned with CamScanner

ಇತ್ಯುತ್ತರೇ ನಿಮೃಜ್ಯ ॥ ಭೂತೇಭ್ಯಸ್ತ್ವಾ ಭೂತೇಭ್ಯಸ್ತ್ವಾ ಭೂತೇಭ್ಯಸ್ತ್ವಾ ॥ ಇತಿ ಮಧ್ಯಾತ್ ಕಿಂಚಿತ್ ಕಿಂಚಿತ್ ಗೃಹೀತ್ವಾ ತ್ರಿರೂರ್ಧ್ವಂ ಕ್ಷಿಪ್ತ್ವಾ ಮಧುಪರ್ಕಪಾತ್ರಂ ಭೂಮೌ ನಿಧಾಯ ಮಧುಪರ್ಕೈಕದೇಶಂ ಗೃಹೀತ್ವಾ ॥ ಓಂ ವಿರಾಜೋದೋಹೋಸಿ ॥ ಇತಿ ಪ್ರಾಶ್ಯ ಲೌಕಿಕೋದಕೇನಾಚಮ್ಯ ಪುನರ್ಗೃಹೀತ್ವಾ ॥ ಓಂ ಮಯಿ ದೋಹಃ ಪದ್ಯಾಯೈ ವಿರಾಜಃ ॥ ಇತಿ ಪ್ರಾಶ್ಯ ಪೂರ್ವವದಾಚಮ್ಯ ॥ ಮಧುಪರ್ಕಶೇಷಮುದಗುಪವಿಷ್ಟಾಯ ಬ್ರಾಹ್ಮಣಾಯ ದದ್ಯಾತ್ ॥ ಲೋಕವಿದ್ವಿಷ್ಟತ್ವಾದಪ್ಸು ವಾ ಕ್ಷಿಪೇತ್ ॥ ತತಃ ಪೂರ್ವನಿವೇದಿತಾಚಮನೀಯೈಕದೇಶಂ ॥ ಓಂ ಅಮೃತಾಪಿಧಾನಮಸಿ ॥ ಇತಿ ಪೀತ್ವಾ ಲೌಕಿಕೋದಕೇನ ಆಚಮ್ಯ ಆಚಮನೀಯಜಲಶೇಷಂ ಸರ್ವಂ ಗೃಹೀತ್ವಾ ॥ ಓಂ ಸತ್ಯಂ ಯಶಃ ಶ್ರೀರ್ಮಯಿ ಶ್ರೀಃ ಶ್ರಯತಾಂ ॥ ಇತಿ ಪ್ರಾಶ್ಯ ಲೌಕಿಕೋದಕೇನ ದ್ವಿರಾಚಾಮೇತ್ ॥ ತತೋ ದಾತಾ ಗೌರ್ಗೌರ್ಗೌರಿತಿ ತ್ರಿರ್ನಿವೇದಿತಾಂ ಗಾಂ ನಿಷ್ಕ್ರಯಂ ವಾ ॥ ಮಾತಾ ರುದ್ರಾಣಾಮಿತ್ಯಸ್ಯ ಭಾರ್ಗವೋ ಜಮದಗ್ನಿಗೌಸ್ತ್ರಿಷ್ಟುಪ್ ಗೋರುತ್ಸರ್ಜನೇ ವಿನಿಯೋಗಃ ॥ ಓಂ ಮಾತಾರುದ್ರಾಣಾಂ ದುಹಿತಾ ವಸೂನಾಂ ಸ್ವಸಾದಿತ್ಯಾನಾಮಮೃತಸ್ಯನಾಭಿಃ ॥ ಪ್ರನುವೋಚಂ

ಸಿಂಪಡಿಸುವಾಗ ಪ್ರತಿಸಲವೂ ಬೆರಳುಗಳನ್ನು ಅದ್ದಿ ತೆಗೆಯಬೇಕು] **"ಭೂತೇಭ್ಯಸ್ತ್ವಾ..."** ಎಂದು ಮೂರು ಬಾರಿ ಹೇಳಿ ಮೇಲ್ಭಾಗಕ್ಕೆ ಸಿಂಪಡಿಸಿ ಪಾತ್ರೆಯನ್ನು ನೆಲದ ಮೇಲಿಟ್ಟು ಅದನ್ನು ಬಗ್ಗಿಸಿ, ಕೈಯಲ್ಲಿ ಸ್ವಲ್ಪ ತೆಕ್ಕೊಂಡು **"ಓಂ ವಿರಾಜೋ ..."** ಎಂದು ಕುಡಿದು ಆಚಮನ ಮಾಡಬೇಕು. ಹಾಗೆಯೇ ಮುಂದೆ **"ಓಂ ವಿರಾಜೋ ...ಯ"** **"ಓಂ ಮಯಿ ..."** ಎಂದು ಹೇಳಿ ಕುಡಿದು ಆಚಮನ ಮಾಡಬೇಕು. ಉಳಿದ ಮಧುಪರ್ಕವನ್ನು ಬಡಗು ದಿಕ್ಕಿನಲ್ಲಿ ಕುಳಿತ ಬ್ರಾಹ್ಮಣನಿಗೆ ಕೊಡಬೇಕು. ಆದರೆ ಹಾಗೆ ಕೊಡುವುದು ಲೋಕಸಮ್ಮತವಲ್ಲದ್ದರಿಂದ ನೀರಿನಲ್ಲಿ ಚೆಲ್ಲಿಬಿಡಬೇಕು. ಮೊದಲು ಹೇಳಿದ ಆಚಮನೀಯ ಜಲದಿಂದ ಸ್ವಲ್ಪ ತೆಗೆದು **"ಅಮೃತಾ...ಸಿ"** ಎಂದು ಕುಡಿದು ಆಚಮನ ಮಾಡಿ ಉಳಿದ ಎಲ್ಲ ನೀರನ್ನೂ **"ಓಂ ಸತ್ಯಂ ..."** ಎಂದು ಹೇಳಿ ಕುಡಿದು ಎರಡು ಸಲ ಆಚಮನ ಮಾಡಬೇಕು.

ಆ ಬಳಿಕ ಕನ್ಯಾಪಿತನು **"ಗೌರ್ಗೌರ್ಗೌ"** ಎಂದು ಮೂರು ಬಾರಿ ಹೇಳಿ ಒಪ್ಪಿಸಿದ ಹಸು ಅಥವಾ ಅದಕ್ಕೆ ಬದಲಾಗಿ ಕೊಟ್ಟ ದ್ರವ್ಯವನ್ನು **"ಮಾತಾರುದ್ರಾಣಾಂ ..."** ಎಂಬ

Scanned by CamScanner
Scanned with CamScanner

ಚಿಕಿತುಷೇಜನಾಯಮಾಗಾಮನಾಗಾಮದಿತಿಂ ವಧಿಷ್ಟ ॥ ಓಂ ಉತ್ಸೃಜತ ಇತಿ ವಿಸೃಜೇತ್ ॥ ತತೋ ದಾತಾ ಗಂಧಮಾಲ್ಯವಸ್ತ್ರಯುಗೋಪವೀತಯುಗಾಭರಣಾದಿಭಿರ್ಯಥಾವಿಭವಂ ವರಂ ಪೂಜಯೇತ್ ತತೋ ವರೇಣ ಸಹಾಗತಾನ್ ತದ್ಬಂಧೂನಪಿ ಪೂಜಯೇತ್ ॥

॥ ಇತಿ ಮಧುಪರ್ಕಃ ॥

ಮಂತ್ರವನ್ನು ಹೇಳಿ ತ್ಯಾಗಮಾಡಬೇಕು. ನಂತರ ಕನ್ಯಾಪಿತನು ಗಂಧ ಮಾಲ್ಯ, ಎರಡು ವಸ್ತ್ರ, ಎರಡು ಯಜ್ಞೋಪವೀತ, ಆಭರಣ ಮುಂತಾದವುಗಳನ್ನಿತ್ತು ವರನನ್ನು ಸತ್ಕರಿಸಬೇಕು. ಬಳಿಕ ವರನ ಸಂಗಡ ಬಂದ ಬಂಧುಬಾಂಧವರನ್ನೆಲ್ಲ ಯಥೋಚಿತವಾಗಿ ಸತ್ಕರಿಸಬೇಕು.

॥ ಮಧುಪರ್ಕ ಸಮಾಪ್ತ ॥

Scanned by CamScanner

Scanned with CamScanner

೪೮

॥ ಗೌರೀಹರ ಪೂಜಾ ॥

॥ ಶ್ರೀಃ ॥ ಅಥ ಕನ್ಯಾ ಸ್ನಾತಾ ಪರಿಹಿತಾಹತವಸ್ತ್ರಾ ಗೃಹಾಂತಃ ಸೂತ್ರವೇಷ್ಟಿತೋಪಲಸಹಿತದೃಷದುಪರಿಹರಿದ್ರಾನಿರ್ಮಿತೌ ಗೌರೀಹರೌ ಸೌಭಾಗ್ಯಾದಿಕಾಮನಯಾ ಪೂಜಯಿತ್ವಾ ॥ ಅವಿಚ್ಛಿನ್ನಸೌಭಾಗ್ಯಶುಭಸಂತತಿಧನಧಾನ್ಯಾದಿಸಿದ್ಧಯೇ ಗೌರೀಹರೌ ಪೂಜಯಿಷ್ಯೇ ಇಂದ್ರಾಣೀಂ ಚ ತತ್ರೈವಾಕ್ಷತಪುಂಜೇ ಪೂಜಯಿತ್ವಾ ಪ್ರಾರ್ಥಯೇತ್ ॥ ದೇವೇಂದ್ರಾಣಿ ನಮಸ್ತುಭ್ಯಂ ದೇವೇಂದ್ರಪ್ರಿಯಭಾಮಿನಿ ॥ ವಿವಾಹಂ ಭಾಗ್ಯಮಾರೋಗ್ಯಂ ಪುತ್ರಲಾಭಂ ಚ ದೇಹಿ ಮೇ ॥ ಇತಿ ತತೋ ಗೌರೀಂ ಸೌಭಾಗ್ಯಾದಿಪ್ರಾರ್ಥಯಮಾನಾ ತತ್ರೈವ ತಿಷ್ಠೇತ್ ॥

॥ ಇತಿ ಗೌರೀಹರ ಪೂಜಾ ॥

ಕನ್ಯೆಯು ಸ್ನಾನಮಾಡಿ ಶುಚಿಯಾದ ಬಟ್ಟೆಯನ್ನು ಧರಿಸಿ ಮನೆಯ ಒಳಗೆ ದೇವರ ಕೋಣೆಯಲ್ಲಿ ಅಥವಾ ಪ್ರಶಸ್ತವಾದ ಬೇರೆ ಸ್ಥಳದಲ್ಲಿ ಚಪ್ಪಟೆ ಹಾಗೂ ಗುಂಡುಕಲ್ಲುಗಳ ಮೇಲೆ ಅರಸಿನದಿಂದ ಚಿತ್ರ ಬರೆದು ಗೌರೀಹರರ ಪೂಜೆ ಮಾಡಬೇಕು. **"ಅವಿಚ್ಛಿನ್ನ .... ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಅಕ್ಕಿಯ ರಾಶಿಯ ಮೇಲೆ ಇಂದ್ರಾಣಿಯನ್ನೂ ಪೂಜಿಸಿ **"ದೇವೇಂದ್ರಾಣಿ... ದೇಹಿ ಮೇ"** ಎಂದು ಪ್ರಾರ್ಥಿಸಬೇಕು.

Scanned by CamScanner
Scanned with CamScanner

॥ ವಧೂವರಯೋಃ ಪರಸ್ಪರನಿರೀಕ್ಷಣಂ ॥

॥ ಶ್ರೀಃ ॥ ಅಥ ಬ್ರಾಹ್ಮಣಾಃ ಸ್ವಲಂಕೃತೇ ವೇಶ್ಮನಿ ಸುಮಂಗಲಗೀತ-ತೂರ್ಯಾದಿನಿರ್ಘೋಷೇ ಕ್ರಿಯಮಾಣೇ ಪೂರ್ವಾಪರಭಾಗಯೋರ್ಹಸ್ತಾಂತ-ರಾಲಂ ವಿಹಾಯ ಪ್ರತ್ಯೇಕಂ ಪ್ರಸ್ಥಮಿತಸಿತತಂಡುಲೈರ್ದ್ವೌರಾಶೀ ಕೃತ್ವಾ ಮಧ್ಯೇ ಕುಂಕುಮಾದಿಕೃತಸ್ವಸ್ತಿಕಾಂಕಿತಮಂತಃಪಟಮುದಗ್ದಶಂ ಧಾರಯಿತ್ವಾ ಪೂರ್ವರಾಶೌ ಪ್ರತ್ಯಙ್ಮುಖಂ ವರಂ ಪಶ್ಚಿಮರಾಶೌ ಪ್ರಾಙ್ಮುಖೀಂ ಕನ್ಯಾಂ ತಂಡುಲಗುಡ-ಜೀರಕಯುತಾಂಜಲೀ ಉಭಾವವಸ್ಥಾಪ್ಯ ದ್ವಿಜಾಃ ಸತ್ಯೇನೋತ್ತಭಿತೇತಿ ಸೂಕ್ತಂ ಪಠೇಯುಃ ॥ ಪುರಂಧ್ರ್ಯೋ ಮಂಗಲಗೀತಿಃ ಕುರ್ಯುಃ ॥ ವಧೂವರೌ ಚ ಮನಸೇಷ್ಟದೇವತಾಂ ಧ್ಯಾಯಂತೌ ಸ್ವಸ್ತಿಕಾಲೋಕನಪರೌಸಮಾಹಿತೌ ತಿಷ್ಠೇತಾಂ ॥ ಅಥ ಜ್ಯೌತಿಷಿಕೇಣ ಮಂಗಲಪದ್ಯಪಾಠಪೂರ್ವಕಂ ಸ್ವೋಕ್ತ-ಕಾಲೇ ತದೇವ ಲಗ್ನಮಿತಿ ಪಠಿತ್ವಾ ಸುಮುಹೂರ್ತಮಸ್ತು ಓಂ ಪ್ರತಿಷ್ಠೇತ್ಯುಕ್ತೇ ಸದ್ಯೋಂತಃಪಟಮುದಗಪಸಾರ್ಯ ಕನ್ಯಾವರಾಭ್ಯಾಂ ಪರಸ್ಪರ-

---

ವಧೂವರರ ಪರಸ್ಪರ ನಿರೀಕ್ಷಣ:- ಚೆನ್ನಾಗಿ ಅಲಂಕರಿಸಿ ವಿವಾಹಮಂಟಪದಲ್ಲಿ ಬ್ರಾಹ್ಮಣರು, ಮಂಗಲಗೀತೆ ವಾದ್ಯಘೋಷ ಮುಂತಾದವುಗಳು ನಡೆಯುತ್ತಿರುವಾಗ, ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಒಂದು ಮೊಳದಷ್ಟು ಅಂತರ ಬಿಟ್ಟು ಒಂದೊಂದು ಸೇರು ಅಕ್ಕಿಯನ್ನು ಸುರಿದು ಎರಡು ರಾಶಿ ಮಾಡಬೇಕು. ಎರಡೂ ಬದಿಗಳಲ್ಲಿ ಕುಂಕುಮದಿಂದ ಸ್ವಸ್ತಿಕ ಚಿಹ್ನೆಯನ್ನು ಬರೆದು ಅಂತಃಪಟವನ್ನು ದಕ್ಷಿಣೋತ್ತರವಾಗಿ ಆ ಅಕ್ಕಿರಾಶಿಗಳ ಮಧ್ಯಭಾಗಕ್ಕೆ ಸರಿಯಾಗುವಂತೆ ಎತ್ತಿ ಹಿಡಿಯಬೇಕು. ಪೂರ್ವದ ಕಡೆಯ ರಾಶಿಯ ಮೇಲೆ ಪಶ್ಚಿಮಕ್ಕೆ ಮುಖ ಮಾಡಿ ವರನನ್ನೂ, ಪಶ್ಚಿಮದ ರಾಶಿಯ ಮೇಲೆ ಪೂರ್ವಕ್ಕೆ ಮುಖಮಾಡಿ ವಧುವನ್ನೂ ಅವರ ಕೈಯಲ್ಲಿ ಅಕ್ಕಿ ಬೆಲ್ಲ ಮತ್ತು ಜೀರಿಗೆಯನ್ನು ಮಿಶ್ರಮಾಡಿಕೊಟ್ಟು ನಿಲ್ಲಿಸಬೇಕು. ಬ್ರಾಹ್ಮಣರು **"ಸತ್ಯೇನೋತ್ತಭಿತಾ"** ಎಂಬ ಸೂಕ್ತವನ್ನೂ, ಮುತ್ತೈದೆಯರು ಮಂಗಲ ಗೀತೆಗಳನ್ನೂ ಹೇಳ ಬೇಕು. ವಧೂವರರು ತಮ್ಮ ಇಷ್ಟ ದೇವತೆಯನ್ನು ಧ್ಯಾನಿಸುತ್ತ ಏಕಾಗ್ರಚಿತ್ತರಾಗಿರಬೇಕು. ಸ್ವಸ್ತಿಕ ಚಿಹ್ನೆಯನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿರಬೇಕು. ನಂತರ ಜ್ಯೋತಿಷ್ಕರು ಮಂಗಲಾಷ್ಟಕ ಇತ್ಯಾದಿಗಳನ್ನು ಹೇಳಿ ತಾವು ಸೂಚಿಸಿದ ಸುಮುಹೂರ್ತಕಾಲವು ಬಂದಾಗ **"ತದೇವ ಲಗ್ನ"** ಎಂದು ಹೇಳಿ **"ಸುಮುಹೂರ್ತಮಸ್ತು ಓಂ ಪ್ರತಿಷ್ಠಾ"** ಎಂದು ಹೇಳಿದಾಗ ಅಂತಃಪಟವನ್ನು ಉತ್ತರದಿಕ್ಕಿಗೆ ಸರಿಸಬೇಕು. ಆಗ ವಧೂವರರು ತಮ್ಮ ಕೈಯಲ್ಲಿರುವ ಅಕ್ಷತಾದಿಗಳನ್ನು ಪರಸ್ಪರ ಒಬ್ಬರಿಗೊಬ್ಬರು ತಲೆಯ ಮೇಲೆ ಹಾಕಬೇಕು ಮತ್ತು ಇಬ್ಬರೂ ಪರಸ್ಪರ ಮುಖವನ್ನು ನೋಡಬೇಕು.

Scanned by CamScanner
Scanned with CamScanner

ಶಿರಸಿ ಅಂಜಲಿಸ್ಥತಂದುಲಾದ್ಯವಕಿರಣಂ ಪರಸ್ಪರನಿರೀಕ್ಷಣಂ ಚ ಕಾರಣೀಯಂ ॥ ತದಾ ವರಃ ॥ ಓಂ ಅಭ್ರಾತೃಘ್ನೀಂ ವರುಣಾಪತಿಘ್ನೀಂ ಬೃಹಸ್ಪತೇ ॥ ಇದ್ರಾ-ಪುತ್ರಘ್ನೀಂ ಲಕ್ಷ್ಮ್ಯಂ ತಾಮಸ್ಯೈಸವಿತುಃಸುವ ॥ ಇತಿ ಜಪನ್ ಕನ್ಯಾಂ ವೀಕ್ಷೇತ್ ॥ ಓಂ ಅಘೋರಚಕ್ಷುರಪತಿಘ್ನ್ಯೇಧಿ ಶಿವಾಪಶುಭ್ಯಃ ಸುಮನಾಃ ಸುವರ್ಚಾಃ ॥ ವೀರಸೂರ್ದೇವಕಾಮಾಸ್ಯೋನಾಶಂನೋಭವ ದ್ವಿಪದೇಶಂ ಚತುಷ್ಪದೇ ॥ ಇತಿ ಜಪಿತ್ವಾ ದರ್ಭಾಗ್ರೇಣ ತಸ್ಯಾ ಭ್ರುವೋರ್ಮಧ್ಯಂ ಓಂ ಭೂರ್ಭುವಃ ಸ್ವರಿತಿ ಪರಿಮೃಜ್ಯ ದರ್ಭಂ ನಿರಸ್ಯ ಅಪಉಪಸ್ಪೃಶೇತ್ ॥ ತತಸ್ತ್ರಿ-ವಾರಂ ಪಂಚವಾರಂ ವಾ ಪರಸ್ಪರಂ ಶಿರಸಿ ಋುಕ್ತವಾ ಇದಮಗ್ರೇ .... ಇತ್ಯಾದಿ ಖಂಡವಾಕ್ಯಾಂತೇ ವಧೂಪೂರ್ವಕಮಕ್ಷತಾರೋಪಣಂ ಕಾರಣೀಯಂ ॥

॥ ಇತಿ ವಧೂವರಯೋಃ ಪರಸ್ಪರನಿರೀಕ್ಷಣಂ ॥

"ಸತ್ಯೇನೋತ್ತಭಿತಾ ..." ಸೂಕ್ತ ಹಾಗೂ **"ಮಂಗಲಾಷ್ಟಕ"** ಇತ್ಯಾದಿಗಳನ್ನು ಬೇರೆ ಕಡೆ ಕೊಡಲಾಗಿದೆ. ಆಮೇಲೆ ವರನು **"ಓಂ ಅಭ್ರಾತೃಘ್ನೀಂ...."** ಎಂದು ಜಪಿಸುತ್ತ ಕನ್ಯೆಯನ್ನು ನೋಡಬೇಕು. ನಂತರ **"ಅಘೋರಚಕ್ಷು..."** ಎಂಬ ಮಂತ್ರವನ್ನು ಹೇಳಿ ದರ್ಭೆಯ ತುದಿಯಿಂದ ಕನ್ನಿಕೆಯ ಹುಬ್ಬುಗಳ ಮಧ್ಯಭಾಗವನ್ನು **"ಓಂ ಭೂರ್ಭುವಃ ಸ್ವಃ"** ಎಂದು ಹೇಳುತ್ತ ಒರಸಿ ದರ್ಭೆಯನ್ನು ಬಿಸುಟು ಕೈತೊಳೆಯ ಬೇಕು. ನಂತರ **"ಋುಕ್ತವಾ ಇದಮಗ್ರೇ ..."** ಇತ್ಯಾದಿ ಖಂಡವಾಕ್ಯಗಳನ್ನು ಹೇಳುತ್ತ ಮೂರು ಅಥವಾ ಐದು ಬಾರಿ ವಧು ಮೊದಲ್ಗೊಂಡು ಅಕ್ಷತಾರೋಪಣ ಮಾಡಬೇಕು.

Scanned by CamScanner

Scanned with CamScanner

॥ ಕನ್ಯಾದಾನ ಪ್ರಯೋಗಃ ॥

॥ ಶ್ರೀಃ ॥ ತತಃ ಓಂ ಅನೃಕ್ಷರಾಋಜವಃ ಸಂತುಪಂಥಾಯೇಭಿಃ ಸಖಾಯೋಯಂತಿನೋವರೇಯಂ ॥ ಸಮರ್ಯಮಾಸಂಭಗೋನೋನಿನೀಯಾ-ತ್ಸಂಜಾಸ್ಪತ್ಯಂಸುಯಮಮಸ್ತುದೇವಾಃ ॥ ಇತಿ ವರಂ ಪ್ರಾಙ್ಮುಖಂ ವಧೂಂಚ ಪ್ರತ್ಯಙ್ಮುಖೀಂ ಕೃತ್ವಾ ದಾತಾ ತದ್ದಕ್ಷಿಣತಃ ಸಪತ್ನೀಕಃ ಉದಙ್ಮುಖ ಉಪವಿಶ್ಯ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಅಮುಕ ಪ್ರವರಾನ್ವಿತೋ-ಮುಕಗೋತ್ರೋಮುಕ ಶರ್ಮಾಹಂ ಮಮ ಸಮಸ್ತಪಿತೃಣಾಂ ನಿರತಿಶಯಸಾ-ನಂದಬ್ರಹ್ಮಲೋಕಾವಾಪ್ತ್ಯಾದಿ ಕನ್ಯಾದಾನಕಲ್ಪೋಕ್ತ ಫಲಾವಾಪ್ತಯೇ ಅನೇನ ವರೇಣಾಸ್ಯಾಂ ಕನ್ಯಾಯಾಮುತ್ಪಾದಯಿಷ್ಯಮಾಣಸಂತತ್ಯಾ ದ್ವಾದಶಾವರಾನ್ ದ್ವಾದ-ಶಾಪರಾಂಶ್ಚ ಪುರುಷಾನ್ ಪವಿತ್ರೀಕರ್ತುಮಾತ್ಮನಶ್ಚ ಶ್ರೀಲಕ್ಷ್ಮೀನಾರಾಯಣಪ್ರೀತಯೇ ಬ್ರಾಹ್ಮವಿವಾಹಧಿನಾ ಕನ್ಯಾದಾನಮಹಂ ಕರಿಷ್ಯೇ ಇತಿ ಕುಶಾಕ್ಷತಯುತಜಲೇನ ಸಂಕಲ್ಪ್ಯ ॥

ತತ್ರ ಜಲಶುದ್ಧ್ಯರ್ಥಂ ವರುಣಪೂಜಾಂ ಉದಕಾಭಿಮಂತ್ರಣಂ ಚ ಕರಿಷ್ಯೇ ॥ ಪ್ರಾಗಗ್ರಾನುದಗಗ್ರಾನ್ ವಾ ದರ್ಭಾನಾಸ್ತೀರ್ಯ ತೇಷು ಜಲಪೂರ್ಣ-

---

"ಅನೃಕ್ಷರಾಋಜವಃ...." ಎಂಬ ಮಂತ್ರವನ್ನು ಹೇಳಿ ವರನನ್ನು ಪೂರ್ವಕ್ಕೆ ಮುಖವಾಗುವಂತೆಯೂ, ವಧುವನ್ನು ಪಶ್ಚಿಮಕ್ಕೆ ಮುಖವಾಗುವಂತೆಯೂ ನಿಲ್ಲಿಸಿ ಕನ್ಯಾಪಿತನು ಅವರ ದಕ್ಷಿಣಭಾಗದಲ್ಲಿ ಕುಳಿತು ಆಚಮನ ಪ್ರಾಣಾಯಾಮಾದಿಗಳನ್ನು ಮಾಡಿ **"ಅಮುಕಪ್ರವರಾ ... ಕನ್ಯಾದಾನಮಹಂ ಕರಿಷ್ಯೇ"** ಎಂದು ದರ್ಭೆ ಮತ್ತು ಅಕ್ಷತೆಗಳಿಂದ ಕೂಡಿದ ನೀರಿನಿಂದ ಸಂಕಲ್ಪ ಮಾಡಬೇಕು.

ಜಲಶುದ್ಧಿಗೋಸ್ಕರ **"ಜಲಶುದ್ಧ್ಯರ್ಥಂ .... ಕರಿಷ್ಯೇ"** ಎಂದು ಸಂಕಲ್ಪಿಸಿ ಮೂಡು ಅಥವಾ ಬಡಗು ದಿಕ್ಕಿಗೆ ತಲೆ ಇರುವ ದರ್ಭೆಗಳನ್ನು ಹಾಸಿ, ಅವುಗಳ ಮೇಲೆ ಒಂದು ಕಲಶ ಸ್ಥಾಪನೆ ಮಾಡಿ; ಭತ್ತ, ಗೋದಿ ಇತ್ಯಾದಿಗಳನ್ನು ಹಾಕಿ, ಗಂಧಪುಷ್ಪಾಕ್ಷತಾದಿಗಳಿಂದ ಅಲಂಕರಿಸಿ ದೂರ್ವೆ ಮತ್ತು ಪಲ್ಲವಗಳಿಂದ ಅದರ ಮುಖವನ್ನು ಆವರಿಸಿ, ಜಲಸಂಬಂಧೀ ಮಂತ್ರಗಳಿಂದ ಅಭಿಮಂತ್ರಿಸಬೇಕು. ಅದರಲ್ಲಿ ವರುಣನನ್ನು ಪೂಜಿಸಬೇಕೆಂಬ ಶಿಷ್ಟಾಚಾರವಿದೆ.

Scanned by CamScanner

Scanned with CamScanner

ಕಲಶಂ ನಿಧಾಯ ವ್ರೀಹಿಯವಾನೋಪ್ಯ ಗಂಧಪುಷ್ಪಾದಿಭಿರಲಂಕೃತ್ಯ ದೂರ್ವಾಪಲ್ಲವೈರ್ಮುಖಮವಸ್ತೀರ್ಯಾಬ್ಲಿಂಗಾಭಿಃ ಋಗ್ಭಿರಭಿಮಂತ್ರಯೇತ್ ॥ ತತ್ರ ವರುಣಂ ಪೂಜಯೇದಿತಿ ಶಿಷ್ಟಾಚಾರಃ ॥

ತತಃ ಸಪತ್ನೀಕ ಉತ್ಥಾಯ ಉದಙ್ಮುಖ ಏವ ಕನ್ಯಾಂ ಸಂಪ್ರಗೃಹ್ಯ ॥ ಕನ್ಯಾಂ ಕನಕಸಂಪನ್ನಾಂ ಕನಕಾಭರಣೈರ್ಯುತಾಂ ॥ ದಾಸ್ಯಾಮಿ ವಿಷ್ಣವೇ ತುಭ್ಯಂ ಬ್ರಹ್ಮಲೋಕಜಿಗೀಷಯಾ ॥ ವಿಶ್ವಂಭರಃ ಸರ್ವಭೂತಃ ಸಾಕ್ಷಿಣ್ಯಃ ಸರ್ವದೇವತಾಃ ॥ ಇಮಾಂ ಕನ್ಯಾಂ ಪ್ರದಾಸ್ಯಾಮಿ ಪಿತೃಣಾಂ ತಾರಣಾಯ ಚ ॥ ಇತ್ಯುಕ್ತ್ವಾ ಸ್ವದಕ್ಷಿಣಸ್ಥಭಾರ್ಯಾದತ್ತಪೂರ್ವಕಲ್ಪಿತಜಲಧಾರಾಮವಿಚ್ಛಿನ್ನಾಂ ನವಕಾಂಸ್ಯಪಾತ್ರೋಪರಿಧೃತಕನ್ಯಾಂಜಲ್ಯುಪರಿಸ್ಥವರಾಂಜಲಿದಕ್ಷಿಣಹಸ್ತೇ ಕ್ಷಿಪನ್ ವದೇತ್ ॥ ಕನ್ಯಾ ತಾರಯತು ॥ ಪುಣ್ಯಂ ವರ್ಧತಾಂ ॥ ಶಿವಾ ಆಪಃ ಸಂತು ॥ ಸೌಮನಸ್ಯಮಸ್ತು ॥ ಅಕ್ಷತಂ ಚಾರಿಷ್ಟಂ ಚಾಸ್ತು ॥ ದೀರ್ಘಮಾಯುಃ ಶ್ರೇಯಃ ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು ॥ ಯಚ್ಛ್ರೇಯಸ್ತದಸ್ತು ॥ ಯತ್ಪಾಪಂ ತತ್ಪ್ರತಿಹತಮಸ್ತು ॥ ಪುಣ್ಯಾಹಂ ಭವಂತೋ ಬ್ರುವಂತು ॥ ಸ್ವಸ್ತಿ ಭವಂತೋ ಬ್ರುವಂತು ॥ ಋದ್ಧಿಂ ಭವಂತೋ ಬ್ರುವಂತು ॥ ಶ್ರೀರಸ್ತ್ವಿತಿ ಭವಂತೋ ಬ್ರುವಂತು ॥ ಅಮುಕಪ್ರವರಾನ್ವಿತಾಮುಕಗೋತ್ರೋಮುಕಶರ್ಮಾಹಂ ಮಮ ಸಮಸ್ತೇತ್ಯಾದಿ ಪ್ರೀತಯೇ ಇತ್ಯಂತ ಮುಕ್ತ್ವಾ ॥ ಅಮುಕ ಪ್ರವರಾನ್ವಿತಾಮುಕಗೋತ್ರೋತ್ಪನ್ನಾಯಾಮುಕಪ್ರಪೌತ್ರಾಯಾಮುಕಪೌತ್ರಾಯಾಮುಕಪುತ್ರಾಯಾಮುಕಶರ್ಮಣೇ ಶ್ರೀಧರರೂಪಿಣೇ ಕನ್ಯಾರ್ಥಿನೇ ವರಾಯ ॥ ಅಮುಕಪ್ರವರೋಪೇತಾಮುಕಗೋತ್ರೋತ್ಪನ್ನಾಮಮುಕಪ್ರಪೌತ್ರೀಮಮುಕಪೌತ್ರೀಮಮುಕಶರ್ಮಣೋ ಮಮ ಪುತ್ರೀಮಮುಕನಾಮ್ನೀಂ ಕನ್ಯಾಂ ಶ್ರೀರೂಪಿಣೀಂ ಪ್ರಜಾಪತಿದೈವತ್ಯಾಂ ಪ್ರಜೋತ್ಪಾದನಾರ್ಥಂ ತುಭ್ಯಮಹಂ ಸಂಪ್ರದದೇ ಮಮ ॥ ಕನ್ಯಾಂ ಪ್ರತಿಗೃಹ್ಣಾತು ಭವಾನ್ ॥ ಇತಿ ವರಹಸ್ತೇ ಸಕುಶಾಕ್ಷತಜಲಂ ಕ್ಷಿಪನ್ ಪ್ರಜಾಪತಿಃ ಪ್ರೀಯತಾಮಿತಿ ಮನಸಾ ಸ್ಮರೇತ್ ॥ ಏವಂ ಪುನಃ ಕನ್ಯಾ ತಾರಯತ್ವಿತ್ಯಾದಿ ದ್ವಿಃ ॥

ಬಳಿಕ ಪತ್ನಿಯೊಡನೆ ಎದ್ದು ನಿಂತು ಉತ್ತರಕ್ಕೆ ಮುಖಮಾಡಿ, ಕನ್ಯೆಯ ಹೆಗಲು ಮುಟ್ಟಿ **"ಕನ್ಯಾಂ ಕನಕ .. ತಾರಣಾಯ ಚ"** ಎಂದು ಹೇಳಬೇಕು. ನಂತರ ತನ್ನ ಬಲಭಾಗದಲ್ಲಿ ನಿಂತಿರುವ ಪತ್ನಿಯು, ಮೊದಲು ಅಭಿಮಂತ್ರಿಸಿ ಇಟ್ಟ ಕಲಶೋದಕವನ್ನು ಧಾರಾಕಾರವಾಗಿ, ಕಂಚಿನ ಹೊಸ ಬಟ್ಟಲಿನ ಮೇಲೆ ಹಿಡಿದಿರುವ ಕನ್ಯೆಯ ಅಂಜಲಿ, ಅದರ ಮೇಲಿರುವ ವರನ ಅಂಜಲಿ, ಅದರ ಮೇಲೆ ಹಿಡಿದಿರುವ ಕನ್ಯಾಪಿತನ ಅಂಜಲಿಯಲ್ಲಿ ಬೀಳುವಂತೆ, ಆ ನೀರು ವರನ ಅಂಜಲಿಯ ಬಲಗೈ ಮೇಲೆ ಬೀಳುವಂತೆ ಸುರಿಯಬೇಕು. ಆಗ ಕನ್ಯಾಪಿತನು **"ಕನ್ಯಾತಾರಯತು.... ಬ್ರುವಂತು"** ಎಂದು ಹೇಳಿ **"ಅಮುಕ ಪ್ರವರಾ ... ಅಹಂ, ಮಮ**

Scanned by CamScanner

Scanned with CamScanner

ತತೋ ವರಃ ಓಂ ಸ್ವಸ್ತೀತ್ಯುಕ್ತ್ವಾ ಕನ್ಯಾಯಾ ದಕ್ಷಿಣಾಂಸಮಭಿಮೃಶ್ಯ ॥ ಓಂ ಕ ಇದಂ ಕಸ್ಮಾ ಅದಾತ್ಕಾಮಃ ಕಾಮಾಯಾದಾತ್ಕಾಮೋದಾತಾಕಾಮಃ ಪ್ರತಿಗ್ರಹೀತಾಕಾಮಂ ಸಮುದ್ರಮಾವಿಶಕಾಮೇನತ್ವಾ ಪ್ರತಿಗೃಹ್ಣಾಮಿಕಾಮೈತತ್ತೇವೃಷ್ಟಿರಸಿದ್ಯೌಸ್ತ್ವಾದದಾತು ಪೃಥಿವೀ ಪ್ರತಿ ಗೃಹ್ಣಾತು ॥ ಧರ್ಮಪ್ರಜಾಸಿದ್ಧ್ಯರ್ಥಂ ಕನ್ಯಾಂ ಪ್ರತಿಗೃಹ್ಣಾಮೀತಿ ವದೇತ್ ॥ ತತೋ ದಾತಾ ॥ ಗೌರೀಂ ಕನ್ಯಾಮಿಮಾಂ ವಿಪ್ರ ಯಥಾಶಕ್ತಿವಿಭೂಷಿತಾಂ ॥ .... ಗೋತ್ರಾಯ .... ಶರ್ಮಣೇ ತುಭ್ಯಂ ದತ್ತಾಂ ವಿಪ್ರ ಸಮಾಶ್ರಯ ॥ ಕನ್ಯೇ ಮಮಾಗ್ರತೋ ಭೂಯಾಃ ಕನ್ಯೇ ಮೇ ದೇವಿ ಪಾರ್ಶ್ವಯೋಃ । ಕನ್ಯೇ ಮೇ ಪೃಷ್ಠತೋ ಭೂಯಾಃ ತ್ವದ್ದಾನಾನ್ಮೋಕ್ಷಮಾಪ್ನುಯಾಂ ॥ ಮಮ ವಂಶ ಕುಲೇ ಜಾತಾ ಪಾಲಿತಾ ವತ್ಸರಾಷ್ಟಕಂ ॥ ತುಭ್ಯಂ ವಿಪ್ರ ಮಯಾದತ್ತಾ ಪುತ್ರಪೌತ್ರಪ್ರವರ್ಧಿನೀ ॥ ಧರ್ಮೇ ಚಾರ್ಥೇ ಚ ಕಾಮೇ ಚ ನಾತಿಚರಿತವ್ಯಾ ತ್ವಯೇಯಂ ॥ ವರಃ ॥ ನಾತಿಚರಾಮೀತಿ ವದೇತ್ ॥ ತತೋ ದಾತಾ ಉಪವಿಶ್ಯ ಕೃತಸ್ಯ ಕನ್ಯಾದಾನಸ್ಯ ಪ್ರತಿಷ್ಠಾಸಂಸಿದ್ಧ್ಯರ್ಥಮಿದಂ ಸುವರ್ಣಮಗ್ನಿದೈವತಂ ದಕ್ಷಿಣಾತ್ವೇನ ತುಭ್ಯಮಹಂ

... **ಪ್ರೀತಯೇ**" ಎಂದೂ "**ಅಮುಕಪ್ರವರಾನ್ವಿತಾಯ ... ತುಭ್ಯಮಹಂ ಸಂಪ್ರದದೇ ನಮಮ**" ಹೇಳಬೇಕು. "**ಕನ್ಯಾಂ ... ಭವಾನ್**" ಎಂದು ಹೇಳಿ ವರನ ಕೈಯಲ್ಲಿ ಕುಶ ಅಕ್ಷತೆ ಮತ್ತು ನೀರನ್ನು ಬಿಡಬೇಕು. ಹೀಗೆಯೇ ಇನ್ನೆರಡು ಸಲ ಮಾಡಬೇಕು. ಬಳಿಕ ವರನು "**ಓಂ ಸ್ವಸ್ತಿ**" ಎಂದು ಹೇಳಿ ಕನ್ಯೆಯ ಬಲ ಹೆಗಲನ್ನು ಮುಟ್ಟಿ, "**ತ ಇದಂ ತಸ್ಮಾ ...**" ಎಂಬ ಮಂತ್ರ ಹೇಳಿ "**ಧರ್ಮಪ್ರಜಾ....ಗೃಹ್ಣಾಮಿ**" ಎಂದು ಹೇಳಬೇಕು. ನಂತರ ದಾತನು "**ಗೌರೀಂ ಕನ್ಯಾಂ ... ತ್ವಯೇಯಂ**" ಎಂಧು ಹೇಳಿದಾಗ ವರನು "**ನಾತಿಚರಾಮಿ**" ಎಂದು ಪ್ರತ್ಯುತ್ತರ ಕೊಡಬೇಕು. ಆಮೇಲೆ ಕನ್ಯಾಪಿತನು ಕುಳಿತು "**ಕೃತಸ್ಯ ಕನ್ಯಾದಾನಸ್ಯ ... ಸಂಪ್ರದದೇ**" ಎಂದು ಹೇಳಿ ಸುವರ್ಣದಾನ ಕೊಟ್ಟು, ವರನು "**ಓಂ ಸ್ವಸ್ತಿ**" ಎಂದ ಮೇಲೆ ನೀರಿನ ಪಾತ್ರೆ, ಭೋಜನ ಸಾಮಗ್ರಿ, ಹಸು ಎಮ್ಮೆ, ಕುದುರೆ, ಆನೆ, ದಾಸಿ, ದಾಸ, ಭೂಮಿ, ವಾಹನ, ಆಭರಣ ಮುಂತಾದವುಗಳನ್ನು ಯಥಾಸಾಧ್ಯ ಸಂಕಲ್ಪಿಸಿ ವರನಿಗೆ ಕೊಡಬೇಕು.

"**.... ಗೋತ್ರಾಯ .... ಶರ್ಮಣೇ**" ಎಂಬಲ್ಲಿ ಗೋತ್ರ ಮತ್ತು ಹೆಸರನ್ನು ಸೇರಿಸಿ ಹೇಳಬೇಕು.

Scanned by CamScanner

Scanned with CamScanner

ಸಂಪ್ರದದೇ ॥ ಇತಿ ಸಜಲಂ ಸುವರ್ಣಂ ವರಹಸ್ತೇ ದತ್ವಾ ನ ಮಮೇತಿ ವದೇತ್ ॥ ವರಃ ಓಂ ಸ್ವಸ್ತಿ ॥ ತತೋ ದಾತಾ ಜಲಭಾಜನಭೋಜನ-ಗೋಮಹಿಷ್ಯಾಶ್ವಗಜದಾಸೀದಾಸಭೂವಾಹನಾಲಂಕಾರಾದಿ ಯಥಾವಿಭವಂ ಸಂಕಲ್ಪ-ಪೂರ್ವಕಂ ವರಾಯ ದದ್ಯಾತ್ ॥

ಅಥವರಃ ॥ ಯತ್ಕಕ್ಷೀವಾಂಸಂವನನಂ ವಿಶ್ವೇದೇವಾ ಅನುಷ್ಟುಪ್ ॥ ವಧೂಕುಕ್ಷ್ಯಭಿಮರ್ಶನೇ ವಿನಿಯೋಗಃ ॥ ಓಂ ಯತ್ಕಕ್ಷೀವಾಂಸಂವನನಂ ಪುತ್ರೋ ಅಂಗಿರಸಾಭವೇತ್ ॥ ತೇನನೋದ್ಯವಿಶ್ವೇದೇವಾಃ ಸಂಪ್ರಿಯಾಂಸಮಜೀಜನನ್ ॥ ಇತ್ಯನೇನ ವಧೂದಕ್ಷಿಣಕುಕ್ಷಿಮಭಿಮೃಶೇತ್ ॥

ಅಥ ಪುರೋಧಾಃ ಪೂರ್ವಾಭಿಮಂತ್ರಿತಕಲಶಜಲಂ ಕಾಂಸ್ಯಪಾತ್ರೇ ಆಸಿಚ್ಯ ॥ ಅನಾಧೃಷ್ಟಮಿತ್ಯಸ್ಯ ವಾಮದೇವ ಆಪೋ ಬೃಹತೀ ॥ ಉದಕಾಭಿ-ಮಂತ್ರಣೇ ವಿನಿಯೋಗಃ ॥ ಓಂ ಅನಾಧೃಷ್ಟಮಸ್ಯನಾಧೃಷ್ಯಂದೇವಾನಾಮೋ-ಜೋಽಭಿಶಸ್ತಿಪಾಃ ॥ ಅನಭಿಶಸ್ತ್ಯಂ ಜಸಾಸತ್ಯಮುಪಗೇಷಾಂಸ್ವಿತೇಮಾಧಾಃ ॥ ಇತ್ಯುದಕಮಭಿಮಂತ್ರ್ಯ ಸಹಿರಣ್ಯಪವಿತ್ರಯಾ ಸಕುಶದೂರ್ವಾಪಲ್ಲವಯಾ ಔದುಂಬರ್ಯಾರ್ದ್ರಯಾ ಶಾಖಯಾ ವಧೂವರಾವಭಿಷಿಂಚೇತ್ ॥ ತತ್ರ ಮಂತ್ರಾಃ ॥ ಆನಃ ಪ್ರಜಾಮಿತಿ ಸೂರ್ಯಾಸಾವಿತ್ರೀ ಸೂರ್ಯಾಸಾವಿತ್ರೀ ಜಗತೀ ॥

ಆ ನಂತರ ವರನು **"ಯತ್ಕಕ್ಷೀವಾಂಸಂವನನಂ ... "** ಎಂಬ ಮಂತ್ರದಿಂದ ವಧುವಿನ ಬಲಹೊಟ್ಟೆಯನ್ನು ಸ್ಪರ್ಶಿಸಬೇಕು. ಆಮೇಲೆ ಪುರೋಹಿತನು ಮೊದಲು ಅಭಿಮಂತ್ರಿಸಿದ ಕಲಶೋದಕವನ್ನು ಕಂಚಿನ ಪಾತ್ರೆಯಲ್ಲಿ ಸುರಿದು **"ಅನಾಧೃಷ್ಟಂ ..."** ಎಂಬ ಮಂತ್ರದಿಂದ ಅದನ್ನು ಅಭಿಮಂತ್ರಿಸಿ, ಹಿರಣ್ಯಪವಿತ್ರ ದೂರ್ವೆ ಪಲ್ಲವಗಳಿಂದ ಕೂಡಿದ ಉದುಂಬರದ ಹಸಿ ಟೊಂಗೆಯಿಂದ ವಧೂವರರನ್ನು **ಆನಃಪ್ರಜಾಂ** ..... (4) **ಸಮುದ್ರ ಜ್ಯೇಷ್ಠಾ** ..... (4) **ಆಪೋಹಿಷ್ಠಾಮ** .... (3) **ದೇವಸ್ಯತ್ವಾ** ... ಈ ಮಂತ್ರಗಳಿಂದ ಅಭಿಷೇಕಮಾಡಬೇಕು. ಅಭಿಷೇಕದ ನಂತರ ಹಾಲಿನಲ್ಲಿ ಅದ್ದಿದ ಎರಡೆಳೆ ಬಿಳಿದಾರವನ್ನು ವಧೂವರರ ಕಂಠ ಹಾಗೂ ಕಟಿಪ್ರದೇಶದಲ್ಲಿ ಈಶಾನ್ಯದಿಂದ ತೊಡಗಿ ಐದು ಅಥವಾ ನಾಲ್ಕು ಸುತ್ತು ಪ್ರದಕ್ಷಿಣಾಕಾರವಾಗಿ **"ಪರಿತ್ವಾಗಿರ್ವಣೋ"** ಇತ್ಯಾದಿ ಮಂತ್ರಗಳಿಂದ ಸುತ್ತಬೇಕು.

Scanned by CamScanner

ದ್ವಿತೀಯಾ ತ್ರಿಷ್ಟುಪ್ ಅಂತ್ಯೇ ದ್ವೇ ಅನುಷ್ಟುಭೌ ಅಭಿಷೇಕೇ ವಿನಿಯೋಗಃ ॥ ಓಂ ಆನಃಪ್ರಜಾಂ ಜನಯತು ಪ್ರಜಾಪತಿರಾಜ ರಸಾಯುಸಮೇನ ಕ್ತ್ವವರ್ಯಮಾ ॥ ಅದುರ್ಮಂಗಲೀಃ ಪತಿಲೋಕಮಾವಿಶಶನ್ನೋಭವ ದ್ವಿಪದೇಶಂ ಚತುಷ್ಪದೇ ॥ ಓಂ ಅಘೋರಚಕ್ಷು .... ॥ ಓಂ ಇಮಾಂತ್ವ-ಮಿಂದ್ರ ...... ॥ ಓಂ ಸಮ್ರಾಜ್ಞೀಶ್ವಶುರೇಭವ ...... ॥ ಸಮುದ್ರಜ್ಯೇಷ್ಠಾ ಇತಿ ಚತಸೃಣಾಂ ವಸಿಷ್ಠ ಆಪಸ್ತ್ರಿಷ್ಟುಪ್ ॥ ಅಭಿಷೇಕೇ ವಿನಿಯೋಗಃ ॥ ಓಂ ಸಮುದ್ರಜ್ಯೇಷ್ಠಾ .... ॥ ಆಪೋಹಿಷ್ಠೇತಿ ತಿಸೃಣಾಂ ಅಂಬರೀಷಃ ಸಿಂಧುದ್ವೀಪ ಆಪೋ ಗಾಯತ್ರೀ ॥ ಅಭಿಷೇಕೇ ವಿನಿಯೋಗಃ ॥ ಓಂ ಆಪೋಹಿಷ್ಠಾ-ಮಯೋ ..... ॥ ಓಂ ದೇವಸ್ಯತ್ವಾ ಸವಿತುಃ ...... ॥ ಭೂರ್ಭುವಃ ಸ್ವಃ ಅಮೃತಾಭಿಷೇಕೋ ಅಸ್ತು ॥

ತತೋ ದುಗ್ಧಾಕ್ತೇನ ದ್ವಿಗುಣಶುಕ್ಲಸೂತ್ರೇಣ ದಂಪತೀಕಂಠದೇಶೇ ಕಟಿದೇಶೇಚೈಶಾನೀಮಾರಭ್ಯ ಪಂಚವಾರಂ ಚತುರ್ವಾರಂ ವಾ ಪ್ರದಕ್ಷಿಣಂ ವೇಷ್ಟಯೇತ್ ಪುರೋಧಾ ಏತೈರ್ಮಂತ್ರೈಃ ॥ ಓಂ ಪರಿತ್ವಾಗಿರ್ವಣೋ .... ॥

ತತಃ ಕಂಠದೇಶಸ್ಥಂ ಸೂತ್ರಮಧೋ ನಿಷ್ಕಾಸ್ಯ ಕುಂಕುಮಾತ್ತಮೂರ್ಣಾ-ಯುಕ್ತಂ ಚ ಕೃತ್ವಾ ತೇನ ಹರಿದ್ರಾಖಂಡಂ ಬದ್ಧ್ವಾ ತದ್ವಧೂವಾಮಹಸ್ತ-ಪ್ರಕೋಷ್ಠೇ ವರೋ ಬಧ್ನೀಯಾತ್ ॥ ಓಂ ನೀಲಲೋಹಿತಂ ಭವತಿ

ಆ ಮೇಲೆ ಕಂಠದೇಶದಲ್ಲಿ ಸುತ್ತಿದ ನೂಲನ್ನು ಕೆಳಭಾಗಕ್ಕೆ ಜಾರಿಸಿ ತೆಗೆದು ಅದಕ್ಕೆ ಕುಂಕುಮವನ್ನು ಲೇಪಿಸಿ, ಅದರೊಂದಿಗೆ ಉಣ್ಣೆಯನ್ನೂ ಸೇರಿಸಿ ಅದರಲ್ಲಿ ಅರಸಿನದ ತುಂಡನ್ನು ಕಟ್ಟಿ "ನೀಲಲೋಹಿತಂ ..." ಎಂಬ ಮಂತ್ರದಿಂದ ವರನು ಅದನ್ನು ವಧುವಿನ ಎಡಗೈಯ ಮಣಿಗಂಟಿನಲ್ಲಿ ಕಟ್ಟಬೇಕು. ಹಾಗೆಯೇ ಸೊಂಟದ ಭಾಗದಲ್ಲಿ ಸುತ್ತಿದ ನೂಲನ್ನು ಮೇಲಕ್ಕೆ ತೆಗೆದು ಮೊದಲಿನಂತೆ ತಯಾರಿಸಿ ಅದೇ ಮಂತ್ರದಿಂದ ವಧುವು ವರನ ಬಲಗೈಯಲ್ಲಿ ಕಟ್ಟಬೇಕು.

Scanned by CamScanner

ಕೃತ್ವಾಸಕ್ತಿರ್ವ್ಯಜ್ಯತೇ ॥ ಏಧಂತೇ ಅಸ್ಯಾಜ್ಞಾತಯಃ ಪತಿರ್ಬಂಧೇಷು ಬಧ್ಯತೇ ॥ ಇತಿ ಮಂತ್ರೇಣ ॥ ತತಃ ಕಟಿದೇಶಸ್ಥಂ ಸೂತ್ರಮುಪರಿನಿಷ್ಕಾಸ್ಯ ತಾದೃಶಂ ಕೃತ್ವಾ ವರದಕ್ಷಿಣಹಸ್ತಪ್ರಕೋಷ್ಠೇ ವಧೂರ್ಬಧ್ನೀಯಾತ್ತೇನೈವ ಮಂತ್ರೇಣ ॥

॥ ಇತಿ ಕನ್ಯಾದಾನ ಪ್ರಯೋಗಃ ॥

Scanned by CamScanner

Scanned with CamScanner

॥ ಅಕ್ಷತಾರೋಪಣಂ ॥

ಅಥ ವಧೂವರೌ ಪರಸ್ಪರ ಮೂರ್ಧನಿ ಆಯುರ್ವರ್ಧನಕರಮಕ್ಷತಾ-ರೋಪಣಂ ಕುರ್ಯಾತಾಂ ॥ ತತಃ ತೈಜಸಪಾತ್ರೇ ಗವ್ಯಕ್ಷೀರೇ ಘೃತಮಾಸಿಚ್ಯ ಪಾತ್ರಾಂತರೇಣಾರ್ದ್ರಶುಕ್ಲತಂದುಲಾನಾದಾಯ ವರಃ ಪ್ರಕ್ಷಾಲಿತಪಾಣಿಃ ಪ್ರಕ್ಷಾಲಿತ-ವಧ್ವಂಜಲೌ ಕ್ಷೀರಘೃತಂ ಹಸ್ತದ್ವಯಾಂಗುಲಿಭಿರ್ದ್ವಿರುಪಸ್ತೀರ್ಯ ದ್ವಿವಾರಂ ತಂಡುಲಾನೋಪ್ಯ ತೇನ ತಥೈವ ದ್ವಿರಭಿಘಾರಯೇತ್ ॥ ತತೋ ವರಾಂಜಲಾವ-ಪ್ಯೇವಮೇವ ದಾತ್ರಾನ್ಯೇನ ವಾ ಪೂರಿತೇ ದಾತಾ ತದಂಜಲ್ಯೋಃ ಸುವರ್ಣಂ ನಿಧಾಯ ವರಾಂಜಲಿಂ ಕನ್ಯಾಂಜಲ್ಯುಪರಿ ನಿಧಾಯ ಕನ್ಯಾ ತಾರಯತು ॥ ದಕ್ಷಿಣಾಃ ಪಾಂತು ॥ ಬಹುದೇಯಂ ಚಾಸ್ತು ॥ ಪುಣ್ಯಂ ವರ್ಧತಾಂ ॥ ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು ॥ ತಿಥಿಕರಣಮೂಹೂರ್ತನಕ್ಷತ್ರಸಂಪದಸ್ತು ॥ ಇತ್ಯುಚ್ಚಾರ್ಯ ವಧೂಮುತ್ಥಾಪ್ಯ ತಯಾಂಜಲಿಸ್ಥಾನಕ್ಷತಾನ್ ಭಗೋ ಮೇ ಕಾಮಃ ಸಮೃಧ್ಯತಾಂ ॥ ಇತಿ ವರಮೂರ್ಧನ್ಯಾರೋಪಯೇತ್ ॥

ತತೋ ವರಃ ಸ್ವಾಂಜಲಿಸ್ಥಾನ್ ಯಜ್ಞೋ ಮೇ ಕಾಮಃ ಸಮೃಧ್ಯತಾಂ ಇತಿ ವಧೂಶಿರಸಿ ಕ್ಷಿಪೇತ್ ॥ ಏವಂ ಪುನರ್ದ್ವಿಃ ॥ ತತ್ರ ದ್ವಿತೀಯೇ ಶ್ರಿಯೋ ಮೇ ಕಾಮಃ ಸಮೃಧ್ಯತಾಂ ಇತಿ ವಧೂಃ ॥ ಧರ್ಮೋ ಮೇ ಕಾಮಃ ಸಮ್ಯ-ಧ್ಯತಾಂ ಇತಿ ವರಃ ॥ ತೃತೀಯೇ ಪ್ರಜಾ ಮೇ ಕಾಮಃ ಸಮೃಧ್ಯತಾಂ ॥ ಇತಿ ವಧೂಃ ॥ ಯಶೋ ಮೇ ಕಾಮಃ ಸಮೃಧ್ಯತಾಂ ॥ ಇತಿವರಃ ॥ ತತಃ ಕನ್ಯಾ ವರಾಂಜಲೌ ದ್ವಿರುಪಸ್ತೀರ್ಯ ದ್ವಿಸ್ತಂಡುಲಾನೋಪ್ಯ ದ್ವಿರಭಿಘಾರಯೇತ್ ॥ ತತೋ ದಾತ್ರಾನ್ಯೇನ ವಾ ಪೂರ್ವವತ್ಕನ್ಯಾಂಜಲಾವಾಪೂರಿತೇ ದಾತಾ ಪೂರ್ವವದ್ಧಿರಣ್ಯಂ ನಿಧಾಯ ಕನ್ಯಾಂಜಲಿಂ ವರಾಂಜಲೌ ನಿಧಾಯ ಪೂರ್ವವ-

---

ಒಂದು ಪಾತ್ರೆಯಲ್ಲಿ ಹಾಲು ಮತ್ತು ತುಪ್ಪವನ್ನು ಬೆರಸಿ ಇಡಬೇಕು. ಇನ್ನೊಂದರಲ್ಲಿ ತೋಯಿಸಿದ ಬಿಳಿ ಅಕ್ಕಿ ಇಡಬೇಕು. ವಧೂವರರು ತಮ್ಮ ಕೈಗಳನ್ನು ತೊಳೆದು ಕೊಳ್ಳಬೇಕು. ಬಳಿಕ ವರನು ತನ್ನ ಎರಡು ಬೆರಳುಗಳಿಂದ ಎರಡು ಸಲ ವಧುವಿನ ಅಂಜಲಿಯಲ್ಲಿ ಹಾಲುತುಪ್ಪದ ಮಿಶ್ರಣವನ್ನು ಸವರಬೇಕು. ಎರಡು ಸಲ ಅಕ್ಕಿಯನ್ನು ಹಾಕಬೇಕು. ಪುನಃ ಎರಡು ಸಲ ಮಿಶ್ರಣವನ್ನು ಸವರಬೇಕು. ದಾತಾ ಅಥವಾ ಇನ್ನಾರಾದರೂ ಹೀಗೆಯೇ ವರನ ಅಂಜಲಿಯಲ್ಲಿ ಮಾಡಬೇಕು. ಬಳಿಕ ದಾತನು ಇಬ್ಬರ ಬೊಗಸೆಗಳಲ್ಲೂ ಸುವರ್ಣವನ್ನಿಟ್ಟು ಕನ್ಯಾಂಜಲಿಯ ಮೇಲೆ ವರಾಂಜಲಿಯನ್ನಿಟ್ಟು **"ಕನ್ಯಾ ತಾರಯತು ಸಂಪದಸ್ತು"** ಎಂದು ಹೇಳಿ ವಧುವನ್ನು ಎಬ್ಬಿಸಬೇಕು. ಅವಳು **"ಭಗೋ ಮೇ ... ಧ್ಯತಾಂ"** ಎಂದು ಹೇಳುತ್ತ ವರನ ತಲೆಯ ಮೇಲೆ ಅಕ್ಷತೆಯನ್ನು ಹಾಕಬೇಕು.

Scanned by CamScanner

ತ್ಯನ್ಯಾ ತಾರಯತ್ವಿತ್ಯಾದಿ ವಾಕ್ಯಷಟ್ಕಂ ವದೇತ್ ॥ ತತೋ ವರಃ ಯಜ್ಞೋ ಮೇ ಕಾಮಃ ಸಮೃಧ್ಯತಾಂ ॥ ವಧೂ ತು ಭಗೋ ಮೇ ಕಾಮಃ ಸಮೃಧ್ಯತಾಂ ಇತಿ ॥ ಏವಂ ಪುನರ್ದ್ವಿಃ ॥ ತತ್ರ ದ್ವಿತೀಯೇ ಧರ್ಮೋ ಮೇ ಕಾಮಃ ಸಮೃಧ್ಯತಾಂ ಇತಿ ವರಃ ॥ ಶ್ರಿಯೋ ಮೇ ಕಾಮಃ ಸಮೃಧ್ಯತಾಂ ಇತಿ ವಧೂಃ ॥ ತೃತೀಯೇ ಯಶೋ ಮೇ ಕಾಮಃ ಸಮೃಧ್ಯತಾಂ ಇತಿ ವರಃ ॥ ಪ್ರಜಾ ಮೇ ಕಾಮಃ ಸಮೃಧ್ಯತಾಂ ಇತಿ ವಧೂಃ ॥ ಅಥ ವರೋ ವಧ್ವಂಜಲಿಂ ಪೂರ್ವವದಾಪೂರ್ಯ ಸ್ವಾಂಜಲಿಮನ್ಯೇನ ಪೂರಯಿತ್ವಾ ಉಭೌ ವಧೂಪೂರ್ವಕಂ ಕ್ಷೀರಘೃತೇನಾಪ್ಲಾವ್ಯ ತೇನ ಕನ್ಯಾಲಲಾಟೇ ತಿಲಕಂ ಕುರ್ಯಾತ್ ॥ ಸಾಪಿ ಸ್ವಶಿರಃ ಪುಷ್ಪೇಣ ತಥೈವ ವರಲಲಾಟೇ ತಿಲಕಂ ಕೃತ್ವಾ ॥ ಪುಷ್ಪಮಾಲಾಂ ವರಕಂಠೇ ನಿದಧ್ಯಾತ್ ವರೋಽಪಿ ಕನ್ಯಾಕಂಠೇ ॥

ಮಂಗಲಸೂತ್ರಬಂಧನಂ:- ತತೋ ವರಪಕ್ಷಸುವಾಸಿನ್ಯಃ ವಧೂವರೌ ಪ್ರಾಙ್ಮುಖಾವುಪವೇಶ್ಯಾಚಾರಪ್ರಾಪ್ತಂ ಅಷ್ಟಪುತ್ರೀಸಂಜ್ಞಕಂ ವಸ್ತ್ರದ್ವಯಂ ಸಕಂಚುಕಂ ಕೃಷ್ಣಮಣಿಸೂತ್ರಯುತಂ ವಧ್ವೈ ಸಮರ್ಪ್ಯ ತಾಮೇಕಂ ಪರಿಧಾಪ್ಯ ಅಪರಮುತ್ತರೀಯಂ ಕುರ್ಯಾತ್ ॥ ತತೋ ವರಸ್ತತ್ಸೂತ್ರಂ ॥ ಮಾಂಗಲ್ಯತಂತುನಾನೇನ ಭರ್ತೃಜೀವನಹೇತುನಾ ॥ ಕಂಠೇ ಬಧ್ನಾಮಿ ಸುಭಗೇ ಸಾಜೀವ ಶರದಃ ಶತಂ ॥ ಇತಿ ಮಂತ್ರೇಣೇಷ್ಟದೇವತಾಂ ಸ್ಮರನ್ ವಧೂಕಂಠೇ ಬಧ್ನೀಯಾತ್ ॥ ಭೂಷಣೈಶ್ಚ ಆಯುಷ್ಯಂ ವರ್ಚಸ್ಯಮಿತಿ ಸೂಕ್ತಂ ಪಠನ್ ಭೂಷಯೇನ್ ॥ ತತೋ

ವರನು ತನ್ನ ಕೈಯಲ್ಲಿರುವ ಅಕ್ಷತೆಗಳನ್ನು **"ಯಜ್ಞೋ ಮೇ ..."** ಎಂದು ವಧುವಿನ ತಲೆಯ ಮೇಲೆ ಹಾಕಬೇಕು. ಹೀಗೆ ಇನ್ನೆರಡು ಸಲ ಅಕ್ಷತಾರೋಪಣ ಮಾಡಬೇಕು. ಎರಡನೆಯ ಸಲ ವಧುವು **"ಶ್ರಿಯೋ"** ಎಂದೂ ವರನು **"ಧರ್ಮೋ ..."** ಎಂದೂ ಮೂರನೆಯ ಸಲ ವಧು **"ಪ್ರಜಾ"** ವರ **"ಯಶೋ"** ಎಂದು ಹೇಳಬೇಕು. ಆಮೇಲೆ ಮೊದಲಿನಂತೆ ಕನ್ಯೆಯು ವರನ ಅಂಜಲಿಯನ್ನೂ, ಕನ್ಯೆಯ ಅಂಜಲಿಯನ್ನು ಬೇರೆ ಯಾರಾದರೊಬ್ಬನು ತುಂಬಿಸಿ, ಕನ್ಯೆಯ ಅಂಜಲಿಯನ್ನು, ವರನ ಅಂಜಲಿಯ ಮೇಲಿಟ್ಟು **"ಕನ್ಯಾ ತಾರಯತು"** ಇತ್ಯಾದಿಗಳನ್ನು ಹೇಳಿ ವರನು **1) ಭಗೋ ಮೇ ... 2) ಶ್ರಿಯೋ ಮೇ ... 3) ಪ್ರಜಾ ಮೇ ...** ಎಂದೂ ಹೇಳಬೇಕು. ನಂತರ ಮತ್ತೊಮ್ಮೆ ವರನು ಮೊದಲಿನಂತೆ ವಧುವಿನ ಅಂಜಲಿಯನ್ನು ತುಂಬಿಸಿ, ತನ್ನ ಅಂಜಲಿಯನ್ನು ಇತರರಿಂದ ತುಂಬಿಸಿ ಇಬ್ಬರೂ ಮಂತ್ರವಿಲ್ಲದೆ ಅಕ್ಷತೆಗಳನ್ನು ಹಾಕಬೇಕು. ಮೊದಲು ವಧು, ಆಮೇಲೆ ವರ. ಬಳಿಕ ವರನು ತನ್ನ ತಲೆಯ ಮೇಲಿಂದ ಒಂದೂ ಹೂ ತೆಗೆದು ಹಾಲಿನಲ್ಲಿ ಅದ್ದಿ ಅದರಿಂದ ವಧುವಿನ ಹಣೆಗೆ ತಿಲಕವಿಡಬೇಕು. ಹಾಗೆಯೇ ವಧುವೂ ಮಾಡಿ ವರನ ಕುತ್ತಿಗೆಗೆ ಮಾಲೆ ಹಾಕಬೇಕು. ವರನು ವಧುವಿನ ಕಂಠಕ್ಕೆ ಮಾಲೆ ಹಾಕಬೇಕು.

Scanned by CamScanner

ವಿವಾಹವ್ರತನಿರ್ವಿಘ್ನತಾರ್ಥಂ ವಧೂವರೌ ಗಣಾನಾಂತ್ವಾ ... ಇತಿ ಮಂತ್ರೇಣ ಹರಿದ್ರಾಖಂಡಯುತಪಂಚಪೂಗೀಫಲಾನಿ ಲಡ್ಡುಕಾದಿ ನಿಧಾಯ ಷೋಡಶೋಪಚಾರೈಃ ಸಂಪೂಜ್ಯ ಪುನಃಪೂರ್ವೋಕ್ತಮಂತ್ರೇಣ ದಂಪತ್ಯೋರುತ್ತರೀಯಾಂತಯೋಃ ಪೃಥಗ್ಬಧ್ನೀಯಾತ್ ॥ ತತಃ ಪುರೋಧಾಃ ನೀಲಲೋಹಿತಮಿತಿ ಮಂತ್ರೇಣ ತಯೋರುತ್ತರೀಯಾಂತೌ ಮಿಥೋ ಬಧ್ನೀಯಾತ್ ॥ ತತಃ ಸಭಾರ್ಯೋ ದಾತಾ ವೃದ್ಧಾಃ ಪುರಂಧ್ರ್ಯೋ ಜ್ಞಾತಿಬಾಂಧವಾಶ್ಚ ಕ್ರಮಾದಾಶೀರ್ಭಿರಾದ್ರಾಕ್ಷತಾರೋಪಣಂ ಕುರ್ಯುಃ (ಅತ್ರ ಕೌಸ್ತುಭೇ ಪ್ರಯೋಗರತ್ನೇ ಚ ಮಹಾಲಕ್ಷ್ಮ್ಯಾದಿ ಪೂಜನಪೂರ್ವಂ ವಾಯನದಾನಾದ್ಯುಕ್ತಮಸ್ತಿ) ತತೋ ವಧೂವರೌ ಪರಸ್ಪರಹಸ್ತಧಾರಣೇನೋಕ್ತಲಕ್ಷಣಾಂ ವೇದಿಂ ಮಂತ್ರಘೋಷೇಣ ಗಚ್ಛೇತಾಂ ॥

॥ ಇತಿ ಅಕ್ಷತಾರೋಪಣಂ ಸಮಾಪ್ತಂ ॥

ಮಂಗಲಸೂತ್ರಬಂಧನ:- ಬಳಿಕ ವರನ ಕಡೆಯ ಮುತ್ತೈದೆಯರು ವಧೂವರರನ್ನು ಪೂರ್ವಕ್ಕೆ ಮುಖಮಾಡಿ ಕುಳ್ಳಿರಿಸಿ, ವಧುವಿಗೆ ಅಷ್ಟಪುತ್ರೀ ಸಂಕೇತದ ಎರಡು ಸೀರೆಗಳನ್ನೂ, ಒಂದು ಕುಪ್ಪಸವನ್ನೂ, ಕರಿಮಣಿಗಳುಳ್ಳ ಒಂದು ಮಂಗಲಸೂತ್ರವನ್ನೂ ಒಪ್ಪಿಸಿ, ಒಂದು ಸೀರೆಯನ್ನು ಉಡಿಸಿ, ಕುಪ್ಪಸ ತೊಡಿಸಿ, ಮತ್ತೊಂದನ್ನು ಉತ್ತರೀಯದಂತೆ ಮೈಮೇಲೆ ಹೊದಿಸಬೇಕು. ಆಮೇಲೆ ವರನು **"ಮಾಂಗಲ್ಯತಂತುನಾ ... ಶತಂ"** ಎಂದು ಹೇಳಿ ತನ್ನ ಇಷ್ಟದೇವತೆಯನ್ನು ಸ್ಮರಿಸುತ್ತ ವಧುವಿನ ಕುತ್ತಿಗೆಗೆ ಕಟ್ಟಬೇಕು. **"ಆಯುಷ್ಯಂ ವರ್ಚಸ್ಯಂ ..."** ಎಂಬ ಸೂಕ್ತವನ್ನು ಹೇಳಿ ಆಭರಣಗಳನ್ನು ತೊಡಿಸಬೇಕು. ಬಳಿಕ ವಿವಾಹವ್ರತನಿರ್ವಿಘ್ನತೆಗೆಂದು **"ಗಣಾನಾಂತ್ವಾ...."** ಎಂಬ ಮಂತ್ರದಿಂದ ಅರಿಸಿನ ತುಂಡು, ಐದು ಅಡಿಕೆ ಮತ್ತು ಲಾಡು ಮುಂತಾದುವುಗಳನ್ನಿಟ್ಟು ಷೋಡಶೋಪಚಾರಗಳಿಂದ ಗಣಪತಿ ಪೂಜೆಯನ್ನು ಮಾಡಿ ಮೊದಲು ಹೇಳಿದ ಮಂತ್ರಗಳಿಂದ ಅರಿಸಿನ, ಅಡಿಕೆ ಇತ್ಯಾದಿಗಳನ್ನು ದಂಪತಿಗಳ ಸೆರಗಿನ ತುದಿಗೆ ಗಂಟುಕಟ್ಟಬೇಕು. ಆಮೇಲೆ ಪುರೋಹಿತನು **"ನೀಲಲೋಹಿತಂ..."** ಎಂಬ ಮಂತ್ರವನ್ನು ಹೇಳಿ ಆ ಸೆರಗಿನ ತುದಿಗಳನ್ನು ಒಂದು ಮಾಡಿ ಕಟ್ಟಬೇಕು. ಆಮೇಲೆ ಪತ್ನೀಸಮೇತನಾದ ದಾತೃವು ಮತ್ತು ವೃದ್ಧರು, ಮುತ್ತೈದೆಯರು, ಬಂಧುಬಾಂಧವರು ಆಶೀರ್ವಾದಪೂರ್ವಕ ಆರ್ದ್ರಾಕ್ಷತೆಗಳನ್ನು ಹಾಕಬೇಕು. (ಇಲ್ಲಿ ಕೌಸ್ತುಭ ಮತ್ತು ಪ್ರಯೋಗರತ್ನದ ಪ್ರಕಾರ ಮಹಾಲಕ್ಷ್ಮೀ, ಪಾರ್ವತೀ ಶಚೀಮುಂತಾದವರನ್ನು ಷೋಡಶೋಪಚಾರಗಳಿಂದ ಪೂಜಿಸಿ ವಧುವು ಸುವಾಸಿನಿಯರಿಗೆ ವಾಯನದಾನಗಳನ್ನು ಕೊಡಬೇಕೆಂದು ಹೇಳಿದೆ.) ಬಳಿಕ ವಧೂವರರು ಪರಸ್ಪರ ಕೈ ಹಿಡಿದು ಮಂತ್ರಘೋಷಣೆಯೊಂದಿಗೆ ವೇದಿಕೆಯ ಬಳಿಗೆ ಹೋಗಬೇಕು.

Scanned by CamScanner

೫೨

॥ ವಿವಾಹ ಹೋಮಃ ॥

ಶ್ರೀಃ ॥ ವರೋ ವೇದ್ಯಾಂ ಪ್ರಾಙ್ಮುಖ ಉಪವಿಶ್ಯ ಸ್ವದಕ್ಷಿಣತೋ ನಿಯಮಿತವಾಚಂ ವಧೂಂ ಚ ಉಪವೇಶ್ಯ ದ್ವಿರಾಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಪ್ರತಿಗೃಹೀತಾಯಾಮುಷ್ಯಾಂ ವಧ್ವಾಂ ಭಾರ್ಯಾತ್ವ-ಸಿದ್ಧಯೇ ಗೃಹಾಗ್ನಿಸಿದ್ಧಯೇ ಚ ವಿವಾಹಹೋಮಂ ಕರಿಷ್ಯೇ ॥ ತದಂಗ ಸ್ಥಂಡಿಲೋಲ್ಲೇಪನಾದಿ ಯೋಜಕನಾಮಾಗ್ನಿಪ್ರತಿಷ್ಠಾಪನಾಂತಂ ಕೃತ್ವಾ ಅಗ್ನೇಃ ಪ್ರತ್ಯಗ್ ದೃಷದಂ ಸೋಪಲಾಂ ಪ್ರತಿಷ್ಠಾಪ್ಯ ಪ್ರಾಗುದೀಚ್ಯಾಂ ಧಾನ್ಯರಾಶೇರು-ಪರಿ ಉದಕಪೂರ್ಣಂ ಕುಂಭಂ ನಿಧಾಯ ತಂ ಪಲ್ಲವೈರಪಿಧಾಯ ಗಂಧಪುಷ್ಪೈ-ರಲಂಕೃತ್ಯ ಉದಗಗ್ನೇಃ ಪ್ರಾಕ್ಸಂಸ್ಥಂ ಸಪ್ತತಂಡುಲರಾಶೀನುಪಕಲ್ಪ್ಯ ಸಮಿದ್ವಯ-ಮಾದಾಯ ಕ್ರಿಯಮಾಣೇ ವಿವಾಹಹೋಮೇ ದೇವತಾಪರಿಗ್ರಹಾರ್ಥಮಿತ್ಯಾ-ದ್ಯಾಘಾರಾವಾಜ್ಯೇನ ॥ ಅತ್ರ ಪ್ರಧಾನಂ ತ್ರಿರಗ್ನಿಂ ಪವಮಾನಂ ಸಕೃದಗ್ನಿಂ ಪ್ರಜಾಪತಿಂ ಚಾಜ್ಯೇನ ಅರ್ಯಮಾಗ್ನಿಂ ವರುಣಾಗ್ನಿಂ ಪೂಷಾಗ್ನಿಂ ಪ್ರಜಾಪತಿಂ ಚ ಲಾಜದ್ರವ್ಯೇಣ ಶೇಷೇಣ ಸ್ವಿಷ್ಟಕೃತಮಿತ್ಯಾದಿ ಷಟ್ ಪಾತ್ರಾಸಾದನಾಂತಂ ಕೃತ್ವಾ ಪಾತ್ರಪಶ್ಚಿಮತೋ ಲಾಜಶೂರ್ಪಮಾಸಾದ್ಯ ಆಜ್ಯಾಧಿಶ್ರಪಣಾಂತಂ ಕೃತ್ವಾ

ವಿವಾಹ ಹೋಮ:- ವರನು ಹೋಮವೇದಿಯ ಬಳಿಯಲ್ಲಿ ಪೂರ್ವಮುಖವಾಗಿ ವಧುವಿನೊಡನೆ ಕುಳಿತು ಆಚಮನಾದಿಗಳನ್ನು ಮಾಡಿ, **"ಪ್ರತಿಗೃಹೀತಾಯಾಂ .... ಕರಿಷ್ಯೇ"** ಎಂದು ಸಂಕಲ್ಪ ಮಾಡಿ, ಸ್ಥಂಡಿಲಸಂಸ್ಕಾರಾದಿಗಳನ್ನು **"ಯೋಜಕ"** ಅಗ್ನಿಪ್ರತಿಷ್ಠಾಪನಾಪೂರ್ವಕಮಾಡಿ ಅಗ್ನಿಯ ಪಶ್ಚಿಮದಲ್ಲಿ ಅಗಲವಾದ ಒಂದು ಕಲ್ಲು ಮತ್ತು ಒಂದು ಗುಂಡುಕಲ್ಲು, ಈಶಾನ್ಯದಿಕ್ಕಿನಲ್ಲಿ ಅಕ್ಕಿರಾಶಿಯ ಮೇಲೆ ನೀರು ತುಂಬಿದ ಕೊಡವನ್ನಿಟ್ಟು ಗಂಧಪುಷ್ಪಾದಿಗಳಿಂದ ಅಲಂಕರಿಸಿ ಪಲ್ಲವಗಳಿಂದ ಅದರ ಬಾಯಿಮುಚ್ಚಿ, ಅಗ್ನಿಯ ಉತ್ತರದಿಕ್ಕಿನಲ್ಲಿ ಏಳು ಅಕ್ಕಿಯ ರಾಶಿಗಳನ್ನು ನಿರ್ಮಿಸಿ, **"ಕ್ರಿಯಮಾಣೇ"** ಎಂದು ಮೊದಲಾಗಿ ಅನ್ವಾಧಾನ ಮಾಡಬೇಕು. **"ಅತ್ರ ಪ್ರಧಾನಂ"** ಎಂದು ಪ್ರಧಾನ ಹೋಮವನ್ನೂ ಹೇಳಿ ಶೇಷೇಣ ಸ್ವಿಷ್ಟಕೃತವೆಂದು ಮೊದಲ್ಗೊಂಡು ಆರು ಪಾತ್ರೆಗಳಿರುವ ಪಾತ್ರಾಸಾದನದ ವರೆಗಿನ ಕರ್ಮಭಾಗವನ್ನು ಸ್ಥಾಲೀಪಾಕದಲ್ಲಿ ಹೇಳಿದಂತೆ ಮಾಡಿ; ಆ ಪಾತ್ರೆಗಳ ಪಡುಭಾಗದಲ್ಲಿ ಅರಳುತುಂಬಿದ ಶೂರ್ಪವನ್ನಿಟ್ಟು, ಆಜ್ಯಸಂಸ್ಕಾರಾದಿಗಳನ್ನು ಪೂರಯಿಸಿ ಅರಳಿನೊಂದಿಗೆ ಆಜ್ಯವನ್ನೂ ಮೂರು ಸಲ ಪರ್ಯಗ್ನಿಕರಣಮಾಡಿ, ಆಜ್ಯೋತ್ಪವನವನ್ನೂ ಮಾಡಿ ಅರಳನ್ನು ಮೂರು ಸಲ ಪ್ರೋಕ್ಷಿಸಿ, ವಧುವು ವರನ ಹಸ್ತವನ್ನು ಮುಟ್ಟುತ್ತಿದ್ದಂತೆ ಬರ್ಹಿಯನ್ನು ಹರಡುವಲ್ಲಿಂದ ಅಘಾರಹೋಮದವರೆಗೆ ಮಾಡಬೇಕು. ಆಮೇಲೆ ಈ ಮುಂದಿನ ಮಂತ್ರಗಳಿಂದ ಪ್ರಧಾನಹೋಮವನ್ನು ಮಾಡಬೇಕು.

Scanned by CamScanner

ಆಜ್ಯಂ ಲಾಜೈಃ ಸಹ ತ್ರಿಃ ಪರ್ಯಗ್ನಿಕೃತ್ವಾಜ್ಯೋತ್ಪವನೇಕೃತೇ ಲಾಜಾಂಸ್ತ್ರಿಃ ಪ್ರೋಕ್ಷ್ಯ ವಧ್ವಾನ್ವಾರಬ್ಧ ಬರ್ಹಿರಾಸ್ತರಣಾದ್ಯಾಘಾರಹೋಮಾಂತಂ ಕೃತ್ವಾ ॥ ಆಜ್ಯಭಾಗೌ ನ ಸ್ತಃ ॥ ಅತ್ರಪ್ರಧಾನ ಹೋಮಃ ॥

ಅಗ್ನ ಆಯೂಂಷೀತಿ ತಿಸೃಣಾಂ ಶತಂ ವೈಖಾನಸಾ ಋಷಯಃ ಅಗ್ನಿಃ ಪವಮಾನೋ ದೇವತಾ ಗಾಯತ್ರೀಛಂದಃ ವಿವಾಹಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ಅಗ್ನ ಆಯೂಂಷಿ ... ಸ್ವಾಹಾ ॥ ಅಗ್ನಯೇ ಪವಮಾನಾಯೇದಂ ನ ಮಮ ॥ ಓಂ ಅಗ್ನಿರ್ಋಷಿಃ ... ಸ್ವಾಹಾ ॥ ಅಗ್ನಯೇ ..... ನ ಮಮ ॥ ಓಂ ಅಗ್ನೇ ಪವಸ್ವ .... ಸ್ವಾಹಾ ॥ ಅಗ್ನಯೇ .... ನ ಮಮ ॥ ತ್ವಮರ್ಯಮಾ ವಸುಶ್ರುತೋಗ್ನಿಸ್ತ್ರಿಷ್ಟುಪ್ ॥ ವಿವಾಹಪ್ರಧಾನಾಜ್ಯ-ಹೋಮೇವಿನಿಯೋಗಃ ॥ ಓಂ ತ್ವಮರ್ಯಮಾಭವಸಿಯತ್ಕನೀನಾಂ ನಾಮ-ಸ್ವಧಾವನ್‌ಗುಹ್ಯಂಬಿಭರ್ಷಿ ॥ ಅಂಜಂತಿಮಿತ್ರಂ ಸುಧಿತನ್ನಗೋಭಿರ್ಯದ್ದಂಪತೀ ಸಮನಸಾಕೃಣೋಷಿ ಸ್ವಾಹಾ ಅಗ್ನಯ ಇದಂ ನ ಮಮ ॥ ಪ್ರಜಾಪತೇ ಹಿರಣ್ಯಗರ್ಭಃ ಪ್ರಜಾಪತಿಸ್ತ್ರಿಷ್ಟುಪ್ ॥ ವಿವಾಹಪ್ರಧಾನಾ ... ॥ ಓಂ ಪ್ರಜಾಪತೇನ ... ಸ್ವಾಹಾ ॥ ಪ್ರಜಾಪತಯ ಇದಂ ನ ಮಮ ॥ ಏವಂ ಪಂಚಾಜ್ಯಾಹುತೀರ್ಹುತ್ವಾ ॥ ಪಾಣಿಗ್ರಹಃ ॥ ಪ್ರಾಙ್ಮುಖೋಪವಿಷ್ಟಾಯಾಃ

"**ಅಗ್ನ ಆಯೂಂಷಿ ...**" ಎಂಬಲ್ಲಿಂದ "**ಪ್ರಜಾಪತೇ .....**" ಎಂಬಲ್ಲಿ ವರೆಗೆ ಐದು ಆಜ್ಯಾಹುತಿಗಳನ್ನು ಹೋಮಮಾಡಿದ ಮೇಲೆ ಮೂಡುಮುಖವಾಗಿ ಕುಳಿತ ಪತ್ನಿಯ ಮುಂದೆ ಪಡುಮುಖವಾಗಿ ನಿಂತು "**ಗೃಭ್ಣಾಮಿ ತೇ ...**" ಎಂಬ ಮಂತ್ರದಿಂದ ಅವಳ ಮೇಲ್ಮುಖ ವಾಗಿರುವ ಬಲಗೈಯನ್ನು ಹೆಬ್ಬೆರಳು ಸಹಿತ ತನ್ನ ಮೇಲ್ಮುಖವಾದ ಕೈಯಿಂದ ಹಿಡಿಯಬೇಕು. ನಂತರ ಮೊದಲಿದ್ದಲ್ಲಿಗೆ ಬಂದು ಪತ್ನಿಯನ್ನು ಎದ್ದುನಿಲ್ಲಿಸಿ ಅವಳ ಕೈತೊಳೆದು ಬೊಗಸೆಮಾಡಿ ಅದರಲ್ಲಿ ಸ್ರುವದಿಂದ ಅಭಿಘಾರಮಾಡಿ ಅವಳ ಸಹೋದರ ಅಥವಾ ಇತರ ಯಾರಾದರೊಬ್ಬನಿಂದ ಶೂರ್ಪದಿಂದ ಎರಡು ಸಲ ಒಂದೊಂದು ಮುಷ್ಟಿ ಅರಳನ್ನು ಹಾಕಿಸಬೇಕು. ತಾನು ಪಂಚಪ್ರವರದವನಾದರೆ ಮೂರು ಸಲ ಹಾಕಿಸಬೇಕು. ಅಂಜಲಿಯಲ್ಲಿರುವ ಅರಳನ್ನೂ, ಶೂರ್ಪದಲ್ಲಿರುವುದನ್ನೂ ಅಭಿಘಾರ ಮಾಡಿ.

Scanned by CamScanner

ಪುರತಃ ಪ್ರತ್ಯಙ್ಮುಖಸ್ತಿಷ್ಠನ್ ॥ ಗೃಭ್ಣಾಮೀತಿ ಸೂರ್ಯಾಸಾವಿತ್ರೀ ಸೂರ್ಯಾ-ಸಾವಿತ್ರೀ ತ್ರಿಷ್ಟುಪ್ ॥ ವಧೂಪಾಣಿಗ್ರಹಣೇವಿನಿಯೋಗಃ ॥ ಓಂ ಗೃಭ್ಣಾಮಿ ತೇ ಸೌಭಗತ್ವಾಯಹಸ್ತಂ ಮಯಾಪತ್ಯಾಜರದಷ್ಟಿರ್ಯಥಾಸಃ ॥ ಭಗೋಅರ್ಯಮಾಸ-ವಿತಾಪುರಂಧಿರ್ಮಹ್ಯಂತ್ವಾದುರ್ಗಾರ್ಹಪತ್ಯಾಯದೇವಾಃ ॥ ಇತಿ ಮಂತ್ರೇಣ ಭಾರ್ಯಾಯಾ ಉತ್ತಾನಂ ಸಾಂಗುಷ್ಠಂ ದಕ್ಷಿಣಪಾಣಿಮುತ್ತಾನೇನ ದಕ್ಷಿಣ ಹಸ್ತೇನ ಗೃಹ್ಣೀಯಾತ್ ॥

ಲಾಜಹೋಮಃ- ಪರಿಣಯನಂ-ಅಶ್ಮಾರೋಹಶ್ಚ ॥ ತತೋ ವಧೂ-ಮುತ್ಥಾಪ್ಯ ತಯಾ ಕರೌ ಕ್ಷಾಲಯಿತ್ವಾ ಅಂಜಲಿಂ ಕಾರಯಿತ್ವಾ ಪ್ರಾಙ್ಮುಖ್ಯಾಃ ತಸ್ಯಾ ಅಂಜಲೌ ವರಃ ಸ್ರುವೇಣಾಜ್ಯಮುಪಸ್ತೀರ್ಯ ವಧೂಭ್ರಾತ್ರಾ ತತ್ ಸ್ಥಾನೀಯೇನ ಪಿತೃವ್ಯಪುತ್ರಾದಿನಾ ವಾ ತಿಷ್ಠತಾ ಶೂರ್ಪಸ್ಥಾನ್ ಲಾಜಾನ್ ಮುಷ್ಟ್ಯಾ ದ್ವಿರೋಪ್ಯ ಸ್ವಯಂ ಪಂಚಾವತ್ತೀ ಚೇತ್ ತ್ರಿವಾರಮೋಪ್ಯ ಶೂರ್ಪಸ್ಥಾನಭಿಘಾರ್ಯ ಅಂಜಲಿ-ಸ್ಥಾನಪಿ ಸಕೃದಭಿಘಾರ್ಯ ॥

ಅರ್ಯಮಣಂ ನು ವಾಮದೇವೋರ್ಯಮಾಗ್ನಿರನುಷ್ಟುಪ್ ॥ ವಿವಾಹ-ಪ್ರಧಾನಲಾಜಹೋಮೇ ವಿನಿಯೋಗಃ ॥ ಓಂ ಅರ್ಯಮಣಂ ನು ದೇವಂಕನ್ಯಾ-ಅಗ್ನಿಮಯಕ್ಷತ ॥ ಸ ಇಮಾಂದೇವೋಅರ್ಯಮಾ ಪ್ರೇತೋಮುಂಚಾತುನಾಮುತ-ಸ್ವಾಹಾ ॥ ಇತಿ ಮಂತ್ರಂ ಪಠನ್ ತಿಷ್ಠನ್ ತಿಷ್ಠಂತ್ಯಾ ಧೃತಾಂಜಲಿ ರಂಜಲ್ಯವಿಚ್ಛೇದೇನಾಂಗುಲ್ಯಗ್ರೈರಂಗುಲಿಪಾರ್ಶ್ವೇಣ ವಾ ಹಾವಯೇತ್ ॥ ವರಃ ॥

"**ಅರ್ಯಮಣಂ ನು**" ಎಂಬ ಮಂತ್ರವನ್ನು ಹೇಳುತ್ತ ವರನು ತಾನು ನಿಂತು ಕೊಂಡು, ನಿಂತಿರುವ ವಧುವಿನ ಅಂಜಲಿಯನ್ನು ಹಿಡಿದು ಅವಳ ಬೆರಳ ತುದಿಗಳಿಂದ ಲಾಜಾಹುತಿಯು ಅಗ್ನಿಯಲ್ಲಿ ಬೀಳುವಂತೆ ಮಾಡಿ, "**ಅರ್ಯಮ್ಣೋ ... ನಮಮ**" ಎಂದು ಹೇಳಬೇಕು. ಬಳಿಕ ಅಗ್ನಿಯ ಬಳಿ ಇಟ್ಟ ಕಲ್ಲುಗಳನ್ನು ಬಿಟ್ಟು ಅಗ್ನಿ ಉದಕುಂಭ ಇತ್ಯಾದಿಗಳಿಗೆ ತಾನು ಮುಂದೆ ಹೋಗುತ್ತ ವಧುವು ಪ್ರದಕ್ಷಿಣೆ ಬರುವಂತೆ ಮಾಡುತ್ತ "**ಓಂ ಅಮೋಹಮಸ್ಮಿ...ಶರದಃ ಶತಂ**" ಎಂಬ ಮಂತ್ರವನ್ನು ಜಪಿಸಬೇಕು. ಆಮೇಲೆ "**ಓಂ ಇಮಮಶ್ಮಾನಂ ....**" ಎಂಬ ಮಂತ್ರವನ್ನು ಹೇಳುತ್ತ ವಧುವನ್ನು ಎರಡೂ ಕಾಲುಗಳು ಕಲ್ಲಿನ ಮೇಲಿರುವಂತೆ ಅದರ ಮೇಲೆ ಹತ್ತಲು ಹೇಳಬೇಕು.

Scanned by CamScanner
Scanned with CamScanner

ಆರ್ಯಮ್ಣೇಗ್ನಯ ಇದಂ ನ ಮಮ । ತತೋ ದೃಷದುಪಲವರ್ಜಮಗ್ನಿ-ಮುದಕುಂಭಪಾತ್ರಾಣಿ ಚ ವಧೂಂ ಪ್ರದಕ್ಷಿಣಂ ಪರಿಣಯನ್ ಸ್ವಯಮಗ್ರೇ ಗಚ್ಛನ್ ಜಪೇತ್ ॥ ಓಂ ಅಮೋಹಮಸ್ಮಿ ಸಾ ತ್ವಂ ಸಾತ್ವಮಸ್ಯ್ಮೋಹಂ ದ್ಯೌರಹಂ ಪೃಥಿವೀ ತ್ವಂ ಸಾಮಾಹಮೃಕ್ತ್ವಂ ತಾವೇಹವಿವಹಾವಹೈ ॥ ಪ್ರಜಾಂ ಪ್ರಜನಯಾವಹೈ ಸಂಪ್ರಿಯೌ ರೋಚಿಷ್ಣೂ ಸುಮನಸ್ಯಮಾನೌ ಜೀವೇವ ಶರದಃ ಶತಂ ॥ ತತೋ ವಧೂಂ ಪ್ರಾಙ್ಮುಖೀಂ ದ್ವಾಭ್ಯಾಮಪಿ ಪಾದಾಭ್ಯಾಂ ॥ ದೃಷದಂ ಇಮಮಶ್ಮಾನಂ ವಾಮ ದೇವೋ ವಧೂರನುಷ್ಟುಪ್ ॥ ಅಶ್ಮಾರೋಹಣೇ ವಿನಿಯೋಗಃ ॥ ಓಂ ಇಮಮಶ್ಮಾನಮಾರೋಹಾಶ್ಮೇವ ತ್ವಂ ಸ್ಥಿರಾ ಭವ ॥ ಸಹಸ್ವಪೃತನಾಯಶೋಭಿತಿಷ್ಠಪೃತನ್ಯತಃ ॥ ಇತಿ ಮಂತ್ರೇಣಾರೋಹಯೇತ್ ॥ ಪುನಃ ಪೂರ್ವವದಂಜಲ್ಯುಪಸ್ತರಣಾದಿ ಕೃತ್ವಾ ॥ ವರುಣಂನು ವಾಮದೇವೋ ವರುಣಾಗ್ನಿರನುಷ್ಟುಪ್ ॥ ವಿವಾಹಪ್ರಧಾನಲಾಜಹೋಮೇ ವಿನಿಯೋಗಃ ॥ ಓಂ ವರುಣಂನು ದೇವಂಕನ್ಯಾಅಗ್ನಿಮಯಕ್ಷತ ॥ ಸ ಇಮಾಂದೇವೋವರುಣಃ ಪ್ರೇತೋ ಮುಂಚಾತುನಾಮುತಸ್ವಾಹಾ ॥ ಇತಿ ಪೂರ್ವವದ್ಧಾವಯಿತ್ವಾ ವರುಣಾಗ್ನಯ ಇದಂ ನ ಮಮ ॥ ಪುನರಮೋಹಮಸ್ಮೀತಿ ಪೂರ್ವವತ್ಪರಿಣೀಯ ಇಮಮಶ್ಮಾನಮಿತ್ಯಶ್ಮಾನಮಾರೋಹಯೇತ್ ॥ ಪುನಃ ಪೂರ್ವವದಂಜಲ್ಯುಪ-ಸ್ತರಣಾದಿ ॥ ಪೂಷಣಂ ನು ವಾಮದೇವಃ ಪೂಷಾಗ್ನಿರನುಷ್ಟುಪ್ ವಿವಾಹ-ಪ್ರಧಾನಲಾಜಹೋಮೇ ವಿನಿಯೋಗಃ ॥ ಓಂ ಪೂಷಣಂನು ದೇವಂ ಕನ್ಯಾ

ಪುನಃ ಮೊದಲಿನಂತೆ ಅಂಜಲಿಗೆ ಅಭಿಘಾರ ಇತ್ಯಾದಿಗಳನ್ನು ಮಾಡಿ ಅರಳನ್ನು ಬೊಗಸೆಯಲ್ಲಿ ಹಾಕಿಸಿ, ಅಭಿಘಾರ ಮಾಡಿ, **"ಓಂ ವರುಣಂನು..."** ಎಂಬ ಮಂತ್ರವನ್ನು ಹೇಳಿ, ವಧುವಿನ ಅಂಜಲಿಯಿಂದ ಆಹುತಿ ಮಾಡಿಸಿ, **"ವರುಣಾಗ್ನಯ ...."** ಎಂದು ಹೇಳಿ ಮೊದಲಿನಂತೆ ಮಂತ್ರಗಳನ್ನು ಹೇಳುತ್ತ ಪ್ರದಕ್ಷಿಣೆ-ಆಶ್ಮಾರೋಹಣ ಮುಂತಾದವನ್ನು ಮಾಡಿಸಬೇಕು.

ಮೂರನೆಯ ಸಲ **"ಪೂಷಣಂ ನು ....."** ಎಂಬ ಮಂತ್ರವನ್ನು ಹೇಳಿ, ಅರಳಿನ ಆಹುತಿಯನ್ನು ಮೊದಲಿನಂತೆ ಮಾಡಿಸಿ ಪ್ರದಕ್ಷಿಣೆ, ಆಶ್ಮಾರೋಹಗಳನ್ನು ಮಾಡಿಸಬೇಕು, ಬಳಿಕ

Scanned by CamScanner

ಅಗ್ನಿಮಯಕ್ಷತ ॥ ಸ ಇಮಾಂ ದೇವಃ ಪೂಷಾಪ್ರೇತೋಮುಂಚಾತುನಾಮುತ-ಸ್ವಾಹಾ ॥ ಇತಿ ಪೂರ್ವವದ್ಧಾವಯಿತ್ವಾ॥ ಪೂಷಣೇಗ್ನಯ ಇದಂ ನ ಮಮ ॥ ಪೂರ್ವವದಮೋಹಮಸ್ಮೀತ್ಯಾದ್ಯಶ್ಮಾರೋಹಣಂ ಚ ॥ ತತೋ ವರೋ ಅವಶಿ-ಷ್ಟಾಂಲ್ಲಾಜಾನಾತ್ಮಾಭಿಮುಖಂ ಶೂರ್ಪಕೋಣೇನ ಜುಹುಯಾತ್ ॥ ಪ್ರಜಾ-ಪತಯೇ ಇತಿ ಸ್ಮೃತ್ವಾ ಸ್ವಾಹಾ ಇತ್ಯುಚ್ಚಾರ್ಯ ಪ್ರಜಾಪತಯ ಇದಂ ನ ಮಮ ಇತ್ಯುಕ್ತ್ವಾ ॥ ಅತ್ರ ಪರಿಣಯನಾಶ್ಮಾರೋಹಣೇ ನ ಸ್ತಃ ॥

ಸಪ್ತಪದೀ:- ಅಥಾಗ್ನೇರುದೀಚ್ಯಾಂ ಸಪ್ತ ತಂಡುಲರಾಶೀನ್ ಪಶ್ಚಿಮತೋ ವಧ್ವಾ ದಕ್ಷಿಣಪಾದೇನ ವರಃ ಕ್ರಮೇಣಾಭ್ಯುತ್ಕ್ರಾಮಯೇತ್ ಮಂತ್ರೈಃ ॥ ಓಂ ಇಷ ಏಕಪದೀ ಭವ ॥ ಸಾಮಾಮನುವ್ರತಾ ಭವ ॥ ಪುತ್ರಾನ್ ವಿಂದಾವಹೈ ಬಹೂಂಸ್ತೇಸಂತುಜರದಷ್ಟಯಃ ॥ ಇತಿ ಪ್ರಥಮಂ ॥ ಊರ್ಜೇ ದ್ವಿಪದೀ ಭವ ಇತ್ಯಾದಿ ದ್ವಿತೀಯಂ ॥ ರಾಯಸ್ಪೋಷಾಯ ತ್ರಿಪದೀಭವ ಇತ್ಯಾದಿ ತೃತೀಯಂ ॥ ಮಾಯೋ ಭವ್ಯಾಯ ಚತುಷ್ಪದೀ ಭವ ಇತ್ಯಾದಿ ಚತುರ್ಥಂ ॥ ಪ್ರಜಾಭ್ಯಃ ಪಂಚಪದೀ ಭವ ಇತ್ಯಾದಿ ಪಂಚಮಂ ॥ ಋತುಭ್ಯಃ ಷಟ್ಪದೀ ಭವ ॥ ಇತ್ಯಾದಿ ಷಷ್ಠಂ ॥ ಸಖಾ ಸಪ್ತಪದೀ ಭವ ಇತ್ಯಾದಿ ಸಪ್ತಮಂ ರಾಶಿಂ ॥ ಭವೇತ್ಯಾದೇಃ ಸರ್ವತ್ರಾನುಷಂಗಃ ॥

ವರನು ಶೂರ್ಪದಲ್ಲಿ ಉಳಿದ ಎಲ್ಲ ಅರಳನ್ನೂ ಆ ಶೂರ್ಪವನ್ನು ಸ್ವಸ್ತಿಕಾಕೃತಿಯ ತನ್ನ ಎರಡೂ ಕೈಗಳಿಂದ ತನ್ನ ಇದಿರಾಗಿ ಹಿಡಿದು **"ಪ್ರಜಾಪತಯೇ"** ಎಂದು ಮನಸ್ಸಿನಲ್ಲೇ ಸ್ಮರಿಸಿ **"ಸ್ವಾಹಾ"** ಎಂದು ಗಟ್ಟಿಯಾಗಿ ಹೇಳಿ ಆಹುತಿಕೊಟ್ಟು **"ಪ್ರಜಾಪತಯ ಇದಂ ನಮಮ"** ಎಂದು ಹೇಳಬೇಕು, ಈ ಆಹುತಿಯಾದ ಮೇಲೆ ಪ್ರದಕ್ಷಿಣೆ ಅಶ್ಮಾರೋಹಣಗಳಿಲ್ಲ.

ಸಪ್ತಪದೀ:- ಅಗ್ನಿಯ ಉತ್ತರಭಾಗದಲ್ಲಿ ಅಕ್ಕಿಯ ಏಳು ರಾಶಿಗಳನ್ನು ಮಾಡಬೇಕು. ಅವುಗಳ ಪಡುಭಾಗದಲ್ಲಿ ಪೂರ್ವಕ್ಕೆ ಮುಖಮಾಡಿ ವಧುವನ್ನು ನಿಲ್ಲಿಸಿ ತಾನು ಇದಿರಾಗಿ ನಿಂತು; ಮೊದಲು ಬಲಗಾಲನ್ನು ಎತ್ತಿ ಇಡುವಂತೆ **"ಇಷ ಏಕಪದೀ..."** ಮುಂತಾಗಿ ಏಳು ಮಂತ್ರಗಳನ್ನು ಹೇಳುತ್ತ ಕ್ರಮವಾಗಿ ಒಂದೊಂದೇ ರಾಶಿಯ ಮೇಲೆ ನಡೆಸಿಕೊಂಡು ಬರಬೇಕು. ಮೊದಲಿನ ಮಂತ್ರದಲ್ಲಿದ್ದಂತೆ, ಪ್ರತಿ ಮಂತ್ರಕ್ಕೂ **"ಸಾಮಾಮನುವ್ರತಾ ... ಜರದಷ್ಟಯಃ"** ಎಂದು ಸೇರಿಸಿ ಹೇಳಬೇಕು.

Scanned by CamScanner
Scanned with CamScanner

ಅಭಿಷೇಕ ಧ್ರುವಾರುಂಧತೀ ಸಪ್ತರ್ಷಿದರ್ಶನಂ:- ತತಃ ಪೂರ್ವಸ್ಥಾಪಿತ-ಮುದಕುಂಭಂ ಕೇನಚಿದಾನಾಯ್ಯ ತತ್ರಸ್ಥ ಏವ ವರಃ ಸ್ವಶಿರಸಾ ವಧೂಶಿರಃ ಸಂಯೋಜ್ಯ ಕಲಶಸ್ಥಮುದಕಮಾದಾಯ ಆದೌ ಆತ್ಮಶಿರಃ ಪಶ್ಚಾದ್ವಧೂಶಿರಶ್ಚ ಶಾಂತಿರಸ್ತ್ವಿತ್ಯಾದಿ ಪಂಚದಶ ಮಂತ್ರೈರಭಿಷಿಚ್ಯ ಸ್ವಾಸನೇ ಉಪವಿಶ್ಯ ಆಜ್ಯೇನ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯ ಪೂರ್ವಬದ್ಧೋತ್ತರೀಯಾಂತೌ ತೂಷ್ಣೀಂ ವಿಸೃಸ್ಯ ॥ ಧ್ರುವಾರುಂಧತೀ ಸಪ್ತರ್ಷಿ ಪ್ರಭೃತೀನ್ ವಧ್ವಾ ಸಹ ದೃಷ್ಟ್ವಾ ॥ ಜೀವಪತ್ನೀ ಪ್ರಜಾಂ ವಿಂದೇಯ ॥ ಇತಿ ವಧ್ವಾವಾಚಯೇತ್ ॥ ತತೋ ವಧೂವಾಚ್ ನಿಯಮಂ ವಿಸೃಜೇತ್ ॥ ದಿನ ವಿವಾಹೇ ಸಾಯಂ ಸಂಧ್ಯಾಮುಪಾಸ್ಯ ರಾತ್ರಿವಿವಾಹೇ ಸಾಯಂ ಸಂಧ್ಯಾಮನುಪಾಸ್ಯೈವ ಧ್ರುವಾದಿದರ್ಶನಂ ॥ ಏತದಾದಿ ವಿವಾಹಾಗ್ನಿಂ ರಕ್ಷೇತ್ ॥

॥ ಇತಿ ವಿವಾಹ ಹೋಮಃ ॥

ಅಭಿಷೇಕ ಧ್ರುವಾರುಂಧತೀ ಸಪ್ತರ್ಷಿದರ್ಶನ:- ಆಮೇಲೆ ಮೊದಲು ಸ್ಥಾಪಿಸಿದ ಕಲಶವನ್ನು ಯಾರಾದರೊಬ್ಬನನ್ನು ಕರೆದು ತರಿಸಿ, ವರನು ಅಲ್ಲೇ ನಿಂತುಕೊಂಡು ತನ್ನ ಮತ್ತು ವಧುವಿನ ತಲೆಯನ್ನು ಒಂದಕ್ಕೊಂದು ತಾಗುವಂತೆ ಜೋಡಿಸಿ **"ಶಾಂತಿರಸ್ತು"** ಮೊದಲ್ಗೊಂಡು ಹದಿನೈದು ಮಂತ್ರಗಳನ್ನು ಹೇಳುತ್ತ ತಲೆಗಳ ಮೇಲೆ ಅಭಿಷೇಕ ಮಾಡಿಸಿ ಅಲ್ಲಿಂದ ಬಂದು ಅಗ್ನಿಯ ಪಶ್ಚಿಮಭಾಗದಲ್ಲಿ ವಧೂಸಹಿತನಾಗಿ ಮೊದಲಿನಂತೆ ಕುಳಿತುಕೊಳ್ಳಬೇಕು, ಬಳಿಕ ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಮಂತ್ರವಿಲ್ಲದೆ ಮೌನವಾಗಿ ಮೊದಲು ಪರಸ್ಪರ ಕಟ್ಟಿಕೊಂಡ ಉತ್ತರೀಯಗಳ ಗಂಟನ್ನು ಬಿಚ್ಚಿ, ವಧುವಿನೊಂದಿಗೆ ಧ್ರುವ ಅರುಂಧತಿ ಸಪ್ತರ್ಷಿಮಂಡಲ ಮುಂತಾದುವನ್ನು ನೋಡಬೇಕು. **"ಜೀವಪತ್ನೀ ... ವಿಂದೇಯ"** ಎಂದು ವಧುವಿನ ಬಾಯಿಯಿಂದ ಹೇಳಿಸಬೇಕು. ಆಗ ವಧುವು ಮೊದಲು ಕೈಗೊಂಡ ಮೌನವ್ರತವನ್ನು ತ್ಯಜಿಸಬೇಕು. ಹಗಲು ಮದುವೆಯಾದರೆ ಸಾಯಂಸಂಧ್ಯಾವಂದನೆ ಮಾಡಿದ ಮೇಲೆ ಧ್ರುವಾದಿದರ್ಶನ ಮಾಡಬೇಕು. ರಾತ್ರಿ ವಿವಾಹವಾದರೆ ಸಾಯಂಸಂಧ್ಯಾವಂದನೆ ಮಾಡದೆಯೇ ಈ ದರ್ಶನವನ್ನು ಮಾಡಬೇಕು. ಈ ವಿವಾಹಾಗ್ನಿಯು ಆರಿಹೋಗದಂತೆ ಮುಂದೆ ರಕ್ಷಿಸಿಕೊಂಡು ಬರಬೇಕು.

॥ ವಿವಾಹ ಹೋಮ ಸಮಾಪ್ತ ॥

Scanned by CamScanner

Scanned with CamScanner

೫೨

॥ ಗೃಹಪ್ರವೇಶನೀಯಹೋಮಃ ॥

॥ ಶ್ರೀಃ ॥ ವರಃ ದೇಶಕಾಲೌ ಸಂಕೀರ್ತ್ಯ ಮಮ ವಿವಾಹಾಗ್ನೇರ್ಗೃಹ್ಯತ್ವಸಿದ್ಧಿದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ ಗೃಹಪ್ರವೇಶನೀಯಹೋಮಂ ಕರಿಷ್ಯೇ ಇತಿ ಸಂಕಲ್ಪ್ಯ ॥ ಸ್ಥಂಡಿಲಕರಣಾದ್ಯಗ್ನಿಪ್ರತಿಷ್ಠಾಂತಂ ಕೃತ್ವಾ ॥ ಶ್ವಶುರಗೃಹೇ ವಿವಾಹಹೋಮಾನಂತರಮೇವೈತತ್ಕರಣೇ ಅಗ್ನೇಃ ಸ್ಥಾಪಿತತ್ವಾತ್ ಸಂಕಲ್ಪಮಾತ್ರಂ ಕೃತ್ವಾ ॥ ಪ್ರತ್ಯಗಗ್ನೇಃ ಸ್ವದಕ್ಷಿಣದೇಶೇ ಪ್ರಾಗ್ಗ್ರೀಮಮುಪರಿಲೋಮಕಮಾನಡುಹಂ ಚರ್ಮಾಸ್ತೀರ್ಯ ತಸ್ಮಿನ್ವಧೂಮುಪವೇಶ್ಯ ತಯಾನ್ವಾರಬ್ಧಃ ಕ್ರಿಯಮಾಣೇ ಗೃಹಪ್ರವೇಶನೀಯಹೋಮೇ ದೇವತಾಪರಿಗ್ರಹಾರ್ಥಮಿತ್ಯಾದಿ ಚಕ್ಷುಷೀ ಆಜ್ಯೇನೇತ್ಯಂತಮುಕ್ತ್ವಾ ॥ ಸೂರ್ಯಾಸಾವಿತ್ರೀಂ ಚತುರ್ವಾರಮಾಜ್ಯೇನ ಶೇಷೇಣ ಸ್ವಿಷ್ಟಕೃತಮಿತ್ಯಾದಿ ಪತ್ನ್ಯಾನ್ವಾರಬ್ಧ ಆಜ್ಯಭಾಗಾಂತಂ ಕೃತ್ವಾ ॥ ಆನಃ ಪ್ರಜಾಮಿತಿ ಚತಸೃಣಾಂ ಸೂರ್ಯಾಸಾವಿತ್ರೀ ಸೂರ್ಯಾಸಾವಿತ್ರೀ ಆದ್ಯಾ ಜಗತೀ ದ್ವಿತೀಯಾ ತ್ರಿಷ್ಟುಪ್ ಅಂತ್ಯೇ ದ್ವೇ ಅನುಷ್ಟುಭೌ ॥ ಗೃಹಪ್ರವೇಶನೀಯ ಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ಆನಃಪ್ರಜಾಂ .... ಚತುಷ್ಪದೇ ಸ್ವಾಹಾ ॥ ಸರ್ವತ್ರ ಸೂರ್ಯಾ ಸಾವಿತ್ರ್ಯಾ ಇದಂ ನ ಮಮ ॥ ಓ ಅಘೋರಚಕ್ಷು .... ಸ್ವಾಹಾ ॥ ಸೂರ್ಯಾ ..... ॥ ಓಂ ಇಮಾಂತ್ವಮಿಂದ್ರ .... ಸ್ವಾಹಾ ॥ ಸೂರ್ಯಾ ...॥ ಓಂ ಸಮ್ರಾಜ್ಞೀ ...

ವರನು ದೇಶಕಾಲಗಳನ್ನು ಸ್ಮರಿಸಿ **"ಮಮ...ಕರಿಷ್ಯೇ"** ಎಂದು ಸಂಕಲ್ಪ ಮಾಡಿ, ಸ್ಥಂಡಿಲ ಸಂಸ್ಕಾರಾದಿಗಳನ್ನು ಮಾಡಿ (ವಿವಾಹಹೋಮ ಆದ ಕೂಡಲೇ ಮಾಡುವುದಾದರೆ ಅಗ್ನಿಪ್ರತಿಷ್ಠಾದಿಗಳು ಮೊದಲೇ ಆಗಿರುವುದರಿಂದ ಪುನಃ ಮಾಡುವ ಅಗತ್ಯವಿಲ್ಲ.) ಅಗ್ನಿಯ ಪಶ್ಚಿಮದಲ್ಲಿ ತನ್ನ ಬಲಭಾಗದಲ್ಲಿ ಎತ್ತಿನ ಚರ್ಮದ ಮೇಲೆ ಪತ್ನಿಯನ್ನು ಕೂತು ಕೊಳ್ಳಿಸಿ ಅನ್ವಾಧಾನ ಮಾಡಬೇಕು. ಸ್ಥಾಲೀಪಾಕದಲ್ಲಿ ಹೇಳಿದಂತೆ ಆಜ್ಯಭಾಗಾಂತದ ವರೆಗೆ ಮಾಡಿ **"ಆನಃ ಪ್ರಜಾಂ..."** ಮುಂತಾಗಿ ನಾಲ್ಕು ಮಂತ್ರಗಳಿಂದ ನಾಲ್ಕು ಆಜ್ಯಾಹುತಿಗಳನ್ನು ಕೊಡಬೇಕು.

Scanned by CamScanner

Scanned with CamScanner

ಸ್ವಾಹಾ ॥ ಸೂರ್ಯಾ .... ॥ ಇತಿ ಚತಸ್ರ ಆಜ್ಯಾಹುತೀ ಹುತ್ವಾ ॥ ಸಮಂಜಂತ್ವಿತ್ಯಸ್ಯ ಸೂರ್ಯಾಸಾವಿತ್ರೀ ಸೂರ್ಯಾಸಾವಿತ್ರ್ಯನುಷ್ಟುಪ್ ॥ ಆಜ್ಯಶೇಷೇಣ ಹೃದಯಾಂಜನೇ ವಿನಿಯೋಗಃ ॥ ಓಂ ಸಮಂಜಂತುವಿಶ್ವೇದೇವಾಃ ಸಮಾಪೋ ಹೃದಯಾನಿನೌ ॥ ಸಂಮಾತರಿಶ್ವಾಸಂಧಾತಾ ಸಮುದೇಷ್ಟ್ರೀದಧಾತು ನೌ ॥ ಓಂ ಇತಿ ಹುತಶಿಷ್ಟ ಆಜ್ಯೇನ ಸ್ವಸ್ಯ ಪತ್ನ್ಯಾಶ್ಚ ಹೃದಯಾಂಜನಂ ಕಾರ್ಯಂ ॥ ತತೋ ಹಸ್ತಂ ಪ್ರಕ್ಷಾಲ್ಯ ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪ್ಯ ಪತಿಪುತ್ರವತೀಭಿಃ ಕೃತನೀರಾಜನೌ ದಂಪತೀ ದ್ವಿಜಾಶಿಷೋ ಗೃಹೀತ್ವಾ ಮುದಿತೌ ತಿಷ್ಠೇತಾಂ ॥

॥ ಇತಿ ಗೃಹಪ್ರವೇಶನೀಯಹೋಮಃ ॥

ನಂತರ **"ಸಮಂಜಂತು..."** ಎಂಬ ಮಂತ್ರದಿಂದ ಹೋಮಮಾಡಿ ಉಳಿದ ಆಜ್ಯದಿಂದ ತನ್ನ ಮತ್ತು ಪತ್ನಿಯ ಹೃದಯಕ್ಕೆ ಅಂಜನ ಹಚ್ಚಬೇಕು. ನಂತರ ಕೈತೊಳೆದು ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ, ನೀರಾಜನಾದಿಗಳನ್ನು ಮಾಡಿಸಿ ದಂಪತಿಗಳು ಬ್ರಾಹ್ಮಣರ ಆಶೀರ್ವಾದ ಪಡೆಯಬೇಕು.

॥ ಗೃಹಪ್ರವೇಶನೀಯ ಹೋಮ ಸಮಾಪ್ತ ॥

Scanned by CamScanner

॥ ವಿವಾಹಚತುರ್ಥದಿನಕೃತ್ಯಂ ॥

॥ ಶ್ರೀಃ ॥ ತತೋ ವಿವಾಹಾಚ್ಚತುರ್ಥದಿನರಾತ್ರೌ ತತ್ರ ಭದ್ರಾದಿ-ಸಂಭವೇ ದಿನ ಏವ ವಾ ಕನ್ಯಾದಾತಾ ಸಭಾರ್ಯೋ ದೇಶಕಾಲೌ ಸಂಕೀರ್ತ್ಯ ವಿವಾಹಸ್ಯ ಸಂಪೂರ್ಣಫಲಾವಾಪ್ತಯೇ ವರಸ್ಯ ತತ್ಪಿತೃಮಾತ್ರಾದೀನಾಂ ತತ್ಪಕ್ಷೀ-ಯಾಣಾಂ ಚ ಯಥಾವಿಭವಂ ಪಟ್ಟಪಟೀದುಕೂಲವಸ್ತ್ರಾದಿಭಿಃ ಪೂಜ-ಯೇತ್ ತತೋ ವರಪಿತಾ ಕನ್ಯಾಂ ಪೂಜಯೇತ್ ॥ ಅಭಿವಸ್ತ್ರೇತಿ ಪಟ್ಟದು-ಕೂಲಾದಿ ದತ್ವಾ ಆಯುಷ್ಯಮಿತಿ ಸೂಕ್ತೇನ ಸುವರ್ಣಾಲಂಕಾರಾದಿ ಯಾಃಫಲಿ-ನೀರಿತಿ ಪುಷ್ಪಮಾಲಾದಿ ದತ್ವಾ ॥ ಓಂ ಸುಮಂಗಲೀರಿಯಂವಧೂರಿಮಾಂ-ಸಮೇತಪಶ್ಯತ ॥ ಸೌಭಾಗ್ಯಮಸ್ಯೈದತ್ವಾಯಾಥಾಸ್ತಂ ವಿಪರೇತನ ॥ ಇತಿ ಸೀಮಂತೇ ಸಿಂದೂರಂ ನಿಕ್ಷಿಪ್ಯ ॥ ಮಾಂಗಲ್ಯತಂತುನಾನೇನ ಭರ್ತೃಜೀವನಹೇತುನಾ ॥ ಕಂಠೇ ಬಧ್ನಾಮಿ ಸುಭಗೇ ಸಾಜೀವ ಶರದಃ ಶತಂ ॥ ಇತಿ ಕಂಠೇ ಮಂಗಲಸೂತ್ರಂ ಬಧ್ನೀಯಾತ್ ॥

ತತಃ ಕನ್ಯಾಪಿತಾ ಐರಿಣೀಪೂಜನಂ ಕುರ್ಯಾತ್ ॥ ಅದ್ಯ ಶುಭತಿಥೌ ಮಮ ಉಮಾಮಹೇಶ್ವರಪ್ರೀತಿದ್ವಾರಾ ಕನ್ಯಾದಾನಫಲಸಂಪೂರ್ಣತಾವಾಪ್ತಯೇ

ವಿವಾಹವಾದ ನಂತರ ನಾಲ್ಕನೆಯ ರಾತ್ರಿಯಲ್ಲಿ, ಭದ್ರಾದಿ ದೋಷಗಳಿದ್ದರೆ ಹಗಲಿನಲ್ಲಿ ಕನ್ಯಾದಾತನು ಪತ್ನಿಯೊಡನೆ ದೇಶಕಾಲಾದಿಗಳನ್ನು ಸ್ಮರಿಸಿ, **"ವಿವಾಹಸ್ಯ...ಅಹಂ ಕರಿಷ್ಯೇ"** ಎಂದು ಸಂಕಲ್ಪ ಮಾಡಿ ವರನಿಗೆ ಅವನ ಮಾತಾಪಿತೃಗಳಿಗೆ ಇತರ ಬಂಧುಗಳಿಗೆ ಯಥಾಸಾಧ್ಯ ವಸ್ತ್ರಾದಿಗಳನ್ನು ಕೊಟ್ಟು ಸತ್ಕರಿಸಬೇಕು. ಬಳಿಕ ವರನ ತಂದೆಯು ಕನ್ಯೆಯನ್ನು ಪೂಜಿಸಬೇಕು. **"ಅಭಿವಸ್ತ್ರ..."** ಎಂಬ ಮಂತ್ರದಿಂದ ಪಟ್ಟೆಯ ಸೀರೆ, **"ಆಯುಷ್ಯಂ..."** ಸೂಕ್ತದಿಂದ ಆಭರಣಗಳು, **"ಯಾಃಫಲಿನೀ..."** ಎಂಬ ಮಂತ್ರದಿಂದ ಫಲಪುಷ್ಪಾದಿಗಳನ್ನು ಕೊಟ್ಟು, **"ಸುಮಂಗಲೀರಿಯಂ....."** ಎಂಬ ಮಂತ್ರ ಹೇಳಿ ಹಣೆಯಲ್ಲಿ ಕುಂಕುಮವನ್ನಿಡಬೇಕು. **"ಮಾಂಗಲ್ಯತಂತುನಾ..."** ಎಂದು ಹೇಳಿ ವರನು ಕುತ್ತಿಗೆಯಲ್ಲಿ ಮಂಗಲಸೂತ್ರವನ್ನು ಕಟ್ಟಬೇಕು.

Scanned by CamScanner
Scanned with CamScanner

ವಂಶಾಭಿವೃದ್ಧಯೇ ಚ ಐರಿಣೀಪೂಜನಂ ವರಮಾತ್ರೇ ಐರೀಣೀದಾನಂ ಚ ಕರಿಷ್ಯೇ ॥ ಐರಿಣಿ ತ್ವಮುಮಾದೇವೀ ಮಹೇಶೋ ಗಿರಿಜಾಪತಿಃ ॥ ಅತಸ್ತ್ವಾಂ ಪೂಜಯಿಷ್ಯಾಮಿ ಐರಿಣೀಂ ಸರ್ವಕಾಮದಾಂ ॥ ಸವಸ್ತ್ರಾಂ ಚ ಸದೀಪಾಂ ಚ ಶೂರ್ಪೈಃ ಷೋಡಶಭಿರ್ಯುತಾಂ ॥ ವರಮಾತ್ರೇ ಪ್ರದಾಸ್ಯಾಮಿ ಕನ್ಯಾದಾನಸ್ಯ-ಸಿದ್ಧಯೇ ॥ ಇತಿ ಸಂಕಲ್ಪ್ಯ ॥

ತತ್ರ ಉಮಾಮಹೇಶ್ವರೌ ಷೋಡಶೋಪಚಾರೈಃ ಪೂಜಯಿತ್ವಾ ಇದಂ ಐರಿಣ್ಯಾಖ್ಯಂ ವಂಶಪಾತ್ರಂ ಷೋಡಶಶೂರ್ಪಯುತಂ ವರಮಾತ್ರೇ ತತ್ ಸ್ಥಾನಾಪನ್ನಾಯೈ ವಾ ಸಂಪ್ರದದೇ ನ ಮಮೇತ್ಯುಕ್ತ್ವಾ ವರಮಾತೃಹಸ್ತೇ ಜಲಂ ಸಿಂಚೇತ್ ॥ ವಂಶಪಾತ್ರಂ ದತ್ವಾ ಮಂತ್ರಾನ್ ಪಠೇತ್ ॥ ವಂಶೋವಂಶಕರಃ ಶ್ರೇಷ್ಠೋ ವಂಶೋ ವಂಶಸಮುದ್ಭವಃ ॥ ಅನೇನ ವಂಶದಾನೇನ ತುಷ್ಟಾ ಋದ್ಧಿಂ ಕರೋತು ಮೇ ॥ ವಂಶಪಾತ್ರಮಿದಂ ಪುಣ್ಯಂ ವಂಶಜಾತಸಮು-ದ್ಭವಂ ॥ ವಂಶಾನಾಮುತ್ತಮಂ ದಾನಂ ಅತಃಶಾಂತಿಂ ಪ್ರಯಚ್ಛ ಮೇ ॥ ವಂಶಪಾತ್ರಾಣಿ ಸರ್ವಾಣಿ ಮಯಾ ಸಂಪಾದಿತಾನಿ ವೈ ॥ ಉಮಾಕಾಂತಾಯ ದತ್ತಾನಿ ಮಮ ಗೋತ್ರಾಭಿವೃದ್ಧಯೇ ॥ ವಂಶವೃದ್ಧಿಕರಂ ದಾನಂ ಸೌಭಾಗ್ಯಾ-ದಿಸಮನ್ವಿತಂ ॥ ವಸ್ತ್ರೇಣಾಚ್ಛಾದಿತಂ ಪೂಗಫಲಹೇಮಸಮನ್ವಿತಂ ॥ ಸರ್ವ-ಪಾಪಕ್ಷಯಕರಂ ನಾನಾದ್ರವ್ಯೈಸ್ತುಪೂರಿತಂ ॥ ದಾನಾನಾಮುತ್ತಮಂ ದಾನ-ಮತಃ ಶಾಂತಿಂ ಪ್ರಯಚ್ಛ ಮೇ ॥ ಇತಿ ॥ ತತಃ ಕನ್ಯಾಂ ವರಪಿತೃಮಾತ್ರು-ತ್ಸಂಗಯೋಃ ಪೃಥಗುಪವೇಶ್ಯ ಪೃಥಕ್ತೌ ಪ್ರಾರ್ಥಯೇತ್ ॥ ಪೂರ್ಣವ-ರ್ಷಾತ್ತ್ವಿಯಂ ಕನ್ಯಾ ಪುತ್ರವತ್ಪಾಲಿತಾ ಮಯಾ ॥ ಇದಾನೀಂ ತವ ಪುತ್ರಾಯ ದತ್ತಾ ಸ್ನೇಹೇನ ಪಾಲ್ಯತಾಂ ॥ ಸೌಭಾಗ್ಯಾದಿವೃದ್ಧಯೇ ಬ್ರಾಹ್ಮಣಸುವಾಸಿನೀಭ್ಯೋ ವಾಯನಾನಿ ದತ್ವಾ ಬ್ರಾಹ್ಮಣೇಭ್ಯೋ ಯಥಾಶಕ್ತಿ ಭೂಯಸೀಂ ದಕ್ಷಿಣಾಂ ಚ ದತ್ವಾ

ನಂತರ **"ಅದ್ಯ ಶುಭತಿಥೌ ....ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಕನ್ಯಾಪಿತನು ಐರಿಣೀಪೂಜೆಯನ್ನು ಮಾಡಬೇಕು. **"ಐರಿಣಿ ತ್ವಮುಮಾದೇವೀ ....ಕನ್ಯಾದಾನಸ್ಯಸಿದ್ಧಯೇ"** ಎಂದು ಪ್ರಾರ್ಥಿಸಬೇಕು.

ನಂತರ ಷೋಡಶೋಪಚಾರಗಳಿಂದ ಉಮಾಮಹೇಶ್ವರರನ್ನು ಪೂಜಿಸಿ, **"ಇದಂ ಐರಿಣ್ಯಾಖ್ಯಂ ವಂಶಪಾತ್ರಂ ...ವರಮಾತ್ರೇ (ತತ್ ಸ್ಥಾನಾಪನ್ನಾಯೈ) ಸಂಪ್ರದದೇ"** ಎಂದು ಹೇಳಿ ವರನ ತಾಯಿಯ ಕೈಯ ಮೇಲೆ ನೀರು ಬಿಡಬೇಕು. ಆಮೇಲೆ ಬಿದಿರಿನ ಆ ಪಾತ್ರೆಯನ್ನು ಕೊಟ್ಟು **"ವಂಶೋ ವಂಶಕರಃ ...ಪ್ರಯಚ್ಛ ಮೇ ॥"** ಎಂಬಲ್ಲಿವರೆಗೆ ಹೇಳಬೇಕು. ಆ ಬಳಿಕ ಕನ್ಯೆಯನ್ನು ಬೇರೆ ಬೇರೆಯಾಗಿ ವರನ ತಂದೆ ಮತ್ತು ತಾಯಿಯ ಮಡಿಲಲ್ಲಿ ಕೂತುಕೊಳ್ಳಿಸಿ ಅವರಿಬ್ಬರಲ್ಲಿಯೂ **"ಪೂರ್ಣವರ್ಷಾತ್ತ್ವಿಯಂ...ಪಾಲ್ಯತಾಂ"** ಎಂದು ಪ್ರಾರ್ಥಿಸಿ ಕೊಳ್ಳಬೇಕು. ನಂತರ ಸೌಭಾಗ್ಯಾದಿ ಅಭ್ಯುದಯಕ್ಕೋಸ್ಕರ ಬ್ರಾಹ್ಮಣಸುವಾಸಿನಿಯರಿಗೆ

Scanned by CamScanner

Scanned with CamScanner

ಕರ್ಮ ಉಮಾಮಹೇಶ್ವರಾರ್ಪಣಂ ಕುರ್ಯಾತ್ ॥ ಇದಮ್ಯೈರಿಣೀದಾನಂ ವಧೂ-ಪಿತೃಭ್ಯಾಮಭುಕ್ತವದ್ಭ್ಯಾಂ ಕೃತ್ವಾ ಭೋಜನಂ ಕಾರ್ಯಂ ॥

॥ ಇತಿ ವಿವಾಹಚತುರ್ಥದಿನಕೃತ್ಯಂ ॥

ವಾಯನದಾನಗಳನ್ನೂ ಬ್ರಾಹ್ಮಣರಿಗೆ ತುಂಬ ದಕ್ಷಿಣೆಯನ್ನೂ ಕೊಟ್ಟು ಉಮಾಮಹೇಶ್ವರಾರ್ಪಣ ಮಾಡಬೇಕು.

॥ ವಿವಾಹಚತುರ್ಥದಿನಕೃತ್ಯ ಸಮಾಪ್ತ ॥

Scanned by CamScanner

Scanned with CamScanner

|| ವಧೂಸಹಗೃಹಪ್ರವೇಶಃ ಲಕ್ಷ್ಮೀಪೂಜನಂ ||

|| ಶ್ರೀಃ || ಜ್ಯೋತಿಃ ಶಾಸ್ತ್ರೋಕ್ತೇ ಪ್ರತಿಶುಕ್ರಾದಿವರ್ಜಿತೇ ಶುಭಕಾಲೇ ನವೋಢಯಾ ವಧ್ವಾ ಮಂಗಲತೂರ್ಯೈಃ ಸಹ ಕನಿಕ್ರದದಿತ್ಯಾದಿ ಮಾಂಗಲಿಕ-ಮಂತ್ರಘೋಷಕೈರ್ದ್ವಿಜೈಃ ಸಹ ಶುಭೇ ಮುಹೂರ್ತೇ ವಧೂಂ ಪಾಣೌ ಗೃಹೀತ್ವಾ || ಓಂ ಇಹ ಪ್ರಿಯಂ ಪ್ರಜಯಾತೇಸಮೃಧ್ಯತಾಮಸ್ಮಿನ್ ಗೃಹೇ-ಗಾರ್ಹಪತ್ಯಾಯ ಜಾಗೃಹಿ || ಏನಾಪತ್ಯಾತನ್ವಂ ೧ ಸಂಸೃಜಸ್ವಾಧಾಜಿವ್ರೀವಿ ದಥಮಾವದಾರ್ಥಃ || ಇತಿ ಮಂತ್ರೇಣ ಗೃಹಂ ಪ್ರವಿಶ್ಯ ಪ್ರಶಸ್ತೇ ಆಸನೇ ಪ್ರಾಙ್ಮುಖಾವುಪವಿಶತಃ || ತತಃ ಸವಧೂಕೋ ವರಃ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಅನಯಾ ನವೋಢಯಾ ವಧ್ವಾ ಸಹ ಕೃತ ಗೃಹ-ಪ್ರವೇಶಾಂಗಭೂತಂ ಗಣಪತಿಪೂಜನಪೂರ್ವಕಂ ಸ್ವಸ್ತಿಪುಣ್ಯಾಹವಾಚನಂ ಚ ಕೃತ್ವಾ ಕಾಂಸ್ಯಪಾತ್ರೇ ಸಿತತಂಡುಲಾನ್ ಪ್ರಸಾರ್ಯ ತತ್ರ ಸ್ವರ್ಣಶಲಾಕಯಾ ಕುಲದೇವತಾ ನಾಮ ಸ್ವೇಷ್ಟಂ ಪತ್ನ್ಯಾಃ ಸ್ಥಾಪನೀಯಂ ನಾಮ ಚ ವಿಲಿಖ್ಯ ತದಸ್ತು... ಗೃಹಾವೈ... ಇತ್ಯಾದಿಭಿಃ ಪ್ರತಿಷ್ಠಾಪ್ಯ || ಓಂ ನಾಮಾನಿ ತೇ ಶತಕ್ರತೋವಿಶ್ವಾಭಿರ್ಗೀರ್ಭಿರೀಮಹೇ || ಇಂದ್ರಾಭಿಮಾತಿಷಾಹ್ಯೇ || ಭೂರ್ಭುವಃ ಸ್ವಃ ನಾಮಾಧಿಷ್ಠಾತ್ರ್ಯೈ. ಮಹಾಲಕ್ಷ್ಮ್ಯೈ ನಮ ಇತಿ

ಜ್ಯೋತಿಷ್ಕರು ಹೇಳಿದ ಶುಭದಿನದಲ್ಲಿ ಶುಭಮುಹೂರ್ತದಲ್ಲಿ ನೂತನವಾಗಿ ವಿವಾಹಿತಳಾದ ವಧುವಿನೊಂದಿಗೆ, ಬ್ರಾಹ್ಮಣರು **"ಕನಿಕ್ರದಜ್ಜನುಷಂ..."** ಮುಂತಾದ ಮಾಂಗಲಿಕ ಮಂತ್ರಗಳನ್ನು ಹೇಳುತ್ತಿದ್ದಂತೆ ವರನು ಮಂಗಲವಾದ್ಯಘೋಷದೊಂದಿಗೆ ವಧುವಿನ ಕೈಹಿಡಿದುಕೊಂಡು **"ಓಂ ಇಹಪ್ರಿಯಂ...."** ಎಂಬ ಮಂತ್ರವನ್ನು ಹೇಳುತ್ತ ತನ್ನ ಮನೆಯನ್ನು ಪ್ರವೇಶಿಸಬೇಕು. ಅಲ್ಲಿ ಪ್ರಶಸ್ತವಾದ ಆಸನದ ಮೇಲೆ ವಧುವಿನೊಂದಿಗೆ ಕುಳಿತು ಆಚಮನ ಪ್ರಾಣಾಯಾಮ ದೇಶಕಾಲ ಕೀರ್ತನಾದಿಗಳನ್ನು ಮಾಡಿ, ಗೃಹಪ್ರವೇಶಾಂಗವಾದ ಗಣಪತಿ ಪೂಜನ, ಪುಣ್ಯಾಹವಾಚನಗಳನ್ನು ಮಾಡಿ, ಕಂಚಿನ ಪಾತ್ರೆಯಲ್ಲಿ ಅಕ್ಕಿಯನ್ನು ಹರಡಿ, ಅದರ

Scanned by CamScanner

Scanned with CamScanner

ಮಹಾಲಕ್ಷ್ಮೀಂ ಷೋಡಶೋಪಚಾರೈರ್ಯಥಾಚಾರಂ ಸಂಪೂಜ್ಯ ಲಿಖಿತಕ್ರಮೇಣ ನಾಮ ವಾಚಯಿತ್ವಾ ವಿಪ್ರಾಶಿಷೋ ಗೃಹೀತ್ವಾ ತೇಭ್ಯೋ ದಕ್ಷಿಣಾಂ ದದ್ಯಾತ್ ॥

॥ ಇತಿ ವಧೂಗೃಹಪ್ರವೇಶಃ ॥

ಮೇಲೆ ಚಿನ್ನದ ಸಲಾಕೆಯಿಂದ ಕುಲದೇವತೆಯ ಹೆಸರನ್ನೂ, ತನ್ನ ಪತ್ನಿಗೆ ತಾನು ಇಡಲು ಬಯಸಿದ ಹೆಸರನ್ನೂ ಬರೆದು **"ತದಸ್ತು" "ಗೃಹಾವೈ"** ಮುಂತಾದ ಮಂತ್ರಗಳಿಂದ ಪ್ರತಿಷ್ಠಾಪಿಸಬೇಕು. ಆಮೇಲೆ **"ನಾಮಾನಿತೇ.."** ಎಂಬ ಮಂತ್ರವನ್ನು ಹೇಳಿ **"ಭೂರ್ಭುವಃ ಸ್ವಃ ...ನಮಃ"** ಎಂದು ಷೋಡಶೋಪಚಾರಗಳಿಂದ ಮಹಾಲಕ್ಷ್ಮಿಯ ಪೂಜೆಮಾಡಿ, ಮೊದಲು ಬರೆದ ಕ್ರಮದಲ್ಲಿ ಹೆಸರುಗಳನ್ನು ಓದಿ ಬ್ರಾಹ್ಮಣರಿಂದ ಆಶೀರ್ವಾದ ಪಡೆದು ಅವರಿಗೆ ದಕ್ಷಿಣಾದಿಗಳನ್ನು ಕೊಡಬೇಕು.

॥ ವಧೂಗೃಹಪ್ರವೇಶ ಸಮಾಪ್ತ ॥

Scanned by CamScanner

Scanned with CamScanner

॥ ದೇವಕೋತ್ಥಾಪನ ಮಂಡಪೋದ್ವಾಸನೇ ॥

॥ ಶ್ರೀಃ ॥ ಕರ್ತಾ ಉಕ್ತಕಾಲೇ ಮಂಡಪಾಂತಃ ಸಪತ್ನೀಕ ಉಪವಿಶ್ಯ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ॥ ವಿವಾಹಾಂಗತ್ವೇನ-ಸ್ಥಾಪಿತದೇವತಾನಾಮುತ್ಥಾಪನಂ ಮಂಡಪೋದ್ವಾಸನಂ ತದಂಗಂ ಗಣಪತಿ-ಪೂಜನಂ ಪುಣ್ಯಾಹವಾಚನಂ ಚ ಕರಿಷ್ಯೇ ಇತಿ ಸಂಕಲ್ಪ್ಯ ॥ ಸರ್ವಾಃ ದೇವತಾಃ ಪ್ರತ್ಯೇಕಂ ಪ್ರತ್ಯಹವತ್ಪೂಜಯಿತ್ವಾ ॥ ಓಂ ಉತ್ತಿಷ್ಠಬ್ರಹ್ಮಣಸ್ಪತೇದೇವಯಂತ-ಸ್ತ್ವೇಮಹೇ ॥ ಉಪಪ್ರಯಂತು ಮರುತಃಸುದಾನವಇಂದ್ರಪ್ರಾಶೂರ್ಭವಾ-ಸಚಾ ॥ ಓಂ ಅಭ್ಯಾರಮಿದದ್ರಯೋನಿಷಿಕ್ತಂ ಪುಷ್ಕರೇಮಧು ॥ ಅವತಸ್ಯ-ವಿಸರ್ಜನೇ ॥ ಇತಿ ವಿಸೃಜ್ಯ ಭಗವತ್ಯಾದೀನಾಂ ಮಂಡಪಾಂತಃ ತೈಲಾಭ್ಯಂಗೋ-ದ್ವರ್ತನೋಷ್ಣೋದಕಸ್ನಾನಪೂರ್ವಕಂ ಪೂಜನಂ ವಿಧಾಯ ॥ ವೇಷ್ಟನಸೂತ್ರ-ಮುನ್ಮುಚ್ಯ ಸ್ವಸ್ತಿವಾಚನಂ ಕುರ್ಯಾತ್ ॥ ತತೋ ದ್ವಿಜೈರಭಿಷೇಕಃ ಕಾರ್ಯಃ ॥ ತತ್ರಾಭಿಷೇಕಾಂತೇ ಪುರೋಧಾಸ್ತಚ್ಛಾಖಾದಿ ವಂಶಪಾತ್ರೇ ನಿಧಾಯ ತದುಪರಿ ಪ್ರಕ್ಷಿಪ್ತಾಭಿಷೇಕಜಲಂ ಸಕುಟುಂಬಯಜಮಾನಶಿರಸಿ ಕಿಂಚಿತ್ ಸ್ರಾವಯೇತ್ ॥

ದೇವಕೋತ್ಥಾಪನ ಮಂಡಪೋದ್ವಾಸನವಿಧಿ:- ಯಜಮಾನನು ಉಕ್ತಕಾಲದಲ್ಲಿ ಮಂಡಪದಲ್ಲಿ ಪತ್ನಿಯೊಡನೆ ಕುಳಿತು ಆಚಮನ ಪ್ರಾಣಾಯಾಮ ದೇಶಕಾಲಕೀರ್ತನಾದಿಗಳನ್ನು ಮಾಡಿ **"ವಿವಾಹಾಂಗತ್ವೇನ ...ಚ ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಪ್ರತಿದಿನದಂತೆ ಎಲ್ಲ ದೇವತೆಗಳನ್ನೂ ಪ್ರತ್ಯೇಕವಾಗಿ ಪೂಜಿಸಬೇಕು. ಆಮೇಲೆ **"ಉತ್ತಿಷ್ಠಬ್ರಹ್ಮಣಸ್ಪತೇ..."** ಎಂದು ಅಕ್ಷತೆ ಹಾಕಿ ವಿಸರ್ಜಿಸಿ ಭಗವತೀ ಮುಂತಾದ ದೇವತೆಗಳಿಗೆ ತೈಲಾಭ್ಯಂಗ ಬಿಸಿನೀರಿನ ಸ್ನಾನ ಮುಂತಾದವುಗಳನ್ನು ಮಾಡಿಸಿ ಪೂಜೆಮಾಡಿ, ಸುತ್ತಿಕಟ್ಟಿದ ನೂಲನ್ನು ಬಿಚ್ಚಿ ಸ್ವಸ್ತಿವಾಚನ ಮಾಡಬೇಕು. ಆಮೇಲೆ ಬ್ರಾಹ್ಮಣರು ಅಭಿಷೇಕ ಮಾಡಬೇಕು. ಅಭಿಷೇಕಾನಂತರ ಪುರೋಹಿತನು ಆ ಪಲ್ಲವಶಾಖೆಗಳನ್ನು ಒಂದು ಬಿದಿರಿನ ಪಾತ್ರೆಯಲ್ಲಿಟ್ಟು ಅದರ ಮೇಲೆ ಅಭಿಷೇಕಜಲವನ್ನು ಸುರಿಯಬೇಕು. ಹಾಗೆ ಸುರಿದ ನೀರನ್ನು ಕುಟುಂಬಸಮೇತನಾಗಿ ಕುಳಿತ ಯಜಮಾನನ ತಲೆಯ ಮೇಲೆ **"ಪ್ರೇತಿಚೇತಿ..."** ಎಂಬ ವಚನಮಂತ್ರವನ್ನು ಮೂರು ಬಾರಿ ಹೇಳಿ ಸಿಂಪಡಿಸಬೇಕು.

Scanned by CamScanner

ಓಂ ಪ್ರೇತಿಚೇತಿಚೇತ್ಯೇತದ್ವೈ ಸರ್ವಂ ಸ್ವಸ್ತ್ಯಯನಂ ಯತ್ಪ್ರೇತಿಚೇತಿತದ್ಯೋ ಸ್ಯಪ್ರಿಯಸ್ಯಾತ್ತಮೇತೇನಾನುಮಂತ್ರಯೇತ ಪ್ರೇತಿಚೇತಿಚೇತಿಸ್ವಸ್ತ್ಯೇವಗಚ್ಛತಿ ಸ್ವಸ್ತಿಪುನ-ರಾಗಚ್ಛತೀತಿ ಬ್ರಾಹ್ಮಣಂ ಪಠೇತ್ ॥ ಏವಂ ತ್ರಿಃ ಕುರ್ಯಾತ್ ॥ ತತಃ ಕರ್ತಾ ಸ್ವಶಿರಸಿ ಬದ್ಧಾಂಜಲಿರಸ್ಮದ್ಗೋತ್ರೇ ಷಟ್ಸು ಷಟ್ಸು ಮಾಸೇಷು ಶೋಭನಮಸ್ತ್ವಿತಿ ಭವಂತೋ ಬ್ರುವಂತು ಇತಿ ದ್ವಿಜಾನ್ ಪ್ರಾರ್ಥಯೇತ್ ॥ ತೇ ಚ ತಥಾಸ್ತ್ವಿತಿ ಬ್ರೂಯುಃ ॥ ತತೋ ದ್ವಿಜಾನ್ ಸಂಪೂಜ್ಯ ತದಾಶಿಷೋ ಗೃಹೀತ್ವಾ ಸಕುಟುಂಬೋ ಭುಂಜೀತ ॥

॥ ಇತಿ ಮಂಡಪೋದ್ವಾಸನಂ ॥

ಬಳಿಕ ಯಜಮಾನನು ತಲೆಯ ಮೇಲೆ ಕೈಜೋಡಿಸಿ, "**ಅಸ್ಮದ್ಗೋತ್ರೇ ... ... ಬ್ರುವಂತು**" ಎಂದು ಪ್ರಾರ್ಥಿಸಿದಾಗ, ಬ್ರಾಹ್ಮಣರು "**ತಥಾಸ್ತು**" ಎನ್ನಬೇಕು. ಬಳಿಕ ಬ್ರಾಹ್ಮಣರಿಗೆ ದಕ್ಷಿಣಾದಿಗಳನ್ನು ಕೊಟ್ಟು ಪೂಜಿಸಿ ಆಶೀರ್ವಾದ ಪಡೆಯಬೇಕು.

॥ ಮಂಡಪೋದ್ವಾಸನ ಸಮಾಪ್ತ ॥

Scanned by CamScanner
Scanned with CamScanner

॥ ಔಪಾಸನಾಖ್ಯಃ ಸಾಯಂಪ್ರಾತರ್ಹೋಮನಿರ್ಣಯಃ ॥

ಗೃಹ್ಯಾಗ್ನಿಮತಃ ಸಾಯಂಪ್ರಾತರೌಪಾಸನಹೋಮಪ್ರಯೋಗೋತ್ರಾಪೇಕ್ಷಿತಃ ॥ ಕೃತದಾರೋ ನ ತಿಷ್ಠೇತ ಕ್ಷಣಮಪ್ಯಗ್ನಿನಾ ವಿನಾ । ತಿಷ್ಠೇತ ಚ ದ್ವಿಜೋ ವ್ರಾತ್ಯಃ ತಥಾ ಚ ಪತಿತೋ ಭವೇತ್ ॥ ೧ ॥ ಶ್ರೌತೇ ಕರ್ಮಣಿ ನೋ ಶಕ್ತೋ ಜ್ಞಾನದ್ರವ್ಯಾದ್ಯಭಾವತಃ ॥ ಸ್ಮಾರ್ತಂ ಕುರ್ಯಾದ್ಯಥಾ ಶಕ್ತೋಽತ್ರಾಪ್ಯಾಚಾರಂ ಲಭೇತ್ಸದಾ ॥ ೨ ॥ ನಾವಸಥ್ಯಾತ್ಪರೋ ಧರ್ಮೋ ನಾವಸಥ್ಯಾತ್ಪರಂ ತಪಃ ॥ ನಾವಸಥ್ಯಾತ್ಪರಂ ದಾನಂ ನಾವಸಥ್ಯಾತ್ಪರಂ ಧನಂ ॥ ನಾವಸಥ್ಯಾತ್ಪರಂ ಶ್ರೇಯೋ ನಾವಸಥ್ಯಾತ್ಪರಂ ಯಶಃ ॥ ನಾವಸಥ್ಯಾತ್ಪರಾ ಸಿದ್ಧಿಃ ನಾವಸಥ್ಯಾತ್ಪರಾಗತಿಃ । ನಾವಸಥ್ಯಾತ್ಪರಂ ಸ್ಥಾನಂ ನಾವಸಥ್ಯಾತ್ಪರಂ ವ್ರತಂ ॥ (ಗೃಹ್ಯಕಾಂಡಂ) ಸ್ಮೃತಿಕಾರಃ ॥ ವೈವಾಹಿಕೇಗ್ನೌ ಕುರ್ವೀತ ಗೃಹ್ಯಂ ಕರ್ಮ ಯಥಾವಿಧಿ । ಪಂಚಯಜ್ಞವಿಧಾನಂ ಹಿ ಪಂಕ್ತಿಂ ಚಾನ್ವಾಹಿಕೀ ಗೃಹೀ ॥ ಮನು ಅ. ೩ ಶ್ಲೋ. ೬೩ ॥ ಗೃಹಕಾರಿಕಾಯಾಂ ಸ ತು ಯಸ್ಮಿನ್ವಿವಾಹಾಗ್ನಿರುತ್ಪನ್ನೋಽಹನಿ ತಸ್ಯ ತು । ಯತ್ಸಾಯಂ ತತ ಆರಭ್ಯ ಗೃಹ್ಯಂ ಪರಿಚರೇತ್ಸ್ವಯಂ ॥ ಆತ್ಮನೋಽಸಂಭವೇ ಪತ್ನೀಪುತ್ರಾದಯ ಇತಿ ಸ್ಥಿತಿಃ ॥ ಅನ್ಯಸ್ತು ಮನ್ಯತೇ ಪತ್ನೀ ಕುಮಾರ್ಯೋಸ್ತದಹೋಮಕಂ ॥ ೨ ॥

ಔಪಾಸನವೆಂಬ ಸಾಯಂಪ್ರಾತರ್ಹೋಮನಿರ್ಣಯ:– ವಿವಾಹವಾದಂದಿನಿಂದ ಗೃಹ್ಯಾಗ್ನಿಯು ಆರಂಭವಾಗುತ್ತದೆ. ಗೃಹ ಎಂದರೆ ಗೃಹಣೀ ಎಂದರ್ಥ. ಗೃಹಿಣಿಯ ಸ್ವೀಕಾರವಾದಂದಿನಿಂದ ಗೃಹಾಗ್ನಿ ಸೇವನವನ್ನು ಮಾಡಬೇಕು. ಗೃಹಾಗ್ನಿಯನ್ನು ಉದ್ದೇಶಿಸಿ ಸಾಯಂಪ್ರಾತರ್ಹೋಮಗಳ ವಿಧಿಯನ್ನು ಕೊಡಲಾಗಿದೆ.

ವಿವಾಹಕಾಲದಲ್ಲಿ ಕನ್ಯೆಯ ಮನೆಯಲ್ಲಿ ವಿವಾಹಹೋಮ ಮಾಡಿದ ನಂತರ ಗೃಹ ಪ್ರವೇಶದ ಸಮಯಕ್ಕೆ ಗೃಹಪ್ರವೇಶನೀಯ ಹೋಮವನ್ನೂ ಮಾಡಿ ಸಮಿಧೆಗಳ ಮೇಲೆ ಅಗ್ನಿಯನ್ನು ಆವಾಹಿಸಿ ಸ್ವಗೃಹಕ್ಕೆ ತೆಕ್ಕೊಂಡು ಬರುತ್ತಾರೆ. ಬಂದ ನಂತರ ಔಪಾಸನ ಕುಂಡ ಅಥವಾ ಸ್ಥಂಡಿಲದ ಮೇಲೆ ಅದನ್ನು ಪ್ರತ್ಯವರೋಹಣ ಮಾಡಿ ಪ್ರಜ್ವಲಿಸಿ ಗೃಹ ಪ್ರವೇಶನೀಯ ಅಥವಾ ಸ್ಥಾಲೀಪಾಕಾದಿ ವಿಧಿಗಳನ್ನು ಮಾತ್ರ ಮಾಡುವುದು ಕಂಡುಬರುವುದಿಲ್ಲ. ವಿವಾಹಹೋಮದ ಸಂಗಡವೇ ಗೃಹಪ್ರವೇಶನೀಯವನ್ನೂ ಮಾಡಿ ಮುಗಿಸುತ್ತಾರೆ. ಇದು ಸರಿಯಲ್ಲ. ಅಗ್ನಿಯ ಸಮಾರೋಪ ಮಾಡಿಕೊಂಡು ತನ್ನ ಮನೆಗೆ ಬಂದ ಮೇಲೆ ಪುನಃಸಂಧಾನ ವಿಧಿಯಿಂದ ಅಗ್ನಿಯನ್ನು ಸಿದ್ಧಮಾಡಿ ಗೃಹಪ್ರವೇಶನೀಯ ಹೋಮವನ್ನೂ ಸಾಯಂಪ್ರಾತರೌಪಾಸನವನ್ನೂ ಮಾಡಬೇಕು.

Scanned by CamScanner

ಹವನದ್ರವ್ಯಾಣಿ:-

ವ್ರೀಹಿಶ್ಯಾಮಾಕಯವಾನಾಂ ತಂಡುಲಾಃ ಪಯೋದಧಿಸರ್ಪಿರ್ಯವ-ವ್ರೀಹಿ ಗೋಧೂಮಪ್ರಿಯಂಗವಃ ಸ್ವರೂಪೇಣಾಪಿ ಹೋಮ್ಯಾಃ ತಿಲಾಸ್ತು ಸ್ವರೂಪೇಣೈವ ॥ ಶತಂ ಚತುಃಷಷ್ಟಿರ್ವಾಹುತಿಂ ವ್ರೀಹಿತುಲ್ಯಾನಾಂ । ದ್ರವಂ ಹವಿಃ ಸ್ರುವೇಣೈವ ಪಾಣಿನಾ ಕಠಿಣಂ ಹವಿಃ । ಕರ್ಷಪ್ರಮಾಣಮಾಜ್ಯಂ ಸ್ಯಾನ್ಮಧು ಕ್ಷೀರಂ ಚ ತತ್ಸಮಂ ॥ ಇತಿ ಸಿದ್ಧಾಂತಶೇಖರೇ ॥ ಪ್ರಾದೇಶ-ಮಾತ್ರಾಃ ಸಮಿಧಃ ಅನ್ನಂ ಗ್ರಾಸಸಮಂ ಗ್ರಾಹ್ಯಂ ॥ ಉತ್ತಾನೇನೈವ ಹಸ್ತೇನ ಹ್ಯಂಗುಷ್ಠಾಗ್ರೇಣ ಪೀಡಿತಂ । ಸಂಹತಾಂಗುಲಿಪಾಣಿಸ್ತು ವಾಗ್ಯತೋ ಜುಹು-ಯಾದ್ಧವಿರಿತಿ ॥ ಗೋ. ಗೃ. ಸೂ. ೮೧ ॥

ಹೋಮೇ ಅಗ್ನಿಸ್ವರೂಪಂ:-

ಬಹು ಶುಷ್ಕೇಂಧನೇ ಚಾಗ್ನೌ ಸುಸಮಿದ್ಧೇ ಹುತಾಶನೇ ॥ ವಿಧೂಮೇ ಲೇಲಿಹಾನೇ ಚ ಹೋತವ್ಯಂ ಕರ್ಮಸಿದ್ಧಯೇ ॥ ದೀಪಿಕಾಯಾಮಪಿಃ-ಯತಃ ಕಾಷ್ಠಂ ತತಃ ಶ್ರೋತ್ರಂ ಯತೋ ಧೂಮೋಥ ನಾಸಿಕಾ । ಯತೋಲ್ಪಜ್ವಲನಂ ನೇತ್ರಂ ಯತೋ ಭಸ್ಮ ತತಃ ಶಿರಃ । ಯತಃ ಪ್ರಜ್ವಲಿತೋ ವಹ್ನಿಃ ತನ್ಮುಖಂ ಜಾತವೇದಸಃ । ಅತೋ ಮುಖಾತಿರಿಕ್ತೇಷು ಹೋಮೇನಿಷ್ಫತ್ವಮುಕ್ತಂ । ಅತಃ ವಹ್ನೇರ್ಮುಖಸಂಜ್ಞೇ ಪ್ರಜ್ವಲಿತಾಂಗೇ ಜುಹುಯಾತ್ ॥

ಅಗ್ನಿಯ ಉಪಾಸನಾರೂಪವಾದ ಹೋಮಕ್ಕೆ ಔಪಾಸನವೆಂದು ಹೆಸರು. ವಿವಾಹವಾದ ನಂತರ ಒಂದು ಕ್ಷಣವೂ ಅಗ್ನಿಯನ್ನು ಬಿಟ್ಟಿರಬಾರದು. ಅಗ್ನಿಯನ್ನು ಬಿಟ್ಟವನು ವ್ರಾತ್ಯ ಅಥವಾ ಪತಿತನೆನಿಸುತ್ತಾನೆ. ಜ್ಞಾನ, ದ್ರವ್ಯ ಮುಂತಾದುವುಗಳ ಅಭಾವದಿಂದ ಶ್ರೌತಕರ್ಮಗಳನ್ನು ಮಾಡಲು ಅಸಮರ್ಥನಾದವನು ಯಥಾಶಕ್ತಿ ಸ್ಮಾರ್ತಕರ್ಮಗಳನ್ನು ಮಾಡಬೇಕು. ಸ್ಮಾರ್ತಾಗ್ನಿಗೆ ಆವಸಥ್ಯ (ಮನೆಯಲ್ಲಿರುವ ಅಗ್ನಿ) ಎಂಬ ಹೆಸರಿದೆ. ಆವಸಥ್ಯಸೇವನೆಯಿಂದ ಎಲ್ಲ ಧರ್ಮಕರ್ಮಗಳನ್ನು ಮಾಡಿದರೆ ಶ್ರೇಯಸ್ಸು, ಬ್ರಹ್ಮತೇಜಸ್ಸು, ಮಾನ, ಸುಖ, ಐಶ್ವರ್ಯ, ಸಿದ್ಧಿ, ಮೋಕ್ಷ, ಇತ್ಯಾದಿಗಳು ಲಭಿಸುತ್ತವೆ.

"ಗೃಹೇ ಭವಂ ಗೃಹ್ಯಂ" ಅಥವಾ **"ಗೃಹಾತ್ ಭವಂ ಗೃಹ್ಯಂ"** :- ಮನೆಯಲ್ಲಿ ಆಗುವುದು ಅಥವಾ ಗೃಹಾತ್ (ಪತ್ನಿಯಿಂದ) ಆಗುವುದು ಎಂದು ಎರಡು ರೀತಿಯ ಅರ್ಥವಾಗುತ್ತದೆ. ಗೃಹ ಎಂದರೆ ಮನೆ ಮತ್ತು ಪತ್ನೀ ಎಂಬ ಎರಡೂ ಅರ್ಥಗಳಿವೆ. **"ನ ಗೃಹಂ ಗೃಹಮಿತ್ಯಾಹುಃ ಗೃಹಿಣೀ ಗೃಹಮುಚ್ಯತೇ" "ಸ್ವಗೃಹೋ ಗೃಹಮಾಗತಃ"** ಈ ಮಾತುಗಳಿಂದ ಗೃಹ ಎಂದರೆ ಗೃಹಿಣೀ ಎಂದು ಅರ್ಥವಾಗುತ್ತದೆ.

ವೈಜ್ಞಾನಿಕ ದೃಷ್ಟಿಯಿಂದ ನೋಡಿದರೆ ಹೋಮದಿಂದ ಉಂಟಾದ ವಾಯುವಿನಿಂದ ವಾತಾವರಣದ ಮೇಲೆ ಅದ್ಭುತ ಪರಿಣಾಮವುಂಟಾಗಿ ಮನುಷ್ಯನ ಆರೋಗ್ಯ, ಆಯುಸ್ಸು,

Scanned by CamScanner
Scanned with CamScanner

ಗೃಹ್ಯಾಗ್ನಿಮುಹೂರ್ತ:-

ಭದ್ರಾವ್ಯತೀಪಾತಾದ್ಯಸಂಭವೇ- ಪ್ರಾಜಾಪತ್ಯೇ ಪೂಷಭೇ ಸಿದ್ಧಿ ದೈವೇ ಪುಷ್ಯ ಜ್ಯೇಷ್ಠಾಸ್ವೈಂದವೇ ಕೃತ್ತಿಕಾಸು । ಅಗ್ನ್ಯಾಧಾನಮುತ್ತರಾಣಾಂ ತ್ರಯೇಽಪಿ ಶ್ರೇಷ್ಠಂ ಪ್ರೋಕ್ತಂ ಪ್ರಾಕ್ತನೈರ್ವಿಪ್ರಮುಖ್ಯೈಃ ॥

ಪ್ರಾದುಷ್ಕರಣಕಾಲಾತ್ಯಯೇ ಸಮಸ್ತವ್ಯಾಹೃತಿಭಿರೇಕಾ ಆಜ್ಯಾಹುತಿಃ ಕಾರ್ಯಾ ತಥಾ ಚ ಗೃಹ್ಯಕಾರಿಕಾ - ಪ್ರಾಯಶ್ಚಿತ್ತವಿಶೇಷೇಣ ಯತ್ರ ನೋಕ್ತೋ ಭವೇದ್ವಿಧಿಃ । ಹೋತವ್ಯಾಜ್ಯಾಹುತಿಸ್ತತ್ರ ಭೂರ್ಭುವಃ ಸ್ವರಿತೀತಿ ಚ ॥

ಶಕ್ತಿವರ್ಧನೆ ಇತ್ಯಾದಿಗಳು ವೃದ್ಧಿಯಾಗುತ್ತವೆ. ಯಜ್ಞಕುಂಡದ ಸಮೀಪವಿದ್ದವರ ಮೇಲಂತೂ ಒಳ್ಳೆಯ ಪರಿಣಾಮ ಆಗಿಯೇ ಆಗುತ್ತದೆ. ಅದಕ್ಕಿಂತ ಹೆಚ್ಚಾಗಿ ವಾಯು ಮಂಡಲವು ಶುದ್ಧವಾಗಿ ಇಡೀ ಲೋಕಕ್ಕೆ ಒಳಿತಾಗುತ್ತದೆ. ತನ್ನ ಹಾಗೂ ತನ್ನ ಕುಟುಂಬದ ಕ್ಷೇಮದ ದೃಷ್ಟಿಯಿಂದಲಾದರೂ ಪ್ರತಿದಿನವೂ ದಿನಕ್ಕೆರಡು ಸಲ ಹೋಮವನ್ನು ಮಾಡಲೇಬೇಕು. ಯಜ್ಞದಲ್ಲಿ ಹೋಮಿಸುವ ಸಾಮಗ್ರಿಗಳ ಗುಣವನ್ನು ಪರಿಶೀಲಿಸಿದರೆ ಯಜ್ಞಗಳ ಉಪಯುಕ್ತತೆಯ ಕುರಿತು ಯಾರಿಗೂ ಸಂದೇಹ ಬರಲಾರದು. ನಮ್ಮ ಪ್ರಾಚೀನ ಋಷಿ ಮುನಿಗಳಿಗೆ ಈ ವಿಚಾರವು ಚೆನ್ನಾಗಿ ತಿಳಿದಿತ್ತು ಆದ್ದರಿಂದಲೇ ಅವರು ಈ ಔಪಾಸನಾದಿ ಕರ್ಮಗಳನ್ನು ಮಾಡಲೇಬೇಕೆಂದು ವಿಧಿಸಿದ್ದಾರೆ.

ಪಂಚಮಹಾಯಜ್ಞಗಳಿಗೆ ಮಹತ್ತ್ವದ ಸ್ಥಾನವಿರುವುದರಿಂದ ಗೃಹಸ್ಥನಾದವನು ಅವುಗಳನ್ನು ತಪ್ಪದೆ ಮಾಡಬೇಕೆಂಬ ವಿಧಿ ಇದೆ. ಆದರೆ ಈ ಕಾಲದಲ್ಲಿ ಇವುಗಳನ್ನು ಯಾರೂ ಮಾಡುವುದಿಲ್ಲ. ಇದೇ ರೀತಿ ಪಾರ್ವಣ ಸ್ಥಾಲೀಪಾಕ, ಔಪಾಸನ ಹೋಮ ಮುಂತಾದವುಗಳನ್ನೂ ಹವಿರ್ಯಜ್ಞ ಸಂಸ್ಕಾರಗಳಲ್ಲೆ ಗಣನೆ ಮಾಡಿದ್ದಾರೆ. ವಿವಾಹಾಗ್ನಿಯ ಮೇಲೆಯೇ ಎಲ್ಲ ಗೃಹ್ಯಕರ್ಮಗಳನ್ನೂ, ಪಂಚ ಮಹಾಯಜ್ಞ, ಉಪಾಕರ್ಮೋತ್ಸರ್ಜನ, ವಾಸ್ತುವಿಧಿ, ಸರ್ವಕಾಮ್ಯವಿಧಿ ಇತ್ಯಾದಿಗಳನ್ನೂ ಮಾಡಬೇಕು. ಇಷ್ಟೇ ಅಲ್ಲ ಅಡಿಗೆಯನ್ನು ಸಹ ಗೃಹ್ಯಾಗ್ನಿಯ ಮೇಲೆಯೇ ಮಾಡಬೇಕು.

ಗೃಹ್ಯಕಾರಿಕೆಯಲ್ಲಿ:- ವಿವಾಹಾಗ್ನಿಯು ಸಿದ್ಧವಾದ ದಿನವೇ ಸಾಯಂ ಔಪಾಸನವನ್ನೂ ಮರುದಿನ ಪ್ರಾತರೌಪಾಸನವನ್ನೂ, ಈ ಕ್ರಮದಿಂದ ಮೊದಲು ಸಾಯಂ ಮತ್ತೆ ಪ್ರಾತರೌಪಾಸನವನ್ನು ಆರಂಭಿಸಬೇಕೆಂದು ಹೇಳಿದ್ದಾರೆ. ಹೆಂಡತಿಯಿಂದ ತನಗೆ ಏನಾದರೂ ತೊಂದರೆ ಇದ್ದರೆ, ಅವಳಿಗೂ ರಜಸ್ವಲಾದಿ ದೋಷಗಳಿದ್ದರೆ, ಮಗನಿಂದ ಇಲ್ಲವೇ ಮಗಳು, ಸಂಬಂಧಿಕ, ಋತ್ವಿಜ, ಶಿಷ್ಯ ಮುಂತಾದವರಿಂದಲಾದರೂ ಔಪಾಸನವನ್ನು ಮಾಡಿಸಲೇಬೇಕು. ಇದಕ್ಕೆ ಎಂದಿಗೂ ಚ್ಯುತಿ ಬರಬಾರದು.

"ಹವನದ್ರವ್ಯಾನಾಮಗ್ನೌ ಹವನೇನ ವಾಯುರ್ವಿಶುದ್ಧ್ಯತಿ" ಎಂಬ ಮಾತಿನಂತೆ, ಹವನದಿಂದ ವಾಯುವು ಶುದ್ಧವಾಗಿ ರೋಗಾದಿಗಳು ನಾಶವಾದ ಅನೇಕ ಉದಾಹರಣೆಗಳಿವೆ.

Scanned by CamScanner
Scanned with CamScanner

ಸಮಸ್ಯಹೋಮಃ-

ಕಾಲದ್ವಯೇಪ್ಯಶಕ್ತಶ್ಚೇದೇಕಸ್ಮಿನ್ ಕಾಲ ಏವ ವಾ । ಪ್ರಾಗೇವೋಕ್ತೇನ ವಿಧಿನಾ ಸಮಸ್ಯಂ ಸಾಯಮಾಚರೇದಿತಿ ಶಾಕಲಃ । ಸಾಯಂ ಪ್ರಾತರ್ಹೋಮೌ ಸಮಸ್ಯಂ ಕರಿಷ್ಯೇ ಇತಿ ಸಂಕಲ್ಪ್ಯ ಏಕತಂತ್ರೇಣ ಕುರ್ಯಾತ್ ॥

ದರ್ಶಪೌರ್ಣಮಾಸಸ್ಥಾಲೀಪಾಕಃ ಅತ್ರಾಪೇಕ್ಷಿತಃ । ಸ ಪೂರ್ವಪ್ರಸಂಗಮನುಸೃತ್ಯ ಗೃಹಯಜ್ಞಾರಂಭೇ ಗತ ಏವ ॥ ನಷ್ಟಾಗ್ನೇಃ ಪುನಃ ಸಂಧಾನಂ "ವಿಚ್ಛಿನ್ನಸ್ಯ ಗೃಹ್ಯಾಗ್ನೇಃ ಪುನಃ ಸಂಧಾನ ಪ್ರಯೋಗೋ" ಪ್ರಸಂಗಮನುಸೃತ್ಯ ಗರ್ಭಾಧಾನಪ್ರಯೋಗಾರಂಭೇ ಸಂಗೃಹೀತೋಽಸ್ತಿ ॥

ಹವನದ್ರವ್ಯಗಳು:- ಭತ್ತ, ಶ್ಯಾಮಾಕ, ಯವ ಇವುಗಳ ಅಕ್ಕಿ, ಹಾಲು, ಮೊಸರು, ತುಪ್ಪ, ಯವ, ವ್ರೀಹಿ, ಗೋಧಿ, ಪ್ರಿಯಂಗು ಮತ್ತು ಎಳ್ಳು. ಅಕ್ಕಿ ಮೊದಲಾದ ಗಟ್ಟಿ ವಸ್ತುಗಳನ್ನು ಒಂದು ಆಹುತಿಗೆ ೧೦೦ ಅಥವಾ ೬೪ ತೆಗೆದುಕೊಳ್ಳಬೇಕು. ಘನವಸ್ತುಗಳನ್ನು ಉತ್ತಾನ ಹಸ್ತದಿಂದಲೂ, ದ್ರವಗಳನ್ನು ಸ್ರುವದಿಂದಲೂ ಹೋಮಿಸಬೇಕು. ಎರಡು ತೊಲೆಯಷ್ಟು ಪ್ರತಿಯೊಂದು ಆಹುತಿಯ ಪ್ರಮಾಣವಿರಬೇಕು. ಸಮಿಧೆ ಚೋಟುದ್ದವಾಗಿಯೂ ಅನ್ನವು ಒಂದು ಗ್ರಾಸದಷ್ಟೂ ಇರಬೇಕು.

ಹೋಮಾಗ್ನಿಯ ಸ್ವರೂಪ:- ಕಟ್ಟಿಗೆ ಇದ್ದಲ್ಲಿ ಕಿವಿ, ಹೊಗೆ ಇದ್ದಲ್ಲಿ ಮೂಗು, ಸ್ವಲ್ಪ ಜ್ವಾಲೆ ಇದ್ದಲ್ಲಿ ಕಣ್ಣು, ಭಸ್ಮವಿದ್ದಲ್ಲಿ ತಲೆ, ಪ್ರಜ್ವಲಿಸುವ ಜ್ವಾಲೆ ಇದ್ದಲ್ಲಿ ಮುಖ, ಈ ರೀತಿ ಇರುವುದರಿಂದ ಉರಿಯುವ ಜ್ವಾಲೆ (ಮುಖ) ಇರುವಲ್ಲಿಯೇ ಆಹುತಿಗಳನ್ನು ಕೊಡಬೇಕು.

ಗೃಹ್ಯಾಗ್ನಿ ಪರಿಗ್ರಹದ ಮುಹೂರ್ತ:- ಭದ್ರಾ ವ್ಯತೀಪಾತಾದಿ ದುರ್ಯೋಗಗಳಿರಬಾರದು. ರೋಹಿಣೀ, ರೇವತಿ, ವಿಶಾಖಾ, ಪುಷ್ಯ, ಜ್ಯೇಷ್ಠಾ, ಮೃಗಶಿರಾ, ಕೃತ್ತಿಕಾ ಮತ್ತು ಮೂರು ಉತ್ತರಾ ಇವುಗಳಲ್ಲಿ ಪ್ರಥಮ ಅಗ್ನ್ಯಾಧಾನವನ್ನಾರಂಭಿಸಬೇಕು. ಹೋಮ ಕಾಲ ಮೀರಿದ್ದರೆ ಮೊದಲು ಓಂ ಭೂರ್ಭುವಃ ಸ್ವಃ ಸ್ವಾಹಾ ಎಂದು ಒಂದು ಆಹುತಿ ಕೊಟ್ಟು ಬಳಿಕ ಹೋಮ ಮಾಡಬೇಕು.

ಹವನದ್ರವ್ಯದ ಜ್ವಲನದಿಂದ ಆರೋಗ್ಯವೃದ್ಧಿಯಾಗುವುದರಿಂದ ಬೇರೆ ಬೇರೆ ಋತುಗಳಲ್ಲಿ ಅವುಗಳ ಪ್ರಮಾಣ ಭಿನ್ನವಾಗಿರುತ್ತದೆ. ಹವನದ್ರವ್ಯವು ೪ ವಿಧವಾಗಿರುತ್ತದೆ. ೧. ಪುಷ್ಟಿಕಾರಕ ಪದಾರ್ಥ:- ತುಪ್ಪ, ಹಾಲು, ಹಣ್ಣು ಇತ್ಯಾದಿ. ೨. ಮಿಷ್ಟಪದಾರ್ಥ:- ಜೇನು, ಗೋಧಿ, ದ್ರಾಕ್ಷೆ ಇತ್ಯಾದಿ. ೩. ರೋಗನಾಶಕ:- ಮುತ್ತುಗ, ಉತ್ತರಾಣೀ, ಅಶ್ವತ್ಥ, ಔದುಂಬರ, ದೂರ್ವೆ, ದರ್ಭೆ ಇತ್ಯಾದಿ. ೪. ಸುಗಂಧಕಾರಕ:- ಕಸ್ತೂರಿ, ಕೇಸರ, ಅಗರು, ಶ್ವೇತಚಂದನ ಇತ್ಯಾದಿ.

ಸಮಸ್ಯಹೋಮ:- ಎರಡು ಹೊತ್ತು ಔಪಾಸನ ಮಾಡಲು ಅಸಾಧ್ಯವಾದರೆ, ಸಾಯಂಕಾಲ ಒಂದೇ ಸಲ **"ಸಾಯಂಪ್ರಾತರೌಪಾಸನ...ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಏಕತಂತ್ರದಿಂದ ಮಾಡಬೇಕು.

Scanned by CamScanner

Scanned with CamScanner

ಆಯತನಸಂಸ್ಕಾರ:-

ಶುದ್ಧದೇಶೇ ಉಕ್ತರೀತ್ಯಾ ಆಯತನಂ ಸ್ಥಂಡಿಲಂ ವಾ ನಿರ್ಮಾಯ ಗೋಮಯೇನೋಪಲಿಪ್ಯ ಗಂಧಾದಿಭಿರಲಂಕೃತ್ಯ ಯಜ್ಞೀಯಶಕಲಮೂಲೇನೋ-ಲ್ಲಿಖ್ಯ ಲೇಖಾಸು ಶಕಲಂ ಪ್ರಾಗಗ್ರಂ ನಿಧಾಯ ಆಯತನಂ ಸ್ಥಂಡಿಲಂ ವಾ ಅಂಬುಭಿರಭ್ಯುಕ್ಷ್ಯ ಶಕಲಮಾಗ್ನೇಯ್ಯಾಂ ದಿಶಿ ನಿರಸ್ಯ ಅಪಉಪಸ್ಪೃಶೇತ್ ॥

ಹೋಮಕಾಲ:-

ಸಾಯಂ ಸೂರ್ಯಾಸ್ತಾನಂತರಂ ನವನಾಡಿಕಾಪರ್ಯಂತಂ ಮುಖ್ಯಃ । ತತಃ ಆಪ್ರಾತರ್ಗೌಣಃ । ಪ್ರಾತಃ ಸೂರ್ಯೋದಯೋತ್ತರಂ ದಶಘಟಿಕಾ. ಪರ್ಯಂತಂ ಮುಖ್ಯಃ । ತತ ಆಸಾಯಂ ಗೌಣಃ । ಇತಿ ಧರ್ಮಾಬ್ಧಿಃ ।

ದರ್ಶಪೌರ್ಣಮಾಸ ಸ್ಥಾಲೀಪಾಕ:- ಗೃಹ್ಯಾಗ್ನಿಸಿದ್ಧಿಗಾಗಿ ದರ್ಶಸ್ಥಾಲೀಪಾಕ ಮತ್ತು ಪೌರ್ಣಮಾಸೀ ಸ್ಥಾಲೀಪಾಕಗಳನ್ನು ಮಾಡಬೇಕು. ನಿತ್ಯದ ಪ್ರಾತರೌಪಾಸನವನ್ನು ಮಾಡಿ, ಆಚಮನ ಪ್ರಾಣಾಯಾಮ ದೇಶಕಾಲ ಸಂಕೀರ್ತನಾದಿಗಳನ್ನು ಮಾಡಿ, **"ದರ್ಶಪೂರ್ಣ-ಮಾಸಾಭ್ಯಾಂ ಸ್ಥಾಲೀಪಾಕಾಭ್ಯಾಂ ಯಕ್ಷ್ಯೇ"** ಎಂದು ಸಂಕಲ್ಪ ಮಾಡಿ ಸ್ಥಾಲೀಪಾಕಪ್ರಯೋಗವನ್ನು ಮಾಡಬೇಕು. ವಿವಾಹಾಗ್ನಿ ನಷ್ಟವಾಗಿದ್ದರೆ, ಈ ಮೊದಲು ಹೇಳಿದ **"ಗೃಹಾಗ್ನಿ ಪುನಃಸಂಧಾನ"** ವಿಧಿಯಿಂದ ಅದನ್ನು ಪುನಃ ಪಡೆದು ಔಪಾಸನ ಮಾಡಬೇಕು. ಅದರಲ್ಲಿ ಆಜ್ಯಾಹುತಿ ಲಾಜಾಹುತಿ ಹೃದಯಾಂಜನ ಇತ್ಯಾದಿ ವಿವಾಹಹೋಮದ ತಂತ್ರವಿದೆ. ಇಲ್ಲಿ ಪತ್ನಿಯ ಅಂಜಲಿಯಿಂದಲೇ ಲಾಜಹೋಮ ಮಾಡುವುದಾದರೂ ಆಹುತಿಯನ್ನು ತಾನೇ ಕೊಡಬೇಕು. ಇತರ ಬಂಧುಗಳಿಂದ ಕೊಡಿಸಬಾರದು.

ಆಯತನ ಸಂಸ್ಕಾರ:- ಔಪಾಸನ ಹೋಮಕ್ಕೆ ಔಪಾಸನ ಕುಂಡಲಕ್ಷಣದಲ್ಲಿ ಹೇಳಿದಂತೆ ಮನೆಯ ಈಶಾನ್ಯ ದಿಕ್ಕಿನಲ್ಲಿ ಶುಚಿಯಾದ ದೇಶದಲ್ಲಿ ಕುಂಡವನ್ನು ನಿರ್ಮಿಸಬೇಕು. ನಂತರ ಅದನ್ನು ಸ್ಥಾಲೀಪಾಕದಲ್ಲಿ ಹೇಳಿದಂತೆ ಗೋಮಯಾದಿಗಳಿಂದ ಶುದ್ಧಗೊಳಿಸಿ, ಗಂಧಾದಿಗಳಿಂದ ಅಲಂಕರಿಸಿ, ಸಮಿಧೆಯಿಂದ ಗೆರೆ ಎಳೆಯುವುದು ಇತ್ಯಾದಿ ಕ್ರಿಯೆಗಳನ್ನು ಮಾಡಬೇಕು.

ಹೋಮಕಾಲ:- ಸಂಜೆ ಸೂರ್ಯಾಸ್ತದ ನಂತರ ೯ ಘಳಿಗೆಯ ವರೆಗೆ, ಬೆಳಿಗ್ಗೆ ಸೂರ್ಯೋದಯಾನಂತರ ೧೦ ಘಳಿಗೆಯ ವರೆಗೆ, ಮುಖ್ಯ ಕಾಲವೆಂದು ನಂತರ ಗೌಣವೆಂದು ತಿಳಿಯಬೇಕು.

ಆಸನದ ಆವಶ್ಯಕತೆ:- ಔಪಾಸನಕ್ಕೆ ಕುಳಿತುಕೊಳ್ಳಲು ದರ್ಭೆ ಅಥವಾ ಕಂಬಳಿಯ ಆಸನವನ್ನು ಮಾಡಿಕೊಳ್ಳಬೇಕು. ದರ್ಭೆ, ಉಣ್ಣೆ ಮತ್ತು ಮರಗಳಲ್ಲಿ ವಾಹಕಗುಣ ವಿಲ್ಲದಿರುವುದರಿಂದ ಶರೀರದ ವಿದ್ಯುತ್ಪ್ರವಾಹವು ಹೊರಗೆ ಹೋಗುವುದಿಲ್ಲ. ಹೊರಗಿನದು ಶರೀರಕ್ಕೆ ಬರುವುದಿಲ್ಲ. ಆದ್ದರಿಂದ ಉಪಾಸನೆ ಮಾಡುವಾಗ ಇಂತಹ ದರ್ಭೆ, ಉಣ್ಣೆ, ಮರ ಇತ್ಯಾದಿಗಳ ಆಸನವನ್ನೇ ಉಪಯೋಗಿಸಬೇಕೆಂದು ಹೇಳಲಾಗಿದೆ.

Scanned by CamScanner

Scanned with CamScanner

ಏತದ್ವಿಷಯಸ್ಯ ವಿಸ್ತರೇಣ ವರ್ಣನಂ ಗೃಹ್ಯಾಗ್ನಿಸಾಗರೇ ಧರ್ಮಸಿಂಧೌ ಚ ದ್ರಷ್ಟವ್ಯಂ ॥

॥ ಸಭಾರ್ಯಸ್ಯ ಪ್ರವಾಸೇ ಪ್ರಸಕ್ತೇ ಅಗ್ನಿಸಮಾರೋಪವಿಧಿಃ ॥

ನಿತ್ಯಕಾಲಹೋಮಾನಂತರಂ । ಅಯಂ ತೇ ಯೋನಿರಿತ್ಯಸ್ಯ ಗಾಥಿನೋ ವಿಶ್ವಾಮಿತ್ರೋಗ್ನಿರನುಷ್ಟುಪ್ । ಅಗ್ನಿಸಮಾರೋಪಣೇ ವಿನಿಯೋಗಃ ॥ ಓಂ ಅಯಂ ತೇ ಯೋನಿರ್ಋತ್ವಿಯೋ ಯತೋಜಾತೋ ಅರೋಚಥಾಃ ॥ ತಂ ಜಾನನ್ನಗ್ನ ಆಸೀದಾಥಾನೋ ವರ್ಧಯಾಗಿರಃ ॥ ಅನೇನೈವಾಶ್ವತ್ಥಸಮಿಧಂ ಪ್ರತಾಪ್ಯಾಗ್ನಿಸಮಾರೋಹಂ ತತ್ರ ಭಾವಯೇತ್ ॥ ಯದ್ವಾ ॥ ಯಾ ತೇ ಅಗ್ನೇ ಯಜ್ಞಿಯಾ ತನೂಸ್ತಯೇಹ್ಯಾರೋಹಾತ್ಮಾತ್ಮಾನಂ ॥ ಅಚ್ಛಾವಸೂನಿ ಕೃಣ್ವನ್ನಸ್ಮೇ ನರ್ಯಾ ಪುರೂಣಿ ॥ ಯಜ್ಞೋ ಭೂತ್ವಾ ಯಜ್ಞಮಾಸೀದಸ್ವಾಂ ಯೋನಿಂ ॥ ಜಾತವೇದೋ ಭುವ ಆಜಾಯಮಾನಃ ಸಕ್ಷಯ ಏಹಿ ॥ ಇತಿ ಮಂತ್ರೇಣ ಪಾಣೀ ಪ್ರತಾಪ್ಯ ಆತ್ಮನಿ ಸಮಾರೋಪಯೇತ್ ॥ ಇದಂ ಸಮಾರೋಪಣಂ ದ್ವಾದಶರಾತ್ರಪರ್ಯಂತಮೇವ ಕುರ್ಯಾತ್ ॥

ಈ ವಿಷಯಗಳ ಹೆಚ್ಚಿನ ಮಾಹಿತಿಯನ್ನು ಗೃಹಾಗ್ನಿಸಾಗರದಲ್ಲಿ, ಧರ್ಮಸಿಂಧುವಿನಲ್ಲಿ ಪಡೆಯಬಹುದು.

ಅಗ್ನಿಸಮಾರೋಪವಿಧಿಃ- ನಿತ್ಯಹೋಮವನ್ನು ಮಾಡಿದ ಮೇಲೆ **"ಅಯಂ ತೇ ವೋ"** ಎಂಬ ಮಂತ್ರವನ್ನು ಹೇಳಿ ಅಶ್ವತ್ಥದ ಸಮಿಧೆಯನ್ನು ಬೆಂಕಿಯ ಸಮೀಪ ಹಿಡಿದು ಕಾಯಿಸಿ ಇದರಲ್ಲಿ ಅಗ್ನಿಯು ಆವಾಹಿತನಾಗಿದ್ದಾನೆಂದು ಭಾವಿಸಬೇಕು. ಅಥವಾ **"ಯಾ ತೇ ಅಗ್ನೇ"** ಎಂಬ ಮಂತ್ರವನ್ನು ಹೇಳಿ ತನ್ನ ಎರಡು ಕೈಗಳನ್ನೂ ಅಗ್ನಿಯ ಮೇಲೆ ಹಿಡಿದು ಕಾಯಿಸಿ, ತನ್ನಾತ್ಮದಲ್ಲಿ ಅಗ್ನಿಯು ಪ್ರವೇಶಿಸಿದ್ದಾನೆಂದು ಭಾವಿಸಿ ಅಗ್ನಿಸಮಾರೋಪವನ್ನು ಮಾಡಬೇಕು.

Scanned by CamScanner

Scanned with CamScanner

ಅಗ್ನೇಃ ಪ್ರತ್ಯವರೋಹಣಂ (ಪುನರವತರಣಂ):-

ತತ್ರ ಪ್ರಾದುಷ್ಕರಣಕಾಲೇ । ಅಶ್ವತ್ಥಸಮಿತ್ಸಮಾರೋಪಪಕ್ಷೇ ಶ್ರೋತ್ರಿಯಾಗಾರಾದಗ್ನಿಮಾಹೃತ್ಯ ಸಂಸ್ಕೃತೇ ಸ್ಥಂಡಿಲೇ ಪ್ರತಿಷ್ಠಾಪ್ಯ ॥ ಓಂ ಪ್ರತ್ಯವರೋಹ ಜಾತವೇದಃ ಪುನಸ್ತ್ವಂ ದೇವೇಭ್ಯೋ ಹವ್ಯಂ ವಹನಃ ಪ್ರಜಾನನ್ ॥ ಪ್ರಜಾಂ ಪುಷ್ಟಿಂ ರಯಿಮಸ್ಮಾಸುಧೇಹ್ಯಥಾಭವ ಯಜಮಾನಾಯ ಶಂ ಯೋಃ ॥ ಇತಿ ಮಂತ್ರೇಣ ತಾಂ ಸಮಿಧಂ ನಿದಧ್ಯಾತ್ ॥ ಆತ್ಮಸಮಾರೋಪಪಕ್ಷೇ ಸರ್ವದಾಽಸ್ಪೃಶ್ಯಸ್ಪರ್ಶನಂ ಜಲೇ ನಿಮಜ್ಯ ಹೋಮಕಾಲೇ ಆತ್ಮಸಮಾರೂಢಮಗ್ನಿಮುಚ್ಛ್ವಾಸರೂಪೇಣ ಪ್ರತ್ಯವರೋಹೇತಿ ಮಂತ್ರೇಣ ಲೌಕಿಕಾಗ್ನೌ ನಿದಧ್ಯಾತ್ ॥ ಏವಂ ಯಥಾಧಿಕಾರಮಗ್ನಿಂ ಪ್ರತಿಷ್ಠಾಪ್ಯ ಪೂರ್ವವಜ್ಜುಹುಯಾತ್ ॥

ನವವಧೂಗೃಹಪ್ರವೇಶನಿರ್ಣಯಃ:-

ವಧೂಪ್ರವೇಶಃ ಪ್ರಥಮೇ ತೃತಿಯೇ ಶುಭಪ್ರದಃ ಪಂಚಮಕೇಥವಾಹನಿ ॥ ದ್ವಿತೀಯಕೇವಾಥ ಚತುರ್ಥಕೇ ವಾ ಷಷ್ಠೇಪಿ ಪ್ರೋಕ್ತೋ ದಿವಸೇ ಮುನೀಂದ್ರೈಃ ॥ ವೃದ್ಧವಸಿಷ್ಠೋಪಿ-ಷಷ್ಠಾಷ್ಟಮೇ ವಾ ದಶಮೇ ದಿನೇ ವಾ ವಿವಾಹಮಾರಭ್ಯ ವಧೂಪ್ರವೇಶಃ । ಪಂಚಾಂಗಸಂಶುದ್ಧಿದಿನಂ ವಿನಾಪಿ ವಿಧಾವಸದ್ಗೋಚರಗೇಪಿ ಕಾರ್ಯಃ ॥ ವ್ಯತೀಪಾತೇ ಕ್ಷಯತಿಥೌ ಗ್ರಹಣೇ ವೈಧೃತೌ ತಥಾ । ಅಮಾಸಂಕ್ರಾಂತಿವಿಷ್ಟ್ಯಾದೌ ಪ್ರಾಪ್ತಕಾಲೇಪಿ ನಾಚರೇತ್ ॥ ಪ್ರಥಮನವವಧೂಪ್ರವೇಶೇ ವಿವಾಹಾರ್ಥಗಮನೇ ಚ ಪ್ರತಿಶುಕ್ರದೋಷೋ ನಾಸ್ತಿ ॥

ಅಗ್ನಿಯನ್ನು ಸಿದ್ಧಿಸಿವುದು:- ಅಶ್ವತ್ಥದ ಸಮಿಧೆಯ ಮೇಲೆ ಸಮಾರೋಪಿತವಾದ ಅಗ್ನಿ ಆಗಿದ್ದರೆ ಶ್ರೋತ್ರಿಯನ ಮನೆಯಿಂದ ತಂದ ಅಗ್ನಿಯನ್ನು ಸ್ಥಂಡಿಲದ ಮೇಲೆ ಸ್ಥಾಪಿಸಿ, **"ಪ್ರತ್ಯವರೋಹ"** ಎಂಬ ಮಂತ್ರವನ್ನು ಹೇಳಿ ಸಮಿಧೆಯನ್ನು ಆ ಅಗ್ನಿಯಲ್ಲಿ ಹಾಕಿ ಉರಿಯುವಂತೆ ಮಾಡಬೇಕು. ತನ್ನಲ್ಲೆ ಸಮಾರೋಪ ಮಾಡಿದ ಪಕ್ಷದಲ್ಲಿ ಆ ದಿನ ಸಚೈಲ

Scanned by CamScanner

ದ್ವಿರಾಗಮನ ವಿಚಾರ:-

ಮಾಘ ಫಾಲ್ಗುನ ವೈಶಾಖೇ ಶುಕ್ಲಪಕ್ಷೇ ಶುಭೇ ದಿನೇ । ಗುರ್ವಾದಿತ್ಯವಿಶುದ್ಧೌ ಸ್ಯಾನ್ನಿತ್ಯಂ ಪತ್ನೀ ದ್ವಿರಾಗಮಃ ॥ ನೀಹಾರಾಂಶುಯುಗುತ್ತರಾದಿತಿಗುರುಬ್ರಹ್ಮಾನುರಾಧಾಶ್ವಿನೀ । ಶಕ್ರೇಭಾಸ್ಕರ ವಾಯುವಿಷ್ಣುವರುಣತ್ವಾಷ್ಟ್ರೇ ಪ್ರಶಸ್ತೇ ತಿಥೌ ॥ ಕುಂಭಾಜಾಲಿಗತೇ ರವೌ ಶುಭಕರೇ ಪ್ರಾಪ್ತೋದಯೇ ಭಾರ್ಗವೇ ಜೀವಜ್ಞಾಸ್ಫುಜಿತಾಂ ದಿನೇ ನವವಧೂವೇಶ್ಮಪ್ರವೇಶಃ ಶುಭಃ ॥

ಅತ್ರ ವಿಶೇಷಃ ದ್ವಿರಾಗಮೇ ಷೋಡಶವಾಸರಾಂತರೇ ಏಕಾದಶಾಹೇ ಸಮವಾಸರೇಷು । ನ ಚಾತ್ರ ಋಕ್ಷಂ ನ ತಿಥಿರ್ನ ಯೋಗೋ ನ ವಾರಶುದ್ಧ್ಯಾದಿ ವಿಚಾರಣೀಯಂ ॥

ಕನ್ಯಾವೈಧವ್ಯಯೋಗಪರಿಹಾರೋಪಾಯ:-

ಮಾರ್ಕಂಡೇಯಪುರಾಣೇ-ಬಾಲವೈಧವ್ಯಯೋಗೇ ತು ಕುಂಭದ್ರುಪ್ರತಿಮಾದಿಭಿಃ । ಕೃತ್ವಾ ಲಗ್ನಂ ರಹಃ ಪಶ್ಚಾತ್ಕನ್ಯೋದ್ವಾಹೇತಿ ಚಾಪರೇ ॥ ಅತ್ರ ಪುನರ್ಭೂದೋಷಾಭಾವ ಉಕ್ತಃ ವಿಧಾನಖಂಡೇ – ಸ್ವರ್ಣಾಂಬು ಪಿಪ್ಪ-

---

ಸ್ನಾನಮಾಡಿ ಶುಚಿಯಾಗಿದ್ದು ಸ್ಥಾಪಿಸಿದ ಅಗ್ನಿಯ ಮೇಲೆ ಉಚ್ಛ್ವಾಸರೂಪದಿಂದ **"ಪ್ರತ್ಯವರೋಹ"** ಎಂಬ ಮಂತ್ರದಿಂದ ತನ್ನಲ್ಲಿದ್ದ ಅಗ್ನಿಯನ್ನು ಲೌಕಿಕಾಗ್ನಿಯ ಮೇಲೆ ಸ್ಥಾಪಿಸಬೇಕು.

ನವವಧೂ ಗೃಹಪ್ರವೇಶದ ನಿರ್ಣಯ:- ಒಂದು, ಎರಡು, ಮೂರು, ನಾಲ್ಕು, ಐದು, ಆರು ಈ ದಿನಗಳಲ್ಲಿ ನವವಧೂ ಗೃಹಪ್ರವೇಶವು ಶುಭ. ವೃದ್ಧ ವಸಿಷ್ಠರ ಮತಪ್ರಕಾರ ವಿವಾಹದಿಂದ ಆರು, ಎಂಟು ಅಥವಾ ಹತ್ತನೆಯ ದಿನ ಉತ್ತಮ. ಇದಕ್ಕೆ ಬೇರೆ ಮುಹೂರ್ತ ನೋಡಬೇಕಾಗಿಲ್ಲ. ಆದರೆ ವ್ಯತೀಪಾತ, ಕ್ಷಯತಿಥಿ, ಗ್ರಹಣ, ವೈಧೃತಿ, ಅಮಾವಾಸ್ಯೆ, ಸಂಕ್ರಮಣ, ಭದ್ರಾ ಮುಂತಾದ ಅತಿಕ್ರೂರ ಯೋಗಗಳಿದ್ದರೆ ಕೂಡದು. ನವವಧೂ ಗೃಹಪ್ರವೇಶಕ್ಕೂ ಪ್ರತಿಶುಕ್ರದೋಷವಿಲ್ಲ.

ದ್ವಿರಾಗಮನ ವಿಚಾರ:- ಒಂದು ಸಲ ಪತಿಗೃಹಕ್ಕೆ ಹೋಗಿ ಮರಳಿ ಬರುವ ವಿಚಾರ-ಮಾಘ ಫಾಲ್ಗುನ ವೈಶಾಖ ತಿಂಗಳುಗಳಲ್ಲಿ, ಶುಕ್ಲಪಕ್ಷದಲ್ಲಿ, ಗುರುಶುಕ್ರಾದಿ ಅಸ್ತಗಳನ್ನು ಬಿಟ್ಟು ದ್ವಿರಾಗಮನವು ಪ್ರಶಸ್ತ. ಮೃಗಶಿರಾ, ಮೂರು ಉತ್ತರಾ, ಪುನರ್ವಸು, ಪುಷ್ಯ, ರೋಹಿಣೀ, ಅನುರಾಧಾ, ಅಶ್ವಿನೀ, ಜ್ಯೇಷ್ಠಾ, ಹಸ್ತಾ, ಸ್ವಾತೀ, ಶ್ರವಣಾ, ಶತತಾರಕಾ, ಚಿತ್ರಾ ಈ ನಕ್ಷತ್ರಗಳು ಮತ್ತು ಶುಭತಿಥಿ, ಕುಂಭ, ಮೇಷ, ವೃಶ್ಚಿಕ ರಾಶಿಯ ಸೂರ್ಯ, ಶುಕ್ರಾದಿಗಳ ಉದಯ, ಗುರು ಬುಧ ಚಂದ್ರವಾರಗಳು ಶುಭ. ವಿವಾಹವಾಗಿ ೧೬ ದಿನಗಳೊಳಗೆ ಬರುವುದಾದರೆ ಸಮದಿನಗಳಲ್ಲಿ ಅಥವಾ ೧೧ನೆಯ ದಿನ ಪ್ರಶಸ್ತ. ಇದಕ್ಕೆ ತಿಥಿ, ವಾರ ನಕ್ಷತ್ರಾದಿಗಳನ್ನು ನೋಡಬೇಕಾದ್ದಿಲ್ಲ.

Scanned by CamScanner

ಲಾನಾಂ ಚ ಪ್ರತಿಮಾವಿಷ್ಣುರೂಪಿಣೇ । ತಯಾ ಸಹ ವಿವಾಹೇತು ಪುನರ್ಭರ್ತೃತ್ವಂ ನ ಜಾಯತೇ ॥ ಸೂರ್ಯಾರುಣಸಂವಾದೇ–ವಿವಾಹಾತ್ಪೂರ್ವಕಾಲೇ ಚ ಚಂದ್ರತಾರಾಬಲಾನ್ವಿತೇ । ವಿವಾಹೋಕ್ತೇ ಚ ತಾಂ ಕನ್ಯಾಂ ಕುಂಭೇನ ಸಹ ಚೋದ್ವಹೇತ್ ॥ ಕುಂಕುಮಾಲಂಕೃತಂ ದೇಹಂ ತಯೋರೇಕಾಂತ ಮಂದಿರೇ ॥

ಕನ್ಯಾವೈಧವ್ಯಯೋಗಪರಿಹಾರವಿಧಾನಂ:–

ವಿವಾಹಕರ್ತಾ ಪಿತ್ರಾದಿಃ ಕನ್ಯಾವೈಧವ್ಯಹರಂ ಕುಂಭವಿವಾಹಂ ಕರಿಷ್ಯೇ ಇತಿ ಸಂಕಲ್ಪ್ಯ । ನಾಂದೀಶ್ರಾದ್ಧಾಂತಂ ಕೃತ್ವಾ ಮಹೀದ್ಯೌರಿತ್ಯಾದಿ ಕುಂಭ ಸ್ಥಾಪನಾಂತೇ ತತ್ರ ವರುಣಪ್ರತಿಮಾಯಾಂ ವರುಣಂ ಸಂಪೂಜ್ಯ ತತ್ರ ಕಲಶಮಧ್ಯೇ ವಿಷ್ಣುಪ್ರತಿಮಾಯಾಂ ವಿಷ್ಣುಂ ಷೋಡಶೋಪಚಾರೈಃ ಸಂಪೂಜ್ಯ ಪ್ರಾರ್ಥಯೇತ್ ॥ ವರುಣಾಂಗಸ್ವರೂಪಾಯ ಜೀವನಾನಾಂ ಸಮಾಶ್ರಯ । ಪತಿಂ ಜೀವಯ ಕನ್ಯಾಯಾಶ್ಚಿರಂ ಪುತ್ರಸುಖಂ ಕುರು । ದೇಹಿ ವಿಷ್ಣೋ ವರಂ ದೇವ ಕನ್ಯಾಂ ಪಾಲಯ ದುಃಖತಃ । ಇತಿ । ತತೋ ವಿಷ್ಣುರೂಪಿಣೇ ಕುಂಭಾಯೇಮಾಂ ಕನ್ಯಾಂ ಶ್ರೀರೂಪಿಣೀಂ ಸಮರ್ಪಯಾಮೀತಿ ಸಮರ್ಪ್ಯ ॥ ಪರಿತ್ವೇತ್ಯಾದಿಮಂತ್ರೈಃ ಅಧಸ್ತಾದುಪರಿ ಚ ಕುಂಭಂ ಕನ್ಯಾಂ ಚ ಮಂತ್ರಾವೃತ್ತ್ಯಾ ಪರಿವೇಷ್ಟ್ಯ । ತತಃ ಕುಂಭಂ ನಿಃಸಾರ್ಯ ಜಲಾಶಯೇ ಪ್ರಭಜ್ಯ ॥ ಶುದ್ಧಜಲೇನ ಸಮುದ್ರಜ್ಯೇಷ್ಠೇತ್ಯಾದಿಮಂತ್ರೈಃ ಪಂಚಪಲ್ಲವೈಃ ಕನ್ಯಾಮಭಿಷಿಚ್ಯ ವಿಪ್ರಾನ್ ಭೋಜಯೇದಿತಿ ಕುಂಭವಿವಾಹಃ ॥ ಮೂರ್ತಿದಾನಮಪಿ ತತ್ರೈವೋಕ್ತಂ–ಬ್ರಾಹ್ಮಣಂ ಸಾಧುಮಾಮಂತ್ರ್ಯ ಸಂಪೂಜ್ಯ ವಿವಿಧಾರ್ಹಣೈಃ । ತಸ್ಮೈ ದದ್ಯಾದ್ವಿಧಾನೇನ ವಿಷ್ಣೋರ್ಮೂರ್ತಿಂ ಚತುರ್ಭುಜಾಂ ॥

ಕನ್ಯೆಯ ವೈಧವ್ಯಯೋಗವನ್ನು ಪರಿಹರಿಸುವ ಉಪಾಯ:– ಕನ್ಯೆಗೆ ಬಾಲವೈಧವ್ಯ ಯೋಗವಿದ್ದರೆ, ನೀರು ತುಂಬಿದ ಕೊಡ, ಅಶ್ವತ್ಥಾದಿ ವೃಕ್ಷ, ಚಿನ್ನದ ವಿಷ್ಣು ಪ್ರತಿಮೆ ಮುಂತಾದವುಗಳೊಡನೆ ಮೊದಲು ಅವಳ ಮದುವೆ ಮಾಡಿ ನಂತರ ವರನೊಂದಿಗೆ ಮದುವೆ ಮಾಡಬೇಕೆಂದು ಮಾರ್ಕಂಡೇಯ ಪುರಾಣದಲ್ಲಿದೆ. ಇದರಿಂದ ಪುನರ್ವಿವಾಹ ದೋಷ ಬರುವುದಿಲ್ಲ, ಕಾರಣ ಇವುಗಳಲೆಲ್ಲಾ ವಿಷ್ಣುಸ್ವರೂಪಿಗಳೆಂದು ವಿಧಾನಖಂಡದಲ್ಲಿದೆ. ಸೂರ್ಯಾರುಣ ಸಂವಾದದಲ್ಲಿ- ಏಕಾಂತ ಸ್ಥಳದಲ್ಲಿ ಕನ್ಯೆಗೆ ಮತ್ತು ಕುಂಭಕ್ಕೆ ಅರಸಿನ ಕುಂಕುಮಗಳನ್ನು ಹಚ್ಚಿ, ತಾರಾಬಲ ಚಂದ್ರಬಲಗಳನ್ನು ನೋಡಿ ವಿವಾಹಮುಹೂರ್ತದಲ್ಲಿ ಕುಂಭದೊಡನೆ ಅವಳ ವಿವಾಹವನ್ನು ಮಾಡಬೇಕೆಂದು ಹೇಳಿದೆ.

ವೈಧವ್ಯಯೋಗಪರಿಹಾರ ವಿಧಾನ:– ವಿವಾಹಕರ್ತನು **"ಕನ್ಯಾವೈಧವ್ಯ....ಕರಿಷ್ಯೇ"** ಎಂದು ಸಂಕಲ್ಪ ಮಾಡಿ ನಾಂದೀಶ್ರಾದ್ಧಾದಿಗಳನ್ನು ಮಾಡಿ **"ಮಹೀದ್ಯೌ..."** ಮುಂತಾದ

Scanned by CamScanner

ವಿಷ್ಣುಮೂರ್ತಿದಾನವಿಧಿಃ:-

ಕನ್ಯಾ ದೇಶಕಾಲೌ ಸಂಕೀರ್ತ್ಯ ವೈಧವ್ಯಹರಂ ಶ್ರೀ ವಿಷ್ಣುಪ್ರತಿಮಾದಾನಂ ಕರಿಷ್ಯೇ ಇತಿ ಸಂಕಲ್ಪ್ಯ ॥ ಪಲಂ ತದರ್ಧತದರ್ಧಾನ್ಯತಮಪ್ರಮಾಣಹೇಮನಿರ್ಮಿತಾಂ ವಿಷ್ಣುಪ್ರತಿಮಾಂ ಚತುರ್ಭುಜಾಂ ಸಾಯುಧಾಂ ವೃತೇನ ಆಚಾರ್ಯೇಣ ಅಗ್ನ್ಯುತ್ತಾರಣಪೂರ್ವಕಂ ಷೋಡಶೋಪಚಾರೈಃ ಪೂಜಯೇತ್ । ವಸ್ತ್ರಾರ್ಪಣಕಾಲೇ ಪೀತವಸ್ತ್ರೇ ಪುಷ್ಪಾರ್ಪಣಕಾಲೇ ಕುಮುದೋತ್ಪಲಮಾಲಾಂ ಚ ದದ್ಯಾತ್ । ಪೂಜಾಂತೇ ಕನ್ಯಾ ದೇವಂ ಪ್ರಣಮ್ಯ ಮಂತ್ರೇಣ ದದ್ಯಾತ್ । ಯನ್ಮಯಾ ಪ್ರಾಂಚಿ ಜನುಷಿ ಘ್ನಂತ್ಯಾ ಪತಿಸಮಾಗಮಂ । ವಿಷೋಪವಿಷಶಸ್ತ್ರಾದ್ಯೈರ್ಹತೋ ವಾಪಿ ವಿರಕ್ತಯಾ ॥ ಪ್ರಾಪ್ಯಮಾಣಂ ಮಹಾಘೋರೋ ಯಶಃ ಸೌಖ್ಯಧನಾಪಹಂ । ವೈಧವ್ಯಾದ್ಯತಿ ದುಃಖೌಘಂ ತನ್ನಾಶಯ ಸುಖಾಪ್ತಯೇ ॥ ಬಹುಸೌಭಾಗ್ಯವೃದ್ಧ್ಯೈ ಚ ಮಹಾವಿಷ್ಣೋರಿಮಾಂ ತನುಂ । ಸೌವರ್ಣೀಂ ನಿರ್ಮಿತಾಂ ಶಕ್ತ್ಯಾ ತುಭ್ಯಂ ಸಂಪ್ರದದೇ ದ್ವಿಜ ॥ ಇತಿ ॥ ತತೋ ಯಥಾಶಕ್ತಿ ಹೇಮದಕ್ಷಿಣಾಂ ದತ್ವಾ ॥ ಅನಘಾದ್ಯಾಹಮಸ್ಮಿ ಇತಿ ತ್ರಿರ್ವದೇತ್ ॥ ಏವಮಸ್ತು ಇತಿ ವಿಪ್ರೋಪಿ ತ್ರಿಃ ॥ ತತೋ ವಿಪ್ರಭೋಜನಂ ॥

ಮೃತಭಾರ್ಯಾತ್ವದೋಷ ಪರಿಹಾರೋಪಾಯಃ:-

ತತ್ರ ಪರಿವೇತ್ತೃತ್ವಪಾಪಾತ್ ಮೃತಭಾರ್ಯಾತ್ವಂ ತತ್ಪಾಪಪರಿಹಾರಾಯ ಪ್ರಾಜಾಪತ್ಯತ್ರಯಂ ಚಾಂದ್ರಾಯಣತ್ರಯಂ ಕೃತ್ವಾ ಅಸಕೃನ್ಮೃತಭಾರ್ಯಾತ್ವಯೋಗೇ ತದುಭಯತ್ರಯಮಾವೃತ್ಯಾ ಕೃತ್ವಾ ॥ ಮೃತಭಾರ್ಯಾತ್ವನಿರಾಸದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಅಯುತಸಂಖ್ಯಚರ್ವಾಜ್ಯಹೋಮಂ ಕರಿಷ್ಯೇ ಇತಿ ಸಂಕಲ್ಪ್ಯ ॥ ಅಗ್ನಿಸ್ಥಾಪನಾಂತೇ ಅನ್ವಾಧಾನಂ ದುರ್ಗಾಗ್ನಿವಿಷ್ಣೂನ್ ಅಷ್ಟಾಧಿಕಾಯುತಸಂಖ್ಯಾಭಿಶ್ಚರ್ವಾಜ್ಯಾಹುತಿಭಿಃ ಶೇಷೇಣ ಸ್ವಿಷ್ಟಕೃತಮಿತ್ಯಾದಿ ಪ್ರತಿದೈವತಂ ತೂಷ್ಣೀಂ ನಿರುಪ್ಯ ಪ್ರೋಕ್ಷ್ಯ ಚ ತ್ಯಾಗಕಾಲೇ

ಮಂತ್ರಗಳಿಂದ ಕಲಶಸ್ಥಾಪನೆ, ವರುಣಪ್ರತಿಮೆಯಲ್ಲಿ ವರುಣಪೂಜೆ ಇತ್ಯಾದಿಗಳನ್ನು ಪೂರಯಿಸಿ ಕಲಶಮಧ್ಯದಲ್ಲಿ ವಿಷ್ಣುಪ್ರತಿಮೆಯಲ್ಲಿ ವಿಷ್ಣುವನ್ನೂ ಪೂಜಿಸಿ **"ವರುಣಾಂಗ..ದುಃಖಿತಃ"** ಎಂದು ಪ್ರಾರ್ಥಿಸಬೇಕು. ನಂತರ **"ವಿಷ್ಣುರೂಪಿಣೇ...ಸಮರ್ಪಯಾಮಿ"** ಎಂದು ಕನ್ಯೆಯನ್ನು ಸಮರ್ಪಿಸಿ **"ಪರಿತ್ವೇ"** ಇತ್ಯಾದಿ ಮಂತ್ರಗಳಿಂದ ಕನ್ಯೆಗೂ ಕುಂಭಕ್ಕೂ ಸೂತ್ರವೇಷ್ಟನ ಮಾಡಿ ಕುಂಭವನ್ನು ಜಲಾಶಯದಲ್ಲಿ ಬಿಸಾಡಿ **"ಸಮುದ್ರಜ್ಯೇಷ್ಠಾ..."** ಮುಂತಾದ ಮಂತ್ರಗಳಿಂದ ಕನ್ಯೆಗೆ ಅಭಿಷೇಕ ಮಾಡಬೇಕು. ನಂತರ ಬ್ರಾಹ್ಮಣಸಂತರ್ಪಣೆ ಮಾಡಬೇಕು.

Scanned by CamScanner

Scanned with CamScanner

ಅಷ್ಟೋತ್ತರಾಯುತ ಸಂಖ್ಯಾಹುತಿಪರ್ಯಾಪ್ತಂ ಚರ್ವಾಜ್ಯಂ ದ್ರವ್ಯಂ ಯಥಾ ಮಂತ್ರಲಿಂಗ ದುರ್ಗಾಯೈ ಅಗ್ನಯೇ ವಿಷ್ಣವೇ ಚ ನ ಮಮೇತಿ ತ್ಯಜೇತ್ ॥ ಜಾತವೇದಸೇ ಇತ್ಯನುವಾಕಸ್ಯ ಉಪನಿಷದಋಷಯಃ ದುರ್ಗಾಗ್ನಿ ವಿಷ್ಣವೋ ದೇವತಾಃ ತ್ರಿಷ್ಟುಪ್ ಛಂದಃ ಚರ್ವಾಜ್ಯ ಹೋಮೇ ವಿನಿಯೋಗಃ ॥ ಅನುವಾಕಾವೃತ್ಯಾ ಪ್ರತ್ಯೃಚಂ ಹೋಮಃ ॥ ತತ್ರ ಪ್ರಥಮಂ ಚತುರಧಿಕ ಪಂಚಸಹಸ್ರಸಂಖ್ಯಶ್ಚರುಹೋಮಃ । ತತಃ ಚತುರಧಿಕಪಂಚಸಹಸ್ರಾಜ್ಯಹೋಮ ಇತ್ಯೇವಮಯುತ ಹೋಮಃ । ಹೋಮಶೇಷಂ ಸಮಾಪ್ಯ ದಶವಿಪ್ರಾನ್ ಭೋಜಯೇದಿತಿ । ಅಥವಾ ಕಸ್ಯಚಿದ್ಬ್ರಾಹ್ಮಣಸ್ಯ ವಿವಾಹಂ ಕುರ್ಯಾತ್ ॥

ದ್ವಿತೀಯ ತೃತೀಯ ವಿವಾಹನಿರ್ಣಯಃ-

ಸಂಗ್ರಹೇ-ಪ್ರಮದಾಮೃತಿವಾಸರಾದಿನಃ ಪುನರುದ್ವಾಹವಿಧಿರ್ವರಸ್ಯ ಚ । ವಿಷಮೇ ಪರಿವತ್ಸರೋ ಶುಭೋ ಯುಗಲೇ ಚಾಪಿ ಮೃತಪ್ರದೋ ಭವೇತ್ ॥

ವಿಷ್ಣುಮೂರ್ತಿದಾನವಿಧಿ:- ಕನ್ಯೆಯು ದೇಶಕಾಲ ಸಂಕೀರ್ತನೆ ಮಾಡಿ **"ವೈಧವ್ಯಹರಂ...ಕರಿಷ್ಯೇ"** ಎಂದು ಸಂಕಲ್ಪ ಮಾಡಿ; ಒಂದು, ಅರ್ಧ ಅಥವಾ ಕಾಲು ಪಲಪ್ರಮಾಣದಿಂದ ನಿರ್ಮಿಸಿದ, ಆಚಾರ್ಯನು ಅಗ್ನ್ಯುತ್ತಾರಣ ಕ್ರಮದಿಂದ ಸಂಸ್ಕರಿಸಿದ, ಷೋಡಶೋಪಚಾರಗಳಿಂದ ಪೂಜಿಸಿದ ವಿಷ್ಣುಪ್ರತಿಮೆಯನ್ನು **"ಯನ್ಮಯಾ .... ಸಂಪ್ರದದೇ ದ್ವಿಜ"** ಎಂದು ಪ್ರಾರ್ಥಿಸಿ, ಬ್ರಾಹ್ಮಣನಿಗೆ ದಾನ ಮಾಡಬೇಕು. ವಸ್ತ್ರ-ಪೀತವಸ್ತ್ರ ಪುಷ್ಪ-ಕುಮುದೋತ್ಪಲ ಮಾಲೆ. ನಂತರ ದಕ್ಷಿಣೆ ಕೊಟ್ಟು **"ಅನಘಾಹಮಸ್ಮಿ"** ಎಂದು ಮೂರು ಸಲ ಕನ್ಯೆಯು ಹೇಳಿದಾಗ ಬ್ರಾಹ್ಮಣನು ಮೂರು ಸಲ **"ಏವಮಸ್ತು"** ಎಂದು ಹೇಳಬೇಕು. ಆಮೇಲೆ ಬ್ರಾಹ್ಮಣ ಸಂತರ್ಪಣೆ ಮಾಡಬೇಕು.

ಮೃತಭಾರ್ಯಾತ್ವದೋಷಪರಿಹಾರೋಪಾಯ: ಪರಿವೇತೃತ್ವಪಾಪದಿಂದ ಮೃತ ಭಾರ್ಯಾತ್ವ ದೋಷ ಉಂಟಾಗುತ್ತದೆ. ಅದರ ಪರಿಹಾರಕ್ಕೆ ಮೂರು ಪ್ರಾಜಾಪತ್ಯ ಮತ್ತು ಮೂರು ಚಾಂದ್ರಾಯಣಗಳನ್ನು ಮಾಡಬೇಕು. ಮತ್ತೂ ಮತ್ತೂ ಮೃತ ಭಾರ್ಯಾಯೋಗವಿದ್ದರೆ ಇವುಗಳನ್ನು ಮೂರು ಮೂರು ಆವೃತ್ತಿಯಿಂದ ಮತ್ತೂ ಮಾಡಬೇಕು. **"ಮೃತಭಾರ್ಯಾತ್ವ... ಹೋಮಂ ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಅಗ್ನಿ ಸ್ಥಾಪನಾದಿಗಳನ್ನು ಮಾಡಿ **"ದುರ್ಗಾಗ್ನಿ... ಶೇಷೇಣ ಸ್ವಿಷ್ಟಕೃತ..."** ಎಂದು ಅನ್ವಾಧಾನ ಮಾಡಬೇಕು. ನಂತರ ಮಂತ್ರರಹಿತವಾಗಿ ಪ್ರತಿಯೊಂದು ದೇವತೆಗೆ ನಾಲ್ಕು ಸಲ ಚರುವನ್ನು ನಿರ್ವಾಪ ಮಾಡಬೇಕು. **"ಜಾತವೇದಸೇ"** ಮಂತ್ರದಿಂದ ಮೊದಲು ಐದುಸಾವಿರದ ನಾಲ್ಕು ಚರ್ವಾಹುತಿಗಳನ್ನೂ ನಂತರ ಅದೇ ಮಂತ್ರದಿಂದ ಐದುಸಾವಿರದ ನಾಲ್ಕು ಆಜ್ಯಾಹುತಿಗಳನ್ನೂ ಕೊಡಬೇಕು. ಬಳಿಕ ಸ್ವಿಷ್ಟಕೃದಾದಿ ಹೋಮಶೇಷವನ್ನು ಮುಗಿಸಿ ಬ್ರಾಹ್ಮಣಭೋಜನ ಮಾಡಿಸಬೇಕು ಅಥವಾ ಒಬ್ಬ ಬ್ರಾಹ್ಮಣನಿಗೆ ಮದುವೆ ಮಾಡಿಸಬೇಕು.

Scanned by CamScanner

ತೃತೀಯ ವಿವಾಹೇ ನಿಷೇಧೋ ಮಾತ್ಸ್ಯೇಉದ್ವಹೇದ್ರತಿಸಿದ್ಧ್ಯರ್ಥಂ ತೃತೀಯಾಂ ನ ಕದಾಚನ । ಮೋಹಾದಜ್ಞಾನತೋ ವಾಪಿ ಯದಿ ಗಚ್ಛೇತ್ತು ಮಾನುಷೀಂ ॥ ನಶ್ಯತ್ಯೇವ ನ ಸಂದೇಹೋ ಗರ್ಗಸ್ಯ ವಚನಂ ಯಥಾ ॥ ಇತಿ ॥ ಸಂಗ್ರಹೇ-ತೃತೀಯಾಂ ಯದಿ ಚೋದ್ವಹೇತ್ತರ್ಹಿ ಸಾ ವಿಧವಾ ಭವೇತ್ । ಚತುರ್ಥಾದಿ ವಿವಾಹಾರ್ಥಂ ತೃತೀಯೇರ್ಕಂ ಸಮುದ್ವಹೇತ್ ॥

ಅರ್ಕವಿವಾಹ ಪ್ರಯೋಗಃ:-

॥ ಶ್ರೀಃ ॥ ರವಿಶನ್ಯೋರ್ವಾರೇ ಹಸ್ತರ್ಕ್ಷೇ ವಾನ್ಯತ್ರಶುಭದಿನೇ ವಾ ಪುಷ್ಪಫಲಯುತಂ ಅರ್ಕಂ ಗತ್ವಾ ಅರ್ಕಕನ್ಯಾದಾತಾರಂ ಆಚಾರ್ಯಂ ವೃತ್ವಾ ರಕ್ತಗಂಧಾದಿಭೂಷಿತೋ ದೇಶಕಾಲೌ ಸ್ಮೃತ್ವಾ ಮಮ ತೃತೀಯಮಾನುಷೀ ವಿವಾಹಜನ್ಯದೋಷಪರಿಹಾರಾರ್ಥಂ ತೃತೀಯಮರ್ಕವಿವಾಹಂ ಕರಿಷ್ಯೇ ॥ ಆಚಾರ್ಯಂ ವೃತ್ವಾ ನಾಂದೀಶ್ರಾದ್ಧಾಂತಂ ಕುರ್ಯಾತ್ ॥ ದಾತಾ ಮಧು-ಪರ್ಕಯಜ್ಞೋಪವೀತಗಂಧಮಾಲ್ಯಾದಿಭಿರ್ವರಂ ಪೂಜಯೇತ್ । ಅರ್ಕಸ್ಯ ಪುರತಃ ಸ್ಥಿತ್ವಾ ॥ ತ್ರಿಲೋಕವಾಸಿನ್ ಸಪ್ತಾಶ್ವ ಛಾಯಯಾ ಸಹಿತೋ ರವೇ । ತೃತೀಯೋದ್ವಾಹಜಂ ದೋಷಂ ನಿವಾರಯ ಸುಖಂ ಕುರು ॥ ಇತಿ ಪ್ರಾರ್ಥ್ಯ ॥ ಛಾಯಾಯುತಂ ರವಿಮರ್ಕೇ ಭಾಗ್ಯತ್ವಾಬ್ಲಿಂಗೈರಭಿಷಿಚ್ಯ ವಸ್ತ್ರಾದಿಭಿರಾಕೃಷ್ಣೇ-

---

ಎರಡನೆಯ ಮತ್ತು ಮೂರನೆಯ ವಿವಾಹ ನಿರ್ಣಯಃ:- ಮೊದಲನೆಯ ಹೆಂಡತಿ ಸತ್ತ ವರನ ಮದುವೆಯನ್ನು ಭಾರ್ಯೆಯು ಮೃತಳಾದ ವಿಷಮವರ್ಷದಲ್ಲಿ ಮಾಡುವುದು ಶುಭ. ಸಮವರ್ಷದಲ್ಲಿ ಮಾಡಿದರೆ ಅದು ಮೃತ್ಯುದಾಯಕವಾಗುತ್ತದೆ-ಎಂದು ಸಂಗ್ರಹದಲ್ಲಿ ಹೇಳಲಾಗಿದೆ. ಮೂರನೆಯ ಸ್ತ್ರೀಯನ್ನು ವಿವಾಹವಾಗುವುದು ನಿಷಿದ್ಧವಾಗಿದೆ. ಕೇವಲ ರತಿಸುಖಕ್ಕಾಗಿ ಮೂರನೆಯ ಹೆಣ್ಣನ್ನು ಮದುವೆಯಾಗಕೂಡದೆಂದು ಮಾತ್ಸ್ಯದಲ್ಲಿ ಹೇಳಿದ್ದಾರೆ. ಮೋಹ ಅಥವಾ ಅಜ್ಞಾನದಿಂದ ಮೂರನೆಯವಳನ್ನು ಮದುವೆಯಾದರೆ ಅಂಥವನು ವಿನಾಶ ಹೊಂದುತ್ತಾನೆ ಎಂದು ಗರ್ಗನ ವಚನವಿದೆ. ಸಂಗ್ರಹದಲ್ಲಿ-ಮೂರನೆಯವಳನ್ನು ಮದುವೆ ಯಾದರೆ ಅವಳು ವಿಧವೆಯಾಗುತ್ತಾಳೆಂದು ಹೇಳಲಾಗಿದೆ. ಮೂರನೆಯ ವಿವಾಹವನ್ನು ಅರ್ಕದೊಂದಿಗೆ ಮಾಡಿಕೊಂಡು ನಾಲ್ಕನೆಯದನ್ನು ಮಾಡಬೇಕು.

ಅರ್ಕವಿವಾಹ ಪ್ರಯೋಗಃ:- ಕರ್ತೃವು ರವಿ ಅಥವಾ ಶನಿವಾರ ಅಥವಾ ಹಸ್ತಾ ನಕ್ಷತ್ರದ ದಿನ ಅಥವಾ ಬೇರೆ ಶುಭದಿನದಲ್ಲಿ ಹೂವು ಕಾಯಿಗಳಿರುವ ಅರ್ಕಗಿಡದ ಸಮೀಪ ಹೋಗಿ ಅರ್ಕ ಕನ್ಯಾದಾನ ಮಾಡುವ ಆಚಾರ್ಯನನ್ನು ವರಿಸಿ ರಕ್ತಚಂದನಾದಿಗಳಿಂದ ಭೂಷಿತನಾಗಿ ದೇಶಕಾಲಗಳನ್ನು ಉಚ್ಚರಿಸಿ, **"ಮಮ ತೃತೀಯಮಾನುಷೀ...ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ನಂತರ ಆಚಾರ್ಯನ ಮೂಲಕ ನಾಂದೀಶ್ರಾದ್ಧಾದಿಗಳನ್ನು ಮಾಡಿಸಬೇಕು. ದಾತೃವು ಮಧುಪರ್ಕ, ಯಜ್ಞೋಪವೀತ, ವಸ್ತ್ರ, ಗಂಧ, ಪುಷ್ಪಾದಿಗಳಿಂದ ವರನ ಪೂಜೆಯನ್ನು

Scanned by CamScanner

Scanned with CamScanner

ನೇತಿ ಮಂತ್ರೇಣ ಸಂಪೂಜ್ಯ ಶ್ವೇತವಸ್ತ್ರೇ ಸೂತ್ರೇಣಚಾವೇಷ್ಟ್ಯ ಗುಡೌದನಂ ನಿವೇದ್ಯ ತಾಂಬೂಲಂ ದದ್ಯಾತ್ ॥ ಮಮ ಪ್ರೀತಿಕರಾಯೇಯಂ ಮಯಾ ಸೃಷ್ಟಾ ಪುರಾತನೀ । ಅರ್ಕಜಾ ಬ್ರಹ್ಮಣಾ ಸೃಷ್ಟಾದ್ಯಾಸ್ಮಾನ್ ಸಂಪ್ರತಿ ರಕ್ಷತು ॥ ಇತ್ಯರ್ಕಂ ಪ್ರದಕ್ಷಿಣೀಕೃತ್ಯ ॥ ನಮಸ್ತೇ ಮಂಗಲೇ ದೇವಿ ನಮಃ ಸವಿತುರಾತ್ಮಜೇ । ತ್ರಾಹಿ ಮಾಂ ಕೃಪಯಾ ದೇವಿ ಪತ್ನೀ ತ್ವಂ ಮ ಇಹಾ-ಗತಾ । ಅರ್ಕ ತ್ವಂ ಬ್ರಹ್ಮಣಾ ಸೃಷ್ಟಃ ಸರ್ವಪ್ರಾಣಿಹಿತಾಯ ಚ । ವೃಕ್ಷಾ-ಣಾಮಧಿಭೂತಸ್ತ್ವಂ ದೇವಾನಾಂ ಪ್ರೀತಿವರ್ಧನ ॥ ತೃತೀಯೋದ್ವಾಹಜಂ ಪಾಪಂ ಮೃತ್ಯುಂ ಚಾಶು ವಿನಾಶಯ ॥ ಇತಿ ಪ್ರದಕ್ಷಿಣೀ ಕುರ್ಯಾತ್ ॥

ಅಂತಃಪಟಧಾರಣಾದಿ ಕನ್ಯಾದಾನಪರ್ಯಂತಂ ವಿಧಿಂ ಕೃತ್ವಾ ಕನ್ಯಾ-ದಾತಾ ಆದಿತ್ಯಸ್ಯ ಪ್ರಪೌತ್ರೀಂ, ಸವಿತುಃ ಪೌತ್ರೀಂ ಅರ್ಕಸ್ಯ ಪುತ್ರೀಂ ಕಾಶ್ಯಪ ಗೋತ್ರಾಮರ್ಕಕನ್ಯಾಂ ಅಮುಕಗೋತ್ರಾಯ ವರಾಯ ತುಭ್ಯಂ ಸಂಪ್ರದದೇ ॥ ಅರ್ಕಕನ್ಯಾಮಿಮಾಂ ವಿಪ್ರ ಯಥಾಶಕ್ತಿವಿಭೂಷಿತಾಂ । ಗೋತ್ರಾಯ ಶರ್ಮಣೇ ತುಭ್ಯಂ ದತ್ತಾಂ ವಿಪ್ರ ಸಮಾಶ್ರಯ ॥ ದಕ್ಷಿಣಾಂ ದತ್ವಾ ಗಾಯತ್ರ್ಯಾವೇಷ್ಟಿತ

ಮಾಡಬೇಕು. ನಂತರ ಅರ್ಕಗಿಡದ ಮುಂದೆ ನಿಂತು, **"ತ್ರಿಲೋಕವಾಸಿನ್...ಕುರು"** ಎಂದು ಪ್ರಾರ್ಥಿಸಬೇಕು. ನಂತರ **"ಸಮುದ್ರಜ್ಯೇಷ್ಠಾ..."** ಇತ್ಯಾದಿ ಮಂತ್ರಗಳನ್ನು ಹೇಳಿ ವಸ್ತ್ರಾದಿಗಳಿಂದ ಪೂಜಿಸಿ, ಬಿಳಿಬಟ್ಟೆ ಮತ್ತು ನೂಲಿನಿಂದ ವೇಷ್ಟನ ಮಾಡಿ ಪಾಯಸ ನೈವೇದ್ಯವನ್ನರ್ಪಿಸಿ ತಾಂಬೂಲವನ್ನು ಕೊಡಬೇಕು. **"ಮಮ ಪ್ರೀತಿಕರಾ..."** ಈ ಮಂತ್ರ ಹೇಳುತ್ತ ಪ್ರದಕ್ಷಿಣೆ ಮಾಡಿ ಪುನಃ **"ನಮಸ್ತೇ ಮಂಗಲೇ"** ಎಂದು ಹೇಳುತ್ತ ಸುತ್ತು ಬರಬೇಕು.

ಬಳಿಕ ಅಂತಃಪಟಧಾರಣದಿಂದ ಕನ್ಯಾದಾನದ ವರೆಗಿನ ಕರ್ಮಗಳನ್ನು ಮಾಡಿ, **"ಆದಿತ್ಯಸ್ಯ... ಸಮಾಶ್ರಯ"** ಎಂದು ಹೇಳಿ ಅರ್ಕಕನ್ಯಾದಾನ ಮಾಡಬೇಕು. ದಕ್ಷಿಣೆ ಕೊಟ್ಟು ಗಾಯತ್ರೀ ಮಂತ್ರದಿಂದ ಅರ್ಕಕನ್ಯೆ ಮತ್ತು ವರನನ್ನು ನೂಲಿನಿಂದ ವೇಷ್ಟನ ಮಾಡಿ, ಆ ನೂಲಿನ ಕಂಕಣ ಮಾಡಿ **"ಬೃಹತ್ಸಾಮ..."** ಮಂತ್ರದಿಂದ ಅದನ್ನು ವಧು ವರನಿಗೆ ಕಟ್ಟಬೇಕು. ಅರ್ಕವೃಕ್ಷದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಕಲಶಗಳನ್ನಿಟ್ಟು ಪ್ರತಿಯೊಂದು ಕಲಶದ ಮೇಲೆ ನಾಮಮಂತ್ರದಿಂದ ವಿಷ್ಣುವಿಗೆ ಷೋಡಶೋಪಚಾರ ಪೂಜೆ ಮಾಡಬೇಕು. ಅರ್ಕವೃಕ್ಷದ ಉತ್ತರಕ್ಕೆ ವರನು ಕುಳಿತು ಪತ್ನಿಗೆ ಹಸ್ತಸ್ಪರ್ಶ ಮಾಡುತ್ತ **"ಅಸ್ಯಾಃ ಸಮ್ಯಕ್....ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಸ್ಥಾಲೀಪಾಕದಲ್ಲಿ ಹೇಳಿದಂತೆ ಹೋಮಕರ್ಮಗಳನ್ನು ಮಾಡಬೇಕು. ಬೃಹಸ್ಪತಿ ಮತ್ತು ಅಗ್ನಿಗೆ ಆಹುತಿಗಳನ್ನು ಕೊಟ್ಟು, ವ್ಯಾಹೃತಿಗಳಿಂದ ನಾಲ್ಕು ಆಹುತಿಗಳನ್ನೂ ಕೊಟ್ಟು ಹೋಮಸಮಾಪ್ತಿ ಮಾಡಬೇಕು. **"ಮಯಾಕೃತಂ..."** ಎಂದು ಪ್ರಾರ್ಥನೆ ಮಾಡಿ ಶಾಂತಿಸೂಕ್ತಗಳನ್ನು ಪಠಿಸಿ, ಆಚಾರ್ಯನಿಗೆ ಎರಡು ಗೋದಾನ ಕೊಟ್ಟು, ತಾನು

Scanned by CamScanner

ಸೂತ್ರೇಣ ॥ ಬೃಹತ್ಸಾಮಕ್ಷತ್ರಭೃದ್ವೃದ್ಧವೃಷ್ಣಿ ಯತ್ರಿಷ್ಟುಭೌಜಃ ಶುಭಿತ-ಮುಗ್ರವೀರಂ । ಇಂದ್ರಸ್ತೋಮೇನ ಪಂಚದಶೇನ ಮಧ್ಯಮಿದಂ ವಾತೇನ ಸಗರೇಣ ರಕ್ಷ ॥ ಇತಿ ಮಂತ್ರೇಣ ಅರ್ಕವರಯೋಃ ಕಂಕಣಂ ಬಧ್ವಾರ್ಕಸ್ಯ ಚತುರ್ದಿಕ್ಷು ಕುಂಭೇಷು ವಿಷ್ಣುನಾಮಮಂತ್ರೇಣ ಷೋಡಶೋಪಚಾರೈಃ ಸಂಪೂಜ್ಯ ॥ ಅರ್ಕಸ್ಯೋತ್ತರೇ ಅರ್ಕಪತ್ನ್ಯಾನ್ವಾರಭ್ಧೋ ವರಃ ಅಸ್ಯಾಃ ಸಮ್ಯಕ್ ಭಾರ್ಯಾತ್ವಸಿದ್ಧ್ಯರ್ಥಂ ಪಾಣಿಗ್ರಹಹೋಮಂ ಕರಿಷ್ಯೇ । ಆಘಾರ-ದೇವತೇ ಆಜ್ಯೇನೇತ್ಯಂತೇ ಬೃಹಸ್ಪತಿಂ ಅಗ್ನಿಂ ಅಗ್ನಿಂ ವಾಯುಂ ಸೂರ್ಯಂ ಪ್ರಜಾಪತಿಂ ಚಾಜ್ಯದ್ರವ್ಯೇಣ ಶೇಷೇಣ ಸ್ವಿಷ್ಟಕೃತಂ । ಆಘಾರಾಂತಂ ಕೃತ್ವಾ । ಸಂಗೋಭಿರಿತ್ಯಸ್ಯಾಂಗಿರಸೋ ಬೃಹಸ್ಪತಿಸ್ತ್ರಿಷ್ಟುಪ್ ಆಜ್ಯಹೋಮೇ ವಿನಿಯೋಗಃ ॥ ಓಂ ಸಂಗೋಭಿರಾಂಗಿರಸೋ ನಕ್ಷಮಾಣೋ ಭಗ ಇವೇದರ್ಯಮಣಂ ನಿನಾಯ । ಜನೇ ಮಿತ್ರೋ ನ ದಂಪತೀ ಅನಕ್ತಿ ಬೃಹಸ್ಪತೇ ವಾಜಯಾ-ಶೂಂರಿವಾಜೌ ಸ್ವಾಹಾ । ಬೃಹಸ್ಪತಯ ಇದಂ ನ ಮಮ ॥ ಯಸ್ಮೈತ್ವೇತಿ ವಾಮದೇವೋಗ್ನಿಸ್ತ್ರಿಷ್ಟುಪ್ । ಯಸ್ಮೈತ್ವಾಕಾಮಕಾಮಾಯ ವಯಂ ಸಮ್ರಾಡ್ಯ-ಜಾಮಹೇ । ತಮಸ್ಮಭ್ಯಂ ಕಾಮಂ ದತ್ವಾಥೇದಂ ತ್ವಂ ಘೃತಂ ಪಿಬ ಸ್ವಾಹಾ । ಅಗ್ನಯ ಇದಂ ...॥ ತತೋ ವ್ಯಸ್ತಸಮಸ್ತವ್ಯಾಹೃತಿಭಿರ್ಹುತ್ವಾ ಹೋಮಶೇಷಂ ಸಮಾಪ್ಯ ॥ ಮಯಾ ಕೃತಮಿದಂ ಕರ್ಮ ಸ್ಥಾವರೇಷು ಜರಾಯುಣಾ । ಅರ್ಕಾಪತ್ಯಾನಿ ನೋ ದೇಹಿ ತತ್ಸರ್ವಂ ಕ್ಷಂತುಮರ್ಹಸಿ । ಇತಿ ಪ್ರಾರ್ಥ್ಯ ಶಾಂತಿಪಾಠಾಂತೇ ಗೋಯುಗ್ಮಮಾಚಾರ್ಯಾಯ ದತ್ವಾ ಸ್ವಧೃತವಸ್ತ್ರಾಣಿ ಗುರವೇ ದತ್ವಾ ಅನ್ಯಾನಿ ಧಾರಯೇತ್ ॥ ದಶ ತ್ರಯೋ ವಾ ವಿಪ್ರಾ ಭೋಜ್ಯಾಃ

ಧರಿಸಿದ ವಸ್ತ್ರಗಳನ್ನೂ ಕೊಟ್ಟು ಹತ್ತು ಅಥವಾ ಮೂರು ಮಂದಿ ಬ್ರಾಹ್ಮಣರಿಗೆ ಭೋಜನ ಕೊಡಬೇಕು.

Scanned by CamScanner

॥ ಸಾಯಮೌಪಾಸನಹೋಮಃ ॥

॥ ಶ್ರೀಃ ॥ ಕರ್ತಾ ಕೃತಸಂಧ್ಯಾವಂದನಃ ಆಯತನೇ ಸ್ಥಂಡಿಲೇ ವಾ ಪ್ರಾದುಷ್ಕೃತಸ್ಯಾಗ್ನೇಃ ಪಶ್ಚಿಮತಃ ಪ್ರಾಙ್ಮುಖೋ ದರ್ಭಾಸನಾದೌ ಉಪವಿಶ್ಯ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲಾದ್ಯುಚ್ಚಾರ್ಯ ॥ ಅಗ್ನಿರೂಪೀ ಶ್ರೀಪರಮೇಶ್ವರಪ್ರೀತ್ಯರ್ಥಂ ಸಾಯಮೌಪಾಸನಹೋಮಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ಚತ್ವಾರಿಶೃಂಗಾ ಗೌತಮೋ ವಾಮದೇವೋಗ್ನಿಸ್ತ್ರಿಷ್ಟುಪ್ ಅಗ್ನಿ-ಮೂರ್ತಿಧ್ಯಾನೇ ವಿನಿಯೋಗಃ ಓಂ ಚತ್ವಾರಿಶೃಂಗಾತ್ರಯೋ ಅಸ್ಯ ಪಾದಾದ್ವೇ ಶೀರ್ಷೇ ಸಪ್ತಹಾಸ್ತಾಸೋ ಅಸ್ಯ ॥ ತ್ರಿಧಾ ಬದ್ಧೋ ವೃಷಭೋ ರೋರವೀತಿ ಮಹೋ ದೇವೋ ಮರ್ತ್ಯಾಂ ಆವಿವೇಶ ॥ ಇತಿ ಪ್ರಜ್ವಲಿತಾಗ್ನಿಂ ಧ್ಯಾತ್ವಾ ॥ ಅಗ್ನೇರೀಶಾನೀಂ ದಿಶಮಾರಭ್ಯ ಸೋದಕೇನ ಪಾಣಿನಾ ಸಮಂತಾತ್ ಪ್ರದಕ್ಷಿಣಂ

ಸಾಯಮೌಪಾಸನಹೋಮ ಪ್ರಯೋಗ:- ವಿವಾಹಸಂಸ್ಕಾರವಾದ ಮೇಲೆ ಗೃಹಪ್ರವೇಶನೀಯ ಹೋಮ ಮಾಡಿ ಮನೆಯಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಿದ ನಂತರ ಪ್ರತಿಯೊಬ್ಬ ಗೃಹಸ್ಥನೂ ಸಂಜೆ ಮತ್ತು ಬೆಳಿಗ್ಗೆ ತಪ್ಪದೆ ಔಪಾಸನ ಹೋಮವನ್ನು ಮಾಡಬೇಕು. ಸಾಯಂಕಾಲದ ಔಪಾಸನವನ್ನು ಸೂರ್ಯಾಸ್ತದ ನಂತರ ೯ ಘಳಿಗೆಗಳ ಒಳಗೂ ಪ್ರಾತರೌಪಾಸನವನ್ನು ಸೂರ್ಯೋದಯಾನಂತರ ೧೦ ಘಳಿಗೆಗಳ ಒಳಗೂ ಮಾಡಬೇಕು. ಔಪಾಸನ ಮಾಡುವವನು ಸಾಯಂ ಸಂಧ್ಯಾವಂದನೆ ಮಾಡಿ, ಸ್ಥಂಡಿಲದಲ್ಲಿ ಚೆನ್ನಾಗಿ ಉರಿಯುವ ಅಗ್ನಿಯ ಪಶ್ಚಿಮದಿಕ್ಕಿನಲ್ಲಿ ಪೂರ್ವಕ್ಕೆ ಮುಖಮಾಡಿ ಕುಳಿತು ಆಚಮನ ಪ್ರಾಣಾಯಾಮ ದೇಶ ಕಾಲಕೀರ್ತನಾದಿಗಳನ್ನು ಮಾಡಿ **"ಅಗ್ನಿರೂಪೀ ...ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. **"ಚತ್ವಾರಿಶೃಂಗಾ..."** ಎಂಬ ಮಂತ್ರ ಹೇಳಿ ಅಗ್ನಿಯನ್ನು ಧ್ಯಾನಿಸಿ, ಈಶಾನ್ಯ ದಿಕ್ಕಿನಿಂದ ಆರಂಭಿಸಿ ಮೂರು ಬಾರಿ ನೀರನ್ನು ಪ್ರೋಕ್ಷಿಸಿ ಸುತ್ತಲೂ ಕೈಯಿಂದ ಉಜ್ಜಿ ನಾಲ್ಕು ದಿಕ್ಕುಗಳಲ್ಲಿಯೂ ಹದಿನಾರು ದರ್ಭೆಗಳಿಂದ ಪರಿಸ್ತರಣ ಹಾಕಬೇಕು. ಚೆನ್ನಾಗಿ ತೊಳೆದ, ಒದ್ದೆಯಾಗಿರುವ ಅಕ್ಕಿಯನ್ನು, ಸಮಿಧೆ ಮತ್ತು ಬರ್ಹಿಗಳೊಂದಿಗೆ ಅಗ್ನಿಯ ಉತ್ತರಭಾಗದಲ್ಲಿಟ್ಟು ಉರಿಯುವ ದರ್ಭೆಯ ತುಂಡಿನಿಂದ ಮೂರು ಬಾರಿ ಸುತ್ತಿಸಿ ಆ ತುಂಡನ್ನು ಅಗ್ನಿಯಲ್ಲಿ ಹಾಕಿ ಕೈತೊಳೆದು ಅಗ್ನಿಯ ಪಶ್ಚಿಮದಲ್ಲಿ ದರ್ಭೆಗಳನ್ನು ಹಾಸಿ ಅದರ ಮೇಲೆ ಸಮಿಧೆಯನ್ನೂ ಹವಿಸ್ಸನ್ನೂ ಇಟ್ಟು **"ವಿಶ್ವಾನಿನ..."** ಎಂಬ ಮಂತ್ರದಿಂದ ಎಂಟು ದಿಕ್ಕುಗಳಲ್ಲಿ ಅಗ್ನಿಯನ್ನು ಅರ್ಚಿಸಿ

Scanned by CamScanner

ತ್ರಿಃ ಪರಿಮೃಜ್ಯ ಷೋಡಶ ದರ್ಭೈಃ ಪೂರ್ವಾದಿಷು ಪರಿಸ್ತೀರ್ಯ ತ್ರಿಃ ಪರ್ಯುಕ್ಷ್ಯ ॥ ಪ್ರಕ್ಷಾಲಿತಾನಾರ್ದ್ರಸಿತತಂಡುಲಾನ್ ಪಾತ್ರೇ ನಿಕ್ಷಿಪ್ಯ ॥ ತತ್ಪಾತ್ರಂ ಸಮಿಧಾ ಬರ್ಹಿಷಾ ಚ ಸಹ ಅಗ್ನೇರುತ್ತರತೋ ನಿಧಾಯ ಜ್ವಲತಾ ದರ್ಭೇಣಾವಜ್ವಲ್ಯ ಪ್ರೋಕ್ಷ್ಯ ತೇನೈವ ತ್ರಿಃ ಪರ್ಯಗ್ನಿ ಕೃತ್ವಾ ತದುಲ್ಮುಕಂ ನಿರಸ್ಯ ಅಪಉಪಸ್ಪೃಶ್ಯ ॥ ಅಗ್ನೇಃ ಪಶ್ಚಿಮತಃ ಕುಶಾನಾಸ್ತೀರ್ಯ ತತ್ರ ಸಮಿಧಾ ಸಹ ಹವಿರ್ನಿಧಾಯ ॥ ವಿಶ್ವಾನಿನ ಇತಿ ತಿಸೃಣಾಮಾತ್ರೇಯೋ ವಸುಶ್ರುತೋ-ಗ್ನಿಸ್ತ್ರಿಷ್ಟುಪ್ ದ್ವಯೋರಗ್ನ್ಯರ್ಚನೇ ಅಂತ್ಯಾಯಾ ಉಪಸ್ಥಾನೇ ವಿನಿಯೋಗಃ ॥ ಓಂ ವಿಶ್ವಾನಿನೋ .....॥ ಇತಿ ಬದ್ಧಾಂಜಲಿರ್ನಮಸ್ಕೃತ್ಯ ॥ ದಕ್ಷಿಣಂ ಜಾನು ಸಂಪಾತ್ಯ ತಾಂ ಸಮಿಧಂ ತೂಷ್ಣೀಂ ಅಗ್ನೌ ಪ್ರಕ್ಷಿಪ್ಯೋಪಸ್ಪೃಶ್ಯ ಸಮಿಧಿ ಪ್ರದೀಪ್ತಾಯಾಂ ವಿಧೂಮಜ್ವಾಲಾಗ್ನೌ ಅಂಗಾರೇಗ್ನೌ ಶತಸಂಖ್ಯಾ-ಕಾನ್ ಚತುಃ ಷಷ್ಟಿಮಿತಾನ್ ವಾ ತಂಡುಲಾನ್ ದಕ್ಷಿಣಹಸ್ತೇನಾದಾಯ ಸವ್ಯಪಾಣಿಂ ಹೃದಿ ನಿಧಾಯ ಅಗ್ನ್ಯುತ್ತರಪಾರ್ಶ್ವೇನ ಸಮಿನ್ಮೂಲತೋ ದ್ವ್ಯಂಗುಲಪ್ರದೇಶೇ ಓಂ ಅಗ್ನಯೇ ಸ್ವಾಹಾ ಇತಿ ಹುತ್ವಾ ಅಗ್ನಯ ಇದಂ ನ ಮಮ ಇತ್ಯುಕ್ತ್ವಾ ವಾಗ್ಯತ ಏವ ದ್ವಿತೀಯಾಂ ಭೂಯಸೀಮಾದಾಯ ಓಂ ಪ್ರಜಾಪತಯೇ ಇತ್ಯುಪಾಂಶು ಧ್ಯಾತ್ವಾ ಸ್ವಾಹಾ ಇತ್ಯುಕ್ತ್ವಾ ತಸ್ಯೈಶಾನದೇಶೇ ಅಸಂಸೃಷ್ಟಾಂ ಹುತ್ವಾ ಪ್ರಜಾಪತಯ ಇದಂ ನ ಮಮ ಇತ್ಯುಕ್ತ್ವಾ ಪೂರ್ವವ-

---

ಧ್ಯಾನಮಾಡಬೇಕು. ಬಳಿಕ ಬಲ ಮೊಣಕಾಲನ್ನು ನೆಲಕ್ಕೆ ತಾಗುವಂತೆ ಇಟ್ಟು ಆ ಸಮಿಧೆಯನ್ನು ಮಂತ್ರವಿಲ್ಲದೆ ಅಗ್ನಿಯಲ್ಲಿ ಹೋಮಿಸಬೇಕು. ಕೈತೊಳೆದು, ಸಮಿಧೆಯು ಚೆನ್ನಾಗಿ ಉರಿವಾಗ ಹೊಗೆ ಇಲ್ಲದ ಕೆಂಡಗಳ ಮೇಲೆ ನೂರಾಗುವಷ್ಟು ಅಥವಾ ಅರ್ವತ್ತನಾಲ್ಕು ಆಗುವಷ್ಟು ಅಕ್ಕಿಕಾಳುಗಳನ್ನು ಬಲಗೈಯಲ್ಲಿ ತೆಕ್ಕೊಂಡು ಎಡಗೈಯನ್ನು ಎದೆಯ ಮೇಲಿಟ್ಟು **"ಅಗ್ನಯೇ ಸ್ವಾಹಾ"** ಎಂದು ಹೋಮಿಸಬೇಕು. **"ಅಗ್ನಯ ಇದಂ..."** ಎಂದು ಹೇಳಿ ಎರಡನೆಯ ಆಹುತಿಗಾಗಿ ಸ್ವಲ್ಪ ಹೆಚ್ಚಾಗಿಯೇ ಅಕ್ಕಿಯನ್ನು ತೆಕ್ಕೊಂಡು **"ಪ್ರಜಾಪತಯೇ"** ಎಂದು ಮನಸ್ಸಿನಲ್ಲೇ ಭಾವಿಸಿ, **"ಸ್ವಾಹಾ"** ಎಂದು ಗಟ್ಟಿಯಾಗಿ ಹೇಳಿ ಹೋಮಿಸಿ **"ಪ್ರಜಾಪತಯ ಇದಂ..."** ಎಂದು ಹೇಳಿ ಮೊದಲಿನಂತೆ ಸರಿಯಾಗಿ ಕುಳಿತು, ಪರಿಸ್ತರಣಗಳನ್ನು ತೆಗೆದು ಮತ್ತೊಮ್ಮೆ ನೀರು ಚಿಮುಕಿಸಿ ಅಗ್ನಿಯ ಸುತ್ತಲೂ ಶುದ್ಧಿಮಾಡಿ ಅಗ್ನಿಯ ವಾಯುವ್ಯ ದಿಕ್ಕಿನಲ್ಲಿ ನಿಂತು

Scanned by CamScanner
Scanned with CamScanner

ದುಪವಿಶ್ಯ ಪರಿಸ್ತರಣಾನಿ ವಿಸೃಜ್ಯ ಪರಿಸಮೂಹನಪರ್ಯುಕ್ಷಣೇ ಕೃತ್ವಾ ಉಪ-ಸ್ಥಾನಂ ಕುರ್ಯಾತ್ ॥ ಅಗ್ನೇರ್ವಾಯವ್ಯದೇಶೇ ತಿಷ್ಠನ್ ಪ್ರಹ್ವಃ ಕೃತಾಂಜ-ಲಿರಗ್ನಿಮೀಕ್ಷಮಾಣೋ ಮಂತ್ರಾನ್ ಪಠೇತ್ ॥ ಅಗ್ನ ಆಯೂಂಷೀತಿ ತಿಸೃಣಾಂ ಶತಂ ವೈಖಾನಸಾ ಋಷಯಃ ಅಗ್ನಿಃ ಪವಮಾನೋ ದೇವತಾ ಗಾಯತ್ರೀ ಛಂದಃ ॥ ಅಗ್ನ್ಯುಪಸ್ಥಾನೇ ವಿನಿಯೋಗಃ ॥ ಓಂ ಅಗ್ನ ಆಯೂಂಷಿ....॥ ಋಕ್ ೩ ॥ ಅಗ್ನೇ ತ್ವಂ ನ ಇತಿ ಚತಸೃಣಾಂ ಗೌಪಾಯನಾ ಲೌಪಾಯನಾ ವಾಬಂಧುಃ ಸುಬಂಧುಃ ಶ್ರುತಬಂಧುರ್ವಿಪ್ರಬಂಧುಶ್ಚೈಕರ್ಚಾ ಋಷಯಃ ಅಗ್ನಿರ್ದೇವತಾ ದ್ವಿಪದಾ ವಿರಾಟ್ ಛಂದಃ ॥ ಅಗ್ನ್ಯುಪಸ್ಥಾನೇ ವಿನಿಯೋಗಃ ॥ ಓಂ ಅಗ್ನೇತ್ವನ್ನೋ ಅಂತಮ ಉತ ತ್ರಾತಾ ಶಿವೋ ಭವಾವರೂಥ್ಯಃ ॥ ವಸು-ರಗ್ನಿರ್ವಸೂಶ್ರವಾಅಚ್ಛಾನಕ್ಷಿದ್ಯುಮತ್ತಮಂರಯಿಂದಾಃ ॥ ಸನೋಬೋಧಿಶ್ರುಧೀ ಹವ ಮುರುಷ್ಯಾಣೋ ಅಘಾಯತಃ ಸಮಸ್ಮಾತ್ ॥ ತಂತ್ವಾಶೋಚಿಷ್ಠದೀ ದಿವಃ ಸುಮ್ನಾಯನೂನಮೀಮಹೇಸಖಿಭ್ಯಃ ॥ ಪ್ರಜಾಪತೇ ಹಿರಣ್ಯಗರ್ಭಃ ಪ್ರಜಾಪತಿಸ್ತ್ರಿಷ್ಟುಪ್ ॥ ಪ್ರಜಾಪತ್ಯುಪಸ್ಥಾನೇ ವಿನಿಯೋಗಃ ॥ ಓಂ ಪ್ರಜಾ-ಪತೇ .....॥ ತಂತುಂ ತನ್ವನ್ ದೇವಾ ಅಗ್ನಿರ್ಜಗತೀ ॥ ಅಗ್ನ್ಯುಪಸ್ಥಾನೇ ವಿನಿಯೋಗಃ ॥ ಓಂ ತಂತುಂ ತನ್ವನ್ ರಜಸೋ ಭಾನುಮನ್ವಿಹಿಜ್ಯೋತಿಷ್ಮತಃ ಪಥೋ ರಕ್ಷ ಧಿಯಾ ಕೃತಾನ್ ॥ ಅನುಲ್ಬಣಂ ವಯತ ಜೋಗುವಾಮಪ್ನೋ-ಮನುರ್ಭವಜನಯಾ ದೈವ್ಯಂ ಜನಂ ॥ ಹಿರಣ್ಯಗರ್ಭ ಇತ್ಯಸ್ಯ ಹಿರಣ್ಯಗರ್ಭಃ ಪ್ರಜಾಪತಿಸ್ತ್ರಿಷ್ಟುಪ್ ॥ ಪ್ರಜಾಪತ್ಯುಪಸ್ಥಾನೇ ವಿನಿಯೋಗಃ ॥ ಓಂ ಹಿರಣ್ಯ-ಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ ॥ ಸದಾಧಾರ-ಪೃಥಿವೀಂ ದ್ಯಾಮುತೇ ಮಾಂ ಕಸ್ಮೈ ದೇವಾಯ ಹವಿಷಾ ವಿಧೇಮ ॥ ಉಪ-ವಿಶ್ಯಾಚಾಮೇತ್ ॥ ನ್ಯೂನಾರಿಕ್ತಾಚ್ಛಿದ್ರತ್ವಾರ್ಥಂ ವಿಷ್ಣುಸ್ಮರಣಂ ಕೃತ್ವಾ ॥ ಪ್ರಮಾದಾತ್ ಕುರ್ವತಾಂ ಕರ್ಮ ಪ್ರಚ್ಯವೇತಾಧ್ವರೇಷು ಯತ್ ॥ ಸ್ಮರಣಾ-

Scanned by CamScanner

ದೇವ ತದ್ವಿಷ್ಣೋಃ ಸಂಪೂರ್ಣಂ ಸ್ಯಾದಿತಿ ಶ್ರುತಿಃ ॥ ಅನೇನ ಹೋಮ-ಕರ್ಮಣಾ ಶ್ರೀಪರಮೇಶ್ವರಃ ಪ್ರೀಯತಾಂ ಇತ್ಯುಕ್ತ್ವಾ ಜಲಂ ತ್ಯಜೇತ್ ॥ ಅಗ್ನಿಂ ಸಂಭಾರಯೇತ್ ॥

॥ ಇತಿ ಸಾಯಮೌಪಾಸನಹೋಮಃ ॥

ಕೈಜೋಡಿಸುತ್ತ **"ಅಗ್ನ ಆಯೂಂಷಿ..." "ಅಗ್ನೇತ್ವನ್ನ...." "ಪ್ರಜಾಪತೇ ನ ತ್ವ..." "ತಂತುಂ ತನ್ವನ್..." "ಹಿರಣ್ಯಗರ್ಭ..."** ಈ ಮಂತ್ರಗಳಿಂದ ಅಗ್ನ್ಯುಪಸ್ಥಾನ ಮಾಡಬೇಕು. ನಂತರ ಕುಳಿತು **"ಪ್ರಮಾದಾತ್ ಕುರ್ವತಾಂ..."** ಎಂದು ವಿಷ್ಣುಸ್ಮರಣೆ ಮಾಡಿ **"ಅನೇನ ಹೋಮಕರ್ಮಣಾ ...ಪ್ರೀಯತಾಂ"** ಎಂದು ನೀರುಬಿಟ್ಟು, ಎರಡು ಸಲ ಆಚಮನ ಮಾಡಬೇಕು.

॥ ಸಾಯಂ ಔಪಾಸನಹೋಮ ಸಮಾಪ್ತ ॥

Scanned by CamScanner

Scanned with CamScanner

॥ ಪ್ರಾತರೌಪಾಸನಹೋಮಃ ॥

॥ ಶ್ರೀಃ ॥ ಏವಂ ಪ್ರಾತರುದಯಾತ್ಪೂರ್ವಂ ಕೃತಸಂಧ್ಯಾವಂದನಃ ಅಗ್ನೇಃ ಪ್ರಾದುಷ್ಕರಣಂ ಕೃತ್ವಾ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲಾದ್ಯು-ಚ್ಚಾರ್ಯ ಅಗ್ನಿರೂಪೀ ಪರಮೇಶ್ವರಪ್ರೀತ್ಯರ್ಥಂ ಪ್ರಾತರೌಪಾಸನಹೋಮಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ಹೋಮಕಾಲೇ ಪೂರ್ವವತ್ ॥ ಸಮಿಧಂ ತೂಷ್ಣೀಂ ಅಗ್ನೌ ನಿಧಾಯ ॥ ಓಂ ಸೂರ್ಯಾಯ ಸ್ವಾಹಾ ಸೂರ್ಯಾಯ ಇದಂ ..... ॥ ಓಂ ಪ್ರಜಾಪತಯೇ ಸ್ವಾಹಾ ಪ್ರಜಾಪತಯ ಇದಂ .....॥ ಪರಿಸ್ತರಣಂ ವಿಸೃಜ್ಯ ಪರ್ಯೂಹನೋಕ್ಷಣೇ ಕುರ್ಯಾತ್ ॥ ತಿಷ್ಠನ್ ॥ ಉಪಸ್ಥಾನಮಂತ್ರಾಃ ॥ ಸೂರ್ಯೋ ನೋ ದಿವಸ್ಪಾತ್ವಿತ್ಯಸ್ಯ ಚಕ್ಷುಃ ಸೂರ್ಯೋ ಗಾಯತ್ರೀ ॥ ಸೂರ್ಯೋಪಸ್ಥಾನೇ ವಿನಿ... ॥ ಓಂ ಸೂರ್ಯೋ ನೋ ದಿವಸ್ಪಾತುವಾತೋ ಅಂತರಿಕ್ಷಾತ್ ॥ ಅಗ್ನಿರ್ನಃ ಪಾರ್ಥಿವೇಭ್ಯಃ ॥ ಉದುತ್ಯಂ ಕಾಣ್ವಃ ಪ್ರಸ್ಕಣ್ವಃ ಸೂರ್ಯೋ ಗಾಯತ್ರೀ ॥ ಸೂರ್ಯೋಪಸ್ಥಾನೇ ವಿನಿ .....॥ ಓಂ ಉದುತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ ॥ ದೃಶೇ-ವಿಶ್ವಾಯಸೂರ್ಯಂ ॥ ಚಿತ್ರಂ ದೇವಾನಾಮಾಂಗಿರಸಃ ಕುತ್ಸಃ ಸೂರ್ಯಸ್ತ್ರಿ-ಷ್ಟುಪ್ ॥ ಸೂರ್ಯೋಪಸ್ಥಾನೇ ವಿನಿ .....॥ ಓಂ ಚಿತ್ರಂ ದೇವಾನಾಮುದ-ಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ॥ ಆಪ್ರಾದ್ಯಾವಾ ಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ॥ ನಮೋ ಮಿತ್ರಸ್ಯೇತ್ಯಭಿತಪಾಃ ಸೂರ್ಯೋ ಜಗತೀ ॥ ಸೂರ್ಯೋಪಸ್ಥಾನೇ ವಿನಿ .... ॥ ಓಂ ನಮೋ ಮಿತ್ರಸ್ಯ ವರುಣಸ್ಯ ಚಕ್ಷಸೇ ಮಹೋದೇವಾಯತದೃತಂಸಪರ್ಯತ ॥ ದೂರೇ-ದೃಶೇ ದೇವಜಾತಾಯ ಕೇತವೇ ದಿವಸ್ಪುತ್ರಾಯ ಸೂರ್ಯಾಯ ಶಂಸತ ॥

Scanned by CamScanner

Scanned with CamScanner

ಏತೈರ್ಮಂತ್ರೈಶ್ಚತುರ್ಭಿಃ ಸೂರ್ಯಮುಪಸ್ಥಾಯ ॥ ಪ್ರಜಾಪತೇ ನತ್ವದೇ-ತಾನ್ .....॥ ಹಿರಣ್ಯಗರ್ಭಃ ಸಮವರ್ತತಾ .....॥ ಇತಿ ದ್ವಾಭ್ಯಾಂ ಪ್ರಜಾಪತಿಂ ಚೋಪಸ್ಥಾಯ ॥ ಓಂಚಮೇ ಸ್ವರಶ್ಚ ಮೇ... ॥ ಇತಿ ಪ್ರಾತರ್ಹೋಮೇ ವಿಶೇಷಃ ಕರ್ಮೇಶ್ವರಾರ್ಪಣಾದಿ ಪೂರ್ವವತ್ ॥

॥ ಇತಿ ಪ್ರಾತರೌಪಾಸನಹೋಮಃ ॥

ಸೂರ್ಯೋದಯಕ್ಕೆ ಮೊದಲೇ ಸಂಧ್ಯಾವಂದನೆಯನ್ನು ಮಾಡಿ ಪ್ರಾತರೌಪಾಸನ ಹೋಮವನ್ನು ಮಾಡಬೇಕು. ಸಂಕಲ್ಪದಲ್ಲಿ **"ಪ್ರಾತರೌಪಾಸನಹೋಮಂ ಕರಿಷ್ಯೇ"** ಎಂದೂ ಆಹುತಿಯಲ್ಲಿ **"ಸೂರ್ಯಾಯ ಸ್ವಾಹಾ ಸೂರ್ಯಾಯ ಇದಂ ....."** ಎಂದೂ ಉಪಸ್ಥಾನ ಮಂತ್ರಗಳಲ್ಲಿ ಸೂರ್ಯಸಂಬಂಧಿಯಾದ **"ಸೂರ್ಯೋ ನೋ...."** ಮುಂತಾಗಿ ನಾಲ್ಕು ಮಂತ್ರಗಳೆಂದೂ, ಈ ವ್ಯತ್ಯಾಸಗಳನ್ನುಳಿದು ಇತರ ಎಲ್ಲ ಕರ್ಮಗಳನ್ನು ಸಾಯಮೌಪಾಸನ ಹೋಮದಂತೆಯೇ ಮಾಡಬೇಕು.

॥ ಪ್ರಾತರೌಪಾಸನಹೋಮ ಸಮಾಪ್ತ ॥

Scanned by CamScanner

Scanned with CamScanner

॥ ಗ್ರಹಯಜ್ಞಾವಶ್ಯಕತಾ ಗ್ರಹಾಣಾಂ ಪ್ರತಿಮಾವರ್ಣಾದಿ ಚ ॥

ಶ್ರೀಕಾಮಃ ಶಾಂತಿಕಾಮೋ ವಾ ಗ್ರಹಯಜ್ಞಂ ಸಮಾಚರೇತ್ ।
ವೃಷ್ಟ್ಯಾಯುಃ ಪುಷ್ಟಿಕಾಮೋ ವಾ ತಥೈವಾಭಿಚರನ್ನಪಿ ॥
ಯಸ್ಯ ಗ್ರಹೋ ಯದಾ ದುಃಸ್ಥಃ ಸ ತಂ ಯತ್ನೇನ ಪೂಜಯೇತ್ ।
ಬ್ರಹ್ಮಣೈಷಾಂ ವರೋ ದತ್ತಃ ಪೂಜಿತಾ ಪೂಜಯಿಷ್ಯಥ ॥
ಗ್ರಹಾಧೀನಾ ನರೇಂದ್ರಾಣಾಮುಚ್ಛ್ರಾಯಾಃ ಪತನಾನಿ ಚ ।
ಭಾವಾಭಾವೌ ಚ ಜಗತಃ ತಸ್ಮಾತ್ಪೂಜ್ಯತಮಾ ಗ್ರಹಾಃ ॥

॥ ಗ್ರಹಾಣಾಂ ನಾಮಾನಿ ॥

ಸೂರ್ಯಃ ಸೋಮೋ ಮಹೀಪುತ್ರಃ ಸೋಮಪುತ್ರೋ ಬೃಹಸ್ಪತಿಃ ।
ಶುಕ್ರಃ ಶನೈಶ್ಚರೋ ರಾಹುಃ ಕೇತುಶ್ಚೇತಿ ಗ್ರಹಾಃ ಸ್ಮೃತಾಃ ॥

॥ ಗ್ರಹಯಜ್ಞವನ್ನು ಮಾಡಬೇಕಾದ ಆವಶ್ಯಕತೆ ॥

ಗ್ರಹಗಳ ಪೂಜೆ ಮಾಡುವುದರಿಂದ ದಾರಿದ್ರ್ಯ, ರೋಗ, ರುಜಿನ, ಇತ್ಯಾದಿಗಳ ನಿವಾರಣೆಯಾಗಿ ಸಂಪತ್ತು ಸುಖ ಚಿತ್ತಶಾಂತಿಗಳು ದೊರೆಯುತ್ತವೆ. ಕೃಷಿ, ಮಳೆ, ಬೆಳೆ, ಧಾನ್ಯ ವೃದ್ಧಿ, ಆಯುಷ್ಯ, ಆರೋಗ್ಯ ಮುಂತಾದವುಗಳು ವರ್ಧಿಸುತ್ತವೆ. ಮಿತ್ರಲಾಭವಾಗುತ್ತದೆ. ಶತ್ರುಗಳ ನಾಶವಾಗುತ್ತದೆ. ಜನ್ಮರಾಶಿ ಅಥವಾ ಜನ್ಮಲಗ್ನದಿಂದ ಅಷ್ಟಮಾದಿ ದುಷ್ಟಸ್ಥಾನದಲ್ಲಿರುವ ಗ್ರಹದ ಅಥವಾ ಅಷ್ಟೋತ್ತರೀ ವಿಂಶೋತ್ತರೀ ದಶಾಕ್ರಮದಲ್ಲಿ ಯಾವ ಯಾವ ದುಷ್ಟಗ್ರಹಗಳ ದಶೆ ಪ್ರಾಪ್ತವಾಗಿದೆಯೋ ಆಯಾ ಗ್ರಹವನ್ನು ಜಪ, ಹೋಮ ಮೊದಲಾದವುಗಳಿಂದ ಪೂಜಿಸಿ, ಸಂತುಷ್ಟಿಗೊಳಿಸಿದರೆ ಅದು ಪೀಡಿಸುವುದಿಲ್ಲ ಮಾತ್ರವಲ್ಲ ಶುಭಫಲವನ್ನೂ ಕೊಡುತ್ತದೆ. ಯಾಕೆಂದರೆ ಜಪ, ಹೋಮಾದಿಗಳಿಂದ ಯಾರು ನಿಮ್ಮನ್ನು ಪೂಜಿಸುತ್ತಾರೋ ಅವರ ಸಕಲ ಸಂಕಟಗಳನ್ನೂ ಪರಿಹರಿಸಿ ಅಂಥವರಿಗೆ ನೀವು ಶುಭಫಲಗಳನ್ನು ಕರುಣಿಸಬೇಕೆಂದು ಪೂರ್ವಕಾಲದಲ್ಲಿ ಬ್ರಹ್ಮನು ನವಗ್ರಹಗಳಿಗೆ ವರವನ್ನು ಕೊಟ್ಟಿದ್ದಾನೆ. ರಾಜನಾದವನು ಅನಿವಾರ್ಯವಾಗಿ ಈ ಗ್ರಹಗಳ ಪೂಜಾದಿಗಳನ್ನು ಮಾಡಲೇಬೇಕು. ಇಡೀ ರಾಜ್ಯದ ಹಾಗೂ ಎಲ್ಲ ಪ್ರಜೆಗಳ ಅಭಿವೃದ್ಧಿ ಹಾಗೂ ಪತನಗಳು, ಅತಿವೃಷ್ಟಿ, ಅನಾವೃಷ್ಟಿ, ಈತಿಬಾಧೆ ಮುಂತಾದವು ಗ್ರಹಗಳನ್ನೇ ಹೊಂದಿರುತ್ತವೆ. ರಾಜನಾದವನು ಸದಾಕಾಲವೂ ಗ್ರಹಗಳನ್ನು ತೃಪ್ತಿಪಡಿಸಿಕೊಂಡಿದ್ದರೆ ತನ್ನ ಸಮಸ್ತ ರಾಜ್ಯದ ಮತ್ತು ಪ್ರಜೆಗಳ ಕ್ಷೇಮವನ್ನು ಸಾಧಿಸಬಹುದು.

Scanned by CamScanner
Scanned with CamScanner

॥ ಗ್ರಹಾಣಾಂ ಮೂರ್ತಯಃ - ಪ್ರತಿಮಾಃ ॥

ತಾಮ್ರಕಾತ್ ಸ್ಫಾಟಿಕಾದ್ರಕ್ತಚಂದನಾತ್ ಸ್ವರ್ಣಕಾದುಭೌ ।
ರಾಜತಾದಯಸಃ ಸೀಸಾತ್ಕಾಂಸ್ಯಾತ್ಕಾರ್ಯಾ ಗ್ರಹಾಃ ಕ್ರಮಾತ್ ॥

॥ ಗ್ರಹಮೂರ್ತೀಕರಣಪ್ರಕಾರಃ ॥

ಪದ್ಮಾಸನಃ ಪದ್ಮಕರಃ ಪದ್ಮಗರ್ಭಸಮದ್ಯುತಿಃ ।
ಸಪ್ತಾಶ್ವರಥಸಂಸ್ಥಶ್ಚ ದ್ವಿಭುಜಃ ಸ್ಯಾತ್ಸದಾ ರವಿಃ ॥
ಶ್ವೇತಃ ಶ್ವೇತಾಂಬರಧರೋ ದಶಾಶ್ವಃ ಶ್ವೇತಭೂಷಣಃ ।
ಗದಾಪಾಣಿರ್ದ್ವಿಬಾಹುಶ್ಚ ಕರ್ತವ್ಯೋ ವರದಃ ಶಶೀ ॥
ರಕ್ತಮಾಲ್ಯಾಂಬರಧರಃ ಶಕ್ತಿಶೂಲಗದಾಧರಃ ।
ಚತುರ್ಭುಜೋ ಮೇಷಗಮೋ ವರದಃ ಸ್ಯಾದ್ಧರಾಸುತಃ ॥
ಪೀತಮಾಲ್ಯಾಂಬರಧರಃ ಕರ್ಣಿಕಾರಸಮದ್ಯುತಿಃ ।
ಖಡ್ಗಚರ್ಮಗದಾಪಾಣಿಃ ಸಿಂಹಸ್ಥೋ ವರದೋ ಬುಧಃ ॥

॥ ಗ್ರಹಗಳ ಹೆಸರುಗಳು ॥

1. ಸೂರ್ಯ 2. ಚಂದ್ರ. 3. ಮಂಗಳ. 4. ಬುಧ. 5. ಬೃಹಸ್ಪತಿ 6. ಶುಕ್ರ. 7. ಶನೈಶ್ಚರ. 8. ರಾಹು. 9. ಕೇತು.

ನವಗ್ರಹಗಳ ಪ್ರತಿಮೆಗಳು:- ಸೂರ್ಯ-ತಾಮ್ರ; ಚಂದ್ರ-ಸ್ಫಟಿಕ; ಕುಜ – ರಕ್ತಚಂದನ; ಬುಧ-ಸುವರ್ಣ; ಗುರು-ಸುವರ್ಣ; ಶುಕ್ರ-ಬೆಳ್ಳಿ; ಶನಿ-ಕಬ್ಬಿಣ ; ರಾಹು-ಸೀಸ; ಕೇತು – ಕಂಚು ಈ ಲೋಹಗಳು ದೊರೆಯದಿದ್ದರೆ ಆಯಾ ಬಣ್ಣದ ರಂಗವಲ್ಲಿಗಳಿಂದ ಗ್ರಹಗಳ ಆಕೃತಿಗಳನ್ನು ನಿರ್ಮಿಸಬೇಕು.

ಗ್ರಹಗಳ ಮೂರ್ತಿಗಳು:- 1. ಸೂರ್ಯ:- ತಾವರೆಯ ಆಸನ, ಕೈಯಲ್ಲಿ ತಾವರೆ, ಪದ್ಮರಾಗದ ಬಣ್ಣ, ಎರಡು ಕೈಗಳು, ವರದ ಹಸ್ತ, ಏಳು ಕುದುರೆಗಳುಳ್ಳ ರಥದ ಮೇಲೆ ಮಂಡಿಸಿದವ. 2. ಚಂದ್ರ:- ಶ್ವೇತವರ್ಣ, ಬಿಳಿಬಟ್ಟೆ, ಬಿಳಿ ಆಭರಣಗಳು, ಹತ್ತು ಕುದುರೆಗಳುಳ್ಳ ರಥ, ಎರಡು ಕೈಗಳು, ಕೈಯಲ್ಲಿ ಗದೆ, ವರದ ಹಸ್ತ. 3. ಕುಜ-ಕೆಂಪು ಹೂಗಳ ಮಾಲೆ, ಕೆಂಪು ಬಟ್ಟೆ, ಶಕ್ತಿ, ಶೂಲ, ಗದೆ, ಆಯುಧಗಳು, ನಾಲ್ಕು ಕೈಗಳು, ಕುರಿವಾಹನ, ವರದಹಸ್ತ. 4. ಬುಧ:- ಅರಸಿನ ಬಣ್ಣದ ಪುಷ್ಪಮಾಲೆ, ಅರಸಿನ ಬಣ್ಣದ ವಸ್ತ್ರ, ಕರ್ಣಿಕಾರ ಪುಷ್ಪದಂತಹ ಶರೀರಕಾಂತಿ, ಖಡ್ಗ, ಚರ್ಮ, ಗದೆ, ಆಯುಧಗಳು, ಸಿಂಹವಾಹನ, ವರದಹಸ್ತ. 5. ಗುರು:- ಪೀತವರ್ಣದ ಪುಷ್ಪ ಮಾಲೆ, ಪೀತ (ಅರಸಿನ) ವಸ್ತ್ರ, ನಾಲ್ಕು ಕೈಗಳು, ದಂಡ, ಕಮಂಡಲು,

Scanned by CamScanner
Scanned with CamScanner

ದೇವದೈತ್ಯಗುರೂ ತದ್ವತ್ಪೀತಶ್ವೇತೌ ಚತುರ್ಭುಜೌ ।
ದಂಡಿಗೌ ವರದೌ ಕಾರ್ಯೌ ಸಾಕ್ಷಸೂತ್ರ ಕಮಂಡಲೂ ॥
ಇಂದ್ರನೀಲದ್ಯುತಿಃ ಶೂಲೀ ವರದೋ ಗೃಧ್ರವಾಹನಃ ।
ಬಾಣಬಾಣಾಸನಧರಃ ಕರ್ತವ್ಯೋರ್ಕಸುತಃ ಸದಾ ॥
ಕರಾಲವದನಃ ಖಡ್ಗಚರ್ಮಶೂಲೀವರಪ್ರದಃ ।
ನೀಲಃ ಸಿಂಹಾಸನಸ್ಥಶ್ಚ ರಾಹುರತ್ರ ಪ್ರಶಸ್ಯತೇ ॥
ಧೂಮ್ರಾ ದ್ವಿಬಾಹವಃ ಸರ್ವೇ ಗದಿನೋ ವಿಕೃತಾನನಾಃ ।
ಗೃಧ್ರಾಸನಗತಾ ನಿತ್ಯಂ ಕೇತವಃ ಸ್ಯುರ್ವರಪ್ರದಾಃ ॥
ಸರ್ವೇ ಕಿರೀಟಿನಃ ಕಾರ್ಯಾ ಗ್ರಹಾ ಲೋಕಹಿತಾವಹಾಃ ।
ಸ್ವಾಂಗುಲೇನೋಚ್ಛ್ರಿತಾಃ ಸರ್ವೇ ಶತಮಷ್ಟೋತ್ತರಂ ಸದಾ ॥

॥ ಗ್ರಹಸ್ಥಾಪನದಿಶಾ ॥

ಮಧ್ಯೇತು ಭಾಸ್ಕರಂ ವಿದ್ಯಾಲ್ಲೋಹಿತಂ ದಕ್ಷಿಣೇನ ತು ।
ಉತ್ತರೇಣ ಗುರುಂ ವಿದ್ಯಾದ್ಬುಧಂ ಪೂರ್ವೋತ್ತರೇಣ ತು ॥
ಪೂರ್ವೇಣ ಭಾರ್ಗವಂ ವಿದ್ಯಾತ್ಸೋಮಂ ದಕ್ಷಿಣಪೂರ್ವಕೇ ।
ಪಶ್ಚಿಮೇ ಚ ಶನಿಂ ವಿದ್ಯಾದ್ರಾಹುಂ ಪಶ್ಚಿಮದಕ್ಷಿಣೇ ॥
ಪಶ್ಚಿಮೋತ್ತರತಃ ಕೇತುಂ ಸ್ಥಾಪ್ಯಾ ವೈ ಶುಕ್ಲ ತಂಡುಲೈಃ ।
ಸ್ವವರ್ಣೈರ್ವಾ ಪಟೇ ಲೇಖ್ಯಾ ಗಂಧೈರ್ಮಂಡಲಕೇಷು ವಾ ॥

ಅಕ್ಷಮಾಲೆ, ವರದಹಸ್ತ. 6. ಶುಕ್ರ:- ಶ್ವೇತವರ್ಣ, ಶ್ವೇತಮಾಲೆ, ಶ್ವೇತವಸ್ತ್ರ, ನಾಲ್ಕು ಕೈಗಳು, ದಂಡ ಕಮಂಡಲು, ಅಕ್ಷಮಾಲೆ, ವರದಹಸ್ತ, 7. ಶನಿ:- ಇಂದ್ರನೀಲವರ್ಣ, ತ್ರಿಶೂಲ, ಬಿಲ್ಲು ಮತ್ತು ಬಾಣ ಆಯುಧ, ವರದಹಸ್ತ, ವಾಹನ ರಣಹದ್ದು. 8. ರಾಹು:- ನೀಲವರ್ಣ, ವಿಕಾರವೂ, ಕ್ರೂರವೂ ಆದ ಮುಖ, ಖಡ್ಗ, ಚರ್ಮ, ತ್ರಿಶೂಲ ಆಯುಧ, ಆಸನ ಸಿಂಹಾಸನ, ವರದಹಸ್ತ. 9. ಕೇತು:- ಹೊಗೆಯಂತೆ ಕಪ್ಪಾದ ಬಣ್ಣ, ಎರಡು ಕೈಗಳು, ವಿಕಾರವಾದ ಮುಖ, ಆಸನ ರಣಹದ್ದು, ವರದಹಸ್ತ ಹೀಗೆ ಆಕೃತಿಗಳುಳ್ಳ ನವಗ್ರಹರ ಪ್ರತಿಮೆಗಳನ್ನು ಮಾಡಬೇಕು. ಲೋಕಹಿತವನ್ನು ಸಾಧಿಸುವ ಈ ನವಗ್ರಹಗಳಿಗೆಲ್ಲ ಕಿರೀಟಗಳಿರಬೇಕು. ಒಂದೊಂದು ಪ್ರತಿಮೆಯೂ ಒಂದೊಂದು ಅಂಗುಲ ಪ್ರಮಾಣದಲ್ಲಿರಬೇಕು.

॥ ಗ್ರಹಗಳನ್ನು ಪ್ರತಿಷ್ಠಾಪಿಸುವ ದಿಕ್ಕುಗಳು ॥

ಆಯಾ ಬಣ್ಣದ ರಂಗವಲ್ಲಿಯ ಮಂಡಲದ ಮೇಲೆ, ಅಥವಾ ಆಯಾ ವರ್ಣದಿಂದ ಬಟ್ಟೆಯ ಮೇಲೆ ಚಿತ್ರ ಬರೆದು ಈ ಮುಂದೆ ಹೇಳಿದಂತೆ ಆಯಾ ದಿಕ್ಕಿನಲ್ಲಿ ಗ್ರಹಗಳನ್ನು

Scanned by CamScanner
Scanned with CamScanner

॥ ಗ್ರಹಾಣಾಂ ವರ್ಣಾಃ ॥

ಸಂಸ್ಮರೇದ್ರಕ್ತಮಾದಿತ್ಯಮಂಗಾರಕಸಮನ್ವಿತಂ ।
ಸೋಮಶುಕ್ರೌ ತಥಾ ಶ್ವೇತೌ ಬುಧಜೀವೌತ್ರಪೀತಕೌ ॥
ಮಂದೋ ರಾಹುಸ್ತಥಾ ಕೃಷ್ಣೌ ಧೂಮಃ ಕೇತುಗುಣಾನ್ವಿದುಃ ।
ಯಥಾವರ್ಣಂ ಪ್ರದೇಯಾನಿ ವಾಸಾಂಸಿ ಕುಸುಮಾನಿ ಚ ॥
ಗಂಧಶ್ಚ ವಲಯಶ್ಚೈವ ಧೂಪೋ ದೇಯಶ್ಚ ಗುಗ್ಗುಲುಃ ।
ಕರ್ತವ್ಯಾ ಮಂತ್ರವಂತಶ್ಚ ಚರವಃ ಪ್ರತಿದೇವತಾಃ ॥

॥ ನವಗ್ರಹಪ್ರೀತ್ಯರ್ಥನೈವೇದ್ಯಂ ॥

ಗುಡೌದನಂ ರವೇರ್ದದ್ಯಾತ್ಸೋಮಾಯ ಘೃತಪಾಯಸಂ ।
ಲೋಹಿತಾಯ ಹವಿಷ್ಯಾನ್ನಂ ಬುಧಾಯ ಕ್ಷೀರಪೌಷ್ಟಿಕಂ ॥
ದಧ್ಯೋದನಂ ಗುರೋರ್ದದ್ಯಾಚ್ಛುಕ್ರಾಯ ಚ ಘೃತೌದನಂ ।
ಮಿಶ್ರಿತಂ ತಿಲಮಾಷೈಶ್ಚ ನೈವೇದ್ಯಂತು ಶನೈಶ್ಚರೇ ॥

ಪ್ರತಿಷ್ಠಾಪಿಸಬೇಕು. ಸೂರ್ಯ-ಮಧ್ಯದಲ್ಲಿ; ಚಂದ್ರ-ಆಗ್ನೇಯ; ಕುಜ-ದಕ್ಷಿಣ; ಬುಧ-ಈಶಾನ್ಯ; ಗುರು-ಉತ್ತರ; ಶುಕ್ರ-ಪೂರ್ವ: ಶನಿ-ಪಶ್ಚಿಮ; ರಾಹು-ನೈಋತ್ಯ; ಕೇತು-ವಾಯವ್ಯ.

॥ ಗ್ರಹಗಳ ಬಣ್ಣಗಳು ॥

ಆದಿತ್ಯ, ಅಂಗಾರಕ - ರಕ್ತವರ್ಣ; ಚಂದ್ರ, ಶುಕ್ರ-ಬಿಳಿ ಬಣ್ಣ; ಬುಧ, ಗುರು-ಪೀತ ವರ್ಣ (ಹಳದಿ); ಶನಿ, ರಾಹು-ಕಪ್ಪು ಬಣ್ಣ; ಕೇತು-ಧೂಮ್ರವರ್ಣ, ಆಯಾ ವರ್ಣದ ಗ್ರಹಕ್ಕೆ ಅದೇ ವರ್ಣದ ಬಟ್ಟೆ, ಗಂಧ, ಪುಷ್ಪಗಳನ್ನು ಸಮರ್ಪಿಸಬೇಕು. ಎಲ್ಲ ಗ್ರಹಗಳಿಗೂ ಗುಗ್ಗುಳದ ಧೂಪ ತೋರಿಸಬೇಕು. ಪ್ರತ್ಯೇಕ ಪ್ರತ್ಯೇಕವಾಗಿ ಎಲ್ಲ ಗ್ರಹಗಳಿಗೂ ಚರುವಿನ ಬಲಿಗಳನ್ನು ಕೊಡಬೇಕು.

॥ ನವಗ್ರಹಗಳಿಗೆ ಪ್ರಿಯವಾದ ನೈವೇದ್ಯ ॥

ಸೂರ್ಯ-ಬೆಲ್ಲ ಸೇರಿಸಿದ ಅನ್ನ; ಚಂದ್ರ-ಘೃತಪಾಯಸ; ಮಂಗಳ-ಹವಿಷ್ಯಾನ್ನ; ಬುಧ-ಸಣ್ಣಕ್ಕಿಯ ಹಾಲುಪಾಯಸ; ಗುರು-ಮೊಸರು ಕಲಸಿದ ಅನ್ನ; ಶುಕ್ರ-ತುಪ್ಪ ಕಲಸಿದ ಅನ್ನ; ಶನಿ-ಎಳ್ಳು ಮತ್ತು ಉದ್ದು ಬೆರಸಿದ ಅನ್ನ; ರಾಹು-ದೇವನಾಳಿ ಅಕ್ಕಿಯ ಪಾಯಸ; ಕೇತು-ಚಿತ್ರಾನ್ನ. ಈ ಪ್ರಕಾರ ಗ್ರಹಗಳಿಗೆ ನೈವೇದ್ಯ ಸಮರ್ಪಣೆ ಮಾಡಬೇಕು. ಇಂತಹ ವಿಶಿಷ್ಟ ನೈವೇದ್ಯ

Scanned by CamScanner
Scanned with CamScanner

ರಾಹೋರ್ಮಾಂಸೌದನಂ ದದ್ಯಾತ್ಕೇತೋಶ್ಚಿತ್ರೌದನಂ ತಥಾ ।
ಪೂರ್ವೋಕ್ತ ವಿವಿಧನೈವೇದ್ಯಾಭಾವೇ ಯಥಾಲಾಭಮೋದನಾನಿ ನಿವೇದಯೇತ್ ॥

ಪದಾರ್ಥಗಳನ್ನು ಸಂಗ್ರಹಿಸುವುದು ಕಷ್ಟ ಸಾಧ್ಯವೆಂದಾದರೆ ಯಥಾಸಂಭವ ಸಾಧ್ಯವಿದ್ದ ಕ್ರಮದಲ್ಲಿ ಒದಗಿಸಿಕೊಳ್ಳಬೇಕು. ಇದೇ ರೀತಿಯ ಪಾಕಾದಿಗಳನ್ನು ತಯಾರಿಸಿ ಬ್ರಾಹ್ಮಣರಿಗೆ ಭೋಜನ ದಕ್ಷಿಣಾದಿಗಳನ್ನಿತ್ತು ಅವರಿಂದ ಆಶೀರ್ವಾದ ಪಡೆಯಬೇಕು.

Scanned by CamScanner

Scanned with CamScanner

ಕುಂಡೇ ಸ್ಥಂಡಿಲೇ ವಾ ರೇಖಾಲೇಖನಂ



ಗ್ರಹದೇವತಾ ಮಂಡಲಂ



॥ ಗ್ರಹಯಜ್ಞಃ ॥

॥ ಶ್ರೀಃ ॥ ಕರ್ತಾ ಕೃತನಿತ್ಯಕ್ರಿಯೋ ದ್ವಿರಾಚಮ್ಯ ಪವಿತ್ರಪಾಣಿಃ ಪ್ರಾಣಾನಾಯಮ್ಯ ದೇವಗುರುಬ್ರಾಹ್ಮಣಾಭಿವಾದನಪೂರ್ವಂ ದೇಶಕಾಲೌ ಸ್ಮೃತ್ವಾ ॥ ಅಮುಕಕರ್ಮಕರ್ತುಮಾದೌ ಗ್ರಹಾನುಕೂಲ್ಯಸಿದ್ಧಿದ್ವಾರಾ ಅಮುಕಕಾಮನಾಸಿದ್ಧಿದ್ವಾರಾ ವಾ ಶ್ರೀಪರಮೇಶ್ವರಪ್ರೀತ್ಯರ್ಥಂ ಗ್ರಹಯಜ್ಞಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ಗಣಪತಿಪೂಜನಸ್ವಸ್ತಿವಾಚನಮಾತೃಕಾಪೂಜನನಾಂದೀಶ್ರಾದ್ಧಾನಿ ಕೃತ್ವಾ ॥ ಆಚಾರ್ಯವರಣಂ ಕುರ್ಯಾತ್ ॥ ತತೋ ಗ್ರಹಪ್ರತಿಮಾನಾಂ ಅಗ್ನ್ಯುತ್ತಾರಣಪೂರ್ವಕಂ ಪ್ರಾಣಪ್ರತಿಷ್ಠಾಂ ಚ ಕೃತ್ವಾ ॥

॥ ಆಚಾರ್ಯವರಣಂ ॥

ಗ್ರಹಯಜ್ಞಾಂಗಭೂತಂ ಆಚಾರ್ಯಾದಿವರಣಂ ಚ ಕರಿಷ್ಯೇ ॥ ಆಚಾರ್ಯಂ ಸಂಪೂಜ್ಯ ॥ ಅಮುಕಪ್ರವರಾನ್ವಿತೋಮುಕಗೋತ್ರೋಮುಕಶರ್ಮಾ ಅಹಂ ॥ ಅಮುಕಪ್ರವರಾನ್ವಿತಮಮುಕಗೋತ್ರೋತ್ಪನ್ನಂ ಋಗ್ವೇದಾಂತರ್ಗತಶಾಕಲಶಾಖಾಧ್ಯಾಯಿನಂ ಅಮುಕಶರ್ಮಾಣಂ ಬ್ರಾಹ್ಮಣಂ ಅಸ್ಮಿನ್ ಗ್ರಹಯಜ್ಞಾಖ್ಯೇ ಕರ್ಮಣಿ ಆಚಾರ್ಯಂ ತ್ವಾಂ ವೃಣೇ ॥ ಇತಿ ವೃತ್ವಾ ಪ್ರಾರ್ಥಯೇತ್ ॥ ಆಚಾರ್ಯಸ್ತು ಯಥಾ ಸ್ವರ್ಗೇ ಶಕ್ರಾದೀನಾಂ ಬೃಹಸ್ಪತಿಃ । ತಥಾ ತ್ವಂ ಮಮ ಯಜ್ಞೇಽಸ್ಮಿನ್ನಾಚಾರ್ಯೋ ಭವ ಸುವ್ರತ ॥ ಅಸ್ಯ ಯಾಗಸ್ಯ ನಿಷ್ಪತ್ತೌ ಭವಂತೋಽಭ್ಯರ್ಥಿತಾ ಮಯಾ ॥ ಸುಪ್ರಸನ್ನೈಶ್ಚ ಕರ್ತವ್ಯಂ

॥ ಗ್ರಹಯಜ್ಞ ॥

ಯಜಮಾನನು ನಿತ್ಯಕರ್ಮಗಳನ್ನು ಮಾಡಿ ಎರಡು ಸಲ ಆಚಮನ ಮಾಡಿ ಪವಿತ್ರವನ್ನು ಧರಿಸಿ ಪ್ರಾಣಾಯಾಮ ದೇಶಕಾಲಕೀರ್ತನಾದಿಗಳನ್ನು ಮುಗಿಸಿ, **"ಅಮುಕಕರ್ಮ ..... ಗ್ರಹಯಜ್ಞಂ ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ಬಳಿಕ ಗಣಪತಿ ಪೂಜನ, ಸ್ವಸ್ತಿವಾಚನ, ಮಾತೃಕಾಪೂಜನ, ನಾಂದೀಶ್ರಾದ್ಧಾದಿಗಳನ್ನು ಮಾಡಿ ಆಚಾರ್ಯನನ್ನು ವರಿಸಬೇಕು. **"ಗ್ರಹಯಜ್ಞಾಂಗ ....ಕರಿಷ್ಯೇ"** ಎಂದು ಸಂಕಲ್ಪಿಸಿ, ಆಚಾರ್ಯನಾಗುವವನನ್ನು ಪೂಜಿಸಿ, **"ಅಮುಕ ಪ್ರವರಾನ್ವಿತೋ ...ತ್ವಾ ವೃಣೇ"** ಎಂದು ಹೇಳಿ **"ಆಚಾರ್ಯಸ್ತು .... ವಿಧಿಪೂರ್ವಕಂ"** ಎಂದು ಪ್ರಾರ್ಥಿಸಬೇಕು. ಆಚಾರ್ಯನು **"ವೃತೋಽಸ್ಮಿ ...ಕರಿಷ್ಯಾಮಿ"**

Scanned by CamScanner

ಕರ್ಮೇದಂ ವಿಧಿಪೂರ್ವಕಂ ॥ ಇತಿ ಸಂಪ್ರಾರ್ಥ್ಯ ಯಥಾವಿಭವ ಮರ್ಚಯೇತ್ ॥ ಆಚಾರ್ಯಃ ವೃತೋಽಸ್ಮಿ ಯಥಾಜ್ಞಾನತಃ ಕರ್ಮ ಕರಿಷ್ಯಾಮೀತಿ ವದೇತ್ ॥ ಅನಂತರಂ ಬ್ರಹ್ಮಾದಿ ಋತ್ವಿಜಾನ್ ಆಸನಗಂಧಾದ್ಯುಪಚಾರೈಃ ಯಥಾಸಂಭವಂ ಪೂಜಯೇತ್ ॥ ಅಥಾಚಾರ್ಯಃ ಆಚಮ್ಯ ಪವಿತ್ರಂ ಧೃತ್ವಾ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಯಜಮಾನೇನ ಗೃಹಯಜ್ಞಾಖ್ಯೇ ಕರ್ಮಣಿ ವೃತೋಹಮಾಚಾರ್ಯಕರ್ಮ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ಪೃಥ್ವಿ ತ್ವಯಾ ಧೃತಾ ಲೋಕಾ...ಯಜ್ಞಕರ್ಮಸಮಾರಭೇ ॥ ಇತ್ಯಾಸನವಿಧಿಂ ಪುರುಷಸೂಕ್ತನ್ಯಾಸಂ ಜಪಂ ಕೃತ್ವಾ ಷಡಂಗನ್ಯಾಸಂ ವಿಧಾಯ ॥ ಕಲಶಸ್ಯ ಮುಖೇ ವಿಷ್ಣುಃ ...॥ ಇತಿ ಕಲಶಂ ಪೂಜಯಿತ್ವಾ ॥ ಅಪವಿತ್ರಃ ಪವಿತ್ರೋ ವಾ ....॥ ತತಃ ॥ ಯದತ್ರ ಸಂಸ್ಥಿತಂ ಭೂತಂ ಸ್ಥಾನಮಾಶ್ರಿತ್ಯ ಸರ್ವತಃ ॥ ಸ್ಥಾನಂ ತ್ಯಕ್ತ್ವಾತು ತತ್ಸರ್ವಂ ಯತ್ರಸ್ಥಂ ತತ್ರ ಗಚ್ಛತು ॥ ಅಪಕ್ರಾಮಂತು ಭೂತಾನಿ ಪಿಶಾಚಾಃ ಸರ್ವತೋದಿಶಂ ॥ ಸರ್ವೇಷಾಮವಿರೋಧೇನ ಯಜ್ಞಕರ್ಮ ಸಮಾರಭೇ ॥ ಇತಿ ಗೌರವಸರ್ಷಪಾನ್ ವಿಕೀರ್ಯ ॥ ಪಂಚಗವ್ಯಮೇಲನಂ ಕೃತ್ವಾ ಭೂಮಿಂ ಪ್ರೋಕ್ಷಯೇತ್ ॥

ಶುಚೀವೋ ಹವ್ಯೇತಿ ಮೈತ್ರಾವರುಣಿರ್ವಸಿಷ್ಠೋಮರುತಸ್ತ್ರಿಷ್ಟುಪ್ ॥ ಅಗ್ನಿಃಶುಚಿವ್ರತತಮ ಇತಿ ದ್ವಯೋರಾಂಗಿರಸೋ ವಿರೂಪೋಗ್ನಿರ್ಗಾಯತ್ರೀ ॥ ಏತೋನ್ವಿಂದ್ರಮಿತಿ ತಿಸೃಣಾಮಾಂಗಿರಸಸ್ತಿರಶ್ಚೀ ಇಂದ್ರೋನುಷ್ಟುಪ್ ॥ ಪಂಚ-

---

ಎಂದು ಪ್ರತ್ಯುತ್ತರ ಹೇಳಬೇಕು. ಆಚಾರ್ಯನನ್ನೂ ಮುಂದೆ ಬ್ರಹ್ಮನೇ ಮೊದಲಾದ ಋತ್ವಿಜರನ್ನೂ ವರಣ ಮಾಡಿ ಅವರನ್ನೆಲ್ಲ ಯಥಾಸಂಭವ ವಸ್ತ್ರ ದಕ್ಷಿಣೆ ಇತ್ಯಾದಿಗಳಿಂದ ಅರ್ಚಿಸಬೇಕು.

ಆಚಾರ್ಯನು ಆಚಮನ ಮಾಡಿ ಪವಿತ್ರ ಧರಿಸಿ, ಪ್ರಾಣಾಯಾಮ ದೇಶಕಾಲ ಸಂಕೀರ್ತನಾದಿಗಳನ್ನು ಪೂರಯಿಸಿ **"ಯಜಮಾನೇನ .... ಕರ್ಮ ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ನಂತರ **"ಪೃಥ್ವಿತ್ವಯಾ ...ಸಮಾರಭೇ"** ಎಂದು ಆಸನವಿಧಿಯನ್ನು ಮಾಡಿ ಪುರುಷಸೂಕ್ತನ್ಯಾಸ, ಜಪ, ಷಡಂಗನ್ಯಾಸಗಳನ್ನೂ ಮಾಡಿ **"ಕಲಶಸ್ಯಮುಖೇ ....."** ಎಂಬುದನ್ನು ಹೇಳಿ ಕಲಶಪೂಜೆ ಮಾಡಿ **"ಅಪವಿತ್ರಃ..."** ಎಂದು ಎಲ್ಲ ಪೂಜಾದ್ರವ್ಯಗಳನ್ನೂ ತನ್ನನ್ನೂ ಪ್ರೋಕ್ಷಿಸಿಕೊಳ್ಳಬೇಕು. ಬಳಿಕ **"ಯದತ್ರ ಸಂಸ್ಥಿತಂ...ಸಮಾರಭೇ"** ಎಂದು ಬಿಳಿ ಸಾಸಿವೆಯನ್ನು ಸುತ್ತಲೂ ಚೆಲ್ಲಬೇಕು. ಆ ನಂತರ ಪಂಚಗವ್ಯವನ್ನು ತಯಾರಿಸಿ **"ಶುಚೀವೋ ಹವ್ಯಾ..."** ಎಂಬ ಮಂತ್ರಗಳಿಂದ ಭೂಮಿಯನ್ನು ಪ್ರೋಕ್ಷಿಸಬೇಕು.

Scanned by CamScanner

ಗವ್ಯೇನ ಭೂಮಿಪ್ರೋಕ್ಷಣೇ ವಿನಿಯೋಗಃ ॥ ಓಂ ಶುಚೀವೋ ಹವ್ಯಾಮರುತಃ ಶುಚೀನಾಂಶುಚಿಂ ಹಿನೋಮ್ಯಧ್ವರಂ ಶುಚಿಭ್ಯಃ ॥ ಋತೇನ ಸತ್ಯಮೃತಸಾಪ-ಆಯನ್‌ಛುಚಿಜನ್ಮಾನಃಶುಚಯಃಪಾವಕಾಃ ॥ ಅಗ್ನಿಃ ಶುಚಿವ್ರತತಮಃ ಶುಚಿ-ರ್ವಿಪ್ರಃ ಶುಚಿಃ ಕವಿಃ ॥ ಶುಚೀರೋಚತಆಹುತಃ ॥ ಉದಗ್ನೇ ಶುಚಯಸ್ತವ-ಶುಕ್ರಾಭ್ರಾಜಂತ ಈರತೇ ॥ ತವಜ್ಯೋತೀಂಷ್ಯರ್ಚಯಃ ॥ ಏತೋನ್ವಿಂದ್ರಂ-ಸ್ತವಾಮ ಶುದ್ಧಂ ಶುದ್ಧೇನ ಸಾಮ್ನಾ ॥ ಶುದ್ಧೈರುಕ್ಥೈರ್ವಾವೃಧ್ವಾಂಸಂಶುದ್ಧ-ಆಶೀರ್ವಾನ್ಮಮತ್ತು ॥ ಇಂದ್ರ ಶುಧ್ಧೋನ ಆಗಹಿಶುದ್ಧಃಶುದ್ಧಾಭಿರೂತಿಭಿಃ ॥ ಶುಧ್ಧೋರಯಿಂ ನಿಧಾರಯ ಶುದ್ಧೇ ಮಮದ್ಧಿ ಸ್ತೋಮ್ಯಃ । ಇಂದ್ರ ಶುದ್ಧೋಹಿ ನೋರಯಿಂ ಶುದ್ಧೋ ರತ್ನಾನಿ ದಾಶುಷೇ ॥ ಶುದ್ಧೋವೃತ್ರಾಣಿ ಜಿಘ್ನಸೇ ಶುದ್ಧೋ-ವಾಜಂಸಿಪಾಸಸಿ ॥ ಪಂಚಗವ್ಯೇನ ಭೂಮಿಪ್ರೋಕ್ಷಣಂ ॥

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ॥ ಯಃ ಸ್ಮರೇತ್ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ ॥ ಇತಿ ಕುಶೋದಕೇನ ಭೂಮಿಂ ಪ್ರೋಕ್ಷಯೇತ್ ॥ ತತಃ ಕೃತಾಂಜಲಿಪುಟಸ್ತಿಷ್ಠನ್ ॥ ಓಂ ಸ್ವಸ್ತ್ಯ-ಯನಂ ತಾರ್ಕ್ಷ್ಯಮರಿಷ್ಟನೇಮಿಂಮಹದ್ಭೂತಂ ವಾಯಸಂ ದೇವತಾನಾಂ ॥ ಅಸುರಘ್ನಮಿಂದ್ರಸಖಂ ಸಮತ್ಸುಬೃಹದ್ಯಶೋನಾವಮಿವಾರುಹೇಮ ॥ ಅಂ-ಹೋಮುಚಮಾಂಗಿರಸಂಗಯಂ ಚ ಸ್ವಸ್ತ್ಯಾತ್ರೇಯಂ ಮನಸಾಚತಾರ್ಕ್ಷ್ಯಂ ॥ ಪ್ರಯತಪಾಣಿಃ ಶರಣಂ ಪ್ರಪದ್ಯೇ ಸ್ವಸ್ತಿಸಂಬಾಧೇಷ್ವಭಯಂನೋಽಅಸ್ತು ॥ ದೇವಾ ಆಯಾಂತು ॥ ಯಾತುಧಾನಾ ಅಪಯಾಂತು ॥ ವಿಷ್ಣೋ ದೇವಯ-ಜನಂ ರಕ್ಷಸ್ವ ॥ ಭೂಮೌ ಪ್ರಾದೇಶಂ ಕುರ್ಯಾತ್ ॥

"ಅಪವಿತ್ರಃ ಪವಿತ್ರೋ ವಾ ...." ಎಂದು ಹೇಳಿ ದರ್ಭೆಗಳಿಂದ ನೀರನ್ನು ನಾಲ್ಕೂ ಕಡೆಗಳಲ್ಲಿಯೂ ಪ್ರೋಕ್ಷಿಸಬೇಕು. ಆಮೇಲೆ ಕೈಜೋಡಿಸಿ ನಿಂತು **"ಸ್ವಸ್ತ್ಯ- ಯನಂ ...."** ಇತ್ಯಾದಿ ಮಂತ್ರಗಳನ್ನು ಹೇಳಿ ಕೊನೆಗೆ ನೆಲದ ಮೇಲೆ ಅಂಗುಷ್ಠ ತರ್ಜನೀಗಳನ್ನು ಚಾಚಿ ಇಟ್ಟು ಪ್ರಾದೇಶಮಾಡಬೇಕು.

Scanned by CamScanner

॥ ಅಗ್ನ್ಯುತ್ತಾರಣಂ ॥

ದೇಶಕಾಲೌ ಸ್ಮೃತ್ವಾ ಅಸ್ಯಾಃ ಪ್ರತಿಮಾಯಾಃ ಘನದೋಷಪರಿಹಾರಾರ್ಥಂ ಅಗ್ನ್ಯುತ್ತಾರಣಂ ಕರಿಷ್ಯೇ ಇತಿ ಸಂಕಲ್ಪ್ಯ ॥ ಅಗ್ನಿಃ ಸಪ್ತಿಮಿತಿ ವರ್ಗೇಣ ಅಗ್ನಿಪದತ್ಯಾಗೇನ ಪಠಿತೇನ ಪುನಃ ಅಗ್ನಿಪದಸಹಿತೇನ ಪಠಿತೇನೈಕಮಾವರ್ತನಂ ಭವತಿ ॥ ಏವಂ ಪಠಿತ್ವಾ ಸಂತತಜಲಧಾರಾಂ ಕುರ್ಯಾತ್ ॥ ಅಗ್ನಿಃ ಸಪ್ತಮಿತಿ ಸಪ್ತರ್ಚಸ್ಯ ಸೂಕ್ತಸ್ಯ ಸೋಚಿಕೋ ವೈಶ್ವಾನರಸ್ತ್ರಿಷ್ಟುಪ್ ಅಗ್ನ್ಯುತ್ತಾರಣೇ ವಿನಿಯೋಗಃ ॥ ಓಂ ಸಪ್ತಿಂವಾಜಂಭರಂದದಾತಿವೀರಂಶ್ರುತ್ಯಂ ಕರ್ಮನಿಷ್ಠಾಂ ॥ ರೋದಸೀವಿಚರತ್ಸಮಂಜನ್ನಾರೀಂವೀರಕುಂಕ್ಷಿಪುರಂಧಿಂ ॥ ಅಪ್ನಸಃಸಮಿದಸ್ತುಭದ್ರಾಮಹೀರೋದಸೀ ಆವಿವೇಶ ॥ ಏಕಂಚೋದಯತ್ಸಮತ್ಸ್ವವೃತ್ರಾಣಿದಯತೇ ಪುರೂಣಿ ॥ ಹತ್ಯಂ ಜರತಃ ಕರ್ಣಮಾವಾದ್ಭ್ಯೋನಿರದಹಜ್ಜರೂಥಂ ॥ ಅತ್ರಿಂಘರ್ಮಉರುಷ್ಯದಂತರ್ನ್ನೃಮೇಧಂ ಪ್ರಜಯಾಸೃಜತ್ಸಂ ॥ ದಾದ್ರವಿಣಂ ವೀರಪೇಶಾಋಷಿಂ ಯಃಸಹಸ್ರಾಸನೋತಿ ॥ ದಿವಿಹವ್ಯಮಾತತಾನ ಧಾಮಾನಿವಿಭೃತಾಪುರುತ್ರಾ ॥ ಉಕ್ಥೈರ್ಋಷಯೋ ವಿಹ್ವಯಂತೇ ನರೋಯಾಮನಿಬಾಧಿತಾಸಃ ॥ ವಯೋ ಅಂತರಿಕ್ಷೇಪತಂತಃ ಸಹಸ್ರಾಪರಿಯಾತಿಗೋನಾಂ ॥ ವಿಶಈಳತೇಮಾನುಷೀರ್ಯಾಮನುಷೋನಹುಷೋವಿಜಾತಾಃ ॥ ಗಾಂಧರ್ವೀಂ ಪಥ್ಯಾಮೃತಸ್ಯ ಗವ್ಯೂತಿರ್ಘೃತಆನಿಷತ್ತಾ ॥ ಬೃಹದ್ವಯುಭವಸ್ತತಕ್ಷುರ್ಮಹಾಮವೋಚಾಮಾಸುವೃಕ್ತಿಂ ॥ ಪ್ರಾವ ಜರಿತಾರಂಯವಿಷ್ಠಮಹಿದ್ರವಿಣಮಾಯಜಸ್ವ ॥

॥ ಅಗ್ನ್ಯುತ್ತಾರಣ ॥

ದೇಶಕಾಲಗಳನ್ನು ಸ್ಮರಿಸಿ, **"ಅಸ್ಯಾಃ ಪ್ರತಿಮಾಯಾಃ .....ಕರಿಷ್ಯೇ"** ಎಂದು ಸಂಕಲ್ಪ ಮಾಡಿ **"ಅಗ್ನಿಃ ಸಪ್ತಿ ...."** ಎಂಬ ಸೂಕ್ತವನ್ನು **'ಅಗ್ನಿ'** ಪದ ರಹಿತ ಒಂದು ಸಲ, ಅಗ್ನಿಪದಸಹಿತ ಒಂದು ಸಲ ಹೇಳಿ ಪ್ರತಿಮೆಗಳ ಮೇಲೆ ನೀರಿನ ಧಾರೆಯನ್ನು ಸುರಿಯಬೇಕು.

Scanned by CamScanner

Scanned with CamScanner

॥ ಅಗ್ನಿಪದಸಹಿತಂ ಸೂಕ್ತಂ ॥ ಓಂ ಅಗ್ನಿಃ ಸಪ್ತಿಂವಾಜಂಭರಂದದಾ-
ತ್ಯಗ್ನಿರ್ವೀರಂಶ್ರುತ್ಯಂ ಕರ್ಮನಿಷ್ಠಾಂ ॥ ಅಗ್ನೀರೋದಸೀವಿಚರತ್ಸಮಂಜನ್ನಗ್ನಿ-
ರ್ನಾರೀಂ ವೀರಕುಕ್ಷಿಂ ಪುರಂಧಿಂ ॥ ಅಗ್ನೇರಪ್ನಸಃ ಸಮಿದಸ್ತು ಭದ್ರಾಗ್ನಿರ್ಮ-
ಹಿರೋದಸೀ ಆವಿವೇಶ ॥ ಅಗ್ನಿರೇಕಂ ಚೋದಯತ್ಸಮಸ್ತ್ವಗ್ನಿರ್ವೃತ್ರಾಣಿ
ದಯತೇ ಪುರೂಣಿ ॥ ಅಗ್ನಿರ್ಹತ್ಯಂಜರತಃ ಕರ್ಣಮಾವಾಗ್ನಿರದ್ಭ್ಯೋನಿರದಹಜ್ಜ-
ರೂಥಂ ॥ ಅಗ್ನಿರತ್ರಿಂಘರ್ಮಉರುಷ್ಯದಂತರಗ್ನಿರ್ನೃಮೇಧಂಪ್ರಜಯಾಸೃಜತ್ಸಂ ॥
ಅಗ್ನಿರ್ದಾದ್ರವಿಣಂ ವೀರಪೇಶಾ ಅಗ್ನಿರ್ಋಷಿಂ ಯಃಸಹಾಸ್ರಾಸನೋತಿ ॥ ಅಗ್ನಿ-
ರ್ದಿವಿಹವ್ಯಮಾತತಾನಾಗ್ನೇರ್ಧಾಮಾನಿವಿಭೃತಾಪುರುತ್ರಾ ॥ ಅಗ್ನಿಮುಕ್ಥೈರ್ಋ-
ಷಯೋವಿಹ್ವಯಂತೇಗ್ನಿಂ ನರೋಯಾಮನಿಬಾಧಿತಾಸಃ ಅಗ್ನಿಂ ವಯೋ
ಅಂತರಿಕ್ಷೇ ಪತಂತೋಗ್ನಿಃ ಸಹಸ್ರಾಪರಿಯಾತಿಗೋನಾಂ ॥ ಅಗ್ನಿಂ ವಿಶಈಳತೇ
ಮಾನುಷೀರ್ಯಾ ಅಗ್ನಿಂಮನುಷೋ ನಹುಷೋವಿಜಾತಾಃ ॥ ಅಗ್ನಿರ್ಗಾಂಧರ್ವೀಂ
ಪಥ್ಯಾಮೃತಸ್ಯಾಗ್ನೇರ್ಗವ್ಯೂತಿರ್ಘೃತ ಆನಿಷತ್ತಾ ॥ ಅಗ್ನಯೇ ಬ್ರಹ್ಮ ಋಭವಸ್ತ-
ತಕ್ಷುರಗ್ನಿಂ ಮಹಾಮವೋಚಾಮಾಸುವೃಕ್ತಿಂ ॥ ಅಗ್ನೇ ಪ್ರಾವಜರಿತಾರಂಯ-
ವಿಷ್ಠಾಗ್ನೇ ಮಹಿದ್ರವಿಣಮಾಯಜಸ್ವ ॥ ಅನಂತರಂ ಪ್ರಾಣಪ್ರತಿಷ್ಠಾಂ
ಕುರ್ಯಾತ್ ॥

॥ ಪ್ರಾಣಪ್ರತಿಷ್ಠಾ ॥

ಅಸ್ಯಾಂ ಪ್ರತಿಮಾಯಾಂ ದೇವಕಲಾಸಾನ್ನಿಧ್ಯಾರ್ಥಂ ಪ್ರಾಣಪ್ರತಿಷ್ಠಾಂ
ಕರಿಷ್ಯೇ ॥ ಅಸ್ಯ ಶ್ರೀಪ್ರಾಣಪ್ರತಿಷ್ಠಾ ಮಂತ್ರಸ್ಯ ಬ್ರಹ್ಮವಿಷ್ಣುಮಹೇಶ್ವರಾ

॥ ಪ್ರಾಣಪ್ರತಿಷ್ಠೆ ॥

"ಅಸ್ಯಾಂ ಪ್ರತಿಮಾಯಾಂ..." ಎಂದು ಸಂಕಲ್ಪ ಮಾಡಿ **"ಅಸ್ಯ ಶ್ರೀ..."** ಎಂಬಲ್ಲಿಂದ **"ಜೀವೇಮ ಶರದಃ ಶತಂ"** ಎಂಬಲ್ಲಿ ವರೆಗೆ ಪ್ರತಿಮೆಯ ಹೃದಯವನ್ನು ಮುಟ್ಟಿಕೊಂಡು ಹೇಳಬೇಕು. ಬಳಿಕ ಕಣ್ಣುಗಳಿಗೆ ತುಪ್ಪ ಹಚ್ಚಿ ನೇತ್ರೋನ್ಮೀಲನ ಮಾಡಬೇಕು.

Scanned by CamScanner

Scanned with CamScanner

ಋಷಯಃ ॥ ಋಗ್ಯಜುಸ್ಸಾಮಾಥರ್ವಾಣಿ ಛಂಧಾಸಿ ॥ ಕ್ರಿಯಾಮಯವಪುಃ ಪ್ರಾಣಾಖ್ಯಾ ದೇವತಾ ॥ ಆಂ ಬೀಜಂ ॥ ಹ್ರೀಂ ಶಕ್ತಿಃ ॥ ಕ್ರೌಂ ॥ ಕೀಲಕಂ ॥ ಅಸ್ಯಾಂ ಪ್ರತಿಮಾಯಾಂ ಪ್ರಾಣಪ್ರತಿಷ್ಠಾಪನೇ ವಿನಿಯೋಗಃ ॥ ಪ್ರತಿಮಾಯಾಂ ಹೃದಿ ಸ್ಪೃಶೇತ್ । ಓಂ ಆಂ ಹ್ರೀಂ ಕ್ರೌಂ ಅಂ ಯಂ ರಂ ಲಂ ವಂ ಶಂ ಸಂ ಹಂ ಳಂ ಕ್ಷಂ ಅಃ ಅಸ್ಯಾಂ ಪ್ರತಿಮಾಯಾಂ ಪ್ರಾಣಾಸ್ತಿಷ್ಠಂತು ॥ ಪುನಃ ಆಂ ಹ್ರೀಂ ಕ್ರೌಂ ...... ಅಸ್ಯಾಂ ಪ್ರತಿಮಾಯಾಂ ಸರ್ವೇಂದ್ರಿಯಾಣಿ ಶ್ರೋತ್ರ-ತ್ವಕ್ಚಕ್ಷುರ್ಜಿಹ್ವಾಘ್ರಾಣವಾಕ್ಪಾಣಿಪಾದಪಾಯೂಪಸ್ಥಾನಿ ಇಹೈವಾಗತ್ಯ ಸುಖಂ ಚಿರಂ ತಿಷ್ಠಂತು ಸ್ವಾಹಾ ॥ ಓಂ ಅಸುನೀತೇಪುನರಸ್ಮಾಸುಚಕ್ಷುಃ ಪುನಃ ಪ್ರಾಣ-ಮಿಹನೋಧೇಹಿಭೋಗಂ ॥ ಜ್ಯೋಕ್ಪಶ್ಯೇಮಸೂರ್ಯಮುಚ್ಚರಂತಮನುಮತೇ-ಮೃಳಯಾನಃ ಸ್ವಸ್ತಿ ॥ ಗರ್ಭಾಧಾನಾದಿಪಂಚದಶಸಸ್ಕಾರಸಿದ್ಧ್ಯರ್ಥಂ ಪಂಚದಶಪ್ರಣ-ವಾವೃತ್ತೀಃ ಕರಿಷ್ಯೇ ॥ ಓಂ ತಚ್ಚಕ್ಷುರ್ದೇವಹಿತಂಶುಕ್ರಮುಚ್ಚರತ್ ॥ ಪಶ್ಯೇಮ ಶರದಃ ಶತಂ ಜೀವೇಮ ಶರದಃ ಶತಂ ॥ ದೇವಸ್ಯಾಜ್ಯೇನ ನೇತ್ರೋನ್ಮೀಲನಂ ಕೃತ್ವಾ ಪಂಚೋಪಚಾರಪೂಜನಂ ಕುರ್ಯಾತ್ ॥

॥ ಗ್ರಹಸ್ಥಾಪನಂ ॥

ಹಸ್ತಮಾತ್ರಾವರಂ ಸ್ಥಂಡಿಲಂ ಸಂಸ್ಕೃತ್ಯ ಅಗ್ನಿಪ್ರತಿಷ್ಠಾಪನಾಂತಂ ಕರ್ಮ-ಕೃತ್ವಾ ॥ ಗ್ರಹವೇದ್ಯಾಂ ವಸ್ತ್ರೇ ಅಷ್ಟದಲಂ ಪದ್ಮಂ ಗಂಧಾದಿನಾಕೃತ್ವಾ ॥ ಪ್ರಣವಸ್ಯ ಪರಬ್ರಹ್ಮಋಷಿಃ ಪರಮಾತ್ಮಾ ದೇವತಾ ದೈವೀಗಾಯತ್ರೀ ಛಂದಃ ॥

ಗ್ರಹಸ್ಥಾಪನೆ:- ಸ್ಥಾಲೀಪಾಕದಲ್ಲಿ ಹೇಳಿದಂತೆ ಸ್ಥಂಡಿಲ ಸಂಸ್ಕಾರ ಅಗ್ನಿ-ಪ್ರತಿಷ್ಠಾಪನಪರ್ಯಂತ ಕರ್ಮಗಳನ್ನು ಮಾಡಿ ರಂಗವಲ್ಲಿಯಿಂದ ನವಗ್ರಹಮಂಡಲ (ಅಷ್ಟದಲ ಪದ್ಮ)ವನ್ನು ಮಾಡಿ ಅದರ ಮೇಲೆ ಮುಂದೆ ಹೇಳಿದಂತೆ ಸೂರ್ಯನೇ ಮುಂತಾಗಿ ನವಗ್ರಹಗಳನ್ನು ಆಯಾ ಮಂತ್ರವನ್ನು ಹೇಳುತ್ತ ಆಯಾ ದಿಕ್ಕಿನಲ್ಲಿ ಪ್ರತಿಷ್ಠಾಪಿಸುವುದು. "**ಪ್ರಣವಸ್ಯ ಪರಬ್ರಹ್ಮ..ವಿನಿಯೋಗಃ**" ಎಂದು ಆರಂಭದಲ್ಲಿ ಹೇಳಬೇಕು.

Scanned by CamScanner

ವ್ಯಾಹೃತೀನಾಂ ಕ್ರಮೇಣ ಜಮದಗ್ನಿಭರದ್ವಾಜಭೃಗುಋಷಯಃ ಅಗ್ನಿವಾಯುಸೂರ್ಯಾದೇವತಾಃ ದೈವೀಗಾಯತ್ರೀ ದೈವೀಉಷ್ಣಿಗ್ ದೈವೀಬೃಹತ್ಯಶ್ಛಂದಾಂಸಿ ಸೂರ್ಯಾದ್ಯಾವಾಹನೇ ವಿನಿಯೋಗಃ ॥

ಗ್ರಹಪೀಠಸ್ಯ ಮಧ್ಯೇ ವರ್ತುಲೇ ದ್ವಾದಶಾಂಗುಲೇ ಪ್ರಾಙ್ಮುಖಂ ಸೂರ್ಯಂ ರಕ್ತಪುಷ್ಪಾಕ್ಷತೈಃ ॥ ಆಕೃಷ್ಣೇನೆ ಹಿರಣ್ಯಸ್ತೂಪಃ ಸವಿತಾ ತ್ರಿಷ್ಟುಪ್ ॥ ಸೂರ್ಯಾವಾಹನೇ ವಿನಿಯೋಗಃ ॥ ಓಂ ಆಕೃಷ್ಣೇನರಜಸಾವರ್ತಮಾನೋನಿವೇಶಯನ್ನಮೃತಂ ಮರ್ತ್ಯಂ ಚ ॥ ಹಿರಣ್ಯಯೇನ ಸವಿತಾರಥೇನಾದೇವೋ ಯಾತಿ ಭುವನಾನಿಪಶ್ಯನ್ ॥ ಓಂ ಭೂರ್ಭುವಃ ಸ್ವಃ ಕಲಿಂಗದೇಶೋದ್ಭವ ಕಾಶ್ಯಪಗೋತ್ರ ಸೂರ್ಯೇಹಾಗಚ್ಛೇಹ ತಿಷ್ಠ ॥ ಸೂರ್ಯಾಯ ನಮಃ ಸೂರ್ಯಮಾವಾಹಯಾಮಿತಿ ಸೂರ್ಯಂ ಸ್ಥಾಪಯೇತ್ ॥ ೧ ॥ ತತಃ ಆಗ್ನೇಯೇ ಚತುರಸ್ರೇ ಚತುರ್ವಿಂಶಾಂಗುಲೇ ಪ್ರತ್ಯಙ್ಮುಖಂ ಸೋಮಂ ಶ್ವೇತಪುಷ್ಪಾಕ್ಷತೈಃ ॥ ಆಪ್ಯಾಯಸ್ವ ಗೋತಮಃ ಸೋಮೋ ಗಾಯತ್ರೀ ॥ ಸೋಮಾವಾಹನೇ ವಿನಿಯೋಗಃ ॥ ಓಂ ಆಪ್ಯಾಯಸ್ವ ಸಮೇತು ತೇ ವಿಶ್ವತಃ ಸೋಮ ವೃಷ್ಣ್ಯಂ ॥ ಭವಾವಾಜಸ್ಯಸಂಗಥೇ ॥ ಓಂ ಭೂರ್ಭುವಃ ಸ್ವಃ ಯಮುನಾತೀರೋದ್ಭವ ಆತ್ರೇಯಸಗೋತ್ರ ಸೋಮೇಹಾಗಚ್ಛೇಹ ತಿಷ್ಠೇತಿ ಸ್ಥಾಪಯೇತ್ ॥ ೨ ॥ ತತೋ ದಕ್ಷಿಣೇ ತ್ರಿಕೋಣೇ ತ್ರ್ಯಂಗುಲೇ ಮಂಡಲೇ ದಕ್ಷಿಣಾಭಿಮುಖಂ ಭೌಮಂ ರಕ್ತಪುಷ್ಪಾಕ್ಷತೈಃ । ಅಗ್ನಿರ್ಮೂರ್ಧಾ ವಿರೂಪೋಂಗಾರಕೋ ಗಾಯತ್ರೀ । ಅಂಗಾರಕಾವಾಹನೇ ವಿನಿಯೋಗಃ ॥ ಓಂ ಅಗ್ನಿರ್ಮೂರ್ಧಾ ದಿವಃ ಕಕುತ್ಪತಿಃ ಪೃಥಿವ್ಯಾ ಅಯಂ ॥ ಅಪಾಂರೇತಾಂಸಿ ಜಿನ್ವತಿ ॥ ಓಂ ಭೂರ್ಭುವಃ ಸ್ವಃ ಅವಂತಿದೇಶೋದ್ಭವ ಭಾರದ್ವಾಜಸಗೋತ್ರ ಭೌಮೇಹಾಗಚ್ಛೇಹತಿಷ್ಠೇತಿ ಸ್ಥಾಪಯೇತ್ ॥ ೩ ॥ ತತ ಐಶಾನ್ಯಾಂ ಬಾಣಾಕಾರೇ ಚತುರಂಗುಲೇ ಮಂಡಲೇ ಉದಙ್ಮುಖಂ ಬುಧಂ ಪೀತಪುಷ್ಪಾಕ್ಷತೈಃ ॥ ಉದ್ಬುಧ್ಯಧ್ವಂ ಬುಧೋಬುಧಸ್ತ್ರಿಷ್ಟುಪ್ ॥ ಬುಧಾವಾಹನೇ ವಿನಿಯೋಗಃ ॥ ಓಂ

Scanned by CamScanner
Scanned with CamScanner

ಉದ್ಬುಧ್ಯಧ್ವಂ ಸಮನಸಃ ಸಖಾಯಃ ಸಮಗ್ನಿಮಿಂಧ್ವಂ ಬಹವಃ ಸನೀಳಾಃ ॥ ದಧಿಕ್ರಾಮಗ್ನಿ ಮುಷಸಂ ಚ ದೇವೀಮಿಂದ್ರಾವತೋಽವಸೇನಿಹ್ವಯೇವಃ ॥ ಓಂ ಭೂರ್ಭುವಃ ಸ್ವಃ ಮಗಧದೇಶೋದ್ಭವ ಆತ್ರೇಯಸಗೋತ್ರ ಬುಧೇಹಾಗಚ್ಛೇಹತಿಷ್ಠೇತಿ ಸ್ಥಾಪಯೇತ್ ॥ ೪ ॥ ತತ ಉತ್ತರೇ ದೀರ್ಘಚತುರಸ್ರೇ ಮಂಡಲೇ ಉದಙ್ಮುಖಂ ಬೃಹಸ್ಪತಿಂ ಪೀತಪುಷ್ಪಾಕ್ಷತೈಃ ॥ ಬೃಹಸ್ಪತೇ ಗೃತ್ಸಮದೋ ಬೃಹಸ್ಪತಿಸ್ತ್ರಿಷ್ಟುಪ್ ॥ ಬೃಹಸ್ಪತ್ಯಾವಾಹನೇ ವಿನಿಯೋಗಃ ॥ ಓಂ ಬೃಹಸ್ಪತೇ ಅತಿಯದರ್ಯೋ ಅರ್ಹಾದ್ದ್ಯುಮದ್ವಿಭಾತಿ ಕ್ರತುಮಜ್ಜನೇಷು ॥ ಯದ್ದೀದಯಚ್ಛವಸಋತಪ್ರಜಾತತದಸ್ಮಾಸುದ್ರವಿಣಂ ಧೇಹಿ ಚಿತ್ರಂ ॥ ಓಂ ಭೂರ್ಭುವಃ ಸ್ವಃ ಸಿಂಧುದೇಶೋದ್ಭವಾಂಗಿರಸಗೋತ್ರ ಬೃಹಸ್ಪತೇ ಇಹಾಗಚ್ಛೇಹ ತಿಷ್ಠೇತಿ ಸ್ಥಾಪಯೇತ್ ॥ ೫ ॥ ತತಃ ಪೂರ್ವೇ ಪಂಚಕೋಣೇ ನವಾಂಗುಲೇ ಮಂಡಲೇ ಪ್ರಾಙ್ಮುಖಂ ಶುಕ್ರಂ ಶುಕ್ಲಪುಷ್ಪಾಕ್ಷತೈಃ ॥ ಶುಕ್ರಃ ಪರಾಶರಃ ಶುಕ್ರೋ ದ್ವಿಪದಾವಿರಾಟ್ ॥ ಶುಕ್ರಾವಾಹನೇ ವಿನಿಯೋಗಃ ॥ ಓಂ ಶುಕ್ರಃಶುಶುಕ್ವಾ ಉಷೋ ನ ಜಾರಃ ಪಪ್ರಾಸಮೀಚೀದಿವೋನಜ್ಯೋತಿಃ ॥ ಓಂ ಭೂರ್ಭುವಃ ಸ್ವಃ ಭೋಜಕಟಕ ದೇಶೋದ್ಭವ ಭಾರ್ಗವಸಗೋತ್ರ ಶುಕ್ರೇಹಾಗಚ್ಛೇಹತಿಷ್ಠೇತಿ ಸ್ಥಾಪಯೇತ್ ॥ ೬ ॥ ತತಃ ಪಶ್ಚಿಮೇಧನುರಾಕಾರೇ ದ್ವ್ಯಂಗುಲೇ ಮಂಡಲೇ ಪ್ರತ್ಯಙ್ಮುಖಂ ಶನಿಂ ಕೃಷ್ಣ ಪುಷ್ಪಾಕ್ಷತೈಃ ॥ ಶಮಗ್ನಿರಿರಿಂಬಠಿಃ ಶನಿರುಷ್ಣಿಕ್ ॥ ಶನ್ಯಾವಾಹನೇ ವಿನಿಯೋಗಃ ॥ ಓಂ ಶಮಗ್ನಿರಗ್ನಿಭಿಃ ಕರಚ್ಛನ್ನಸ್ತಪತು ಸೂರ್ಯಃ ॥ ಶಂವಾತೋ ವಾತ್ವರಪಾಅಪಸ್ರಿಧಃ ॥ ಓಂ ಭೂರ್ಭುವಃ ಸ್ವಃ ಸೌರಾಷ್ಟ್ರದೇಶೋದ್ಭವ ಕಾಶ್ಯಪಗೋತ್ರ ಶನೈಶ್ಚರೇಹಾಗಚ್ಛೇಹತಿಷ್ಠೇತಿ ಸ್ಥಾಪಯೇತ್ ॥ ೭ ॥ ತತೋ ನೈರ್ಋತ್ಯೇ ಶೂರ್ಪಾಕಾರೇ ದ್ವಾದಶಾಂಗುಲೇ ಮಂಡಲೇ ದಕ್ಷಿಣಾಭಿಮುಖಂ ರಾಹುಂ ಕೃಷ್ಣಪುಷ್ಪಾಕ್ಷತೈಃ ॥ ಕಯಾನೋ ವಾಮದೇವೋ ರಾಹುರ್ಗಾಯತ್ರೀ ರಾಹ್ವಾವಾಹನೇ ವಿನಿಯೋಗಃ ॥ ಓಂ ಕಯಾನಶ್ಚಿತ್ರ ಆಭುವದೂತೀಸದಾವೃಧಃಸಖಾ ॥ ಕಯಾ ಶಚಿಷ್ಠಯಾ

Scanned by CamScanner

ವೃತಾ ॥ ಓಂ ಭೂರ್ಭುವಃ ಸ್ವಃ ರಾಠಿನಾಪುರೋದ್ಭವ ಪೈಠೀನಸಗೋತ್ರ ರಾಹೋ ಇಹಾಗಚ್ಛೇಹ ತಿಷ್ಠ ಇತಿ ಸ್ಥಾಪಯೇತ್ ॥ ೮ ॥ ತತೋ ವಾಯವ್ಯೇ ಧ್ವಜಾಕಾರೇ ಷಡಂಗುಲೇ ಮಂಡಲೇ ದಕ್ಷಿಣಾಭಿಮುಖಂ ಕೇತುಂ ಧೂಮ್ರಪುಷ್ಪಾಕ್ಷತೈಃ ॥ ಕೇತುಂ ಕೃಣ್ವನ್ ಮಧುಚ್ಛಂದಾಃ ಕೇತುರ್ಗಾಯತ್ರೀ ॥ ಕೇತ್ವಾವಾಹನೇ ವಿನಿಯೋಗಃ ॥ ಓಂ ಕೇತುಂಕೃಣ್ವನ್ನಕೇತವೇಪೇಶೋಮರ್ಯಾ- ಅಪೇಶಸೇ ॥ ಸಮುಷದ್ಭಿರಜಾಯಥಾಃ ॥ ಓಂ ಭೂರ್ಭುವಃ ಸ್ವಃ ಅಂತರ್ವೇದಿ- ಸಮುದ್ಭವ ಜೈಮಿನಿಸಗೋತ್ರ ಕೇತೋ ಇಹಾಗಚ್ಛೇಹತಿಷ್ಠ ॥ ಇತಿ ಸ್ಥಾಪ- ಯೇತ್ ॥ ಯಥೋಕ್ತ ಕುಸುಮತಂಡುಲಾಭಾವೇ ಯಥಾಲಾಭಮುಪಪನ್ನೈಃ ಕುಸುಮತಂಡುಲೈಃ ಸ್ಥಾಪಯೇತ್ ॥

ಅಥ ಪ್ರತ್ಯಧಿದೇವತಾಃ:- ತ್ರ್ಯಂಬಕಂ ವಸಿಷ್ಠೋ ರುದ್ರೋನುಷ್ಟುಪ್ ರುದ್ರಾವಾಹನೇ ವಿನಿಯೋಗಃ ॥ ಓಂ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ ॥ ಉರ್ವಾರುಕಮಿವ ಬಂಧನಾನ್ ಮೃತ್ಯೋರ್ಮುಕ್ಷೀಯ- ಮಾಮೃತಾತ್ ॥ ಓಂ ಭೂರ್ಭುವಃ ಸ್ವಃ ಸೂರ್ಯದಕ್ಷಿಣಪಾರ್ಶ್ವೇ ಈಶ್ವರೇ- ಹಾಗಚ್ಛೇಹತಿಷ್ಠ ॥ ೧ ॥ ಗೌರೀರ್ಮಿಮಾಯ ದೀರ್ಘತಮಾ ಉಮಾಜಗತೀ ॥ ಉಮಾವಾಹನೇ ವಿನಿಯೋಗಃ ॥ ಓಂ ಗೌರೀರ್ಮಿಮಾಯಸಲಿಲಾನಿತಕ್ಷತ್ಯೇಕ- ಪದೀ ದ್ವಿಪದೀ ಸಾ ಚತುಷ್ಪದೀ ॥ ಅಷ್ಟಾಪದೀ ನವಪದೀ ಬಭೂವುಷೀ ಸಹಸ್ರಾಕ್ಷರಾಪರಮೇವ್ಯೋಮನ್ ॥ ಓಂ ಭೂರ್ಭುವಃ ಸ್ವಃ ಉಮೇಹಾ- ಗಚ್ಛೇಹತಿಷ್ಠೇತಿ ಸೋಮದಕ್ಷಿಣಪಾರ್ಶ್ವೇ ಉಮಾಂ .....॥ ೨ ॥ ಯದ- ಕ್ರಂದೋದೀರ್ಘತಮಾಃ ಸ್ಕಂದಃ ತ್ರಿಷ್ಟುಪ್ ॥ ಸ್ಕಂದಾವಾಹನೇ ವಿನಿಯೋಗಃ ॥

ಪ್ರತ್ಯಧಿದೇವತೆಗಳ ಆವಾಹನೆ:- 1. ಈಶ್ವರ-ಸೂರ್ಯನ ದಕ್ಷಿಣದಲ್ಲಿ, 2. ಗೌರೀ-ಸೋಮನ ದಕ್ಷಿಣದಲ್ಲಿ, 3. ಸ್ಕಂದ-ಅಂಗಾರಕನ 4. ನಾರಾಯಣ-ಬುಧನ. 5. ಬ್ರಹ್ಮಾಬೃಹಸ್ಪತಿಯ. 6. ಇಂದ್ರ-ಶುಕ್ರನ 7. ಯಮ-ಶನೈಶ್ಚರನ ದಕ್ಷಿಣದಲ್ಲಿ, 8.ಕಾಲ-ರಾಹುವಿನ ದಕ್ಷಿಣದಲ್ಲಿ, 9. ಚಿತ್ರಗುಪ್ತ-ಕೇತುವಿನ ದಕ್ಷಿಣದಲ್ಲಿ.

Scanned by CamScanner
Scanned with CamScanner

ಓಂ ಯದಕ್ರಂದಃ ಪ್ರಥಮಂ ಜಾಯಮಾನಂ ಉದ್ಯಂತ್ಸಮುದ್ರಾದುತವಾ-ಪುರೀಷಾತ್ ॥ ಶ್ಯೇನಸ್ಯಪಕ್ಷಾಹರಿಣಸ್ಯಬಾಹೂಽಉಪಸ್ತುತ್ಯಂ ಮಹಿಜಾತಂತೇ ಅರ್ವನ್ ॥ ಓಂ ಭೂರ್ಭುವಃ ಸ್ವಃ ಸ್ಕಂದೇಹಾಗಚ್ಛೇಹತಿಷ್ಠೇತಿ ಭೌಮದಕ್ಷಿಣ-ಪಾರ್ಶ್ವೇ ಸ್ಕದಂ ....॥ ೩ ॥ ವಿಷ್ಣೋರ್ನುಕಂ ದೀರ್ಘತಮಾ ನಾರಾಯಣ-ಸ್ತ್ರಿಷ್ಟುಪ್ ॥ ನಾರಾಯಣಾವಾಹನೇ ವಿನಿಯೋಗಃ ॥ ಓಂ ವಿಷ್ಣೋರ್ನುಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾ ನಿವಿಮಮೇರಜಾಂಸಿ ॥ ಯೋಽ-ಅಸ್ಕಭಾಯದುತ್ತರಂ ಸಧಸ್ಥಂ ವಿಚಕ್ರಮಾಣಸ್ತ್ರೇಧೋರುಗಾಯಃ ॥ ಓಂ ಭೂರ್ಭುವಃ ಸ್ವಃ ನಾರಾಯಣೇಹಾಗಚ್ಛೇಹತಿಷ್ಠೇತಿ ಬುಧದಕ್ಷಿಣಪಾರ್ಶ್ವೇ ನಾರಾಯಣಂ ...... ॥ ೪ ॥ ಬ್ರಹ್ಮಜಜ್ಞಾನಂ ವಾಮದೇವೋ ಬ್ರಹ್ಮಾ-ತ್ರಿಷ್ಟುಪ್ ॥ ಬ್ರಹ್ಮಾವಾಹನೇ ವಿನಿಯೋಗಃ ॥ ಓಂ ಬ್ರಹ್ಮಜಜ್ಞಾನಂ ಪ್ರಥಮಂ ಪುರಸ್ತಾದ್ವಿಸೀಮತಃ ಸುರುಚೋವೇನಽಆವಃ ॥ ಸಬುಧ್ನ್ಯಾ ಉಪಮಾ ಅಸ್ಯವಿಷ್ಠಾಃ ಸತಶ್ಚಯೋನಿಮಸತಶ್ಚವಿವಃ ॥ ಓಂ ಭೂರ್ಭುವಃ ಸ್ವಃ ಬ್ರಹ್ಮನ್ನಿಹಾಗಚ್ಛೇಹ ತಿಷ್ಠೇತಿ ಬೃಹಸ್ಪತಿ ದಕ್ಷಿಣಪಾರ್ಶ್ವೇ ಬ್ರಹ್ಮಾಣಂ .....॥ ೫ ॥ ಇಂದ್ರಂ ವೋ ಮಧುಚ್ಛಂದಾ ಇಂದ್ರೋ ಗಾಯತ್ರೀ ॥ ಇಂದ್ರಾ-ವಾಹನೇ ವಿನಿಯೋಗಃ ॥ ಓಂ ಇಂದ್ರಂ ವೋ ವಿಶ್ವತಸ್ಪರಿ ಹವಾಮಹೇ ಜನೇಭ್ಯಃ । ಅಸ್ಮಾಕಮಸ್ತು ಕೇವಲಃ ॥ ಓಂ ಭೂರ್ಭುವಃ ಸ್ವಃ ಇಂದ್ರೇ-ಹಾಗಚ್ಛೇಹತಿಷ್ಠೇತಿ ಶುಕ್ರದಕ್ಷಿಣಪಾರ್ಶ್ವೇ ಇಂದ್ರಂ ...॥ ೬ ॥ ಯಮಾಯ ಮಧುಮತ್ತಮೇತಿ ಯಮೋ ಯಮೋಽನುಷ್ಟುಪ್ ಯಮಾವಾಹನೇ ವಿನಿ-ಯೋಗಃ ॥ ಓಂ ಯಮಾಯಮಧುಮತ್ತಮಂರಾಜ್ಞೇಹವ್ಯಂಜುಹೋತನ ॥ ಇದಂ ನಮಋಷಿಭ್ಯಃ ಪೂರ್ವಜೇಭ್ಯಃ ಪೂರ್ವೇಭ್ಯಃ ಪಥಿಕೃದ್ಭ್ಯಃ ॥ ಓಂ ಭೂರ್ಭುವಃ ಸ್ವಃ ಯಮೇಹಾಗಚ್ಛೇಹ ತಿಷ್ಠೇತಿ ಶನೈಶ್ಚರದಕ್ಷಿಣಪಾರ್ಶ್ವೇ ಯಮಂ .... ॥ ೭ ॥ ಪರಂ ಮೃತ್ಯೋರಿತ್ಯಸ್ಯ ಸಂಕುಸುಕೋಕಾಲಸ್ತ್ರಿಷ್ಟುಪ್ ॥

Scanned by CamScanner

ಕಾಲಾವಾಹನೇ ವಿನಿಯೋಗಃ ॥ ಓಂ ಪರಂಮೃತ್ಯೋ ಅನುಪರೇಹಿ-ಪಂಥಾಂಯಸ್ತೇಸ್ವಇತರೋ ದೇವಯಾನಾತ್ ॥ ಚಕ್ಷುಷ್ಮತೇಶೃಣ್ವತೇ ತೇಽಬ್ರವೀಮಿ-ಮಾನಃ ಪ್ರಜಾಂರೀರಿಷೋಮೋತವೀರಾನ್ ॥ ಓಂ ಭೂರ್ಭುವಃ ಸ್ವಃ ಕಾಲೇ-ಹಾಗಚ್ಛೇಹ ತಿಷ್ಠೇತಿ ರಾಹುದಕ್ಷಿಣಪಾರ್ಶ್ವೇಕಾಲಂ.... ॥ ೮ ॥ ಉಷೋವಾಜಂ ಪ್ರುಷ್ಣಶ್ಚಿತ್ರಗುಪ್ತೋ ಬೃಹತೀ ॥ ಚಿತ್ರಗುಪ್ತಾವಾಹನೇ ವಿನಿಯೋಗಃ ॥ ಓಂ ಉಷೋವಾಜಂಹಿವಂ ಸ್ವಯಶ್ಚಿ ತ್ರೋಮಾನುಷೇಜನೇ ॥ ತೇನಾವಹಸುಕೃತೋ ಅಧ್ವರಾಂ ಉಪಯೇತ್ವಾಗೃಣಂತಿ ವಹ್ನಯಃ ॥ ಓಂ ಭೂರ್ಭುವಃ ಸ್ವಃ ಚಿತ್ರಗುಪ್ತೇಹಾಗಚ್ಛೇಹತಿಷ್ಠೇತಿ ಕೇತುದಕ್ಷಿಣಪಾರ್ಶ್ವೇ ಚಿತ್ರಗುಪ್ತಂ .... ॥

ತತಃ ಶುಕ್ಲಪುಷ್ಪಾಕ್ಷತೈಃ ಸರ್ವಾಃ ಪ್ರತ್ಯಧಿದೇವತಾಃ ಸ್ಥಾಪಯೇತ್ ॥ ಅಗ್ನಿಂ ದೂತಂ ಮೇಧಾತಿಥಿರಗ್ನಿರ್ಗಾಯತ್ರೀ ॥ ಅಗ್ನ್ಯಾವಾಹನೇ ವಿನಿಯೋಗಃ ॥ ಓಂ ಅಗ್ನಿಂದೂತಂವೃಣೀಮಹೇಹೋತಾರಂ ವಿಶ್ವವೇದಸಂ ॥ ಅಸ್ಯಯಜ್ಞಸ್ಯಸುಕ್ರತುಂ ॥ ಓಂ ಭೂರ್ಭುವಃ ಸ್ವಃ ಅಗ್ನೇಹಾಗಚ್ಛೇಹತಿಷ್ಠೇತಿ ಸೂರ್ಯ ವಾಮಪಾರ್ಶ್ವೇ ಅಗ್ನಿಂ ..... ॥ ೧ ॥ ಅಪ್ಸುಮೇಧಾತಿಥಿರಾಪೋನುಷ್ಟುಪ್ ॥ ಅಬಾವಾಹನೇ ವಿನಿಯೋಗಃ ॥ ಓಂ ಅಪ್ಸುಮೇಸೋಮೋಅಬ್ರವೀದಂತರ್ವಿ-ಶ್ವಾನಿಭೇಷಜಾ ॥ ಅಗ್ನಿಂಚವಿಶ್ವಶಂಭುವಮಾಪಶ್ಚವಿಶ್ವಭೇಷಜೀಃ ॥ ಓಂ ಭೂರ್ಭುವಃ ಸ್ವಃ ಆಪ ಇಹಾಗಚ್ಛೇಹ ತಿಷ್ಠೇತಿ ಸೋಮವಾಮಪಾರ್ಶ್ವೇ ಅಪಃ ॥ ೨ ॥ ಸ್ಯೋನಾ ಮೇಧಾತಿಥಿರ್ಭೂಮಿರ್ಗಾಯತ್ರೀ ಭೂಮ್ಯಾವಾಹನೇ ವಿನಿಯೋಗಃ ಓಂ ಸ್ಯೋನಾಪೃಥಿವೀ ಭವಾನೃಕ್ಷರಾನಿವೇಶನೀ ॥ ಯಚ್ಛಾನಃ-ಶರ್ಮಸಪ್ರಥಃ ಓಂ ಭೂರ್ಭುವಃ ಸ್ವಃ ಭೂಮೇ ಇಹಾಗಚ್ಛೇಹ ತಿಷ್ಠೇತಿ

ಹಿಂದೆ ಸ್ಥಾಪಿಸಿದ ಗ್ರಹಗಳ ಎಡಭಾಗಗಳಲ್ಲಿ ಕ್ರಮವಾಗಿ:- 1. ಅಗ್ನಿ, 2. ಅಪಃ 3. ಭೂಮಿ, 4. ವಿಷ್ಣು, 5. ಇಂದ್ರ, 6. ಇಂದ್ರಾಣೀ, 7. ಪ್ರಜಾಪತಿ, 8. ಸರ್ಪಗಳು, 9. ಬ್ರಹ್ಮಾ - ಈ ದೇವತೆಗಳನ್ನು ಪ್ರತಿಷ್ಠಾಪಿಸಬೇಕು.

Scanned by CamScanner

ಭೌಮವಾಮಪಾರ್ಶ್ವೇ ಭೂಮಿಂ .... ॥ ೩ ॥ ಇದಂ ವಿಷ್ಣುರ್ಮೇಧಾತಿಥಿ-
ರ್ವಿಷ್ಣುರ್ಗಾಯತ್ರೀ ॥ ವಿಷ್ಣ್ವಾವಾಹನೇ ವಿನಿಯೋಗಃ ॥ ಓಂ ಇದಂ
ವಿಷ್ಣುರ್ವಿಚಕ್ರಮೇ ತ್ರೇಧಾನಿದಧೇ ಪದಂ ॥ ಸಮೂಢಮಸ್ಯಪಾಂಸುರೇ ॥
ಓಂ ಭೂರ್ಭುವಃ ಸ್ವಃ ವಿಷ್ಣೋ ಇಹಾಗಚ್ಛೇಹ ತಿಷ್ಠೇತಿ ಬುಧವಾಮಪಾರ್ಶ್ವೇ
ವಿಷ್ಣುಂ ..... ॥ ೪ ॥ ಇಂದ್ರಶ್ರೇಷ್ಠಾನಿ ಗೃತ್ಸಮದ ಇಂದ್ರಸ್ತ್ರಿಷ್ಟುಪ್ ॥
ಇಂದ್ರಾವಾಹನೇ ವಿನಿಯೋಗಃ ॥ ಓಂ ಇಂದ್ರಶ್ರೇಷ್ಠಾನಿದ್ರವಿಣಾನಿಧೇಹಿ ಚಿತ್ತಿಂ
ದಕ್ಷಸ್ಯ ಸುಭಗತ್ವಮಸ್ಮೇ ॥ ಪೋಷಂರಯೀಣಾಮರಿಷ್ಟಿಂ ತನೂನಾಂ
ಸ್ವಾದ್ಮಾನಂ ವಾಚಃ ಸುದಿನತ್ವಮಹ್ನಾಂ ॥ ಓಂ ಭೂರ್ಭುವಃ ಸ್ವಃ ಇಂದ್ರೇಹಾ-
ಗಚ್ಛೇಹ ತಿಷ್ಠೇತಿ ಬೃಹಸ್ಪತಿ ವಾಮಪಾರ್ಶ್ವೇ ಇಂದ್ರಂ..... ॥ ೫ ॥
ಇಂದ್ರಾಣೀ ವೃಷಾಕಪಿರಿಂದ್ರಾಣೀ ಪಂಕ್ತಿಃ ॥ ಇಂದ್ರಾಣ್ಯಾವಾಹನೇ ವಿನಿ-
ಯೋಗಃ ॥ ಓಂ ಇಂದ್ರಾಣೀಮಾಸುನಾರಿಷುಸುಭಗಾಮಹಮಶ್ರವಂ ॥
ನಹ್ಯಸ್ಯಾ ಅಪರಂಚನಜರಸಾಮರತೇಪತಿರ್ವಿಶ್ವಸ್ಮಾದಿಂದ್ರ ಉತ್ತರಃ ॥ ಓಂ
ಭೂರ್ಭುವಃ ಸ್ವಃ ಇಂದ್ರಾಣೀಹಾಗಚ್ಛೇಹ ತಿಷ್ಠೇತಿ ಶುಕ್ರವಾಮಪಾರ್ಶ್ವೇ
ಇಂದ್ರಾಣೀಂ .... ॥ ೬ ॥ ಪ್ರಜಾಪತೇ ಹಿರಣ್ಯಗರ್ಭಃ ಪ್ರಜಾಪತಿಸ್ತ್ರಿಷ್ಟುಪ್ ॥
ಪ್ರಜಾಪತ್ಯಾವಾಹನೇ ವಿನಿಯೋಗಃ ॥ ಓಂ ಪ್ರಜಾಪತೇನತ್ವದೇತಾನ್ಯನ್ಯೋ-
ವಿಶ್ವಾಜಾತಾನಿಪರಿತಾಬಭೂವ ॥ ಯತ್ಕಾಮಾಸ್ತೇ ಜುಹುಮಸ್ತನ್ನೋ ಅಸ್ತು
ವಯಂ ಸ್ಯಾಮಪತಯೋರಯೀಣಾಂ ॥ ಓಂ ಭೂರ್ಭುವಃ ಸ್ವಃ ಪ್ರಜಾಪತೇ
ಇಹಾಗಚ್ಛೇಹ ತಿಷ್ಠೇತಿ ಶನಿವಾಮಪಾರ್ಶ್ವೇಪ್ರಜಾಪತಿಂ ॥ ೭ ॥ ಆಯಂಗೌಃ
ಸಾರ್ಪರಾಜ್ಞೀ ಸರ್ಪಾ ಗಾಯತ್ರೀ ॥ ಸರ್ಪಾವಾಹನೇ ವಿನಿಯೋಗಃ ॥ ಓಂ
ಆಯಂಗೌಃ ಪೃಶ್ನಿರಕ್ರಮೀದಸದನ್ಮಾತರಂಪುರಃ ॥ ಪಿತರಂಚಪ್ರಯನ್ ತ್ಸ್ವಃ ॥
ಓಂ ಭೂರ್ಭುವಃ ಸ್ವಃ ಸರ್ಪಾ ಇಹಾಗಚ್ಛತೇಹತಿಷ್ಠಧ್ವಮಿತಿ ರಾಹುವಾಮ-
ಪಾರ್ಶ್ವೇ ಸರ್ಪಾನ್ ॥ ೮ ॥ ಬ್ರಹ್ಮಣಾ ತೇ ಬ್ರಹ್ಮಯುಜೇತ್ಯಸ್ಯ

Scanned by CamScanner
Scanned with CamScanner

ವಿಶ್ವಾಮಿತ್ರೋ ಬ್ರಹ್ಮಾ ತ್ರಿಷ್ಟುಪ್ ॥ ಬ್ರಹ್ಮಾವಾಹನೇ ವಿನಿಯೋಗಃ ॥ ಓಂ ಬ್ರಹ್ಮಣಾತೇ ಬ್ರಹ್ಮಯುಜಾಯನಜ್ಞಿಹರೀಸಖಾಯಾಸಧಮಾದ ಆಶು ॥ ಸ್ಥಿರಂ ರಥಂ ಸುಖಮಿಂದ್ರಾಧಿತಿಷ್ಠನ್ ಪ್ರಜಾನನ್ವಿದ್ವಾಂ ಉಪಯಾಹಿ ಸೋಮಂ ॥ ಓಂ ಭೂರ್ಭುವಃ ಸ್ವಃ ಬ್ರಹ್ಮನ್ನಿಹಾಗಚ್ಛೇಹ ತಿಷ್ಠೇತಿ ಕೇತುವಾಮಪಾರ್ಶ್ವೇ ಬ್ರಹ್ಮಾಣಂ ಸ್ಥಾಪಯೇತ್ ॥

ತತಃ ಶುಕ್ಲಪುಷ್ಪಾಕ್ಷತೈಃ ಗಣಪತ್ಯಾದಿ ಪಂಚದೇವತಾಃ ಸ್ಥಾಪಯೇತ್ ॥ ಗಣಾನಾಂ ತ್ವಾ ಗೃತ್ಸಮದೋ ಗಣಪತಿರ್ಜಗತೀ ॥ ಗಣಪತ್ಯಾವಾಹನೇ ವಿನಿಯೋಗಃ ॥ ಓಂ ಗಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂಕವೀನಾ-ಮುಪಮಶ್ರವಸ್ತಮಂ ॥ ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತಆನಃಶೃಣ್ವ-ನ್ನೂತಿಭಿಃ ಸೀದಸಾದನಂ ॥ ಓಂ ಭೂರ್ಭುವಃ ಸ್ವಃ ಗಣಪತೇ ಇಹಾಗಚ್ಛೇಹ ತಿಷ್ಠೇತಿ ರಾಹೋರುತ್ತರತೋ ಗಣಪತಿಂ .... ॥ ೧ ॥ ಜಾತವೇದಸೇ ಕಶ್ಯಪೋ ದುರ್ಗಾತ್ರಿಷ್ಟುಪ್ ॥ ದುರ್ಗಾವಾಹನೇ ವಿನಿಯೋಗಃ ಓಂ ಜಾತ-ವೇದಸೇ ಸುನವಾಮ ಸೋಮಮರಾತೀಯತೋನಿದಹಾತಿವೇದಃ ॥ ಸನಃಪರ್ಷ-ದತಿದುರ್ಗಾಣಿವಿಶ್ವಾನಾವೇವ ಸಿಂಧುಂ ದುರಿತಾತ್ಯಗ್ನಿಃ ॥ ಓಂ ಭೂರ್ಭುವಃ ಸ್ವಃ ದುರ್ಗೇ ಇಹಾಗಚ್ಛೇಹ ತಿಷ್ಠೇತಿ ಶನೇರುತ್ತರೋ ದುರ್ಗಾಂ .... ॥ ೨ ॥ ತವ ವಾಯೋ ವ್ಯಶ್ವೋ ವಾಯುರ್ಗಾಯತ್ರೀ ॥ ವಾಯ್ವಾವಾಹನೇ ವಿನಿಯೋಗಃ ॥ ಓಂ ತವವಾಯವೃತಸ್ಪತ್ರೇತ್ವಷ್ಟುರ್ಜಾಮಾತರದ್ಭುತ ॥ ಅವಾಂ-

---

ಬಳಿಕ ಬಿಳಿ ಹೂ ಮತ್ತು ಅಕ್ಷತೆಗಳಿಂದ ಗಣಪತಿ ಮೊದಲಾಗಿ ಐದು ದೇವತೆಗಳನ್ನು:- 1. ಗಣಪತಿ-ರಾಹುವಿನ ಉತ್ತರದಲ್ಲಿ, 2. ದುರ್ಗಾ-ಶನಿಯ ಉತ್ತರದಲ್ಲಿ, 3. ವಾಯು-ರವಿಯ ಉತ್ತರದಲ್ಲಿ, 4. ಆಕಾಶ-ರಾಹುವಿನ ದಕ್ಷಿಣದಲ್ಲಿ, 5. ಅಶ್ವಿನೀ ದೇವತೆಗಳು-ಕೇತುವಿನ ದಕ್ಷಿಣದಲ್ಲಿ ಪ್ರತಿಷ್ಠಾಪಿಸಬೇಕು. ಅಥವಾ ವಿನಾಯಕನೇ ಮೊದಲಾಗಿ ಐದು ದೇವತೆಗಳನ್ನು ಉತ್ತರದಲ್ಲೇ ಸ್ಥಾಪಿಸಬಹುದು. ಬಳಿಕ ಮುಂದೆ ಹೇಳುವ ದೇವತೆಗಳನ್ನು ಸ್ಥಾಪಿಸಬೇಕು. ಉತ್ತರದಲ್ಲಿ ಕ್ಷೇತ್ರಪಾಲನನ್ನೂ ವಾಸ್ತೋಷ್ಪತಿಯನ್ನೂ ಆವಾಹಿಸಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ.

Scanned by CamScanner

Scanned with CamScanner

ಸ್ಯಾವೃಣೀಮಹೇ ॥ ಓಂ ಭೂರ್ಭುವಃ ಸ್ವಃ ವಾಯೋ ಇಹಾಗಚ್ಛೇಹ ತಿಷ್ಠೇತಿ ರವೇರುತ್ತರತೋ ವಾಯುಂ ..... ॥ ೩ ॥ ಆದಿದ್ವತ್ಸ ಆಕಾಶೋ ಗಾಯತ್ರೀ ॥ ಆಕಾಶಾವಾಹನೇ ವಿನಿಯೋಗಃ ॥ ಓಂ ಆದಿತ್ಪ್ರತ್ನಸ್ಯರೇತಸೋಜ್ಯೋತಿಷ್ಪಶ್ಯಂತಿ-ವಾಸರಂ ॥ ಪರೋಯದಿಧ್ಯತೇ ದಿವಾ ॥ ಓಂ ಭೂರ್ಭುವಃ ಸ್ವಃ ಆಕಾಶೇಹಾ-ಗಚ್ಛೇಹ ತಿಷ್ಠೇತಿ ರಾಹೋರ್ದಕ್ಷಿಣೇ ಆಕಾಶಂ ॥ ೪ ॥ ಏಷೋ ಉಷಾಃ ಪ್ರಸ್ಕಣ್ವೋಶ್ವಿನೌ ಗಾಯತ್ರೀ ॥ ಅಶ್ವ್ಯಾವಾಹನೇ ವಿನಿಯೋಗಃ ॥ ಓಂ ಏಷೋ ಉಷಾ ಅಪೂರ್ವ್ಯಾವ್ಯುಚ್ಛತಿಪ್ರಿಯಾ ದಿವಃ ॥ ಸ್ತುಷೇವಾಮಶ್ವಿನಾಬೃಹತ್ ॥ ಓಂ ಭೂರ್ಭುವಃ ಸ್ವಃ ಅಶ್ವಿನಾವಿಹಾಗಚ್ಛತಮಿಹತಿಷ್ಠತಮಿತಿ ಕೇತೋರ್ದಕ್ಷಿಣೇ ಅಶ್ವಿನೌ ॥ ೫ ॥ ಯದ್ವಾ ವಿನಾಯಕಾದೀನ್ ಪಂಚ ಉತ್ತರತಃ ಸ್ಥಾಪ-ಯೇತ್ ॥ ತತೋ ಗ್ರಹ ಪೀಠಗತಾ ವಕ್ಷ್ಯಮಾಣದೇವತಾಃ ಸ್ಥಾಪಯೇತ್ ॥ ಉತ್ತರೇ ಕ್ಷೇತ್ರಾಧಿಪತಿಂ ವಾಸ್ತೋಷ್ಪತಿಂ ಚಾವಾಹಯೇದಿತಿ ಏಕೇ ॥ ಕ್ಷೇತ್ರ-ಸ್ಯಪತಿನಾ ವಾಮದೇವಃ ಕ್ಷೇತ್ರಪಾಲೋನುಷ್ಟುಪ್ ॥ ಕ್ಷೇತ್ರಪಾಲಾವಾಹನೇ ವಿನಿಯೋಗಃ ॥ ಓಂ ಕ್ಷೇತ್ರಸ್ಯಪತಿನಾವಯಂಹಿತೇನೇವಜಯಾಮಸಿ ॥ ಗಾಮಶ್ವಂ ಪೋಷಯಿತ್ನ್ವಾಸನೋಮೃಳಾತೀದೃಶೇ ॥ ಓಂ ಭೂರ್ಭುವಃ ಸ್ವಃ ಕ್ಷೇತ್ರಪಾಲೇಹಾಗಚ್ಛೇಹ ತಿಷ್ಠೇತಿ ಕ್ಷೇತ್ರಪಾಲಂ ॥ ೬ ॥ ವಾಸ್ತೋಷ್ಪತೇ ವಸಿಷ್ಠೋ ವಾಸ್ತೋಷ್ಪತಿಸ್ತ್ರಿಷ್ಟುಪ್ ॥ ವಾಸ್ತೋಷ್ಪತ್ಯಾವಾಹನೇ ವಿನಿಯೋಗಃ ॥ ಓಂ ವಾಸ್ತೋಷ್ಪತೇಪ್ರತಿಜಾನೀಹ್ಯಸ್ಮಾನ್ತ್ಸ್ವಾವೇಶೋ ಅನಮೀವೋ ಭವಾನಃ ॥ ಯತ್ತ್ವೇಮಹೇಪ್ರತಿತನ್ನೋಜುಷಸ್ವಶಂನೋ ಭವ ದ್ವಿಪದೇಶಂ ಚತುಷ್ಪದೇ ॥ ಓಂ ಭೂರ್ಭುವಃ ಸ್ವಃ ವಾಸ್ತೋಷ್ಪತೇ ಇಹಾಗಚ್ಛೇಹ ತಿಷ್ಠೇತಿ ತದುತ್ತರೇ ವಾಸ್ತೋಷ್ಪತಿಂ ಸ್ಥಾಪಯೇತ್ ॥

ತತಃ ಪ್ರಾಗಾದಿದಲಾಗ್ರೇಷು ಇಂದ್ರಾದಿಲೋಕಪಾಲಾನ್ ಪೂರ್ವಾಭಿಮುಖಾನಾವಾಹಯೇತ್ ॥ ತತ್ರ ಮಂತ್ರಾಶ್ಚ ॥ ಇಂದ್ರಂ ವಿಶ್ವಾಜೀತೇಂದ್ರೋ-

Scanned by CamScanner

ನುಷ್ಟುಪ್ ॥ ಪೂರ್ವೇ ಇಂದ್ರಾವಾಹನೇ ವಿನಿಯೋಗಃ ॥ ಓಂ ಇಂದ್ರಂ ವಿಶ್ವಾ ಅವೀವೃಧನ್ ತ್ಸಮುದ್ರವ್ಯ ಚ ಸಂಗಿರಃ ॥ ರಥೀತಮಂರಥೀನಾಂವಾಜಾನಾಂ ಸಪ್ತತಿಂ ಪತಿಂ ॥ ಓಂ ಭೂರ್ಭುವಃ ಸ್ವಃ ಇಂದ್ರೇಹಾಗಚ್ಛೇಹ ತಿಷ್ಠೇತಿ ಪೂರ್ವವತ್ ॥ ೧ ॥ ಏವಮುತ್ತರತ್ರಾಪಿ ॥ ಅಗ್ನಿಂದೂತಂ ಮೇಧಾತಿಥಿರಗ್ನಿ-ರ್ಗಾಯತ್ರೀ ॥ ಅಗ್ನ್ಯಾವಾಹನೇ ವಿನಿಯೋಗಃ ॥ ಓಂ ಅಗ್ನಿಂದೂತಂ ..... ॥ ಓಂ ಭೂರ್ಭುವಃ ಸ್ವಃ ಅಗ್ನೇ .... ॥ ಅಗ್ನಯೇ ನಮಃ ಅಗ್ನಿಂ ಆವಾಹಯಾಮಿ ॥ ೨ ॥ ಯಮಾಯ ಸೋಮಂ ಯಮೋ ಯಮೋನುಷ್ಟುಪ್ ॥ ಯಮಾ .... ॥ ಓಂ ಯಮಾಯ ಸೋಮಂ ಸುನುತ ಯಮಾಯ ಜುಹು-ತಾಹವಿಃ ॥ ಯಮಂ ಹ ಯಜ್ಞೋಗಚ್ಛತ್ಯಗ್ನಿ ದೂತೋ ಅರಂಕೃತಃ ॥ ಓಂ ಭೂರ್ಭು ..... ಯಮೇಹಾ ..... ॥ ದಕ್ಷಿಣೇ ಯಮಂ ಆವಾಹಯಾಮಿ ॥ ೩ ॥ ಮೋಷಣಃ ಕಣ್ವೋ ನಿರ್ಋತಿರ್ಗಾಯತ್ರೀ ॥ ನಿರ್ಋತ್ಯಾವಾ .... ॥ ಓಂ ಮೋಷುಣಃ ಪರಾಪರಾನಿರ್ಋತಿರ್ದುರ್ಹಣಾವಧೀತ್ ॥ ಪದೀಷ್ಟ-ತೃಷ್ಣಯಾ ಸಹ ॥ ಓಂ ಭೂರ್ಭು ..... ನಿರ್ಋತೇಹಾ .... ॥ ತತ್ವಾ-ಯಾಮಿಶ್ಶುನಶ್ಶೇಪೋ ವರುಣಸ್ತ್ರಿಷ್ಟುಪ್ ॥ ವರುಣಾವಾ .... ಓಂ ತತ್ವಾ-ಯಾಮಿ ಬ್ರಹ್ಮಣಾವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ ॥ ಅಹೇಳಮಾನೋವರುಣೇಹಬೋಧ್ಯುರುಶಂ ಸಮಾನ ಆಯುಃ ಪ್ರಮೋಷೀಃ ॥ ಓಂ ಭೂರ್ಭು ... ವರುಣೇಹಾ .... ॥ ತವ ವಾಯೋ ವ್ಯಶ್ವೋ ವಾಯುರ್ಗಾಯತ್ರೀ ॥ ವಾಯ್ವಾವಾ ..... ॥ ಓಂ ತವವಾಯ .... ॥

ಆಮೇಲೆ ಪೂರ್ವದಿಂದ ಆರಂಭಿಸಿ ಆಯಾ ದೇವತೆಯ ಮಂತ್ರಗಳನ್ನು ಹೇಳಿ, 1. ಇಂದ್ರ, 2. ಅಗ್ನಿ, 3. ಯಮ, 4. ನಿಋತಿ 5. ವರುಣ 6. ವಾಯು, 7. ಸೋಮ, 8. ಈಶಾನ ಈ ಎಂಟು ಲೋಕಪಾಲಕರನ್ನು ಆಯಾ ದಿಕ್ಕಿನಲ್ಲಿ ಆವಾಹಿಸಿ, **"ತದಸ್ತು" ಗೃಹಾವ್ಯೈ..."** ಎಂಬ ಮಂತ್ರಗಳಿಂದ ಪ್ರತಿಷ್ಠಾಪಿಸಿ, ಆಯಾ ದೇವತೆಯ ಮಂತ್ರ ಅಥವಾ **"ಸೂರ್ಯಾಯ ನಮಃ"** ಇತ್ಯಾದಿ ನಾಮಮಂತ್ರಗಳಿಂದ ಷೋಡಶೋಪಚಾರ ಪೂಜೆ ಮಾಡಬೇಕು.

Scanned by CamScanner
Scanned with CamScanner

ಓಂ ಭೂರ್ಭುವ .... ವಾಯೋ .... ॥ ಸೋಮೋ ಧೇನುಂ ಗೋತಮಃ ಸೋಮಸ್ತ್ರಿಷ್ಟುಪ್ ॥ ಸೋಮಾವಾ .... ॥ ಓಂ ಸೋಮೋಧೇನುಂ ಸೋಮೋ ಅರ್ವಂತಮಾಶುಂ ಸೋಮೋವೀರಂ ಕರ್ಮಣ್ಯಂ ದದಾತಿ ॥ ಸಾದನ್ಯಂ ವಿದಥ್ಯಂ ಸಭೇಯಂ ಪಿತೃಶ್ರವಣಂ ಯೋ ದದಾಶದಸ್ಮೈ ॥ ಓಂ ಭೂರ್ಭುವ ...... ಸೋಮೇಹಾ ...... ॥ ತಮೀಶಾನಂ ಗೋತಮ ಈಶಾನೋ ಜಗತೀ ॥ ಈಶಾನಾವಾ ... ॥ ಓಂ ತಮೀಶಾನಂ ಜಗತಸ್ತಸ್ಥು-ಷಸ್ಪತಿಂಧಿಯಂಜಿನ್ವಮವಸೇ ಹೂಮಹೇವಯಂ ॥ ಪೂಷಾನೋಯಥಾವೇದ-ಸಾಮಸದ್ವೃಧೇರಕ್ಷಿತಾಪಾಯುರದಬ್ಧಃಸ್ವಸ್ತಯೇ ॥ ಓಂ ಭೂರ್ಭುವ ..... ಈಶಾ-ನೇಹಾ .... ಏವಮೀಶಾನಾಂತಾ ದೇವತಾ ಆವಾಹ್ಯ ॥ ಓಂ ತದಸ್ತುಮಿತ್ರಾ-ವರುಣಾ .... ॥ ಗೃಹಾವೈ .... ॥ ಇತಿ ಪ್ರತಿಷ್ಠಾಪ್ಯೋಕ್ತತತ್ತನ್ಮಂತ್ರೈಃ ಆದಿತ್ಯಾಯ ನಮ ಇತ್ಯಾದಿ ನಾಮಮಂತ್ರೈರ್ವಾ ಷೋಡಶೋಪಚಾರೈಃ ಸಂಪೂಜ್ಯ ॥

ಗೃಹವೇದೀಶಾನಭಾಗೇ ಮಹೀದ್ಯೌಃ ಪೃಥಿವೀಚನ ಇತ್ಯಾದಿಭಿರ್ವಿಧಿನಾ ಕಲಶಸ್ಥಾಪನಂ ಕೃತ್ವಾ ತದುಪರಿ ತತ್ವಾಯಾಮೀತಿ ಮಂತ್ರೇಣ ವರುಣಂ ಸಂಪೂಜ್ಯ ತತ್ರ ಕಲಶೇ ಸಮುದ್ರನದ್ಯಾವಾಹನಂ ಕುರ್ಯಾತ್ ॥ ಸರ್ವೇ

ಗ್ರಹಗಳನ್ನು ಸ್ಥಾಪಿಸಿದ ವೇದಿಯ ಈಶಾನ್ಯ ದಿಕ್ಕಿನಲ್ಲಿ **"ಮಹೀದ್ಯೌಃ"** ಮುಂತಾದ ಮಂತ್ರಗಳಿಂದ ವಿಧಿಪ್ರಕಾರ ಕಲಶ ಸ್ಥಾಪನೆಮಾಡಿ, ವರುಣನನ್ನು ಪೂಜಿಸಿ, ಸಮುದ್ರಾದಿ ಆವಾಹನೆ ಮಾಡಿ, **"ಕಲಶಸ್ಯ ಮುಖೇ"** ಎಂದು ಕಲಶಾಭಿಮಂತ್ರಣಮಾಡಿ ಕಲಶಪ್ರಾರ್ಥನೆಯನ್ನು **"ದೇವದಾನವ .... ಭವ ಸರ್ವದಾ"** ಎಂದು ಮಾಡಬೇಕು. ಆಮೇಲೆ ಆಚಾರ್ಯನು **"ಸೂರ್ಯಂ ಸೋಮಂ"** ಎಂಬಲ್ಲಿಂದ **"ಚರ್ವಾಹುತಿಭಿಶ್ಚ"** ಎಂಬಲ್ಲಿ ವರೆಗೆ ಪ್ರಧಾನ ಹೋಮವನ್ನು ಹೇಳಿಕೊಂಡು ಅನ್ವಾಧಾನ ಮಾಡಬೇಕು. ಆಜ್ಯಸಂಸ್ಕಾರದ ನಂತರ, ಚರುವನ್ನು ಸ್ಥಂಡಿಲದಲ್ಲೇ ಬೇಯಿಸುವುದಾದರೆ, **'ಸೂರ್ಯಾಯ'** **'ಸೋಮಾಯ'** ಇತ್ಯಾದಿ ನವಗ್ರಹಗಳಿಗೂ, ಇತರ ದೇವತೆಗಳಿಗೆ **"ದೇವೇಭ್ಯೋ ಜುಷ್ಟಂ"** ಎಂದು 4-4 ಮುಷ್ಟಿ ಅಕ್ಕಿಯನ್ನು ತೆಗೆದಿಡಬೇಕು. ಗ್ರಹಗಳಿಗೆ 8-8 ಆಹುತಿಗಳಾದರೆ, ಅಧಿದೇವತೆ ಪ್ರತ್ಯಧಿದೇವತೆಗಳಿಗೆ 4-4 ಹಾಗೂ ಗಣಪತ್ಯಾದಿಗಳಿಗೆ 2-2 ಆಹುತಿಗಳನ್ನು ಕೊಡಬೇಕು. ಸ್ಥಂಡಿಲದಲ್ಲೇ ಬೇಯಿಸುವ ಬದಲು ಮನೆಯಲ್ಲಿ ಪ್ರತ್ಯೇಕವಾಗಿಯೂ ಬೇಯಿಸಿ ಚರುವನ್ನು ತಯಾರಿಸಬಹುದು. ಅಂತಹ

Scanned by CamScanner

Scanned with CamScanner

ಸಮುದ್ರಾಃ ಸರಿತಃ ತೀರ್ಥಾನಿ ಜಲದಾ ನದಾಃ ॥ ಆಯಾಂತು ಯಜಮಾನಸ್ಯ-ದುರಿತಕ್ಷಯಕಾರಕಾಃ ॥ ತತಃ ಕಲಶಾಭಿಮಂತ್ರಣಂ ॥ ಕಲಶಸ್ಯ ಮುಖೇ-ವಿಷ್ಣುರಿತ್ಯಾದಿ ॥ ತತಃ ಕಲಶಪ್ರಾರ್ಥನಾ ॥ ದೇವದಾನವ ಸಂವಾದೇ ಮಥ್ಯ-ಮಾನೇ ಮಹೋದಧೌ ॥ ಉತ್ಪನ್ನೋಽಸಿ ತದಾ ಕುಂಭ ವಿಧೃತೋ ವಿಷ್ಣುನಾ ಸ್ವಯಂ ॥ ತ್ವತ್ತೋಯೇ ಸರ್ವತೀರ್ಥಾನಿ ದೇವಾಃ ಸರ್ವೇ ತ್ವಯಿ ಸ್ಥಿತಾಃ ॥ ತ್ವಯಿ ತಿಷ್ಠಂತಿ ಭೂತಾನಿ ತ್ವಯಿ ಪ್ರಾಣಾಃ ಪ್ರತಿಷ್ಠಿತಾಃ ॥ ಶಿವಃ ಸ್ವಯಂ ತ್ವಮೇವಾಸಿ ವಿಷ್ಣುಸ್ತ್ವಂ ಚ ಪ್ರಜಾಪತಿಃ ॥ ಆದಿತ್ಯಾ ವಸವೋ ರುದ್ರಾ ವಿಶ್ವೇದೇವಾಃ ಸಪೈತೃಕಾಃ ॥ ತ್ವಯಿ ತಿಷ್ಠಂತಿ ಸರ್ವೇಽಪಿ ಯತಃ ಕಾಮಫಲ-ಪ್ರದಾಃ ॥ ತ್ವತ್ಪ್ರಸಾದಾದಿಮಂ ಯಜ್ಞಂ ಕರ್ತುಮೀಹೇ ಜಲೋದ್ಭವ ॥ ಸಾನ್ನಿಧ್ಯಂ ಕುರು ದೇವೇಶ ಪ್ರಸನ್ನೋ ಭವ ಸರ್ವದಾ ॥

ತತ ಆಚಾರ್ಯೋಽನ್ವಾಧಾನಂ ಕುರ್ಯಾತ್ ॥ ತತ್ರ ಪ್ರಧಾನಕೀರ್ತನೇ ವಿಶೇಷಃ ॥ ಸೂರ್ಯಂ ಸೋಮಮಂಗಾರಕಂಬುಧಂಬೃಹಸ್ಪತಿಂಶುಕ್ರಂಶನಿಂ-ರಾಹುಂಕೇತುಂ ಏತಾಃ ಪ್ರಧಾನದೇವತಾಃ ಅಷ್ಟೋತ್ತರಶತಮಷ್ಟಾವಿಂಶತಿ-ಸಂಖ್ಯಾಕಾಭಿರ್ವಾ ಅರ್ಕಾದಿಜಾತೀಯ ಸಮಿದಾಹುತಿಭಿಃ ತಾವತೀಭಿಶ್ಚರ್ವಾಹು-ತಿಭಿರಾಜ್ಯಾಹುತಿಭಿಶ್ಚ ॥ ಈಶ್ವರಂ ಉಮಾಂ ಸ್ಕಂದಂ ನಾರಾಯಣಂ ಬ್ರಹ್ಮಾಣಂ ಇಂದ್ರಂ ಯಮಂ ಕಾಲಂ ಚಿತ್ರಗುಪ್ತಂ ಅಗ್ನಿಂ ಅಪಃ ಭೂಮಿಂ ವಿಷ್ಣುಂ ಇಂದ್ರಂ ಇಂದ್ರಾಣೀಂ ಪ್ರಜಾಪತಿಂ ಸರ್ಪಾನ್ ಬ್ರಹ್ಮಾಣಂ ಏತಾ ದೇವತಾಃ ಅಷ್ಟಾವಿಂಶತಿಸಂಖ್ಯಾಕಾಭಿರ್ವಾತದಾಹುತಿಭಿಃ ಗಣಪತಿಂ ದುರ್ಗಾಂ ವಾಯು-ಮಾಕಾಶಂ ಅಶ್ವಿನೌ ಕ್ಷೇತ್ರಪಾಲಂ ವಾಸ್ತೋಷ್ಪತಿಂ ಇಂದ್ರಮಗ್ನಿಂ ಯಮಂ ನಿರ್ಋತಿಂ ವರುಣಂ ವಾಯುಂ ಸೋಮಮೀಶಾನಂ ಏತಾಃ ದೇವತಾಃ ಅಷ್ಟ ಚತುರ್ವಾ ಸಂಖ್ಯಾಕಾಭಿಃ ಸಮಿಧಾಹುತಿಭಿರಾಜ್ಯಾಹುತಿಭಿಶ್ಚ ॥ ಶೇಷೇಣ ಸ್ವಿಷ್ಟ-ಕೃತಮಿತ್ಯಾದಿ ॥

ಆಜ್ಯಸಂಸ್ಕಾರಕಾಲೇ ಸೂರ್ಯಾಯ ತ್ವಾ ಜುಷ್ಟಂ ನಿರ್ವಪಾಮೀತಿ ಚತುರೋ ಮುಷ್ಟೀನ್ನಿರುಪ್ಯೈವಂ ಸೋಮಾಯ ಮಂಗಲಾಯತ್ವೇತ್ಯಾದಿ

ಚರುವನ್ನು ಆಜ್ಯದೊಂದಿಗೆ ಪರ್ಯಗ್ನಿಕರಣ ಮಾಡಬೇಕು. ದರ್ವಿ, ಸ್ರುವ ಮೊದಲಾದವುಗಳ ಸಮ್ಮಾರ್ಜನವಾದ ಮೇಲೆ ಚರುವನ್ನು ಬೇರೆ ಪಾತ್ರೆಯೊಂದರಲ್ಲಿ ತೆಗೆದು ಅಭಿಘಾರಾದಿ ಸ್ಥಾಲೀ ಪಾಕದಲ್ಲಿ ಹೇಳಿದಂತೆ ಕ್ರಿಯೆಗಳನ್ನು ಮಾಡಬೇಕು. ಎಕ್ಕೆ ಮೊದಲಾದ ಆಯಾ ಗ್ರಹಗಳಿಗೆ ಪ್ರತ್ಯೇಕವಾಗಿ ಹೇಳಿದ ಸಮಿಧೆಗಳನ್ನು ಸಿದ್ಧಪಡಿಸಿ, ಸಮಿಧೆಗಳು ಚರು ಮತ್ತು ಆಜ್ಯದ ಆಹುತಿಗಳನ್ನು ಅನ್ವಾಧಾನದಲ್ಲಿ ಹೇಳಿದಂತೆ ಆಯಾ ಸಂಖ್ಯೆಗಳಲ್ಲಿ ಕೊಡಬೇಕು. "**ಸೂರ್ಯಾಯ ಸ್ವಾಹಾ .... ಸೂರ್ಯಾಯ ಇದಂ ನ ಮಮ**" ಇತ್ಯಾದಿ ಮಂತ್ರೋಚ್ಚಾರಣೆ ಮಾಡಿ ಆಹುತಿಗಳನ್ನು ಕೊಡಬೇಕು.

Scanned by CamScanner

ಪ್ರಕಾರೇಣ ಗೃಹೇಭ್ಯಶ್ಚತುರಶ್ಚತುರೋಮುಷ್ಟೀನ್ನಿರ್ವಪೇತ್ ॥ ಗೃಹಸಿದ್ಧಾನ್ನೇನ ವಾ ಹೋಮಃ ॥ ಆಜ್ಯೇನ ಸಹ ಗೃಹಸಿದ್ಧಾನ್ನಸ್ಯ ಚ ಪರ್ಯಗ್ನಿಕರಣಂ ॥ ದರ್ವೀಸ್ರುವಸಂಮಾರ್ಗಾಂತೇ ಗೃಹಸಿದ್ಧಾನ್ನಂ ಸ್ಥಾಲ್ಯಾಮಾದಾಯ ಅಗ್ನಾವಧಿ-ಶ್ರಿತ್ಯ ಅಭಿಘಾರಣಾದಿ ಬರ್ಹಿಷ್ಯಾಸಾದನಾಂತಂ ಕುರ್ಯಾತ್ ॥ ಅರ್ಕಾದಿ ತತ್ತದ್ಗ್ರಹೋಕ್ತಯಜ್ಞಿಯತರುಜಾತೀಯಾಃ ಸಮಿಧಶ್ಚ ತತ್ರೈವಾಸಾದ್ಯ ಅಗ್ನ್ಯ-ರ್ಚನಾದ್ಯಾಜ್ಯಭಾಗಾಹುತ್ಯಂತೇ ಯಜಮಾನೋ ಅನ್ವಾಧಾನಾನುಸಾರೇಣ ಏತ ತ್ಸಂಖ್ಯಾಹುತಿಪರ್ಯಾಪ್ತಂ ಅರ್ಕಾದಿಜಾತೀಯಸಮಿಚ್ಚರ್ವಾಜ್ಯಾತ್ಮಕಂ ಹವಿಸ್ತ್ರಯಂ ಸೂರ್ಯಾಯ ಸೋಮಾಯೇತ್ಯಾದಿ ನಮಮೇತ್ಯೇವಂ ತ್ಯಾಗಪೂರ್ವಕಂ ತದಂಗ ದೇವತಾಭ್ಯೋಪಿ ತ್ಯಕ್ತ್ವಾ ಏವಂ ತ್ಯಾಗೇ ಕೃತೇ ಸರ್ತ್ವಿಗಾಚಾರ್ಯೋ ಅರ್ಕಾದಿಸ-ಮಿಧೋ ದಧಿಮಧ್ವಾಕ್ತಾಶ್ಚರ್ವಾಹುತೇರಾಜ್ಯಾಹುತೀಶ್ಚ ಸಂಕಲ್ಪಾನುಸಾರಿಸಂಖ್ಯಾಕಾ ಜುಹುಯಾತ್ ॥ ತತಃ ಸ್ವಿಷ್ಟಕೃದಾದಿ ಪ್ರಾಯಶ್ಚಿತ್ತಜ ಹೋಮಂ ಕುರ್ಯಾತ್ ॥

॥ ಬಲಿದಾನಂ ॥

ದಿಕ್ಪಾಲಾದಿಭ್ಯಃ ಸದೀಪಮಾಷಭಕ್ತಬಲಿಸಂಕಲ್ಪಂ ಯಜಮಾನದ್ವಾರಾ ಕಾರ-ಯೇತ್ ॥ ಸಪತ್ನೀಕೋ ಯಜಮಾನಃ ಪ್ರತಿಬಲಿಂ ಸಂಕಲ್ಪ್ಯ ಸಾಕ್ಷತಜಲಂ ತ್ಯಜೇತ್ ॥ ತದ್ಯಥಾ ॥ ಅಗ್ನ್ಯಾಯತನಸ್ಯ ಸಮಂತಾದ್ದಿಕ್ಷು ಮಾಷಭಕ್ತ-ಬಲೀನ್ ದಿಕ್ಪಾಲೇಭ್ಯೋ ದದ್ಯಾತ್ ॥

ಆ ಬಳಿಕ ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಮುಗಿಸಬೇಕು.

ಅರ್ಕಃ ಪಲಾಶಃ ಖದಿರೋ ಅಪಾಮಾರ್ಗೋಥ ಪಿಪ್ಪಲಃ ।
ಔದುಂಬರಃ ಶಮೀ ದೂರ್ವಾ ಕುಶಾಶ್ಚ ನವಭಿಃ ಕ್ರಮಾತ್ ॥

ಸೂರ್ಯಾದಿ ನವಗ್ರಹಗಳಿಗೆ ಕ್ರಮವಾಗಿ ಈ ಮೇಲಿನ ಸಮಿಧೆಗಳನ್ನು ಹೇಳಿದ್ದಾರೆ.

ಪ್ರಣವಾದಿಕೈಃ ಸ್ವಾಹಾಂತೈಃ ಆಕೃಷ್ಣೇನೇತ್ಯಾದಿಮಂತ್ರೈಃ ಹೋಮಃ ಕಾರ್ಯಃ "**ಓಂ ಆಕೃಷ್ಣೇನ ... ಪಶ್ಯನ್ ಸ್ವಾಹಾ**' ಎಂಬುದಾಗಿ ಪ್ರತಿಯೊಂದು ಮಂತ್ರವನ್ನೂ ಓಂಕಾರದಿಂದ ಪ್ರಾರಂಭಿಸಿ "**ಸ್ವಾಹಾ**" ಎಂದು ಕೊನೆಯಲ್ಲಿ ಹೇಳಿ ಹೋಮಮಾಡಬೇಕು.

ಗ್ರಹಯಜ್ಞದಲ್ಲಿ ಬಲಿದಾನ ಹಾಗೂ ಪೂರ್ಣಾಹುತಿಗಳನ್ನು ಕೊಡದಿರುವ ಪಕ್ಷದಲ್ಲಿ ಸ್ಥಾಲೀಪಾಕದಲ್ಲಿ ಹೇಳಿದ ಉಳಿದ ಕ್ರಿಯೆಗಳನ್ನು ಮಾಡಿ ಅಭಿಷೇಕವನ್ನೇ ಪೂರಯಿಸಬೇಕು.

Scanned by CamScanner
Scanned with CamScanner

ತ್ರಾತಾರಮಿಂದ್ರಂ ಗರ್ಗಇಂದ್ರಸ್ತ್ರಿಷ್ಟುಪ್ ಇಂದ್ರಪ್ರೀತ್ಯರ್ಥೇ ಬಲಿದಾನೇ ವಿನಿಯೋಗಃ ॥ ಓಂ ತ್ರಾತಾರಮಿಂದ್ರಮವಿತಾರಮಿಂದ್ರಂಹವೇಹವೇಸುಹವಂಶೂರಮಿಂದ್ರಂ ॥ ಹ್ವಯಾಮಿ ಶಕ್ರಂ ಪುರುಹೂತಮಿಂದ್ರಂ ಸ್ವಸ್ತಿನೋ ಮಘವಾಧಾತ್ವಿಂದ್ರಃ ॥ ಇಂದ್ರಾಯ ಸಾಂಗಾಯ ಸಪರಿವಾರಾಯ ಸಾಯುಧಾಯ ಸಶಕ್ತಿಕಾಯ ಏಷ ಮಾಷಭಕ್ತಬಲಿರ್ನಮಮ ॥ ಭೋ ಇಂದ್ರ ದಿಶಂರಕ್ಷ ಬಲಿಂ ಭುಂಕ್ಷ್ವ ಮಮ ಯಜಮಾನಸ್ಯ ಸಕುಟುಂಬಸ್ಯ ಆಯುಃಕರ್ತಾಕ್ಷೇಮಕರ್ತಾ ಶಾಂತಿಕರ್ತಾ ಪುಷ್ಟಿಕರ್ತಾ ಭವೇತಿ ಪುಷ್ಪಾಕ್ಷತಜಲಾನಿ ಪೂರ್ವಾಭಿಮುಖಸ್ಸೃಜೇತ್ ॥ ೧ ॥ ಅಗ್ನಿಂ ದೂತಂ ಮೇಧಾತಿಥಿರಗ್ನಿರ್ಗಾಯತ್ರೀ ಅಗ್ನಿಪ್ರೀತ್ಯರ್ಥೇ ಬಲಿದಾನೇ ವಿನಿ ..... ॥ ಓಂ ಅಗ್ನಿಂ ದೂತಂ ..... ॥ ಅಗ್ನಯೇ ಸಾಂಗಾಯ .... ॥ ೨ ॥ ಯಮಾಯ ಸೋಮಂ ಯಮೋ ಯಮೋನುಷ್ಟುಪ್ ॥ ಯಮಪ್ರೀತ್ಯರ್ಥೇ ...... ॥ ಓಂ ಯಮಾಯ ಸೋಮಂ .... ॥ ಯಮಾಯ ಸಾಂಗಾಯ .... ॥ ೩ ॥ ಮೋಷುಣಃ ಕಣ್ವೋ ನಿರ್ಋತಿರ್ಗಾಯತ್ರೀ ॥ ನಿರ್ಋತಿ ಪ್ರೀತ್ಯರ್ಥೇ .... ॥ ಓಂ ಮೋಷುಣಃ ಪರಾಪರಾ .... ॥ ನಿರ್ಋತಯೇ ಸಾಂಗಾಯ .... ॥ ೪ ॥ ತತ್ವಾಯಾಮಿಶ್ಶುನಃಶೇಫೋ ವರುಣಸ್ತ್ರಿಷ್ಟುಪ್ ॥ ವರುಣಪ್ರೀತ್ಯರ್ಥೇ .... ॥ ಓಂ ತತ್ವಾಯಾಮಿ .... ॥ ವರುಣಾಯ ಸಾಂಗಾಯ ... ॥ ೫ ॥ ತವ ವಾಯೋ ವ್ಯಶ್ವೋ ವಾಯುರ್ಗಾಯತ್ರೀ ॥ ವಾಯು ಪ್ರೀತ್ಯರ್ಥೇ .... ॥

ಯಜಮಾನನು ಪತ್ನಿಯೊಡನೆ ಅಕ್ಷತೆಯೊಂದಿಗೆ ನೀರು ಬಿಟ್ಟು ಬಲಿದಾನದ ಸಂಕಲ್ಪ ಮಾಡಿ, ಉದ್ದು ಸೇರಿಸಿದ ಅನ್ನದ ಬಲಿಗಳನ್ನು ಸ್ಥಂಡಿಲದ ಹೊರಭಾಗದಲ್ಲಿ ಎಂಟು ದಿಕ್ಕುಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಕೊಡಬೇಕು. ಇಂದ್ರನಿಂದ ಮೊದಲ್ಗೊಂಡು **"ತ್ರಾತಾರಮಿಂದ್ರಂ ...."** ಮುಂತಾಗಿ ಆಯಾ ದಿಕ್ಪಾಲಕರ ಮಂತ್ರಗಳನ್ನು ಹೇಳಿ **"ಸಾಂಗಾಯ ಸಪರಿವಾರಾಯ .... ಪುಷ್ಟಿಕರ್ತಾ ಭವ"** ಎಂಬಲ್ಲಿ ವರೆಗೆ ಪ್ರತಿಸಲವೂ ಹೇಳಬೇಕು. ಪೂರ್ವದಿಂದ ತೊಡಗಿ ಈಶಾನ್ಯ ಪರ್ಯಂತ ಎಂಟು ದಿಕ್ಕುಗಳಲ್ಲಿ ಎಂಟು ಮಂದಿ ದಿಕ್ಪಾಲರಿಗೆ ಬಲಿದಾನ ಮಾಡಬೇಕು.

Scanned by CamScanner

Scanned with CamScanner

ಓಂ ತವವಾಯವೃತಸ್ಪತೇ .... ॥ ವಾಯವೇ ಸಾಂಗಾಯ .... ॥ ೬ ॥
ಸೋಮೋ ಧೇನುಂ ಗೋತಮಃ ಸೋಮಸ್ತ್ರಿಷ್ಟುಪ್ ॥ ಸೋಮಪ್ರೀತ್ಯರ್ಥೇ .... ॥
ಓಂ ಸೋಮೋಧೇನುಂ ... ॥ ಸೋಮಾಯ ಸಾಂಗಾಯ .... ॥ ೭ ॥
ತಮೀಶಾನಂ ಗೋತಮ ಈಶಾನೋಜಗತೀ ॥ ಈಶಾನಪ್ರೀತ್ಯರ್ಥೇ .... ॥
ಓಂ ತಮೀಶಾನಂ .... ॥ ಈಶಾನಾಯ ಸಾಂಗಾಯ ... ॥ ೮ ॥

ತತೋ ಗೃಹಬಲಯೋ ದೇಯಾಃ ತತ್ರ ಪೂರ್ವೇ ॥ ಆಕೃಷ್ಣೇನ ಹಿರಣ್ಯಸ್ತೂಪಃ ಸವಿತಾ ತ್ರಿಷ್ಟುಪ್ ॥ ಸೂರ್ಯಪ್ರೀತ್ಯರ್ಥೇ ..... ॥ ಓಂ ಆಕೃಷ್ಣೇನ ರಜಸಾ .... ॥ ಆದಿತ್ಯಾಯ ಸಾಂಗಾಯ ಸಪರಿವಾರಾಯ ಈಶ್ವರಾಗ್ನಿರೂಪಾಧಿದೇವತಾ ಪ್ರತ್ಯಧಿದೇವತಾಸಹಿತಾಯೇಮಂ ಸದೀಪಮಾಷ ಭಕ್ತಬಲಿಂ ಸಮರ್ಪಯಾಮಿ ಇತಿ ಪುಷ್ಪಾಂಜಲಿಂ ಕ್ಷಿಪೇತ್ ॥ ಭೋ ಆದಿತ್ಯ ಇಮಂ ಬಲಿಂ ಗೃಹಾಣ ಮಮ ಯಜಮಾನಸ್ಯ ... ಭವ ॥ ೧ ॥ ಆಪ್ಯಾಯಸ್ವ ಗೋತಮಃ ಸೋಮೋಗಾಯತ್ರೀ ॥ ಸೋಮಪ್ರೀತ್ಯರ್ಥೇ .... ॥ ಓಂ ಆಪ್ಯಾಯಸ್ವ .... ॥ ಸೋಮಾಯ ಸಾಂಗಾಯ .... ಉಮಾಬ್ರೂಪಾಧಿದೇವತಾ ಪ್ರತ್ಯಧಿದೇವತಾ ಸಹಿತಾಯ .... ॥ ೨ ॥ ಅಗ್ನಿರ್ಮೂರ್ಧಾ-

---

ಬಳಿಕ ನವಗ್ರಹಗಳಿಗೆ ಬಲಿದಾನ ಕೊಡಬೇಕು.– 1. ಸೂರ್ಯ - ಆಕೃಷ್ಣೇನ ಮಂತ್ರದಿಂದ. 2. ಸೋಮ - ಆಪ್ಯಾಯಸ್ವ. 3. ಅಂಗಾರಕ - ಅಗ್ನಿರ್ಮೂರ್ಧಾ. 4. ಬುಧ - ಉದ್ಬುಧ್ಯಧ್ವಂ. 5. ಬೃಹಸ್ಪತೇ. 6. ಶುಕ್ರ - ಶುಕ್ರಃಶುಶುಕ್ವಾಂ. 7. ಶನಿ - ಶಮಗ್ನಿರಗ್ನಿಭಿಃ 8. ರಾಹು - ಕಯಾನಶ್ಚಿತ್ರ. 9. ಕೇತು - ಕೇತುಂ ಕೃಣ್ವನ್ನ ಪ್ರತಿಯೊಂದು ಗ್ರಹದ ಅಧಿದೇವತೆ ಪ್ರತ್ಯಧಿದೇವತೆಗಳನ್ನು ಸೇರಿಸಿ ಹೇಳಬೇಕು. ಕ್ಷೇತ್ರಪಾಲನಿಗೂ ಬಲಿಯನ್ನು ಕೊಟ್ಟಾದ ಮೇಲೆ. **"ಬಲಿಂ ಗೃಹ್ಣಂತ್ವಿಮಂ .... ಸುಖಾವಹಾಃ"** ಎಂಬಲ್ಲಿ ವರೆಗಿನ ಮಂತ್ರಗಳನ್ನು ಹೇಳಿ ಪ್ರಾರ್ಥನೆಯನ್ನು ಸಲ್ಲಿಸಬೇಕು. ಬಳಿಕ ಶೂದ್ರನನ್ನು ಕರೆದು ಆ ಬಲಿಗಳನ್ನೆಲ್ಲ ಅಲ್ಲಿಂದ ತೆಗೆದು ಪರಿಸರವನ್ನು ಶುದ್ಧಗೊಳಿಸಿ **"ಶಾಂತಾ ಪೃಥಿವೀ .... ಶಾಂತಿಃ"** ಎಂದು ಭೂಮಿಯನ್ನು ಪ್ರೋಕ್ಷಿಸಿ, ಯಜಮಾನನೂ ಆಚಾರ್ಯನೂ ಕೈಕಾಲು ತೊಳೆದು ಆಚಮನ ಮಾಡಬೇಕು.

Scanned by CamScanner

ವಿರೂಪೋಂಗಾರಕೋ ಗಾಯತ್ರೀ ಭೌಮಪ್ರೀತ್ಯರ್ಥೇ .... ॥ ಓಂ ಅಗ್ನಿ-ರ್ಮೂರ್ಧಾ .... ॥ ಭೌಮಾಯ ಸಾಂಗಾಯ .... ಸ್ಕಂದಭೂಮಿರೂಪಾಧಿ-ದೇವತಾ ಪ್ರತ್ಯಧಿದೇವತಾ ಸಹಿತಾಯ .... ॥ ೩ ॥ ಉದ್ಬುಧ್ಯಧ್ವಂ ಬುಧೋಬುಧಸ್ತ್ರಿಷ್ಟುಪ್ ॥ ಬುಧಪ್ರೀತ್ಯರ್ಥೇ .... ॥ ಓಂ ಉದ್ಬುಧ್ಯಧ್ವಂ .... ॥ ಬುಧಾಯ ಸಾಂಗಾಯ ..... ನಾರಾಯಣ ವಿಷ್ಣುರೂಪಾಧಿದೇವತಾ ಪ್ರತ್ಯಧಿದೇವತಾ ಸಹಿತಾಯ .... ॥ ೪ ॥ ಓಂ ಬೃಹಸ್ಪತೇ ಗೃತ್ಸತೇ ಅತಿ .... ॥ ಬೃಹಸ್ಪತಯೇ ಸಾಂಗಾಯ ... ಬ್ರಹ್ಮೇಂದ್ರ ರೂಪ ಅಧಿದೇವತಾ ಪ್ರತ್ಯಧಿದೇವತಾ ಸಹಿತಾಯ .... ॥ ೫ ॥ ಶುಕ್ರಃ ಪರಾಶರಃ ಶುಕ್ರೋ ದ್ವಿಪದಾ ವಿರಾಟ್ ॥ ಶುಕ್ರಪ್ರೀತ್ಯರ್ಥೇ .... ॥ ಓಂ ಶುಕ್ರಃ ಶುಶುಕ್ವಾಂ .... ॥ ಶುಕ್ರಾಯ ಸಾಂಗಾಯ ... ಇಂದ್ರೇಂದ್ರಾಣೀರೂಪಾಧಿದೇವತಾ ಪ್ರತ್ಯಧಿದೇವತಾ ಸಹಿತಾಯ ... ॥ ೬ ॥ ಶಮಗ್ನಿರಿರಿಂಬಿಠಿಃ ಶನಿರುಷ್ಣಿಕ್ ॥ ಶನಿಪ್ರೀತ್ಯರ್ಥೇ .... ॥ ಓಂ ಶಮಗ್ನಿರಗ್ನಿಭಿಃ .... ॥ ಶನೈಶ್ಚರಾಯ ಸಾಂಗಾಯ .... ಯಮ ಪ್ರಜಾಪತಿ ರುಪಾಧಿದೇವತಾ ಪ್ರತ್ಯಧಿದೇವತಾ ಸಹಿತಾಯ... ॥ ೭ ॥ ಕಯಾನೋ ವಾಮದೇವೋ ರಾಹುರ್ಗಾಯತ್ರೀ ರಾಹುಪ್ರೀತ್ಯರ್ಥೇ .... ॥ ಓಂ ಕಯಾನಶ್ಚಿತ್ರ ..... ॥ ರಾಹವೇ ಸಾಂಗಾಯ ..... ಕಾಲಸರ್ಪರೂಪಾಧಿದೇವತಾ ಪ್ರತ್ಯಧಿದೇವತಾ ಸಹಿತಾಯ .... ॥ ೮ ॥ ಕೇತುಂ ಕೃಣ್ವನ್ ಮಧುಚ್ಛಂದಾಃ ಕೇತುರ್ಗಾಯತ್ರೀ ಕೇತುಪ್ರೀತ್ಯರ್ಥೇ .... ॥ ಓಂ ಕೇತುಂ ಕೃಣ್ವನ್ನ .... ॥ ಕೇತವೇ ಸಾಂಗಾಯ .... ಚಿತ್ರಗುಪ್ತ ಬ್ರಹ್ಮಾಧಿದೇವತಾ ಪ್ರತ್ಯಧಿದೇವತಾ ಸಹಿತಾಯ .... ॥ ೯ ॥

ತತಃ ॥ ಗಣಾನಾಂತ್ವಾ ಗೃತ್ಸಮದೋ ಗಣಪತಿರ್ಜಗತೀ ॥ ಗಣಪತಿ-ಪ್ರೀತ್ಯರ್ಥೇ ಬಲಿದಾನೇ ವಿನಿಯೋಗಃ ॥ ಓಂ ಗಣಾನಾಂ ತ್ವಾ .....॥ ಗಣಪತಯೇ

ಸಾಂಗಾಯ ಸಪರಿವಾರಾಯ ಋದ್ಧಿಬುದ್ಧಿಸಹಿತಾಯೇತ್ಯಾದಿ..... ॥ ೧ ॥ ಜಾತವೇದಸೇ ಕಶ್ಯಪೋ ದುರ್ಗಾತ್ರಿಷ್ಟುಪ್ ॥ ದುರ್ಗಾಪ್ರೀತ್ಯರ್ಥೇ .... ॥ ಓಂ ಜಾತವೇದಸೇ ... ॥ ದುರ್ಗಾಯೈ ಸಾಂಗಾಯೈ ಸಪರಿವಾರಾಯೈ ಸಾಯುಧಾಯೈ ಸಶಕ್ತಿಕಾಯೈ ಇಮಂ ಮಾಷಭಕ್ತಬಲಿಂ ..... ॥ ಭೋ ದುರ್ಗೇ ಮಮ ಯಜಮಾನಸ್ಯ ಆಯುಃಕರ್ತ್ರೀ ಪುಷ್ಟಿಕರ್ತ್ರೀ ತುಷ್ಟಿಕರ್ತ್ರೀ ಋದ್ಧಿಕರ್ತ್ರೀ ಭವ ॥ ೨ ॥ ತವ ವಾಯೋ ವ್ಯಶ್ವೋ ವಾಯುರ್ಗಾಯತ್ರೀ ॥ ವಾಯುಪ್ರೀತ್ಯರ್ಥೇ ..... ॥ ಓಂ ತವವಾಯವೃತ ..... ॥ ವಾಯವೇ ಸಾಂಗಾಯ ॥ ೩ ॥ ಆದಿತ್ಯಪ್ರತ್ನಸ್ಯ ವತ್ಸ ಆಕಾಶೋ ಗಾಯತ್ರೀ ॥ ಆಕಾಶಪ್ರೀತ್ಯರ್ಥೇ ..... ॥ ಓಂ ಆದಿತ್ಯಪ್ರತ್ನಸ್ಯ ರೇತಸೋ ..... ॥ ಆಕಾಶಾಯ ಸಾಂಗಾಯ ..... ॥ ೪ ॥ ಏಷೋ ಉಷಾಃ ಪ್ರಸ್ಕಣ್ವೋಽಶ್ವಿನೌ ಗಾಯತ್ರೀ ॥ ಅಶ್ವಿಪ್ರೀತ್ಯರ್ಥೇ .....॥ ಓಂ ಏಷೋ ಉಷಾ ಅಪೂರ್ವ್ಯಾ ....॥ ಅಶ್ವಿಭ್ಯಾಂ ಸಾಂಗಾಭ್ಯಾಂ ಸಪರಿವಾರಾಭ್ಯಾಂ ಸಾಯುಧಾಭ್ಯಾಂ ಸಶಕ್ತಿಕಾಭ್ಯಾಂ ಇಮಂ ಮಾಷಭಕ್ತಬಲಿಂ .....॥ ಭೋ ಅಶ್ವಿನೌ ಅಮುಂ ಬಲಿಂ ಗೃಹ್ಣೀತಂ ॥ ಮಮ ಯಜಮಾನಸ್ಯ ಆಯುಃ ಕರ್ತಾರೌ ಕ್ಷೇಮಕರ್ತಾರೌ ಭವತಂ ॥ ೫ ॥ ವಾಸ್ತೋಷ್ಪತೇ ವಸಿಷ್ಠೋ ವಾಸ್ತೋಷ್ಪತಿಸ್ತ್ರಿಷ್ಟುಪ್ ॥ ವಾಸ್ತೋಷ್ಪತಿಪ್ರೀತ್ಯರ್ಥೇ ....॥ ಓಂ ವಾಸ್ತೋಷ್ಪತೇ ..... ॥ ವಾಸ್ತೋಷ್ಪತಯೇ ಸಾಂಗಾಯ ..... ॥ ೬ ॥

ತತೋ ಕ್ಷೇತ್ರಪಾಲಬಲಿಃ ॥ ಕ್ಷೇತ್ರಸ್ಯ ವಾಮದೇವಃ ಕ್ಷೇತ್ರಪಾಲೋಽನುಷ್ಟುಪ್ ॥ ಕ್ಷೇತ್ರಪಾಲಪ್ರೀತ್ಯರ್ಥೇ ..... ॥ ಓಂ ಕ್ಷೇತ್ರಸ್ಯಪತಿನಾ ..... ॥ ಸರ್ವಭೂತಾಧಿಪಾಯ ಕ್ಷೇತ್ರಾಧಿಪತಯೇ ಶಾಕಿನೀ ಡಾಕಿನೀ ಭೂತಪ್ರೇತ-ಪಿಶಾಚಾದಿ ಪರಿವಾರಸಹಿತಾಯ ಇಮಂ ಬಲಿಂ ಸಮರ್ಪಯಾಮಿ ॥ ಭೋ ಕ್ಷೇತ್ರಪಾಲ ಇಮಂ ಬಲಿಂ ಭಕ್ಷ ದಿಶೋ ರಕ್ಷ ಮಮ ಯಜಮಾನಸ್ಯ ವಾ ಆಯುಃ ಕರ್ತೇತ್ಯಾದಿ ..... ॥ ೭ ॥ ಬಲಿಂ ಗೃಹ್ಣಂತ್ವಿಮಂ ದೇವಾ ಆದಿತ್ಯಾ

Scanned by CamScanner

ವಸವಸ್ತಥಾ ॥ ಮರುತಶ್ಚಾಶ್ವಿನೌ ರುದ್ರಾಃ ಸುಪರ್ಣಾಃ ಪನ್ನಗಾಃ ಖಗಾಃ ॥ ಅಸುರಾ ಯಾತುಧಾನಾಶ್ಚ ಪಿಶಾಚೋರಗರಾಕ್ಷಸಾಃ ॥ ಡಾಕಿನ್ಯೋ ಯಕ್ಷ-ವೇತಾಲಾ ಯೋಗಿನ್ಯಃ ಪೂತನಾಃ ಶಿವಾಃ ॥ ಜೃಂಭಕಾಃ ಸಿದ್ಧಗಂಧರ್ವಾ ನಾಗಾ ವಿದ್ಯಾಧರಾನಗಾಃ ॥ ದಿಕ್ಪಾಲಲೋಕಪಾಲಾಶ್ಚ ಯೇಚ ವಿಘ್ನವಿನಾಯಕಾಃ ॥ ಜಗತಾಂ ಶಾಂತಿಕರ್ತಾರೋ ಬ್ರಹ್ಮಾದ್ಯಾಶ್ಚ ಮಹರ್ಷಯಃ ॥ ಮಾ ವಿಘ್ನಂ ಮಾ ಚ ಮೇ ಪಾಪಂ ಮಾ ಸಂತು ಪರಿಪಂಥಿನಃ ॥ ಸೌಮ್ಯಾ ಭವಂತು ತೃಪ್ತಾಶ್ಚ ಭೂತಪ್ರೇತಾಃ ಸುಖಾವಹಾಃ ॥ ಇತಿ ಮಂತ್ರಾನ್ ಪಠೇತ್ ॥ ತತಃ ಶೂದ್ರಾದಿನಾ ತದ್ಬಲಿನಯನೇ ಕೃತೇ ॥ ಶಾಂತಾ ಪೃಥಿವೀ ಶಿವಮಂತರಿಕ್ಷಂ ದ್ಯೌರ್ನೋ ದೈವ್ಯಭಯಂ ನೋ ಅಸ್ತು ॥ ಶಿವಾ ದಿಶಃ ಪ್ರದಿಶ ಉದ್ದಿಶೋ ನ ಆಪೋ ವಿದ್ಯುತಃ ಪರಿಪಾಂತು ವಿಶ್ವತಃ ॥ ಶಾಂತಿಃ ಶಾಂತಿಃ ಶಾಂತಿಃ ॥ ಇತಿ ಭುವಂ ಪ್ರೋಕ್ಷ್ಯ ಸಯಜಮಾನ ಆಚಾರ್ಯಃ ಪ್ರಕ್ಷಾಲಿತಪಾಣಿಪಾದ ಆಚಾಂತಃ ॥

॥ ಪೂರ್ಣಾಹುತಿಃ ॥

॥ ಯಜಮಾನಃ ॥ ಸರ್ವಕರ್ಮಪ್ರಪೂರಣೀಂ ಭದ್ರದ್ರವ್ಯದಾಂ ಪೂರ್ಣಾ-ಹುತಿಮಾಜ್ಯೇನ ಹೋಷ್ಯಾಮಿ ಇತಿ ಸಂಕಲ್ಪ್ಯ ॥ ಸ್ರುವೇಣಾಜ್ಯಂ ಗೃಹೀತ್ವಾ ಸ್ರುಚಂ ಸಮಬಿಲಾಂ ಪೂರಯಿತ್ವಾ ತಸ್ಯಾಂ ಸ್ರುವಮೂರ್ಧ್ವಬಿಲಂ ನಿಧಾಯ ಪುನರಧೋಬಿಲಂ ನಿಕ್ಷಿಪ್ಯ ಸ್ರುವಾಗ್ರೇ ಕುಸುಮಾಕ್ಷತಂ ನಿಧಾಯ ಸವ್ಯಪಾಣಿನಾ ಸ್ರುಕ್‌ಸ್ರುವಮೂಲೇ ಧೃತ್ವಾ ದಕ್ಷಿಣಪಾಣಿನಾ ಸ್ರುಕ್‌ಸ್ರುವಂ ಶಂಖಮುದ್ರಯಾ ಗೃಹೀತ್ವಾ ತಿಷ್ಠನ್ ಸಮಪಾದ ಋಜುಕಾಯಃ ಸ್ರುವಾಗ್ರನ್ಯಸ್ತದೃಷ್ಟಿಃ ಪ್ರಸನ್ನಾತ್ಮಾ ॥

"ಸರ್ವಕರ್ಮಪ್ರಪೂರಣೀಂ ..... ಹೋಷ್ಯಾಮಿ" ಎಂದು ಸಂಕಲ್ಪ ಮಾಡಿ ಸ್ರುವದಲ್ಲಿ ಆಜ್ಯವನ್ನು ತೆಕ್ಕೊಂಡು ಅದನ್ನು ಸ್ರುಚಿಯಲ್ಲಿ ತುಂಬ ತುಂಬಿಸಿ ಅದರ ಮೇಲೆ ಮೊದಲು ಸ್ರುವವನ್ನು ಮೇಲ್ಮುಖವಾಗಿಟ್ಟು ಬಳಿಕ ಮುಚ್ಚಿದಂತೆ ಕೆಳಮುಖವಾಗಿಟ್ಟು ಸ್ರುವದ ತುದಿಯಲ್ಲಿ ಗಂಧ-ಪುಷ್ಪಾಕ್ಷತೆಗಳನ್ನಿಟ್ಟು ಎಡಗೈಯಿಂದ ಸ್ರುಕ್ ಮತ್ತು ಸ್ರುವದ ಬುಡಗಳನ್ನು ಒಂದುಗೂಡಿಸಿ ಗಟ್ಟಿಯಾಗಿ ಹಿಡಿದು ಬಲಗೈಯನ್ನು ಶಂಖಮುದ್ರೆಯ ಆಕೃತಿಯಲ್ಲಿ ಹಿಡಿದು ಕಾಲುಗಳು, ಶರೀರ ನೆಟ್ಟಗಿರುವಂತೆ ನಿಂತುಕೊಂಡು ದೃಷ್ಟಿಯನ್ನು ಸ್ರುವದ ತುದಿಗೆ ಕೇಂದ್ರೀಕರಿಸಿ ಪ್ರಸನ್ನಚಿತ್ತನಾಗಿ **"ಸಮುದ್ರಾದೂರ್ಮಿ ....."** ಎಂಬ ಹನ್ನೊಂದು ಋಕ್ಕುಗಳನ್ನು ಹೇಳುತ್ತಾ ಭತ್ತದ ಕಾಳಿನಷ್ಟು ಗಾತ್ರದ ತುಪ್ಪದ ಧಾರೆಯು ಅಗ್ನಿಗೆ ಬೀಳುತ್ತ ಇರುವಂತೆ ಹೋಮಿಸುತ್ತಿರಬೇಕು.

Scanned by CamScanner

ಸಮುದ್ರಾದೂರ್ಮಿರಿತ್ಯೇಕಾದಶರ್ಚಸ್ಯ ಸೂಕ್ತಸ್ಯ ಗೌತಮೋ ವಾಮ-
ದೇವ ಆಪಸ್ತ್ರಿಷ್ಟುಪ್ ॥ ಅಂತ್ಯಾ ಜಗತೀ ॥ ಪೂರ್ಣಾಹುತೌ ವಿನಿಯೋಗಃ ॥
ಓಂ ಸಮುದ್ರಾದೂರ್ಮಿರ್ಮಧು ಮಾಂ ಉದಾರದುಪಾಂಶುನಾಸಮಮೃತತ್ವ-
ಮಾನಟ್ ॥ ಘೃತಸ್ಯನಾಮ ಗುಹ್ಯಂಯದಸ್ತಿಜಿಹ್ವಾದೇವಾನಾಮಮೃತಸ್ಯ-
ನಾಭಿಃ ॥ ೧ ॥ ವಯಂನ್ನಾಮಪ್ರಬ್ರವಾಮಾಘೃತಸ್ಯಾಸ್ಮಿನ್ ಯಜ್ಞೇಧಾರಯಾ-
ಮಾನಮೋಭಿಃ ॥ ಉಪಬ್ರಹ್ಮಾಶೃಣವಚ್ಛಸ್ಯಮಾನಂ ಚತುಃಶೃಂಗೋವಮೀದ್
ಗೌರ ಏತತ್ ॥ ೨ ॥ ಚತ್ವಾರಿಶೃಂಗಾತ್ರಯೋ ಅಸ್ಯಪಾದಾ ದ್ವೇ ಶೀರ್ಷೇಸಪ್ತ-
ಹಸ್ತಾಸೋ ಅಸ್ಯ ॥ ತ್ರಿಧಾಬದ್ಧೋ ವೃಷಭೋರೋರವೀತಿ ಮಹೋದೇವೋ
ಮರ್ತ್ಯಾ ಆವಿವೇಶ ॥ ೩ ॥ ತ್ರಿಧಾಹಿತಂಪಣಿಭಿರ್ಗುಹ್ಯಮಾನಂಗವಿದೇವಾಸೋ-
ಘೃತಮನ್ವವಿಂದನ್ ॥ ಇಂದ್ರಏಕಂ ಸೂರ್ಯ ಏಕಂ ಜಜಾನ ವೇನಾದೇಕಂ
ಸ್ವಧಯಾನಿಷ್ಟತಕ್ಷುಃ ॥ ೪ ॥ ಏತಾ ಅರ್ಷಂತಿಹೃದ್ಯಾತ್ಸಮುದ್ರಾಚ್ಛತವ್ರಜಾರಿ-
ಪುಣಾನಾವಚಕ್ಷೇ ॥ ಘೃತಸ್ಯಧಾರಾ ಅಭಿಚಾಕಶೀಮಿಹಿರಣ್ಯಯೋವೇತಸೋ-
ಮಧ್ಯಆಸಾಂ ॥ ೫ ॥ ಸಮ್ಯಕ್ ಸ್ರವಂತಿ ಸರಿತೋ ನಧೇನಾ ಅಂತರ್ಹೃದಾ
ಮನಸಾ ಪೂಯಮಾನಾಃ ॥ ಏತೇ ಅರ್ಷಂತ್ಯೂರ್ಮಯೋ ಘೃತಸ್ಯ ಮೃಗಾ-
ಇವಕ್ಷಿಪಣೋರೀಷಮಾಣಾಃ ॥ ೬ ॥ ಸಿಂಧೋರಿವಪ್ರಾಧ್ವನೇ ಶೂಘನಾಸೋ
ವಾತಪ್ರಮಿಯಃ ಪತಯಂತಿ ಯಹ್ವಾಃ ॥ ಘೃತಸ್ಯಧಾರಾ ಅರುಷೋನವಾಜೀ-
ಕಾಷ್ಠಾಭಿಂದನ್ನೂರ್ಮಿಭಿಃ ಪಿನ್ವಮಾನಃ ॥ ೭ ॥ ಅಭಿಪ್ರವಂತಸಮನೇವ-
ಯೋಷಾಃ ಕಲ್ಯಾಣ್ಯಾ ೧ ಸ್ಮಯಮಾನಾಸೋ ಅಗ್ನಿಂ ॥ ಘೃತಸ್ಯಧಾರಾಃ

"ಸ್ವಾಹಾ" ಎಂದು ಪೂರ್ಣಾಹುತಿ ಕೊಡುವಾಗ ಸ್ರುವದಲ್ಲಿ ತುಪ್ಪ ಸ್ವಲ್ಪ ಉಳಿದಿರಬೇಕು. **"ಅಧ್ವ ಇದಂ ನಮಮ"** ಎಂದು ಹೇಳಿ **"ವಿಜ್ಯೋತಿಷಾ ..."** ಎಂಬ ಮಂತ್ರದಿಂದ ಉಳಿದ ತುಪ್ಪವನ್ನೆಲ್ಲ ಹೋಮಿಸಿ **"ಅಗ್ನಯ ಇದಂ ನಮಮ"** ಎಂದು ಹೇಳಬೇಕು. ಬಳಿಕ ಸಂಸ್ರಾವವೇ ಮೊದಲಾದ ಉಳಿದ ಹೋಮಕಾರ್ಯಗಳನ್ನು ಪೂರಯಿಸಬೇಕು.

Scanned by CamScanner

Scanned with CamScanner

ಸಮಿಧೋಂ ನ ಸಂತತಾಜುಷಾಣೋ ಹರ್ಯತಿಜಾತವೇದಾಃ ॥ ೮ ॥ ಕನ್ಯಾ ಇವವಹತುಮೇತವಾಉ ಅಂಜ್ಯಂಜಾನಾ ಅಭಿಚಾಕಶೀಮಿ ॥ ಯತ್ರ ಸೋಮಃ ಸೂಯತೇ ಯತ್ರ ಯಜ್ಞೋ ಘೃತಸ್ಯಧಾರಾ ಅಭಿತತ್ಪವಂತೇ ॥ ೯ ॥ ಅಭ್ಯ-ರ್ಷತ ಸುಷ್ಟುತಿಂ ಗವ್ಯಮಾಜಿಮಸ್ಮಾಸುಭದ್ರಾದ್ರವಿಣಾನಿಧತ್ತ ॥ ಇಮಂ ಯಜ್ಞಂ ನಯತದೇವತಾನೋ ಘೃತಸ್ಯಧಾರಾಮಧುಮತ್ಪವಂತೇ ॥ ೧೦ ॥ ಧಾಮಂತೇ ವಿಶ್ವಂ ಭುವನಮಧಿಶ್ರಿತಮಂತಃ ಸಮುದ್ರೇ ಹೃದ್ಯಂ ೧ ತರಾಯುಷಿ ॥ ಅಪಾ-ಮನೀಕೇಸಮಿಥೇಯ ಆಭೃತ್ತಸ್ತಮಶ್ಯಾಮಮಧುಮಂತಂತ ಊರ್ಮಿಂ ಸ್ವಾಹಾ ॥ ಇತಿ ಪಠನ್ನವಪರಿಮಿತಾಂ ಧಾರಾಂ ಸಂತತಾಂ ಸ್ರುಗಗ್ರೇಣ ಸಶೇಷಂ ಹುತ್ವಾ ॥ ಅಗ್ನ್ಯ ಇದಂ ನ ಮಮ ಇತಿ ತ್ಯಕ್ತ್ವಾ ॥ ವಿಜ್ಯೋತಿಷೇತ್ಯಸ್ಯಜಾರೋವೃಷೋ-ಗ್ನಿಸ್ತ್ರಿಷ್ಟುಪ್ ॥ ಪೂರ್ಣಾಹುತಿಶೇಷಾಜ್ಯಹೋಮೇ ವಿನಿಯೋಗಃ ॥ ಓಂ ವಿಜ್ಯೋತಿಷಾಬೃಹತಾಭಾತ್ಯಗ್ನಿರಾವಿರ್ವಿಶ್ವಾನಿ ಕೃಣುತೇ ಮಹಿತ್ವಾ ॥ ಪ್ರಾದೇ-ವೀರ್ಮಾಯಾಃ ಸಹತೇ ದುರೇವಾಃ ಶಿಶೀತೇ ಶೃಂಗೇ ರಕ್ಷಸೇ ವಿನಿಕ್ಷೇ ಸ್ವಾಹಾ ॥ ಇತ್ಯನೇನ ಚ ತಥೈವಾವಶೇಷಂ ಹುತ್ವಾ ಅಗ್ನಯ ಇದಂ ನಮಮೇತಿ ತ್ಯಕ್ತ್ವಾ ॥ ತತಃ ಸಂಸ್ರಾವ ಹೋಮಾದಿ ಕರ್ಮಶೇಷಂ ಸಮಾಪಯೇತ್ ॥

॥ ಅಭಿಷೇಕಃ ॥

ತತಃ ಸರ್ವೌಷಧ್ಯೈಃ ಸರ್ವಗಂಧೈಶ್ಚ ವಿಲಿಪ್ತಾಂಗಂ ಪ್ರಾಙ್ಮುಖಂ ಯಜಮಾನಂ ಸಪರಿವಾರಂ ಚತ್ವಾರೋ ವಿಪ್ರಾ ಉದಙ್ಮುಖಾ ಐಶಾನೀಮುಖಾ ವಾ ಗ್ರಹಕುಂಭೋದಕೇನ ಸಮುದ್ರಜ್ಯೇಷ್ಠಾ ಇತ್ಯಾದ್ಯೈರಭಿಷೇಕಮಂತ್ರೈಃ ಗ್ರಹಮಂತ್ರೈಃ ಸುರಾಸ್ತ್ವಾಮಭಿಷಿಂಚಂತ್ವಿತ್ಯಾದಿ ಪೌರಾಣಮಂತ್ರೈಶ್ಚ ಅಭಿಷಿಂ-ಚೇಯುಃ ॥ ಸಮುದ್ರಜ್ಯೇಷ್ಠಾ .... ॥ ಅಥ ಗ್ರಹಮಂತ್ರಾಃ ॥ ಗ್ರಹಾಣಾಮಾದಿ-ರಾದಿತ್ಯೋ ಲೋಕರಕ್ಷಣಕಾರಕಃ ॥ ವಿಷಮಸ್ಥಾನಸಂಭೂತಾಂ ಪೀಡಾಂಹರತು

Scanned by CamScanner

Scanned with CamScanner

ತೇ ರವಿಃ ॥ ೧ ॥ ರೋಹಿಣೀಶಃ ಸುಧಾಮೂರ್ತಿಃ ಸುಧಾಗಾತ್ರಃ ಸುಧಾ-ಶನಃ ॥ ವಿಷಮಸ್ಥಾನಸಂಭೂತಾಂ ಪೀಡಾಂ ಹರತು ತೇ ವಿಧುಃ ॥ ೨ ॥ ಭೂಮಿಪುತ್ರೋ ಮಹಾತೇಜಾ ಜಗತಾಂ ಭಯಕೃತ್ಸದಾ ॥ ವೃಷ್ಟಿಕೃದ್ ವೃಷ್ಟಿಹರ್ತಾ ಚ ಪೀಡಾಂ ಹರತು ತೇ ಕುಜಃ ॥ ೩ ॥ ಉತ್ಪಾತರೂಪೋ ಜಗತಾಂ ಚಂದ್ರಪುತ್ರೋ ಮಹಾದ್ಯುತಿಃ ॥ ಸೂರ್ಯಪ್ರಿಯಕರೋ ವಿದ್ವಾನ್ ಪೀಡಾಂ ಹರತು ತೇ ಬುಧಃ ॥ ೪ ॥ ದೇವಮಂತ್ರೀ ವಿಶಾಲಾಕ್ಷಃ ಸದಾ ಲೋಕಹಿತೇ ರತಃ ॥ ಅನೇಕಶಿಷ್ಯಸಂಪೂರ್ಣಃ ಪೀಡಾಂ ಹರತು ತೇ ಗುರುಃ ॥ ೫ ॥ ದೈತ್ಯಮಂತ್ರೀ ಗುರುಸ್ತೇಷಾಂ ಪ್ರಾಣದಶ್ಚ ಮಹಾಮತಿಃ ॥ ಪ್ರಭು-ಸ್ತಾರಾಗ್ರಹಣಾಂ ಚ ಪೀಡಾಂ ಹರತು ತೇ ಭೃಗುಃ ॥ ೬ ॥ ಸೂರ್ಯ-ಪುತ್ರೋ ದೀರ್ಘದೇಹೋ ವಿಶಾಲಾಕ್ಷಃ ಶಿವಪ್ರಿಯಃ ॥ ಮಂದಚಾರಃ ಪ್ರಸನ್ನಾತ್ಮಾ ಪೀಡಾಂ ಹರತು ತೇ ಶನಿಃ ॥ ೭ ॥ ಮಹಾಶಿರಾ ಮಹಾವಕ್ತ್ರೋ ದೀರ್ಘದಂಷ್ಟ್ರೋ ಮಹಾಬಲಃ ॥ ಅತನುಶ್ಚೋರ್ಧ್ವ ಕೇಶಶ್ಚ ಪೀಡಾಂ ಹರತು ತೇ ತಮಃ ॥ ೮ ॥ ಅನೇಕ ರೂಪ ವರ್ಣೈಶ್ಚ ಶತಶೋಥಸಹಸ್ರಶಃ ॥ ಉತ್ಪಾತರೂಪೋ ಜಗತಃ ಪೀಡಾಂ ಹರತು ತೇ ಶಿಖೀ ॥ ೯ ॥ ಅಥ ದೇವಮಂತ್ರಾಃ ॥ ಸುರಾಸ್ತ್ವಾ ...॥ ಏತೈರ್ಮಂತ್ರೈಃ ಪ್ರತಿಮಂತ್ರಮಭಿಷಿಚ್ಯ ॥ ತತಃ ಸ್ನಾತ್ವಾ ಶುಕ್ಲಾಂಬರಗಂಧಮಾಲ್ಯಧರಃ ಪ್ರಾಙ್ಮುಖೋ ಯಜಮಾನೋ ಗ್ರಹಾದೀನಾಂ ಚೋತ್ತರಪೂಜಾಂ ವಿಧಾಯ ಅಗ್ನಿಂ ಸಂಪೂಜ್ಯ ವಿಭೂತಿಂ ಧಾರಯೇತ್ ॥

ಬಳಿಕ ಯಜಮಾನನು ತನ್ನ ಮೈಗೆ ಸರ್ವೌಷಧಿಗಳನ್ನು ಗಂಧವನ್ನೂ ಪೂಸಿಕೊಂಡು ತನ್ನ ಪರಿವಾರದವರೊಂದಿಗೆ ಪೂರ್ವಾಭಿಮುಖವಾಗಿ ಕುಳಿತುಕೊಳ್ಳಬೇಕು. ನಾಲ್ಕು ಮಂದಿ ಬ್ರಾಹ್ಮಣರು ಎದ್ದು ಉತ್ತರ ಅಥವಾ ಈಶಾನ್ಯಕ್ಕೆ ಮುಖಮಾಡಿ ನಿಂತು, **"ಸಮುದ್ರಜ್ಯೇಷ್ಠಾ" "ಗ್ರಹಾಣಾಮಾದಿ..." ಸುರಾಸ್ತ್ವಾ..."** ಇತ್ಯಾದಿ ಮಂತ್ರಗಳಿಂದ ಅಭಿಷೇಕ ಮಾಡಬೇಕು. ಆಮೇಲೆ ಸ್ನಾನಮಾಡಿ ಬಿಳಿ ಬಟ್ಟೆಯುಟ್ಟು ಗಂಧಮಾಲ್ಯಾದಿಗಳಿಂದ ಅಲಂಕರಣ ಮಾಡಿ ಪೂರ್ವಮುಖವಾಗಿ ಕುಳಿತು ಯಜಮಾನನು ಗ್ರಹಾದಿಗಳಿಗೆ ಉತ್ತರಪೂಜೆಯನ್ನೂ ಅಗ್ನಿಪೂಜೆಯನ್ನೂ ಮಾಡಿ ವಿಭೂತಿಧಾರಣೆ ಮಾಡಬೇಕು.

Scanned by CamScanner

Scanned with CamScanner

॥ ಶ್ರೇಯಃಸಂಪಾದನಂ ॥

ತತೋ ವರಣಕ್ರಮೇಣ ಋತ್ವಿಜೋ ಯಜಮಾನಹಸ್ತೇ ಶ್ರೇಯಃ ಸಂಪಾದನಂ ಕುರ್ಯುಃ ॥ ಯಜಮಾನಃ ಆಚಾರ್ಯಾದಿಭ್ಯಃ ಅಮುಕ-ಕರ್ಮಣಃ ಶ್ರೇಯೋಗ್ರಹಣಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ಆಚಾರ್ಯಃ ಶಿವಾ ಆಪಃ ಸಂತು ಇತಿ ಯಜಮಾನಹಸ್ತೇ ಜಲಂ ಕ್ಷಿಪೇತ್ ॥ ಸೌಮನಸ್ಯ-ಮಸ್ತು ಪುಷ್ಪಂ ॥ ಅಕ್ಷತಂ ಚಾರಿಷ್ಟಂಚಾಸ್ತು ಅಕ್ಷತಾನ್ ॥ ದೀರ್ಘ-ಮಾಯುಃ ಶ್ರೇಯಃ ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು ಪುನರ್ಜಲಂ ॥ ಭವನ್ನಿಯೋಗೇನ ಮಯಾ ಅಮುಕಕರ್ಮಣಿ ಯತ್ಕೃತಂ ಜಪಹೋಮಾದಿ ತದುತ್ಪನ್ನಂ ಯಚ್ಛ್ರೇಯಃ ತತ್ತುಭ್ಯಮಹಂ ಸಂಪ್ರದದೇ ॥ ತೇನ ತ್ವಂ ಶ್ರೇಯಸ್ವೀ ಭವ ॥ ಸ ಚ ತಥಾಸ್ತು ಇತಿ ವದೇತ್ ॥ ಏವಂ ಬ್ರಹ್ಮಾದಯಃ ॥

ತತೋ ಬ್ರಹ್ಮಾದಿ ಋತ್ವಿಗ್ಭ್ಯೋ ಯಥಾಶಕ್ತಿ ದಕ್ಷಿಣಾಂ ದತ್ವಾ ॥ ಯಾಂತು ದೇವಗಣಾಃ ಸರ್ವೇ ಪೂಜಾಮಾದಾಯ ಪಾರ್ಥಿವೀಂ ॥ ಇಷ್ಟಕಾಮಪ್ರಸಿದ್ಧ್ಯರ್ಥಂ ಪುನರಾಗಮನಾಯ ಚ ॥ ಇತಿ ದೇವಾನ್ ॥ ಗಚ್ಛ ಗಚ್ಛ ಸುರಶ್ರೇಷ್ಠ ಸ್ವಸ್ಥಾನೇ ಪರಮೇಶ್ವರ ॥ ಯತ್ರ ಬ್ರಹ್ಮಾದಯೋ ದೇವಾಸ್ತತ್ರ ಗಚ್ಛ ಹುತಾಶನ ॥ ಇತಿ ಅಗ್ನಿಂ ವಿಸೃಜ್ಯ ತತ್ಪೀಠಂ ಸೋಪಸ್ಕರಂ ಆಚಾರ್ಯಹಸ್ತೇ ಪ್ರತಿಪಾದ್ಯ ಪತ್ನ್ಯಾ ಸಹ ರೂಪಂರೂಪಮಿತಿ ಆಜ್ಯಾವಲೋಕನಾಂತೇ ತದಾಜ್ಯಂ ಸದಕ್ಷಿಣಂ ಬ್ರಾಹ್ಮಣಾಯ ದತ್ವಾ ಉಕ್ತಸಂಖ್ಯಯಾ ಗುಡೌದನಾದಿಭಿಃ ಬ್ರಾಹ್ಮಣಾನ್ ಸಂಭೋಜ್ಯ ಆಶಿಷೋ ಗೃಹೀತ್ವಾ ಕರ್ಮೇಶ್ವರಾರ್ಪಣಂ ಕುರ್ಯಾತ್ ॥

ಶ್ರೇಯಃಸಂಪಾದನಂ:- ಆಚಾರ್ಯ ಮೊದಲಾದವರನ್ನು ವರಣಮಾಡಿದ ಕ್ರಮದಲ್ಲೇ ಅವರಿಂದ ಶ್ರೇಯಃ ಸಂಪಾದನ ಮಾಡುವುದು. ಯಜಮಾನನು "**ಆಚಾರ್ಯಾದಿಭ್ಯಃ....... ಕರಿಷ್ಯೇ ॥** ಎಂದು ಸಂಕಲ್ಪ ಮಾಡಬೇಕು. ಮೊದಲು ಆಚಾರ್ಯನು "**ಶಿವಾ ಆಪಃ...ಸೌಮನಸ್ಯ...ಅಕ್ಷತಂ...ದೀರ್ಘಮಾಯುಃ**" ಎಂದು ಹೇಳಿ ಕ್ರಮವಾಗಿ ಯಜಮಾನನ ಕೈಗೆ ನೀರು, ಪುಷ್ಪ ಮತ್ತು ಅಕ್ಷತೆಯನ್ನಿತ್ತು "**ಭವನ್ನಿಯೋಗೇನ...ಸಂಪ್ರದದೇ**" ಎಂದು ಹೇಳಬೇಕು. ಯಜಮಾನನು "**ತಥಾಸ್ತು**" ಅನ್ನಬೇಕು. ಆಮೇಲೆ ಬ್ರಹ್ಮನೇ ಮೊದಲಾದ ಎಲ್ಲ ಋತ್ವಿಜರೂ ಹೀಗೆ ಮಾಡಬೇಕು. ನಂತರ ಎಲ್ಲರಿಗೂ ಯಥಾಶಕ್ತಿ ದಕ್ಷಿಣೆ ಕೊಟ್ಟು "**ಯಾಂತು ದೇವಗಣಾಃ.....**" ಎಂದು ದೇವತೆಗಳನ್ನೂ, "**ಗಚ್ಛ ಗಚ್ಛ...**" ಎಂದು ಅಗ್ನಿಯನ್ನೂ ವಿಸರ್ಜಿಸಿ ಎಲ್ಲ ವಸ್ತುಗಳಿಂದ ಕೂಡಿದ ಗ್ರಹಪೀಠವನ್ನು ಆಚಾರ್ಯನಿಗೆ ಕೊಡಬೇಕು. "**ರೂಪಂ ರೂಪಂ**" ಎಂದು ಪತ್ನಿಯೊಡನೆ ಆಜ್ಯದಲ್ಲಿ ಮುಖ ನೋಡಿ ಆ ತುಪ್ಪವನ್ನು ಬ್ರಾಹ್ಮಣನಿಗೆ ಕೊಡಬೇಕು. ಬ್ರಾಹ್ಮಣರಿಗೆ ಭೋಜನವಿತ್ತು ಆಶೀರ್ವಾದ ಪಡೆಯಬೇಕು.

Scanned by CamScanner

Scanned with CamScanner

॥ ನವಗ್ರಹದಾನಾನಿ ॥

ತತಃ ಕರ್ತಾ ಅಗ್ನೇಃ ಪಶ್ಚಾದಾಚಾರ್ಯ ಋತ್ವಿಜ ಉದಙ್ಮುಖಾನ್ ಸಂಪೂಜ್ಯ ದೇಶಕಾಲೌ ಸಂಕೀರ್ತ್ಯ ಗ್ರಹಯಜ್ಞಸ್ಯ ಪ್ರತಿಸಿದ್ಧ್ಯರ್ಥಂ ಶ್ರೀಸೂರ್ಯಪ್ರೀತ್ಯರ್ಥಂ ಇಮಾಂ ಕಪಿಲಾಂ ರುದ್ರದೈವತ್ಯಾಂ ಅಮುಕ ಗೋತ್ರಾಯ ಇತ್ಯುಕ್ತ್ವಾ ॥ ಕಪಿಲೇ ಸರ್ವದೇವಾನಾಂ ಪೂಜನೀಯಾಸಿ ರೋಹಿಣೀ ॥ ತೀರ್ಥದೇವಮಯೀ ಯಸ್ಮಾದತಃ ಶಾಂತಿಂ ಪ್ರಯಚ್ಛ ಮೇ ॥ ಇತಿ ಪಠೇತ್ ॥ ೧ ॥ ಏವಮಗ್ರೇ ॥ ಪುಣ್ಯಸ್ತ್ವಂ ಶಂಖ ಪುಣ್ಯಾನಾಂ ಮಂಗಲಾನಾಂ ಚ ಮಂಗಲಂ ॥ ವಿಷ್ಣುನಾ ವಿಧೃತೋ ನಿತ್ಯಮತಃ ಶಾಂತಿಂ ...॥ ಇತಿ ಸೋಮಾಯ ಶಂಖಂ ॥ ೨ ॥ ಧರ್ಮಸ್ತ್ವಂ ವೃಷರೂಪೇಣ ಜಗದಾನಂದಕಾರಕಃ ॥ ಅಷ್ಟಮೂರ್ತೇರಧಿಷ್ಠಾನಮತಃ ಪಾಹಿ ಸನಾತನ ॥ ಇತಿ ಭೌಮಾಯ ವೃಷಂ ॥ ೩ ॥ ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ ॥ ಅನಂತಪುಣ್ಯ-ಫಲದಮತಃ ಶಾಂತಿಂ ...॥ ಇತಿ ಬುಧಾಯ ಹೇಮ ॥ ೪ ॥ ಪೀತವಸ್ತ್ರಯುಗಂ ಯಸ್ಮಾದ್ವಾಸುದೇವಸ್ಯವಲ್ಲಭಂ ॥ ಪ್ರದಾನಾತ್ತಸ್ಯ ವೈ ವಿಷ್ಣೋ ತತಃ ಶಾಂತಿಂ .... ॥ ಇತಿ ಗುರವೇ ಪೀತವಸ್ತ್ರಂ ॥ ೫ ॥ ವಿಷ್ಣುಸ್ತ್ವಮಶ್ವ ರೂಪೇಣ ಯಸ್ಮಾದಮೃತಸಂಭವಃ ॥ ಚಂದ್ರಾರ್ಕವಾಹನಂ ನಿತ್ಯಮತಃ ಶಾಂತಿಂ ....॥ ಇತಿ ಶುಕ್ರಾಯ ಅಶ್ವಂ ॥ ೬ ॥ ಯಸ್ಮಾತ್ತ್ವಂ ಪೃಥಿವೀ ಕೃಷ್ಣಾ ಧೇನುಃ ಕೇಶವಸನ್ನಿಭಾ ॥ ಸರ್ವಪಾಪಹರಾ ನಿತ್ಯಮತಃ ಶಾಂತಿಂ ..... ॥ ಇತಿ ಶನಯೇ ಕೃಷ್ಣಾಂ ಗಾಂ ॥ ೭ ॥ ಯಸ್ಮಾದಾಯಸಕರ್ಮಾಣಿ ತ್ವದಧೀನಾನಿ ಸರ್ವದಾ ॥ ಲಾಂಗಲಾನ್ಯಾಯುಧಾದೀನಿ ತಸ್ಮಾಚ್ಛಾಂತಿಂ ..... ॥ ಇತಿ ರಾಹವೇ ಲೋಹಂ ॥ ೮ ॥ ಯಸ್ಮಾತ್ತ್ವಂ ಭಾಗಯಜ್ಞಾನಾಮಂಗತ್ವೇನ ವ್ಯವಸ್ಥಿತಃ ॥ ಯಾನಂ ವಿಭಾವಸೋರ್ನಿತ್ಯಮತಃ ಶಾಂತಿಂ ....॥ ಇತಿ ಕೇತವೇ ಛಾಗಂ ॥ ೯ ॥ ಸರ್ವೇಷಾಂ

ನವಗ್ರಹದಾನಗಳು:- ಅಗ್ನಿಯ ಪಶ್ಚಿಮಭಾಗದಲ್ಲಿ ಯಜಮಾನನು, ಉತ್ತರಕ್ಕೆ ಮುಖಮಾಡಿ ಕುಳಿತ ಆಚಾರ್ಯ ಋತ್ವಿಜ ಮೊದಲಾದವರನ್ನು ಅರ್ಚಿಸಿ ದೇಶಕಾಲಗಳನ್ನು ಸ್ಮರಿಸಿ ಪ್ರತಿಯೊಂದು ದಾನಕ್ಕೂ **"ಸೂರ್ಯಪ್ರೀತ್ಯರ್ಥಂ"** **"ಸೋಮಪ್ರೀತ್ಯರ್ಥಂ"** ಎಂದು ಬೇರೆಬೇರೆಯಾಗಿ ಸೇರಿಸಿಕೊಂಡು **"ಗ್ರಹಯಜ್ಞಸ್ಯ ಪ್ರತಿಷ್ಠಾ...ಸಂಪ್ರದದೇ ನಮಮ"** ಎಂದು ಹೇಳುತ್ತ ದಾನಗಳನ್ನು ಕೊಡಬೇಕು. ಆಯಾ ದಾನವನ್ನು ಕೊಟ್ಟಮೇಲೆ **"ಕಪಿಲೇ ಸರ್ವದೇವಾನಾಂ"** ಇತ್ಯಾದಿ ಮಂತ್ರವನ್ನು ಹೇಳಬೇಕು.

Scanned by CamScanner

Scanned with CamScanner

ವಾ ಗಾವಃ ಗವಾಮಂಗೇಷು ತಿಷ್ಠಂತೀತಿ ದೇಯಾಃ ॥ ಸರ್ವೇಭ್ಯೋ ವಾ ಸುವರ್ಣಂ ॥ ತತೋ ವಿಭವೇ ಸತಿ ಶಯ್ಯಾರತ್ನಭೂಮಿವಸ್ತ್ರಕಾಂಚನಾನ್ಯಪಿ ಯಥಾಶ್ರದ್ಧಂ ದದ್ಯಾತ್ ॥

॥ ಇತಿ ಮಾತ್ಸ್ಯಾನುಸಾರೀ ಗ್ರಹಯಜ್ಞಪ್ರಯೋಗಃ ॥

---

1. ಸೂರ್ಯ - ಕಪಿಲೆದನ. 2. ಚಂದ್ರ - ಶಂಖ. 3. ಕುಜ - ವೃಷಭ. 4. ಬುಧ - ಸುವರ್ಣ. 5. ಗುರು-ಪೀತಾಂಬರ. 6. ಶುಕ್ರ-ಅಶ್ವ. 7. ಶನಿ-ಕಪ್ಪು ಬಣ್ಣದ ಹಸು. 8. ರಾಹು - ಲೋಹ. 9. ಕೇತು - ಹೋತ. ಎಲ್ಲರಿಗೂ ಗೋದಾನ ಅಥವಾ ಸುವರ್ಣದಾನ ಮಾಡಿದರೂ ಆಗ ಬಹುದು. ಸಾಧ್ಯವಿದ್ದರೆ ಶಯ್ಯಾ, ರತ್ನ, ಭೂಮಿ ಮುಂತಾದ ದಾನಗಳನ್ನೂ ಕೊಡಬೇಕು.

॥ ಮಾತ್ಸ್ಯೋಕ್ತ ಗ್ರಹಯಜ್ಞ ಸಮಾಪ್ತ ॥

Scanned by CamScanner

Scanned with CamScanner

೬೧

॥ ವಿನಾಯಕಶಾಂತಿವಿಚಾರಃ ॥

॥ ಯಾಜ್ಞವಲ್ಕ್ಯಸ್ಮೃತಿ- ಆಚಾರಾಧ್ಯಾಯೇ ॥ ತೇನೋಪಸೃಷ್ಟೋ ಯಸ್ತಸ್ಯ ಲಕ್ಷಣಾನಿ ನಿಬೋಧತ ॥ ಸ್ವಪ್ನೇವಗಾಹತ್ಯತ್ಯರ್ಥಂ ಜಲಂ ಮುಂಡಾಂಶ್ಚ ಪಶ್ಯತಿ ॥ ೧ ॥ ಕಾಷಾಯವಾಸಸಶ್ಚೈವ ಕ್ರವ್ಯಾದಾಂಶ್ಚಾಧಿರೋಹತಿ ॥ ಅಂತ್ಯಜೈರ್ಗರ್ದಭೈರುಷ್ಟ್ರೈಃ ಸಹೈಕತ್ರಾವತಿಷ್ಠತೇ ॥ ೨ ॥ ವ್ರಜನ್ನಪಿ ತಥಾತ್ಮಾನಂ ಮನ್ಯತೇನುಗತಂ ಪರೈಃ ॥ ವಿಮನಾ ವಿಫಲಾರಂಭಃ ಸಂಸೀದತ್ಯನಿಮಿತ್ತತಃ ॥ ೩ ॥ ತೇನೋಪಸೃಷ್ಟೋ ಲಭತೇ ನ ರಾಜ್ಯಂ ರಾಜನಂದನಃ ॥ ಕುಮಾರೀ ಚ ನ ಭರ್ತಾರಂ ಅಪತ್ಯಂ ಗರ್ಭಮಂಗನಾ ॥ ೪ ॥ ಆಚಾರ್ಯತ್ವಂ ಶ್ರೋತ್ರಿಯಶ್ಚ ನ ಶಿಷ್ಯೋಽಧ್ಯಯನಂ ತಥಾ ॥ ವಣಿಗ್ಲಾಭಂ ನ ಚಾಪ್ನೋತಿ ಕೃಷಿಂ ಚಾಪಿ ಕೃಷೀವಲಃ ॥

ವಿನಾಯಕ ಶಾಂತಿಯನ್ನು ಏಕೆ ಮಾಡಬೇಕು? ಗೃಹಸ್ಥನಾದವನು ಜೀವನದಲ್ಲಿ ತನಗೆ ವಿಘ್ನಗಳು, ವಿಪತ್ತುಗಳು ಉಂಟಾಗದಂತೆ ಮುಂಜಾಗ್ರತೆ ವಹಿಸಿಕೊಳ್ಳಬೇಕು. ಅಂತಹ ವಿಘ್ನಗಳು ಯಾವಾಗ ಬರುತ್ತವೆ ಎಂಬುದರ ಪೂರ್ವಭಾವೀ ಸೂಚನೆಗಳನ್ನು ಈ ಕೆಳಗಿನ ಲಕ್ಷಣಗಳಿಂದ ತಿಳಿಯಬಹುದು. ಕನಸಿನಲ್ಲಿ ಆಳವಾದ ನೀರಿನಲ್ಲಿ ಕೊಚ್ಚಿ ಹೋದಂತೆ, ತಲೆ ಬೋಳಿಸಿದವರು ಕೆಂಪು, ಕಪ್ಪು ವಸ್ತ್ರ ಧರಿಸಿದವರು, ಮಾಂಸಾಹಾರಿ ಮೃಗಪಕ್ಷಿಗಳ ಮೇಲೆ ಕುಳಿತಿರುವುದು. ಚಂಡಾಲರು ಕತ್ತೆಗಳು, ಒಂಟೆಗಳು ತನ್ನನ್ನು ಸುತ್ತುಗಟ್ಟಿ ನಿಂತಿರುವುದು, ಶತ್ರುಗಳು ಹಿಂದಿನಿಂದ ಅಟ್ಟಿಕೊಂಡು ಬರುವುದು ಇತ್ಯಾದಿಗಳನ್ನು ಕಂಡರೆ ನಿಕಟಭವಿಷ್ಯದಲ್ಲಿ ತನಗೆ ಯಾವುದೋ ಅನಿಷ್ಟ ಎಂದು ತಿಳಿಯತಕ್ಕದ್ದು. ಅಂತೆಯೇ ಯಾವಾಗಲೂ ಮನಸ್ಸು ವಿನಾಕಾರಣ ಬೇಸರಗೊಳ್ಳುವುದು. ಆರಂಭಿಸಿದ ಯಾವ ಕೆಲಸವೂ ಕೊನೆಗೊಳ್ಳದಿರುವಿಕೆ, ಕೆಲಸಕಾರ್ಯಗಳಲ್ಲಿ ನಿರುತ್ಸಾಹ ನಿರಾಶೆಗಳೇ ತೋರುವುದು ಇಂತಹ ಪ್ರತ್ಯಕ್ಷ ಅನುಭವಗಳಿಂದಲೂ ವಿಘ್ನ ಕಾದಿದೆ ಎಂದು ತಿಳಿಯಬೇಕು.

ಸಮರ್ಥನಾದ ರಾಜಪುತ್ರನೇ ಆಗಿದ್ದರೂ ರಾಜ್ಯಾಧಿಕಾರ ದೊರೆಯದಿರುವುದು, ಸುಂದರಿಯೂ ಸುಶೀಲೆಯೂ ಆದ ಕುವರಿಯಾಗಿದ್ದರೂ ವರನು ದೊರೆಯದೆ ವಿವಾಹವಾಗದಿರುವುದು, ವಿವಾಹವಾದವಳಿಗೆ ಮಕ್ಕಳಾಗದಿರುವುದು, ಶ್ರೋತ್ರಿಯ ಬ್ರಾಹ್ಮಣನಾದರೂ ಆಚಾರ್ಯತ್ವವು ಸಿದ್ಧಿಸದಿರುವುದು, ಶಿಷ್ಯನಾದವನಿಗೆ ಅಧ್ಯಯನಕ್ಕೆ ಸರಿಯಾದ ಅವಕಾಶವಾಗದಿರುವುದು, ವರ್ತಕನಿಗೆ ವ್ಯಾಪಾರದಲ್ಲಿ ನಷ್ಟಗಳೇ ಪ್ರಾಪ್ತಿಸುವುದು, ಎಷ್ಟೇ ಜಾಗರೂಕತೆಯಿಂದ ಶ್ರಮವಹಿಸಿ ಕೆಲಸಮಾಡಿದರೂ ಕೃಷಿಕನಿಗೆ ತಾನು ಮಾಡಿದ ಕೃಷಿಯಿಂದ ಉತ್ತಮಫಲ ದೊರೆಯದಿರುವುದು-ಮುಂತಾದ ಸಂದರ್ಭಗಳು ಬಂದಾಗ ಅನಿಷ್ಟ ಪರಿಹಾರವಾಗಿ

Scanned by CamScanner
Scanned with CamScanner

॥ ವಿನಾಯಕ ಶಾಂತಿಃ ॥

॥ ಶ್ರೀಃ ॥ ಉಕ್ತಕಾಲೇ ಪವಿತ್ರಪಾಣಿರಧಿಕಾರೀ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಮಮ ಅಮುಕಕರ್ಮಣೋ ನಿರ್ವಿಘ್ನಫಲಸಿದ್ಧ್ಯರ್ಥಂ ಅಮುಕಕಾಮನಾಸಿದ್ಧ್ಯರ್ಥಂ ವಾ ವಿನಾಯಕಶಾಂತಿಂ ಕರಿಷ್ಯೇ ಇತಿ ಸಂಕಲ್ಪ್ಯ ॥ ತದಂಗತ್ವೇನ ಗಣೇಶಪೂಜನಾದಿ ನಾಂದೀಶ್ರಾದ್ಧಾಂತಂ ಚ ಕೃತ್ವಾ ಚತುರೋ ಅಷ್ಟೌ ವಾ ಋತ್ವಿಜೋ ವೃತ್ವಾ ಯಥಾವಿಭವಂ ಸಂಪೂಜ್ಯ ಪ್ರಾರ್ಥಯೇತ್ ॥

ತತಃ ಆಚಾರ್ಯೋ ಪವಿತ್ರಪಾಣಿಃ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಆಚಾರ್ಯಕರ್ಮ ಕರಿಷ್ಯೇ ಇತಿ ಸಂಕಲ್ಪ್ಯ ಯದತ್ರ ಸಂಸ್ಥಿತಮಿತಿ ಸರ್ಷಪಾನ್ ವಿಕೀರ್ಯ ॥ ಶುಚೀವ ಇತ್ಯದ್ಭಿರ್ಭುವಂ ಪ್ರೋಕ್ಷ್ಯ ॥ ಸ್ವಸ್ತ್ಯಯನಂ ತಾರ್ಕ್ಷ್ಯಮಿತಿ ಮಂತ್ರದ್ವಯೇನ ಪ್ರಾರ್ಥ್ಯ ಪ್ರತಿಮಾದ್ವಯಸ್ಯ ಅಗ್ನ್ಯುತ್ತಾರಣಂ ಕೃತ್ವಾ ॥

ಮಧ್ಯದೇಶೇ ಶುಚೌ ಸುಲಿಪ್ತೇ ಸ್ಥಂಡಿಲೇ ಪಂಚವರ್ಣೈಃ ಪಿಷ್ಟೈಃ ಸ್ವಸ್ತಿಕಂ ಕೃತ್ವಾ ತಸ್ಮಿನ್ ಪ್ರಾಚೀಗ್ರೀವಮುತ್ತರಲೋಮಾನಡುಹಂ ರಕ್ತಮರಕ್ತಂ ವಾ ಚರ್ಮಾ-ಸ್ತೀರ್ಯ ತತ್ರ ಶ್ರೀಪರ್ಣೀಪೀಠಂ ನಿಧಾಯ ತಚ್ಛ್ವೇತವಾಸಸಾ ಆಚ್ಛಾದ್ಯ ಪೂರ್ವಾದಿ-ಕ್ರಮೇಣ ಚತಸೃಷು ದಿಕ್ಷು ಸ್ವಸ್ತಿಕಾನಿ ಕೃತ್ವಾ ತೇಷ್ವಿಮಾನ್ ಪದಾರ್ಥಾನ್ ಕ್ರಮೇಣ ಕಾಂಡಾನುಸಮಯೇನ ಕುರ್ಯಾತ್ ॥

ಇಷ್ಟಪ್ರಾಪ್ತಿಯಾಗಬೇಕಿದ್ದರೆ ವಿನಾಯಕಶಾಂತಿಯನ್ನು ವಿಧಿವತ್ತಾಗಿ ಮಾಡಿಕೊಳ್ಳಬೇಕು. ಇದನ್ನು ಮಾಡಿದ್ದರಿಂದ ಸಕಲ ವಿಘ್ನಗಳೂ ದೋಷಗಳೂ ಪರಿಹಾರವಾಗಿ ವಿನಾಯಕಾದಿ ದೇವತೆಗಳ ಅನುಗ್ರಹದಿಂದ ಸಮಸ್ತ ಸನ್ಮಂಗಳಗಳೂ ಉಂಟಾಗುತ್ತವೆ.

ಜ್ಯೋತಿಷ್ಯರು ಸೂಚಿಸಿದ ಒಳ್ಳೆಯ ಮುಹೂರ್ತವಿರುವ ದಿನ ಯಜಮಾನನು ಪವಿತ್ರಧಾರಣೆ ಆಚಮನ ಪ್ರಾಣಾಯಾಮ ದೇಶಕಾಲಕೀರ್ತನಾದಿಗಳನ್ನು ಮಾಡಿ **"ಮಮ... ಕರ್ಮಣೋ...ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ಬಳಿಕ ಗಣಪತಿಪೂಜನದಿಂದ ತೊಡಗಿ ನಾಂದೀಶ್ರಾದ್ಧದ ವರೆಗಿನ ಎಲ್ಲ ಕರ್ಮಗಳನ್ನೂ ಮಾಡಿ, ಗ್ರಹಯಜ್ಞದಲ್ಲಿ ಹೇಳಿದಂತೆ ವಿಧಿವತ್ತಾಗಿ ಆಚಾರ್ಯ ಋತ್ವಿಗ್ವರಣ ಮೊದಲಾದವುಗಳನ್ನು ಮಾಡಬೇಕು. ಆಚಾರ್ಯನು ಆಚಮನ ಪ್ರಾಣಾಯಾಮಾದಿಗಳನ್ನು ಮಾಡಿ, ಸಂಕಲ್ಪಿಸಿ, "ಯದತ್ರ ಸಂಸ್ಥಿತಂ..." ಎಂದು ಹೇಳಿ ಬಿಳಿ ಸಾಸಿವೆ ಚೆಲ್ಲಿ **"ಶುಚೀವ..."** ಎಂಬ ಮಂತ್ರದಿಂದ ಪ್ರೋಕ್ಷಿಸಿ, "ಸ್ವಸ್ತ್ಯಯನಂ" ಎಂಬ ಮಂತ್ರಗಳಿಂದ ಪ್ರಾರ್ಥನೆಯನ್ನೂ ಮಾಡಿ ವಿನಾಯಕ ಮತ್ತು ಅಂಬಿಕಾ ಪ್ರತಿಮೆಗಳ ಅಗ್ನ್ಯುತ್ತಾರಣ ಹಾಗೂ ಪ್ರಾಣಪ್ರತಿಷ್ಠೆ ಮಾಡಬೇಕು. ಬಳಿಕ ಮಧ್ಯದಲ್ಲಿ ಗೋಮಯ ಲೇಪಿಸಿದ ಸ್ಥಳದಲ್ಲಿ ರಂಗವಲ್ಲಿಯಿಂದ ಸ್ವಸ್ತಿಕವನ್ನು ಬರೆದು ಅದರ ಮೇಲೆ ಪೂರ್ವಮುಖವಾಗಿ ಎತ್ತಿನ

Scanned by CamScanner

Scanned with CamScanner

ಮಹೀದ್ಯೌರಿತಿ ಭುವಂ ಸ್ಪೃಷ್ಟ್ವಾ ॥ ಓಷಧಯಃಸಮಿತಿ ಧಾನ್ಯಂ ನಿಕ್ಷಿಪ್ಯ ॥ ಆಕಲಶೇಷ್ವಿತಿ ಏಕರೂಪಮವ್ರಣಂ ಕಲಶಂ ನಿಧಾಯ ॥ ಇಮಂ ಮೇ ಗಂಗೇ ಇತಿ ಸಂಗಮೋದಕೇನ ಹ್ರದೋದಕೇನ ವಾ ಆಪೂರ್ಯ ॥ ಉದ್ಧೃತಾಸಿ ವರಾಹೇಣ ಕೃಷ್ಣೇನ ಶತಬಾಹುನಾ ॥ ಮೃತ್ತಿಕೇ ಹರ ಮೇ ಪಾಪಂ ಯನ್ಮಯಾ ದುಷ್ಕೃತಂ ಕೃತಂ ॥ ಇತಿ ಅಶ್ವಸ್ಥಾನಗಜಸ್ಥಾನವಲ್ಮೀಕಸಂಗಮಹ್ರದಮೃದೋ ನಿಕ್ಷಿಪ್ಯ ॥ ಗಂಧದ್ವಾರಾಮಿತಿ ಚಂದನಾಗುರುಕೇಶರಕಸ್ತೂರೀಕರ್ಪೂರ ಗೋರೋಚನಾನಿ ನಿಕ್ಷಿಪ್ಯ ॥ ತೂಷ್ಣೀಂ ಗುಗ್ಗುಲಂ ಚ ನಿಕ್ಷಿಪ್ಯ ॥ ಯಾ ಓಷಧೀರಿತಿ ಸರ್ವೌಷಧೀಃ ॥ ಓಷಧಯಃ ಸಮಿತಿ ಯವಾನ್ ॥ ಕಾಂಡಾತ್ಕಾಂಡಾದಿತಿ ದೂರ್ವಾಃ ॥ ಅಶ್ವತ್ಥೇವ ಇತಿ ಪಲ್ಲವಾನ್ ॥ ಯಾಃ ಫಲಿನೀರಿತಿ ಫಲಂ ॥ ಸ ಹಿ ರತ್ನಾನೀತಿ ಪಂಚರತ್ನಾನಿ ॥ ಹಿರಣ್ಯರೂಪ ಇತಿ ಹಿರಣ್ಯಂ ॥ ಯುವಾ ಸುವಾಸಾ ಇತಿ ವಸ್ತ್ರೇಣಾವೇಷ್ಟ್ಯ ॥ ಚಂದನಮಾಲ್ಯಭೂಷಿತಂ ಕೃತ್ವಾ ॥ ಪೂರ್ಣಾದರ್ವೀತಿ ಪೂರ್ಣಪಾತ್ರಂ ನಿಧಾಯ ॥ ಕಲಶಸ್ಯ ಮುಖೇ ವಿಷ್ಣುಃ ..... ದುರಿತಕ್ಷಯ-ಕಾರಕಾಃ ॥ ದೇವ ದಾನವ ಸಂವಾದೇ ಮಥ್ಯಮಾನ ಇತಿ ಚ ಪಠೇತ್ ॥ ದಕ್ಷಿಣ ಪಶ್ಚಿಮೋತ್ತರಕಲಶೇಷ್ವಿತ್ಯಂತೇ ಕರ್ಮಣ್ಯಾಚಾರ್ಯೇಣ ಕೃತೇ ॥

ಚತ್ವಾರ ಋತ್ವಿಜಃ ಪವಿತ್ರಪಾಣಯಃ ಆಚಮ್ಯ ಪ್ರಾಙ್ಮುಖಾಃ ತತ್ವಾ-ಯಾಮೀತಿ ವರುಣಮಾವಾಹ್ಯ ಷೋಡಶೋಪಚಾರೈರಭ್ಯರ್ಚ್ಯ ॥ ತದ್ವೈವಾ-ಚಾರ್ಯೋ ಭದ್ರಾಸನ ಪ್ರಾಗ್ದೇಶೇ ಹೋಮಾರ್ಥಂ ಸ್ಥಂಡಿಲಂ ಕೃತ್ವಾ ತದೀಶಾನ್ಯಾಂ ವೇದ್ಯಾಂ ಪೀಠೇ ವಾ ವಸ್ತ್ರಾದೌ ಪ್ರತಿಮಾದ್ವಯೇ ವಿನಾಯಕಾಂಬಿಕಯೋರಾವಾಹ ನಾದಿಭಿರ್ನೈವೇದ್ಯಾಂತೈರುಪಚಾರೈಃ ಪೂಜಾಂ ಕುರ್ಯಾತ್ ॥ ತತ್ರ ಮಂತ್ರಾ ॥ ಓಂ ತತ್ಪುರುಷಾಯ ವಿದ್ಮಹೇ ವಕ್ರತುಂಡಾಯ ಧೀಮಹಿ ॥ ತನ್ನೋದಂತಿಃ ಪ್ರಚೋದಯಾತ್ ॥ ಓಂ ಸುಭಗಾಯೈ ವಿದ್ಮಹೇ ಕಾಮಮಾಲಿನ್ಯೈ ಧೀಮಹಿ ॥ ತನ್ನೋ ಗೌರೀ ಪ್ರಚೋದಯಾತ್ ॥

ಚರ್ಮವನ್ನು ಅಥವಾ ಕೆಂಪು ಬಟ್ಟೆಯನ್ನು ಹಾಸಿ ಅದರ ಮೇಲೆ ಶ್ರೀಪರ್ಣೀಪೀಠವನ್ನು ಇಟ್ಟು ಅದನ್ನು ಬಿಳಿಬಟ್ಟೆಯಿಂದ ಮುಚ್ಚಬೇಕು. ನಂತರ ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿಯೂ ಸ್ವಸ್ತಿಕಗಳನ್ನು ಬರೆದು ಅವುಗಳ ಮೇಲೆ ಕ್ರಮವಾಗಿ ಮುಂದೆ ಹೇಳಿದಂತೆ ಕಲಶಗಳನ್ನಿಡಬೇಕು. **"ಮಹೀದ್ಯೌ..."** ಭೂಮಿಯನ್ನು ಮುಟ್ಟುವುದು. **"ಓಷಧಯಃ"** ಧಾನ್ಯರಾಶಿ ಮಾಡುವುದು. **"ಆಕಲಶೇಷು"** ಕಲಶವನ್ನಿಡುವುದು. **"ಇಮಂ ಮೇ..."** ಸಂಗಮದ ಅಥವಾ ಕೊಳದ ನೀರನ್ನು ತುಂಬುವುದು. **"ಉದ್ಧೃತಾಸಿ"** ಕುದುರೆ, ಆನೆ ಮುಂತಾದವುಗಳಿರುವ ಸ್ಥಾನದ, ಹುತ್ತ, ಸಂಗಮ, ಕೊಳದ ಕಡೆಗಳಲ್ಲಿರುವ ಮೃತ್ತಿಕೆಯನ್ನು ಹಾಕುವುದು. **"ಗಂಧದ್ವಾರಾಂ"** ಚಂದನ ಅಗರು ಮುಂತಾದ ಸುಗಂಧ ದ್ರವ್ಯಗಳು. **"ಯಾ ಓಷಧೀಃ"** ಸರ್ವೌಷಧಿಗಳನ್ನು ಹಾಕುವುದು.

Scanned by CamScanner

ಅಪರಾರ್ಕೇ ಹೇಮಾದ್ರಿಮತೇ ಪ್ರತಿಮಯೋಃ ಪರಿತೋ ಯಥಾವಕಾಶಂ ಪ್ರತಿಮಾಸು ಅಕ್ಷತಪುಂಜೇಷು ವಾ ನಮೋಂತೈರ್ನಾಮಮಂತ್ರೈರನ್ಯಾ ದೇವತಾ ಆವಾಹ್ಯ ಷೋಡಶೋಪಚಾರೈಃ ಪೂಜಯೇತ್ ॥ ತತ್ರ ಮಂತ್ರಾಃ ॥ ವ್ಯೋಮಕೇಶಾಯ ನಮಃ ॥ ಪಾರ್ವತ್ಯೈ ನಮಃ ॥ ಭೀಮಜಾಯ ನಮಃ ॥ ಕೃಷ್ಣಸ್ಯ ಪಿತ್ರೇ ನಮಃ ॥ ಅರ್ಕಾಯ ನಮಃ ॥ ಆರಾಯ ನಮಃ ॥ ಸಿತಾಯ ನಮಃ ॥ ಧಿಷಣಾಯ ನಮಃ ॥ ಕ್ಲೇದಪುತ್ರಾಯ ನಮಃ ॥ ಕೋಣಾಯ ನಮಃ ॥ ಲಕ್ಷ್ಮವತೇ ನಮಃ । ವಿಧುಂತುದಾಯ ನಮಃ ॥ ಕೇತವೇ ನಮಃ ॥ ಬಾಹುಲೇಯಾಯ ನಮಃ ॥ ನಂದಕಸ್ಯ ಧಾರಿಣೇ ನಮಃ ॥ ೧೫ ॥ ಇತಿ ॥

ತತೋ ಹೋಮಾರ್ಥಂ ಸ್ಥಂಡಿಲೇ ಯಜಮಾನಃ ಗೃಹ್ಯೋಕ್ತವಿಧಿನಾ ಅಗ್ನಿಂ ಪ್ರತಿಷ್ಠಾಪ್ಯ ಅನ್ವಾದಧ್ಯಾತ್ ॥ ತತ್ರ ಚಕ್ಷುಷೀ ಆಜ್ಯೇನೇತ್ಯಂತೇ ಅತ್ರ ಪ್ರಧಾನಂ ॥ ಮಿತಂ ಸಂಮಿತಂ ಶಾಲಂ ಕಟಂಕಟಂ ಕೂಷ್ಮಾಂಡಂ ರಾಜಪುತ್ರಂ ವ್ಯೋಮಕೇಶಂ ಪಾರ್ವತೀಂ ಭೀಮಜಂ ಕೃಷ್ಣಸ್ಯ ಪಿತರಂ ಅರ್ಕಂ ಆರಂ ಸಿತಂ ಧಿಷಣಂ ಕ್ಲೇದಪುತ್ರಂ ಕೋಣಂ ಲಕ್ಷ್ಮವಂತಂ ವಿಧುಂತುದಂ ಕೇತುಂ ಬಾಹು-ಲೇಯಂ ನಂದಕಸ್ಯಧಾರಿಣಂ ಏತಾಃ ಏಕೈಕಯಾ ಚರ್ವಾಹುತ್ಯಾ ಶೇಷೇಣೇ-ತ್ಯಾದಿ ॥ ನಿರ್ವಾಪಕಾಲೇ ಮಿತಾಯತ್ವೇತ್ಯಾದಿಭಿರೇಕವಿಂಶತಿಮಂತ್ರೈಃ ಪ್ರತ್ಯೇಕಂ ಚತುರಾವೃತ್ತೈಶ್ಚತುರಶೀತಿವಾರಂ ನಿರುಪ್ಯ ತಥೈವ ಪ್ರೋಕ್ಷ್ಯ ಬರ್ಹಿಷ್ಯಾಸಾದ-ನಾಂತಂ ಕೃತ್ವಾ ॥ ಗವ್ಯಾಜ್ಯಲೋಲೀಕೃತೇನ ಸಿದ್ಧಾರ್ಥಪಿಷ್ಟೇನ ಉದ್ವರ್ತಿ-ತಾಂಗಸ್ಯ ಸರ್ವೌಷಧ್ಯೈಃ ಸರ್ವಗಂಧೈಶ್ಚ ವಿಲಿಪ್ತಶಿರಸೋ ಯಜಮಾನಸ್ಯ ಮಂಗಲವೇದಘೋಷೇಣ ವಸ್ತ್ರಾಚ್ಛಾದಿತೋಕ್ತಪೀಠಾತ್ಮಕಭದ್ರಾಸನೋಪರಿ ಆಚಾ-

---

"**ಅಶ್ವತ್ಥೇವೋ**" ಪಲ್ಲವಗಳು. "**ಯಾಃ ಫಲಿನೀ**" ಫಲ. "**ಹಿರಣ್ಯರೂಪಃ**" ಹಿರಣ್ಯ. "**ಸಹಿ ರತ್ನಾನಿ**" ರತ್ನಗಳು. "**ಯುವಾಸುವಾ**" ವಸ್ತ್ರದಿಂದ ಮುಚ್ಚಿ ಗಂಧಮಾಲ್ಯಾದಿಗಳಿಂದ ಅಲಂಕರಿಸಿ "**ಪೂರ್ಣಾದರ್ವಿ**" ಪೂರ್ಣಪಾತ್ರೆಯನ್ನಿಟ್ಟು. "**ಕಲಶಸ್ಯಮುಖೇ**" ಎಂದು ಅರ್ಚಿಸಿ, ಪೂರ್ವದಿಕ್ಕಿನಲ್ಲಿ ಇರಿಸಿದಂತೆ ದಕ್ಷಿಣ ಪಶ್ಚಿಮ ಉತ್ತರ ದಿಕ್ಕುಗಳಲ್ಲಿ ಕಲಶಗಳನ್ನಿಡಬೇಕು. ನಾಲ್ಕು ಮಂದಿ ಋತ್ವಿಜರು ಪವಿತ್ರ ಧರಿಸಿ, ಆಚಮನ ಮಾಡಿ "**ತತ್ವಾಯಾಮಿ**" ಎಂದು ವರುಣನನ್ನು ಆವಾಹಿಸಿ ಷೋಡಶೋಪಚಾರ ಪೂಜೆ ಮಾಡಬೇಕು. ಆಗ ಆಚಾರ್ಯನು ಹೋಮಕ್ಕೆ ಸ್ಥಂಡಿಲವನ್ನು ಮಾಡಿ ಅದರ ಈಶಾನ್ಯದಲ್ಲಿ ಬಟ್ಟೆಯ ಮೇಲೆ ವಿನಾಯಕ ಮತ್ತು ಅಂಬಿಕೆಯರ ಪ್ರತಿಮೆಗಳನ್ನು ಸ್ಥಾಪಿಸಿ, "**ತತ್ಪುರುಷಾಯ**" ಮತ್ತು "**ಸುಭಗಾಯೈ**" ಎಂಬ ಮಂತ್ರಗಳಿಂದ ನೈವೇದ್ಯ ಸಮರ್ಪಣೆಯ ವರೆಗಿನ ಪೂಜೆ ಮಾಡಬೇಕು. ಇಲ್ಲಿ ಅಪರಾರ್ಕ ಹಾಗೂ ಹೇಮಾದ್ರಿ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಆ ಎರಡು ಪ್ರತಿಮೆಗಳ ಸುತ್ತಲೂ ಪ್ರತಿಮೆಗಳ ಮೇಲೆ ಅಥವಾ ಅಕ್ಕಿಯ ರಾಶಿಯ ಮೇಲೆ ವ್ಯೋಮಕೇಶಾದಿ ನಾಮಮಂತ್ರಗಳಿಂದ 15 ದೇವತೆಗಳನ್ನು ಆವಾಹಿಸಿ ಷೋಡಶೋಪಚಾರ ಪೂಜೆ ಮಾಡಬೇಕು.

Scanned by CamScanner

ಯೇರ್ಣಕೋಪವೇಶನಂ ಕಾರ್ಯಂ ॥ ಭದ್ರಾಸನಮುಪವಿಷ್ಟೋ ಯಜಮಾನಃ ಋತ್ವಿಗ್ಭಿಃ ಗೃಹ್ಯೋಕ್ತವಿಧಿನಾ ಸ್ವಸ್ತಿವಾಚನಂ ಕುರ್ಯಾತ್ ॥ ತತ್ರ ಜೀವತ್ಪತಿ-ಪುತ್ರಾಭಿಃ ಸುವೇಷಾಭಿಃ ಸ್ತ್ರೀಭಿಃ ನೀರಾಜಿತಃ ತಾಭ್ಯಃ ಸಕಂಚುಕಾನಿ ದದ್ಯಾತ್ ಶಿಷ್ಟಾಚಾರಾತ್ ॥

ತತಃ ಆಚಾರ್ಯೋ ಯಜಮಾನಂ ದಕ್ಷಿಣತ ಉದಙ್ಮುಖಸ್ತಿಷ್ಠನ್ ಋತ್ವಿಗ್ವಾತ್ತ ಪೂರ್ವಾದಿ ಕುಂಭತ್ರಯೇಣ ಕ್ರಮೇಣೈಕೈಕಮಂತ್ರೇಣ ಸ್ನಾಪ-ಯೇತ್ ॥ ಸಹಸ್ರಾಕ್ಷಂ ಶತಧಾರಮೃಷಿಭಿಃ ಪಾವನಂ ಕೃತಂ ॥ ತೇನ ತ್ವಾಮಭಿಷಿಂಚಾಮಿ ಪಾವಮಾನ್ಯಃ ಪುನಂತು ತೇ ॥ ಭಗಂ ತೇ ವರುಣೋ ರಾಜಾ ಭಗಂ ಸೂರ್ಯೋ ಬೃಹಸ್ಪತಿಃ ॥ ಭಗಮಿಂದ್ರಶ್ಚ ವಾಯುಶ್ಚ ಭಗಂ ಸಪ್ತರ್ಷಯೋ ದದುಃ ॥ ಯತ್ತೇ ಕೇಶೇಶು ದೌರ್ಭಾಗ್ಯಂ ಸೀಮಂತೇ ಯಚ್ಚ ಮೂರ್ಧನಿ ॥ ಲಲಾಟೇ ಕರ್ಣಯೋರಕ್ಣ್ಯೋರಾಪಸ್ತದ್ಘ್ನಂತು ಸರ್ವದಾ ॥ ತತಃ ಚತುರ್ಭಿರ್ಮಿಲಿತೈಃ ಕಲಶೈಃ ಋತ್ವಿಗ್ ಧೃತೈಃ ಬೃಹತ್ಪರಾಶರೋಕ್ತೈರ್ಮಂತ್ರೈಃ ಅಭಿಷೇಕಂ ಕಾರಯೇತ್ ॥ ಮಂತ್ರಾನ್ ಸ್ವಯಂ ಪಠೇದಾಚಾರ್ಯಃ ॥

ಬಳಿಕ ಯಜಮಾನನು ಹೋಮಕ್ಕೆಂದು ನಿರ್ಮಿಸಿದ ಸ್ಥಂಡಿಲದ ಮೇಲೆ ಸ್ಥಾಲೀಪಾಕದಲ್ಲಿ ಹೇಳಿದಂತೆ ಅನ್ವಾಧಾನದ ವರೆಗಿನ ಕ್ರಿಯಾಭಾಗಗಳನ್ನು ಮಾಡಿ, ಅನ್ವಾಧಾನದಲ್ಲಿ **"ಚಕ್ಷುಷೀ ಆಜ್ಯೇನ"** ಎಂಬಲ್ಲಿ ವರೇಗೆ ಹೇಳಿ ಮುಂದೆ **"ಅತ್ರಪ್ರಧಾನಂ" "ಮಿತಂ ಸಂಮಿತಂ... ಏಕೈಕಯಾ ಚರ್ವಾಹುತ್ಯಾ"** ಎಂದು ಹೇಳಿ **"ಶೇಷೇಣ ಸ್ವಿಷ್ಟಕೃತ...."** ಎಂದು ಮುಗಿಸಬೇಕು. ಚರುವಿಗೆಂದು ಅಕ್ಕಿಯ ಮುಷ್ಟಿಗಳನ್ನು ತೆಗೆದಿಡುವಾಗ **"ಮಿತಾಯ ತ್ವಾ ಜುಷ್ಟಂ ನಿರ್ವಪಾಮಿ"** ಎಂದು ಮೊದಲಾಗಿ ಇಪ್ಪತ್ತೊಂದು ದೇವತೆಗಳ ಹೆಸರುಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಉಚ್ಚರಿಸಿ ಒಟ್ಟು ಎಂಬತ್ತನಾಲ್ಕು ಸಲ ತೆಗೆದಿಡಬೇಕು. ಹಾಗೆಯೇ ಪ್ರೋಕ್ಷಿಸಿ ಬರ್ಹಿಯನ್ನು ಹರಡುವವರೆಗಿನ ಕರ್ಮಗಳನ್ನು ಮಾಡಬೇಕು.

ಬಳಿಕ ಯಜಮಾನನು ಬಿಳಿಸಾಸಿವೆಯ ಹಿಟ್ಟನ್ನು ನೀರಿನಲ್ಲಿ ಕಲಸಿ ಅದರಲ್ಲಿ ದನದ ತುಪ್ಪವನ್ನು ಬೆರಸಿ ಮೈಗೆ ಲೇಪಿಸಿಕೊಳ್ಳಬೇಕು. ನಂತರ ನಾಗಕೇಸರವೇ ಮೊದಲಾದ ಸರ್ವೌಷಧಿಗಳನ್ನು ನೀರಿನಲ್ಲಿ ಅರೆದು ಹಾಗೂ ಚಂದನ, ಅಗರು, ಕಸ್ತೂರಿ ಮುಂತಾದ ಸುಗಂಧ ದ್ರವ್ಯಗಳನ್ನೂ ತೇದು ನೀರಿನಲ್ಲಿ ಕಲಸಿ ಎರಡನ್ನೂ ತಲೆಗೆ ಲೇಪಿಸಿಕೊಳ್ಳಬೇಕು. ಆಗ ಬ್ರಾಹ್ಮಣರು ಮಂಗಲಕರಗಳಾದ ವೇದಮಂತ್ರಗಳನ್ನು ಘೋಷಿಸುತ್ತಿರುವಾಗ ಆಚಾರ್ಯನು ಯಜಮಾನನನ್ನು ಬಟ್ಟೆಹಾಸಿದ ಭದ್ರಾಸನದ ಮೇಲೆ ಕುಳಿತುಕೊಳ್ಳಲು ಹೇಳಬೇಕು. ಪೂರ್ವಮುಖವಾಗಿ ಹಾಗೆ ಕುಳಿತ ಯಜಮಾನನಿಗೆ ನಾಲ್ಕು ಮಂದಿ ಬ್ರಾಹ್ಮಣರು ಗೃಹ್ಯೋಕ್ತ ವಿಧಾನದಿಂದ **"ಸ್ವಸ್ತಿ ಭವಂತೋ ಬ್ರುವಂತು"** ಇತ್ಯಾದಿಯಾಗಿ ಸ್ವಸ್ತಿವಾಚನ ಹೇಳಬೇಕು. ಆಗ ಗಂಡನೂ ಮಕ್ಕಳೂ ಬದುಕಿರುವ ಮುತ್ತೈದೆಯರು ತಾವು ಸೊಗಸಾಗಿ ಶೃಂಗರಿಸಿಕೊಂಡು ಯಜಮಾನನಿಗೆ ಆರತಿ ಎತ್ತಬೇಕು.

Scanned by CamScanner
Scanned with CamScanner

ಏತದ್ವೈ ಪಾವನಂ ಸ್ನಾನಂ ಸಹಸ್ರಾಕ್ಷಮೃಷಿಸ್ಮೃತಂ ತೇನ ತ್ವಾ ಶತಧಾರೇಣ ಪಾವಮಾನ್ಯಃ ಪುನಂತ್ವಿಮಾಃ ॥ ಶಕ್ರಾದಿದಶದಿಕ್ಪಾಲಾ ಬ್ರಹ್ಮೇಶಾಃ ಕೇಶವಾ-ದಯಃ ॥ ಆಪ ಸ್ತೇ ಘ್ನಂತು ದೌರ್ಭಾಗ್ಯಂ ಶಾಂತಿಂ ದದತು ಸರ್ವದಾ ॥ ಸುಮಿತ್ರ್ಯಾನ ಆಪ ಓಷಧಯಃ ಸಂತು ದುರ್ಮಿತ್ರ್ಯಾಸ್ತಸ್ಮೈ ಸಂತು ಯೋಽಸ್ಮಾನ್ ದ್ವೇಷ್ಟಿ ಯಂ ಚ ವಯಂ ದ್ವಿಷ್ಮಃ ॥ ಸಮುದ್ರಾ ಗಿರಯೋ ನದ್ಯೋ ಮುನಯಶ್ಚ ಪತಿವ್ರತಾಃ ॥ ದೌರ್ಭಾಗ್ಯಂ ಘ್ನಂತು ತೇ ಸರ್ವೇ ಶಾಂತಿಂ ಯಚ್ಛಂತು ಸರ್ವದಾ ॥ ಪಾದಗುಲ್ಫೋರು ಜಂಘಾಸ್ಯನಿತಂಬೋದರನಾಭಿಷು ॥ ಸ್ತನೋರೋ-ಬಾಹುಹಸ್ತಾಗ್ರಗ್ರೀವಾಸ್ಕಂಧಾಂಗಸಂಧಿಷು ॥ ನಾಸಾಲಲಾಟಕರ್ಣಭ್ರೂಕೇಶಾಂತೇಷು ಚ ಯತ್ ಸ್ಥಿತಂ ॥ ತದಾಪೋ ಘ್ನಂತು ದೌರ್ಭಾಗ್ಯಂ ಶಾಂತಿಂ ಯಚ್ಛಂತು ಸರ್ವದಾ ॥ ಇತಿ ॥

ತತೋ ಆಚಾರ್ಯಃ ಪ್ರಾಙ್ಮುಖೋ ಯಜಮಾನಸ್ಯ ಪಶ್ಚಾತ್ತಿಷ್ಠನ್ ಸವ್ಯಪಾಣಿನಾಗೃಹೀತ ಕುಶತ್ರಯಾಂತರ್ಹಿತೇ ಯಜಮಾನಮೂರ್ಧನಿ ಔದುಂಬ-ರೇಣ ಸ್ರುವೇಣ ಸಾರ್ಷಪಂ ತೈಲಂ ಜುಹುಯಾತ್ ॥ ಓಂ ಮಿತಾಯಸ್ವಾಹಾ ॥ ಓಂ ಸಂಮಿತಾ ..... ॥ ಓಂ ಶಾಲಾಯ .... ॥ ಓಂ ಕಟಂಕಟಾಯ ..... ॥ ಓಂ ಕೂಷ್ಮಾಂಡಾಯ ..... ॥ ಓಂ ರಾಜಪುತ್ರಾಯ .... ॥ ಇತಿ ॥ ಯಥಾ ಮಂತ್ರಲಿಂಗಂ ತ್ಯಾಗಂ ಯಜಮಾನಃ ॥ ಶಾಲಂ ಕಟಕಟ ಕೂಷ್ಮಾಂಡ ರಾಜಪುತ್ರಾಯೇತಿ ಸಮಾಸಾಂಗೀಕಾರೇಣ ಆಹುತಿಚತುಷ್ಟಯಮಿತಿ ಅಪ-ರಾರ್ಕಃ ॥ ತತ ಇಧ್ಮಾಧಾನಾದಿ ಕೃತ್ವಾ ಪೂರ್ವೋಕ್ತೈಃ ಷಡ್ಭಿರ್ಮಂತ್ರೈಃ ಅಗ್ನಾ-

---

ಯಜಮಾನನು ಅವರಿಗೆ ಕಂಚುಕೀ (ರವಕೆ) ಇತ್ಯಾದಿಗಳನ್ನು ಕೊಟ್ಟು ಉಪಚರಿಸಬೇಕು. ನಂತರ ಆಚಾರ್ಯನು ಉತ್ತರಕ್ಕೆ ಮುಖ ಮಾಡಿ ನಿಂತು, **"ಸಹಸ್ರಾಕ್ಷ"** ಮಂತ್ರ ಹೇಳಿ ಪೂರ್ವಕಲಶದ ನೀರಿನಿಂದ, **"ಭಗಂತೇ"** ಮಂತ್ರ ಹೇಳಿ ದಕ್ಷಿಣಕಲಶದ ನೀರಿನಿಂದ, **"ಯತ್ತೇಕೇಶೇಷು"** ಮಂತ್ರ ಹೇಳಿ, ಪಶ್ಚಿಮಕಲಶದ ನೀರಿನಿಂದ ಮೂರು ಮಂತ್ರಗಳನ್ನು ಹೇಳಿ ಉತ್ತರಕಲಶದ ನೀರಿನಿಂದ, ಅಥವಾ **"ಏತದ್ವೈ ಪಾವನಂ"** ಎಂಬ ಮುಂದಿನ ಮಂತ್ರಗಳನ್ನು ಹೇಳಿ ನಾಲ್ಕೂ ಕಲಶಗಳಿಂದ ಅಭಿಷೇಕ ಮಾಡಬೇಕು.

ಆಮೇಲೆ ಯಜಮಾನನ ಹಿಂಭಾಗದಲ್ಲಿ ಪೂರ್ವಮುಖವಾಗಿ ಆಚಾರ್ಯನು ನಿಂತು, ಎಡಗೈಯಲ್ಲಿ ದರ್ಭೆಯ ಸೂಡಿಯನ್ನು ಅವನ ತಲೆಯ ಮೇಲೆ ಹರಡಿ ಅದರ ಮೇಲೆ ಔದುಂಬರದ ಸ್ರುವದಿಂದ ಸಾಸಿವೆ ಎಣ್ಣೆಯ **"ಮಿತಾಯ ಸ್ವಾಹಾ"** ಮುಂತಾದ ಆರು ಆಹುತಿಗಳನ್ನು ಕೊಡಬೇಕು. ಬಳಿಕ ಇಧ್ಮಾಧಾನಾದಿಗಳನ್ನು ಮಾಡಿ, ಅದೇ ರೀತಿ **"ಮಿತಾಯ"** ಮುಂತಾದ ಆರು ಮಂತ್ರಗಳಿಂದ ಚರುಹೋಮ ಮಾಡಬೇಕು. **"ವ್ಯೋಮಕೇಶಾಯ ಸ್ವಾಹಾ"** ಮುಂತಾದ ಹದಿನೈದು ಮಂತ್ರಗಳಿಂದ ಹದಿನೈದು ಆಹುತಿಗಳನ್ನೂ ಕೊಡಬೇಕು. ಬಳಿಕ

Scanned by CamScanner

ವವಧಾನಧರ್ಮೇಣ ಚರುಹೋಮಃ ॥ ವ್ಯೋಮಕೇಶಾಯ ಸ್ವಾಹೇತಿ ಏವಂ ಪಂಚದಶಾಹುತಯಶ್ಚ ॥ ತತಃ ಸ್ವಿಷ್ಟಕೃದಾದಿ ಪ್ರಾಯಶ್ಚಿತ್ತಹೋಮಾಂತಂ ಕೃತ್ವಾ ಚರುಶೇಷೇಣಾಭಿಷೇಕಶಾಲಾಯಾಂ ಲೋಕಪಾಲೇಭ್ಯೋ ಬಲಿಂ ದದ್ಯಾತ್ ॥ ಇಂದ್ರಾಯ ನಮ ಇತ್ಯಾದಿ ಈಶಾನಾಂತಮಿತ್ಯಷ್ಟ ದಿಕ್ಷು ॥ ಬ್ರಹ್ಮಣೇ ನಮಃ ಅನಂತಾಯ ನಮಃ ಇತಿ ಈಶಾನಪೂರ್ವಯೋರ್ಮಧ್ಯೇ ಬಲಿದ್ವಯಂ ॥

ಅಥ ಯಜಮಾನಃ ಸುಸ್ನಾತಃ ಶುಕ್ಲಗಂಧಾನುಲೇಪನಮಾಲ್ಯಾಂಬರಧರಃ ಆಚಾರ್ಯಸಹಿತಃ ಆಸ್ತೀರ್ಣಕುಶೇಷು ಶೂರ್ಪೇ ನಿಹಿತಮುಪಹಾರಂ ವಿನಾಯಕಗಾಯತ್ರ್ಯಾ ವಿನಾಯಕಾಯ ಏತಮುಪಹಾರಂ ನಿವೇದಯಾಮೀತಿ ಅಂತಯಾ ವಿನಾಯಕಾಯ ನಿವೇದಯೇತ್ ॥ ಸಕೃದವಹತಾಃ ತಂಡುಲಾಃ, ತಿಲಪಿಷ್ಟಮಿಶ್ರೌದನಃ ಪಕ್ವಮತ್ಸ್ಯಾಃ ೩ ಅಪಕ್ವಾಃ ಮಾಷವಿಕಾರಾಸ್ತದಾಕಾರಾ ವಾ. ೩ ಪಕ್ವಮಪಕ್ವಂ ಚ ಮಾಂಸಂ ತಾದೃಶಮಾಷವಿಕಾರೌ ವಾ ಚಿತ್ರಂ ಸುಗಂಧಿಪುಷ್ಪಂ, ಚಂದನಾದಿ ಸುಗಂಧಿದ್ರವ್ಯಂ, ತ್ರಿವಿಧಾ ಸುರಾ, ಗುಡಮಧುಪಿಷ್ಟಮಿಶ್ರಾಣಿ ಸಸೈಂಧವಾನಿ ಪಾತ್ರತ್ರಯಸ್ಥಿತಾನಿ ಕ್ಷೀರಾಣಿ ವಾ ಮೂಲಕಂ ೩, ಪೂರಿಕಾಃ ೩, ಅಪೂಪಾಃ ೩, ಉಂಡೇರಕಸ್ರಜಃ ೩ (ಉಂಡೇರಕಾಃ ಕ್ಷುದ್ರಾಪೂಪಾಃ) ದಧ್ಯೋದನಃ ಪಾಯಸಂ, ಗುಡಮಿಶ್ರಿತಂ ತಂಡುಲಾದಿಪಿಷ್ಟಂ

ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಉಳಿದ ಚರುವಿನಿಂದ ಎಂಟು ದಿಕ್ಕುಗಳಲ್ಲಿ ದಿಕ್ಪಾಲಕರಿಗೂ, ಪೂರ್ವ ಮತ್ತು ಈಶಾನ್ಯದಿಕ್ಕುಗಳ ಮಧ್ಯದಲ್ಲಿ **"ಬ್ರಹ್ಮಣೇ ನಮಃ" "ಅನಂತಾಯ ನಮಃ"** ಎಂದೂ ಎರಡು ಬಲಿಗಳನ್ನು ಕೊಡಬೇಕು.

ಯಜಮಾನನು ಸ್ನಾನಮಾಡಿ ಗಂಧ ಮಾಲ್ಯ ಬಿಳಿವಸ್ತ್ರ ಇತ್ಯಾದಿಗಳನ್ನು ಧರಿಸಿ, ಆಚಾರ್ಯನೊಂದಿಗೆ ಕುಳಿತು ಮೊರದಲ್ಲಿ ದರ್ಭೆಗಳನ್ನು ಹಾಸಿ ಅವುಗಳ ಮೇಲೆ ಇಟ್ಟ ಈ ಕೆಳಗಿನ ಉಪಾಹಾರವಸ್ತುಗಳನ್ನು ವಿನಾಯಕ ಮತ್ತು ಅಂಬಿಕಾ ಗಾಯತ್ರೀಮಂತ್ರಗಳಿಂದ ಅವರಿಗೆ ಸಮರ್ಪಿಸಬೇಕು. ಉಪಾಹಾರವಸ್ತುಗಳು:- ಒಂದು ಸಲ ಕುಟ್ಟಿದ ಅಕ್ಕಿ, ಎಳ್ಳಿನ ಹಿಟ್ಟು ಬೆರಸಿದ ಅನ್ನ, ಉದ್ದಿನ ಹಿಟ್ಟಿನ ಒಡೆಗಳು, ಕೆಂಪು ಹಳದಿ ಮುಂತಾದ ಹೂಗಳು, ಚಂದನಾದಿ ಸುಗಂಧ ದ್ರವ್ಯಗಳು, ಬೆಲ್ಲ ಜೇನು ಹಿಟ್ಟು ಬೆರಸಿದ ಹಾಲು, ಪೂರಿಗಳು, ಅಪ್ಪಕಜ್ಜಾಯ, ಉಂಡಲಕಾಳುಗಳು, ಮೊಸರನ್ನ, ಪಾಯಸ, ಬೆಲ್ಲ ಬೆರಸಿದ ಅಕ್ಕಿ ಹಿಟ್ಟು ಲಡ್ಡುಗಳು. ಬಳಿಕ ಆಚಮನ ಮಾಡಿ ಫಲತಾಂಬೂಲ ನೀರಾಜನಾದಿಗಳಿಂದ ಪೂಜಿಸಿ, ಸಾಷ್ಟಾಂಗ ನಮಸ್ಕಾರ ಮಾಡಿ, ವಿನಾಯಕ ಹಾಗೂ ಅಂಬಿಕಾ ಗಾಯತ್ರೀಗಳನ್ನು ಉಚ್ಚರಿಸುತ್ತ ಪ್ರಣಾಮ ಮಾಡಬೇಕು. ಗಂಧ ಪುಷ್ಪ ದೂರ್ವೆ ಸಾಸಿವೆಗಳನ್ನು ಕೈಯಲ್ಲಿ ಹಿಡಿದು ಅಥವಾ ಪುಷ್ಪ ಮತ್ತು ನೀರು ತೆಕ್ಕೊಂಡು ಅರ್ಘ್ಯಪ್ರದಾನ ಮಾಡಬೇಕು. ಬಳಿಕ **"ರೂಪಂ ದೇಹಿ..."** ಎಂಬ ಮಂತ್ರವನ್ನು ಹೇಳಿ ವಿನಾಯಕ ಅಂಬಿಕೆಯರ ಉಪಸ್ಥಾನ ಮಾಡಬೇಕು.

Scanned by CamScanner

Scanned with CamScanner

ಲಡ್ಡುಕಾಃ ೩ ಇತ್ಯುಪಹಾರಾಃ ॥ ಈದೃಶಮೇವೋಪಹಾರಮಂಬಿಕಾಗಾಯತ್ರ್ಯಾ ಅಂಬಿಕಾಯ್ಯೈ ಏತಮುಪಹಾರಂ ನಿವೇದಯಾಮಿತ್ಯಂತಯಾಂಬಿಕಾಯ್ಯೈ ನಿವೇದ-ಯೇತ್ ॥ ತತ ಆಚಮನಫಲತಾಂಬೂಲದಕ್ಷಿಣಾನೀರಾಜನಪುಷ್ಪಾಂಜಲಿಭಿರಭ್ಯರ್ಚ್ಯ ಶಿರಸಾ ಭೂಮಿಂ ಗತ್ವಾ ಉಕ್ತಗಾಯತ್ರೀಭ್ಯಾಂ ವಿನಾಯಕಮಂಬಿಕಾಂ ಚ ನಮಸ್ಕುರ್ಯಾತ್ ॥ ಗಂಧಪುಷ್ಪದೂರ್ವಾಸರ್ಷಪಯುತೇನ ಕುಸುಮಮಾತ್ರಯು-ತೇನ ವಾ ಉದಕೇನ ಅಂಜಲಿಮಾಪೂರ್ಯ ಪೂರ್ವೋಕ್ತಗಾಯತ್ರೀಭ್ಯಾಂ ಪ್ರತ್ಯೇಕಂ ಪೃಥಗರ್ಘ್ಯಂ ದತ್ವಾ ದೂರ್ವಾಸರ್ಷಪಪುಷ್ಪಪೂರ್ಣಾಂಜಲೀ ತಾಭ್ಯಾಂ ದತ್ವಾ ವಿನಾಯಕಮುಪತಿಷ್ಠೇತ ॥ ರೂಪಂ ದೇಹಿ ಯಶೋ ದೇಹಿ ಭಗಂ ಭಗವಾನ್ ದೇಹಿ ಮೇ ॥ ಪುತ್ರಾನ್ ದೇಹಿ ಧನಂ ದೇಹಿ ಸರ್ವಾನ್ ಕಾಮಾಂಶ್ಚ ದೇಹಿ ಮೇ ॥ ಇತಿ ॥ ತತೋ ರೂಪಂ ದೇಹಿ ಯಶೋ ದೇಹಿ ಭಗಂ ಭಗವಾನ್ ದೇಹಿ ಮೇ ... ಇತಿ ಯಥಾಪಾಠಮಂತ್ರೇಣ ಅಂಬಿಕಾಮುಪತಿಷ್ಠೇತೇತಿ ಮಹಾರ್ಣವಃ ॥

ಬೃಹತ್ಪಾರಾಶರೋಪಸ್ಥಾನೇ ಮಂತ್ರಾಂತರಮುಕ್ತಂ ॥ ಸೌಭಾಗ್ಯ-ಮಂಬಿಕೇ ದೇಹಿ ಭಗಂ ರೂಪಂ ಯಶೋಽಪಿ ಚ ॥ ಸ್ತ್ರಿಯಂ ಪುತ್ರಾಂಶ್ಚ ಕಾಮಾಂಶ್ಚ ತಥಾ ಶೌರ್ಯಂ ಚ ದೇಹಿ ಮೇ ॥ ಗಣೇಶಮಾತರಂ ಬಾಲೇ ಯತ್ಕಿಂಚನ್ಮದ ಭೀಪ್ಸಿತಂ ॥ ಏಕನಾಮ್ನೈವ ತದ್ದೇವಿ ದೇಹಿ ಗೌರಿವರಾನ್ಮಮ ॥ ಇತಿ ॥ ತತ ಆಸ್ತೀರ್ಣಕುಶೇಷು ಶೂರ್ಪೇ ಸರ್ವಪ್ರಕಾರಮುಪಹಾರಶೇಷಂ ನಿಧಾಯ ಚತುಷ್ಪಥಭುವಮುಪಲಿಪ್ಯ ತತ್ರ ಗುರುಃ ಶೂರ್ಪಂ ನಿದಧ್ಯಾತ್ ॥ ಯಜಮಾನಃ ಪ್ರಕ್ಷಾಲಿತಪಾದ ಆಚಾಂತೋ ಮಂತ್ರೋಕ್ತ ದೇವತಾಭ್ಯೋ ಬಲಿಂ ದದ್ಯಾತ್ ॥ ಮಂತ್ರಾಃ ॥ ಬಲಿಂ ಗೃಹ್ಣಂತ್ವಿಮಂ ದೇವಾ ಆದಿತ್ಯಾ ವಸವಸ್ತಥಾ ॥ ಮರುತಶ್ಚಾಶ್ವಿನೌ ರುದ್ರಾಃ ಸುಪರ್ಣಾಃ ಪನ್ನಗಾ ಗ್ರಹಾಃ ॥ ಅಸುರಾ ಯಾತುಧಾನಾಶ್ಚ ಪಿಶಾಚಾ ಮಾತರೋರಗಾಃ ॥ ಶಾಕಿನ್ಯೋ ಯಕ್ಷವೇತಾಲಾ ಯೋಗಿನ್ಯಃ ಪೂತನಾಃಶಿವಾಃ ॥ ಜೃಂಭಕಾಃ ಸಿದ್ಧಗಂಧರ್ವಾ ನಾಗಾ ವಿದ್ಯಾಧರಾ ನಗಾಃ ॥ ದಿಕ್ಪಾಲಾ ಲೋಕಪಾಲಾಶ್ಚ ಯೇ ಚ ವಿಘ್ನವಿನಾಯಕಾಃ ॥ ಜಗತಾಂ ಶಾಂತಿಕರ್ತಾರೋ ಬ್ರಹ್ಮಾದ್ಯಾಶ್ಚ-ಮಹರ್ಷಯಃ ॥ ಮಾ ವಿಘ್ನಂ ಮಾ ಚ ಮೇ ಪಾಪಂ ಮಾ ಸಂತು ಪರಿ-ಪಂಥಿನಃ ॥ ಸೌಮ್ಯಾ ಭವಂತು ತೃಪ್ತಾಶ್ಚಭೂತಪ್ರೇತಾಃ ಸುಖಾವಹಾಃ ॥ ಇತಿ ॥

ಬಳಿಕ ಉಳಿದ ಉಪಾಹಾರಸಾಮಗ್ರಿಗಳನ್ನು ದರ್ಭೆ ಹರಡಿದ ಮೊರದಲ್ಲಿಟ್ಟು ನಾಲ್ಕು ದಾರಿಗಳು ಸೇರುವ ಸ್ಥಳಕ್ಕೆ ಬಂದು, **"ಬಲಿಂ ಗೃಹ್ಣಂತ್ವಿಮಂ..."** ಎಂಬ ಮಂತ್ರಗಳನ್ನು ಹೇಳಿ ಬಲಿ ದಾನ ಮಾಡಬೇಕು.

ಆಮೇಲೆ ಯಜಮಾನನು ಕೈಕಾಲು ತೊಳೆದು ಮನೆಗೆ ಬಂದು ಆಚಮನ ಮಾಡಿ, ಪೂರ್ಣಾಹುತಿಯನ್ನು ಕೊಟ್ಟು ಆಚಾರ್ಯಾದಿ ಬ್ರಾಹ್ಮಣರ ಪೂಜೆಮಾಡಿ ಆಚಾರ್ಯನಿಗೆ ಎರಡು

Scanned by CamScanner

Scanned with CamScanner

ತತೋ ಯಜಮಾನೋ ಗೃಹಮಾಗತ್ಯ ಕ್ಷಾಲಿತಪಾದ ಆಚಮ್ಯ ಪೂರ್ಣಾಹುತಿಂ ಹುತ್ವಾ ಆಚಾರ್ಯಂ ಸಂಪೂಜ್ಯ ಸದಕ್ಷಿಣಂ ವಸ್ತ್ರಯುಗ್ಮಂ ತಸ್ಮೈ ದದ್ಯಾತ್ ॥ ಋತ್ವಿಗ್ಭ್ಯೋ ಯಥಾಶಕ್ತಿ ಹೇಮ ದಕ್ಷಿಣಾಂ ದತ್ವಾ ಅನ್ಯೇಭ್ಯಶ್ಚ ಭೂಯಸೀಂ ದದ್ಯಾತ್ ॥ ಸ್ಥಾಪಿತದೇವತಾನಾಮುತ್ತರಪೂಜಾಂ ವಿಸರ್ಜನಪೂರ್ವ-ಕಮಾಚಾರ್ಯಾಯ ಸಮರ್ಪಣಂ ವಿಧಾಯ ಪರಿಸ್ತರಣವಿಸರ್ಜನಾದಿ ವಿಭೂತಿಧಾ-ರಣಾಂತಂ ಕೃತ್ವಾ ಗಚ್ಛ ಗಚ್ಛೇತಿ ಅಗ್ನಿಂ ವಿಸೃಜ್ಯ ದಶಾವರಾನ್ ಬ್ರಾಹ್ಮಣಾನ್ ಭೋಜಯೇದೀಶ್ವರಾರ್ಪಣಂ ಕುರ್ಯಾತ್ ॥

॥ ಇತಿ ವೈನಾಯಕೀ ಶಾಂತಿಃ ॥

ವಸ್ತ್ರಗಳನ್ನು ದಕ್ಷಿಣೆಯೊಂದಿಗೆ ಕೊಟ್ಟು, ಋತ್ವಿಜರಿಗೂ ಯಥಾಶಕ್ತಿ ದಕ್ಷಿಣೆ ಕೊಟ್ಟು ಇತರ ಬ್ರಾಹ್ಮಣರಿಗೂ ಭೂರಿದಕ್ಷಿಣೆಯನ್ನು ಕೊಡಬೇಕು. ಬಳಿಕ ಸ್ಥಾಪಿಸಿದ ದೇವತೆಗಳಿಗೆ ಉತ್ತರ ಪೂಜೆಯನ್ನು ಮಾಡಿ, ವಿಸರ್ಜಿಸಿ ಸಕಲವಸ್ತುಗಳನ್ನೂ ಆಚಾರ್ಯನಿಗೆ ಸಮರ್ಪಿಸಿ, ಪರಿಸ್ತರಣ ವಿಸರ್ಜನೆಯಿಂದ ವಿಭೂತಿಧಾರಣದ ವರೆಗೆ ಸ್ಥಾಲೀಪಾಕದಲ್ಲಿ ಹೇಳಿದ ಕರ್ಮಗಳನ್ನು ಪೂರಯಿಸಿ, **"ಗಚ್ಛ ಗಚ್ಛ...."** ಎಂದು ಅಗ್ನಿಯನ್ನು ವಿಸರ್ಜಿಸಿ, ಬ್ರಾಹ್ಮಣರಿಗೆ ಭೋಜನವಿತ್ತು ಈಶ್ವರಾರ್ಪಣ ಮಾಡಬೇಕು.

॥ ವಿನಾಯಕಶಾಂತಿ ಸಮಾಪ್ತ ॥

Scanned by CamScanner
Scanned with CamScanner

॥ ನಾರಾಯಣಬಲಿ-ನಾಗಬಲಿ-ಮುಹೂರ್ತ ನಿರ್ಣಯಃ ॥

ಬಲಿರ್ನಾರಾಯಣಾಖ್ಯೋ ವೈ ಪಂಚಮ್ಯಾಂ ಶ್ರವಣೇಥವಾ ॥ ಏಕಾದಶ್ಯಾಂ ಚ ಶುಕ್ಲಾಯಾಂ ನರೈಃ ಕಾರ್ಯೋ ಸುತೇಪ್ಸುಭಿಃ ॥ ಪ್ರೇತಪೀಡಾವಿನಾಶೇನ ತೇನಸ್ಯಾತ್ಸಂತತಿರ್ನೃಣಾಂ ॥

ನಾಗವಧನಿವೃತ್ಯರ್ಥಂ ಕಾರ್ಯೋ ನಾಗಬಲಿಃ ಶುಭಃ ಆಶ್ಲೇಷಾ ಋಕ್ಷಯುಕ್ತಾಯಾಂ ನವಮ್ಯಾಂ ಪಂಚಮಿ ದಿನೇ ॥ ಪೌರ್ಣಮಾಸ್ಯಾಮವಾಯಾಂ ವಾ ತೇನಸ್ಯಾತ್ಸಂತತಿಃ ಶುಭಾ ॥

॥ ವೀರಭೋಜನ ವಿಧಿಃ ॥

ನಾರಾಯಣಬಲಿದಿನಾತ್ಪೂರ್ವದಿವಸೇ ಅಧಿಕಾರಸಿದ್ಧ್ಯರ್ಥಂ ವೀರಭೋಜನಂ ಕಾರ್ಯಂ ॥ ತೇ ವೀರಾ ಏಕಾದಶ ॥ ವೀರಭದ್ರಶ್ಚ ಶಂಭುಶ್ಚ ಗಿರೀಶಶ್ಚ ಮಹಾಯಶಾಃ ॥ ಅಜೈಕಪಾದಹಿರ್ಬುಧ್ನ್ಯಃ ಪಿನಾಕೀ ಚಾಪರಾಜಿತಃ ॥ ಭುವನಾಧೀಶ್ವರಶ್ಚೈವ ಕಪಾಲೀ ಚ ವಿಶಾಂಪತಿಃ ॥ ಸ್ಥಾಣುರ್ಭರ್ಗಶ್ಚ ಭಗವಾನ್ ರುದ್ರಾ ಏಕಾದಶ ಸ್ಮೃತಾಃ ॥ ವೀರಭೋಜನಾರ್ಥಂ ಏಕಾದಶ ಅಷ್ಟೌ ಚತುರೋ ವಾ ಬ್ರಾಹ್ಮಣಾನ್ ಆಮಂತ್ರ್ಯ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ॥ ಮಮ ಇಹ ಜನ್ಮನಿ ಜನ್ಮಾಂತರೇ ಚ ಪಾಖಂಡ್ಯಾದಿ ಜನಿತಪ್ರತ್ಯವಾಯಪರಿಹಾರಾರ್ಥಂ ನಾರಾಯಣಬಲಿಂ ಕರ್ತುಮಧಿಕಾರಸಿದ್ಧ್ಯರ್ಥಂ ಚ ವೀರಭೋಜನಂ ಕರಿಷ್ಯೇ ಇತಿ ಸಂಕಲ್ಪ್ಯ ॥ ವೀರಭದ್ರಾದಿ ಪ್ರೀತ್ಯೈ ತಾನ್ ಷೋಡಶೋಪಚಾರೈಃ ಪೂಜಯೇತ್ ॥ ತತೋ ನಾನಾ ಪಕ್ವಾನ್ನಸಂಯುಕ್ತಂ ಅಪೂಪಾನ್ನಂ ಸಂಕಲ್ಪ್ಯ

ನಾರಾಯಣಬಲಿ ಮತ್ತು ನಾಗಬಲಿಯ ಮುಹೂರ್ತನಿರ್ಣಯ:- ಶುಕ್ಲ ಅಥವಾ ಕೃಷ್ಣಪಕ್ಷದ ಪಂಚಮಿಯ ದಿನ, ಶುಕ್ಲಪಕ್ಷದ ಏಕಾದಶಿಯ ದಿನ ಶ್ರವಣಾ ನಕ್ಷತ್ರದಲ್ಲಿ ನಾರಾಯಣ ಬಲಿಯನ್ನು ಮಾಡಿದರೆ ಸಂತತಿ ಪ್ರತಿಬಂಧಕವಾದ ಪ್ರೇತೋಪದ್ರವು ದೂರವಾಗಿ ಸಂತಾನ ಪ್ರಾಪ್ತಿಯಾಗುತ್ತದೆ. ಈ ಜನ್ಮದಲ್ಲಿ ಅಥವಾ ಜನ್ಮಾಂತರದಲ್ಲಿ ಮಾಡಿದ ದೋಷಗಳು ಪರಿಹಾರವಾಗಿ ಉತ್ತಮ ಸಂತತಿ ಪ್ರಾಪ್ತಿಯಾಗಬೇಕಾದರೆ ಆಶ್ಲೇಷಾ ನಕ್ಷತ್ರಯುಕ್ತ ನವಮಿ, ಚಂದ್ರದರ್ಶನಯುಕ್ತ ಅಮಾವಾಸ್ಯೆ ಅಥವಾ ಹುಣ್ಣಿಮೆ ಇಲ್ಲವೇ ಪಂಚಮಿಯ ದಿನ ನಾಗಬಲಿಯನ್ನು ಮಾಡಬೇಕು.

Scanned by CamScanner

ಬ್ರಾಹ್ಮಣಸಮೀಪೇ ತಿಷ್ಠನ್ ಬದ್ಧಾಂಜಲಿಃ ಪ್ರಾರ್ಥಯೇತ್ ॥ ಶಿವೋ ವಿಷ್ಣುಶ್ಚ ರುದ್ರಶ್ಚ ಗಿರೀಶಶ್ಚ ಮಹಾಯಶಾಃ ॥ ಸಮುದ್ರಾತ್ಮಾಸರಿದ್ರೂಪಾ ತುಷ್ಟಾಸ್ತು ಮಮ ಸರ್ವದಾ ॥ ಇತಿ ಸಂಪ್ರಾರ್ಥ್ಯ ಭೋಜನಾನಂತರಂ ತಾಂಬೂಲವಸ್ತ್ರದಕ್ಷಿಣಾದಿನಾ ತೋಷಯಿತ್ವಾ ತೇಷಾಂ ವಚೋ ಗೃಹೀತ್ವಾ ಭವದನುಜ್ಞಯಾ ನಾರಾಯಣಬಲಿಃ ಕ್ರಿಯತೇ ॥ ತೇ ದ್ವಿಜಾ ಕುರುಷ್ವ ಇತಿ ಬ್ರೂಯುಃ ॥

॥ ಇತಿ ವೀರಭೋಜನಂ ॥

ವೀರಭೋಜನ ವಿಧಿ:- ನಾರಾಯಣಬಲಿಯ ಹಿಂದಿನ ದಿನ ಅಧಿಕಾರ ಸಿದ್ಧಿಗೋಸ್ಕರ ವೀರಭೋಜನ ಮಾಡಬೇಕು. 1. ವೀರಭದ್ರ, 2. ಶಂಭು, 3. ಗಿರೀಶ, 4. ಅಜೈಕಪಾತ್, 5. ಅಹಿರ್ಬುಧ್ನ್ಯ, 6. ಪಿನಾಕೀ, 7. ಭುವನಾಧೀಶ್ವರ, 8. ಕಪಾಲೀ, 9. ಸ್ಥಾಣು, 10. ಭರ್ಗ, 11. ರುದ್ರ ಎಂಬ ಹನ್ನೊಂದು ವೀರರು. ಇವರ ಪ್ರೀತ್ಯರ್ಥ 11, 8 ಅಥವಾ 4 ಮಂದಿ ಬ್ರಾಹ್ಮಣರನ್ನು ಆಮಂತ್ರಿಸಿ, ಆಚಮನಾದಿಗಳನ್ನು ಮಾಡಿ **"ಮಮ...ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಆ ಬ್ರಾಹ್ಮಣರನ್ನು ಷೋಡಶೋಪಚಾರಗಳಿಂದ ಪೂಜಿಸಿ, ಅವರಿಗೆ ಪಕ್ವಾನ್ನದ ಭೋಜನವಿತ್ತು **"ಶಿವೋ ವಿಷ್ಣುಶ್ಚ...ಸರ್ವದಾ"** ಎಂದು ಪ್ರಾರ್ಥಿಸಿ ತಾಂಬೂಲದಕ್ಷಿಣಾದಿಗಳಿಂದ ಸಂತುಷ್ಟಿಗೊಳಿಸಿ **"ಭವದನುಜ್ಞಯಾ...ಕ್ರಿಯತೇ"** ಎಂದು ಹೇಳಬೇಕು. ಅವರು **"ಕುರುಷ್ವ"** ಎನ್ನಬೇಕು.

॥ ವೀರಭೋಜನವಿಧಿ ಸಮಾಪ್ತ ॥

Scanned by CamScanner

Scanned with CamScanner

॥ ನಾರಾಯಣಬಲಿಃ ॥

॥ ಶ್ರೀಃ ॥ ನದೀತೀರೇ ದೇವಾಲಯಾದೌ ನಾರಾಯಣಬಲಿಂ ಕುರ್ಯಾತ್ ॥ ಧೃತತ್ರಿಪುಂಡ್ರೋ ಧೃತಶುಕ್ಲವಾಸಾಃ ಶುಚಿಃ ಪವಿತ್ರಪಾಣಿಃ ಪ್ರಾಙ್ಮುಖ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ॥ ಮದೀಯ ಕುಲಾಭಿವೃದ್ಧಿಪ್ರತಿಬಂಧಕಪ್ರೇತಸ್ಯ ಪ್ರೇತತ್ವನಿವೃತ್ತ್ಯರ್ಥಂ ನಾರಾಯಣಬಲಿಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ತತಃ ಪೂರ್ವಾದಿ ಚತುರ್ದಿಕ್ಷು ಸಪ್ತಧಾನ್ಯೋಪರಿ ಚತುಃ ಕುಂಭಾನ್ ಸ್ಥಾಪಯಿತ್ವಾ ಮಧ್ಯೇ ಏಕಂ ಕುಂಭಂ ಸ್ಥಾಪಯೇತ್ ॥ ಮಹೀದ್ಯೌರಿತ್ಯಾದಿಮಂತ್ರೈಃ ಸಂಸ್ಥಾಪನಂ ॥ ಆಪೋಹಿಷ್ಠೇತಿ ಮಂತ್ರೇಣಾಭಿಮಂತ್ರ್ಯ ॥ ಸರ್ವೌಷಧಿತಿಲಗಂಧಾದಿಪ್ರಕ್ಷಿಪ್ಯ ॥ ವಸ್ತ್ರೇಣ ವೇಷ್ಟಯಿತ್ವಾ ಪಂಚರತ್ನಾನಿ ಚ ಪ್ರಕ್ಷಿಪ್ಯ ತದುಪರಿ ತಾಮ್ರಾದಿಪಾತ್ರೇ ವಿಷ್ಣು ಶಿವ ಬ್ರಹ್ಮ ಯಮ ಪ್ರೇತಾನಾಂ ಪಂಚಪ್ರತಿಮಾಃ ಸ್ಥಾಪಯೇತ್ ॥ ತದ್ಯಥಾ ॥ ತತ್ರಾದೌ ಉತ್ತರೇ ಕಲಶೇ ॥ ಓಂ ಇಷೇತ್ವೋರ್ಜೇತ್ವಾವಾಯವಸ್ಥದೇವೋವಃ ಸವಿತಾಪ್ರಾರ್ಪಯತು ॥ ಶ್ರೇಷ್ಠತಮಾಯಕರ್ಮಣೇ ॥ ಇತಿ ಮಂತ್ರೇಣ ವಿಷ್ಣುಪ್ರತಿಮಾಂ ಪ್ರಾಣಪ್ರತಿಷ್ಠಾಪೂರ್ವಕಂ ಸಂಸ್ಥಾಪ್ಯ ॥ ಪುರುಷಸೂಕ್ತೇನ ಷೋಡಶೋಪಚಾರೈಃ

॥ ನಾರಾಯಣಬಲಿ ॥

ನದೀತೀರದಲ್ಲಿ ಅಥವಾ ಯಾವುದಾದರೂ ದೇವಾಲಯದಲ್ಲಿ ನಾರಾಯಣಬಲಿಯನ್ನು ಮಾಡಬೇಕು. ಸ್ನಾನ ಮಾಡಿ ತ್ರಿಪುಂಡ್ರವನ್ನೂ ಬಿಳಿಬಟ್ಟೆಯನ್ನೂ ಧರಿಸಿ ಪೂರ್ವ ಮುಖವಾಗಿ ಕುಳಿತು ಪವಿತ್ರ ಧರಿಸಿ ಆಚಮನ ಪ್ರಾಣಾಯಾಮ ದೇಶಕಾಲಸಂಕೀರ್ತನಾದಿಗಳನ್ನು ಮಾಡಿ **"ಮದೀಯ...ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ಆಮೇಲೆ ಪೂರ್ವದಿಂದ ಉತ್ತರದ ವರೆಗೆ ನಾಲ್ಕು ದಿಕ್ಕುಗಳಲ್ಲಿ ಸಪ್ತಧಾನ್ಯಗಳ ರಾಶಿಗಳ ಮೇಲೆ ನಾಲ್ಕು ಕಲಶಗಳನ್ನು ಸ್ಥಾಪಿಸಿ ಅವುಗಳ ಮಧ್ಯದಲ್ಲಿ ಒಂದು ಕಲಶವನ್ನಿಡಬೇಕು. **"ಮಹೀದ್ಯೌ"** ಮುಂತಾದ ಮಂತ್ರಗಳಿಂದ ಕಲಶಸ್ಥಾಪನೆಯ ಎಲ್ಲ ಕರ್ಮಭಾಗಗಳನ್ನೂ **"ಆಪೋಹಿಷ್ಠಾ"** ಮಂತ್ರದಿಂದ ಅಭಿಮಂತ್ರಣವನ್ನೂ ಮಾಡಬೇಕು. ಸರ್ವೌಷಧಿಗಳನ್ನೂ, ತಿಲಗಂಧಾದಿಗಳನ್ನೂ ಹಾಕಿ, ಬಟ್ಟೆಯಿಂದ ಕಲಶಗಳನ್ನು ಆವರಿಸಿ, ಪಂಚರತ್ನಗಳನ್ನೂ ಹಾಕಿ ಅವುಗಳ ಮೇಲೆ ತಾಮ್ರದ ತಟ್ಟೆಗಳಲ್ಲಿ ವಿಷ್ಣು, ಶಿವ, ಬ್ರಹ್ಮ ಮತ್ತು ಯಮನ ನಾಲ್ಕು ಪ್ರತಿಮೆಗಳನ್ನು ಉತ್ತರ, ಪೂರ್ವ, ಪಶ್ಚಿಮ ಮತ್ತು ದಕ್ಷಿಣ

Scanned by CamScanner
Scanned with CamScanner

ಪೂಜಯೇತ್ ॥ ಓಂ ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯದೇವಮೃತ್ವಿಜಂ ॥ ಹೋತಾರಂ ರತ್ನಧಾತಮಂ ॥ ಇತಿ ಮಂತ್ರೇಣ ಪೂರ್ವಕಲಶೇ ಬ್ರಹ್ಮಾಣಂ ಪ್ರಾಣಪ್ರತಿಷ್ಠಾಪೂರ್ವಕಂ ಆವಾಹಯೇತ್ ॥ ಹಿರಣ್ಯಗರ್ಭ ..... ಇತಿ ಮಂತ್ರೇಣ ಪೂಜಯೇತ್ ॥ ಓಂ ಅಗ್ನಆಯಾಹಿವೀತಯೇಗೃಣಾನೋಹವ್ಯ-ದಾತಯೇ ॥ ನಿಹೋತಾಸತ್ಸಿಬರ್ಹಿಷಿ ॥ ಇತಿ ಮಂತ್ರೇಣ ಪಶ್ಚಿಮಕಲಶೇ ಶಿವಂ ಪ್ರಾಣಪ್ರತಿಷ್ಠಾಪೂರ್ವಕಂ ಸಂಸ್ಥಾಪ್ಯ ಕದ್ರುದ್ರಾಯೇತಿ ಪೂಜಯೇತ್ ॥

ದಕ್ಷಿಣಕಲಶೇ ॥ ಓಂ ಯಮಾಯ ಸೋಮಂ ..... ॥ ಇತಿ ಮಂತ್ರೇಣ ಪ್ರಾಣಪ್ರತಿಷ್ಠಾಪೂರ್ವಕಂ ಯಮಂ ಆವಾಹ್ಯ ಪೂಜಯೇತ್ ॥ ಮಧ್ಯಕುಂಭೋಪರಿ ದರ್ಭಮಯಂ ಪ್ರೇತಂ ನಾಮಮಂತ್ರೇಣ ಷೋಡಶೋಪ-ಚಾರೈಃ ಪೂಜಯೇತ್ ॥ ತದ್ಯಥಾ ॥ ದಕ್ಷಿಣಾಮುಖಃ ಅಪಸವ್ಯಂ ॥ ಪ್ರಾಣ-

---

ಕಲಶಗಳಲ್ಲಿ **"ಇಷೇತ್ವೋ..."** ಮುಂತಾದ ನಾಲ್ಕು ಮಂತ್ರಗಳಿಂದ ಪ್ರತಿಮೆಗಳನ್ನಿಟ್ಟು ಆವಾಹಿಸಿ ಪೂಜಿಸಬೇಕು.

ನಂತರ ಮಧ್ಯದಲ್ಲಿರುವ ಕಲಶದ ಮೇಲೆ ಪ್ರೇತವನ್ನು ಪ್ರತಿಷ್ಠಾಪಿಸಬೇಕು. ತೆಂಕುದಿಕ್ಕಿಗೆ ಮುಖಮಾಡಿ ಅಪಸವ್ಯದಿಂದ ದರ್ಭೆಗಳ ಸೂಡಿಯ ಪ್ರೇತವನ್ನು **"ಕಾಶ್ಯಪಗೋತ್ರಸ್ಯ...ಪ್ರಾಣಾ ಇಹ ಪ್ರಾಣಾಃ" "ಕಾಶ್ಯಪಗೋತ್ರಸ್ಯ...ಇಹ ಜೀವಸ್ಥಿತಃ"** ಎಂದು ಮುಂತಾಗಿ ಗ್ರಹಯಜ್ಞದಲ್ಲಿ ಹೇಳಿದಂತೆ ಪ್ರಾಣಪ್ರತಿಷ್ಠೆಯನ್ನು ಮಾಡಬೇಕು. ಆಮೇಲೆ **"ಕಾಶ್ಯಪಗೋತ್ರಾಯ ... ಆವಾಹನಾರ್ಥೇ..."** ಇತ್ಯಾದಿಯಾಗಿ ಷೋಡಶೋಪಚಾರ ಪೂಜೆಯನ್ನು ಮಾಡಬೇಕು.

ಆಮೇಲೆ ಸವ್ಯ ಮಾಡಿಕೊಂಡು ಈಶಾನ್ಯದಲ್ಲಿ ಸ್ಥಂಡಿಲವನ್ನು ಹಾಕಿ ಸಂಸ್ಕಾರಾದಿಗಳನ್ನು ಮಾಡಿ ಅಗ್ನಿಪ್ರತಿಷ್ಠಾಪನೆ ಮಾಡಿದ ನಂತರ ಅನ್ವಾಧಾನ ಮಾಡಬೇಕು. **"ಅಸ್ಮಿನ್ನನ್ವಾಹಿತೇಗ್ನೌ..."** ಎಂದು ಮೊದಲಾಗಿ ಆಜ್ಯಭಾಗಾಂತದ ವರೆಗೆ ಹೇಳಿ **"ಅತ್ರ ಪ್ರಧಾನಂ" "ಪುರುಷಂ.... ಯಕ್ಷ್ಯೇ"** ಎಂದು ಸೇರಿಸಿಕೊಳ್ಳಬೇಕು. **"ಶೇಷೇಣ ಸ್ವಿಷ್ಟಕೃತ.."** ಎಂದು ಮುಂದೆ ಪೂರ್ತಿ ಹೇಳಬೇಕು, ಬಳಿಕ ಸ್ಥಾಲೀಪಾಕದಲ್ಲಿ ಹೇಳಿದಂತೆ ಚರುಮುಷ್ಟಿನಿರ್ವಾಪಾದಿಗಳನ್ನು ಮಾಡಿ ಚರುವನ್ನು ತಯಾರಿಸಿ, ಆಜ್ಯಭಾಗಾಂತದ ವರೆಗಿನ ಹೋಮವನ್ನು ಮಾಡಿ, ಪುರುಷಸೂಕ್ತದ 16 ಋಕ್‌ಗಳಿಂದ 16 ಆಹುತಿಗಳನ್ನು **"ಪುರುಷಾಯ ನಾರಾಯಣಾಯೇದಂ ನಮಮ"** ಎಂದು ಸಮರ್ಪಿಸಬೇಕು. ಬಳಿಕ ಸ್ವಿಷ್ಟಕೃದಾದಿ ಹೋಮಶೇಷವನ್ನು ಮುಗಿಸಿ, ಆವಾಹಿಸಿದ ಪ್ರೇತಕ್ಕೆ ಹತ್ತು ಪಿಂಡಗಳನ್ನು ಮುಂದೆ ವಿವರಿಸಿದ ಕ್ರಮದಂತೆ ಹಾಕಬೇಕು.

Scanned by CamScanner

ಪ್ರತಿಷ್ಠಾಪನೇ (ಕಾಶ್ಯಪಗೋತ್ರಸ್ಯ ದೇವದತ್ತಪ್ರೇತಸ್ಯ ವಿಷ್ಣುದ್ದೈವತಸ್ಯ ದರ್ಭ-ಮಯ್ಯಾಂ ಮೂರ್ತೌ) ಪ್ರಾಣಾ ಇಹ ಪ್ರಾಣಾಃ ಕಾಶ್ಯಪ ... ಇಹ ... ಜೀವಸ್ಥಿತಃ ॥ ಕಾಶ್ಯಪ ..... ಇಹ ಸರ್ವೇಂದ್ರಿಯಾಣಿ ವಾಙ್ ..... ಓಂ ೧೫ ತಚ್ಚ ..... ॥ ಕಾಶ್ಯಪಗೋತ್ರಾಯ ದೇವದತ್ತಪ್ರೇತಾಯ ವಿಷ್ಣು-ದೈವತಾಯ ಆವಾಹನಾರ್ಥೇ ಅಕ್ಷತಾನ್ ಸಮರ್ಪಯಾಮಿ ॥ ಆಸನಾದಿ ಉಪಚಾರೈಃ ಪೂಜಯೇತ್ ॥ ತತಃ ಸವ್ಯಂ ॥ ಈಶಾನ್ಯಾಂ ಸ್ಥಂಡಿಲಾದ್ಯಗ್ನಿ-ಪ್ರತಿಷ್ಠಾಪನಂ ಕೃತ್ವಾ ಅನ್ವಾಧಾನೇ ಆಜ್ಯಭಾಗಾಂತಮುಕ್ತ್ವಾ ಪುರುಷಂ ನಾರಾಯಣಂ ಷೋಡಶವಾರಂ ಚರುಣಾ ಯಕ್ಷ್ಯೇ ॥ ಶೇಷೇಣೇತ್ಯಾದಿ ಅಗ್ನೌ ಸಮಿಧಾವಾಧಾಯ ಸ್ವಗೃಹ್ಯೋಕ್ತಮಾರ್ಗೇಣ ನಿರ್ವಾಪಾದಿ ವಿಧಿನಾ ಚರುಂ ಶ್ರಪಯಿತ್ವಾ ಆಜ್ಯಭಾಗಾಂತಂ ಕೃತ್ವಾ ॥ ಪುರುಷಸೂಕ್ತೇನ ಷೋಡಶ ಆಹುತಿ-ಭಿರ್ಹುತ್ವಾ ಪುರುಷಾಯ ನಾರಾಯಣಾಯೇದಮಿತಿ ಸರ್ವತ್ರ ತ್ಯಾಗಃ ॥ ಸ್ವಿಷ್ಟ-ಕೃದಾದಿ ಹೋಮಶೇಷಂ ಸಮಾಪ್ಯ ॥ ತತೋ ದಶ ಪಿಂಡಾನ್ ದದ್ಯಾತ್ ॥ ತದ್ಯಥಾ ॥ ಅಪಸವ್ಯಂ ವಿಷ್ಣೋಃ ಪೂರ್ವಭಾಗೇ ವೇದಿಂ ಲೇಪಂ ಚ ಕೃತ್ವಾ ॥ ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ ॥ ಪುರೀ ದ್ವಾರಾವತೀ ಚೈವ ಸಪ್ತೈತಾ ಮೋಕ್ಷದಾಯಕಾಃ ಇತಿ ಮಂತ್ರೇಣ ಲೇಪನಂ ಕೃತ್ವಾ ॥ ಅದ್ಯೇತ್ಯಾದಿ ಪೂರ್ವೋಚ್ಚರಿತ ... ಫಲಪ್ರಾಪ್ತ್ಯರ್ಥಂ ಪ್ರೇತಸ್ಯ ಪ್ರೇತತ್ವನಿವೃತ್ಯರ್ಥಂ ನಾರಾಯಣಬಲಿಕರ್ಮಾಂಗಭೂತಂ ದಶಪಿಂಡದಾನಂ ಕರಿಷ್ಯೇ ॥ ಇತಿ ಸಂಕಲ್ಪ್ಯ ಏಕಕರಧೃತೇನ ॥ ಅಪಹತಾಸುರಾರಕ್ಷಾಂಸಿವೇದಿ-

---

ವಿಷ್ಣುವನ್ನು ಪ್ರತಿಷ್ಠಾಪಿಸಿದ ಕಲಶ ಪೂರ್ವಭಾಗದಲ್ಲಿ **"ಅಯೋಧ್ಯಾ ಮಥುರಾ..."** ಎಂಬ ಮಂತ್ರವನ್ನು ಹೇಳಿ ಭೂಮಿಯ ಲೇಪನ ಮಾಡಬೇಕು. **"ಅದ್ಯಪೂರ್ವೋಚ್ಚರಿತ... ಫಲಪ್ರಾಪ್ತ್ಯರ್ಥಂ...ದಶಪಿಂಡದಾನಂ ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಬಲಗೈಯಲ್ಲಿ ದರ್ಭೆಯನ್ನು ಹಿಡಿದು, ಲೇಪನ ಮಾಡಿದ ಆ ಸ್ಥಳದ ಮೇಲೆ **"ಅಪಹತಾ ... ದಿಷದಃ"** ಎಂದು ಪ್ರತಿಸಲವೂ ಹೇಳುತ್ತ ಉತ್ತರದಿಕ್ಕಿನಿಂದ ಆರಂಭಿಸಿ ದಕ್ಷಿಣಕ್ಕೆ ತುದಿಗಳಿರುವಂತೆ ಹತ್ತು ಗೆರೆಗಳನ್ನು ಪೂರ್ವದಿಂದಾರಂಭಿಸಿ ಪಶ್ಚಿಮಕ್ಕೆ ಒಂದರ ಹಿಂದೊಂದರಂತೆ ಎಳೆಯಬೇಕು. ಆ ಗೆರೆಗಳನ್ನು ಪ್ರೋಕ್ಷಿಸಿ ಅವುಗಳ ಮೇಲೆ ದಕ್ಷಿಣಕ್ಕೆ ತುದಿಗಳಿರುವಂತೆ ದರ್ಭೆಗಳನ್ನು ಹರಡಿ ಅವುಗಳ ಮೇಲೆ **"ಶುಂಧಂತಾಂ ಪಿತರಃ"** ಎಂದು ಹೇಳಿ ನೀರನ್ನು ಪ್ರೋಕ್ಷಿಸಬೇಕು. ನಂತರ **"ಕಾಶ್ಯಪಗೋತ್ರ...ಅಯಂತೇ ಪಿಂಡಃ"** ಎಂದು ಹೇಳುತ್ತ 10 ಪಿಂಡಗಳನ್ನು ಎಡ ಮೊಣಕಾಲನ್ನು ಬಗ್ಗಿಸಿ ತೆಂಕು ಮುಖ ಮಾಡಿ ಕುಳಿತು ಅಪಸವ್ಯದಿಂದ ಕೊಡಬೇಕು. ಅವುಗಳ ಮೇಲೆ ತಿಲೋದಕ ಕೊಡಬೇಕು. ಬಳಿಕ **"ಕಾಶ್ಯಪಗೋತ್ರ..."** ಎಂದಾರಂಭಿಸಿ ಅಂಜನಾದಿ ಎಲ್ಲ ಉಪಚಾರಗಳನ್ನೂ ಅರ್ಪಿಸಿ **"ತದ್ವಿಷ್ಣೋಃ...."** ಮಂತ್ರಗಳನ್ನು ಹೇಳಿ **"ಪ್ರಾಪ್ತಿರಸ್ತು"** ಎಂದು ಹೇಳುತ್ತ ಪಿಂಡಗಳ ಮೇಲೆ ಕೈ ಇಡಬೇಕು.

Scanned by CamScanner
Scanned with CamScanner

ಷದಃ ॥ ಇತಿ ಪ್ರತಿಲೇಖಮಂತ್ರಂ ಪಠನ್ ದಕ್ಷಿಣಾಯತಾಃ ಪ್ರತ್ಯಗಪವರ್ಗಾಃ ದಶರೇಖಾಃ ಕುರ್ಯಾತ್ ॥ ತಾಃ ಅಭ್ಯುಕ್ಷ್ಯ ತತ್ರ ದಕ್ಷಿಣಾಗ್ರಕುಶೇಷು ॥ ಅಪಸವ್ಯೇನ ದಕ್ಷಿಣಾಮುಖಃ ಶುಂಧಂತಾಂ ವಿಷ್ಣುರೂಪೀಪ್ರೇತಃ ಇತಿ ದಶ-ಸ್ಥಾನೇಷು ದಕ್ಷಿಣಸಂಸ್ಥಾಃ ಅಪೋತಿಲಯುತಾಃ ಪಿತೃತೀರ್ಥೇನ ನಿನೀಯ ॥ ತತ್ರ ಮಧುತಿಲಘೃತಮಿಶ್ರಚರುಪಿಂಡಾನ್ ದಶ ದದ್ಯಾತ್ ॥ ಯಥಾ ॥ ಕಾಶ್ಯಪ-ಗೋತ್ರ ದೇವದತ್ತಪ್ರೇತ ವಿಷ್ಣುದೈವತ ಅಯಂ ತೇ ಪಿಂಡಃ ॥ ಏವಂ ದಕ್ಷಿಣಾ-ಮುಖಃ ಪ್ರಾಚೀನಾವೀತೀ ವಾಮಂ ಜಾನ್ವಾಚ್ಯ ಪಿತೃತೀರ್ಥೇನ ದದ್ಯಾತ್ ॥ ತಸ್ಯೋಪರಿ ತಿಲೋದಕಮುಪತಿಷ್ಠತಾಂ ॥ ಕಾಶ್ಯಪಗೋತ್ರ ದೇವದತ್ತಪ್ರೇತ ವಿಷ್ಣುದೈವತಾಯ ಅಂಜನಾಭ್ಯಂಜನಮುಪತಿಷ್ಠತಾಂ ॥ ಕಾ... ದೇ .... ವಿ .... ಗಂಧತುಲಸೀಭೃಂಗಿರಾಜಪುತ್ರಪುಷ್ಪವಸ್ತ್ರಮುಪ...॥ ಕಾ .... ದೇ .... ವಿ .... ಧೂಪದೀಪನೈವೇದ್ಯಮುಪ .... ॥ ಕಾ .... ದೇ .... ವಿ .... ತಾಂಬೂಲದಕ್ಷಿಣಾಮುಪ .... ॥ ಕಾ .... ದೇ .... ವಿ .... ಸರ್ವೋಪಚಾರಾರ್ಥೇ ತಿಲೋದಕಮುಪ ..... ॥ ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ ॥ ದಿವೀವಚಕ್ಷುರಾತತಂ ॥ ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃಸಮಿಂಧತೇ ॥ ವಿಷ್ಣೋರ್ಯತ್ಪರಮಂ ಪದಂ ॥ ಪ್ರೇತ-ಸ್ಯೋತ್ತಮಲೋಕಪ್ರಾಪ್ತಿರಸ್ತು ॥

ತತಃ ಸವ್ಯೇನ ಅದ್ಯೇತ್ಯಾದಿ ಪೂರ್ವೋಚ್ಚರಿತ ಏವಂಗುಣವಿಶೇಷಣ-ವಿಶಿಷ್ಟಾಯಾಂ ಶುಭಪುಣ್ಯತಿಥೌ ॥ ಅಪಸವ್ಯೇನ ನಾರಾಯಣಬಲಿಕರ್ಮಾಂಗ-

---

ಆಮೇಲೆ ಸವ್ಯ ಮಾಡಿಕೊಂಡು **"ಪೂರ್ವೋಚ್ಚರಿತ...ಶುಭಪುಣ್ಯತಿಥೌ"** ಎಂದು ಹೇಳಿ, ಅಪಸವ್ಯ ಮಾಡಿ **"ನಾರಾಯಣಬಲಿಕರ್ಮಾಂಗಭೂತಂ ...ನಮಮ"** ಎಂದು ಸಮರ್ಪಣ ಮಾಡಿ, ಪಿಂಡಗಳ ಮೇಲೆ ಗಂಧಾಕ್ಷತೆಗಳನ್ನು ಹಾಕಿ ಸವ್ಯದಿಂದ ಪಿಂಡವಿಸರ್ಜನೆ ಮಾಡಬೇಕು. ಪುರುಷಸೂಕ್ತದಿಂದ ಶಂಖೋದಕವನ್ನು ಅಭಿಮಂತ್ರಣ ಮಾಡಿ, ಪ್ರತಿಯೊಂದು ಋಕ್ಕನ್ನೂ ಹೇಳುತ್ತ ಪ್ರೇತಕ್ಕೆ ತರ್ಪಣ ಕೊಡಬೇಕು. ವಿಷ್ಣು ಮೊದಲಾದ ನಾಲ್ಕು ದೇವತೆಗಳಿಗೆ ಬಲಿಕೊಟ್ಟು ಪಿಂಡಗಳನ್ನು ಹೊಳೆಯಲ್ಲಿ ಬಿಟ್ಟು ಪವಿತ್ರವನ್ನು ಕಳಚಿ ಕೈಕಾಲು ತೊಳೆಯಬೇಕು.

Scanned by CamScanner

ಭೂತಂ ಕಾಶ್ಯಪಗೋತ್ರಸ್ಯ ದೇವದತ್ತಪ್ರೇತಸ್ಯ ವಿಷ್ಣುದೈವತಸ್ಯ ಕೃತೈತದ್ದಶ-ಪಿಂಡಾರ್ಚಾಯಾಂ ಅನುಲೇಪನಾದಿ ಯದ್ದತ್ತಂ ತದ್ವಿಷ್ಣುದೈವತಾಯ ಪ್ರೇತಾಯ ನಮಮ ॥ ಇತಿ ಸಮರ್ಪಣಂ ಕೃತ್ವಾ ಪಿಂಡೋಪರಿ ಗಂಧಾಕ್ಷತಾನ್ ಕ್ಷಿಪ್ತ್ವಾ ಸವ್ಯಂ ವಿಸರ್ಜಯೇತ್ ॥ ಪುರುಷಸೂಕ್ತಾಭಿಮಂತ್ರಿತಶಂಖೋದ-ಕೇನ ಪ್ರೇತಂ ಪ್ರತ್ಯೃರ್ಚಂ ತರ್ಪಯಿತ್ವಾ ॥ ವಿಷ್ಣ್ವಾದಿಭ್ಯೋ ಚತುರ್ಭ್ಯೋ ಬಲಿಂ ದದ್ಯಾತ್ ॥ ಪಿಂಡಾನ್ ನದ್ಯಾಂ ಕ್ಷಿಪೇತ್ ॥ ತತಃ ಪವಿತ್ರೇ ವಿಸೃಜ್ಯ ಹಸ್ತೌ ಪಾದೌ ಚ ಪ್ರಕ್ಷಾಲ್ಯ ॥

ಆಚಮ್ಯ ಪುನಃ ಪವಿತ್ರೇ ಧೃತ್ವಾ ಶ್ವೋಭೂತೇ ಮಧ್ಯಾಹ್ನೇ ಸದ್ಯೋ ವಾ ದರ್ಭಾಸನಾದೌ ಉಪವಿಶ್ಯ ಕರಿಷ್ಯಮಾಣ ನಾರಾಯಣಬಲಿಶ್ರಾದ್ಧೇ ಕ್ಷಣಃ ಕ್ರಿಯತಾಂ ಇತ್ಯುಕ್ತ್ವಾ ಏಕಂ ತ್ರೀನ್ ಪಂಚ ವಾ ವಿಪ್ರಾನ್ ನಿಮಂತ್ರ್ಯ ಉಪೋಷಣಂ ಕುರ್ಯಾತ್ ॥ ಶ್ವೋಭೂತೇ ಮಧ್ಯಾಹ್ನೇ ಪೂರ್ವಸ್ಥಾಪಿತಂ ವಿಷ್ಣುಮಭ್ಯರ್ಚ್ಯ ದರ್ಭಾಸನಾದಾವುಪವಿಶ್ಯ ಪ್ರಾಙ್ಮುಖಃ ದೇಶಕಾಲೌ ಸ್ಮೃತ್ವಾ ॥ ಏವಂ ಗುಣವಿಶಿಷ್ಟಾಯಾಂ ಶುಭಪುಣ್ಯತಿಥೌ ಮಮಾತ್ಮನಃ ಶ್ರುತಿಸ್ಮೃತಿಪುರಾಣೋಕ್ತ ಫಲಪ್ರಾಪ್ತ್ಯರ್ಥಂ ಶ್ರೀಪರಮೇಶ್ವರಪ್ರೀತ್ಯರ್ಥಂ ಅಪಸವ್ಯಂ ನಾರಾಯಣಬಲಿಕರ್ಮಾಂಗತ್ವೇನ ವಿಷ್ಣುಬ್ರಹ್ಮಶಿವಯಮವಿಷ್ಣುರೂಪಪ್ರೇತೋದ್ದೇಶೇನ ಏಕೋದ್ದಿಷ್ಟವಿಧಿನಾ ಶ್ರಾದ್ಧಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ಏಕೋದ್ದಿಷ್ಟ-ವಿಧಿನಾ ಪಾದಪ್ರಕ್ಷಾಲನಾದಿ ತೃಪ್ತಿಪ್ರಶ್ನಾಂತಂ ಕೃತ್ವಾ ॥ ತದ್ಯಥಾ ॥

ನಾರಾಯಣಬಲಿಶ್ರಾದ್ಧೇ ಪಾದ್ಯಮುಪತಿಷ್ಠತಾಂ ॥ ನಾ. ಬ. ಶ್ರಾ. ಆಸನಮುಪ. ಕ್ಷಣಾಗ್ರೇ ದಕ್ಷಿಣಾಗ್ರಕುಶೋಪರಿ ಅರ್ಘ್ಯಪಾತ್ರಾಣ್ಯಾಸಾದ್ಯ ತೇಷು

ಮರುದಿನ ಮಧ್ಯಾಹ್ನ ಅಥವಾ ಅದೇದಿನ ಆಚಮನ ಮಾಡಿ ಪವಿತ್ರ ಧರಿಸಿ ದರ್ಭಾಸನದ ಮೇಲೆ ಕುಳಿತು, "**ಕರಿಷ್ಯಮಾಣ ..... ಕ್ರಿಯತಾಂ**" ಎಂದು ಹೇಳಿ ಒಬ್ಬ, ಮೂವರು ಅಥವಾ ಐದು ಮಂದಿ ಬ್ರಾಹ್ಮಣರನ್ನು ಕ್ಷಣೆಸಬೇಕು. ತಾನು ಉಪವಾಸದಿಂದಿರಬೇಕು. ಮರುದಿನ ಮಧ್ಯಾಹ್ನ ಮೊದಲು ಸ್ಥಾಪಿಸಿದ ವಿಷ್ಣುವನ್ನು ಪೂಜಿಸಿ, ದರ್ಭಾಸನದ ಮೇಲೆ ಕುಳಿತು ದೇಶಕಾಲ ಸ್ಮರಣೆಮಾಡಿ, "**ಏವಂಗುಣ...**" ಎಂದು ಸಂಕಲ್ಪ ಮಾಡಬೇಕು.

ವಿಷ್ಣು, ಬ್ರಹ್ಮಾ, ಶಿವ, ಯಮ ಮತ್ತು ಪ್ರೇತ ಇವರನ್ನು ಉದ್ದೇಶಿಸಿ ಏಕೋದ್ದಿಷ್ಟ ಕ್ರಮದಿಂದ ಪಾದಪ್ರಕ್ಷಾಲನದಿಂದ ತೃಪ್ತಿಪ್ರಶ್ನೆಯ ವರೆಗಿನ ಕರ್ಮಗಳನ್ನು ಮಾಡಬೇಕು. "**ನಾರಾಯಣ ಬಲಿಶ್ರಾದ್ಧೇ ಪಾದ್ಯಮುಪತಿಷ್ಠತಾಂ**" ಎಂಬ ಪಾದ್ಯವನ್ನು, ಹಾಗೆಯೇ ಆಸನವನ್ನೂ ಕೊಟ್ಟು ದಕ್ಷಿಣಕ್ಕೆ ತುದಿಮಾಡಿ ದರ್ಭೆಗಳನ್ನು ಹಾಕಿ ಅವುಗಳ ಮೇಲೆ ಅರ್ಘ್ಯಪಾತ್ರೆಗಳನ್ನಿಟ್ಟು ಅವುಗಳಲ್ಲಿ ನೀರನ್ನು ಹಾಕಿ ದರ್ಭೆಯ ಪವಿತ್ರಗಳನ್ನಿಟ್ಟು ತಿಲಗಳನ್ನು ಹಾಕಿ "**ನಾ. ಬ. ಶ್ರಾದ್ಧೇ ಇದಮರ್ಘ್ಯ...**" ಎಂದು ಅರ್ಘ್ಯ ಕೊಡಬೇಕು. ಹಾಗೆಯೇ ಚಂದನ, ಭೃಂಗಿರಾಜಪತ್ರ

Scanned by CamScanner
Scanned with CamScanner

ಜಲಮಾಸಿಚ್ಯ ತತ್ರ ಕುಶಪವಿತ್ರಾಣಿ ನಿಧಾಯ ತೂಷ್ಣೀಂ ತಿಲಾನ್ ವಿಕೀರ್ಯ ॥ ನಾ. ಬ. ಶ್ರಾ. ಇದಮರ್ಘ್ಯಮುಪ. ॥ ಇತ್ಯರ್ಘ್ಯಂ ದತ್ವಾ ॥ ನಾ. ಬ. ಶ್ರಾ. ವಿಲೇಪನಾರ್ಥೇಚಂದನಮುಪ. ॥ ನಾ. ಬ. ಶ್ರಾ. ತುಲಸೀ ಭೃಂಗಿರಾಜಪತ್ರ-ಮುಪ. ॥ ಘೃತಾಕ್ತಮನ್ನಮಾದಾಯ ಪಾಣಿಹೋಮಾರ್ಥಂ ಪಂಚಾಹುತಯ ಅಗ್ನೌ ಹುತ್ವಾ ಚಟಾಗ್ರೇ ಮಂಡಲಾನಿ ಕೃತ್ವಾ ತದುಪರಿಪಾತ್ರಾಣಿ ನಿಧಾಯ ಅನ್ನಾದಿನಾ ಪೂರಯಿತ್ವಾ ॥ ಸತ್ಯಂತ್ವರ್ತೇನ ಪರಿಷಿಂಚಾಮಿ ಇತಿ ಪರಿಷಿಚ್ಯ ಅನ್ನಮಂಗುಷ್ಠಗ್ರೇಣ ಸ್ಪೃಷ್ಟ್ವಾ ಪೃಥಿವೀತೇ ಪಾತ್ರಂ ವಿಷ್ಣೋ ಅನ್ನಂ ರಕ್ಷಸ್ವ ॥ ಇದಮನ್ನಂ ಯಥಾಶಕ್ತಿ ಸೋಪಸ್ಕರಂ ಅಮೃತರೂಪಮುಪತಿಷ್ಠತಾಂ ಇತ್ಯಂತಮುಕ್ತ್ವಾ ॥ ಆಪೋಶನಂ ದತ್ವಾ ॥ ಅಮೃತೋಪಸ್ತರಣಮಸಿ ಪ್ರಾಣಾಯಸ್ವಾಹಾ ಅಪಾನಾಯಸ್ವಾಹಾ ವ್ಯಾನಾಯಸ್ವಾಹಾ ಉದಾನಾಯಸ್ವಾಹಾ ಸಮಾನಾಯಸ್ವಾಹಾ ಇತಿ ವದೇತ್ । ಸುಖೇನೈವ ಭೋಕ್ತವ್ಯಂ ॥ ಜುಷಾಮಹೇ ॥ ನಾರಾಯಣಬಲಿಶ್ರಾದ್ಧಂ ಸಂಪನ್ನಂ ಸುಸಂಪನ್ನಂ ವಿಷ್ಣುಬ್ರಹ್ಮಶಿವಯಮವಿಷ್ಣುರೂಪಪ್ರೇತಾಃ ತೃಪ್ತಾಸ್ಥಃ ॥ ತೃಪ್ತಾಸ್ಮಃ ॥ ತತೋ ಅದ್ಯೇತ್ಯಾದಿ .... ಪುಣ್ಯತಿಥೌ ನಾರಾಯಣಬಲಿಶ್ರಾದ್ಧೇ ಪಿಂಡದಾನಂ ಕರಿಷ್ಯೇ ಇತಿ ಸಂಕಲ್ಪ್ಯ ॥ ರೇಖಾಕರಣಾದ್ಯವನೇಜನಾಂತಂ ತೂಷ್ಣೀಂ ಕೃತ್ವಾ ॥ ಸವ್ಯೇನ ॥ ನಮೋ ವಿಷ್ಣವೇ ಅಯಂ ತೇ ಪಿಂಡಃ ॥ ನಮಃ ಶಿವಾಯ ಅಯಂ ತೇ ಪಿಂಡಃ ॥ ನಮೋ ಬ್ರಹ್ಮಣೇ ಅಯಂ ತೇ ಪಿಂಡಃ ॥ ನಮಃ ಸಪರಿವಾರಾಯ ಯಮಾಯ ಅಯಂ ತೇ ಪಿಂಡಃ

ತತೋ ವಿಷ್ಣುರೂಪಂ ಪ್ರೇತಂ ಧ್ಯಾಯನ್ ಅಪಸವ್ಯೇನ ॥ ಕಾಶ್ಯಪಗೋತ್ರ ದೇವದತ್ತ ವಿಷ್ಣುರೂಪ ಅಯಂ ತೇ ಪಿಂಡಃ ॥ ಇತಿ ಪಂಚಮಂ ಪಿಂಡಂ ದತ್ವಾ

ಇತ್ಯಾದಿಗಳನ್ನು ಕೊಟ್ಟು ತುಪ್ಪಕಲಸಿದ ಅನ್ನದಿಂದ ಐದು ಆಹುತಿಕೊಟ್ಟು ಪಾಣಿಹೋಮ ಮಾಡಬೇಕು. ಬಳಿಕ ಇಮರಿಸಲ್ಲಿ ಪಾತ್ರೆಗಳನ್ನಿಟ್ಟು ಅನ್ನ ಮುಂತಾದುವನ್ನು ಬಳಸಿ ಆಪೋಶನಕ್ಕೆ ನೀರು ಕೊಟ್ಟು **ಪ್ರಾಣಾಯ ಸ್ವಾಹಾ** ಇತ್ಯಾದಿ ಹೇಳಿ ಅನ್ನಸಮರ್ಪಣೆ ಮಾಡಬೇಕು. "**ಸುಖೇನೈವ ಭೋಕ್ತವ್ಯಂ**" ಎಂದು ಕೇಳಬೇಕು. "**ಜುಷಾಮಹೇ**" ಎಂದು ಬ್ರಾಹ್ಮಣರು ಉತ್ತರಿಸಬೇಕು. ಹಾಗೆಯೇ "**ನಾರಾಯಣ...ಸಂಪನ್ನಂ**" - "**ಸುಸಂಪನ್ನಂ**" "**ತೃಪ್ತಾಸ್ಥಃ**" "**ತೃಪ್ತಾಸ್ಮ**" ಎಂದು ಪರಸ್ಪರ ಹೇಳಬೇಕು. ಆಮೇಲೆ "**ಅದ್ಯ... ಕರಿಷ್ಯೇ**" ಎಂದು ಸಂಕಲ್ಪ ಮಾಡಿ ರೇಖೆಗಳನ್ನು ಎಳೆಯುವಲ್ಲಿಂದ ಉದಕದಾನದ ವರೆಗಿನ ಕೆಲಸಗಳನ್ನು ಮಂತ್ರವಿಲ್ಲದೆ ಮಾಡಿ ಸವ್ಯದಿಂದ "**ನಮೋ ವಿಷ್ಣವೇ...**" ಮುಂತಾದ ನಾಮಮಂತ್ರಗಳಿಂದ ಪಿಂಡ ಕೊಡಬೇಕು.

ಆಮೇಲೆ ವಿಷ್ಣುರೂಪಿಯಾದ ಪ್ರೇತವನ್ನು ಧ್ಯಾನಿಸುತ್ತ ಅಪಸವ್ಯ ಮಾಡಿ, "**ಕಾಶ್ಯಪಗೋತ್ರ ...ಪಿಂಡ**" ಎಂದು ಐದನೆಯ ಪಿಂಡವನ್ನು ಕೊಟ್ಟು ಸವ್ಯದಿಂದ ಪಿಂಡಪೂಜೆ ಮಾಡಬೇಕು.

Scanned by CamScanner

Scanned with CamScanner

ಸವ್ಯೇನ ಅರ್ಚನಾದಿ ಪ್ರವಾಹಣಾಂತೇ ಆಚಾಂತಾನ್ ಬ್ರಾಹ್ಮಣಾನ್ ದಕ್ಷಿಣಾದಿಭಿಃ ಸಂತೋಷ್ಯ ॥ ತೇಷು ಏಕಸ್ಮೈ ಗುಣವತೇ ಪ್ರೇತ ಬುದ್ಧ್ಯಾ ವಸ್ತ್ರಾಭರಣಾದಿ-ದತ್ವಾ ॥ ತತೋ ವಿಪ್ರಾನ್ ವದೇತ್ ॥ ಭವಂತಃ ವಿಷ್ಣುರೂಪಪ್ರೇತಾಯ ತಿಲೋದಕಾಂಜಲಿದಾನಂ ಕುರ್ವಂತು ॥ ತೇ ಚ ಪವಿತ್ರಪಾಣಯಃ ಕುಶತಿಲ-ತುಲಸೀಯುತತಿಲಾಂಜಲಿಂ ಪ್ರೇತಾಯ ಕಾಶ್ಯಪಗೋತ್ರಾಯ ವಿಷ್ಣುರೂಪಿಣೇ ಅಯಂ ತಿಲಾಂಜಲಿಃ ॥ ಇತಿ ದದ್ಯುಃ ॥ ವಿಪ್ರಾನ್ ವಾಚಯೇತ್ ಅನೇನ ನಾರಾಯಣಬಲಿಕರ್ಮಣಾ ಭಗವಾನ್ ವಿಷ್ಣುರಿಮಂ ದೇವದತ್ತಂ ಪ್ರೇತಂ ಶುದ್ಧ-ಮಪಾಪಮರ್ಹಂ ಕರೋತು ಇತಿ ವಿಸೃಜ್ಯ ಸ್ನಾತ್ವಾ ಭುಂಜೀತ ॥ ತತೋ ಏಕೋದ್ದಿಷ್ಟಶ್ರಾದ್ಧಪ್ರಯೋಗೋಕ್ತಪಿಡೋತ್ಥಾಪನಾದಿ (ಶ್ರಾದ್ಧಸಾಂಗತಾಸಿದ್ಧ್ಯರ್ಥಂ) ಗೋದಾನಂ) ಅದ್ಯೇತ್ಯಾದಿ ..... ನಾರಾಯಣಬಲ್ಯಂಗಶ್ರಾದ್ಧಸಾಂಗತಾಸಿದ್ಧ್ಯರ್ಥಂ ಆಚಾರ್ಯಾಯ ಗೋಪ್ರದಾನಂ ಕರಿಷ್ಯೇ ॥ ಯಜ್ಞಸಾಧನಭೂತಾ ಯಾ ವಿಶ್ವಸ್ಯಾಘೌಘನಾಶಿನೀ ॥ ವಿಶ್ವರೂಪಧರೋ ದೇವಃ ಪ್ರೀಯತಾಮನಯಾ ಗವಾ ॥ ಇದಂ ಗೋಪ್ರದಾನನಿಷ್ಕ್ರಯಿಭೂತಂ ದ್ರವ್ಯಂ ಅಮುಕಗೋತ್ರಾಯ ಅಮುಕಶರ್ಮಣೇ ಬ್ರಾಹ್ಮಣಾಯ ತುಭ್ಯಮಹಂ ಸಂಪ್ರದದೇ ॥ ಪ್ರತಿಗೃಹ್ಯತಾಂ ಪ್ರತಿಗೃಹ್ಣಾಮಿ ॥ ತೇನ ಶ್ರೀಮಹಾವಿಷ್ಣುಃ ಪ್ರೀಯಾತಾಂ ॥

॥ ಇತಿ ನಾರಾಯಣಬಲಿಃ ॥

ಆಚಮನ ಮಾಡಿದ ಬ್ರಾಹ್ಮಣರನ್ನು ದಕ್ಷಿಣಾದಿಗಳಿಂದ ಸಂತೋಷಗೊಳಿಸಿ, ಅವರಲ್ಲಿ ಗುಣವಂತನಾದ ಒಬ್ಬನಿಗೆ ಪ್ರೇತಬುದ್ಧಿಯಿಂದ ವಸ್ತ್ರಾಭರಣಾದಿಗಳನ್ನು ಕೊಡಬೇಕು. ಬ್ರಾಹ್ಮಣರನ್ನು ಉದ್ದೇಶಿಸಿ "**ಭವಂತಃ...ಕುರ್ವಂತು**" ಎಂದು ಕೇಳಿಕೊಳ್ಳಬೇಕು. ಅವರು ಪವಿತ್ರ ಹಾಕಿಕೊಂಡು ದರ್ಭೆ, ಎಳ್ಳು, ತುಲಸಿಗಳಿಂದ ತಿಲಾಂಜಲಿಯನ್ನು "**ಪ್ರೇತಾಯ...ತಿಲಾಂಜಲಿಃ**" ಎಂದು ಹೇಳಿ ಕೊಡಬೇಕು. "**ಅನೇನ...ಕರೋತು**" ಎಂದು ಬ್ರಾಹ್ಮಣರ ಬಾಯಿಯಿಂದ ಹೇಳಿಸಿ ವಿಸರ್ಜನೆ ಮಾಡಬೇಕು. ಬಳಿಕ ಸ್ನಾನಮಾಡಿ ಊಟ ಮಾಡಬೇಕು. ಬಳಿಕ ಏಕೋದ್ದಿಷ್ಟಶ್ರಾದ್ಧ ಪ್ರಯೋಗದಲ್ಲಿ ಹೇಳಿದಂತೆ ಪಿಂಡೋತ್ಥಾಪನೆ ಮಾಡಿ, "**ಅದ್ಯ ಗೋಪ್ರದಾನಂ ...ಕರಿಷ್ಯೇ**" ಎಂದು ಸಂಕಲ್ಪ ಮಾಡಿ "**ಯಜ್ಞಸಾಧನ...ಗವಾ**" ಎಂಬ ಮಂತ್ರ ಹೇಳಿ ದನವನ್ನು ಅಥವಾ ಅದರ ಪ್ರತ್ಯಾಮ್ನಾಯ ದ್ರವ್ಯವನ್ನು ಕೊಡಬೇಕು. "**ತೇನ..ಪ್ರೀಯತಾಂ**" ಎಂದು ಹೇಳಬೇಕು.

Scanned by CamScanner
Scanned with CamScanner

೬೩

।। ನಾಗಬಲಿಃ ।।

ಕರ್ತಾ ಪರ್ಷದಂ ಪ್ರದಕ್ಷಿಣೀಕೃತ್ಯ ನತ್ವಾ ತದಗ್ರೇ ಗೋವೃಷನಿಷ್ಕ್ರಯಂ ನಿಷ್ಕಂ ತದರ್ಧಂ ವಾ ನಿಧಾಯ ಸಭಾರ್ಯಸ್ಯ ಮಮ ಇಹ ಜನ್ಮನಿ ಜನ್ಮಾಂತರೇ ವಾ ಜ್ಞಾನಾದಜ್ಞಾನಾದ್ವಾ ಜಾತಸರ್ಪವಧದೋಷಪರಿಹಾರಾರ್ಥಂ ಪ್ರಾಯಶ್ಚಿತ್ತಮುಪದಿಶಂತು ಭವಂತಃ ।। ಸರ್ವೇ ಧರ್ಮವಿವೇಕ್ತಾರೋ ಗೋಪ್ತಾರಃ ಸಕಲಾ ದ್ವಿಜಾಃ ।। ಮಮ ದೇಹಸ್ಯ ಸಂಶುದ್ಧಿಂ ಕುರ್ವಂತು ದ್ವಿಜಸತ್ತಮಾಃ ।। ಮಯಾ ಕೃತಂ ಮಹಾಘೋರಂ ಜ್ಞಾತಮಜ್ಞಾತಕಿಲ್ಬಿಷಂ ।। ಪ್ರಸಾದಃ ಕ್ರಿಯತಾಂ ಮಹ್ಯಂ ಶುಭಾನುಜ್ಞಾಂ ಪ್ರಯಚ್ಛತ ।। ಪೂಜ್ಯೈಃ ಕೃತಪವಿತ್ರೋಹಂ ಭವೇಯಂ ದ್ವಿಜಸತ್ತಮಾಃ ।। ಇತಿ ಶ್ಲೋಕಾನ್ ಪಠಿತ್ವಾ ಮಾಮನುಗೃಹ್ಣಂತು ಭವಂತ ಇತಿ ಪ್ರಣಮೇತ್ ।। ತೈಶ್ಚತುರ್ದಶ ಕೃಚ್ಛ್ರಪ್ರಾಯಶ್ಚಿತ್ತೇನ ಅಮುಕಪ್ರತ್ಯಾಮ್ನಾಯದ್ವಾರಾ ಪೂರ್ವೋತ್ತರಾಂಗಸಹಿತೇನಾಚರಿತೇನ ತವ ಶುದ್ಧಿರ್ಭವಿಷ್ಯತೀತಿ ಉಪದಿಷ್ಟೋ ದೇಶಕಾಲೌ ಸಂಕೀರ್ತ್ಯ ಪರ್ಷದುಪದಿಷ್ಟಂ ಚತುರ್ದಶಕೃಚ್ಛ್ರಪ್ರಾಯಶ್ಚಿತ್ತಂ ಯಥೋಕ್ತಪ್ರತ್ಯಾಮ್ನಾ-

---

ಆರಂಭದಲ್ಲಿ ಕರ್ತನು ಬ್ರಾಹ್ಮಣರ ಸಭೆಗೆ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಿ ಅವರ ಮುಂದೆ ಒಂದು ದನ ಮತ್ತು ಎತ್ತಿನ ಕ್ರಯದಷ್ಟು ದ್ರವ್ಯವನ್ನು ಅಥವಾ ಅದರ ಅರ್ಧದಷ್ಟು ಇಟ್ಟು **"ಸಭಾರ್ಯಸ್ಯ ಮಮ ... ಭವಂತಃ"** ಎಂದೂ **"ಸರ್ವೇಧರ್ಮವಿವೇ ... ದ್ವಿಜಸತ್ತಮಾಃ"** ಎಂಬ ಶ್ಲೋಕಗಳನ್ನು ಹೇಳಿ **"ಮಾಮನುಗೃಹ್ಣಂತು ಭವಂತಃ"** ಎಂದು ಪ್ರಾರ್ಥಿಸಿಕೊಳ್ಳಬೇಕು. **ಬ್ರಾಹ್ಮಣರು "ಚತುರ್ದಶಕೃಚ್ಛ್ರ ... ಶುದ್ಧಿರ್ಭವಿಷ್ಯತಿ"** ಎಂದು ಹೇಳಿದ ಮೇಲೆ ಆಚಮನ ಪ್ರಾಣಾಯಾಮ ದೇಶಕಾಲಸಂಕೀರ್ತನಾದಿಗಳನ್ನು ಮಾಡಿ **"ಪರ್ಷದುಪದಿಷ್ಟಂ ... ಆಚರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ಬಳಿಕ ಕ್ಷೌರಮಾಡಿಸಿಕೊಂಡು ಆ ಪ್ರಾಯಶ್ಚಿತ್ತವನ್ನು ಆಚರಿಸಬೇಕು. ಕ್ಷೌರಮಾಡಿಸಲು ಅಸಾಧ್ಯವಾದಲ್ಲಿ ಎರಡರಷ್ಟು ಕೃಚ್ಛ್ರಪ್ರತ್ಯಾಮ್ನಾಯವನ್ನಿಡಬೇಕು.

ಕೃಚ್ಛ್ರವನ್ನು ಆಚರಿಸುವ ಕ್ರಮವು ರೀತಿಯಾಗಿದೆ:- ಒಂದು ಕೃಚ್ಛ್ರವು ಹನ್ನೆರಡು ದಿನಗಳಲ್ಲಿ ಸಾಧ್ಯವಾಗುತ್ತದೆ. ಮೊದಲನೆಯ ದಿನ ಮಧ್ಯಾಹ್ನ ಮಾತ್ರ ಒಂದು ಸಲ ಹವಿಷ್ಯಾನ್ನದ ೨೬ ಗ್ರಾಸಗಳನ್ನು ಭಕ್ಷಿಸಬೇಕು. ಎರಡನೆಯ ದಿನ ರಾತ್ರಿ ಮಾತ್ರ ೨೨ ಗ್ರಾಸಗಳನ್ನು ಭಕ್ಷಿಸಬಹುದು. ಮೂರನೆಯ ದಿನ ಇತರರಲ್ಲಿ ಯಾಚಿಸದೆ ದೊರೆತ ಅನ್ನದ ೨೪ ಗ್ರಾಸಗಳನ್ನು ಭಕ್ಷಿಸಬೇಕು. ನಾಲ್ಕನೆಯ ದಿನ ಉಪವಾಸವಿರಬೇಕು. ಇಷ್ಟಕ್ಕೆ ಪಾದಕೃಚ್ಛ್ರವಾಗುತ್ತದೆ. ಇಂತಹ ನಾಲ್ಕು ಪಾದ ಕೃಚ್ಛ್ರಗಳನ್ನು ಆಚರಿಸಿದಾಗ ಒಂದು ಪೂರ್ಣಕೃಚ್ಛ್ರವಾಗುತ್ತದೆ. ಇಂತಹ ಕೃಚ್ಛ್ರ ಪ್ರಾಯಶ್ಚಿತ್ತವು ಅಸಾಧ್ಯವಾದರೆ ಒಂದು ದನದ ಮೌಲ್ಯದಷ್ಟು ದ್ರವ್ಯವನ್ನು ಕೊಡಬೇಕು.

Scanned by CamScanner

ಯೇನಾಚರಿಷ್ಯೇ ಇತಿ ಸಂಕಲ್ಪಪೂರ್ವಕಂ ವಪನಾದಿವಿಧಿನಾ ತದಾಚರೇತ್ ॥ ವಪನಾಸಂಭವೇ ದ್ವಿಗುಣಃ ಕೃಚ್ಛ್ರಪ್ರತ್ಯಾಮ್ನಾಯಃ ॥ ಪೂರ್ವೋಚ್ಚರಿತ ಏವಂ ಗುಣವಿಶಿಷ್ಟಾಯಾಂ ಪುಣ್ಯತಿಥೌ ಮಮ ಸರ್ಪವಧದೋಷಪರಿಹಾರಾರ್ಥಂ ಬ್ರಾಹ್ಮಣಾಯ ಲೋಹದಂಡದಾನಂ (ತನ್ಮೂಲ್ಯದಾನಂ ವಾ) ಕರಿಷ್ಯೇ ॥ ಇತಿ ಸಂಕಲ್ಪ್ಯ ॥ ಬ್ರಾಹ್ಮಣಂ ಸಂಪೂಜ್ಯ ಸ್ವಸ್ತ್ಯಸ್ತು ..... ॥ ಇಮಂ ಲೋಹ-ದಂಡಂ ಸರ್ಪವಧದೋಷಹರಂ ಸದಕ್ಷಿಣಂ ಅಮುಕಗೋತ್ರಾಯ ಅಮುಕ-ಶರ್ಮಣೇ ಬ್ರಾಹ್ಮಣಾಯ ತುಭ್ಯಮಹಂ ಸಂಪ್ರದದೇ ಪ್ರತಿಗೃಹ್ಯತಾಂ ॥ ದೇವಸ್ಯತ್ವಾ ಸವಿತುಃ .... ॥ ಪ್ರತಿಗೃಹ್ಯತಾಂ ॥ ಗುರ್ವಾಜ್ಞಾಂ ಲಬ್ಧ್ವಾ ಪ್ರಿಯಂಗು ವ್ರೀಹಿ ಯವ ಗೋಧೂಮತಿಲಪಿಷ್ಟೇಷು ಏಕತಮಪಿಷ್ಟೇನ ಪಂಚಗವ್ಯೇನಾರ್ದ್ರೀಕೃತೇನ ಸರ್ಪಾಕೃತಿಂ ಕೃತ್ವಾ ನವೇ ಶೂರ್ಪೇ ನಿಧಾಯ ಸರ್ಪಂ ಪ್ರಾರ್ಥಯೇತ್ ॥ ಏಹಿ ಪೂರ್ವಮೃತಸರ್ಪ ಅಸ್ಮಿನ್ ಪಿಷ್ಟೇ ಸಮಾವಿಶ ॥ ಸಂಸ್ಕಾರಾರ್ಥಮಹಂ ಭಕ್ತ್ಯಾ ಪ್ರಾರ್ಥಯಾಮಿ ಸಮಾಹಿತಃ ॥ ತತಃ ॥ ಭುಜಂಗೇಶಾಯ ವಿದ್ಮಹೇ ಸರ್ಪಜಾತಾಯ ಧೀಮಹಿ ॥ ತನ್ನೋ ನಾಗಃ ಪ್ರಚೋದಯಾತ್ ॥ ಇತಿ ಆವಾಹನಾದಿ ಷೋಡಶೋಪಚಾರಪೂಜಾಂ ಕೃತ್ವಾ ಪುಷ್ಪಾಂಜಲಿಂ ದತ್ವಾ ಪ್ರಣಿಪತ್ಯ ಭೋ ಸರ್ಪ ಇಮಂ ಬಲಿಂ ಗೃಹಾಣ ಮಮಾಭ್ಯುದಯಂ ಕುರು ಇತಿ ಪಾಯಸಾದಿನಾ ಬಲಿಂ ಸಮರ್ಪ್ಯ ॥ ಹಸ್ತೌ ಪಾದೌ ಪ್ರಕ್ಷಾಲ್ಯಾಚಾಮೇತ್ ॥ ತತಃ ಶುದ್ಧಭೂಮೌ ಸ್ಥಿತ್ವಾ ಪ್ರಾಣಾನಾಯಮ್ಯ ಸಂಕಲ್ಪಂ ಕುರ್ಯಾತ್ ॥ ಸಭಾರ್ಯಸ್ಯ ಮಮೇಹಜನ್ಮನಿ ಜನ್ಮಾಂತರೇ ವಾ ಜ್ಞಾನಾದಜ್ಞಾನಾದ್ವಾ ಜಾತಸರ್ಪವಧೋತ್ಥದೋಷ ಪರಿಹಾರಾರ್ಥಂ ಮಚ್ಛರೀರಸ್ಯ ದಾರಿದ್ರ್ಯಾನಪತ್ಯತ್ವಾದಿನಿವೃತ್ತಿಪೂರ್ವಕ ಆಯು-

---

ಬಳಿಕ "**ಪೂರ್ವೋಚ್ಚರಿತ...ಲೋಹದಂಡದಾನಂ ಕರಿಷ್ಯೇ**" ಎಂದು ಸಂಕಲ್ಪಮಾಡಿ, ಬ್ರಾಹ್ಮಣನನ್ನು ಪೂಜಿಸಿ "**ಸ್ವಸ್ತ್ಯಸ್ತು**" ಎಂದು ಹೇಳಿ "**ಇಮಂ ಲೋಹದಂಡಂ...ಪ್ರತಿಗೃಹ್ಯತಾಂ**" ಎಂದು ಹೇಳುತ್ತ ಆ ಬ್ರಾಹ್ಮಣನಿಗೆ ಲೋಹದಂಡ ಅಥವಾ ಅದರ ಮೌಲ್ಯದಷ್ಟು ದ್ರವ್ಯವನ್ನು ದಾನಮಾಡಿ, "**ದೇವಸ್ಯತ್ವಾ...**" ಎಂಬ ಮಂತ್ರ ಹೇಳಬೇಕು. ಬ್ರಾಹ್ಮಣನು "**ಪ್ರತಿಗೃಹ್ಣಾಮಿ**" ಎಂದು ಪ್ರತ್ಯುತ್ತರ ಕೊಡಬೇಕು. ಆಮೇಲೆ ಆಚಾರ್ಯನ ಆಜ್ಞೆಯನ್ನು ಪಡೆದು ಪ್ರಿಯಂಗು, ಅಕ್ಕಿ, ಯವ, ಗೋಧಿ, ಎಳ್ಳು ಇವುಗಳಲ್ಲಿ ಯಾವುದಾದರೊಂದು ಧಾನ್ಯದ ಹಿಟ್ಟು ತಯಾರಿಸಿ ಅದನ್ನು ಪಂಚಗವ್ಯದಲ್ಲಿ ಕಲಸಿ ಅದರಿಂದ ಸರ್ಪದ ಒಂದು ಆಕೃತಿಯನ್ನು ಮಾಡಿ, ಅದನ್ನು ಹೊಸ ಮೊರದಲ್ಲಿ ಇಡಬೇಕು. "**ಏಹಿ ಪೂರ್ವ...ಸಮಾಹಿತಃ**" ಎಂಬ ಶ್ಲೋಕದಿಂದ ಸರ್ಪದ ಪ್ರಾರ್ಥನೆ ಮಾಡಿ "**ಭುಜಂಗೇಶಾಯ....ಪ್ರಚೋದಯಾತ್**" ಎಂಬ ಸರ್ಪಗಾಯತ್ರಿಯಿಂದ ಷೋಡಶೋಪಚಾರಪೂಜೆ, ಪುಷ್ಪಾಂಜಲಿ ನಮಸ್ಕಾರಾದಿಗಳನ್ನರ್ಪಿಸಿ "**ಭೋಸರ್ಪ...ಕುರು**" ಎಂದು ಹೇಳುತ್ತ ಸರ್ಪಕ್ಕೆ ಪಾಯಸದ ಬಲಿಯನ್ನು ಕೊಡಬೇಕು. ಬಳಿಕ ಸ್ವಚ್ಛವಾದ ನೆಲದ

Scanned by CamScanner

Scanned with CamScanner

ಷ್ಮತ್ಸುಗುಣಾನೇಕಶೀಲವಿಶಿಷ್ಟಪುತ್ರಪೌತ್ರಾದ್ಯಭೀಷ್ಟಸಿದ್ಧ್ಯರ್ಥಂ ಸರ್ಪಸಂಸ್ಕಾರಕರ್ಮ ಕರಿಷ್ಯೇ ॥ ಇತಿ ಸಂಕಲ್ಪ್ಯ ॥

ಸ್ಥಂಡಿಲೇ ಲೌಕಿಕಾಗ್ನಿಂ ಪ್ರತಿಷ್ಠಾಪ್ಯ ಅನ್ವಾದಧ್ಯಾತ್ ॥ ಅಸ್ಮಿನ್ ಸರ್ಪಸಂಸ್ಕಾರಹೋಮಕರ್ಮಣಿ ದೇವತಾಪರಿಗ್ರಹಾರ್ಥಮನ್ವಾಧಾನಂ ಕರಿಷ್ಯೇ ॥ ಅಸ್ಮಿನ್ನನ್ವಾಹಿತೇಗ್ನಾವಿತ್ಯಾದಿ ಆಘಾರಚಕ್ಷುಷ್ಯಂತಮುಕ್ತ್ವಾ ಅತ್ರ ಪ್ರಧಾನಂ ಅಗ್ನಿಂ ವಾಯುಂ ಸೂರ್ಯಂ ಏತಾಃ ಪ್ರಧಾನದೇವತಾಃ ಆಜ್ಯೇನ ಭೂರ್ಭುವಃ ಸ್ವರಿತಿ ಸರ್ಪಮುಖೇ ಪ್ರಜಾಪತಿಮಾಜ್ಯೇನ ಆಜ್ಯಶೇಷೇಣ ಸರ್ಪಂ ಸದ್ಯೋ ಯಕ್ಷ್ಯೇ ॥ ಸಮಿಧಾವಗ್ನಾವಾಧಾಯ ॥ ತತೋಗ್ನೇರಗ್ನಿದಿಶಿ ಭೂಮೌ ಜಲೇನ ಪ್ರೋಕ್ಷ್ಯ ಚಿತಿಂ ಕೃತ್ವಾ ಅಗ್ನಿಂ ಚಿತಿಂ ಚ ಪರಿಸಮುಹ್ಯ ಆಗ್ನೇಯ್ಯಾಗ್ರೈರ್ದರ್ಭೈಃ ಪರಿಸ್ತೀರ್ಯ ಪರಿಷಿಚ್ಯ ಷಟ್ ಪಾತ್ರಾಣ್ಯಾಸಾದ್ಯ ಇಧ್ಮಾಧಾನಾದ್ಯಾಘಾರಚಕ್ಷುಷ್ಯಂತಂ ಕುರ್ಯಾತ್ ॥ ತತಃ ಸರ್ಪಂ ಗೃಹೀತ್ವಾ ದಕ್ಷಿಣ ಶಿರಸಂ ಚಿತ್ಯಾಮಾರೋಪ್ಯ ಆಪಃ ಶ್ರೋತ್ರಂ ಚ ಸ್ಪೃಷ್ಟ್ವಾ ಅಗ್ನಿಸಮೀಪಮೇತ್ಯ ॥ ತತಃ ಪ್ರಧಾನಹೋಮಂ ವ್ಯಸ್ತಸಮಸ್ತವ್ಯಾಹೃತೀನಾಂ ವಿಶ್ವಾಮಿತ್ರಜಮದಗ್ನಿಭರದ್ವಾಜ ಪ್ರಜಾಪತಯ ಋಷಯಃ ಅಗ್ನಿವಾಯುಸೂರ್ಯಪ್ರಜಾಪತಯೋ ದೇವತಾಃ ಗಾಯತ್ರ್ಯುಷ್ಣಿಗನುಷ್ಟುಬ್ಬೃಹತ್ಯಶ್ಛಂದಾಂಸಿ ಸರ್ಪಸಂಸ್ಥಾಪನಪ್ರಧಾನಾಜ್ಯಹೋಮೇ ವಿನಿಯೋಗಃ ॥ ಓಂ ಭೂಃ ಸ್ವಾಹಾ ಅಗ್ನಯ ಇದಂ

ಮೇಲೆ ಪ್ರಾಣಾಯಾಮಾದಿಗಳನ್ನು ಮಾಡಿ, **"ಸಭಾರ್ಯಸ್ಯ ... ಸಂಸ್ಕಾರಕರ್ಮ ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು.

ಆಮೇಲೆ ಸ್ಥಂಡಿಲವನ್ನು ರಚಿಸಿ **"ಲೌಕಿಕ"** ಅಗ್ನಿಯನ್ನು ಪ್ರತಿಷ್ಠಾಪಿಸಿ ಅನ್ವಾಧಾನ ಮಾಡಬೇಕು. **"ಅಸ್ಮಿನ್ನನ್ವಾಹಿತೇ .... ಚಕ್ಷುಷೀ... ಅತ್ರಪ್ರಧಾನಂ .... ಸದ್ಯೋ ಯಕ್ಷ್ಯೇ"** ಎಂದು ಹೇಳಿ ಸಮಿಧೆಗಳನ್ನು ಅಗ್ನಿಗೆ ಆಹುತಿ ಕೊಡಬೇಕು. ನಂತರ ಅಗ್ನಿಯ ಆಗ್ನೇಯ ದಿಕ್ಕಿನಲ್ಲಿ ನೆಲವನ್ನು ನೀರಿನಿಂದ ಪ್ರೋಕ್ಷಿಸಿ ಅಲ್ಲಿ ಒಂದು ಚಿತೆಯನ್ನು ನಿರ್ಮಿಸಬೇಕು. ಅಗ್ನಿಗೂ ಚಿತೆಗೂ ಪರಿಸಮೂಹನಾದಿಗಳನ್ನು ಮಾಡಿ ಆಗ್ನೇಯ ದಿಕ್ಕಿಗೆ ತುದಿಗಳಿರುವಂತೆ ಪರಿಸ್ತರಣ ಹಾಕಬೇಕು. ಬಳಿಕ ಆರು ಪಾತ್ರೆಗಳನ್ನಿಟ್ಟು ಪಾತ್ರಾಸಾದನ ಮಾಡಿ ಆಘಾರದಿಂದ ಚಕ್ಷುಷೀ ವರೆಗಿನ ಹೋಮ ಮಾಡಿ ಸರ್ಪವನ್ನು ತೆಂಕುಮುಖವಾಗಿ ಚಿತೆಯ ಮೇಲಿಟ್ಟು ಕೈತೊಳೆದು ಕಿವಿಮುಟ್ಟಿ ಪ್ರಧಾನ ಹೋಮವನ್ನು ಮಾಡಬೇಕು. **"ಓಂ ಭೂಃ ಸ್ವಾಹಾ..."** ಇತ್ಯಾದಿ ವ್ಯಾಹೃತಿಗಳಿಂದ ಮೂರು ಆಹುತಿಗಳನ್ನು ಕೊಟ್ಟು ಒಟ್ಟಿಗೆ "ಓಂ ಭೂರ್ಭುವಃ ಸ್ವಃ ಸ್ವಾಹಾ" ಎಂದು ಸರ್ಪದ ಬಾಯಲ್ಲಿ ಆಹುತಿ ಕೊಡಬೇಕು. ಆಜ್ಯಶೇಷವನ್ನು ಸ್ರುವದಿಂದಲೇ ಸರ್ಪದ ಶರೀರದ ಮೇಲೆ ಸುರಿಯಬೇಕು. ಇಲ್ಲಿ ಸ್ವಿಷ್ಟಕೃದಾದಿ ಹೋಮಶೇಷವಿಲ್ಲ. ಸ್ರುವವನ್ನು ಅಲ್ಲೇ ಬಿಟ್ಟು ಯಜ್ಞಪಾತ್ರೆಗಳನ್ನು ಬರ್ಹಿಯ ಮೇಲೆ ಇಟ್ಟು, ಜತೆಗೆ ಪ್ರದಕ್ಷಿಣೆ ಬಂದು ನಮಸ್ಕರಿಸಿ ಕ್ಷಮೆ ಕೇಳಿ ಕೈಯಲ್ಲಿರುವ ಯಜ್ಞಪಾತ್ರೆಯ ನೀರಿನಿಂದ **"ಓಂ ಭೂರ್ಭುವಃ ಸ್ವಃ"** ಎಂದು ಸರ್ಪವನ್ನು ಪ್ರೋಕ್ಷಿಸಿ, **"ಅಗ್ನೇ ರಕ್ಷಾಣೋ..."**

Scanned by CamScanner

ನಮಮ ಇತ್ಯಾದಿ ವ್ಯಸ್ತವ್ಯಾಹೃತಿತ್ರಯೇಣ ಆಜ್ಯಾಹುತೀರ್ಹುತ್ವಾ ॥ ಸಮಸ್ತ-ವ್ಯಾಹೃತ್ಯಾ ಚತುರ್ಥೀಂ ಸರ್ಪಮುಖೇ ಜುಹುಯಾತ್ ॥ ಆಜ್ಯಶೇಷಂ ಸ್ರುವೇಣೈವ ಸರ್ಪದೇಹೇ ನಿಷಿಂಚೇತ್ ॥ ನಾತ್ರ ಸ್ವಿಷ್ಟಕೃದಾದಿ ॥ ಸ್ರುವಂ ತತ್ರೈವ ನಿಧಾಯ ಯಜ್ಞಪಾತ್ರಾಣಿ ಬರ್ಹಿಷಿ ನಿದಧ್ಯಾತ್ ॥ ತತಶ್ಚಿತಿಂ ಪ್ರದಕ್ಷಿಣೀಕೃತ್ಯ ಪ್ರಣಮ್ಯ ಕ್ಷಮಾಪ್ಯ ಹಸ್ತಗೃಹೀತೈಶ್ಚಮಸಜಲೈಃ ಸಮಸ್ತ-ವ್ಯಾಹೃತ್ಯಾ ಸರ್ಪಂ ಪಾಣಿನಾಭ್ಯುಕ್ಷ್ಯ ॥ ಅಗ್ನೇರಕ್ಷಾಣೋ ವಸಿಷ್ಠೋಗ್ನಿ-ರ್ಗಾಯತ್ರೀ ಸರ್ಪಾಯಾಗ್ನಿಪ್ರದಾನೇ ವಿನಿಯೋಗಃ ॥ ಓಂ ಅಗ್ನೇರಕ್ಷಾಣೋ-ಅಂಹಸಃ ಪ್ರತಿಷ್ಮ ದೇವ ರೀಷತಃ ॥ ತಪಿಷ್ಠೈರಜರೋದಹ ॥ ತತ ಉಪ-ಸ್ಥಾನಂ ॥ ಓಂ ನಮೋ ಅಸ್ತು ಸರ್ಪೇಭ್ಯೋ ಯೇ ಕೇ ಚ ಪೃಥಿವೀಮನು ॥ ಯೇ ಅಂತರಿಕ್ಷೇ ಯೇ ದಿವಿ ತೇಭ್ಯಃ ಸರ್ಪೇಭ್ಯೋ ನಮಃ ॥ ಯೋ ದೋರೋಚನೇ ದಿವೋ ಯೇ ವಾ ಸೂರ್ಯಸ್ಯರಶ್ಮಿಷು ॥ ಯೇಷಾ ಮಪ್ಸುಷದಃ ಕೃತಂ ತೇಭ್ಯಃ ಸರ್ಪೇಭ್ಯೋ ನಮಃ ॥ ಯಾ ಇಷವೋಯಾತು-ಧಾನಾನಾಂ ಯೇವಾ ವನಸ್ಪತೀಗ್ಂ ರನು ॥ ಯೇ ವಾ ವಟೇಷುಶೇರತೇ ತೇಭ್ಯಃ ಸರ್ಪೇಭ್ಯೋ ನಮಃ ॥ ಅಥ ಪೌರಾಣ ಮಂತ್ರಾಃ ॥ ಕರ್ಕೋಟಕ ನಮಸ್ತೇಸ್ತು ಶಂಖಪಾಲ ನಮೋಸ್ತು ತೇ ॥ ನಾಗರಾಜ ಮಹಾದೇವ ದಿವ್ಯ-ರೂಪಾಯ ತೇ ನಮಃ ॥ ಅಫಣಾಃ ಫಣಿನೋ ಯೇ ಚ ಸವಿಷಾ ನಿರ್ವಿ-

---

ಈ ಮಂತ್ರದಿಂದ ಚಿತೆಗೆ ಅಗ್ನಿಸ್ಪರ್ಶಮಾಡಿ, **"ನಮೋ ಅಸ್ತು..."** ಇತ್ಯಾದಿ ಮಂತ್ರಗಳಿಂದಲೂ **"ಕರ್ಕೋಟಕ... ನಮೋನಮಃ"** ಎಂಬ ಪೌರಾಣಿಕ ಮಂತ್ರಗಳಿಂದಲೂ ಉಪಸ್ಥಾನ ಮಾಡಿ **"ತ್ರಾಹಿ ತ್ರಾಹಿ...ಕ್ಷಮಸ್ವ ಮೇ"** ಎಂದು ಪ್ರಾರ್ಥನೆ ಮಾಡಬೇಕು. ಬಳಿಕ ಸ್ನಾನಮಾಡಿ ಬಂದು ವ್ಯಾಹೃತಿಗಳನ್ನು ಉಚ್ಚರಿಸಿ, ಹಾಲು ಮತ್ತು ತುಪ್ಪವನ್ನು ಅಗ್ನಿಯ ಮೇಲೆ ಸಿಂಪಡಿಸಬೇಕು. ಇಲ್ಲಿ ಅಸ್ಥಿಸಂಚಯನವಿಲ್ಲ. ಈ ಎಲ್ಲ ಕರ್ಮಗಳನ್ನು ಸವ್ಯದಲ್ಲೇ ಮಾಡಬೇಕು. ಪುನಃ ಸ್ನಾನಮಾಡಿ ಮನೆಗೆ ಹೋಗಿ ಆಚಮನ ಮಾಡಿ ಪತ್ನೀಸಮೇತನನಾಗಿ ಮೂರು ರಾತ್ರಿಗಳ ಅಶೌಚವನ್ನಾಚರಿಸಬೇಕು. ಬ್ರಹ್ಮಚರ್ಯವನ್ನೂ ಪಾಲಿಸಬೇಕು. ನೆಲದ ಮೇಲೆ ಮಲಗುವುದು,

Scanned by CamScanner
Scanned with CamScanner

ಪಾಶ್ಚ ಯೇ ॥ ಸರ್ವೇ ವಟೇಶಯಾಃ ಸರ್ಪಾಃ ಪುಣ್ಯಮೂರ್ತೇ ನಮೋಸ್ತು ತೇ ॥ ತ್ವಯಾ ಭಗವತೇ ಶ್ರೀಮದ್ವಾಸುದೇವಾಯ ನಿರ್ಮಿತಂ ॥ ಸ್ವಭೋಗೇ-ನೈವಪರ್ಯಂಕಮಾಯತಂ ಭೋಗಿನಾಂ ವರ ॥ ತ್ವಯೇಯಂ ಜಗತೀ ಸ್ವಾಮಿನ್ ಸ್ವಫಣಾಮಂಡಲೋಪರಿ ॥ ಧೃತೈಕದೇಶೇಹ್ಯಣುವತ್ತಸ್ಮೈ ತುಭ್ಯಂ ನಮೋ ನಮಃ ॥ ಇತಿ ದಹ್ಯಮಾನಂ ಸರ್ಪಮುಪಸ್ಥಾಯ ॥ ತ್ರಾಹಿ ತ್ರಾಹಿ ಮಹಾಭೋಗಿನ್ ಸರ್ಪೋಪದ್ರವದುಃಖತಃ ॥ ಸಂತತಿಂ ದೇಹಿ ಮೇ ಪುಣ್ಯಾಂ ನಿರ್ದುಷ್ಟಾಂ ದೀರ್ಘದೇಹಿನೀಂ ॥ ಪ್ರಸನ್ನಂ ಪಾಹಿ ಮಾಂ ಭಕ್ತ್ಯಾ ಕೃಪಾಲೋ ದೀನವತ್ಸಲ ॥ ಜ್ಞಾನತೋಽಜ್ಞಾನತೋ ವಾಪಿ ಕೃತಃ ಸರ್ಪವಧೋ ಮಯಾ ॥ ಜನ್ಮಾಂತರೇ ತಥೈತಸ್ಮಿನ್ಮತ್ಪೂರ್ವೈರಥವಾ ವಿಭೋ ॥ ತತ್ಪಾಪಂ ನಾಶಯ ಕ್ಷಿಪ್ರಮಪರಾಧಂ ಕ್ಷಮಸ್ವ ಮೇ ॥ ಇತಿ ಪ್ರಾರ್ಥ್ಯ ಸ್ನಾತ್ವಾಗತ್ಯ ತತಃ ಪುನಃ ವ್ಯಾಹೃತಿಭಿಃ ಕ್ಷೀರಾಜ್ಯೇನ ಅಗ್ನಿಂ ಸಂಪ್ರೋಕ್ಷ್ಯ ಹುತೇ ಸರ್ಪೇ ಜಲೇ ನಾಗ್ನಿಂ ಸಿಂಚೇತ್ ॥ ನಾತ್ರಾಸ್ಥಿಸಂಚಯನಂ ॥ ಇದಂ ಸರ್ವಂ ಸವ್ಯೇನೈವ ಕಾರ್ಯಂ ॥ ತತಃ ಸ್ನಾತ್ವಾ ಆಚಮ್ಯ ಗೃಹಂ ಗಚ್ಛೇತ್ ॥ ಕರ್ತಾ ಸಭಾರ್ಯಸ್ತ್ರಿರಾತ್ರಮಾಶೌಚಂ ಬ್ರಹ್ಮಚರ್ಯಂ ಚ ಕುರ್ಯಾತ್ ॥ ಅಧಃಶಯನಂ ಹವಿಷ್ಯಾನ್ನಂ ಶೌನಕೋಕ್ತೇಃ ॥ ಬೌಧಾಯನಮತೇತ್ವೇಕರಾತ್ರಾಶೌಚಂ ॥

ತತಶ್ಚತುರ್ಥೇಽಹನಿ ಸಚೈಲಂ ಸ್ನಾತ್ವಾ ಅಷ್ಟೌ ವಿಪ್ರಾನ್ನಿಮಂತ್ರ್ಯ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ನಾಗಬಲ್ಯಂಗವಿಹಿತಂ ಬ್ರಾಹ್ಮಣ ಭೋಜನಂ ಕರಿಷ್ಯೇ ಇತಿ ಸಂಕಲ್ಪ್ಯ ॥ ಸರ್ಪಸ್ವರೂಪಿಣೆ ಬ್ರಾಹ್ಮಣಾಯ ಇದಂ ತೇ ಪಾದ್ಯಂ ॥ ಏವಂ ಅನಂತಸ್ವರೂ ... ಶೇಷ ಸ್ವರೂ ... ಕಪಿಲ ಸ್ವರೂ ... ನಾಗಸ್ವರೂ ... ಕಾಲಕ ಸ್ವರೂ ... ಶಂಖಪಾಲ ಸ್ವರೂ .... ಭೂಧರ ಸ್ವರೂ ... ಇತಿ ಕ್ರಮೇಣ ತೇಷಾಂ ಪಾದೌ ಪ್ರಕ್ಷಾಲ್ಯ ತಾನಾಚಮಯ್ಯ ಸ್ವಯಂಚಾಚಮ್ಯ ವಿಪ್ರಾನ್ ಪ್ರಾಙ್ಮುಖಾನುದಙ್ಮುಖಾನ್ವಾ ಉಪವೇಶ್ಯ ॥ ಸರ್ಪಸ್ವರೂಪಿಣೇ ಓಂ ಭೂರ್ಭುವಃಸ್ವರಿದಮಾಸನಂ ಆಸ್ಯತಾಂ ॥ ಏವಮನಂತಾದಿಭ್ಯಃ ಸರ್ಪ-ಸ್ಥಾನೇ ಕ್ಷಣಃ ಕ್ರಿಯತಾಂ ॥ ಪ್ರಾಪ್ನೋತು ಭವಾನ್ ॥ ಏವಮನಂತಸ್ಥಾನೇ

ಹಾಗೂ ಹವಿಷ್ಯಾನ್ನವನ್ನು ಉಣ್ಣುವುದು; ಇದು ಶೌನಕರ ಮತ, ಬೌಧಾಯನರ ಮತವಂತಾದರೆ ಆಶೌಚವನ್ನು ಒಂದೇ ರಾತ್ರಿ ಆಚರಿಸಿದರೆ ಸಾಕು.

ಬಳಿಕ ನಾಲ್ಕನೆಯ ದಿನ ಉಟ್ಟಬಟ್ಟೆಯ ಸಹಿತ ಸ್ನಾನಮಾಡಿ ಎಂಟುಮಂದಿ ಬ್ರಾಹ್ಮಣರನ್ನು ಆಮಂತ್ರಿಸಿ ಆಚಮನ ಪ್ರಾಣಾಯಾಮ ದೇಶಕಾಲಕೀರ್ತನಾದಿಗಳನ್ನು ಮಾಡಿ **"ನಾಗಬಲ್ಯಂಗ... ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಎಂಟು ಬ್ರಾಹ್ಮಣರನ್ನೂ ಪೂರ್ವ ಅಥವಾ ಉತ್ತರಕ್ಕೆ ಮುಖಮಾಡಿ ಕೂತುಕೊಳ್ಳಿಸಿ ಸರ್ಪ, ಅನಂತ, ಶೇಷ ಇತ್ಯಾದಿ ಹೆಸರುಗಳಿಂದ ಒಬ್ಬೊಬ್ಬನಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಪಾದ್ಯ, ಆಸನ, ಕೊಟ್ಟು **"ಸರ್ಪಸ್ಥಾನೇ ಕ್ಷಣಃ ಕ್ರಿಯತಾಂ ..."** ಗಂಧ,

Scanned by CamScanner
Scanned with CamScanner

ಇತ್ಯಾದಿ ॥ ಭೋಃ ಸರ್ಪಸ್ವರೂಪ ಅಯಂ ತೇ ಗಂಧಃ ॥ ತತಃ ಪುಷ್ಪ ಧೂಪ-ದೀಪವಸ್ತ್ರಾದಿ ॥ ಏವಮನ್ಯೇಷಾಮಪಿ ಪೂಜನಾಂತೇ ಚತುರಸ್ರಮಂಡಲೇಷು ಪಾತ್ರಾಣಿ ನಿಧಾಯ ಪಾಯಸಭಕ್ಷ್ಯಾದೀನ್ ಪರಿವಿಷ್ಯ ಸಾವಿತ್ರ್ಯಾ ಪ್ರೋಕ್ಷ್ಯ ಪರಿಷಿಚ್ಯ ಸರ್ಪಾಯೇದಮನ್ನಮಮೃತರೂಪಂ ಪರಿವಿಷ್ಟಂ ಪರಿವೇಕ್ಷ್ಯಮಾಣಂ ಚಾತೃಪ್ತೇಃ ಸ್ವಾಹಾ ಸಂಪದ್ಯತಾಂ ನ ಮಮ ॥ ಏವಂ ಸರ್ವೇಷಾಂ ಆಚಾಂತೇಷು ಪ್ರಾಗಗ್ರದರ್ಭೇಷು ಭೋಃ ಸರ್ಪ ಅಯಂ ತೇ ಬಲಿಃ ನ ಮಮೇತ್ಯಾದಿ ನಾಮಮಂತ್ರೈಃ ಪಿಂಡರೂಪಾನ್ ಪಾಯಸಬಲೀನ್ ದತ್ವಾ ವಸ್ತ್ರಾದಿಭಿರಭ್ಯರ್ಚ್ಯ ವಿಪ್ರೇಭ್ಯಸ್ತಾಂಬೂಲದಕ್ಷಿಣಾಂ ಚ ದತ್ವಾ ವಿಸರ್ಜಯೇತ್ ॥ ಇದಮಪಿ ಸರ್ವಂ ಸವ್ಯೇನೈವ ಕಾರ್ಯಂ

ತತಃ ಸ್ಥಂಡಿಲಾತ್ಪೂರ್ವತಃ ಸಪ್ತಧಾನ್ಯೋಪರಿ ಮಹೀದ್ಯೌರಿತ್ಯಾದಿವಿಧಿನಾ ಸ್ಥಾಪಿತಕಲಶೇ ವಂಶಪಾತ್ರಂ ನಿಧಾಯ ವಸ್ತ್ರೋಪರಿ ಸೌವರ್ಣನಾಗಂ ಪ್ರಾಣ-ಪ್ರತಿಷ್ಠಾಪಂಚಾಮೃತಸ್ನಾನಪೂರ್ವಕಂ ನಾಗಗಾಯತ್ರ್ಯಾ ಸಂಸ್ಥಾಪ್ಯ ಪುರುಷ-ಸೂಕ್ತೇನಾಭಿಷೇಕಂ ಕುರ್ಯಾತ್ ॥ ಗುಡಕ್ಷೀರಾಜ್ಯನೈವೇದ್ಯಂ ನಿವೇದಯೇತ್ ॥ ಷೋಡಶೋಪಚಾರೈರಭ್ಯರ್ಚ್ಯ ಪ್ರಾರ್ಥಯೇತ್ ॥ ಬ್ರಹ್ಮಲೋಕೇ ಚ ಯೇ ಸರ್ಪಾಃ ಶೇಷನಾಗಪುರೋಗಮಾಃ ॥ ನಮೋಸ್ತು ತೇಭ್ಯಃ ಸುಪ್ರೀತಾಃ ಪ್ರಸನ್ನಾಃ ಸಂತು ಮೇ ಸದಾ ॥ ವಿಷ್ಣುಲೋಕೇ ಚ ಯೇ ಸರ್ಪಾಃ ವಾಸುಕಿಪ್ರಮುಖಾಶ್ಚ ಯೇ ॥ ನಮೋಸ್ತು ತೇಭ್ಯ .... ॥ ರುದ್ರಲೋಕೇ ಚ ಯೇ ಸರ್ಪಾಸ್ತಕ್ಷಕ-ಪ್ರಮುಖಾಸ್ತಥಾ ॥ ನಮೋಸ್ತು ತೇಭ್ಯಃ ..... ॥ ಖಾಂಡವಸ್ಯ ತಥಾ

ಪುಷ್ಪ, ಧೂಪ, ದೀಪ, ವಸ್ತ್ರಾದಿಗಳನ್ನು ಎಲ್ಲರಿಗೂ ಕೊಟ್ಟು ಪೂಜಿಸಿ, ಇದಿರಿನಲ್ಲಿ ಚತುರಸ್ರ ಮಂಡಲ ಮಾಡಿ ಎಲೆಗಳನ್ನಿಟ್ಟು ಪಾಯಸ, ಭಕ್ಷ್ಯಾದಿಗಳನ್ನು ಬಡಿಸಿ, ಗಾಯತ್ರೀ ಮಂತ್ರದಿಂದ ಪ್ರೋಕ್ಷಿಸಿ, **"ಸರ್ಪಾಯೇದಮನ್ನಂ ... ನ ಮಮ"** ಎಂದು ಸಮರ್ಪಿಸಿ ಊಟಮಾಡಿಸಿ ಎಲ್ಲರೂ ಆಚಮನ ಮಾಡಿದ ಮೇಲೆ, ಮೂಡುಗಡೆ ತುದಿಗಳಿರುವಂತೆ ದರ್ಭೆಗಳನ್ನು ಹಾಸಿ ಅವುಗಳ ಮೇಲೆ **"ಭೋಃ ಸರ್ಪ ಅಯಂ ತೇ ಬಲಿಃ"** ಎಂದು ಮೊದಲಾಗಿ ಎಂಟು ಬಲಿಗಳನ್ನು ಕೊಡಬೇಕು. ಪಿಂಡಗಳ ರೂಪದಲ್ಲಿ ಈ ಪಾಯಸ ಬಲಿಯನ್ನು ಕೊಟ್ಟ ಮೇಲೆ ಬ್ರಾಹ್ಮಣರಿಗೆ ತಾಂಬೂಲ ದಕ್ಷಿಣಾದಿಗಳನ್ನು ಕೊಟ್ಟು ಕಳುಹಿಸಬೇಕು. ಈ ಎಲ್ಲ ಕರ್ಮಗಳನ್ನೂ ಸವ್ಯದಿಂದಲೇ ಮಾಡಬೇಕು.

ಸ್ಥಂಡಿಲದ ಪೂರ್ವಭಾಗದಲ್ಲಿ ಸಪ್ತಧಾನ್ಯಗಳ ರಾಶಿ ಹಾಕಿ **"ಮಹೀದ್ಯೌ"** ಮುಂತಾದ ಮಂತ್ರಗಳಿಂದ ವಿಧಿವತ್ತಾಗಿ ಕಲಶಸ್ಥಾಪನೆ ಮಾಡಿ ಬಟ್ಟೆಯ ಮೇಲೆ ಸುವರ್ಣನಾಗನನ್ನು ಪ್ರಾಣಪ್ರತಿಷ್ಠೆ ಪಂಚಾಮೃತಾಭಿಷೇಕದೊಂದಿಗೆ ನಾಗಗಾಯತ್ರಿಯಿಂದ ಪ್ರತಿಷ್ಠಾಪಿಸಿ, ಪುರುಷಸೂಕ್ತದಿಂದ ಅಭಿಷೇಕ ಮಾಡಿ, ಬೆಲ್ಲ, ಹಾಲು ತುಪ್ಪಗಳ ನೈವೇದ್ಯ ಸಮರ್ಪಿಸಿ, ಷೋಡಶೋಪಚಾರಗಳಿಂದ ಪೂಜಿಸಿ, **"ಬ್ರಹ್ಮಲೋಕೇ ಚ ..."** ಇತ್ಯಾದಿ ಶ್ಲೋಕಗಳಿಂದ

Scanned by CamScanner

Scanned with CamScanner

ದಾಹೇ ಸ್ವರ್ಗಂ ಯೇ ಚ ಸಮಾಶ್ರಿತಾಃ ॥ ನಮೋಸ್ತು ತೇಭ್ಯ .... ॥ ಸರ್ಪ-ಸತ್ರೇ ಚ ಯೇ ಸರ್ಪಾಃ ಆಸ್ತಿಕೇನಾಭಿರಕ್ಷಿತಾಃ ॥ ನಮೋಸ್ತು ತೇಭ್ಯಃ .... ॥ ಮಲಯೇ ಚೈವ ಯೇ ಸರ್ಪಾಃ ಕರ್ಕೋಟಪ್ರಮುಖಾಶ್ಚ ಯೇ ॥ ನಮೋಸ್ತು ತೇಭ್ಯಃ ... ॥ ಧರ್ಮಲೋಕೇ ಚ ಯೇ ಸರ್ಪಾ ವೈತರಣ್ಯಾಂ ಸಮಾಶ್ರಿತಾಃ ॥ ನಮೋಸ್ತು ತೇಭ್ಯಃ ...... ॥ ಯೇ ಸರ್ಪಾಃ ಪರ್ವತೀ-ಯೇಷು ದರೀಸಂಧಿಷು ಸಂಶ್ರಿತಾಃ ॥ ನಮೋಸ್ತು ತೇಭ್ಯಃ ... ॥ ಪೃಥಿವ್ಯಾಂ ಚೈವ ಯೇ ಸರ್ಪಾಃ ಯೇ ಸರ್ಪಾ ಬಿಲಸಂಸ್ಥಿತಾಃ ॥ ನಮೋಸ್ತು ತೇಭ್ಯ .... ॥ ರಸಾತಲೇ ಚ ಯೇ ಸರ್ಪಾ ಅನಂತಾದ್ಯಾ ಮಹಾಬಲಾಃ ॥ ನಮೋಸ್ತು ತೇಭ್ಯಃ ... ॥ ಏವಂ ಸ್ತುತ್ವಾ ಆಚಾರ್ಯಂ ಸಂಪೂಜ್ಯ ಕೃತಸ್ಯ ಸರ್ಪಸಂಸ್ಕಾರಕರ್ಮಣಃ ಸಾಂಗತಾಸಿದ್ಧ್ಯರ್ಥಂ ಇಮಂ ಹೇಮಮಯಂ ನಾಗಂ ಸಕಲಶಂ ಸವಸ್ತ್ರಂ ಸದಕ್ಷಿಣಂ ತುಭ್ಯಮಹಂ ಸಂಪ್ರದದೇ ॥ ಅನೇನ ಸ್ವರ್ಣನಾಗ ದಾನೇನ ಅನಂತಾದಯೋ ನಾಗದೇವತಾಃ ಪ್ರೀಯಂತಾಂ ॥ ತತಸ್ತಸ್ಮೈ ಸವೃಷಭಾಂ ಕೃಷ್ಣಾಂ ಗಾಂ ತನ್ನಿಷ್ಕ್ರಯಂ ವಾ ದದ್ಯಾತ್ ॥ ತತೋ ದಂಪತೀ ವಸ್ತ್ರಾಲಂಕಾರಾ-ದಿಭಿರ್ಯಥಾವಿಭವಮನ್ನ್ಯಾನ್ ಬ್ರಾಹ್ಮಣಾಂಶ್ಚ ಸಂಪೂಜ್ಯ ॥ ಯಸ್ಯ ಸ್ಮೃತ್ಯಾ .... ॥ ಇತ್ಯುಕ್ತ್ವಾ ॥ ಮಯಾ ಯತ್ಕೃತಂ ಸರ್ಪಸಂಸ್ಕಾರಾಖ್ಯಂ ಕರ್ಮ ತದ್ಭವತಾಂ ಬ್ರಾಹ್ಮಣಾನಾಂ ವಚನಾತ್ ಶ್ರೀ ಪರಮೇಶ್ವರಪ್ರಸಾದಾತ್ ಸರ್ವಂ ಪರಿಪೂರ್ಣ-ಮಸ್ತು ॥ ತಥಾಸ್ತು ಇತಿ ತೇ ಬ್ರೂಯುಃ ॥ ತತಃ ಕರ್ಮಣಃ ಸಾಂಗತಾಯೈ ಯಥಾಶಕ್ತಿ ಬ್ರಾಹ್ಮಣಾನ್ ಸಂಭೋಜ್ಯ ಭೂಯಸೀಂ ದಕ್ಷಿಣಾಂ ದತ್ವಾ ಕರ್ಮ ಸಮಾಪಯೇತ್ ॥

॥ ಇತಿ ನಾಗಬಲಿಪ್ರಯೋಗಃ ಸಮಾಪ್ತಃ ॥

ಪ್ರಾರ್ಥಿಸಬೇಕು. ಬಳಿಕ ಆಚಾರ್ಯನನ್ನು ಅರ್ಚಿಸಿ, "**ಕೃತಸ್ಯ ಸರ್ಪಸಂಸ್ಕಾರಕರ್ಮಣಃ ... ಸಂಪ್ರದದೇ**" ಎಂದು ಕಲಶದಾನ ಮಾಡಬೇಕು. "**ಅನೇನ .... ಪ್ರೀಯಂತಾಂ**" ಎಂದು ಹೇಳಬೇಕು. ಬಳಿಕ ಅವನಿಗೆ ಎತ್ತುಸಮೇತ ಕಪ್ಪು ಬಣ್ಣದ ದನ ಅಥವಾ ಅದರ ಮೌಲ್ಯವನ್ನು ಕೊಡಬೇಕು. ಬಳಿಕ ದಂಪತಿಗಳು ಬ್ರಾಹ್ಮಣರನ್ನು ಯಥಾಶಕ್ತಿ ಪೂಜಿಸಿ, "**ಮಾಯಾ ಯತ್ಕೃತಂ .... ಪರಿಪೂರ್ಣಮಸ್ತು**" ಎಂದು ಬ್ರಾಹ್ಮಣರನ್ನು ಕೇಳಿಕೊಳ್ಳಬೇಕು. ಅವರು "**ತಥಾಸ್ತು**" ಎನ್ನಬೇಕು. ನಂತರ ಬ್ರಾಹ್ಮಣರಿಗೆ ಭೋಜನ ದಕ್ಷಿಣಾದಿಗಳನ್ನು ಕೊಟ್ಟು ಕರ್ಮಸಮಾಪ್ತಿ ಮಾಡಬೇಕು.

॥ ನಾಗಬಲಿ ಸಮಾಪ್ತ ॥

Scanned by CamScanner

Scanned with CamScanner

॥ ಸರ್ವಪ್ರಾಯಶ್ಚಿತ್ತಪ್ರಯೋಗಃ ॥

॥ ಶ್ರೀಃ ॥ ಸಚೈಲಂ ಸ್ನಾತ್ವಾ ಶಕ್ತೌ ಕ್ಲಿನ್ನವಾಸಾಃ ಪರ್ಷದಗ್ರೇ ಗೋವೃಷಪ್ರತ್ಯಾಮ್ನಾಯಂ ನಿಷ್ಕಾದಿಪ್ರಮಾಣಂ ಬ್ರಹ್ಮದಂಡಂ ನಿಧಾಯ ಸಾಷ್ಟಾಂಗಂ ಪ್ರಣಮ್ಯ ಪರ್ಷದಂ ಪ್ರದಕ್ಷಿಣೀ ಕುರ್ಯಾತ್ ॥ ಸರ್ವೇ ಧರ್ಮವಿವೇಕ್ತಾರೋ ... ಮಾಮನುಗೃಹ್ಣಂತು ಭವಂತಃ ॥ ಇತಿ ವದೇತ್ ॥

ಪ್ರಾಯಶ್ಚಿತ್ತ ಮಾಡುವವನು ಉಟ್ಟ ಬಟ್ಟೆ ಸಮೇತ ಸ್ನಾನಮಾಡಿ ಸಾಧ್ಯವಿದ್ದರೆ ಆ ಒದ್ದೆಬಟ್ಟೆಯನ್ನೇ ಉಟ್ಟುಕೊಂಡು ಬ್ರಾಹ್ಮಣರ ಸಭೆಯ ಮುಂದೆ ದನ ಮತ್ತು ಎತ್ತಿನ ಮೌಲ್ಯವಾಗುವಷ್ಟು ದ್ರವ್ಯವನ್ನು ಬ್ರಹ್ಮದಂಡವಾಗಿಟ್ಟು ಸಾಷ್ಟಾಂಗ ನಮಸ್ಕಾರ ಮಾಡಿ ಸಭೆಗೆ ಪ್ರದಕ್ಷಿಣೆ ಬಂದು, **"ಸರ್ವೇ ಧರ್ಮವಿವೇಕ್ತಾರೋ ... ಭವಂತಃ"** ಎಂದು ಹೇಳಬೇಕು. (ಈ ಶ್ಲೋಕಗಳ ಪೂರ್ಣಪಾಠ ನಾಗಬಲಿ ಪ್ರಯೋಗದಲ್ಲಿದೆ.) ಬ್ರಾಹ್ಮಣರು, **"ಕಿಂ ತೇ ಕಾರ್ಯಂ .... ವದೇತ್"** ಎಂದು ಕೇಳಬೇಕು. ಆಗ ತಾನು ಮಾಡಿದ ಪಾಪವನ್ನು ಸತ್ಯವಾಗಿ ನಿವೇದಿಸಿಕೊಳ್ಳಬೇಕು. **"ಮಯಾ ಮಮ ಭಾರ್ಯಯಾ ... ಉಪದಿಶಂತು ಭವಂತಃ"** ಎಂದು ಪ್ರಾರ್ಥಿಸಬೇಕು. ಆಗ ಬ್ರಾಹ್ಮಣರು, ಪ್ರಾಯಶ್ಚಿತ್ತ ಮಾಡಿಕೊಳ್ಳುವ ಪಾಪಿಯು ಮೊದಲೇ ಆಮಂತ್ರಿಸಿ ಪೂಜಿಸಿದ ಅನುವಾದಕನೊಡನೆ **"ಷಡಬ್ದ....ಭವಿಷ್ಯಸಿ"** ಎಂಬುದಾಗಿ 6-3 ಅಥವಾ ಸಾರ್ಧಾಬ್ದದ ಪ್ರಾಯಶ್ಚಿತ್ತವನ್ನು ವಿಧಿಸಬೇಕು. ಅನುವಾದಕನು ಆತನಿಗೆ ಇವನ್ನು ತಿಳಿಸಬೇಕು. ಆಗ ಕರ್ತನು **"ಓಂ"** ಎಂದು ಹೇಳಿ ಇದನ್ನು ಅಂಗೀಕರಿಸಿ ಸಭೆಯನ್ನು ವಿಸರ್ಜಿಸಿ ಆಚಮನ ಪ್ರಾಣಾಯಾಮ ದೇಶಕಾಲ ಸಂಕೀರ್ತನಾದಿಗಳನ್ನು ಮಾಡಿ-

ಅಬ್ದ ನಿರ್ಣಯಃ- ಪ್ರಾಜಾಪತ್ಯಕೃಚ್ಛ್ರದ ಸಂಖ್ಯೆಯನ್ನು ಹೊಂದಿಕೊಂಡು ಅಬ್ದನಿರ್ಣಯ ಮಾಡಬೇಕು. ಮೂವತ್ತು ಕೃಚ್ಛ್ರಗಳಿಗೆ ಒಂದು ಅಬ್ದವಾಗುತ್ತದೆ. ನಾಗಬಲಿಯಲ್ಲಿ ವಿವರಿಸಿದ ಪಾದಕೃಚ್ಛ್ರವನ್ನು ಮೂರರಷ್ಟು ಮಾಡಿದರೆ ಒಂದು ಪ್ರಾಜಾಪತ್ಯಕೃಚ್ಛ್ರ ಆಗುತ್ತದೆ. ಪ್ರಾಜಾಪತ್ಯಕೃಚ್ಛ್ರಕ್ಕೆ ಪ್ರತಿಯಾಗಿ ಈ ಕೆಳಗಿನವುಗಳನ್ನು ಮಾಡಬಹುದು. ಹತ್ತುಸಾವಿರ ಗಾಯತ್ರೀ ಮಂತ್ರ ಜಪ; ಗಾಯತ್ರೀ ಮಂತ್ರದಿಂದ ಒಂದು ಸಾವಿರ ತಿಲಹೋಮ; ವ್ಯಾಹೃತಿಮಂತ್ರದಿಂದ ಒಂದು ಸಾವಿರ ತಿಲಹೋಮ; ಇನ್ನೂರು ಪ್ರಾಣಾಯಾಮಗಳು; ಹನ್ನೆರಡು ಬ್ರಾಹ್ಮಣರಿಗೆ ಭೋಜನ ದಕ್ಷಿಣೆ; ತೀರ್ಥಸ್ಥಾನಗಳಲ್ಲಿ ಸ್ನಾನಮಾಡಿ, ಕೂದಲು ಒಣಗುವ ವರೆಗೆ ನಿಂತು ಪುನಃ ಸ್ನಾನಮಾಡಬೇಕು. ಹೀಗೆ ಹನ್ನೆರಡು ಸ್ನಾನಗಳನ್ನು ಮಾಡಬೇಕು. ಸಂಹಿತಾಪಾರಾಯಣ; ನಾನ್ನೂರು ಹರದಾರಿ ದೂರದ ವರೆಗೆ ಯಾತ್ರೆಮಾಡುವುದು; ಹನ್ನೆರಡು ಸಾವಿರ ನಮಸ್ಕಾರಗಳು; ಒಂದು ನೂರಮೂವತ್ತೆರಡು ಪ್ರಾಣಾಯಾಮಗಳು; ದಿನವಿಡೀ ಉಪವಾಸವಿದ್ದು ಮಾಡಬೇಕು. ಗೋಮೂತ್ರದಲ್ಲಿ ಯವ ಭಕ್ಷಣ; ರುದ್ರ ಏಕಾದಶಿನೀ ಜಪ; ಪವಮಾನ ಹೋಮ; ಆರು

Scanned by CamScanner

Scanned with CamScanner

ವಿಪ್ರೈಃ ಕಿಂ ತೇ ಕಾರ್ಯಂ ಮಿಥ್ಯಾ ಮಾ ವಾದೀಃ ಸತ್ಯಮೇವ ವದೇದಿತಿ ಪೃಷ್ಟಃ ಸ್ವಪಾಪಂ ಖ್ಯಾಪಯೇತ್ ॥ ಮಯಾ ಮಮ ಪತ್ನ್ಯಾ ವಾ ಇಹ-ಜನ್ಮನಿ ಜನ್ಮಾಂತರೇ ವಾ ಅನಪತ್ಯತ್ವಮೃತಾಪತ್ಯತ್ವಾದಿನಿದಾನಭೂತ ಬಾಲ-ಘಾತವಿಪ್ರರತ್ನಾಪಹಾರಾದಿದುರಿತಂ ತಸ್ಯ ನಾಶಾಯ ಕರಿಷ್ಯಮಾಣೇ ಹರಿವಂಶ-ಶ್ರವಣಾದೌ ಕರ್ಮವಿಪಾಕೋಕ್ತೇ ವಿಧಾನೇ ಅಧಿಕಾರಾರ್ಥಂ ದೀರ್ಘಾಯುಷ್ಮ-ತ್ಪುತ್ರಾದಿಸಂತತಿಪ್ರಾಪ್ತಯೇ ಪ್ರಾಯಶ್ಚಿತ್ತಮುಪದಿಶಂತು ಭವಂತ ಇತಿ ಪ್ರಾರ್ಥ-ಯೇತ್ ॥ ತೇ ಚ ಪಾಪಿನಾ ಪೂಜಿತಾನುವಾದಕಾಗ್ರೇ ಷಡಬ್ದದ್ವಿತ್ರ್ಯಬ್ದಸಾರ್ಧಾ-ಬ್ದಾನ್ಯತಮಪ್ರಾಯಶ್ಚಿತ್ತೇನ ಪೂರ್ವೋತ್ತರಾಂಗಸಹಿತೇನ ಆಚರಿತೇನ ತವ ಶುದ್ಧಿರ್ಭ-ವಿಷ್ಯತಿ ತೇನ ತ್ವಂ ಕೃತಾರ್ಥೋ ಭವಿಷ್ಯಸಿ ಇತಿ ವದೇಯುಃ । ಅನುವಾದಕಃ ಪಾಪಿನಂ ವದೇತ್ ॥ ತತಃ ಕರ್ತಾ ಓಮಿತ್ಯಂಗೀಕೃತ್ಯ ಪರ್ಷದಂ ವಿಸೃಜ್ಯ ॥ ದೇಶಕಾಲೌ ಸಂಕೀರ್ತ್ಯ ॥

ವಾಂತು........ ॥ ಇಮಾ ಆಪೋ ಮಧುಮತ್ಯಃ ಸ್ವರ್ಗೇ ತೇ ಲೋಕ
ಉಪದುಹ್ಯಂತಾಮಕ್ಷೀಯಮಾಣಾಃ ಸ್ವಧಾ ನಮಃ ॥ ಏವಂ ತ್ರಿಃ ಪರಿಕ್ರಮ್ಯ
ಪ್ರೇತಶಿರೋದೇಶೇ ಕುಂಭಂ ಸ್ಫೋಟಯಿತ್ವಾ ಶಿಲಾಹಸ್ತಃ ಕರ್ತಾ ॥ ಇಮೇ
ಜೀವಾಃ ಸಂಕುಸುಕೋ ಮೃತ್ಯುಸ್ತ್ರಿಷ್ಟುಪ್ ॥ ಸವ್ಯಮಾವೃತ್ಯಗಮನೇ ವಿನಿ-
ಯೋಗಃ ॥ ಇಮೇ ಜೀವಾ ವಿಮೃತೈರಾವವೃತ್ರನ್ನಭೂದ್ಭದ್ರಾ ದೇವಹೂ-
ತಿರ್ನೋಽ ಅದ್ಯ ॥ ಪ್ರಾಂಚೋ ಅಗಾಮ ನೃತಯೇಹಸಾಯದ್ರಾಘೀಯ

ಧಾರೆಯನ್ನೆರೆಯುತ್ತ **"ವಾತಾಸ್ತೇ ವಾಂತು ...."** **"ಇಮಾ ಆಪೋ........."** ಎಂಬ ಮಂತ್ರಗಳನ್ನು ಹೇಳುತ್ತ ಅಪ್ರದಕ್ಷಿಣೆಯಾಗಿ ಬರಬೇಕು. ಪುನಃ ಅದೇ ಕಲ್ಲಿನಿಂದ ಎರಡನೇ ತೂತನ್ನು ಮಾಡಿ ಮೊದಲಿನಂತೆಯೇ **"ವಾತಾಸ್ತೇ ವಾಂತು............."** ಮತ್ತು **"ಇಮಾ ಆಪೋ............."** ಎಂಬ ಮಂತ್ರಗಳನ್ನು ಹೇಳುತ್ತ ಎರಡನೆಯ ಸುತ್ತನ್ನೂ ಹಾಗೆಯೇ ಮೂರನೇ ತೂತನ್ನು ಮಾಡಿ ಮೂರನೆಯ ಪ್ರದಕ್ಷಿಣೆಯನ್ನೂ ಮಾಡಬೇಕು. ಎರಡನೆ ಮತ್ತು ಮೂರನೆಯ ಪ್ರದಕ್ಷಿಣೆಯಲ್ಲಿ **"ಇಮಾ ಆಪೋ..."** ಎಂಬ ಮಂತ್ರವಲ್ಲಿರುವ ವ್ಯತ್ಯಾಸವನ್ನು ಗಮನಿಸಬೇಕು. ಬಳಿಕ ಪುರುಷನಾದರೆ ಶಿರೋದೇಶದಲ್ಲೂ, ಸ್ತ್ರೀಯಾದರೆ ಪಾದದೇಶದಲ್ಲೂ ಎತ್ತರದಿಂದ ನೆಲಕ್ಕೆ ಹಾಕಿ ಆ ಕೊಡವನ್ನು ಪೂರ್ಣವಾಗಿ ಒಡೆಯಬೇಕು.

Scanned by CamScanner

ಆಯುಃ ಪ್ರತರಂ ದಧಾನಾಃ ॥ ಇತಿ ಮಂತ್ರಂ ಜಪೇತ್ ॥ ತತಃ ಕರ್ತೃಸಹಿತಾಃ ಸವ್ಯಾವೃತ್ತಾ ಭೂತ್ವಾ ಪೃಷ್ಠತೋ ನ ವೇಕ್ಷಮಾಣಾಃ ಕನಿಷ್ಠಪೂರ್ವಾಃ ಕರ್ತೃ ಪುರಃಸರಂ ಸರ್ವೇ ನಿರ್ಗಚ್ಛೇಯುಃ ॥

॥ ಇತಿ ಚಿತಿಪೂರಣಂ ॥

ಆಮೇಲೆ ತೂತು ಮಾಡಿದ ಆ ಕಲ್ಲನ್ನು ಕೈಯಲ್ಲಿ ಹಿಡಿದು ತೆಂಕುಮುಖವಾಗಿ **"ಇಮೇ ಜೀವಾಃ...."** ಎಂಬ ಮಂತ್ರವನ್ನು ಹೇಳುತ್ತ ಹಿಂತಿರುಗಿ ನೋಡದೆ ಸಣ್ಣವರನ್ನು ಮುಂದಿಟ್ಟುಕೊಂಡು ಅಪ್ರದಕ್ಷಿಣೆಯಾಗಿ ಅಲ್ಲಿಂದ ಹೋಗಬೇಕು.

॥ ಚಿತಿಪೂರಣಂ ಸಮಾಪ್ತ ॥

Scanned by CamScanner

Scanned with CamScanner

೮

॥ ತಿಲಾಂಜಲಿದಾನಂ ॥

ಶ್ರೀಃ ॥ ತತೋ ಯತ್ರೋದಕಮವಹತ್ ಸ್ಥಿರಂ ಭವತಿ ತತ್ರ ಸರ್ವೇ ಗತ್ವಾ ಕಪಾಲಸ್ಫೋಟನಾನಂತರಂ ಸಪಿಂಡಾಃ ಸೋದಕಾಃ ಸಗೋತ್ರಿಣಃ ಸ್ತ್ರಿಯಶ್ಚಾಪಿ ಸರ್ವೇ ಮುಕ್ತಕೇಶಾ ಏಕವಾಸಸೋ ದಕ್ಷಿಣಾಮುಖಾಃ ಮಹಾಜಲೇ ಶರೀರಮಲಂ ಪೂರ್ವಪರಿಹಿತಂ ವಸ್ತ್ರಂ ಚ ಪ್ರಕ್ಷಾಲ್ಯ ಪುನಸ್ತತ್ಪರಿಧಾಯ ಸರ್ವೇ ಏಕದಾ ನಿಮಜ್ಯ ಪುನಃ ಕೈಶ್ಚಿದುಕ್ತೇನ ಅಪನ ಇತಿ ಮಂತ್ರೇಣ ವಾಮಹಸ್ತೇನ ಅನಾಮಿಕಯಾ ಜಲಾವಲೋಡನಂ ಕೃತ್ವಾ ಸಚೈಲಂ ಸ್ನಾತ್ವಾಚಮ್ಯೋತ್ತೀರ್ಯ ಯೇನಾಶ್ಮನಾ ಕುಂಭಛಿದ್ರಾಣಿ ಕೃತಾನಿ ತಮಶ್ಮಾನಂ ಶುಚೌ ತೀರೇ ದಕ್ಷಿಣಾಗ್ರೇಷು ದರ್ಭೇಷು ಸ್ಥಾಪಯಿತ್ವಾ ತಸ್ಯೋಪರಿ ಸತಿಲಮೇಕೈಕಂ ಜಲಾಂಜಲಿಂ ದಕ್ಷಿಣಹಸ್ತಪಿತೃತೀರ್ಥೇನ ಸವ್ಯೋತ್ತರಪಾಣಿನಾ ಯುಗಪದಯುಗ್ಮಾ ದದ್ಯುಃ ॥ ಅಪಸವ್ಯೇನ ಅಮುಕಗೋತ್ರ ಅಮುಕಪ್ರೇತೈತತ್ತೇ ತಿಲೋದಕಮುಪತಿಷ್ಠತಾಮಿತಿ ॥ ಬ್ರಹ್ಮಚಾರೀ ತು ನ ದದ್ಯಾತ್ ॥ ಶವವಾಹಕೈಶ್ಚಾಂಜಲಿರ್ದೇಯಃ ॥ ಅನ್ಯೇ ಸುಹೃದೋ ದದ್ಯುರ್ನವಾ ॥ ದಾನೇಪಿ ನಾಶ್ಮನಿಯಮಃ ॥ ಪತಿತವ್ರಾತ್ಯಾದಯೋ ನ ದದ್ಯುಃ ॥ ತತೋಮುಕಗೋತ್ರಸ್ಯ

ಬಳಿಕ ನೀರು ಕಟ್ಟಿ ನಿಂತ ದೊಡ್ಡ ಮಡುವಿನಲ್ಲಿ ಕರ್ತೃವೂ, ಸಪಿಂಡರೂ, ಸೋದಕರೂ, ಸಗೋತ್ರಿಗಳೂ, ಹೆಂಗಸರೂ ಕೂಡ ಜುಟ್ಟು ಬಿಡಿಸಿ ಒಂದೊಂದೇ ಬಟ್ಟೆಯನ್ನುಟ್ಟುಕೊಂಡು ತೆಂಕುಮುಖವಾಗಿ ಮೈಯನ್ನೂ, ಮೊದಲು ಉಟ್ಟ ಬಟ್ಟೆಯನ್ನೂ ತೊಳೆದು, ಪುನಃ ಆ ಬಟ್ಟೆಯನ್ನೇ ಉಟ್ಟುಕೊಂಡು ಎಲ್ಲರೂ ನೀರಿನಲ್ಲಿ ಒಟ್ಟಿಗೇ ಮುಳುಗಿ, ಬ್ರಾಹ್ಮಣರು, "**ಅಪನಃ ಶೋಶುಚದಘಂ.....**" ಎಂಬ ಮಂತ್ರವನ್ನು ಹೇಳುತ್ತಿರುವಾಗ ಎಡಗೈಯ ಅನಾಮಿಕೆಯಿಂದ ಜಲಾವಲೋಡನವನ್ನು ಮಾಡಿ ಸಚೈಲಸ್ನಾನ, ಆಚಮನಗಳನ್ನು ಮಾಡಿ ನೀರಿನಿಂದ ಮೇಲೆ ಬರಬೇಕು. ಆಮೇಲೆ ಶುದ್ಧವಾದ ಸ್ಥಳದಲ್ಲಿ ತೆಂಕುತುದಿಯಾಗಿ ಹರಡಿದ ದರ್ಭೆಗಳ ಮೇಲೆ ಶ್ಮಶಾನದಲ್ಲಿ ಕೊಡಕ್ಕೆ ತೂತುಮಾಡಿದ ಪ್ರೇತಶಿಲೆಯನ್ನಿಟ್ಟು ಎಡಕೈಯಿಂದೊಡಗೂಡಿದ ಬಲಕೈಯ ಪಿತೃತೀರ್ಥ (ತರ್ಜನೀ ಅಂಗುಷ್ಠಗಳ ಮಧ್ಯಭಾಗ)ದಲ್ಲಿ ಎಲ್ಲರೂ ಒಟ್ಟಿಗೆ ಅಯುಗ್ಮರಾಗಿ ಅಪಸವ್ಯದಿಂದ "**ಅಮುಕಗೋತ್ರ......ತಿಲೋದಕಮುಪತಿಷ್ಠತಾಂ**" ಎಂದು ಒಂದು ಸಲ ತಿಲಾಂಜಲಿಯನ್ನು ಕೊಡಬೇಕು. ಬ್ರಹ್ಮಚಾರಿಯು ತಾಯಿ, ತಂದೆ, ಗುರು, ಆಚಾರ್ಯ, ತಾಯಿಯ ತಂದೆ, ತಾಯಿಯ ತಾಯಿ-ಇವರಿಗೆ ಮಾತ್ರ ತಿಲಾಂಜಲಿಯನ್ನು ಕೊಡಬಹುದು. ಇತರರಿಗೆ ಕೂಡದು. ಶವವಾಹಕರೇ ಮೊದಲಾದ ಸಪಿಂಡರೂ, ಸೋದಕರೂ ಈ ತಿಲಾಂಜಲಿಯನ್ನು

Scanned by CamScanner
Scanned with CamScanner

ಅಮುಕಪ್ರೇತಸ್ಯ ದಾಹಜನಿತತೃಷೋಪಶಮನಾರ್ಥಂ ಇದಂ ತೇ ವಾಸೋದಕಮುಪತಿಷ್ಠತಾಮಿತಿ ಕರ್ತಾಶ್ಮನಿ ಉತ್ತರೀಯೋದಕಂ ದದ್ಯಾತ್ ॥ ತತಃ ಕರ್ತೃ-ಭಿನ್ನಾಃ ಸರ್ವೇ ಸಪಿಂಡಾದಯಃ ಶವಸ್ಪರ್ಶಿನಶ್ಚಾನ್ಯಾನಿ ವಾಸಾಂಸಿ ಪರಿಧಾಯ ಆರ್ದ್ರಾಣ್ಯಧೋದಶಾನಿ ಸಕೃನ್ನಿಷ್ಪೀಡ್ಯ ಶೋಷಣಾರ್ಥಮುದಗ್ದಶಾನಿ ನಿಕ್ಷಿಪ್ಯ ದಿನದಾಹೇ ಆತಾರಕೋದಯಾತ್ ರಾತ್ರಿದಾಹೇ ಆದಿತ್ಯೋದಯಾತ್ತತ್ರೈವ ವಸೀರನ್ ॥ ಶವವಾಹಕಾನಾಮಪ್ಯೇವಂ ನಿಯಮಃ ॥

॥ ಇತಿ ತಿಲಾಂಜಲಿದಾನಂ ॥

ಕೊಡಬೇಕು. ಸ್ನೇಹಿತರು ಕೊಟ್ಟರೂ ಕೊಡದಿದ್ದರೂ ಆಗಬಹುದು. ಪ್ರೇತಶಿಲೆಗೇ ಕೊಡಬೇಕೆಂಬ ನಿಯಮವೂ ಇಲ್ಲ. ಪತಿತರೂ, ಸಂಸ್ಕಾರ ಹೀನರೂ ಕೊಡಲೇ ಬಾರದು. ನಂತರ ಕರ್ತೃವು **"ಅಮುಕಗೋತ್ರಸ್ಯ........ವಾಸೋದಕಮುಪತಿಷ್ಠತಾಂ"** ಎಂದು ತನ್ನ ಉತ್ತರೀಯವನ್ನು ನೀರಿನಲ್ಲಿ ಅದ್ದಿ ಹಿಂಡಿ ಶಿಲೆಯ ಮೇಲೆ ನೀರನ್ನು ಕೊಡಬೇಕು. ಬಳಿಕ ಇತರರೆಲ್ಲರೂ ಬೇರೆ ಬಟ್ಟೆಗಳನ್ನು ಉಟ್ಟುಕೊಂಡು, ಒದ್ದೆಬಟ್ಟೆಗಳನ್ನು ಹಿಂಡಿ ಒಣಗಿಸಿ, ಹಗಲು ದಹನವಾದರೆ ನಕ್ಷತ್ರಗಳು ಕಾಣಿಸುವ ವರೆಗೂ, ರಾತ್ರಿ ದಹನವಾದರೆ ಸೂರ್ಯೋದಯದ ವರೆಗೂ ಅಲ್ಲಿಯೇ ಇರಬೇಕು.

॥ ತಿಲಾಂಜಲಿದಾನಂ ಸಮಾಪ್ತ ॥

Scanned by CamScanner

Scanned with CamScanner

೬

॥ ಪ್ರಥಮದಿನವಿಧಿಃ ॥

ಶ್ರೀಃ ॥ ಕರ್ತಾ ತು ಆರ್ದ್ರವಸ್ತ್ರಸ್ತಸ್ಮಿನ್ ದಿನೇ ತತ್ಕಾಲ ಏವ ಅನ್ಯದಿನೇಷು ವಾ ಪೂರ್ವಾಹ್ಣ ಏವ ಪ್ರಾಗುದೀಚ್ಯಾಂ ಗ್ರಾಮಾದ್ಬಹಿಃ ಸರಿತ್ಸಂಗಮೇ ಮಹಾಜಲಸನ್ನಿಧೌ ವಾ ಗತ್ವಾ ಭೂಮಿಂ ಸಂಶೋಧ್ಯ ತತ್ರ ದಶಾಹಾಂತಂ ಕರ್ಮ ಕುರ್ಯಾತ್ ॥ ಸ್ನಾತ್ವಾ ಆರ್ದ್ರೇ ನವೀನೇ ವಾಸಸೀ ಧೃತ್ವಾ ಆಚಮ್ಯ ದೇಶಕಾಲೌ ಸ್ಮೃತ್ವಾ ಸೋತ್ತರೀಯಃ ಪ್ರಾಚೀನಾವೀತೀ ದಕ್ಷಿಣಾಮುಖಃ ಅಮುಕಗೋತ್ರಸ್ಯಾಮುಕಪ್ರೇತಸ್ಯ ಪಿತ್ರಾದೇಃ (ಮಾತ್ರಾದೌ ತು ಅಮುಕಗೋತ್ರಾಯಾ ಅಮುಕದೇವೀದಾಯಾಃ ಪ್ರೇತಾಯಾಃ) ಪ್ರೇತತ್ವ-ನಿವೃತ್ತ್ಯಾ ಉತ್ತಮಲೋಕಪ್ರಾಪ್ತ್ಯರ್ಥಂ ಪ್ರಥಮದಿನವಿಧಿಂ ಕರಿಷ್ಯೇ ಇತಿ ಸಂಕಲ್ಪ್ಯ ॥ ತಾಮ್ರಾದಿಮಯಂ ನವಂ ಭಾಂಡಂ ಸಂಶೋಧ್ಯ ತಸ್ಮಿನ್ ಪಿಂಡಾರ್ಥಂ ಸಕೃತ್ಪ್ರಕ್ಷಾಲಿತಾನ್ ಪ್ರಸೃತಿಪರಿಮಿತಾಂಸ್ತಂಡುಲಾನ್ ಸೋದಕಾ-ನ್ನಿಧಾಯ ತತ್ಪಾತ್ರಂ ಲೌಕಿಕಾಗ್ನಾವಧಿಶ್ರಿತ್ಯ ಸ್ವಯಂ ಚರುಂ ಶ್ರಪಯಿತ್ವಾ ಮೃತ್ತಿಕಾಸ್ನಾನಾದಿ ಕುರ್ಯಾತ್ ॥ ದೇಶಕಾಲೌ ಸಂಕೀರ್ತ್ಯ ಪ್ರಾಚೀನಾವೀತೀ ಪಿತ್ರಾದೇರಮುಕಗೋತ್ರಸ್ಯ ಅಮುಕಪ್ರೇತಸ್ಯ ಪ್ರೇತತ್ವನಿವೃತ್ತ್ಯಾ ಉತ್ತಮ-ಲೋಕಾವಾಪ್ತ್ಯರ್ಥಂ ಪ್ರಥಮೇಹನಿ ದಾಹಜನಿತ ತಾಪೋಪಶಮನಾರ್ಥಂ

ಮೊದಲನೆಯ ದಿನದ ವಿಧಿ:- ಕರ್ತೃವು ಊರಿನ ಹೊರಗೆ ಪೂರ್ವ ಅಥವಾ ಉತ್ತರದಿಕ್ಕಿನಲ್ಲಿರುವ ಹೊಳೆ ಅಥವಾ ನೀರು ತುಂಬಿದ ಆಳವಾದ ಮಡುವಿನಲ್ಲಿ ಸ್ನಾನ ಮಾಡಿ ಒದ್ದೆ ಮಾಡಿದ ಎರಡು ಹೊಸಬಟ್ಟೆಗಳನ್ನು ಧರಿಸಿ ಆಚಮನ ಪ್ರಾಣಾಯಾಮ ದೇಶಕಾಲ ಸಂಕೀರ್ತನಾದಿಗಳನ್ನು ಮಾಡಿ ಅಪಸವ್ಯದಿಂದ ತೆಂಕುಮುಖವಾಗಿ, **"ಅಮುಕಗೋತ್ರಸ್ಯ...... ಪ್ರಥಮದಿನವಿಧಿಂ ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ಬಳಿಕ ತಾಮ್ರದ ಒಂದು ಹೊಸ ಪಾತ್ರೆಯಲ್ಲಿ ಒಂದು ಮುಷ್ಟಿಯಷ್ಟು ತೊಳೆದ ಅಕ್ಕಿಯನ್ನು ಹಾಕಿ ಬೇಯಿಸಿ ಚರುವನ್ನು ತಯಾರಿಸಬೇಕು. ಮತ್ತೊಮ್ಮೆ ದೇಶಕಾಲ ಸ್ಮರಣೆಯನ್ನು ಮಾಡಿ, **"ಪಿತ್ರಾದೇ......... ಮೃತ್ತಿಕಾಸ್ನಾನಾದಿ ಕರಿಷ್ಯೇ"** ಎಂದು ಸಂಕಲ್ಪ ಮಾಡಿ, **"ಉದುತ್ಯಂ ಜಾತವೇದಸಂ..."** ಎಂಬ

Scanned by CamScanner
Scanned with CamScanner

ಮೃತ್ತಿಕಾಸ್ನಾನಾದಿ ಕರಿಷ್ಯೇ ಇತಿ ಸಂಕಲ್ಪ್ಯ ॥ ಉದುತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ ॥ ದೃಶೇ ವಿಶ್ವಾಯ ಸೂರ್ಯಂ ॥ ಇತಿ ಶುದ್ಧಮೃದಮಾದಾಯ ॥ ಆ ಕೃಷ್ಣೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂ ಚ ॥ ಹಿರಣ್ಯಯೇನ ಸವಿತಾ ರಥೇನಾ ದೇವೋ ಯಾತಿ ಭುವನಾನಿ ಪಶ್ಯನ್ ॥ ಇತಿ ಸೂರ್ಯಾಯ ದರ್ಶಯಿತ್ವಾ ॥ ಸಹಸ್ರಶೀರ್ಷಾಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ॥ ಸ ಭೂಮಿಂ ವಿಶ್ವತೋ ವೃತ್ವಾ ತ್ಯತಿಷ್ಠದ್ದಶಾಂಗುಲಂ ॥ ಇತಿ ಶಿರಸಿ ವಿಲಿಪ್ಯ ॥ ಅಂಗಾದಂಗಾಲ್ಲೋಮ್ನೋಲೋಮ್ನೋ ಜಾತಂ ಪರ್ವಣಿ ಪರ್ವಣಿ ॥ ಯಕ್ಷ್ಮಂ ಸರ್ವಸ್ಮಾದಾತ್ಮನಸ್ತಮಿದಂ ವಿವೃಹಾಮಿತೇ ॥ ಇತಿ ಸರ್ವಾಂಗೇ ಲಿಂಪೇತ್ ಸ್ನಾತ್ವಾ ಆಚಮ್ಯ ಪುನರ್ದ್ವಿವಾರಂ ಕಾರ್ಯಂ ॥ ತತಃ ಆಚಮ್ಯ ಅದ್ಯೇತ್ಯಾದಿ ಪ್ರಾಚೀನಾವೀತೀ ಪಿತ್ರಾದೇರಮುಕಗೋತ್ರಸ್ಯ ಅಮುಕ ಪ್ರೇತಸ್ಯ ದಾಹಜನಿತತೃಷೋಪಶಮನಾರ್ಥಂ ತಿಲತೋಯಾಂಜಲಿದಾನಂ ಕರಿಷ್ಯೇ ಇತಿ ಸಂಕಲ್ಪ್ಯ ಕುಶೋಪರ್ಯಶ್ಮಾನಂ ಸ್ಥಾಪಯಿತ್ವಾ ತದುಪರಿ ಅಮುಕ-ಗೋತ್ರಾಮುಕಪ್ರೇತ ದಾಹಜನಿತತೃಷೋಪಶಮನಾರ್ಥಂ ಏಷ ತಿಲತೋಯಾಂ-ಜಲಿಸ್ತವೋಪತಿಷ್ಠತಾಂ ॥ ಇತಿ ದಕ್ಷಿಣಾಮುಖಃ ತಿಲತೋಯಾಂಜಲಿಂ ದದ್ಯಾತ್ ॥ ಪ್ರತ್ಯಂಜಲಿಸ್ನಾನಂ ಕಾರ್ಯಂ ॥ ತಿಲಾಂಜಲಿಸಂಖ್ಯಾ ॥ ಪ್ರತಿದಿನಂ

ಮಂತ್ರವನ್ನು ಹೇಳಿ, ಶುದ್ಧವಾದ ಮಣ್ಣನ್ನು ಕೈಯಲ್ಲಿ ತೆಗೆದುಕೊಳ್ಳಬೇಕು. **"ಆಕೃಷ್ಣೇನ...."** ಎಂಬ ಮಂತ್ರದಿಂದ ಅದನ್ನು ಸೂರ್ಯನಿಗೆ ತೋರಿಸಿ, **"ಸಹಸ್ರಶೀರ್ಷಾಪುರುಷಃ....."** ಎಂಬುದರಿಂದ ತಲೆಗೆ ಲೇಪಿಸಿ, **"ಅಂಗಾದಂಗಾ...."** ಎಂಬ ಮಂತ್ರವನ್ನು ಹೇಳಿ ಸರ್ವಾಂಗಕ್ಕೂ ಲೇಪಿಸಿ ಕೊಂಡು ಸ್ನಾನಮಾಡಿ ಆಚಮನ ಮಾಡಬೇಕು. ಇದೇ ಕ್ರಮದಲ್ಲಿ ಇನ್ನೆರಡು ಸಲ ಹೀಗೇ ಮಾಡಬೇಕು.

ಅನಂತರ ಅಪಸವ್ಯದಲ್ಲಿ ಆಚಮನ ಪ್ರಾಣಾಯಾಮ ದೇಶಕಾಲ ಉಚ್ಚಾರಗಳನ್ನು ಮಾಡಿ **"ಪಿತ್ರಾದೇರಮುಕಗೋತ್ರಸ್ಯ......ತಿಲತೋಯಾಂಜಲಿದಾನಂ ಕರಿಷ್ಯೇ"** ಎಂದು ಸಂಕಲ್ಪ ಮಾಡಿ, ತ್ರಿಕೋಣಾಕಾರದ ಒಂದು ಕುಂಡವನ್ನು ರಚಿಸಿ, ಅದರ ಮಧ್ಯದಲ್ಲಿ ದರ್ಭೆಯ

Scanned by CamScanner

Scanned with CamScanner

ಏಕೈಕ ಇತಿ ದಶ ॥ ಪ್ರತಿದಿನಂ ತ್ರಯಸ್ತ್ರಯ ಇತಿ ತ್ರಿಂಶತ್ ॥ ಪ್ರತಿದಿನಂ ಏಕೈಕವೃದ್ಧಿರಿತಿ ಪಂಚಪಂಚಾಶತ್ ॥ ಪ್ರತ್ಯಹಂ ದಶ ದಶೇತ್ಯೇವಂ ಶತಂ ಭವತಿ ॥ ಪ್ರತ್ಯಹಂ ದ್ವಯೋತ್ತರಂ ವೃದ್ಧಿರಿತಿ ದಶೋತ್ತರಂ ಶತಂ ॥ ಏಷಾಂ ಪಕ್ಷಾಣಾಂ ಮಧ್ಯೇನ್ಯತಮಪಕ್ಷಾಶ್ರಯಣೇನ ತಿಲಾಂಜಲಿರ್ದೇಯಃ ॥ ಸ್ನಾತ್ವಾ ಆಚಮ್ಯ ತತಃ ಮಧುಸರ್ಪಿಸ್ತಿಲ ಶರ್ಕರಾಪಯೋಮಿಶ್ರಿತಂ ಭಕ್ತಪಿಂಡಂ ಕೃತ್ವಾ ಅಮುಕಗೋತ್ರಸ್ಯಾಮುಕಪ್ರೇತಸ್ಯ ಆದ್ಯೇಹನಿ ಶಿರೋವಯವನಿಷ್ಪತ್ತ್ಯರ್ಥಂ ಏಷ ಪಿಂಡಸ್ತವೋಪತಿಷ್ಠತಾಮಿತಿ ಕುಶೋಪರಿ ಮಹಾಂತಂ ಪಿಂಡಂ ದತ್ವಾ ॥ ಪುನಃ ಅಮುಕಗೋತ್ರಾಮುಕಪ್ರೇತ ಏತತ್ತೇ ತಿಲೋದಕಮುಪತಿಷ್ಠತಾಮಿತಿ ಪಿಂಡೋಪರಿ ಪಿತೃತೀರ್ಥೇನ ತಿಲೋದಕಂ ಪ್ರಕ್ಷಿಪ್ಯ ಪುನರಮುಕೇತ್ಯಾದಿ ಉಪ-ತಿಷ್ಠತಾಮಿತ್ಯಂತೇನ ತುಲಸೀದಲಂ ಭೃಂಗರಾಜಪತ್ರಂ ಧೂಪದೀಪಾದಿ ಚ ದತ್ವಾ ॥ ಅನಾದಿನಿಧನೋ ದೇವಃ ಶಂಖಚಕ್ರಗದಾಧರಃ ॥ ಅಕ್ಷಯ್ಯಃ ಪುಂಡರೀಕಾಕ್ಷಃ ಪ್ರೇತಮೋಕ್ಷಪ್ರದೋಸ್ತು ವೈ ॥ ಇತಿ ಪಠಿತ್ವಾ ॥ ಇದಂ ಪಿಂಡದಾನಂ ಸತಿಲೋದಕಂ ಪ್ರೇತಾಪ್ಯಾಯನಮಸ್ತು ॥ ಅಸ್ತು ಪ್ರೇತಾಪ್ಯಾ-

---

ಮೇಲೆ ಪ್ರೇತಶಿಲೆಯನ್ನಿಟ್ಟು, ಅದರ ಮೇಲೆ **"ಅಮುಕಗೋತ್ರ....ತವೋಪತಿಷ್ಠತಾಂ"** ಎಂದು ತೆಂಕುಮುಖವಾಗಿ ತಿಲಾಂಜಲಿಯನ್ನು ಕೊಡಬೇಕು. ಪ್ರತಿಯೊಂದು ತಿಲಾಂಜಲಿಯನ್ನು ಕೊಟ್ಟಾದ ಮೇಲೂ ಒಂದು ಸಲ ಸ್ನಾನಮಾಡಬೇಕು.

ತಿಲಾಂಜಲಿಗಳ ಸಂಖ್ಯೆ:- ದಿನಕ್ಕೊಂದರಂತೆ ಹತ್ತು, ದಿನಕ್ಕೆ ಮೂರರಂತೆ ಮೂವತ್ತು. ಮೊದಲನೆಯ ದಿನ ಒಂದರಿಂದ ಆರಂಭಿಸಿ, ನಂತರ ಎರಡು, ಮೂರು, ನಾಲ್ಕು ಎಂದು ಒಂದೊಂದಾಗಿ ಹೆಚ್ಚಿಸುತ್ತ ಒಟ್ಟು ಐವತ್ತೈದು, ದಿನಕ್ಕೆ ಹತ್ತರಂತೆ ನೂರು, ಪ್ರತಿದಿನ ಎರಡೆರಡರಂತೆ ಹೆಚ್ಚಿಸುತ್ತ ಒಟ್ಟು (ನೂರಹತ್ತು) ಇವುಗಳಲ್ಲಿ ಯಾವುದಾದರೂ ಒಂದು ವಿಧಾನವನ್ನು ಅಂಗೀಕರಿಸಿ ತಿಲಾಂಜಲಿಗಳನ್ನು ಕೊಡಬೇಕು. ಬಳಿಕ ಆಚಮನ ಮಾಡಿ ಜೇನು, ತುಪ್ಪ, ಎಳ್ಳು, ಸಕ್ಕರೆ ಮುಂತಾದವುಗಳನ್ನು ಸೇರಿಸಿ ಬೇಯಿಸಿಟ್ಟ ಚರುವಿನಿಂದ ದೊಡ್ಡ ಪಿಂಡವೊಂದನ್ನು ತಯಾರಿಸಿ **"ಅಮುಕಗೋತ್ರಸ್ಯ......ಆದ್ಯೇಹನಿ......ತವೋಪತಿಷ್ಠತಾಂ"** ಎಂದು ದರ್ಭೆಗಳ ಮೇಲೆ ಪಿಂಡವನ್ನು ಕೊಡಬೇಕು. ಪಿಂಡದ ಮೇಲೆ ತಿಲೋದಕವನ್ನೂ ಕೊಡಬೇಕು. ಆಮೇಲೆ **"ಅಮುಕಗೋತ್ರ.....ಏತತ್ತೇ....ಉಪತಿಷ್ಠತಾಂ"** ಎಂದು ತುಲಸೀದಳ,

Scanned by CamScanner

Scanned with CamScanner

ಯನಮಿತಿ ಪ್ರತಿವಚನಂ ಆಚಾರ್ಯೋ ವದೇತ್ ॥ ತತಃ ಪಿಂಡಂ ಜಲೇ ಪ್ರವಾಹ್ಯ ಸ್ನಾತ್ವಾ ಆಚಾಮೇತ್ ॥

॥ ಇತಿ ಪ್ರಥಮದಿನೀಯಾವಯವ ಪಿಂಡದಾನವಿಧಿಃ ॥

ಭೃಂಗರಾಜಪತ್ರ, ಧೂಪ, ದೀಪ ಇತ್ಯಾದಿಗಳನ್ನು ಪಿಂಡಕ್ಕೆ ಸಮರ್ಪಿಸಿ **"ಅನಾದಿನಿಧನೋ...... ಮೋಕ್ಷಪ್ರದೋಸ್ತು ವೈ" "ಇದಂಪಿಂಡದಾನಂ....ಮಸ್ತು"** ಎಂದು ಹೇಳಬೇಕು. ಪುರೋಹಿತನು **"ಅಸ್ತು ಪ್ರೇತಾಪ್ಯಾಯನಂ"** ಎಂದು ಹೇಳಿದ ಮೇಲೆ ಪಿಂಡವನ್ನು ಹರಿಯುವ ನೀರಿನಲ್ಲಿ ಬಿಟ್ಟು ಸ್ನಾನ ಆಚಮನಗಳನ್ನು ಮಾಡಬೇಕು.

Scanned by CamScanner

೧೦

॥ ನವ (ವಿಷಮ) ಶ್ರಾದ್ಧಂ ॥

ಶ್ರೀಃ ॥ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ ಅಮುಕಗೋತ್ರಸ್ಯಾಮುಕಪ್ರೇತಸ್ಯ ಪ್ರೇತತ್ವವಿಮೋಕ್ಷಾರ್ಥಂ ಆದ್ಯೇಹನಿ ನವ-ಶ್ರಾದ್ಧಂ ಕರಿಷ್ಯೇ ಇತಿ ಸಂಕಲ್ಪ್ಯ ॥ ಪ್ರಾಚೀನಾವೀತೀ ॥ ದಕ್ಷಿಣಾಭಿಮುಖಃ ಆತ್ಮನೋಗ್ರೇ ದರ್ಭಬಟುಂ ಉದಙ್ಮುಖಂ ಸಂಸ್ಥಾಪ್ಯ ಅಮುಕಗೋತ್ರಾಮುಕ-ಪ್ರೇತ ನವಶ್ರಾದ್ಧೇ ಅಯಂ ತೇ ಕ್ಷಣ ಉಪತಿಷ್ಠತಾಮಿತಿ ಏಕಂ ಕುಶಂ ದತ್ವಾ ಅಮುಕಗೋತ್ರಾಮುಕಪ್ರೇತ ನವಶ್ರಾದ್ಧೇ ಇದಂ ತೇ ಪಾದ್ಯಮುಪತಿಷ್ಠತಾಂ ಇತಿ ಪಾದ್ಯಂ ದತ್ವಾ ಅಮುಕಗೋತ್ರಸ್ಯಾಮುಕಪ್ರೇತಸ್ಯ ನವಶ್ರಾದ್ಧೇ ಆಸನ-ಮುಪತಿಷ್ಠತಾಂ ಇತಿ ದರ್ಭಬಟುವಾಮಭಾಗೇ ಏಕಂ ಸತಿಲಂ ಕುಶಂ ದತ್ವಾ ಸ್ವಾಗ್ರೇ ದಕ್ಷಿಣಾಗ್ರಮೇಕಂ ಕುಶಂ ನಿಧಾಯ ತತ್ರೈಕಮುತ್ತಾನಂ ಪಾತ್ರಮಾ-ಸಾದ್ಯ ತತ್ರೈಕಂ ಪವಿತ್ರಂ ನಿಧಾಯ ತೂಷ್ಣೀಂ ಜಲಮಾಸಿಚ್ಯ ತೂಷ್ಣೀಮೇವ ತಿಲಾನ್ ಪ್ರಕ್ಷಿಪ್ಯ ತೂಷ್ಣೀಮರ್ಘ್ಯಂ ನಿವೇದ್ಯ ಅಮುಕಗೋತ್ರಾಮುಕಪ್ರೇತ ನವಶ್ರಾದ್ಧೇ ಇದಮರ್ಘ್ಯಂ ತವೋಪತಿಷ್ಠತಾಮಿತಿ ಅರ್ಘ್ಯಂ ದತ್ವಾ ಅಮುಕಗೋತ್ರಾಮುಕಪ್ರೇತ ಆಚ್ಛಾದನಮುಪತಿಷ್ಠತಾಂ ಇತ್ಯಾಚ್ಛಾದನದರ್ಭಂ ದದ್ಯಾತ್ ॥ ನಾತ್ರ ಗಂಧಾದಿದಾನಂ ॥

ನವಶ್ರಾದ್ಧ:- ತಂದೆ-ತಾಯಿಗಳಾದರೆ ಮೃತದಿನ ಮೊದಲ್ಗೊಂಡು ವಿಷಮ (೧, ೩, ೫, ೭, ೯) ದಿನಗಳಲ್ಲಿ ಸಂಕಲ್ಪ ಮಾಡುವಾಗ ಆಯಾ ದಿನವನ್ನು **"ಪ್ರಥಮೇಹನಿ" "ತೃತೀಯೇಹನಿ"** ಎಂದು ಮುಂತಾಗಿ ಹೇಳಿ ನವಶ್ರಾದ್ಧವನ್ನು ಮಾಡಬೇಕು. ಇತರರಿಗಾದರೆ, ಭರಣಿ, ಕೃತ್ತಿಕೆ, ರೋಹಿಣಿ, ಪುನರ್ವಸು, ಉತ್ತರೆ, ವಿಶಾಖೆ, ಉತ್ತರಾಷಾಢಾ, ಪೂರ್ವಾಭಾದ್ರಾ ಉತ್ತರಾಭಾದ್ರಾ - ಈ ನಕ್ಷತ್ರಗಳಲ್ಲಿಯೂ ಕರ್ತೃವಿನ ತ್ರಿಜನ್ಮನಕ್ಷತ್ರದಲ್ಲಿಯೂ ಸೋಮ, ಬುಧ, ಗುರು, ಶುಕ್ರವಾರಗಳಲ್ಲಿಯೂ ನವಶ್ರಾದ್ಧವನ್ನು ಮಾಡಬಾರದು. ಈ ದೋಷಗಳಿದ್ದುದರಿಂದ ಪ್ರಥಮಾದಿ ದಿನಗಳಲ್ಲಿ ನವಶ್ರಾದ್ಧವು ಉಳಿದು ಹೋದರೆ ಮುಂದಿನ ನವಶ್ರಾದ್ಧದ ದಿನ ಮೊದಲಿನದನ್ನೂ ಸೇರಿಸಿ ಮಾಡಬೇಕು. ಯಾವ ಒಂದು ದಿನವೂ ದೋಷರಹಿತವಾಗಿಲ್ಲದಿದ್ದರೆ ಮೃತದಿನದಿಂದ ಹನ್ನೊಂದನೆಯ ದಿವಸ ನವಶ್ರಾದ್ಧಗಳನ್ನೂ ಒಟ್ಟಿಗೆ ಮಾಡಬೇಕು. ಈ ನವಶ್ರಾದ್ಧಕ್ಕೆ ಚಂದ್ರಾಷ್ಟಮವೂ ವಿಪತ್ಪ್ರತ್ಯರವಧಾತಾರೆಗಳೂ ಪ್ರಶಸ್ತವಾಗಿವೆ.

ಆಚಮನ ಪ್ರಾಣಾಯಾಮ ದೇಶಕಾಲಕೀರ್ತನಾದಿಗಳನ್ನು ಮಾಡಿ ಅಪಸವ್ಯದಿಂದ **"...ಗೋತ್ರಸ್ಯ.... ಪ್ರೇತಸ್ಯ ಆದ್ಯೇಹನಿ... ಕರಿಷ್ಯೇ"** ಎಂದು ಸಂಕಲ್ಪಮಾಡಿ ತೆಂಕುಮುಖವಾಗಿ ಕುಳಿತು ತನ್ನ ಮುಂಭಾಗದಲ್ಲಿ ಶುದ್ಧವಾದ ಆಸನದ ಮೇಲೆ ಬ್ರಾಹ್ಮಣನ ಬದಲಿಗೆ

Scanned by CamScanner

Scanned with CamScanner

ತತೋ ಘೃತಾಕ್ತಮನ್ನಂ ಸಕ್ತು ವಾ ಆದಾಯ ಅಮುಕಗೋತ್ರಾಯಾಮುಕಪ್ರೇತಾಯ ಸ್ವಾಹೇತ್ಯೇಕಾಂ ಆಹುತಿಂ ದರ್ಭಬಟುಪಾಣೌ ಹುತ್ವಾ ಅಮುಕಗೋತ್ರಾಯಾಮುಕಪ್ರೇತಾಯ ನವಶ್ರಾದ್ಧೇ ದಾಸ್ಯಮಾನಮಾಮಂ ಯಥಾಶಕ್ತಿ ಸೋಪಸ್ಕರಂ ತನ್ನಿಷ್ಕ್ರಯಂ ವಾಸೋದಕುಂಭಂ ಸದಕ್ಷಿಣಮುಪತಿಷ್ಠತಾಮಿತಿ ತಿಲೋದಕಂ ದದ್ಯಾತ್ ॥ ತತಃ ಪಿಂಡದಾನಾರ್ಥಮೇಕಂ ಕುಶಂ ನಿಧಾಯ ಅಭ್ಯುಕ್ಷ್ಯ ಅಮುಕಗೋತ್ರಾಯಾಮುಕಪ್ರೇತಾಯಾದ್ಯೇಹನಿ ನವಶ್ರಾದ್ಧೇಽಯಂ ಸಕ್ತುಪಿಂಡ ಉಪತಿಷ್ಠತಾಮಿತಿ ಪಿಂಡಂ ದತ್ವಾ ತದುಪರಿ ತಿಲೋದಕಮುಪತಿಷ್ಠತಾಮಿತಿ ದತ್ವಾನುಮಂತ್ರ್ಯ ಶಕ್ತ್ಯಾ ಪ್ರಾಣಂ ನಿರುಧ್ಯ ಪುನರನುಮಂತ್ರ್ಯ ಶೇಷಮಾಘ್ರಾಯ ಅಮುಕಗೋತ್ರೇತ್ಯಾದಿ ಉಪತಿಷ್ಠತಾಮಿತ್ಯಂತೇನ ಅಭ್ಯಂಜನಾಂಜನೇ ಕಶಿಪೂಪಬರ್ಹಣೇ ದಶಾಂ ಚ ನಿವೇದ್ಯೋಪಸ್ಥಾಯಾಮುಕಗೋತ್ರಾಯಾಮುಕಪ್ರೇತಾಯ ನವಶ್ರಾದ್ಧೇ ದಕ್ಷಿಣೋಪತಿಷ್ಠ-

---

ಉತ್ತರಾಭಿಮುಖವಾಗಿ ಒಂದು ಕೂರ್ಚವನ್ನಿಟ್ಟು, **"…. ಗೋತ್ರ… ಪ್ರೇತ… ಅಯಂ ತೇ ಕ್ಷಣ ಉಪತಿಷ್ಠತಾಂ"** ಎಂದು ಒಂದು ದರ್ಭೆಯನ್ನು ಕೂರ್ಚಬ್ರಾಹ್ಮಣನಿಗೆ ಕೊಡಬೇಕು. ಆಮೇಲೆ, **"…ಗೋತ್ರ…. ಪ್ರೇತ ಇದಂ ತೇ ಪಾದ್ಯಂ… ಆಸನಂ… … ಅರ್ಘ್ಯಂ"** ಎಂದು ಮುಂತಾಗಿ ಬೇರೆ ಬೇರೆಯಾಗಿ ಹೇಳಿ ಅವುಗಳನ್ನು ಕೊಡಬೇಕು. ಆಸನಕ್ಕೆ ಎಳ್ಳುಸಹಿತ ಒಂದು ದರ್ಭೆಯನ್ನು ಬ್ರಾಹ್ಮಣನ ಎಡಭಾಗದಲ್ಲಿಡಬೇಕು. ತನ್ನ ಮುಂಭಾಗದಲ್ಲಿ ತೆಂಕುತುದಿಯಾಗಿ ಒಂದು ದರ್ಭೆಯನ್ನಿಟ್ಟು ಅದರ ಮೇಲೆ ಒಂದು ಪಾತ್ರೆಯನ್ನಿರಿಸಿ ಅದರಲ್ಲಿ ಒಂದು ದರ್ಭೆಯ ಕೂರ್ಚವನ್ನೂ ಹಾಕಿ ನೀರು ತುಂಬಿಸಿ ಎಳ್ಳುಗಳನ್ನೂ ಹಾಕಿ ಅರ್ಘ್ಯವನ್ನು ಕೊಡಬೇಕು. ಆಚ್ಛಾದನಕ್ಕೆ ಒಂದು ದರ್ಭೆಯನ್ನು ಕೊಡಬೇಕು.

ಆಮೇಲೆ ತುಪ್ಪಬೆರೆಸಿದ ಅನ್ನವನ್ನು ಕೈಯಲ್ಲಿ ತೆಕ್ಕೊಂಡು **"…..ಗೋತ್ರಾಯ…… ಪ್ರೇತಾಯ ಸ್ವಾಹಾ"** ಎಂದು ಕೂರ್ಚಬ್ರಾಹ್ಮಣನ ಬಲಗೈಯಲ್ಲಿ ಹೋಮಿಸಿ, **"…..ಗೋತ್ರಾಯ…..ಪ್ರೇತಾಯ ನವಶ್ರಾದ್ಧೇ ದಾಸ್ಯಮಾನ…. ಉಪತಿಷ್ಠತಾಂ"** ಎಂದು ಅಕ್ಕಿ, ಬಾಳೆಕಾಯಿ, ತೆಂಗಿನಕಾಯಿ, ದಕ್ಷಿಣೆ, ಜಲಪಾತ್ರ ಮೊದಲಾದವುಗಳೊಂದಿಗೆ ತಿಲೋದಕವನ್ನು ಕೊಡಬೇಕು. ಆಮೇಲೆ ಪಿಂಡದಾನಕ್ಕೆ ಒಂದು ದರ್ಭೆಯನ್ನು ನೆಲದಲ್ಲಿಟ್ಟು ಪ್ರೋಕ್ಷಿಸಿ, **"…..ಗೋತ್ರಾಯ…. ಪ್ರೇತಾಯ ಆದ್ಯೇಹನಿ…… ಉಪತಿಷ್ಠತಾಂ"** ಎಂದು ಪಿಂಡದಾನ ಮಾಡಿ **"ತದುಪರಿ ತಿಲೋದಕ….."** ಎಂದು ಪಿಂಡದ ಮೇಲೆ ತಿಲೋದಕವನ್ನು ಕೊಡಬೇಕು. ಬಳಿಕ ಸವ್ಯದಲ್ಲಿ ಪಿಂಡವನ್ನು ಕೈಯಲ್ಲಿ ಹಿಡಿದು ಅಷ್ಟಾಕ್ಷರೀ ಮುಂತಾದ ಮಂತ್ರಗಳನ್ನು ಜಪಿಸಿ, ಅಪಸವ್ಯದಲ್ಲಿ ಗೋತ್ರನಾಮಗಳನ್ನು ಉಚ್ಚರಿಸಿ, ನಿತ್ಯಬಲಿಶ್ರಾದ್ಧದಲ್ಲಿ ಪಿಂಡಕ್ಕೆ ಅರ್ಪಿಸಿದಂತೆ ಇದರಲ್ಲಿಯೂ ಅಭ್ಯಂಜನ, ಅಂಜನ, ವಸ್ತ್ರಕ್ಕೆ ಉತ್ತರೀಯದ ನೂಲು, ತುಳಸೀದಳ, ಭೃಂಗರಾಜಪತ್ರ ಮೊದಲಾದವುಗಳನ್ನು ಅರ್ಪಿಸಬೇಕು. **"….ಗೋತ್ರಾಯ…..ಪ್ರೇತಾಯ**

Scanned by CamScanner

ತಾಮಿತಿ ದಕ್ಷಿಣಾಂ ದತ್ವಾ ತೂಷ್ಣೀಂ ವಿಕಿರಂ ದತ್ವಾ ಅನಾದಿನಿಧನ ಇತಿ ಶ್ಲೋಕಂ ಪಠಿತ್ವಾಽಭಿರಮ್ಯತಾಮಿತಿ ಉಕ್ತೇಽಭಿರತಾಃ ಸ್ಮೇತಿ ಪ್ರತ್ಯುಕ್ತೇ ಪಿಂಡಂ ಪ್ರವಾಹ್ಯ ಸ್ನಾಯಾತ್ ॥

॥ ಇತಿ ನವ (ವಿಷಮ) ಶ್ರಾದ್ಧಂ ಸಮಾಪ್ತಂ ॥

ದಕ್ಷಿಣೋಪತಿಷ್ಠತಾಂ" ಎಂದು ದಕ್ಷಿಣೆಯನ್ನು ಕೊಟ್ಟು **"ಅನಾದಿನಿಧನೋ..... ಮುಕ್ತಿಪ್ರದೋ ಭವ"** ಎಂದು ಪ್ರಾರ್ಥಿಸಿ, **"ಅಭಿರಮ್ಯತಾಂ"** ಎಂದು ಹೇಳಿ **"ಅಭಿರತಾಃ ಸ್ಮ"** ಎಂದು ಉತ್ತರ ಪಡೆದು ವಾಯಸಬಲಿ ಮೊದಲಾದ ಕ್ರಮಗಳನ್ನು ನಿತ್ಯಬಲಿಶ್ರಾದ್ಧದಂತೆ ಮಾಡಿ, ಪಿಂಡೋದ್ವಾಸನ ಮಾಡಿ, ಮಿಂದು ಉಟ್ಟಬಟ್ಟೆಗಳನ್ನು ಉದಗಗ್ರವಾಗಿ ಒಣಗಲು ಬಿಡಬೇಕು.

ಈ ಪ್ರಥಮದಿನವಿಧಿಯಲ್ಲಿ ತಿಲಾಂಜಲ್ಯಾದಿಗಳನ್ನು ಮಾಡಿದ ಕರ್ತೃ, ಅವನ ಭೋಜನಸ್ಥಾನ, ಪಿಂಡಪ್ರದಾನ ಮಾಡಿದ ಸ್ಥಳ, ಹವಿಸ್ಸನ್ನು ಬೇಯಿಸಿದ ಪಾತ್ರೆ, ಆ ದಿವಸ ಉಪಯೋಗಿಸಿದ ದ್ರವ್ಯ ಇವುಗಳೆಲ್ಲ ಹತ್ತು ದಿನಗಳ ವರೆಗೂ ಎಂದೂ ವ್ಯತ್ಯಸ್ತಗಳಾಗಬಾರದು.

॥ ನವ (ವಿಷಮ) ಶ್ರಾದ್ಧ ಸಮಾಪ್ತ ॥

Scanned by CamScanner

Scanned with CamScanner

೧೧

॥ ನಗ್ನಪ್ರಚ್ಛಾದನ ಶ್ರಾದ್ಧಂ ॥

ಶ್ರೀಃ ॥ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ ಪ್ರಾಚೀನಾವೀತೀ ಅಮುಕಗೋತ್ರಸ್ಯಾಮುಕಪ್ರೇತಸ್ಯ ಪ್ರೇತತ್ವನಿವೃತ್ತಿಕಾಮಃ ಪ್ರಥಮದಿನವಿಹಿತಂ ನಗ್ನಪ್ರಚ್ಛಾದನಶ್ರಾದ್ಧಂ ಕರಿಷ್ಯೇ ಇತಿ ಸಂಕಲ್ಪ್ಯ ಉದ-ಙ್ಮುಖಂ ದರ್ಭಬಟುಮುಪವೇಶ್ಯ ಅಮುಕಗೋತ್ರಾಮುಕಪ್ರೇತ ನಗ್ನಪ್ರ....... ಅಯಂ ತೇ ಕ್ಷಣ ಉಪತಿಷ್ಠತಾಂ ॥ ಏವಂ ಅಮುಕೇತ್ಯಾದಿ ಪಾದ್ಯಂ ॥ ಅಮುಕಗೋತ್ರಸ್ಯಾಮುಕಪ್ರೇತಸ್ಯ ನಗ್ನಪ್ರ.........ಆಸನಮುಪ.........॥ ಏಕಪವಿತ್ರ-ಕೋಕ್ತಾರ್ಘ್ಯಪಾತ್ರೇ ಜಲಮಾಸಿಚ್ಯಾನುಮಂತ್ರ್ಯ ॥ ತಿಲೋಽಸಿ ಪ್ರೇತದ್ದೈವತ್ಯೋ-ಗೋಸವೇ ದೇವನಿರ್ಮಿತಃ ॥ ಪ್ರತ್ನವದ್ಭಿಃ ಪ್ರತ್ತಃ ಪ್ರೇತೇಮಾನ್ ಲೋಕಾನ್ ಪ್ರೀಣಯಾಹಿ ನಃ ॥ ಇತಿ ಮಂತ್ರೇಣ ತೂಷ್ಣೀಂ ವಾ ತಿಲಾನ್ ಪ್ರಕ್ಷಿಪ್ಯ ತೂಷ್ಣೀಂ ನಿವೇದ್ಯಾಮುಕಗೋತ್ರಾಮುಕಪ್ರೇತ ನಗ್ನ............ಇದಮರ್ಘ್ಯಂ ತವೋಪತಿಷ್ಠತಾಂ ॥ ಅಮುಕೇತ್ಯಾದಿ ಇದಮಾಚ್ಛಾದನಂ ತವೋಪತಿಷ್ಠತಾಂ ॥ ಅಮುಕಗೋತ್ರಾಯಾಮುಕಪ್ರೇತಾಯ ಸ್ವಾಹೇತಿ ವಿಪ್ರಪಾಣೌ ಹುತ್ವಾ ಅಮುಕ-ಗೋತ್ರಾಯಾಮುಕಪ್ರೇತಾಯ ದಾಸ್ಯಮಾನಮಾಮಂ ಯಥಾಶಕ್ತಿ ಸೋಪಸ್ಕರಂ

ನಗ್ನಪ್ರಚ್ಛಾದನಶ್ರಾದ್ಧ:- ಆಚಮನ ಪ್ರಾಣಾಯಾಮ ದೇಶಕಾಲಸಂಕೀರ್ತನಗಳನ್ನು ಮಾಡಿ, ಅಪಸವ್ಯದಿಂದ "**.... ಗೋತ್ರಸ್ಯ ಪ್ರೇತಸ್ಯ .... ಕರಿಷ್ಯೇ**" ಎಂದು ಸಂಕಲ್ಪಮಾಡಿ, ಬಡಗುತುದಿಯಾಗಿ ಬ್ರಾಹ್ಮಣನ ಬದಲಿಗೆ ಒಂದು ಕೂರ್ಚವನ್ನಿಟ್ಟು, ಗೋತ್ರ ಮತ್ತು ಹೆಸರುಗಳನ್ನು ಹೇಳಿ "**ಅಯಂ ತೇ ಕ್ಷಣ ಉಪತಿಷ್ಠತಾಂ**" ಎಂದು ಒಂದು ದರ್ಭೆಯನ್ನು ಕೊಟ್ಟು ಹಾಗೆಯೇ ಪಾದ್ಯ ಮತ್ತು ಆಸನಗಳನ್ನೂ ಕೊಟ್ಟು ತನ್ನ ಮುಂಭಾಗದಲ್ಲಿ ತೆಂಕುತುದಿಯಾಗಿ ಒಂದು ದರ್ಭೆಯನ್ನು ಹಾಕಿ ಅದರ ಮೇಲೆ ಒಂದು ಪಾತ್ರೆಯನ್ನಿಟ್ಟು ಒಂದೆಳೆಯ ಕೂರ್ಚ, ಮತ್ತು ನೀರನ್ನು ಹಾಕಿ "**ತಿಲೋಽಸಿಸೋಮದೇವತ್ಯೋ.....**" ಎಂದು ಹೇಳಿ ಎಳ್ಳುಗಳನ್ನೂ ಹಾಕಿ, "**...........ಗೋತ್ರ...........ಪ್ರೇತ ನಗ್ನಪ್ರಚ್ಛಾದನಶ್ರಾದ್ಧೇ ಇದಮರ್ಘ್ಯಂ.....**" ಎಂದು ಅರ್ಘ್ಯವನ್ನು ಕೊಡಬೇಕು. ನಂತರ ಆಚ್ಛಾದನಕ್ಕೆ ಒಂದು ದರ್ಭೆಯನ್ನು ಕೊಟ್ಟು, ಕೂರ್ಚಬ್ರಾಹ್ಮಣನ ಬಲಗೈಯಲ್ಲಿ "**.....ಗೋತ್ರಾಯ ಪ್ರೇತಾಯ ಸ್ವಾಹಾ**" ಎಂದು ತುಪ್ಪ ಬೆರೆಸಿದ ಅನ್ನವನ್ನು ಹೋಮಿಸಬೇಕು. ಆಮೇಲೆ "**.....ಗೋತ್ರಾಯ.....ಪ್ರೇತಾಯ ದಾಸ್ಯಮಾನಮಾಮಂ .... ಉಪತಿಷ್ಠತಾಂ**" ಎಂದು ಈ ವಾಕ್ಯದಲ್ಲಿ ಹೇಳಿದ ವಸ್ತುಗಳೊಂದಿಗೆ ಅಕ್ಕಿಯನ್ನು ಕೊಡಬೇಕು. ನಂತರ ಪಿಂಡದಾನಕ್ಕೆ ಒಂದು

Scanned by CamScanner

ಸಘೃತಂ ಸೋದಕುಂಭಂ ಸವಸ್ತ್ರಂ ಯಥಾಶಕ್ತಿ ಕಾಂಸ್ಯಪಾತ್ರ ಸುವರ್ಣ-ರಜತಲೋಹತೈಲದಕ್ಷಿಣೋಪೇತಂ ಸೋಪಾನತ್ಕಂ ಸೋದಪಾತ್ರಮುಪ-ತಿಷ್ಠತಾಮಿತ್ಯಾಮಂ ದದ್ಯಾತ್ ॥ ತತಃ ಪಿಂಡದಾನಾರ್ಥಮೇಕಂ ಕುಶಂ ನಿಧಾಯ ಅಭ್ಯುಕ್ಷ್ಯ ಶುಂಧಂತಾಂ ಪ್ರೇತಾ ಇತ್ಯುದಕಂ ನಿನೀಯ ಅಮುಕ-ಗೋತ್ರಾಯಾಮುಕಪ್ರೇತಾಯ ನಗ್ನಪ್ರಚ್ಛಾದನಶ್ರಾದ್ಧೇ ಅಯಂ ಸಕ್ತುಪಿಂಡ ಉಪತಿಷ್ಠತಾಂ ಪಿಂಡೋಪರಿ ತಿಲೋದಕಮುತಿಷ್ಠತಾಂ ॥ ತತೋನುಮಂತ್ರಣಾದಿ ಕಶಿಪೂಪಬರ್ಹಣದಶಾದಾನಾಂತಂ ಸರ್ವಂ ನವಶ್ರಾದ್ಧವತ್ತೂಷ್ಣೀಂ ಕೃತ್ವಾ ॥ ಅಮುಕೇತ್ಯಾದಿ ಪ್ರೇತನಗ್ನಪ್ರ.... ತುಲಸೀದಲಂ ಭೃಂಗರಾಜಪತ್ರಂ ಚೋಪತಿಷ್ಠತಾ-ಮಿತಿ ದತ್ವೋಪಸ್ಥಾಯ ಅಮುಕಗೋತ್ರಾಯಾಮುಕಪ್ರೇತಾಯ ನಗ್ನಪ್ರಚ್ಛಾದನ-ಶ್ರಾದ್ಧೇ ದಕ್ಷಿಣೋಪತಿಷ್ಠತಾಂ ॥ ಅನಾದಿನಿಧನೋದೇವ ಇತಿ ಸ್ನಾನಾಂತಂ ಪೂರ್ವವತ್ ॥

॥ ಇತಿ ನಗ್ನಪ್ರಚ್ಛಾದನಶ್ರಾದ್ಧಂ ॥

ದರ್ಭೆಯನ್ನು ನೆಲದಲ್ಲಿಟ್ಟು **"ಶುಂಧಂತಾಂ ಪ್ರೇತಾಃ"** ಎಂದು ಪ್ರೋಕ್ಷಿಸಿ **"..... ಗೋತ್ರಾಯ.....ಪ್ರೇತಾಯ ಅಯಂ....."** ಎಂದು ಪಿಂಡದಾನ ಮಾಡಿ ಅದರ ಮೇಲೆ ತಿಲೋದಕ ಬಿಡಬೇಕು. ಪಿಂಡವನ್ನು ಕೈಯಲ್ಲಿ ಹಿಡಿದು ಅಷ್ಟಾಕ್ಷರೀ ಇತ್ಯಾದಿಗಳನ್ನು ಜಪಿಸಿ, ದಕ್ಷಿಣೆ ಕೊಟ್ಟು **"ಅಭಿರಮ್ಯತಾಂ"** ಹೇಳಿ, **"ಅಭಿರತಾಃ ಸ್ಮಃ"** ಎಂದು ಪ್ರತಿವಚನ ಪಡೆದು ಪಿಂಡೋದ್ವಾಸನ ಮಾಡಿ ಸ್ನಾನಮಾಡಬೇಕು.

॥ ನಗ್ನಪ್ರಚ್ಛಾದನಶ್ರಾದ್ಧ ಸಮಾಪ್ತ ॥

Scanned by CamScanner

॥ ಪಾಥೇಯ ಶ್ರಾದ್ಧಂ ॥

ಶ್ರೀಃ ॥ ಅಸ್ಮಿನ್ನೇವಾಹನಿ ಪಾಥೇಯಶ್ರಾದ್ಧಂ ॥ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ ಪ್ರಾಚೀನಾವೀತೀ ॥ ಅಮುಕಗೋತ್ರಸ್ಯಾಮುಕಪ್ರೇತಸ್ಯ ಮನುಷ್ಯಲೋಕಾತ್ ಪ್ರೇತಲೋಕಗಮನಾರ್ಥಂ ಪಾಥೇಯಶ್ರಾದ್ಧಂ ಕರಿಷ್ಯೇ ಇತಿ ಸಂಕಲ್ಪ್ಯ, ಅಮುಕಗೋತ್ರಾಮುಕಪ್ರೇತ ಪಾಥೇಯಶ್ರಾದ್ಧೇ ಅಯಂ ತೇ ಕ್ಷಣ ಉಪತಿಷ್ಠತಾಂ ॥ ಅಮುಕೇತ್ಯಾದಿ ಪಾದ್ಯಂ ॥ ಅಮುಕಗೋತ್ರಸ್ಯಾಮುಕಪ್ರೇತಸ್ಯ ಪಾಥೇಯಶ್ರಾದ್ಧೇ ಆಸನಂ ॥ ಏಕಪವಿತ್ರಾರ್ಘ್ಯಪಾತ್ರೇ ಜಲಮಾಸಿಚ್ಯಾನುಮಂತ್ರ್ಯ ತಿಲೋಽಸೀತ್ಯೂಹಿತಮಂತ್ರೇಣ ತೂಷ್ಣೀಂ ವಾ ತಿಲಾನ್ ಪ್ರಕ್ಷಿಪ್ಯ ತೂಷ್ಣೀಂ ನಿವೇದ್ಯ ಅಮುಕಗೋತ್ರಾಮುಕಪ್ರೇತ ಪಾಥೇಯ .... ಅರ್ಘ್ಯಂ .... ॥ ಅಮುಕೇತ್ಯಾದಿ ಆಚ್ಛಾದನಂ ಉಪತಿಷ್ಠತಾಂ ॥ ಅಮುಕಗೋತ್ರಾಯಾಮುಕಪ್ರೇತಾಯ ಸ್ವಾಹೇತಿ ಪಾಣೌ ಹುತ್ವಾ ಅಮುಕಗೋತ್ರಾಯಾಮುಕಪ್ರೇತಾಯ ಆಮಂ ತನ್ನಿಷ್ಕ್ರಯಂ ವಾ ಯಥಾಶಕ್ತಿ ಸೋಪಸ್ಕರಂ ಸಘೃತಂ ಸೋದಕುಂಭಂ ಸವಸ್ತ್ರಂ ಯಥಾಶಕ್ತಿ ಕಾಂಸ್ಯಸುವರ್ಣರಜತಲೋಹತೈಲದಕ್ಷಿಣೋಪೇತಂ ಸೋಪಾನತ್ಕಂಸೋದಪಾತ್ರಮುಪತಿಷ್ಠತಾಮಿತಿ ತಿಲೋದಕಂ ಕ್ಷಿಪೇದಿತಿ ॥ ತತಃ ಪಿಂಡದಾನಾರ್ಥಮೇಕಂ ಕುಶಂ ನಿಧಾಯ ಅಭ್ಯುಕ್ಷ್ಯ ಶುಂಧಂತಾಂ ಪ್ರೇತಾ ಇತ್ಯುದಕಂ ನಿನೀಯ

ಆಚಮನ ಪ್ರಾಣಾಯಾಮ ದೇಶಕಾಲ ಸ್ಮರಣಾದಿಗಳನ್ನು ಮಾಡಿ ಅಪಸವ್ಯದಿಂದ, **"ಅಮುಕಗೋತ್ರಸ್ಯಾಮುಕ.... ಕರಿಷ್ಯೇ"** ಎಂದು ಸಂಕಲ್ಪ ಮಾಡಿ ಒಂದು ಕೂರ್ಚವನ್ನು ಉತ್ತರಮುಖವಾಗಿಟ್ಟು **"ಅಮುಕಗೋತ್ರ..... ಕ್ಷಣ ಉಪತಿಷ್ಠತಾಂ"** ಹಾಗೆಯೇ **"ಅಮುಕ..... ಪಾದ್ಯಂ ಆಸನಮುಪತಿಷ್ಠತಾಂ"** ಎಂದು ಪಾದ್ಯ ಆಸನಗಳನ್ನು ಕೊಟ್ಟು, ಒಂದು ದರ್ಭೆಯನ್ನಿಟ್ಟ ಅರ್ಘ್ಯಪಾತ್ರದಲ್ಲಿ ನೀರನ್ನು ಹಾಕಿ ಅಭಿಮಂತ್ರಿಸಿ ಎಳ್ಳುಗಳನ್ನು ಹಾಕಿ, **"ಅಮುಕಗೋತ್ರ........ ಅರ್ಘ್ಯಮುಪತಿಷ್ಠತಾಂ" "ಅಮುಕಗೋತ್ರ..... ಆಚ್ಛಾದನಮುಪತಿಷ್ಠತಾಂ"** ಎಂದು ಅರ್ಘ್ಯ ಆಚ್ಛಾದನಗಳನ್ನು ಕೊಡಬೇಕು. **".....ಗೋತ್ರಾಯ.....ಪ್ರೇತಾಯ ಸ್ವಾಹಾ"** ಎಂದು ಮೊದಲಿ ನಂತೆ ಪಾಣಿಹೋಮವನ್ನು ಮಾಡಿ **"..... ಗೋತ್ರಾಯ.... ಪ್ರೇತಾಯ ಆಮಂ ತನ್ನಿಷ್ಕ್ರಯಂ ವಾ...... ಉಪತಿಷ್ಠತಾಂ"** ಎಂದು ಹೇಳಿ ಕೂರ್ಚಬ್ರಾಹ್ಮಣನಿಗೆ ಈ ವಾಕ್ಯದಲ್ಲಿ ಹೇಳಿದ ಅಕ್ಕಿ ಮೊದಲಾದ ವಸ್ತುಗಳೊಂದಿಗೆ ತಿಲೋದಕವನ್ನು ಕೊಡಬೇಕು.

Scanned by CamScanner

ಅಮುಕಗೋತ್ರಾಯಾಮುಕಪ್ರೇತಾಯ ಪಾಥೇಯಶ್ರಾದ್ಧೇ ಅಯಂ ಸಕ್ತುಪಿಂಡ ಉಪತಿಷ್ಠತಾಂ ॥ ಅನುಮಂತ್ರಣಾದಿ ಕಶಿಪೂಬರ್ಹಣದಶಾದಾನಾಂತಂ ಸರ್ವಂ ನವಶ್ರಾದ್ಧವತ್ತೂಷ್ಣೀಂ ಕೃತ್ವಾ ಅಮುಕೇತ್ಯಾದಿ. ಪ್ರೇತತುಲಸೀದಲಂ ಭೃಂಗ-ರಾಜಪತ್ರಂ ಚ ಉಪತಿಷ್ಠತಾಂ ಇತಿ ದತ್ವೋಪಸ್ಥಾಯ ॥ ಅಮುಕಗೋತ್ರಾ-ಯಾಮುಕಪ್ರೇತಾಯ ದಕ್ಷಿಣೋಪತಿಷ್ಠತಾಂ ॥ ಅನಾದಿನಿಧನ ಇತ್ಯಾದಿಸ್ನಾನಾಂತಂ ಪೂರ್ವವತ್ ॥

ತತಃ ಪೂರ್ವಂ ಶೋಷಣಾಯ ಸ್ಥಾಪಿತಾನಿ ವಸ್ತ್ರಾಣಿ ಧಾರಯೇಯುಃ ॥ ತತಃ ಕರ್ತಾಪಿ ಪರಿಧಾನೀಯಮಾರ್ದ್ರವಸ್ತ್ರಮುತ್ತರೀಯಂ ತ್ರಿಗುಣಮಧೋದಶ-ಮರ್ಧವನ್ನಿಷ್ಪೀಡ್ಯ ಶೋಷಣಾಯ ಉದಗಗ್ರಂ ವಿಸೃಜೇತ್ ॥ ತತೋ ದಿವಾ ಮೃತೌ ದೃಷ್ಟೇಷ್ವೃಕ್ಷೇಷು ರಾತ್ರಿಮೃತೌ ಉದಿತೇ ಸೂರ್ಯೇ ಬಾಲಪುರಃಸರಾಃ ವೃದ್ಧಜಘನ್ಯಾ ಗೃಹಂ ಗತ್ವಾ ದ್ವಾರದೇಶೇ ನಿಂಬಪತ್ರಾಣಿ ವಿದಶ್ಯ ಪೂತ್ಕೃತ್ವಾ-ಚಮ್ಯ ಪಾಷಾಣಾಗ್ನಿಗೋಮಯಾಕ್ಷತ ತಿಲೋದಕ ದೂರ್ವಾವೃಷಭಸರ್ಷ-ಪಾನ್ ಯಥಾಲಾಭಂ ಸ್ಪೃಷ್ಟ್ವಾ ದೇಹಲ್ಯಶ್ಮನಿ ಚರಣಂ ದತ್ವಾ ಗೃಹಂ ವಿಶೇಯುಃ ॥ ಶವವಾಹಕಾನಾಮಪಿ ನಿಂಬಪತ್ರದಂಶಾದಿ ಏಕಾಹಮಾಶೌಚಂ ಚ ॥ ತತಃ ಶಿಕ್ಯಯೋರ್ನವೇ ಮೃಣ್ಮಯಭಾಜನೇ ಜಲಂ ದುಗ್ಧಂ ಚ ಪ್ರಕ್ಷಿಪ್ಯ ॥ ಪ್ರೇತಾತ್ರ ಸ್ನಾನೀಹೀದಂ ಚ ಪಿಬೇತಿ ವದೇತ್ ॥ ಇದಂ ಚ ಕೃತಾಕೃತಂ ॥ ಅಸ್ಮಿನ್ ದಿನೇ ಕ್ರೀತಂ ಸುಹೃದ್ಭ್ಯೋಲಬ್ಧಂ ವಾ ಅಶ್ನೀಯುಃ ॥ ಗೋತ್ರ-

---

ಅನಂತರ ಸಕ್ತು ಪಿಂಡದಾನಾದಿ ಕೆಲಸಗಳನ್ನು **"ನಿತ್ಯಬಲಿಶ್ರಾದ್ಧೇ"** ಎಂಬುದರ ಬದಲು **"ಪಾಥೇಯಶ್ರಾದ್ಧೇ"** ಎಂದು ಹೇಳಿ ನಿತ್ಯಬಲಿಶ್ರಾದ್ಧದಲ್ಲಿ ಹೇಳಿದ ಕ್ರಮದಲ್ಲಿ ಮಾಡಿ ಕಡೆಗೆ ಸ್ನಾನಮಾಡಬೇಕು.

ಅನಂತರ ಸಪಿಂಡಾದಿಗಳೆಲ್ಲರೂ, ಶವವನ್ನು ಸ್ಪರ್ಶಿಸಿದವರೂ ಕೂಡ ಬೇರೆ ಬಟ್ಟೆಗಳನ್ನುಟ್ಟು ಒದ್ದೆಯಾದ ಬಟ್ಟೆಗಳನ್ನು ಒಂದು ಸಲ ಹಿಂಡಿ, ಒಣಗಲು ಬಡಗು ತುದಿಮಾಡಿ ಬಿಡಿಸಿ ಆರಿಸಬೇಕು. ಹಗಲು ದಹನಕಾರ್ಯ ನಡೆದಿದ್ದರೆ ಸಾಯಂಕಾಲ ನಕ್ಷತ್ರದರ್ಶನವಾಗುವ ವರೆಗೂ, ರಾತ್ರಿ ದಹನಮಾಡಿದ್ದರೆ ಸೂರ್ಯೋದಯದ ವರೆಗೂ ಅಲ್ಲಿಯೇ ಇರಬೇಕೆಂದು ಶಾಸ್ತ್ರ ನಿಯಮವಿದೆ. ಸಣ್ಣವರು ಮುಂದಾಗಿಯೂ, ದೊಡ್ಡದೊಡ್ಡವರು ಹಿಂದು ಹಿಂದಾಗಿಯೂ ಮನೆಗೆ ಹೋಗಿ ದ್ವಾರದೇಶದಲ್ಲಿ ಕಹಿಬೇವಿನ ಸೊಪ್ಪನ್ನು ಜಗಿದು ಉಗುಳಿ, ಆಚಮನ ಮಾಡಿ, ಅಗ್ನಿ, ಕಲ್ಲು, ಗೋಮಯ, ಅಕ್ಷತೆ, ಎಳ್ಳು, ನೀರು, ದೂರ್ವೆ, ಎತ್ತು, ಸಾಸಿವೆ ಇವುಗಳೆಲ್ಲವನ್ನೂ ಅಥವಾ ಸಿಕ್ಕದಿದ್ದರೆ ಅಗ್ನಿ, ಗೋಮಯ ಮೊದಲಾದವುಗಳನ್ನಾದರೂ ಒಂದೊಂದನ್ನಾಗಿ ಮುಟ್ಟಿ ಕೈಗಳನ್ನು ಶುದ್ಧಮಾಡಿಕೊಂಡು ತುಪ್ಪವನ್ನು ಸೇವಿಸಬೇಕು.

Scanned by CamScanner

Scanned with CamScanner

ಜಾದೀನಾಂ ತದ್ದಿನೇ ತದ್ಗೃಹ ಏವ ಭೋಜನಂ ॥ ಆಮಿಷಲವಣಪಯೋ-ಮಿಷ್ಟಾಪೂಪಪಾಯಸಾದಿಕಂ ನಾಶ್ನೀಯುಃ ॥ ಹವಿಷ್ಯಾನ್ನಮೇವ ಭುಂಜೀರನ್ ॥ ಕರ್ತಾ ಭೋಜನ ಕಾಲೇ ಸಘೃತಮನ್ನಮಾದಾಯಾಮುಕಪ್ರೇತಾಯೇದಮನ್ನ-ಮುಪತಿಷ್ಠತಾಮಿತಿ ಗೃಹೋಪರಿ ಭೋಜನಸ್ಥಲ ಸಮೀಪೇ ವಾ ದದ್ಯಾತ್ ॥ ದಶಾಹಾಂತಂ ಭೋಜನಸ್ಥಾನವಿಪರ್ಯಯೋಪಿ ತಾವತ್ಪರ್ಯಂತಂ ನ ಕಾರ್ಯಃ ॥ ಲೇಖನಹರ್ಷೋಚ್ಛ್ವಾಸನೋತ್ಕೃಷ್ಟವಸ್ತ್ರಾದಿಧಾರಣ ತೈಲಾಭ್ಯಂಗ ಸ್ತ್ರೀಸಂಗಖಟ್ವಾಶಯನಾನ್ಯಸ್ಪರ್ಶಾದೀನಿ ವರ್ಜಯೇಯುಃ ॥ ರಾತ್ರೌ ಪೃಥಗೇವ ತೃಣಾಸ್ತೃತಭೂಮೌ ಶಯೀರನ್ ॥ ಮಹಾಗುರು ನಿಪಾತೇಷು ತ್ರ್ಯಹಮೇಕಾಹಂ ಚೋಪವಾಸಃ ॥ ಪಾರಣಾ ಚ ಕ್ರೀತೇನ ಸುಹೃದ್ಭ್ಯೋ ಲಬ್ಧೇನ ವಾ ॥ ಪತ್ನ್ಯಾಶ್ಚೈವಂ ॥ ಬಾಲವೃದ್ಧಾತುರಾಣಾಂ ನೈತೇ ನಿಯಮಾಃ ॥

॥ ಇತಿ ಪಾಥೇಯ ಶ್ರಾದ್ಧಂ ॥

ಬಳಿಕ ಮರಣಹೊಂದಿದ ಸ್ಥಳದಲ್ಲಿ ಹತ್ತು ದಿನಗಳ ವರೆಗೆ ನೊಂದಿಹೋಗದ ಹಾಗೆ ದಕ್ಷಿಣಾಭಿಮುಖವಾದ ದೀಪವನ್ನು ಎಳ್ಳೆಣ್ಣೆ ಹಾಕಿ ಹಚ್ಚಿ ಅದರ ಬಳಿಯಲ್ಲಿ ಹೊಸ ನೂಲುಗಳಿಂದ ಮಾಡಿದ ಎರಡು ಶಿಕ್ಯಗಳನ್ನು ಕಟ್ಟಿ ಎರಡು ಹೊಸ ಮಣ್ಣಿನ ಪಾತ್ರೆಗಳನ್ನು ಅವುಗಳ ಮೇಲೆ ಇಟ್ಟು "**....ಗೋತ್ರ....ಪ್ರೇತ ಅತ್ರ ಸ್ನಾಹಿ**" ಎಂದು ಒಂದರಲ್ಲಿ ನೀರನ್ನೆರೆದು "**....ಗೋತ್ರ... ಪ್ರೇತ ಇದಂ ಪಿಬ**" ಎಂದು ಮತ್ತೊಂದರಲ್ಲಿ ಹಾಲನ್ನು ಎರೆಯಬೇಕು.

ಬಳಿಕ, ಬಂದ ಬ್ರಾಹ್ಮಣರಿಗೆ ಊರ ಪ್ರಮುಖರಿಗೆ ಸೀಯಾಳ ದಕ್ಷಿಣಾದಿಗಳನ್ನು ಕೊಟ್ಟು ಹನ್ನೊಂದು ಹನ್ನೆರಡನೆಯ ದಿನಗಳಲ್ಲಿ ನಡೆಯತಕ್ಕ ಉತ್ತರಕ್ರಿಯಾದಿಗಳಿಗೆ ಆಮಂತ್ರಣವಿತ್ತು ಸೂತಕನಿವೃತ್ಯನಂತರ ಮಂತ್ರಾಕ್ಷತೆ ಕೊಡಿಸಬೇಕೆಂದು ಅವರಲ್ಲಿ ಪ್ರಾರ್ಥಿಸಿಕೊಳ್ಳಬೇಕು.

॥ ಪಾಥೇಯಶ್ರಾದ್ಧ ಸಮಾಪ್ತ ॥

Scanned by CamScanner

Scanned with CamScanner

॥ ಅಸ್ಥಿಸಂಚಯನಂ ॥

ಶ್ರೀಃ ॥ ತಚ್ಚ ಆಶೌಚಮಧ್ಯೇ ತು ಪ್ರಥಮೇ ದ್ವಿತೀಯೇ ತೃತೀಯೇ ಚತುರ್ಥೇ ಸಪ್ತಮೇ ನವಮೇ ವಾ ದಿನೇ ಕಾರ್ಯಂ ॥ ತತ್ರ ದ್ವಿಪಾದತ್ರಿಪಾದ-ನಕ್ಷತ್ರಾಣಿ ಕರ್ತುರ್ಜನ್ಮನಕ್ಷತ್ರಂ ಚ ವರ್ಜ್ಯಂ ॥ ಸಂಭವೇರ್ಕಭೌಮಮಂದ-ವಾರಾನಂದಾತಿಥಯಶ್ಚ ವರ್ಜ್ಯಾಃ ॥ ಅಸ್ಥ್ನಾಂ ಶ್ವಸೂಕರಶೂದ್ರಾದಿಸ್ಪರ್ಶೇ ಪಂಚಗವ್ಯೇನ ಶಾಲಗ್ರಾಮತುಲಸ್ಯುದಕೈಃ ಪ್ರೋಕ್ಷಣಂ ॥ ದಾಹದೇಶಂ ಗತ್ವಾ ಆಚಮ್ಯ ತೂಷ್ಣೀಂ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ ಪ್ರಾಚೀನಾವೀತೀ ಅಮುಕಗೋತ್ರಸ್ಯಾಮುಕಪ್ರೇತಸ್ಯ ಪ್ರೇತತ್ವನಿವೃತ್ತ್ಯರ್ಥಂ ಅಸ್ಥಿಸಂಚಯನಂ ಕರಿಷ್ಯೇ ಇತಿ ಸಂಕಲ್ಪ್ಯ ಶಮೀಶಾಖಯಾ ಕ್ಷೀರಮಿಶ್ರೋದಕೇನ ಪ್ರದಕ್ಷಿಣಂ ತ್ರಿಃ ಪರಿವ್ರಜನ್ ಚಿತಿದೇಶಂ ಪ್ರೋಕ್ಷೇತ್ ॥ ಶೀತಿಕೇಶೀತಿ ದಮನೋಗ್ನಿ ಸ್ತ್ರಿಷ್ಟುಪ್ ಚಿತಿಪ್ರೋಕ್ಷಣೇ ವಿನಿ............॥ ಶೀತಿಕೇಶೀತಿಕಾವತಿಹ್ಲಾದಿಕೇಹ್ಲಾದಿ-ಕಾವತಿ ॥ ಮಂಡೂಕ್ಯಾ ೩ ಸುಸಂಗಮ ಇಮಂಸ್ವ ೧ ಗ್ನಿಂ ಹರ್ಷಯ ॥ ಇತಿ

ಅಸ್ಥಿಸಂಚಯನ:- ಪ್ರಥಮ, ದ್ವಿತೀಯ, ತೃತೀಯ, ಚತುರ್ಥ, ಸಪ್ತಮ, ನವಮ ದಿನಗಳಲ್ಲಿ ದ್ವಿಪಾದ ತ್ರಿಪಾದ ನಕ್ಷತ್ರಗಳನ್ನೂ ಕರ್ತೃವಿನ ಜನ್ಮಾನುಜನ್ಮನಕ್ಷತ್ರಗಳನ್ನೂ ಸಾಧ್ಯವಿದ್ದರೆ ರವಿ, ಕುಜ, ಶುಕ್ರ, ಶನಿವಾರಗಳನ್ನೂ ನಂದಾದಿ ತಿಥಿಗಳನ್ನೂ ಬಿಡಬೇಕು.

ದ್ವಿಪಾದ ನಕ್ಷತ್ರಗಳು:- ಮೃಗಶಿರೆ, ಚಿತ್ರೆ, ಧನಿಷ್ಠೆ.

ತ್ರಿಪಾದ ನಕ್ಷತ್ರಗಳು:- ಕೃತ್ತಿಕೆ, ಪುನರ್ವಸು, ಉತ್ತರೆ, ವಿಶಾಖೆ, ಉತ್ತರಾಷಾಢಾ, ಪೂರ್ವಾಭಾದ್ರೆ.

ನಂದಾದಿ ತಿಥಿಗಳು:- ಪಾಡ್ಯ, ಷಷ್ಠೀ, ಏಕಾದಶೀ.

ಅಸ್ಥಿಗಳಿಗೆ ನಾಯಿ, ಹಂದಿ, ಶೂದ್ರ ಮೊದಲಾದವರ ಸ್ಪರ್ಶವಾಗಿದ್ದರೆ ಪಂಚಗವ್ಯವನ್ನೂ, ಸಾಲಿಗ್ರಾಮ, ತುಲಸೀ ತೀರ್ಥಗಳನ್ನೂ ಪ್ರೋಕ್ಷಿಸಬೇಕು. ಸ್ಮಶಾನಕ್ಕೆ ಹೋಗಿ ಕುಳಿತು ಆಚಮನ ಪ್ರಾಣಾಯಾಮದೇಶಕಾಲಸ್ಮರಣಾದಿಗಳನ್ನು ಮಾಡಿ ಅಪಸವ್ಯದಲ್ಲಿ **"....ಗೋತ್ರಸ್ಯ... ಅಸ್ಥಿಸಂಚಯನಂ ಕರಿಷ್ಯೇ"** ಎಂದು ಸಂಕಲ್ಪಮಾಡಿ ಶಮೀಶಾಖೆಯಿಂದ ಹಾಲುಮಿಶ್ರಿತವಾದ

Scanned by CamScanner

Scanned with CamScanner

ಮಂತ್ರೇಣ ಪಾದಾದಾರಭ್ಯ ಸರ್ವಾಂ ಚಿತಿಂ ತ್ರಿಃ ಪ್ರೋಕ್ಷೇತ್ ॥ ಪ್ರತಿ-ಪ್ರೋಕ್ಷಣಂ ಮಂತ್ರಾವೃತ್ತಿಃ ॥ ತತೋ ವೃದ್ಧಾ ವಿಷಮಾಃ ಕರ್ತೃಸಹಿತಾ ಅಂಗುಷ್ಠೋಪಕನಿಷ್ಠಿಕಾಭ್ಯಾಂ ಏಕೈಕಮಸ್ಥಿ ಪಾದಪ್ರಭೃತಿಶಿರಃ ಪರ್ಯಂತಂ ಗೃಹೀತ್ವಾ ಯಥಾ ಶಬ್ದೋ ನ ಭವತಿ ತಥಾ ಕುಂಭೇ ನಿದಧ್ಯುಃ ॥ ಸ್ತ್ರಿಯಾಃ ಕುಭ್ಯಾಂ ॥ ಸ್ತನರಹಿತಃ ಕುಂಭಃ ॥ ಸಸ್ತನೀ ಕುಂಭೀ ॥ ಅನ್ಯದ್ಭಸ್ಮಶೂರ್ಪೇಣ ಸಂಶೋಧ್ಯ ಸೂಕ್ಷ್ಮಾಣ್ಯಸ್ಥೀನ್ಯಪಿ ಕುಂಭೇ ನಿಧಾಯ ಭಸ್ಮ ಗಂಗಾಯಾಂ ಕ್ಷಿಪೇತ್ ॥ ತತೋ ವರ್ಷಾಕಾಲಾದನ್ಯಕಾಲೇ ಜಲಂ ನಾಗಚ್ಛತಿ ತಾದೃಶೇ ಶುಚಿ ಪ್ರದೇಶೇ ಗರ್ತಂ ಕೃತ್ವಾ ॥ ಉಪಸರ್ಪೇತಿ ಸಂಕುಸುಕಃ ಪೃಥಿವೀ ಮೃತ್ಯುಃ ಪಿತರೋ ವಾ ತ್ರಿಷ್ಟುಪ್ ॥ ಗರ್ತೇಽಸ್ಥಿನಿಕ್ಷೇಪಣೇ ವಿನಿಯೋಗಃ ॥ ಉಪಸರ್ಪ ಮಾತರಂ ಭೂಮಿಮೇತಾಮುರುವ್ಯಚಸಂ ಪೃಥಿವೀಂ ಸುಶೇವಾಂ ॥ ಊರ್ಣಮ್ರದಾಯುವತಿರ್ದಕ್ಷಿಣಾವತ ಏಷಾ ತ್ವಾ ಪಾತು ನಿಋತೇರು-ಪಸ್ಥಾತ್ ॥ ಇತಿ ಮಂತ್ರೇಣ ಕರ್ತಾ ಗರ್ತೇ ಘಟಂ ನಿದಧ್ಯಾತ್ ॥ ಉಚ್ಛ್ವಂ-ಚಸ್ವೇತಿ ಸಂಕುಸುಕೋ ಮೃತ್ಯುಃ ಪಿತರಃ ಪೃಥ್ವೀ ವಾ ಪ್ರಸ್ತಾರಪಂಕ್ತಿಃ ಗರ್ತೇ ಪಾಂಸುಕ್ಷೇಪಣೇ ವಿನಿಯೋಗಃ ॥ ಉಚ್ಛ್ವಂಚಸ್ವ ಪೃಥಿವಿ ಮಾನಿಬಾಧಥಾಃ ಸೂಪಾಯನಾಸ್ಮೈಭವಸೂಪವಂಚನಾ ॥ ಮಾತಾಪುತ್ರಂ ಯಥಾ ಸಿಚಾಭ್ಯೇನಂ

ನೀರನ್ನು ಪಾದದೇಶದಿಂದ ಆರಂಭಿಸಿ, ಚಿತಿದೇಶಕ್ಕೆ ಮೂರು ಸಲ ಅಪ್ರದಕ್ಷಿಣ ಬರುತ್ತ **"ಶೀತಿಕೇ..."** ಎಂಬ ಮಂತ್ರವನ್ನು ಪ್ರತಿ ಪ್ರದಕ್ಷಿಣೆಗೆ ಬೇರೆಯಾಗಿ ಹೇಳಿ ಪ್ರೋಕ್ಷಿಸಬೇಕು. ಬಳಿಕ ೧, ೩, ೫ ಹೀಗೆ ವಿಷಮಸಂಖ್ಯೆಯಲ್ಲಿ ಕರ್ತೃಸಹಿತ ಹಿರಿಯರು ಅಂಗುಷ್ಠ ಮತ್ತು ಆನಾಮಿಕಾ ಬೆರಳುಗಳಿಂದ ಒಂದೊಂದೇ ಅಸ್ಥಿಯನ್ನು ಪಾದ ಮೊದಲ್ಗೊಂಡು ಶಿರೋದೇಶದ ವರೆಗೆ ಹೆಕ್ಕಿ ತೆಗೆದು ಸ್ತ್ರೀಯರದ್ದಾದರೆ ಸ್ತನ (ಮೊಗಡು) ವಿರುವ ಹೊಸ ಮಣ್ಣಿನ ಪಾತ್ರೆಯಲ್ಲಿ ಶಬ್ದವಾಗದ ಹಾಗೆ ಇಡಬೇಕು.

ನಂತರ ಗೆರಸೆಯಿಂದ ಶೋಧಿಸಿ. ಎಲ್ಲ ಎಲುಬುಗಳನ್ನೂ ಹೆಕ್ಕಿ ಕೊಡದಲ್ಲಿಡಬೇಕು. ಸಾಧ್ಯವಿದ್ದರೆ ಭಸ್ಮವನ್ನು ಗಂಗಾನದಿಯಲ್ಲಿ ಹಾಕಬೇಕು. ಬಳಿಕ ಮಳೆಗಾಲದ ಹೊರತು ಇತರ ದಿನಗಳಲ್ಲಿ ನೀರು ಬಾರದಿರುವ ಸ್ಥಳದಲ್ಲಿ ಒಂದು ಹೊಂಡವನ್ನು ತೋಡಿ **"ಉಪ-ಸರ್ಪಮಾತರಂ...."** ಎಂಬ ಮಂತ್ರವನ್ನು ಹೇಳುತ್ತ ಆ ಕೊಡವನ್ನು ಅದರಲ್ಲಿ ಇಡಬೇಕು. **"ಉಚ್ಛ್ವಂಚಸ್ವ..."** ಎಂಬ ಮಂತ್ರವನ್ನು ಹೇಳುತ್ತ ಪಾತ್ರೆಯ ಸುತ್ತಲೂ ಮಣ್ಣು ತುಂಬಿಸಿ,

Scanned by CamScanner

Scanned with CamScanner

ಭೂಮ ಊರ್ಣುಹಿ ॥ ಅನೇನ ಘಟಸ್ಯ ಸಮಂತಾತ್ ಖಾತೇ ಮೃದಂ ಕ್ಷಿಪೇತ್ ॥ ಉಚ್ಛ್ವಂ ಚ ಮಾನೇತಿ ಸಂಕುಸುಕಃ ಪೃಥಿವೀ ಮೃತ್ಯುಃ ಪಿತರೋ ವಾ ತ್ರಿಷ್ಟುಪ್ ॥ ಅಸ್ಥಿಕುಂಭಸಮೀಪೇ ಜಪೇ ವಿನಿಯೋಗಃ ॥ ಉಚ್ಛ್ವಂ ಚ ಮಾನಾ ಪೃಥಿವೀ ಸುತಿಷ್ಠತು ಸಹಸ್ರಂ ಮಿತ ಉಪಹಿಶ್ರಯಂತಾಂ ॥ ತೇ ಗೃಹಾಸೋ ಘೃತಶ್ಚುತೋ ಭವಂತು ವಿಶ್ವಾಹಾಸ್ಮೈ ಶರಣಾಃ ಸಂತ್ವತ್ರ ॥ ಇತಿ ಮಂತ್ರಮಂಜಲಿಂ ಬದ್ಧ್ವಾ ಜಪೇತ್ ॥ ಉತ್ತೇ ಸ್ತಭ್ನಾಮಿತಿ ಸಂಕುಸುಕಃ ಪೃಥ್ವೀ ಪಿತರೋ ಮೃತ್ಯುರ್ವಾ ತ್ರಿಷ್ಟುಪ್ ॥ ಘಟಸ್ಯ ಮುಖಪಿಧಾನೇ ವಿನಿಯೋಗಃ ॥ ಉತ್ತೇಸ್ತಭ್ನಾಮಿ ಪೃಥಿವೀಂ ತ್ವತ್ಪರೀಮಂಲೋಗಂ ನಿದಧ-ನ್ಮೋಽಅಹಂರಿಷಂ ॥ ಏತಾಂ ಸ್ಥೂಣಾಂ ಪಿತರೋ ಧಾರಯಂತು ತೇತ್ರಾಯಮಃ ಸಾದನಾತೇಮಿನೋತು ॥ ಇತಿ ನವ ಖರ್ಪರಂ ಘಟೋಪರಿ ನಿದಧ್ಯಾತ್ ॥ ತತೋ ಯಥಾ ಕುಂಭೋ ನ ದೃಶ್ಯತೇ ತಥಾ ಮೃದಂ ನಿಧಾಯ ಪಶ್ಚಾದನ-ವೇಕ್ಷಮಾಣೋನ್ಯತ್ರ ಗತ್ವಾ ಸ್ನಾಯಾತ್ ॥

॥ ಇತಿ ಅಸ್ಥಿಸಂಚಯನಂ ॥

"ಉಚ್ಛ್ವಂಚ ಮಾನಾ...." ಎಂಬ ಮಂತ್ರವನ್ನು ಜಪಿಸಬೇಕು. ಬಳಿಕ "ಉತ್ತೇ ಸ್ತಭ್ನಾಮಿ...." ಎಂಬ ಮಂತ್ರವನ್ನು ಹೇಳುತ್ತ ಆ ಕೊಡದ ಮೇಲೆ ಮತ್ತೊಂದು ಮಣ್ಣಿನ ಪಾತ್ರೆಯನ್ನು ಮುಚ್ಚಬೇಕು. ಅನಂತರ ಆ ಪಾತ್ರೆಗಳು ಹೊರಗೆ ಕಾಣದಂತೆ ಮಣ್ಣು ಮುಚ್ಚಿ ಹಿಂತಿರುಗಿ ನೋಡದೆ ಬೇರೆ ಕಡೆ ಹೋಗಿ ಸ್ನಾನಮಾಡಬೇಕು.

॥ ಅಸ್ಥಿಸಂಚಯನ ಸಮಾಪ್ತ ॥

Scanned by CamScanner

Scanned with CamScanner

೧೪

॥ ಅಸ್ಥಿಸಂಚಯನಶ್ರಾದ್ಧಂ ॥

ಶ್ರೀಃ ॥ ತತೋ ಗೋಮಯೇನ ಶ್ಮಶಾನದೇಶಮನುಲಿಪ್ಯ ತತ್ರ ದಕ್ಷಿಣಾ ಪ್ರವಣಾಂ ತ್ರಿಕೋಣಾಂ ವೇದಿಂ ಕೃತ್ವಾ ದೇಶಕಾಲೌ ಸಂಕೀರ್ತ್ಯ ಪ್ರಾಚೀನಾ-ವೀತೀ ಅಮುಕಗೋತ್ರಸ್ಯಾಮುಕಪ್ರೇತಸ್ಯಪ್ರೇತತ್ವನಿವೃತ್ಯರ್ಥಂ ವೇದಿಕಾ-ರಾಧನಂ ಕರಿಷ್ಯೇ ॥ ತೂಷ್ಣೀಂ ತಿಲೋದಕಂ ಕೃತ್ವಾ ವೇದಿಂ ಹರಿದ್ರಾದಿ-ನಾಲಂಕೃತ್ಯ ತತ್ರೋದಕಪೂರ್ಣಕುಂಭಂ ನಿಧಾಯ ತದುಪರಿ ಮಹಾಂತಂ ಭಕ್ತ-ಪಿಂಡಂ ಸಂಸ್ಥಾಪ್ಯ ಅಮುಕಗೋತ್ರಾಯಾಮುಕಪ್ರೇತಾಯ ಭೋಜನಾರ್ಥ-ಮಯಂ ಪಿಂಡಃ ಪಾನಾರ್ಥಂ ಚೋದಕುಂಭೋದಕಮುಪತಿಷ್ಠತಾಮಿತಿ ಸಕುಶ-ತಿಲೋದಕಂ ಕ್ಷಿಪ್ತ್ವಾ ॥ ತತ್ಪಶ್ಚಿಮಭಾಗೇ ಶ್ಮಶಾನವಾಸಿನೇ ರುದ್ರಾಯ

ಅಸ್ಥಿಸಂಚಯನಶ್ರಾದ್ಧ:- ಸ್ಮಶಾನಸ್ಥಳವನ್ನು ಗೋಮಯದಿಂದ ಶುದ್ಧಮಾಡಿ, ಸ್ಮಶಾನವನ್ನೇ ದಕ್ಷಿಣಾಗ್ರವಾದ ತ್ರಿಕೋಣಾಕಾರದ ವೇದಿಕೆಯನ್ನಾಗಿ ಮಾಡಿ ಅರಸಿನ ಹುಡಿಯಿಂದ ಅಲಂಕರಿಸಿ, ಅಪಸವ್ಯದಲ್ಲಿ ದೇಶಕಾಲಗಳನ್ನುಚ್ಚರಿಸಿ, **"...ಗೋತ್ರಸ್ಯ ....ಪ್ರೇತಸ್ಯ.... ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ಮಂತ್ರವಿಲ್ಲದೆ ತಿಲೋದಕವನ್ನು ಕೊಟ್ಟು ವೇದಿಯ ಮಧ್ಯದಲ್ಲಿ ಒಂದು ಉದಕುಂಭವನ್ನೂ ಅದರ ಮೇಲೆ ದೊಡ್ಡ ಒಂದು ಪಿಂಡವನ್ನೂ **"...ಗೋತ್ರಾಯ....ಪ್ರೇತಾಯ... ಪಿಂಡ: ಪಾನಾರ್ಥಂ.... ಉಪತಿಷ್ಠತಾಂ"** ಎಂದು ಹೇಳಿ ಇಟ್ಟು ತಿಲೋದಕವನ್ನು ಕೊಡಬೇಕು. ನಂತರ ಅದರ ಪಶ್ಚಿಮದಲ್ಲಿ, ಉತ್ತರದಲ್ಲಿ, ಪೂರ್ವದಲ್ಲಿ ಕ್ರಮವಾಗಿ **"ಶ್ಮಶಾನವಾಸಿನೇ ರುದ್ರಾಯ...., ಶ್ಮಶಾನವಾಸಿಭ್ಯಃ ಪ್ರೇತೇಭ್ಯಃ....., ಪ್ರೇತ-ಸಖಿಭ್ಯ...."** ಎಂದು ಮೂರು ಉದಕುಂಭಗಳನ್ನೂ ಪಿಂಡಗಳನ್ನೂ ಇಟ್ಟು ತಿಲೋದಕವನ್ನು ಕೊಡಬೇಕು. ನಂತರ ನಾಲ್ಕು ಛತ್ರಗಳನ್ನೂ, ಎಂಟು ಪಾದುಕೆಗಳನ್ನೂ, ಅಕ್ಕಿಹಿಟ್ಟಿನಿಂದ ನಾಲ್ಕು ರೊಟ್ಟಿಗಳನ್ನು ತಯಾರಿಸಿ, ವೇದಿಕೆಯ ಮೇಲೆ, **"ಓಂ ಕಾಲಾಯ ದಹನ-ಪತಯೇ ಇದಮುಪತಿಷ್ಠತಾಂ... ಓಂ ಮೃತ್ಯವೇ ದಹನಪತಯೇ...."** ಎಂದು ಮೊದಲಾಗಿ ನಾಲ್ಕು ಕಡೆಗಳಲ್ಲಿ ಒಂದೊಂದು ಛತ್ರ, ಎರಡೆರಡು ಪಾದುಕೆ ಮತ್ತು ಒಂದೊಂದು ರೊಟ್ಟಿಯನ್ನು ಸಮರ್ಪಿಸಬೇಕು. ನಮಸ್ಕಾರ ಮಾಡಿ ಸ್ನಾನಮಾಡಿ ಒಂದು ಅಸ್ಥಿಸಂಚಯನಶ್ರಾದ್ಧವನ್ನು ಮಾಡಬೇಕು.

ಶ್ರಾದ್ಧಮಾಡುವ ಸ್ಥಳವನ್ನು ಗೋಮಯದಿಂದ ಶುದ್ಧಮಾಡಿ ದೇಶಕಾಲಗಳನ್ನುಚ್ಚರಿಸಿ, **"....ಗೋತ್ರಸ್ಯ.....ಪ್ರೇತಸ್ಯ ..... ಅಸ್ಥಿಸಂಚಯನಶ್ರಾದ್ಧಂ ಕರಿಷ್ಯೇ"** ಎಂದು ಸಂಕಲ್ಪಮಾಡಿ ಅಪಸವ್ಯದಿಂದ ತೂಷ್ಣೀಯಲ್ಲಿ ಒಂದು ತಿಲೋದಕ ಕೊಟ್ಟು ಮಂಡಲ ಮಾಡಿ ದಕ್ಷಿಣಾಗ್ರವಾಗಿ

Scanned by CamScanner
Scanned with CamScanner

ಅಯಂ ಪಿಂಡ ಉಪತಿಷ್ಠತಾಮಿತಿ ಕುಂಭೋಪರಿ ಪಿಂಡಾಂತರಂ ॥ ತತಃ ತದುತ್ತರತಃ ಶ್ಮಶಾನ ವಾಸಿಭ್ಯಃ ಪ್ರೇತೇಭ್ಯೋಯಂ ಪಿಂಡ ಉಪತಿಷ್ಠತಾಮಿತಿ ಕುಂಭೋಪರಿ ಪಿಂಡಾಂತರಂ ॥ ಪೂರ್ವತೋ ದಕ್ಷಿಣತೋ ವಾ ಪ್ರೇತಸಖಿಭ್ಯೋಯಂ ಪಿಂಡ ಉಪತಿಷ್ಠತಾಮಿತಿ ಕುಂಭೋಪರಿ ಪಿಂಡಾಂತರಂ ॥ ಏವಂ ಚತುರಃ ಪಿಂಡಾನ್ ದತ್ವಾ ಪಿಂಡೋಪರಿ ಶ್ಮಶಾನವಾಸಿನೇ ರುದ್ರಾಯ ಶ್ಮಶಾನವಾಸಿಭ್ಯಃ ಪ್ರೇತೇಭ್ಯಃ ಪ್ರೇತಸಖಿಭ್ಯಶ್ಚ ಕ್ರಮೇಣ ಇದಂ ತಿಲೋದಕಮುಪತಿಷ್ಠತಾಮಿತಿ ಪ್ರತ್ಯೇಕಂ ದತ್ವಾ ಯವಪಿಷ್ಟೇನ ಪೋಲಿಕಾತ್ರಯಂ ಪಾದುಕಾಷಟ್ಕಂ ಛತ್ರತ್ರಯಂ ಚ ಸಂಪಾದ್ಯ ತನ್ಮಧ್ಯ ಏಕಾಂ ಪೋಲಿಕಾಂ ಪಾದುಕಾದ್ವಯಂ ಏಕಂ ಛತ್ರಂ ಚ ಕಾಲಾಯ ದಹನಪತಯೇ ಇದಮುಪತಿಷ್ಠತಾಮಿತಿ ದತ್ವಾ ಪೋಲಿಕಾಂ ಪಾದುಕಾದ್ವಯಂ ಛತ್ರಂ ಚ ಯಮಾಯ ದಹನಪತಯೇ ಇದಮುಪತಿಷ್ಠತಾಮಿತಿ ದದ್ಯಾತ್ ॥ ತತೋ ಯಮಶ್ವಭ್ಯಾಮುಪತಿಷ್ಠತಾಮಿತಿ ಪೋಲಿಕಾಂ ಪಾದುಕಾಂ ಛತ್ರಂ ಚ ದತ್ವಾ ಸ್ನಾಯಾತ್ ॥

ತತೋ ದೇಶಕಾಲೌ ಸಂಕೀರ್ತ್ಯ ಅಮುಕಗೋತ್ರಸ್ಯಾಮುಕಪ್ರೇತಸ್ಯ ಪ್ರೇತತ್ವವಿಮೋಕ್ಷಾರ್ಥಂ ಅಸ್ಥಿಸಂಚಯನಶ್ರಾದ್ಧಂ ಕರಿಷ್ಯೇ ॥ ಪ್ರಾಚೀನಾವೀತೀ

ಒಂದು ಕೂರ್ಚವನ್ನಿಟ್ಟು **"....ಗೋತ್ರ... ಪ್ರೇತ ಅಸ್ಥಿಸಂಚಯನಶ್ರಾದ್ಧೇ ಅಯಂ ತೇ ಕ್ಷಣ-ಉಪತಿಷ್ಠತಾಂ"** ಎಂದು ಆ ಕೂರ್ಚಬ್ರಾಹ್ಮಣನಿಗೆ ಒಂದು ದರ್ಭೆಯನ್ನು ಕೊಡಬೇಕು.

ನಂತರ **"...........ಗೋತ್ರ............ಪ್ರೇತ ಇದಂ ತೇ ಪಾದ್ಯಮುಪತಿಷ್ಠತಾಂ", ".......ಗೋತ್ರಸ್ಯ....... .... ಪ್ರೇತಸ್ಯ........ ಆಸನಮುಪತಿಷ್ಠತಾಂ", "ಗೋತ್ರ...... ಪ್ರೇತ...... ಆಚ್ಛಾದನ..."** ಎಂದು ಇವುಗಳನ್ನು ಕೊಟ್ಟು ನೆಲದಲ್ಲಿ ದಕ್ಷಿಣಾಗ್ರವಾಗಿ ಒಂದು ದರ್ಭೆಯನ್ನು ಹಾಕಿ ಅದರ ಮೇಲೆ ಒಂದು ಅರ್ಘ್ಯಪಾತ್ರವನ್ನಿಟ್ಟು ಒಂದು ಪವಿತ್ರಕೂರ್ಚ, ನೀರು ಮತ್ತು ಎಳ್ಳುಗಳನ್ನು ಅದರಲ್ಲಿ ಹಾಕಿ **".... ಗೋತ್ರ .... ಪ್ರೇತ ಅಸ್ಥಿಸಂಚಯನ ಶ್ರಾದ್ಧೇ ಇದಮರ್ಘ್ಯಂ ತವೋಪತಿಷ್ಠತಾಂ"** ಎಂದು ಅರ್ಘ್ಯವನ್ನು ಕೊಟ್ಟು ಗೋತ್ರನಾಮಗಳೊಂದಿಗೆ ಗಂಧ, ತುಲಸೀಪತ್ರ, ಭೃಂಗರಾಜಪತ್ರಗಳನ್ನೂ ಕೊಡಬೇಕು. ಬಳಿಕ ಅಕ್ಕಿ, ಜಲಪಾತ್ರ ಮತ್ತು ದಕ್ಷಿಣೆಯನ್ನು **"... ಗೋತ್ರಾಯ.... ಪ್ರೇತಾಯ ಆಮಾನ್ನಂ ತನ್ನಿಷ್ಕ್ರಯಂ ವಾ ಸೋದಕುಂಭಂ ಸದಕ್ಷಿಣಮುಪತಿಷ್ಠತಾಂ"** ಎಂದು ಕೊಡಬೇಕು.

ಅನಂತರ **"ಅಸ್ಥಿಸಂಚಯನಶ್ರಾದ್ಧೇ ಪಿಂಡಪ್ರದಾನಂ ಕರಿಷ್ಯಾಮಿ"** ಎಂದು ಸಂಕಲ್ಪ ಮಾಡಿ ನೆಲವನ್ನು ಪ್ರೋಕ್ಷಿಸಿ ದಕ್ಷಿಣಾಗ್ರವಾಗಿ ಒಂದು ದರ್ಭೆಯನ್ನಿಟ್ಟು ಅಕ್ಕಿ ಹಿಟ್ಟಿನ ಪಿಂಡವನ್ನು ಕೈಯಲ್ಲಿ ಹಿಡಿದು, **".......ಗೋತ್ರಾಯ.......ಪ್ರೇತಾಯ.......ಅಸ್ಥಿ.......ಪಿಂಡ ಉಪತಿಷ್ಠತಾಂ"** ಎಂದು ಹೇಳಿ ಪಿಂಡವನ್ನು ಆ ದರ್ಭೆಯ ಮೇಲೆ ಇಡಬೇಕು. ಬಳಿಕ ಪಿಂಡಕ್ಕೆ ತಿಲೋದಕ,

Scanned by CamScanner

Scanned with CamScanner

ತಿಲೋದಕಂ ಕೃತ್ವಾ ಉದಙ್ಮುಖಂ ದರ್ಭಬಟುಂ ಸಂಸ್ಥಾಪ್ಯ ಅಮುಕಗೋತ್ರಸ್ಯಾಮುಕಪ್ರೇತಸ್ಯ ಅಸ್ಥಿಸಂಚಯನಶ್ರಾದ್ಧೇ ಕ್ಷಣ ಉಪತಿಷ್ಠತಾಮಿತ್ಯಾದಿ ಪಾದ್ಯಾಸನಾರ್ಘ್ಯಾಚ್ಛಾದನಾಂತಂ ಅಮುಕಪ್ರೇತೇತ್ಯಾದಿ ತತ್ತದ್ವಿಭಕ್ತ್ಯಾ ಉಪತಿಷ್ಠತಾಮಿತಿ ದತ್ವಾ ಪಾಣಿಹೋಮಂ ಕೃತ್ವಾ ಅನಾದಿನಿಧನ ಇತಿ ಶ್ಲೋಕಂ ಪಠಿತ್ವಾಭಿರಮ್ಯತಾಮಿತ್ಯಾದಿ ಪಿಂಡಂ ಪ್ರವಾಹ್ಯ ಸ್ನಾಯಾತ್ ॥

॥ ಇತಿ ಅಸ್ಥಿಸಂಚಯನಶ್ರಾದ್ಧಂ ॥

ಗಂಧ, ತುಲಸೀಪತ್ರ, ಭೃಂಗರಾಜಪತ್ರಾದಿಗಳನ್ನಿತ್ತು, ತಾಂಬೂಲ, ದಕ್ಷಿಣೆಗಳನ್ನೂ ಕೊಡಬೇಕು. ಹಿಟ್ಟಿನ ಶೇಷದಿಂದ ವಿಕಿರಾನ್ನವನ್ನೂ ಕೊಟ್ಟು **"ಅನಾದಿನಿಧನೋ...."** ಶ್ಲೋಕ ಹೇಳಿ **"ಅಭಿರಮ್ಯತಾಂ" "ಅಭಿರತಾಃ ಸ್ಮಃ"** ಎಂದು ಆಚಾರ್ಯನಿಂದ ಪ್ರತಿವಚನವನ್ನು ಪಡೆದು ಪಿಂಡೋದ್ವಾಸನ ಮಾಡಿ ಸ್ನಾನಮಾಡಬೇಕು.

॥ ಅಸ್ಥಿಸಂಚಯನಶ್ರಾದ್ಧ ಸಮಾಪ್ತ ॥

Scanned by CamScanner

॥ ದ್ವಿತೀಯಾದಿದಿನವಿಧಿಃ ॥

ಶ್ರೀಃ ॥ ತತಃ ಪೂರ್ವದಿನಕೃತ್ಯದೇಶೇ ದ್ವಿತೀಯದಿನವಿಧಿಂ ಕುರ್ಯಾತ್ ॥ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಪ್ರಾಚೀನಾವೀತೀ ಅಮುಕಗೋತ್ರಸ್ಯಾಮುಕಪ್ರೇತಸ್ಯ ಪ್ರೇತತ್ವನಿವೃತ್ತ್ಯಾ ಉತ್ತಮಲೋಕಪ್ರಾಪ್ತ್ಯರ್ಥಂ ದ್ವಿತೀಯದಿನವಿಧಿಂ ಕರಿಷ್ಯೇ ಇತಿ ಸಂಕಲ್ಪ್ಯ ಹವಿಃ ಶ್ರಪಯಿತ್ವಾ ಪ್ರಥಮದಿನ-ವತ್ಸಂಕಲ್ಪಪೂರ್ವಕಂ ಮೃತ್ತಿಕಾಸ್ನಾನತ್ರಯಂ ವಿಧಾಯ ಪ್ರಥಮದಿನಪರಿ-ಗೃಹೀತತಿಲಾಂಜಲಿದಾನಪಕ್ಷಾಶ್ರಯಣೇನ ಅಶ್ಮನಿ ಸಂಕಲ್ಪಪೂರ್ವಕಂ ಅಂಜಲಿ-ದಾನಂ ಕೃತ್ವಾ ಪ್ರತ್ಯಂಜಲಿಂ ಸ್ನಾತ್ವಾ ಅಮುಕಗೋತ್ರಸ್ಯಾಮುಕಪ್ರೇತಸ್ಯ ದ್ವಿತೀಯೇಽಹನಿ ಚಕ್ಷುಃ ಶ್ರೋತ್ರನಾಸಾವಯವನಿಷ್ಪತ್ತ್ಯರ್ಥಂ ಅಯಂ ಪಿಂಡ ಉಪತಿಷ್ಠತಾಂ ॥ ತೃತೀಯೇಽಹನಿ ಭುಜವಕ್ಷೋಗ್ರೀವಾಮುಖಾವಯವ......... (೩) ಚತುರ್ಥೇ ಪಾರ್ಶ್ವಕುಕ್ಷಿಕಟಿನಾಭಿಗುದಲಿಂಗಾವಯವ.....................(೪) ಪಂಚಮೇ ಊರುಜಾನುಜಂಘಾವಯವ................(೫) ಷಷ್ಠೇ ಗುಲ್ಫಪಾದಾಂ-ಗುಲಿಮರ್ಮಾದ್ಯವಯವ (೬) ಸಪ್ತಮೇ ಅಸ್ಥಿಮಜ್ಜಾಶಿರಾವಯವ...............(೭) ಅಷ್ಟಮೇ ನಖರೋಮಾದ್ಯವಯವ................(೮) ನವಮೇ ಮರ್ಮವೀರ್ಯಾದಿ ಸರ್ವಾವಯವ.............(೯) ದಶಮೇ ಕ್ಷುತ್ಪಿಪಾಸಾನಿವೃತ್ತ್ಯರ್ಥಮಿತಿ ತತ್ತದ್ದಿನೋ-ಹೇನ ದರ್ಭಶಿಖೋಪರಿ ಪಿಂಡಂ ದತ್ವಾ ತುಲಸೀಭೃಂಗರಾಜದಾನಾದಿ ಕೃತ್ವಾ ಅನಾದಿಶ್ಲೋಕಪಾಠ ಪಿಂಡಪ್ರವಾಹಣಸ್ನಾನಾಂತಂ ಪೂರ್ವವತ್ ॥ ತೃತೀಯ-ಪಂಚಮಸಪ್ತಮನವಮಾದಿದಿನೇಷು ತತ್ತದ್ದಿನೋಹೇನ ಪೂರ್ವೋಕ್ತವದ್ವಿಷಮ-ಶ್ರಾದ್ಧಂ ಕುರ್ಯಾತ್ ॥ ಇತಿ ದ್ವಿತೀಯಾದಿದಿನವಿಧಿಃ ॥

ಮೊದಲನೆಯ ದಿನದಂತೆಯೇ ಎರಡನೆಯ ದಿನದಿಂದ ಹತ್ತನೆಯ ದಿನದ ವರೆಗಿನ ನಿತ್ಯವಿಧಿಯನ್ನು ಮಾಡಬೇಕು. ಸಂಕಲ್ಪದಲ್ಲಿ ಆಯಾ ದಿನಕ್ಕೆ ಸರಿಯಾಗಿ "**ದ್ವಿತೀಯ - ದಿನವಿಧಿಂ**" "**ತೃತೀಯದಿನವಿಧಿಂ**" ಎಂದು ಹೇಳಿಕೊಳ್ಳಬೇಕು. ಅಂತೆಯೇ ಪಿಂಡ ಹಾಕುವಾಗ, "**ದ್ವಿತೀಯೇಹನಿ-ಚಕ್ಷುಃ ಶ್ರೋತ್ರ.... ನಿಷ್ಪತ್ತ್ಯರ್ಥಂ**" ಎಂದು ಮೊದಲಾಗಿ ಮೇಲೆ ಹೇಳಿದಂತೆ ಆಯಾ ದಿನವನ್ನು ಅನುಸರಿಸಿ ಬೇರೆಯಾಗಿ ಹೇಳಿಕೊಳ್ಳಬೇಕು.

ಚರುವನ್ನು ಬೇಯಿಸಿ ಪಿಂಡವನ್ನು ತಯಾರಿಸುವುದು, ಮೃತ್ತಿಕಾಸ್ನಾನಾದಿಗಳು, ಶಿಲೆಯ ಮೇಲೆ ಕೊಡುವ ತಿಲಾಂಜಲಿಗಳು, ಇತ್ಯಾದಿ ಕರ್ಮಗಳನ್ನೆಲ್ಲ ಪ್ರಥಮದಿನದಂತೆಯೇ ಮಾಡಬೇಕು. ಮೂರು, ಐದು, ಏಳು ಮತ್ತು ಒಂಭತ್ತನೆಯ ದಿನಗಳಲ್ಲಿ ವಿಷಮಶ್ರಾದ್ಧವನ್ನೂ ಮಾಡಬೇಕು.

॥ ದ್ವಿತೀಯಾದಿದಿನವಿಧಿ ಸಮಾಪ್ತ ॥

Scanned by CamScanner

Scanned with CamScanner

೧೬

॥ ದಶಮದಿನವಿಧಿಃ ॥

ಶ್ರೀಃ ॥ ಅಥ ಕಾಕಬಲಿಃ ॥ ಪ್ರಾತ್ಯಾಹಿಕಪಿಂಡದೇಶೇ ಅನ್ಯತ್ರ ವಾ ಮೃದಾ ತ್ರಿಕೋಣಾಂ ವೇದಿಂ ಕೃತ್ವಾ ಗೋಮಯೇನ ಸಂಮೃಜ್ಯ ಹರಿದ್ರಾದಿನಾಲಂಕೃತ್ಯ ಕರ್ತಾ ತಸ್ಯಾಂ ಮಧ್ಯೇ ಪೂರ್ವಾದಿ ಚತುರ್ದಿಕ್ಷು ಜಲಪೂರ್ಣಂ ಕುಂಭಪಂಚಕಂ ಸಂಸ್ಥಾಪ್ಯ ತೇಷು ಸ್ಥಾಪನಕ್ರಮೇಣೈವೌದನಪಿಂಡಾಂಶ್ಚ ನಿಧಾಯ ಕ್ರಮೇಣ ಸರ್ವತ್ರ ನಿವೇದಯೇತ್ ॥ ಅಮುಕಗೋತ್ರಾಯಾಮುಕಪ್ರೇತಾಯ ಕ್ಷುತ್ಪಿಪಾಸಾನಿವೃತ್ತ್ಯರ್ಥಂ ಅಯಂ ಪಿಂಡಃ ಸೋದಕುಂಭ ಉಪತಿಷ್ಠತಾಮಿತಿ ಮಧ್ಯಸ್ಥಂ ನಿವೇದಯೇತ್ ॥ ೧ ॥ ಪ್ರೇತಸಖಿಭ್ಯಃ ಕ್ಷುತ್ಪಿಪಾಸಾ.........ಇತಿ ಪೂರ್ವಸ್ಥಂ ॥ ೨ ॥ ವೈವಸ್ವತಾಯ ಯಮಾಯ ಕ್ಷುತ್ಪಿಪಾಸಾ............ಇತಿ ದಕ್ಷಿಣಸ್ಥಂ ॥ ೩ ॥ ವಾಯಸೇಭ್ಯಃ ಕ್ಷುತ್ಪಿಪಾಸಾ........ಇತಿ ಪಶ್ಚಿಮಸ್ಥಂ ॥ ೪ ॥ ಪ್ರೇತಾಧಿಪತಯೇ ರುದ್ರಾಯ ಕ್ಷುತ್ಪಿಪಾಸಾ..........ಇತಿ ಉತ್ತರಸ್ಥಂ ॥ ೫ ॥ ಪಿಂಡದಾನಕ್ರಮೇಣೈವ ತಿಲೋದಕಮುಪತಿಷ್ಠತಾಮಿತಿ ಪ್ರತ್ಯೇಕಂ ತಿಲೋದಕಂ ದತ್ವಾ ಪಾದುಕಾದ್ವಯಂ ಛತ್ರಂ ಪತಾಕಾ ಪೋಲಿಕಾ ಚ ಉಪತಿಷ್ಠತಾಮಿತಿ ಸರ್ವೇಭ್ಯಃ ಪ್ರತ್ಯೇಕಂ ದದ್ಯಾತ್ ॥ ತತಃ ಪಶ್ಚಿಮದೇಶಸ್ಥಂ ಪಿಂಡಂ ವಾಯಸೋ ಯಾವದ್ಭಕ್ಷಯಂತಿ ತಾವತ್ತಿಷ್ಠೇತ್ ॥ ತತೋಽಶ್ಮಾನಂ ತಿಲತೈಲೇನಾಭ್ಯಜ್ಯ ಜಲೇ ಕ್ಷಿಪೇತ್ ॥ ಕೇಚಿತ್ ಪ್ರೇತತ್ವನಿವೃತ್ತ್ಯಾ ಉತ್ತಮಲೋಕಪ್ರಾಪ್ತ್ಯರ್ಥಂ ದಶದಾನಾನ್ಯಪ್ಯತ್ರ ಕುರ್ವಂತಿ ॥ ತತಃ ಕರ್ತ್ರಾ ಪ್ರಾರ್ಥಿತಾಃ ಸರ್ವೇ ಬಾಂಧವಾಃ

ಹತ್ತನೆಯ ದಿನದ ವಿಧಿ:- ತಿಲಾಂಜಲಿ ನಿತ್ಯಬಲಿಶ್ರಾದ್ಧಾದಿಗಳನ್ನು ಮಾಡಿ ಪಿಂಡಕ್ಕೆ ಚರುವನ್ನು ಬೇಯಿಸಿಕೊಂಡು ಮಣ್ಣಿನಿಂದ ತ್ರಿಕೋಣಾಕಾರದ ವೇದಿಯನ್ನು ನಿರ್ಮಿಸಿ, ಗೋಮಯದಿಂದ ಶುದ್ಧೀಕರಿಸಿ, ಅರಸಿನಹುಡಿಯಿಂದ ಅಲಂಕರಿಸಿ, ಅದರ ಮೇಲೆ ನೀರು ತುಂಬಿದ ೫ ಉದಕುಂಭಗಳನ್ನೂ, ಕುಂಭಗಳ ಮೇಲೆ ೫ ಪಿಂಡಗಳನ್ನೂ ಇಟ್ಟು, **"......ಗೋತ್ರಾಯ.......ಪ್ರೇತಾಯ.......ಉಪತಿಷ್ಠತಾಂ"** ಎಂಬಲ್ಲಿಂದ **"ಪ್ರೇತಾಧಿಪತಯೇ ರುದ್ರಾಯ...."** ಎಂಬಲ್ಲಿ ವರೆಗೆ ೫ ಉದಕುಂಭ ಮತ್ತು ಪಿಂಡಗಳನ್ನು ಆಯಾ ದಿಕ್ಕುಗಳಲ್ಲಿ ನಿವೇದಿಸಬೇಕು. ಇದೇ ಕ್ರಮದಲ್ಲಿ ೫ ಕಡೆಗಳಲ್ಲಿ ತಿಲೋದಕವನ್ನೂ ಕೊಡಬೇಕು. ನಂತರ ಪ್ರತಿಯೊಂದಕ್ಕೂ ಎರಡೆರಡು ಪಾದುಕೆಗಳು, ಒಂದೊಂದು ಛತ್ರ ಪತಾಕೆ ಮತ್ತು ರೊಟ್ಟಿಗಳನ್ನು ಸಮರ್ಪಿಸಬೇಕು. ಪಶ್ಚಿಮದಲ್ಲಿ ಕಾಗೆಗಳಿಗೆಂದು ಸಮರ್ಪಿಸಿದ ಪಿಂಡವನ್ನು ಕಾಗೆಯು ಬಂದು ತಿನ್ನುವ ತನಕ ಅಲ್ಲಿ ಕಾದಿರಬೇಕು. ಅನಂತರ ಎಳ್ಳೆಣ್ಣೆಯನ್ನು ಸವರಿ ಪ್ರೇತಶಿಲೆಯನ್ನು ನೀರಿನಲ್ಲಿ ಬಿಡಬೇಕು. ಕೆಲವರು ಈ ಸಂದರ್ಭದಲ್ಲಿ ದಶದಾನಗಳನ್ನೂ ಮಾಡುತ್ತಾರೆ. ಅನಂತರ ಕರ್ತೃ

Scanned by CamScanner
Scanned with CamScanner

ಸಂಬಂಧಿನಶ್ಚ ತ್ರೀಂಸ್ತ್ರೀನ್ ಧರ್ಮೋದಕಾಂಜಲೀನೇಕೈಕಂ ವಾಂಜಲಿಂ ತೀರೇ ಪ್ರೇತೋದ್ದೇಶೇನ ದದ್ಯುಃ ॥ ತತಃ ಪುತ್ರಾದೀನಾಂ ಯಥಾಚಾರಂ ವಾಸಸಾಂ ತ್ಯಾಗಃ ಕೇಶಶ್ಮಶ್ರುವಪನಂ ನಖಚ್ಛೇದಾದಿ ಚ ॥ ತತಃ ಸರ್ವೇ ಸಗೋತ್ರಾಃ ಪುರಂಧ್ರ್ಯಶ್ಚ ಯಥಾದೇಶಾಚಾರಂ ಗೌರಸರ್ಷಪಕಲ್ಕೇನ ತಿಲಾಮಲಕಕಲ್ಕೇನ ವಾ ಅಭ್ಯಕ್ತಾಃ ಏಕಕಾಲೇ ಜಲೇ ಸಶಿರಸ್ಕಂ ಸ್ನಾತ್ವಾಚಮ್ಯ ವಾಗ್ಯತಾಃ ವೃಷಭಂ ಗಾಂ ಸುವರ್ಣಂ ಚ ಸ್ಪೃಷ್ಟ್ವಾ ಶುಕ್ಲವಾಸಸೋ ಗೃಹಂ ಗತ್ವಾ ಸರ್ವೇ ತತ್ರೈವ ಭುಂಜೀರನ್ ॥

॥ ಇತಿ ದಶಾಹಕೃತ್ಯಂ ॥

ಮತ್ತು ಇತರರೆಲ್ಲರೂ ಮನೆಗೆ ಹೋಗಿ ಅಲ್ಲಿ ಹಚ್ಚಿಟ್ಟ ದೀಪದ ಬತ್ತಿಯನ್ನು ಬದಲಿಸಿ ಹಾಲು ಮತ್ತು ನೀರಿನ ಪಾತ್ರೆಯನ್ನು ವಿಸರ್ಜಿಸಿ, ಸ್ಥಳ ಶುದ್ಧಿಮಾಡಿ ನೀರಿನ ಬಳಿಗೆ ಬಂದು ಮೂರು ಮೂರು ಅಥವಾ ಒಂದೊಂದು ಧರ್ಮೋದಕಾಂಜಲಿಯನ್ನು ಕೊಡಬೇಕು. ಬಳಿಕ ಎಲ್ಲರೂ ಬಟ್ಟೆ ಬದಲಾಯಿಸಿ, ಕ್ಷೌರ ಮಾಡಿಕೊಂಡು ಬಿಳಿಬಟ್ಟೆಗಳನ್ನು ಧರಿಸಿ ಮನೆಗೆ ಹೋಗಿ ಅಲ್ಲಿಯೇ ಭೋಜನವನ್ನು ಮಾಡಬೇಕು.

॥ ದಶಮದಿನವಿಧಿ ಸಮಾಪ್ತ ॥

Scanned by CamScanner

Scanned with CamScanner

॥ ಏಕಾದಶಾಹಕೃತ್ಯಂ ॥

ಶ್ರೀಃ ॥ ತತ್ರ ಪ್ರಾತರುತ್ಥಾಯ ಗೃಹಾನುಲೇಪನಂ ಕೃತ್ವಾ ಸ್ಪೃಷ್ಟಾನಾಂ ಮೃದ್ಭಾಂಡಾನಾಂ ತ್ಯಾಗಃ ಸರ್ವೇಷಾಂ ಸಪಿಂಡಾನಾಂ ಸಚೈಲಂ ಸ್ನಾನಂ ತತ್ರ ಸ್ಪೃಷ್ಟವಸ್ತ್ರಾದೀನಾಂ ಪ್ರಕ್ಷಾಲನಂ ತತ್ರ ಮಾಧವಪ್ರಾಯಶ್ಚಿತ್ತಗ್ರಂಥೇ ಚ ಶ್ವಪಾಕಮಪಿ ಶೋಧಯೇದಿತಿ ಬ್ರಹ್ಮಕೂರ್ಚಹೋಮಸ್ಯಾತ್ಯಂತಂ ಪಾಪದಾಹ-ಕತ್ವಶ್ರವಣಾತ್ ಕರ್ತ್ರಾ ಸ್ವಸ್ಯಾಶೌಚಜನ್ಯ ಸಕಲದೋಷನಿವೃತ್ತ್ಯೈ ಬ್ರಹ್ಮಕೂರ್ಚ-ಹೋಮಂ ಕೃತ್ವಾ ಪಂಚಗವ್ಯಪ್ರಾಶನಂ ಕಾರ್ಯಂ ॥ ಅಥವಾ ಪಂಚಗವ್ಯ - ಪ್ರಾಶನ ಮಾತ್ರೇಣಾಪಿ ಪಾಪಕ್ಷಯಶ್ರವಣಾದವಶ್ಯಂ ತತ್ಕಾಲಂ ಕೇವಲಂ ಪಂಚಗವ್ಯಂ ಸಂಪಾದ್ಯ ಪ್ರಾಶಯೇನ್ನ ಹೋಮಸ್ಯೈವಾವಶ್ಯಕತ್ವಂ ಬ್ರಹ್ಮ-ಕೂರ್ಚಹೋಮಸ್ಯ ದ್ವಿದಿನಸಾಧ್ಯತ್ವೇನೇದಾನೀಮಸಂಭವಾತ್ ॥ ಕರ್ತಾಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ ಮಮಾಶೌಚಜನ್ಯಾಶುಚಿತ್ವಾದಿ-ಸಕಲದೋಷನಿವೃತ್ತಿಪೂರ್ವಕಶರೀರಶುದ್ಧಿದ್ವಾರಾ ವೃಷೋತ್ಸರ್ಗಾದ್ಯಧಿಕಾರಸಿದ್ಧ್ಯರ್ಥಂ ಪಂಚಗವ್ಯಪ್ರಾಶನಮಹಂ ಕರಿಷ್ಯ ಇತಿ ಸಂಕಲ್ಪ್ಯ ತಾಮ್ರೇ ಪಾಲಾಶೇ ವಾ ಪಾತ್ರೇ ತಾಮ್ರಾಯಾ ಗೋಮೂತ್ರಮಷ್ಟಮಾಷಪ್ರಮಾಣಂ ತತ್ಸವಿತುರಿತಿ ಗಾಯತ್ರ್ಯಾದಾಯ ಗಂಧದ್ವಾರಾಮಿತಿ ಶ್ವೇತಗೋಃ ಶಕೃತ್ ಷೋಡಶಮಾಷ-ಮಾದಾಯ ಆಪ್ಯಾಯಸ್ವೇತಿ ಪೀತಗೋಃ ಕ್ಷೀರಂ ದ್ವಾದಶಮಾಷಂ ದಧಿಕ್ರಾವ್ಣ ಇತಿ ನೀಲಗೋರ್ದಧಿ ದಶಮಾಷಂ ಶುಕ್ರಮಸಿಜ್ಯೋತಿರಸಿತೇಜೋಸಿ ಇತಿ ಕೃಷ್ಣ

ಹನ್ನೊಂದನೆಯ ದಿನದ ಕ್ರಿಯಾಭಾಗಃ- ಪ್ರಾತಃಕಾಲ ಬೇಗನೆ ಎದ್ದು ಮನೆಯ ಒಳ-ಹೊರ ಭಾಗಗಳನ್ನು ಗುಡಿಸಿ ಗೋಮಯದಿಂದ ಸಾರಿಸಿ ಶುದ್ಧೀಕರಿಸಿ, ಅದುತನಕ ಉಪಯೋಗಿಸಿದ ಮಣ್ಣಿನ ಪಾತ್ರೆಗಳನ್ನೆಲ್ಲ ವಿಸರ್ಜಿಸಬೇಕು. ಸಪಿಂಡರಾದವರೆಲ್ಲರೂ ಸಚೈಲಸ್ನಾನ ಮಾಡಿ ಬಟ್ಟೆಗಳನ್ನೆಲ್ಲ ತೊಳೆಯಬೇಕು. ಬಳಿಕ ಆಶೌಚನಿವೃತ್ತಿಗಾಗಿ ಬ್ರಹ್ಮಕೂರ್ಚಹೋಮವನ್ನೂ, ಪಂಚಗವ್ಯಪ್ರಾಶನವನ್ನೂ ಮಾಡಬೇಕು. ಬ್ರಹ್ಮಕೂರ್ಚ ಹೋಮವು ಎರಡು ದಿನಗಳಲ್ಲಿ ಮಾಡಬಹುದಾದ ಕರ್ಮಭಾಗವಾದುದರಿಂದ, ಅದನ್ನು ಮಾಡದೆ ಕೇವಲ ಪಂಚಗವ್ಯ ಪ್ರಾಶನವನ್ನು ಮಾಡಿದರೂ ಸಾಕು. ಕರ್ತೃವು ಆಚಮನ ಪ್ರಾಣಾಯಾಮ ದೇಶಕಾಲ ಸ್ಮರಣಾದಿಗಳನ್ನು ಮಾಡಿ ತಾಮ್ರಪಾತ್ರೆ ಅಥವಾ ಪಲಾಶದ ಎಲೆಗಳಿಂದ ತಯಾರಿಸಿದ ದೊನ್ನೆಯಲ್ಲಿ, ಉದ್ದಿನ ಎಂಟು ಕಾಳಿನಷ್ಟು ಕೆಂಪು ದನದ ಗೋಮೂತ್ರ, ಹದಿನಾರು ಉದ್ದಿನ ಕಾಳಿನಷ್ಟು ಬಿಳಿ ದನದ ಗೋಮಯ, ಪೀತವರ್ಣದ ದನದ ಹನ್ನೆರಡು ಉದ್ದಿನ ಕಾಳಿನಷ್ಟು

Scanned by CamScanner

Scanned with CamScanner

ಗೋರ್ಘೃತಮಷ್ಟಮಾಷಮಾದಾಯ ತತ್ರ ದೇವಸ್ಯತ್ವೇತಿ ಕುಶೋದಕಂ ಚತುರ್ಮಾಷಂ ಪ್ರಕ್ಷಿಪ್ಯ ಪ್ರಣವೇನೈವ ಯಜ್ಞಿಯಕಾಷ್ಠೇನಾಲೋಡ್ಯ ಪ್ರಣ-ವೇನಾಭಿಮಂತ್ರ್ಯ ಪ್ರಣವೇನ ಪಿಬೇತ್ ॥ ಕರ್ತೃಭಿನ್ನಾಃ ಸರ್ವೇಽಪಿ ಯಥಾಚಾರಂ ಪಿಬೇಯುರಾಚಮೇಯುಶ್ಚ ॥ ಏವಂ ಪಂಚಗವ್ಯಪ್ರಾಶನೇನ ಶರೀರಶುದ್ಧಿಂ ಸಂಪಾದ್ಯ ವೃಷೋತ್ಸರ್ಗಾದಿಕಂ ಕರ್ಮ ಕುರ್ಯಾತ್ ॥ ಕ್ವಚಿತ್ಪಂಚಕ ತ್ರಿಪಾದನಕ್ಷತ್ರ ತ್ರಿಪುಷ್ಕರ ದ್ವಿಪುಷ್ಕರಾದಿಸಂಭಾವನಾಯಾಂ ಸೂತಕಾಂತೇ ತತಃ ಪುತ್ರಃ ಕುರ್ಯಾಚ್ಛಾಂತಿಕಮಂತತತ ಇತಿ ವಚನೇ ಅಂತಶಬ್ದಾತ್ ಪುತ್ರೇಣ ಸೂತಕನಿವೃತ್ತಿಸ್ನಾನೋತ್ತರಂ ಪ್ರಾತರ್ವೃಷೋತ್ಸರ್ಗಮಹೈಕೋದ್ದಿಷ್ಟಶ್ರಾದ್ಧಾತ್ಪ್ರಾಗೇವ ಶಾಂತಿಃ ಕರ್ತವ್ಯೇತಿ ಪ್ರತೀಯತೇ ॥ ಅತಃ ಪೂರ್ವಂ ಶಾಂತಿಕಂ ತತೋವೃಷೋತ್ಸರ್ಗಾದಿ ಸಂಗೃಹೀತಂ ॥

॥ ಇತಿ ಏಕಾದಶಾಹಕೃತ್ಯಂ ॥

ಹಾಲು, ನೀಲವರ್ಣದ ದನದ ಹತ್ತು ಉದ್ದಿನ ಕಾಳಿನಷ್ಟು ಮೊಸರು, ಕಪ್ಪುಬಣ್ಣದ ದನದ ಎಂಟು ಉದ್ದಿನ ಕಾಳಿನಷ್ಟು ತುಪ್ಪವನ್ನು ಗಾಯತ್ರಿಯಿಂದಾರಂಭಿಸಿ ಆಯಾ ಮಂತ್ರಗಳಿಂದ ಒಂದುಗೂಡಿಸಿ ಕುಶೋದಕವನ್ನು ಸೇರಿಸಿ, ಯಾವುದಾದರೊಂದು ಸಮಿಧೆಯಿಂದ ಕಲಗಿಸಿ, ಸರಿಯಾಗಿ ಬೆರಸಿ 'ಓಂ' ಎಂಬ ಪ್ರಣವವನ್ನು ಉಚ್ಚರಿಸಿ ಪ್ರಾಶನಮಾಡಬೇಕು.

॥ ಏಕಾದಶಾಹಕೃತ್ಯ ಸಮಾಪ್ತ ॥

Scanned by CamScanner

Scanned with CamScanner

॥ ಪಂಚಕತ್ರಿಪಾದಸಾಧಾರಣಶಾಂತಿಃ ॥

ಶ್ರೀಃ ॥ ಅತ್ರ ವಿಶೇಷಃ ॥ ನಕ್ಷತ್ರಾಂತೇ ಮೃತಸ್ಯ ಪಂಚಕೇ ದಾಹ-ಪ್ರಾಪ್ತೌ ದಾಹಕಾಲೇ ಪುತ್ತಲವಿಧಿರೇವ ನ ಶಾಂತಿಕಂ ॥ ಪಂಚಕಮೃತಸ್ಯ ಅಶ್ವಿನ್ಯಾಂ ದಾಹಪ್ರಾಪ್ತೌ ಶಾಂತಿಕಮೇವ ನ ಪುತ್ತಲವಿಧಿಃ ॥ ತತ್ರ ಸೂತಕಾಂತೇ ತಿಲಹೋಮಂ ಘೃತದಾನಂ ಚ ಕೃತ್ವಾ ಕಾಂಸ್ಯಪಾತ್ರೇ ತೈಲಂ ಪ್ರಕ್ಷಿಪ್ಯ ತತ್ರಾತ್ಮಬಿಂಬಂ ವೀಕ್ಷ್ಯ ವಿಪ್ರಾಯ ದದ್ಯಾತ್ ॥ ಶಾಂತಿಶ್ಚ ಲಕ್ಷಹೋಮ ರುದ್ರಜಪಾನ್ಯತರರೂಪಾ ಯಥಾವಿಭವಂ ಕಾರ್ಯಾ ॥ ಅಥವಾ ಕುಂಭೇ ಯಮಪ್ರತಿಮಾಂ ಸಂಪೂಜ್ಯ ಸ್ವಗೃಹ್ಯೋಕ್ತವಿಧಿನಾ ಅಗ್ನಿಪ್ರತಿಷ್ಠಾಪನಾನ್ವಾ-ಧಾನಾದಿ ಚರುಶ್ರಪಣಾಂತಂ ಕೃತ್ವಾ ಆಜ್ಯಭಾಗಾಂತೇ ನಾಮಭಿಶ್ಚತುರ್ದಶ ಚರ್ವಾಹುತೀರ್ಜುಹುಯಾತ್ ॥ ಯಮಾಯ ಸ್ವಾಹಾ ಧರ್ಮರಾಜಾಯ ಮೃತ್ಯವೇ ಅಂತಕಾಯ ವೈವಸ್ವತಾಯ ಕಾಲಾಯ ಸರ್ವಭೂತಕ್ಷಯಾಯ ಔದುಂಬರಾಯ ದಧ್ನಾಯ ನೀಲಾಯ ಪರಮೇಷ್ಠಿನೇ ವೃಕೋದರಾಯ ಚಿತ್ರಾಯ ಚಿತ್ರಗುಪ್ತಾಯ ಸ್ವಾಹಾ (೧೪) ॥ ಏವಂ ಹುತ್ವಾ ಹೋಮಶೇಷಂ

ಪಂಚಕತ್ರಿಪಾದಸಾಧಾರಣಶಾಂತಿ:- ಮರಣಕಾಲದಲ್ಲಿ ಪಂಚಕ ತ್ರಿಪಾದ ಮುಂತಾದ ದೋಷಗಳು ಒದಗಿ ಬಂದಿದ್ದರೆ ಮೊದಲು ಆಯಾ ಶಾಂತಿಕರ್ಮಗಳನ್ನು ಮಾಡಿ ನಂತರ ಮಹೈಕೋದ್ದಿಷ್ಟವನ್ನು ಮಾಡಬೇಕು. ಬೇರೆ ನಕ್ಷತ್ರದಲ್ಲಿ ಮೃತಪಟ್ಟು ಧನಿಷ್ಠಾದಿ ಪಂಚಕದಲ್ಲಿ ದಾಹ ಮಾಡಬೇಕಾದ ಸಂದರ್ಭ ಬಂದಿದ್ದರೆ, ದಾಹ ಕಾಲದಲ್ಲಿ ಪುತ್ತಲವಿಧಿಯನ್ನು ಮಾಡಿದರೆ ಸಾಕು. ಪಂಚಕಶಾಂತಿಯನ್ನು ಮಾಡಬೇಕಾದ್ದಿಲ್ಲ. ಪಂಚಕದಲ್ಲಿ ಮೃತಪಟ್ಟು ಅಶ್ವಿನೀ ನಕ್ಷತ್ರದಲ್ಲಿ ದಾಹ ಮಾಡುವ ಸಂದರ್ಭದಲ್ಲಿ ಪಂಚಕಶಾಂತಿಯನ್ನೇ ಮಾಡಬೇಕು.

ಸೂತಕ ನಿವೃತ್ತಿಯಾದ ಮೇಲೆ ತಿಲಹೋಮ ಘೃತದಾನ ಮುಂತಾದವುಗಳನ್ನು ಮಾಡಿ ಕಂಚಿನ ಪಾತ್ರೆಯಲ್ಲಿ ಎಳ್ಳೆಣ್ಣೆಯನ್ನು ಹಾಕಿ ಅದರಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಬ್ರಾಹ್ಮಣನಿಗೆ ದಾನ ಕೊಡಬೇಕು. ಲಕ್ಷಹೋಮ ಅಥವಾ ರುದ್ರಜಪ ಇವೆರಡರಲ್ಲಿ ಯಾವುದಾದರೂ ಒಂದರಿಂದ ಶಾಂತಿಕರ್ಮವನ್ನು ಮಾಡಬೇಕು. ಅಥವಾ ಕಲಶದಲ್ಲಿ ಯಮಪ್ರತಿಮೆಯನ್ನು ಪೂಜಿಸಿ, ಸ್ಥಾಲೀಪಾಕದಲ್ಲಿ ಹೇಳಿದಂತೆ ಅಗ್ನಿಪ್ರತಿಷ್ಠಾಪನೆ, ಅನ್ವಾಧಾನ ಮುಂತಾದ ಎಲ್ಲ ಹೋಮಕಾರ್ಯಗಳನ್ನು ವಿಧಿವತ್ತಾಗಿ ಮಾಡಿ, ಚರುವನ್ನು ತಯಾರಿಸಿ **"ಯಮಾಯ"**

Scanned by CamScanner

Scanned with CamScanner

ಸಮಾಪ್ಯ ಕೃಷ್ಣ ವಸ್ತ್ರಯುತಾಂ ಕೃಷ್ಣಾಂ ಗಾಂ ಯಮೋ ಮೇ ಪ್ರೀಯತಾಮಿತಿ ಬ್ರಾಹ್ಮಣಾಯ ದದ್ಯಾತ್ ॥

॥ ಇತಿ ಪಂಚಕತ್ರಿಪಾದಸಾಧಾರಣಶಾಂತಿಃ ॥

ಮುಂತಾಗಿ **"ಚಿತ್ರಗುಪ್ತಾಯ"** ಎಂಬಲ್ಲಿ ವರೆಗಿನ ಹದಿನಾಲ್ಕು ನಾಮಮಂತ್ರಗಳಿಂದ ಹದಿನಾಲ್ಕು ಚರ್ವಾಹುತಿಗಳನ್ನು ಕೊಡಬೇಕು. ನಂತರ ಹೋಮ ಶೇಷವನ್ನು ಪೂರಯಿಸಿ, ಕಪ್ಪು ಬಣ್ಣದ ಹಸುವನ್ನು ಕಪ್ಪು ಬಟ್ಟೆ ಹೊದಿಸಿ, **"ಯಮೋಮೇ ಪ್ರೀಯತಾಂ"** ಎಂದು ಹೇಳಿ ಬ್ರಾಹ್ಮಣನಿಗೆ ದಾನ ಕೊಡಬೇಕು.

(ಇದು ಪಂಚಕತ್ರಿಪಾದಶಾಂತಿಗಳ ಸಾಧಾರಣ ಕ್ರಮ.)

॥ ಪಂಚಕತ್ರಿಪಾದಸಾಧಾರಣಶಾಂತಿ ಸಮಾಪ್ತ ॥

Scanned by CamScanner

Scanned with CamScanner

॥ ಪಂಚಕಶಾಂತಿಃ ॥

ಶ್ರೀಃ ॥ ದೇಶಕಾಲೌ ಸಂಕೀರ್ತ್ಯ ಅಮುಕಗೋತ್ರಸ್ಯಾಮುಕಶರ್ಮಣಃ ಪಂಚಕನಕ್ಷತ್ರಮರಣಾಧೋಗತಿದೋಷಶುದ್ಧಿಪೂರ್ವಕಂ ಮಮಾಶುಭತ್ವಪರಿಹಾ-ರಾರ್ಥಂ ವಂಶಾರಿಷ್ಟವಿನಾಶಾರ್ಥಂ ಚ ಶ್ರೀಪರಮೇಶ್ವರಪ್ರೀತಯೇ ಪಂಚಕ-ಶಾಂತಿಮಹಂ ಕರಿಷ್ಯೇ ॥ ತದಂಗತ್ವೇನಾಚಾರ್ಯವರಣಂ ॥ ಆಚಾರ್ಯೋ ಯದತ್ರೇತ್ಯಾದಿ ವರದನಾಮಾಗ್ನಿಪ್ರತಿಷ್ಠಾಂತಂ ಕೃತ್ವಾ ಪೂರ್ವೇ ಕಲಶಾನ್ ಸ್ಥಾಪಯೇತ್ ॥ ಮಹೀದ್ಯೌರಿತಿ ಮಂತ್ರಾವೃತ್ತ್ಯಾ ಪಂಚಕಲಶೇಷು ಪಂಚ ಸುವರ್ಣಪ್ರತಿಮಾಃ ಸಂಸ್ಥಾಪ್ಯ ತತ್ರ ಯಮಾಯ ಸೋಮಮಿತಿ ಮಧ್ಯೇ ಇಮಾ ರುದ್ರಾಯೇತಿ ಪೂರ್ವೇ ಅಪನಃ ಶೋಶುಚದಘಮಿತಿ ದಕ್ಷಿಣೇ ಇದಂ ವಿಷ್ಣುರಿತಿ ಪಶ್ಚಿಮೇ ಇಂದ್ರತ್ವಾ ವೃಷಭಮಿತ್ಯುತ್ತರೇ ॥ ಧನಿಷ್ಠಾದಿದೇವತಾಶ್ಚ ಜ್ಮಯಾ ಅತ್ರ............ತತ್ವಾಯಾಮಿ..............ಅಭಿಯೇ ಮಿಥೋ..............ಉತನೋಹಿ-ರ್ಬುಧ್ನ್ಯಃ..............ಪೂಷಾಗಾ ಅನ್ವೇತು ನಃ ॥ ಅತ್ರೈವ ಯಮಾದಯಃ ॥

ಪಂಚಕಶಾಂತಿ:– ಆಚಮನ ಪ್ರಾಣಾಯಾಮ ದೇಶಕಾಲ ಸಂಕೀರ್ತನಾದಿಗಳನ್ನು ಮಾಡಿ **"ಅಮುಕಗೋತ್ರಸ್ಯಾಮುಕಶರ್ಮಣ.......ಪಂಚಕಶಾಂತಿಮಹಂ ಕರಿಷ್ಯೇ"** ಎಂದು ಸಂಕಲ್ಪ ಮಾಡಬೇಕು. ಬಳಿಕ ಗ್ರಹಯಜ್ಞದಲ್ಲಿ ವಿವರಿಸಿದಂತೆ ಆಚಾರ್ಯಾದಿ ವರಣವನ್ನು ಮಾಡಿ ಆಚಾರ್ಯನು **"ಯದತ್ರ..."** ಮುಂತಾಗಿ ತಾನು ಮಾಡಬೇಕಾದ ಕರ್ಮಭಾಗಗಳನ್ನೆಲ್ಲ ಕ್ರಮವತ್ತಾಗಿ ಪೂರಯಿಸಿ **"ವರದ"** ಎಂಬ ಅಗ್ನಿಯನ್ನು ಪ್ರತಿಷ್ಠಾಪಿಸಬೇಕು. **"ಮಹೀದ್ಯೌ..."** ಮುಂತಾದ ಕಲಶಸ್ಥಾಪನೆಯ ಮಂತ್ರಗಳನ್ನು ಐದು ಬಾರಿ ಪ್ರತ್ಯೇಕವಾಗಿ ಆವರ್ತನೆ ಮಾಡಿ ಐದು ಕಲಶಗಳನ್ನು ಸ್ಥಾಪಿಸಿ, ಅವುಗಳಲ್ಲಿ ಐದು ಸುವರ್ಣಪ್ರತಿಮೆಗಳನ್ನು ಇಟ್ಟು **"ಯಮಾಯ ಸೋಮಂ...."** ಮುಂತಾಗಿ **"ಇಂದ್ರ ತ್ವಾ...."** ಎಂಬಲ್ಲಿ ವರೆಗಿನ ಐದು ಮಂತ್ರಗಳಿಂದ ಮಧ್ಯದಿಂದ ತೊಡಗಿ ಉತ್ತರದ ವರೆಗೆ ಯಮ, ರುದ್ರ, ಅಗ್ನಿ, ವಿಷ್ಣು, ಇಂದ್ರಾದಿಗಳನ್ನು ಆವಾಹಿಸಬೇಕು. ಅಂತೆಯೇ **"ಜ್ಮಯಾ ಅತ್ರ...."** ಮುಂತಾದ ಐದು ಮಂತ್ರಗಳಿಂದ ಧನಿಷ್ಠಾದಿ ಐದು ನಕ್ಷತ್ರದೇವತೆಗಳನ್ನೂ ಆವಾಹಿಸಬೇಕು. ಬಳಿಕ ಯಮ ಮುಂತಾಗಿ

Scanned by CamScanner

Scanned with CamScanner

ಯಮಂ ಧರ್ಮರಾಜಂ ಮೃತ್ಯುಂ ಅಂತಕಂ ವೈವಸ್ವತಂ ಕಾಲಂ ಸರ್ವಭೂತ-ಕ್ಷಯಂ ಔದುಂಬರಂ ದಧ್ನಂ ನೀಲಂ ಪರಮೇಷ್ಠಿನಂ ವೃಕೋದರಂ ಚಿತ್ರಂ ಚಿತ್ರಗುಪ್ತಂ ಆವಾಹ್ಯ ತೈರೇವ ಮಂತ್ರೈಃ ಷೋಡಶೋಪಚಾರೈಃ ಸಂಪೂಜ್ಯ ಪೂರ್ವೋಕ್ತಾನಿ ಶಾಂತಿಸೂಕ್ತಾನಿ ಜಪ್ತ್ವಾ ಉತ್ತರೇ ಗ್ರಹಾನ್ ಕಲಶಂ ಚ ಸಂಪೂಜ್ಯ ಪ್ರಾರ್ಥ್ಯಾನ್ವಾದಧ್ಯಾತ್ ॥

ಚಕ್ಷುಷೀ ಆಜ್ಯೇನೇತ್ಯಂತಮುಕ್ತ್ವಾ ಅತ್ರ ಪ್ರಧಾನಂ ನವಗ್ರಹಾನ್ ಸಮಿತ್ತಿಲೈಃ ಪೂರ್ವೋಕ್ತಸಂಖ್ಯಾಕೈಃ ॥ ಪ್ರಧಾನಂ ಪಂಚನಕ್ಷತ್ರದೇವತಾಃ ಸಮಿತ್ತಿಲಾಜ್ಯಾಹುತಿಭಿಃ ಪ್ರತಿದ್ರವ್ಯಂ ೧೦೮ ಯಮಾದಿ ಚತುರ್ದಶ ಪ್ರತ್ಯೇಕಂ ೮ ಶೇಷೇಣೇತಿ ಪರಿಸಮೂಹನಾದಿ ತತ್ತದ್ದೇವತಾಯೈ ತೂಷ್ಣೀಂ ನಿರ್ವಾಪಾದಿ ಕೃತ್ವಾ ದ್ರವ್ಯತ್ಯಾಗಂ ಕೃತ್ವಾ ಪೂರ್ವಮಂತ್ರೈರ್ಹೋಮಂ ಕುರ್ಯಾತ್ ॥ ತತಃ ಸ್ವಿಷ್ಟಕೃದಾದಿ ಹೋಮಂ ಸಮಾಪ್ಯ ಬಲಿದಾನಂ ಕೃತ್ವಾ ಪೂರ್ಣಾಹುತಿಂ ಜುಹುಯಾತ್ ॥ ದೇವತಾ ವಿಸೃಜ್ಯ ತತಃ ಶಾಂತಿಪಾಠಃ ಆಜ್ಯಾವೇಕ್ಷಣಂ ಬ್ರಹ್ಮವಿಷ್ಣುಮಹೇಶೇಂದ್ರವರುಣಪ್ರೀತಯೇ ಪ್ರಿಯಂಗುಗೋಧೂಮಮಾಷ-

---

ಚಿತ್ರಗುಪ್ತ ಎಂಬಲ್ಲಿ ವರೆಗೆ ೧೪ ನಾಮಮಂತ್ರಗಳಿಂದ ಆಯಾ ದೇವತೆಯನ್ನು ಆವಾಹಿಸಿ ಅದೇ ನಾಮಮಂತ್ರಗಳಿಂದ ಆ ದೇವತೆಗಳಿಗೆ ಷೋಡಶೋಪಚಾರ ಪೂಜೆ ಗಳನ್ನು ಸಮರ್ಪಿಸಿ, **"ಆ ನೋ ಭದ್ರಾಃ...."** ಮುಂತಾದ ಶಾಂತಿಸೂಕ್ತಗಳನ್ನು ಜಪಿಸಬೇಕು. ಆಮೇಲೆ ಉತ್ತರದಿಕ್ಕಿನಲ್ಲಿ ನವಗ್ರಹಗಳನ್ನೂ ಕಲಶವನ್ನೂ ಸ್ಥಾಪಿಸಿ, ಪೂಜಿಸಿ ಅನ್ವಾಧಾನವನ್ನು ಮಾಡಬೇಕು.

ಅನ್ವಾಧಾನದಲ್ಲಿ **"ಚಕ್ಷುಷೀ ಆಜ್ಯೇನ"** ಎಂಬಲ್ಲಿ ವರೆಗೆ ಹೇಳಿ **"ಅತ್ರಪ್ರಧಾನಂ"** ಎಂದು **"ನವಗ್ರಹಾನ್ ಸಮಿತ್ತಿಲೈಃ..."** ಎಂಬುದಾಗಿ ನಿರ್ಣಯಿಸಿ ನಿಶ್ಚಿತವಾದ ಸಂಖ್ಯೆಯಿಂದಲೂ, ಐದು ನಕ್ಷತ್ರದೇವತೆಗಳಿಗೆ ಸಮಿತ್ತಿಲಾಜ್ಯಾಹುತಿಗಳನ್ನು ೧೦೮ ಸಂಖ್ಯೆಯಿಂದಲೂ, ಯಮಾದಿ ೧೪ ದೇವತೆಗಳಿಗೆ ಎಂಟೆಂಟು ಆಹುತಿಗಳನ್ನೂ ಸಂಕಲ್ಪಿಸಿ **"ಶೇಷೇಣ ಸ್ವಿಷ್ಟಕೃತ...."** ಎಂದು ಹೇಳಬೇಕು. ಬಳಿಕ ಪರಿಸಮೂಹನ ಪರ್ಯುಕ್ಷಣಾದಿಗಳನ್ನು ಮಾಡಿ ಮಂತ್ರರಹಿತವಾಗಿ ಚರುನಿರ್ವಾಪವನ್ನೂ ಮಾಡಿ ಹೋಮ ಕಾರ್ಯವನ್ನು ಪೂರಯಿಸಬೇಕು. ನಂತರ ಸ್ವಿಷ್ಟಕೃದಾದಿ ಹೋಮಶೇಷವನ್ನು ಮಾಡಿ ಮೇಲೆ ಹೇಳಿದ ಎಲ್ಲ ದೇವತೆಗಳಿಗೂ ಬಲಿದಾನವನ್ನೂ ಸಮರ್ಪಿಸಿ, ಪೂರ್ಣಾಹುತಿಯನ್ನು ಕೊಡಬೇಕು. ದೇವತೆಗಳನ್ನು ವಿಸರ್ಜಿಸಿ ಶಾಂತಿಪಾಠ, ಆಜ್ಯಾವೇಕ್ಷಣಾದಿಗಳನ್ನು ಮಾಡಿ ಬ್ರಹ್ಮ ವಿಷ್ಣು ಮುಂತಾದ ದೇವತೆಗಳ

Scanned by CamScanner

Scanned with CamScanner

ಮುದ್ಗಯವವ್ರೀಹಿತಿಲಸುವರ್ಣಾನಿ ದದ್ಯಾತ್ ॥ ತತೋ ನಾರಿಕೇಲೇನಾರ್ಘ್ಯಂ ದದ್ಯಾತ್ ॥

॥ ಇತಿ ಪಂಚಕಶಾಂತಿಃ ॥

ಪ್ರೀತ್ಯರ್ಥವಾಗಿ ಪ್ರಿಯಂಗು ಮುಂತಾದ ಎಂಟು ದಾನಗಳನ್ನು ಕೊಡಬೇಕು. ನಂತರ ಒಂದು ತೆಂಗಿನಕಾಯಿಯನ್ನು ಒಡೆದು ಅದರಿಂದ ಅರ್ಘ್ಯಪ್ರದಾನವನ್ನು ಮಾಡಬೇಕು.

॥ ಪಂಚಕಶಾಂತಿ ಸಮಾಪ್ತ ॥

Scanned by CamScanner

Scanned with CamScanner

೨೦

॥ ತ್ರಿಪಾದಶಾಂತಿಃ ॥

ಶ್ರೀಃ ॥ ದೇಶಕಾಲೌ ಸಂಕೀರ್ತ್ಯ ಅಮುಕಸ್ಯ ತ್ರಿಪಾದನಕ್ಷತ್ರಮರಣಾಧೋಗತಿದೋಷಶುದ್ಧಿದ್ವಾರಾ ಸ್ವಸ್ಯಾಶುಭತ್ವಪರಿಹಾರಾರ್ಥಂ ವಂಶಾನಿಷ್ಟವಿನಾಶಾರ್ಥಂ ಚ ಸನವಗ್ರಹಾಂ ತ್ರಿಪಾದಶಾಂತಿಮಹಂ ಕರಿಷ್ಯೇ ॥ ತದಂಗತ್ವೇನಾಚಾರ್ಯಾದೀನ್ ವೃಣುಯಾತ್ ॥ ಅಥಾಚಾರ್ಯಃ ಕರ್ಮ ಸಂಕಲ್ಪ್ಯ ಯದತ್ರಸಂಸ್ಥಿತಮಿತ್ಯಾದಿ ಅಗ್ನಿಪ್ರತಿಷ್ಠಾಂತಂ ಕೃತ್ವಾ ಕಲಶತ್ರಯಂ ಮಹೀದ್ಯೌರಿತ್ಯಾದಿ ವಿಧಿನಾ ಸ್ಥಾಪ್ಯ ಅಬ್ದೈವತಮಂತ್ರೈಃ (ಆಪೋಹಿಷ್ಠಾ............೯ ಸಮುದ್ರಜ್ಯೇಷ್ಠಾ ೪ ತ್ರಾಯಂತಾಮಿಹ............೩ ಇತ್ಯೇತೈಃ) ಕಲಶಾನಭಿಮಂತ್ರ್ಯ ತತ್ರ ದೇವತಾ ಆವಾಹಯೇತ್ ॥ ಕೃತ್ತಿಕಾಯಾಃ ಅಗ್ನಿರ್ದೇವತಾ ಅಗ್ನಿಂ ದೂತಮಿತಿ ಸಂಪೂಜ್ಯ ಭರಣ್ಯಾ ಯಮೋ ದೇವತಾ ಯಮಾಯ ಸೋಮಮಿತಿ ಅಧಿದೇವತಾಂ ಸಂಪೂಜ್ಯ ರೋಹಿಣ್ಯಾಃ ಪ್ರಜಾಪತಿರ್ದೇವತಾ ಪ್ರಜಾಪತೇ ನ ತ್ವದೇತಾ..............ಇತಿ ಪ್ರತ್ಯಧಿದೇವತಾಂ ಸಂಪೂಜ್ಯ ॥ ಪುನರ್ವಸೋ ಅದಿತಿರ್ದೇವತಾ ಅದಿತಿರ್ದ್ಯೌರಿತಿ ಸಂಪೂಜ್ಯ ಆರ್ದ್ರಾಯಾಃ ರುದ್ರೋ ದೇವತಾ ಕದ್ರುದ್ರಾಯೇತಿ ಅಧಿದೇವತಾಂ ಪುಷ್ಯದೇವತಾ ಬೃಹಸ್ಪತಿಃ ಬೃಹಸ್ಪತೇ ಅತಿಯದಿತಿ ಪ್ರತ್ಯಧಿದೇವತಾಂ ಚ ಸಂಪೂಜ್ಯ ॥ ಉತ್ತರಾಯಾಃ ಅರ್ಯಮಾ ದೇವತಾ ಅರ್ಯಮಾಣೋ ಅದಿತಿರ್ಯ........... ಇತಿ ಸಂಪೂಜ್ಯ

ತ್ರಿಪಾದಶಾಂತಿ:- ಅಚಮನ ಪ್ರಾಣಾಯಾಮ ದೇಶಕಾಲಕೀರ್ತನಾದಿಗಳನ್ನು ಮಾಡಿ **"ಅಮುಕಸ್ಯ... ತ್ರಿಪಾದಶಾಂತಿಮಹಂ ಕರಿಷ್ಯೇ"** ಎಂದು ಸಂಕಲ್ಪಿಸಿ ಆಚಾರ್ಯವರಣ ಮಾಡಿದ ಮೇಲೆ ಆಚಾರ್ಯನು **"ಯದತ್ರಸಂಸ್ಥಿತಂ"** ಮುಂತಾಗಿ ಅಗ್ನಿಪ್ರತಿಷ್ಠಾಪನೆಯ ವರೆಗಿನ ಕರ್ಮಗಳನ್ನು ಮಾಡಿಮುಗಿಸಿ **"ಮಹೀದ್ಯೌ...."** ಮುಂತಾದ ಮಂತ್ರಗಳಿಂದ ಮೂರು ಕಲಶಗಳನ್ನು ಸ್ಥಾಪಿಸಿ, **"ಆಪೋಹಿಷ್ಠಾ"** ಮುಂತಾದ ಮೂರು ಸೂಕ್ತಗಳಿಂದ ಆ ಕಲಶಗಳನ್ನು ಅಭಿಮಂತ್ರಿಸಿ ಅವುಗಳಲ್ಲಿ ಈ ಕೆಳಗಿನಂತೆ ನಕ್ಷತ್ರದೇವತೆಗಳನ್ನು ಆವಾಹಿಸಬೇಕು.

Scanned by CamScanner

Scanned with CamScanner

ಪೂರ್ವಾಯಾಃ ಭಗೋ ದೇವತಾ ಭಗ ಏವ ಭಗವಾನಿತಿ ಅಧಿದೇವತಾಂ ಹಸ್ತಸ್ಯ ಸೂರ್ಯೋ ದೇವತಾ ಉದುತ್ಯಮಿತಿ ಪ್ರತ್ಯಧಿದೇವತಾಂ ॥ ವಿಶಾಖಾಯಾಃ ಇಂದ್ರಾಗ್ನೀ ದೇವತೇ ತದಿಂದ್ರಾಗ್ನೀ ಇತಿ ಸ್ವಾತ್ಯೃಕ್ಷಸ್ಯ ವಾಯುರ್ದೇವತಾ ತವ ವಾಯ ಇತ್ಯಧಿದೇವತಾಂ ಅನುರಾಧಾಯಾಃ ಮಿತ್ರೋ ದೇವತಾ ಮಿತ್ರೋಜನಾನಿತಿ ಪ್ರತ್ಯಧಿದೇವತಾಂ ॥ ಉತ್ತರಾಷಾಢಾಯಾಃ ವಿಶ್ವೇದೇವಾ ದೇವತಾ ವಿಶ್ವೇದೇವಾಸ ಆಗತೇತಿ ಸಂಪೂಜ್ಯ ಪೂವಾಷಾಢಾಯಾ ವರುಣೋ ದೇವತಾ ಯತ್ಕಿಂಚೇದಂ ವರುಣೇತ್ಯಧಿದೇವತಾಂ ಶ್ರವಣಸ್ಯ ವಿಷ್ಣುರ್ದೇವತಾ ಇದಂ ವಿಷ್ಣುರಿತಿ ಪ್ರತ್ಯಧಿದೇವತಾಂ ॥ ಪೂರ್ವಾಭಾದ್ರಪದಾಯಾಃ ಅಜೈಕಪಾದೋ ದೇವತಾ ಸಮುದ್ರಃ ಸಿಂಧೂರಜೋ.........ಇತಿ ಸಂಪೂಜ್ಯ ಶತತಾರಕಾಯಾ ವರುಣೋ ದೇವತಾ ಇಮಂ ಮೇ ವರುಣೇತ್ಯಧಿದೇವಂ ಉತ್ತರಾಭಾದ್ರಪದಾಯಾಃ ಅಹಿರ್ಬುಧ್ನ್ಯೋ ದೇವತಾ ಅಭಿ ಯೇ ಮಿಥೋವನುಷಃ ಇತಿ ಪ್ರತ್ಯಧಿದೇವತಾಂ ಆವಾಹ್ಯ ತತ್ತನ್ಮಂತ್ರೈಃ ಸಂಪೂಜ್ಯ ಶಾಂತಿಸೂಕ್ತಾನಿ ಜಪೇತ್ ॥ ತದ್ಯಥಾ ॥ ಯತ್ತೇ ಯಮಂ........ ಪರೇಯಿವಾಂಸಂ ....ಇಮಾ ರುದ್ರಾಯ ಸ್ಥಿರ..............ಅಪನಃ ಶೋಶುಚದಘ........... ವಿಷ್ಣೋರ್ನುಕಂ...........ಆಶುಃ ಶಿಶಾನೋ ॥ ಶ್ರೀಸೂಕ್ತಂ ಜಪ್ತ್ವಾ ಯಮಾದೀನಾವಾಹಯೇತ್ ॥ ಯಮಂ ಧರ್ಮರಾಜಂ ಮೃತ್ಯುಂ ಅಂತಕಂ ವೈವಸ್ವತಂ ಕಾಲಂ ಸರ್ವಭೂತಕ್ಷಯಕರಂ ಔದುಂಬರಂ ದಧ್ನಂ ನೀಲಂ ಪರಮೇಷ್ಠಿನಂ ವೃಕೋದರಂ ಚಿತ್ರಂ ಚಿತ್ರಗುಪ್ತಂ ಆವಾಹ್ಯ ಸಂಪೂಜ್ಯ ತದುತ್ತರತೋ ಗ್ರಹಾನ್ ಸಂಪೂಜ್ಯ ಅನ್ವಾದಧ್ಯಾತ್ ॥ ಪ್ರಧಾನಂ ಪ್ರತಿದ್ರವ್ಯಂ ಅಷ್ಟೋತ್ತರಶತಸಂಖ್ಯಾಕಾಭಿಃ ಶೇಷೇಣ ಸ್ವಿಷ್ಟಕೃತಮಿತ್ಯಾದಿ ಹೋಮಶೇಷಂ ಸಮಾಪ್ಯ ಬಲಿದಾನಂ ಕೃತ್ವಾ ಪೂರ್ಣಾಹುತಿಂ ಜುಹುಯಾತ್ ॥ ಆಚಾರ್ಯಾಯ

Scanned by CamScanner

ಧೇನುಂ ಋತ್ವಿಗ್ಭ್ಯೋ ಯಥಾಶಕ್ತಿ ದಕ್ಷಿಣಾಂ ದತ್ವಾ ತಾನ್ ಸಂತೋಷ್ಯ ಅಂತೇ ಶಾಂತಿಪಾಠಃ ಕಾರ್ಯಃ ॥ ಬ್ರಾಹ್ಮಣಭೋಜನಸಂಕಲ್ಪಃ ॥ ತತೋ ಮಿತ್ರೈಃಸಹ ಭುಂಜೀತ ॥

॥ ಇತಿ ತ್ರಿಪಾದಶಾಂತಿಃ ॥

ತ್ರಿಪಾದನಕ್ಷತ್ರ	ಉಪನಕ್ಷತ್ರಗಳು	ದೇವತೆ	ಮಂತ್ರ
೧. ಕೃತ್ತಿಕಾ	–	ಅಗ್ನಿ	ಅಗ್ನಿಂ ದೂತಂ
	೧. ಭರಣಿ	ಯಮ (ಅಧಿ)	ಯಮಾಯ ಸೋಮಂ
	೨. ರೋಹಿಣಿ	ಪ್ರಜಾಪತಿ (ಪ್ರತ್ಯಧಿ)	ಪ್ರಜಾಪತೇ ನತ್ವ
೨. ಪುನರ್ವಸು	–	ಅದಿತಿ	ಅದಿತಿರ್ದ್ಯೌ
	೧. ಆರ್ದ್ರಾ	ರುದ್ರ (ಅಧಿ)	ಕದ್ರುದ್ರಾಯ
	೨. ಪುಷ್ಯ	ಬೃಹಸ್ಪತಿ (ಪ್ರತ್ಯಧಿ)	ಬೃಹಸ್ಪತೇ ಅತಿಯ
೩. ಉತ್ತರಾ	–	ಅರ್ಯಮಾ	ಅರ್ಯಮಾಣೋ
	೧. ಪೂರ್ವಾ	ಭಗ (ಅಧಿ)	ಭಗ ಏವ ಭಗವಾನ್
	೨. ಹಸ್ತಾ	ಸೂರ್ಯ (ಪ್ರತ್ಯಧಿ)	ಉದುತ್ಯಂ ಜಾತವೇದಸಂ
೪. ವಿಶಾಖಾ	–	ಇಂದ್ರಾಗ್ನೀ	ಇಂದ್ರಾಗ್ನೀ
	೧. ಸ್ವಾತಿ	ವಾಯು (ಅಧಿ)	ತವ ವಾಯ
	೨. ಅನುರಾಧಾ	ಮಿತ್ರ (ಪ್ರತ್ಯಧಿ)	ಮಿತ್ರೋ ಜನಾನ್ಯಾ
೫. ಉತ್ತರಾಷಾಢಾ	–	ವಿಶ್ವೇದೇವಾಃ	ವಿಶ್ವೇದೇವಾಸ ಆಗತ
	೧. ಪೂರ್ವಾಷಾಢಾ	ವರುಣ (ಅಧಿ)	ಯತ್ಕಿಂಚೇದಂ
	೨. ಶ್ರವಣಾ	ವಿಷ್ಣು (ಪ್ರತ್ಯಧಿ)	ಇದಂ ವಿಷ್ಣು
೬. ಪೂರ್ವಾಭಾದ್ರಾ	–	ಅಜೈಕಪಾತ್	ಸಮುದ್ರಃ ಸಿಂಧೂ ರಜೋ
	೧. ಶತಭಿಷಾ	ವರುಣ (ಅಧಿ)	ಇಮಂ ಮೇ ವರುಣ
	೨. ಉತ್ತರಾಭಾದ್ರಾ	ಅಹಿರ್ಬುಧ್ನ್ಯ (ಪ್ರತ್ಯಧಿ)	ಅಭಿಯೇಮಿಥೋ

"ಯತ್ತೇ ಯಮಂ...." ಮುಂತಾಗಿ ಶಾಂತಿಸೂಕ್ತಗಳನ್ನು ಜಪಿಸಿ, **'ಯಮಂ'** ಎಂಬಲ್ಲಿಂದ ಮೊದಲ್ಗೊಂಡು **'ಚಿತ್ರಗುಪ್ತಂ'** ಎಂಬಲ್ಲಿ ವರೆಗೆ ೧ಳ ದೇವತೆಗಳನ್ನು ಆವಾಹಿಸಿ ಪೂಜಿಸಬೇಕು. ಉತ್ತರದಿಕ್ಕಿನಲ್ಲಿ ನವಗ್ರಹಗಳನ್ನು ಆವಾಹಿಸಿ, ಪೂಜಿಸಿ, ಅನ್ವಾಧಾನಮಾಡಿ ಅಷ್ಟೋತ್ತರ ಸಂಖ್ಯೆಯಲ್ಲಿ ಪ್ರಧಾನ ಆಹುತಿಗಳನ್ನು ಪಲಾಶಸಮಿತ್ತು ತಿಲ ಮತ್ತು ಚರುಗಳಿಂದ ಕೊಟ್ಟು, ಅದರ ದಶಾಂಶದಷ್ಟು ಅಧಿದೇವತೆ ಪ್ರತ್ಯಧಿದೇವತೆಗಳಿಗೂ ಕೊಟ್ಟು ಯಮಾದಿಗಳಿಗೆ ಎಂಟೆಂಟು ಆಹುತಿಗಳನ್ನೂ ಕೊಟ್ಟು ಸ್ವಿಷ್ಟಕೃದಾದಿ ಹೋಮಶೇಷವನ್ನೂ ಬಲಿದಾನಾದಿಗಳನ್ನೂ ಪೂರಯಿಸಿ ಆಚಾರ್ಯನಿಗೆ ಗೋದಾನ, ಋತ್ವಿಜರಿಗೆ ದಕ್ಷಿಣಾದಿಗಳನ್ನು ಕೊಡಬೇಕು.

॥ ತ್ರಿಪಾದಶಾಂತಿಃ ಸಮಾಪ್ತ ॥

Scanned by CamScanner

Scanned with CamScanner

॥ ವೃಷೋತ್ಸರ್ಗಃ ॥

ಶ್ರೀಃ ॥ ಅಯಂ ಗೃಹೇ ನ ಕಾರ್ಯಃ ॥ ಗೋಷ್ಠಾದಾವಿತರತ್ರ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ ಪ್ರಾಚೀನಾವೀತೀ ಅಮುಕ-ಗೋತ್ರಸ್ಯಾಮುಕಶರ್ಮಣಃ ಪ್ರೇತಸ್ಯ ಪ್ರೇತತ್ವನಿವೃತ್ತ್ಯೋತ್ತಮಲೋಕ-ಪ್ರಾಪ್ತ್ಯರ್ಥಂ ವೃಷೋತ್ಸರ್ಗಂ ಕರಿಷ್ಯೇ ಇತಿ ಸಂಕಲ್ಪ್ಯ ॥ ಸ್ಥಂಡಿಲಾದಿ ಕೃತ್ವಾ ॥ ಅಧ್ವರನಾಮಾನಮಗ್ನಿಂ ಪ್ರತಿಷ್ಠಾಪ್ಯ ಸಮಿದ್ದ್ವಯಮಾದಾಯ ಚಕ್ಷುಷ್ಯಂತೇ ರುದ್ರಂ ಚರುಣಾ ಸೋಮಂ ಪಾಯಸೇನ ಇಂದ್ರಂ ಯಾವಕೇನ ಯಕ್ಷ್ಯೇ ಶೇಷೇಣ ಸ್ವಿಷ್ಟಕೃತಮಿತ್ಯಾದಿ ಪರಿಸಮೂಹನಾದಿ ಪೂರ್ಣಪಾತ್ರನಿಧಾನಾಂತಂ ವಿಧಾಯ ತೂಷ್ಣೀಂ ನಿರ್ವಾಪಾದಿ ಕ್ರಮೇಣ ಹವಿಸ್ತ್ರಯಂ ಸಂಪಾದ್ಯ ಜುಹು-ಯಾತ್ ॥ ಕದ್ರುದ್ರಾಯೇತಿ ಘೌರಃ ಕಣ್ವೋ ರುದ್ರೋ ಗಾಯತ್ರೀ ॥ ರೌದ್ರ-ಚರುಹೋಮೇ ವಿನಿಯೋಗಃ ॥ ಓಂ ಕದ್ರುದ್ರಾಯ ಪ್ರಚೇತಸೇ ಮೀಢುಷ್ಟ-ಮಾಯತವ್ಯಸೇ ॥ ವೋಚೇಮ ಶಂತಮಂ ಹೃದೇ ಸ್ವಾಹಾ ॥ ರುದ್ರಾಯೇದಂ

ವೃಷೋತ್ಸರ್ಗ:- ಈ ಕರ್ಮಭಾಗವನ್ನು ಮನೆಯ ಒಳಗೆ ಮಾಡಬಾರದು. ಹಟ್ಟಿ ಅಥವಾ ಬೇರೆ ಸ್ಥಳದಲ್ಲಿ ಕುಳಿತು ಆಚಮನ ಪ್ರಾಣಾಯಾಮ ದೇಶಕಾಲ ಸ್ಮರಣಾದಿಗಳನ್ನು ಮಾಡಿ, **"ಅಮುಕಗೋತ್ರಸ್ಯಾಮುಕ.... ವೃಷೋತ್ಸರ್ಗಂ ಕರಿಷ್ಯೇ"** ಎಂದು ಸಂಕಲ್ಪ ಮಾಡಿ, ಸ್ಥಂಡಿಲವನ್ನು ನಿರ್ಮಿಸಿ, **"ಅಧ್ವರ"** ಎಂಬ ಅಗ್ನಿಯನ್ನು ಪ್ರತಿಷ್ಠಾಪಿಸಿ ಎರಡು ಸಮಿಧೆಗಳನ್ನು ಕೈಯಲ್ಲಿ ಹಿಡಿದು **'ಚಕ್ಷುಷೀ ಆಜ್ಯೇನ'** ಎಂಬಲ್ಲಿ ವರೆಗೆ ಹೇಳಿ **"ರುದ್ರಂ ಚರುಣಾ.... ಯಾವಕೇನ ಯಕ್ಷ್ಯೇ"** ಎಂದು ಅನ್ವಾಧಾನ ಮಾಡಬೇಕು. **"ಶೇಷೇಣ ಸ್ವಿಷ್ಟಕೃತ...."** ಇತ್ಯಾದಿ ಹೇಳಿ ಪರಿಸಮೂಹನ ಪರ್ಯುಕ್ಷಣಾದಿಗಳನ್ನು ಮಾಡಿ ಪೂರ್ಣಪಾತ್ರಾದಿಗಳನ್ನಿಟ್ಟು ನಿರ್ವಾಪ ಕ್ರಮದಿಂದ ಮೂರು ಭಾಗವಾಗಿ ಚರುದ್ರವ್ಯವನ್ನು ತಯಾರಿಸಬೇಕು. ಬಳಿಕ (೧) **ಕದ್ರುದ್ರಾಯ** (೨) **ಸೋಮೋ ಧೇನುಂ** (೩) **ಇಂದ್ರಂ ವೋ....** ಈ ಮೂರು ಮಂತ್ರಗಳಿಂದ ಆಹುತಿಗಳನ್ನು ಕೊಡಬೇಕು. ಕೇವಲ ನಾಮಮಂತ್ರಗಳಿಂದ ಆಹುತಿಗಳನ್ನು ಕೊಟ್ಟರೂ ಸಾಕೆಂದು ಕೆಲವರ ಅಭಿಪ್ರಾಯವಿದೆ. ಬಳಿಕ ಸ್ವಿಷ್ಟಕೃದಾದಿ ಹೋಮಶೇಷವನ್ನು ಪೂರಯಿಸಿ, ಬದುಕಿರುವ ಕರುವುಳ್ಳ

Scanned by CamScanner

ನ ಮಮ ॥ ೧ ॥ ಸೋಮೋ ಧೇನುಂ ಗೋತಮಃ ಸೋಮಸ್ತ್ರಿಷ್ಟುಪ್ ॥ ಸೌಮ್ಯಪಾಯಸಹೋಮೇ ವಿನಿಯೋಗಃ ॥ ಓಂ ಸೋಮೋ ಧೇನುಂ ಸೋಮೋ ಅರ್ವಂತಮಾಶುಂ ಸೋಮೋ ವೀರಂ ಕರ್ಮಣ್ಯಂ ದದಾತಿ ॥ ಸಾದನ್ಯಂ ವಿದಥ್ಯಂ ಸಭೇಯಂ ಪಿತೃಶ್ರವಣಂ ಯೋ ದದಾಶದಸ್ಮೈ ಸ್ವಾಹಾ ॥ ಸೋಮಾಯೇದಂ ನ ಮಮ ॥ ೨ ॥ ಇಂದ್ರಂ ವೋ ಮಧುಚ್ಛಂದಾ ಇಂದ್ರೋ ಗಾಯತ್ರೀ ॥ ಐಂದ್ರ ಯಾವಕಹೋಮೇ ವಿನಿಯೋಗಃ ॥ ಓಂ ಇಂದ್ರಂ ವೋ ವಿಶ್ವತಸ್ಪರಿಹವಾಮಹೇ ಜನೇಭ್ಯಃ ॥ ಅಸ್ಮಾಕಮಸ್ತು ಕೇವಲಃ ಸ್ವಾಹಾ ॥ ಇಂದ್ರಾಯೇದಂ ನ ಮಮ ॥ ೩ ॥ ಏಭಿರ್ಮಂತ್ರೈಃ ಯಥಾ ಕ್ರಮಂ ಹುತ್ವಾ ಸ್ವಿಷ್ಟಕೃದಾದಿ ಮಾರ್ಜನಾಂತಂ ಕುರ್ಯಾತ್ ॥ (ಅತ್ರ ಕೇಚಿದ್ರುದ್ರಾಯ ಸ್ವಾಹೇತ್ಯಾದಿನಾ ನಾಮಮಂತ್ರೈರೇವ ಹೋಮಮಾಹುಃ ॥) ತತೋ ದ್ವಿಹಾಯನಮೇಕಹಾಯನಂ ವಾ ಜೀವವತ್ಸಾಯಾಃ ಪಯಸ್ವಿನ್ಯಾಃ ಪುತ್ರಂ ನೀಲಾದಿವರ್ಣಂ ಯಥಾಲಾಭಂ ವಾ ಆನೀಯ ತತಶ್ಚತಸ್ರೋ ದ್ವೇ ಏಕಾಂ ಏಕವರ್ಷಾಧಿಕಾಂ ವತ್ಸತರೀಮಾನೀಯ ಗೋಸಹಿತವೃಷಸ್ಯ ಮಂತ್ರೈ-ರಭಿಷೇಕಃ ಕಾರ್ಯಃ ॥

ಆಪೋಹಿಷ್ಠೇತಿ ತಿಸೃಣಾಂ ಸಿಂಧುದ್ವೀಪ ಆಪೋ ಗಾಯತ್ರೀ ॥ ವೃಷ-ವತ್ಸತರ್ಯಭಿಷೇಕೇ ವಿನಿಯೋಗಃ ॥ ಕಯಾನ ಇತಿ ತಿಸೃಣಾಂ ಗೌತಮೋ ವಾಮದೇವ ಇಂದ್ರೋ ಗಾಯತ್ರೀ ತೃತೀಯಾಪಾದನಿಚೃತ್ ॥ ವೃಷವತ್ಸ-ತರ್ಯ......... ॥ ಓಂ ಆಪೋಹಿಷ್ಠಾ............॥ ೩ ॥ ಓಂ ಕಯಾನಶ್ಚಿತ್ರ ಆಭುವ ದೂತೀ ಸದಾವೃಧಃ ಸಖಾ ॥ ಕಯಾಶಚಿಷ್ಠಯಾ ವೃತಾ ॥ ಕಸ್ತ್ವಾ-

---

ಹಾಲು ಕರೆಯುತ್ತಿರುವ ದನದ ಒಂದು ಅಥವಾ ಎರಡು ವರ್ಷ ಪ್ರಾಯದ ಒಂದು ಗಂಡುಕರುವನ್ನೂ ಒಂದು ಹೆಣ್ಣು ಕರುವನ್ನೂ ತಂದು ನಿಲ್ಲಿಸಿ ಈ ಕೆಳಗಿನ ಮಂತ್ರಗಳಿಂದ ಅಭಿಷೇಕ ಮಾಡಬೇಕು. **"ಆಪೋಹಿಷ್ಠಾ...."** ಮತ್ತು **"ಕಯಾನಶ್ಚಿತ್ರ..."** ಎಂಬ ಮಂತ್ರಗಳಿಂದ ಅಭಿಷೇಕ ಮಾಡಿ **"ವೃಷವತ್ಸರೀಭ್ಯಾಂ ನಮಃ...."** ಎಂದು ಆವಾಹಿಸಿ ಆಸನ ವಸ್ತ್ರಗಂಧಾದಿಗಳಿಂದ ಅವುಗಳನ್ನು ಚೆನ್ನಾಗಿ ಅಲಂಕರಿಸಿ, **"ಋಷಭಂ ಮಾಸಮಾನಾನಾಂ...."**

Scanned by CamScanner

Scanned with CamScanner

ಸತ್ಯೋ ಮದಾನಾಂ ಮಂಹಿಷ್ಠೋ ಮತ್ಸದಂಧಸಃ ॥ ದೃಹ್ಯಾಚಿದಾರುಜೇ ವಸು ॥ ಅಭೀಷುಣಃ ಸಖೀ ನಾಮವಿತಾ ಜರಿತೃಣಾಂ ॥ ಶತಂಭವಾಸ್ಯೂತಿಭಿಃ ॥ ವೃಷವತ್ಸತರೀಭ್ಯಾಂ ನಮಃ ವೃಷವತ್ಸಯೋರ್ವಾಹಯಾಮಿತ್ಯಾವಾಹ್ಯಾಸನಾದಿ-ವಸ್ತ್ರಗಂಧಾಕ್ಷತಮಾಲ್ಯಾದಿಭಿರ್ಯಥಾಶಕ್ತ್ಯಲಂಕೃತ್ಯ ॥ ಋಷಭಮಿತಿ ಪಂಚರ್ಚಸ್ಯ ಸೂಕ್ತಸ್ಯ ಋಷಭೋ ವಿರಾಡನುಷ್ಟುಪ್ ॥ ಅಂತ್ಯಾ ಮಹಾಪಂಕ್ತಿಃ ॥ ವೃಷಭೋಪಸ್ಥಾನೇ ವಿನಿಯೋಗಃ ॥ ಓಂ ಋಷಭಂ ಮಾಸಮಾನಾನಾಂ ಸಪತ್ನಾನಾಂ ವಿಷಾಸಹಿಂ ॥ ಹಂತಾರಂ ಶತ್ರೂಣಾಂ ಕೃಧಿ ವಿರಾಜಂ ಗೋಪತಿಂ ಗವಾಂ ॥ ಅಹಮಸ್ಮಿ ಸಪತ್ನಹೇಂದ್ರ ಇವಾರಿಷ್ಟೋ ಅಕ್ಷತಃ ॥ ಅಧಃ ಸಪತ್ನಾಮೇ ಪದೋರಿಮೇ ಸರ್ವೇ ಅಭಿಷ್ಠಿತಾಃ ॥ ಅತ್ರೈವ ವೋ ಪಿನಹ್ಯಾ-ಮ್ಯುಭೇ ಆರ್ತ್ನೀ ಇವಜ್ಯಯಾ ॥ ವಾಚಸ್ಪತೇ ನಿಷೇಧೇ ಮಾನ್ಯಥಾಮದಧರಂ ವದಾನ್ ॥ ಅಭಿಭೂರಹಮಾಗಮಂ ವಿಶ್ವಕರ್ಮೇಣ ಧಾಮ್ನಾ ॥ ಆವಶ್ಚಿತ್ತ-ಮಾವೋ ವ್ರತಮಾವೋ ಹಂಸಮಿತಿಂ ದದೇ ॥ ಯೋಗಕ್ಷೇಮಂ ವ ಆದಾ-ಯಾಹಂ ಭೂಯಾಸಮುತ್ತಮ ಆವೋಮೂರ್ಧಾನಮಕ್ರಮಿಂ ॥ ಅಧಸ್ಪದಾನ್ಮ ಉದ್ವದತ ಮಂಡೂಕಾಽ ಇವೋದಕಾನ್ಮಂಡೂಕಾ ಉದಕಾದಿವ ॥ ಇತಿ ಪಂಚರ್ಚಂ ಸೂಕ್ತಂ ಕೃತಾಂಜಲಿಪುಟೋ ಜಪೇತ್ ॥ ತತೋ ವೃಷಂ ಪ್ರದಕ್ಷಿಣಂ ಅಗ್ನಿಪೂರ್ವತ ಆನೀಯ ತಸ್ಯ ದಕ್ಷಿಣಬಾಹು ಮೂಲೇ ಸ್ಥಿಚಿ ಭಸ್ಮನಾ ತ್ರಿಶೂಲಾಕಾರಂ ವಾಮೇ ಚಕ್ರಾಕಾರಮಂಕಯಿತ್ವಾ ತದುಪರಿ ತಪ್ತ-

---

ಎಂಬ ಮಂತ್ರವನ್ನು ಕೈಜೋಡಿಸಿ ನಿಂತು ಹೇಳುತ್ತ ಉಪಸ್ಥಾನ ಮಾಡಬೇಕು. ಆಮೇಲೆ ಕರುವನ್ನು ಪ್ರದಕ್ಷಿಣಾಕಾರವಾಗಿ ಅಗ್ನಿಯ ಮುಂಭಾಗಕ್ಕೆ ತಂದು ಅದರ ಬಲಗೈಯ ಬುಡದಲ್ಲಿ ಭಸ್ಮದಿಂದ ತ್ರಿಶೂಲಾಕಾರವನ್ನೂ, ಎಡಗೈಯ ಮೂಲದಲ್ಲಿ ಚಕ್ರಾಕಾರವನ್ನೂ ಬರೆಯಬೇಕು. ತ್ರಿಶೂಲಾಕಾರವನ್ನು ಮಾತ್ರ ಬರೆದರೆ ಸಾಕೆಂದು ಕೆಲವರ ಅಭಿಪ್ರಾಯವಿದೆ. ಬಳಿಕ ಪೂರ್ವಮುಖವಾಗಿ ಅದನ್ನು ಬಿಡಬೇಕು. ಹಾಗೆ ಬಿಡುವಾಗ ಪ್ರತಿಯೊಂದು ದಿಕ್ಕಿಗೆ ಅಭಿಮುಖವಾಗಿ ನಿಂತಾಗಲೂ ಈ ಕೆಳಗಿನ ಸೂಕ್ತಗಳನ್ನು ಕ್ರಮವಾಗಿ ಹೇಳಬೇಕು.

Scanned by CamScanner

ಲೋಹೇನ ಚಿಹ್ನಂ ಕಾರಯೇತ್ ॥ ಪ್ರಾಂಚಃ ಕೇಚನ ತ್ರಿಶೂಲಾಂಕನಮಾತ್ರ-
ಮಿಚ್ಛಂತಿ ॥ ತತಃ ಪ್ರಾಂಚಮುತ್ಸೃಜೇತ್ ॥ ವ್ರಜಂತಮನುಮಂತ್ರಯೀತ ॥

ಏತಂ ಯುವಾನಮಿತಿ ಮಂತ್ರಸ್ಯ ಯಾಜ್ಞವಲ್ಕ್ಯ ಋಷಭಸ್ತ್ರಿಷ್ಟುಪ್
ವೃಷೋತ್ಸರ್ಗೇ ವಿನಿಯೋಗಃ ॥ ಏತಂ ಯುವಾನಂ ಪರಿ ವೋ ದದಾಮಿ ತೇನ
ಕ್ರೀಡಂತೀ ಶ್ಚರತಃ ಪ್ರಿಯೇಣ ॥ ಮಾನಃ ಶಾಪ್ತ ಜನುಷಾ ಸುಭಾಗಾ-
ರಾಯಸ್ಪೋಷೇಣ ಸಮಿಷಾಮದೇಮ ॥ ಶಾಂತಾ ತೇ ಪೃಥಿವೀ ಶಿವಮಂತರಿಕ್ಷಂ
ದ್ಯೌಸ್ತೇ ದೇವ್ಯಭಯಂ ಕೃಣೋತು ॥ ಶಿವಾ ದಿಶಃ ಪ್ರದಿಶ ಉದ್ದಿಶಸ್ತ ಆಪೋ
ವಿದ್ಯುತಃ ಪರಿಪಾಂತು ಸರ್ವತಃ ಶಾಂತಿಃ ಶಾಂತಿಃ ಶಾಂತಿಃ ॥ ಸರ್ವತೋ ವ್ರಜ-
ಸ್ವೇತಿ ಬ್ರೂಯಾತ್ ॥ ತತೋ ವೃಷಂ ಪೂರ್ವಾಭಿಮುಖಂ ಕೃತ್ವಾ ॥ ಕದ್ರು-
ದ್ರಾಯೇತಿ ನವರ್ಚಸ್ಯ ಸೂಕ್ತಸ್ಯ ಘೌರಃ ಕಣ್ವೋ ರುದ್ರೋ ಗಾಯತ್ರೀ
ತೃತೀಯಾ ಮೈತ್ರಾವರುಣೀ ಅಂತ್ಯಸ್ತ್ರ್ಯೃಚಃ ಸೌಮ್ಯೋಂತ್ಯಾನುಷ್ಟುಪ್
ಪೂರ್ವದಿಗುಪಸ್ಥಾನೇ ವಿನಿಯೋಗಃ ॥ ಕದ್ರುದ್ರಾಯ ಪ್ರಚೇತಸೇ ಮೀಢುಷ್ಟ
ಮಾಯತವ್ಯಸೇ ॥ ವೋಚೇಮಶಂತಮಂ ಹೃದೇ ॥ ಯಥಾ ನೋ ಅದಿತಿಃ
ಕರತ್ಪಶ್ವೇನೃಭ್ಯೋ ಯಥಾಗವೇ ॥ ಯಥಾ ತೋ ಕಾಯರುದ್ರಿಯಂ ॥
ಯಥಾ ನೋ ಮಿತ್ರೋ ವರುಣೋ ಯಥಾ ರುದ್ರ ಶ್ಚಿಕೇತತಿ ॥ ಯಥಾ ವಿಶ್ವೇ
ಸಜೋಷ ಸಃ ॥ ಗಾಥಪತಿಂ ಮೇಧಪತಿಂ ರುದ್ರಂ ಜಲಾಷ ಭೇಷಜಂ ॥
ತಚ್ಛಂಯೋಃ ಸುಮ್ನಮೀಮಹೇ ॥ ಯಃ ಶುಕ್ರ ಇವ ಸೂರ್ಯೋ ಹಿರಣ್ಯ-
ಮಿವ ರೋಚತೇ ॥ ಶ್ರೇಷ್ಠೋ ದೇವಾನಾಂ ವಸುಃ ॥ ೧ ॥ ಶಂ ನಃ ಕರ
ತ್ಯರ್ವತೇ ಸುಗಂ ಮೇಷಾಯಮೇಷ್ಯೇ ॥ ನೃಭ್ಯೋ ನಾರಿಭ್ಯೋ ಗವೇ ॥ ಅಸ್ಮೇ
ಸೋಮಶ್ರಿಯ ಮಧಿ ನಿಧೇಹಿ ಶತಸ್ಯ ನೃಣಾಂ ॥ ಮಹಿಶ್ರವಸ್ತು ವಿನೃಮ್ಣಂ ॥
ಮಾನಃ ಸೋಮಪರಿಬಾಧೋ ಮಾರಾತಯೋ ಜುಹುರಂತ ॥ ಆನ ಇಂದೋ
ವಾಜೇ ಭಜ ॥ ಯಾಸ್ತೇ ಪ್ರಜಾಽ ಅಮೃತಸ್ಯ ಪರಸ್ಮಿನ್ ಧಾಮನ್ನೃತಸ್ಯ ॥

